ವೈಷ್ಣವದೀಕ್ಷೆ

[ಸ್ಮೃತಿಪುರಾಣಾದಿಗಳಲ್ಲಿ ಪ್ರಸ್ತುತವಾಗಿರುವ ವೈಷ್ಣವದೀಕ್ಷೆಗೆ ಸಂಬಂಧಪಡುವ ಸಮಗ್ರ ವಿವರ]



ತೇ ನರಾಃ ಪಶವೋ ಲೋಕೇ ಕಿಂ ತೇಷಾಂ ಜೀವನೇ ಫಲಮ್ |
ಯೈರ್ನ ಲಬ್ಧಾ ಹರೇರ್ದೀಕ್ಷಾ ನಾರ್ಚಿತೋ ವಾ ಜನಾರ್ದನಃ ||

ಪರವಿದ್ಯಾ ಪ್ರಕಾಶನ
ಶಮ್ಯಾಪ್ರಾಸ
ಮೂಡುಸಗ್ರಿ, ಉಡುಪಿ

ವೈಷ್ಣವದೀಕ್ಷೆ ಸರ್ವಾಧಿಕಾರಿಕ

ಶ್ರೀ ವಿಷ್ಣುವಿನ ಬಗೆಗೆ ಭಕ್ತಿ ಹೇಗೋ ಹಾಗೆ ವೈಷ್ಣವದೀಕ್ಷೆಯೂ ಸರ್ವಾಧಿಕಾರಿಕ. ಅಂದರೆ ಉಪನಯನ ಸಂಸ್ಕಾರಕ್ಕೊಳಪಟ್ಟವರಷ್ಟೇ ಅಲ್ಲದೆ, ಉಪನಯನ ಸಂಸ್ಕಾರಕ್ಕೊಳಪಡದ ವರ್ಣದವರೂ, ಸ್ತ್ರೀಯರೂ, ವರ್ಣಬಾಹ್ಯರೂ ತಮ್ಮ ಜೀವನದಲ್ಲಿ ವೈಷ್ಣವ ದೀಕ್ಷೆಯನ್ನು ಅಳವಡಿಸಿಕೊಳ್ಳಬೇಕು.

* ಪುರಾಣ ಇತಿಹಾಸಾದಿಗಳ ಮೂಲಕ ಶ್ರೀವಿಷ್ಣುವೇ ಸರ್ವೋತ್ತಮನಾಗಿರುವನೆಂದು ನಿರ್ಧರಿಸಿ, ಅವನೇ ತನ್ನ ಮುಖ್ಯ ಸ್ವಾಮಿ, ಸಕಲ ಇಷ್ಟಗಳ ಸಾಧಕ, ಸಮಸ್ತ ಅನಿಷ್ಟಗಳ ಪರಿಹಾರಕ. ತಾನು ಎಂದೆಂದೂ ಅವನ ದಾಸನಾಗಿ ಇರುವವನು- ಎಂಬುದನ್ನು ಮತ್ತೆ ಮತ್ತೆ ದೃಢಪಡಿಸಿಕೊಳ್ಳುತ್ತ ಇರಬೇಕು.

* ಶ್ರೀ ವಿಷ್ಣುವಿನ ಆಯುಧಗಳಾದ ಸುದರ್ಶನ ಚಕ್ರಾದಿಗಳ ಚಿಹ್ನೆಗಳನ್ನು ತಪ್ತ ಮುದ್ರಾಧಾರಣ ವಿಧಿಯಿಂದ ಪ್ರಥಮೈಕಾದಶಿ ಮುಂತಾದ ದಿನಗಳಂದು ಹಾಕಿಸಿಕೊಂಡು ಹಾಗೂ ಬೇರೆ ದಿನಗಳಂದು ಗೋಪಿ ಚಂದನದಿಂದ ಆ ಮುದ್ರೆಗಳನ್ನು ಧರಿಸಿಕೊಂಡು ತಾನು ಶ್ರೀ ವಿಷ್ಣುವಿನ ಸೇವೆ ನಡೆಸಲು ಸದಾ ಸಿದ್ಧನಾಗಿರುವ ಸೇವಕನೆಂದು ತೋರ್ಪಡಿಸಬೇಕು.

* ಗೋಪೀ ಚಂದನದಿಂದ ಹಣೆಯಲ್ಲಿ ದಿನವಿಡೀ ಎದ್ದು ಕಾಣುವಂತೆ ಬೆವರಿಗೂ ಅಳಿಸಿ ಹೋಗದಂತೆ ದೃಢವಾಗಿ, ಸ್ಪಷ್ಟವಾಗಿ ಊರ್ಧ್ವಪುಂಡ್ರವನ್ನು ಧರಿಸಿಕೊಂಡು ತನ್ನ ದೇಹವನ್ನು ಹರಿಮಂದಿರವನ್ನಾಗಿ ಮಾರ್ಪಡಿಸಿಕೊಳ್ಳಬೇಕು.

* ಶ್ರೀ ವಿಷ್ಣುವಿನ ಸ್ಮರಣೆಗೆ ಪೋಷಕವಾಗುವಂತೆ ತಾನೂ ಹೆಸರನ್ನಿಟ್ಟುಕೊಳ್ಳಬೇಕು. ತನ್ನ ಸಂಬಂಧಿಗಳಾದ ವ್ಯಕ್ತಿಗಳಿಗೂ, ವಸ್ತುಗಳಿಗೂ ಅಂತಹ ಹೆಸರುಗಳನ್ನೇ ಇಡಬೇಕು.

* 'ಹರೇ ರಾಮ' 'ಹರೇ ಕೃಷ್ಣ' - ಇತ್ಯಾದಿ ಶ್ರೀ ವಿಷ್ಣುಪರಗಳಾದ ಮಂತ್ರಗಳನ್ನು ರಾಮಾವತಾರ, ಕೃಷ್ಣಾವತಾರಗಳ ಮಹಿಮೆಗಳನ್ನು ಮೆಲುಕು ಹಾಕುತ್ತ ಜಪಿಸುತ್ತಿರಬೇಕು.

* 'ವಿಷ್ಣುಭಕ್ತ' 'ಗೋವು' 'ಸಕಲ ಜೀವಿಗಳು' 'ತನ್ನ ಶರೀರ' ಇತ್ಯಾದಿ ಪ್ರತಿಮಾ ಮಾಧ್ಯಮದಲ್ಲಿ ಬಂಧು ಸತ್ಕಾರ - ಇತ್ಯಾದಿ ರೀತಿಯಿಂದ ಶ್ರೀ ವಿಷ್ಣುವಿನ ಪೂಜೆಯನ್ನು ನಡೆಸುತ್ತಿರಬೇಕು.

ಹೀಗೆ ವೈಷ್ಣವ ದೀಕ್ಷೆಯ ಪ್ರತಿಯೊಂದು ಅಂಗವೂ ಪ್ರತಿಯೊಬ್ಬ ಭಕ್ತನಿಂದಲೂ ಅಳವಡಿಸಿಕೊಳ್ಳಬಹುದಾದಷ್ಟು ಸರಳ ಹಾಗೂ ಅಷ್ಟೇ ಪ್ರಮುಖ.

ವೈಷ್ಣವದೀಕ್ಷೆ

[ಸ್ಮೃತಿಪುರಾಣಾದಿಗಳಲ್ಲಿ ಬರುವ ವೈಷ್ಣವದೀಕ್ಷೆಯ ವಿಸ್ತೃತ ವಿವರಣೆ]

ಬರವಣಿಗೆ

ಸಗ್ರಿ ರಾಘವೇಂದ್ರ ಉಪಾಧ್ಯಾಯ

ಪರವಿದ್ಯಾ ಪ್ರಕಾಶನ

'ಶಮ್ಯಾಪ್ರಾಸ'

ಮೂಡುಸಗ್ರಿ, ಉಡುಪಿ

ವೈಷ್ಣವದೀಕ್ಷೆ

[ಸ್ಮೃತಿಪುರಾಣಾದಿಗಳಲ್ಲಿ ಬರುವ ವೈಷ್ಣವದೀಕ್ಷೆಯ ವಿಸ್ತೃತ ವಿವರಣೆ]

ಬರವಣಿಗೆ : ಸಗ್ರಿ, ರಾಘವೇಂದ್ರ, ಉಪಾಧ್ಯಾಯ

ಪ್ರಕಾಶನ : ಪರವಿದ್ಯಾ ಪ್ರಕಾಶನ, 'ಶಮ್ಯಾಪ್ರಾಸ', ಮೂಡುಸಗ್ರಿ ಉಡುಪಿ

ಪ್ರಕಟನ ವರ್ಷ : 2005

ಪುಟಗಳು : ೧೦ + 214

ಬೆಲೆ : ರೂ. 60/-

ಮುಖಪುಟದಲ್ಲಿ.........

ವಿಷ್ಣುಸರ್ವೋತ್ತಮತ್ವವೇ ಮುಂತಾದ ತತ್ವಗಳನ್ನೊಳಗೊಂಡ 'ಆಂತರದೀಕ್ಷೆ'ಯ ಮೇಲೂ, ಊರ್ಧ್ವಪುಂಡ್ರಧಾರಣೆ ಇತ್ಯಾದಿ ಆಚರಣೆಗಳನ್ನೊಳಗೊಂಡ 'ಬಾಹ್ಯ ದೀಕ್ಷೆ'ಯ ಮೇಲೂ ಅತ್ಯಧಿಕ ಬೆಳಕು ಚೆಲ್ಲಿ ಆ ಎರಡು ದೀಕ್ಷೆಗಳನ್ನೊಳಗೊಂಡ ವೈಷ್ಣವದೀಕ್ಷೆಯ ಕಿಚ್ಚನ್ನು ಸಾತ್ವಿಕರಲ್ಲಿ ಹಚ್ಚಿ ಅನುಗ್ರಹಿಸಿದ ಶ್ರೀಶ್ರೀ ಮಧ್ವಗುರುಗಳು.

ಕೊನೆಯ ಕವಚ ಪುಟದಲ್ಲಿ...........

ಶ್ರೀ ಮಧ್ವರು ಹಚ್ಚಿದ ವೈಷ್ಣವದೀಕ್ಷೆಯ ಕಿಚ್ಚನ್ನು ಹಚ್ಚಿಕೊಂಡು ತಮ್ಮ ಬದುಕನ್ನು ಸಾರ್ಥಕಪಡಿಸಿಕೊಂಡ ಶ್ರೀಶ್ರೀ ವಿದ್ಯಾಮಾನ್ಯತೀರ್ಥರಿಂದ ನಡೆದಿದ್ದ ಕೆಲವು ವೈಷ್ಣವ ದೀಕ್ಷೆಗೆ ಸಂಬಂಧಿಸಿದ ಸಾಧನೆಗಳು.

ಅಕ್ಷರಸಂಯೋಜನೆ : 'ನವದುರ್ಗಾ ಲೇಸರ್‌ಟೆಕ್',
C/o. ಡಾ| ಕೆ. ಪದ್ಮನಾಭ ಕೇಕುಣ್ಣಾಯ,
ಕುಂಜಿಬೆಟ್ಟು, ಉಡುಪಿ-೨. [Ph.2531159]

ಮುದ್ರಣ : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು

ಸ್ವಮೂರ್ತಿಗಣಮಧ್ಯಗಃ



ಶ್ರೀರಾಮಚಂದ್ರ
ಪಲಿಮಾರು ಮಠ




ಅಧೋಕ್ಷಜವಿಟ್ಠಲ
ಪೇಜಾವರ ಮಠ




ಚತುರ್ಭುಜಕಾಳಿಯಮರ್ದನಕೃಷ್ಣ
ಅದಮಾರು ಮಠ



ಯೋಗನರಸಿಂಹ
ಕಾಣಿಯೂರು ಮಠ




ಪ್ರೀಣಯಾಮೋ ವಾಸುದೇವಂ
ದೇವತಾಮಂಡಲಾಖಂಡಮಂಡನಮ್ |



ದ್ವಿಭುಜ ಕಾಳಿಯಮರ್ದನ ಕೃಷ್ಣ
ಕೃಷ್ಣಾಪುರ ಮಠ



ಭೂವರಾಹ
ಸೋದೆ ಮಠ



ಉಪೇಂದ್ರ ವಿಟ್ಠಲ
ಪುತ್ತಿಗೆ ಮಠ



ವಾಮನವಿಟ್ಠಲ
ಶೀರೂರು ಮಠ

" ವಿಟ್ಠಲಂ ಸಮುಪಾಸ್ಮಹೇ "





' ನಾನಾಜನಸ್ಯ ಶುಶ್ರೂಷಾ ಕರ್ಮೇತಿ
ಕರವನ್ಮಿತೇಃ ಯೋಗಾರ್ಥಿನಾ ತು
ಸಾ ಕಾರ್ಯಾ.....ತಸ್ಯ ಪ್ರಾಣ್ಯುಪಕಾರೇಣ
ಸಂತುಷ್ಟೋ ಭವತೀಶ್ವರಃ "

ಗೌರವಾರ್ಹ ಆತ್ಮೀಯ ಗುರುಗಳೇ !

* ನಿಷ್ಠ ಯತಿಯಾಗಿ ....
* ಆದರ್ಶ ಮಾಧ್ವಪೀಠಾಧಿಪತಿಯಾಗಿ ....
* ಸಕ್ರಿಯ ಹಿಂದೂ ಪೀಠಾಧಿಪತಿಯಾಗಿ ....
* ಎಚ್ಚೆತ್ತ ಭಾರತೀಯನಾಗಿ ....
* ಹೃದಯವಂತಿಕೆಯ ಮಾನವನಾಗಿ ....

ಹೀಗೆ ಪಂಚ ಮುಖಗಳಿಂದ ಸೇವೆ ಸಲ್ಲಿಸಿ ತಮ್ಮ ಬದುಕಿನ ಎಪ್ಪತ್ತನಾಲ್ಕು ಸಂವತ್ಸರಗಳನ್ನು ಸಾರ್ಥಕವಾಗಿ ಕಳೆದು, ಎಪ್ಪತ್ತೈದನೆಯ ಸಂವತ್ಸರಕ್ಕೆ ಅಡಿಯಿಡುವ ಈ ಶುಭಸಂದರ್ಭದಲ್ಲಿ ....

ನನ್ನಂತಹ ನೂರಾರು ಸಾಧಕರಿಗೆ ಮಾಧ್ವತತ್ತ್ವಜ್ಞಾನವನ್ನು ಧಾರೆಯೆರೆದು ವೈಷ್ಣವದೀಕ್ಷೆಯ ಕಿಚ್ಚು ಹಚ್ಚಿದ ತಮ್ಮ ಮಹೋಪಕಾರವನ್ನು ಭಕ್ತಿಪೂರ್ವಕವಾಗಿ ಸ್ಮರಿಸುತ್ತ ಅದರ ಸಂಕೇತವಾಗಿ ಈ ಕೃತಿಯನ್ನು ತಮ್ಮ ಅಂತರ್ಯಾಮಿಗೆ ಸಮರ್ಪಿಸುವ ಮೂಲಕ,

' ಭೂಯಿಷ್ಠಾಂ ತೇ ನಮಉಕ್ತಿಂ ವಿಧೇಮ '

ಪಗ್ರಿ ರಾಘವೇಂದ್ರ ಉಪಾಧ್ಯಾಯ

ವೈಷ್ಣವದೀಕ್ಷೆಯ ಮೆರುಗು

ದೀಕ್ಷೆ ಎಂದರೆ ವ್ರತಧಾರಣೆ. ಶ್ರೀವಿಷ್ಣುವಿಗೆ ಸಂಬಂಧಿಸುವ ವ್ರತಧಾರಣೆ ವೈಷ್ಣವದೀಕ್ಷೆ.

ಶಾಸ್ತ್ರಪ್ರಪಂಚದಲ್ಲಿ ಅತ್ಯಂತ ಪ್ರಮುಖ ಪ್ರಮೇಯವೆನಿಸಿರುವ ವಿಷ್ಣುಸರ್ವೋತ್ತಮತ್ವದ ಜ್ಞಾನದ ಅನುಷ್ಠಾನರೂಪ ವೈಷ್ಣವದೀಕ್ಷೆ. ವಿಷ್ಣುಭಕ್ತಿಯ ಪ್ರಾಯೋಗಿಕ ಮುಖ ವೈಷ್ಣವದೀಕ್ಷೆ. ಸಮಗ್ರ ಬದುಕಿಗೆ ಯಜ್ಞದ ವ್ಯಕ್ತಿತ್ವವನ್ನು ತೊಡಿಸುವಂತಹದ್ದು ವೈಷ್ಣವದೀಕ್ಷೆ.

ಮಾಧ್ವರಾದ ನಮ್ಮಲ್ಲಿ ಇಂತಹ ವೈಷ್ಣವದೀಕ್ಷೆಗೆ ಸಂಬಂಧಿಸುವ ವಿಷ್ಣುಸರ್ವೋತ್ತಮತ್ವ ಮುಂತಾದ ವಿಚಾರಗಳೂ ಊರ್ಧ್ವಪುಂಡ್ರಧಾರಣೆ, ಮುದ್ರಾಧಾರಣೆ ಮುಂತಾದ ಆಚಾರಗಳೂ ಇವೆ. ಆದರೆ ಈ ವಿಚಾರಗಳೂ ಆಚಾರಗಳೂ ವೈಷ್ಣವದೀಕ್ಷೆಗೆ ಸಂಬಂಧಪಟ್ಟವುಗಳು ಎಂಬ ಅರಿವು ಇಲ್ಲದೆಯೇ ಅವುಗಳ ಚಾಲ್ತಿ ನಮ್ಮಲ್ಲಿದೆ. ವೈಷ್ಣವದೀಕ್ಷೆಯ ಅಂಗಗಳೆಂದು ಭಾವಿಸಿ ಅವುಗಳನ್ನು ಅನುಷ್ಠಾನದಲ್ಲಿ ಅಳವಡಿಸಿಕೊಳ್ಳಬೇಕು. ಆಗ ಅವುಗಳಿಗೆ ವಿಶಿಷ್ಟವಾದ ಮೆರುಗನ್ನು ಕಲ್ಪಿಸಿಕೊಟ್ಟಂತಾಗುವುದು.

ಈ ಹಿನ್ನೆಲೆಯಲ್ಲಿ ವೈಷ್ಣವದೀಕ್ಷೆಯ ಸಮಗ್ರ ಪರಿಚಯಕ್ಕಾಗಿ 'ವೈಷ್ಣವದೀಕ್ಷೆ' ಕೃತಿ ಹೊರಟಿದೆ.

ವೈಷ್ಣವದೀಕ್ಷೆಯ ಅಂಗಗಳಾದ ಪುಂಡ್ರಸಂಸ್ಕಾರ ಇತ್ಯಾದಿಗಳಿಗೆ ಸಂಬಂಧಪಡುವ ಹೋಮಹವನಾದಿಗಳು ಈಗ ನಮ್ಮಲ್ಲಿ ಚಾಲ್ತಿಯಲ್ಲಿ ಇಲ್ಲವಾದರೂ ಅವುಗಳ ಹಿನ್ನೆಲೆಯ ಸ್ಫೂರ್ತಿ ಗ್ರಾಹ್ಯ ಎಂಬ ದೃಷ್ಟಿಯಿಂದ ಅವುಗಳನ್ನೆಲ್ಲ ನಿರೂಪಿಸಲಾಗಿದೆ.

ವೈಷ್ಣವದೀಕ್ಷೆಯ ದೃಢೀಕರಣಕ್ಕಾಗಿ ಈ ಕೃತಿಯಲ್ಲಿ ಅಳವಡಿಸಿಕೊಳ್ಳಲಾದ ಕೆಲವು ವಿಶಿಷ್ಟ ಕ್ರಮಗಳು:

೧. ವಿಷ್ಣುಸರ್ವೋತ್ತಮತ್ವಪ್ರಮೇಯವನ್ನು ನೂರಒಂದು ಯುಕ್ತಿಗಳಿಂದ ಸಮರ್ಥಿಸಿರುವುದು.

೨. ತಾಪಸಂಸ್ಕಾರಕ್ಕೆ ಸಂಬಂಧಿಸಿದಂತೆ 'ವಿಷ್ಣುರಹಸ್ಯ', 'ಚಕ್ರಮೀಮಾಂಸಾ', 'ಸ್ಮೃತಿ ಮುಕ್ತಾವಲಿ', 'ಯುಕ್ತಿಮಲ್ಲಿಕಾದ ಭಾಗ', 'ಚಕ್ರಸ್ತುತಿ' –ಈ ಕೃತಿಗಳ ವಿವೇಚನೆ ಹಾಗೂ ಪ್ರಮುಖ ವಿಚಾರಗಳ ಉಲ್ಲೇಖ.

- ಸ್ಕಂದಪುರಾಣ ಪ್ರಸ್ತುತಪಡಿಸುವಂತೆ ಮುದ್ರಾಧಾರಣೆಯ ಪ್ರಶಂಸೆಯ ಮಾತುಗಳ ಸಂಗ್ರಹ.
- ಪುಂಡ್ರಸಂಸ್ಕಾರಕ್ಕೆ ಸಂಬಂಧಿಸಿದಂತೆ ಎಂಭತ್ತು ಪ್ರಮಾಣಗಳ ಸಂಗ್ರಹ.
- ನಾಮಸಂಸ್ಕಾರಕ್ಕೆ ಸಂಬಂಧಿಸಿದಂತೆ ವಿಷ್ಣುಸ್ಮರಣೆಗೆ ಪೋಷಕವಾಗುವಂತೆ ಶ್ರೀವಿಷ್ಣುವಿಗೆ ಸೇರಿರುವ ವಿಷ್ಣುಸಹಸ್ರನಾಮಸ್ತೋತ್ರದ ಅನೇಕ ನಾಮಗಳ ಉಲ್ಲೇಖ.

- ಮಂತ್ರಸಂಸ್ಕಾರಕ್ಕೆ ಸಂಬಂಧಿಸಿದಂತೆ ನಾರಾಯಣಾಷ್ಟಾಕ್ಷರದ ಹಿರಿಮೆಯ ವರ್ಣನೆ. ಮಂತ್ರಪ್ರಪಂಚಕ್ಕೆ ಸಂದ ಶ್ರೀ ಮಧ್ವರ ವ್ಯಾಪಕವಾದ ಕೊಡುಗೆಯ ಪರಿಚಯ.
- ಯಾಗಸಂಸ್ಕಾರಕ್ಕೆ ಸಂಬಂಧಿಸಿದಂತೆ ಕೃಷ್ಣಾಮೃತಮಹಾರ್ಣವದಲ್ಲಿ ಪ್ರಸ್ತುತವಾಗಿರುವಂತೆ ಪೂಜೆಯ ಹಿರಿಮೆ ಗರಿಮೆಗಳನ್ನು ಸಾರುವ ಮಾತುಗಳ ಸಂಗ್ರಹ, ಪದ್ಮಮಾಲಾ ಹಾಗೂ ಯೋಗದೀಪಿಕಾ –ಇವುಗಳ ಕೆಲವು ವಿಚಾರಗಳ ಸಂಗ್ರಹ.
- ಪರಿಶಿಷ್ಟದಲ್ಲಿ ವೈಷ್ಣವಪ್ರಶಂಸೆ, ವೈಷ್ಣವಗುಣ ಹಾಗೂ ವೈಷ್ಣವಕರ್ತವ್ಯಗಳಿಗೆ ಸಂಬಂಧಿಸಿದಂತೆ ನೂರು ಮಾತುಗಳ ಸಂಗ್ರಹ.

ಈ ರೀತಿಯಾಗಿ ಜಿಜ್ಞಾಸುವಿಗೆ, ಸಾಧಕನಿಗೆ ವೈಷ್ಣವದೀಕ್ಷೆಗೆ ಸಂಬಂಧಿಸುವ ವಿಚಾರ ಆಚಾರಗಳ ಮೇಲೆ ಸಾಕಷ್ಟು ದೃಢತೆ ಮೂಡುವಂತೆ ರೂಪಿಸಲಾಗಿದೆ.

* * *

ಕೃತಜ್ಞತೆ

- ಪ್ರಸಕ್ತ ಪರ್ಯಾಯ ಪೀಠದ ಶ್ರೀಶ್ರೀ ವಿಶ್ವಪ್ರಿಯತೀರ್ಥರು ತಮ್ಮ ವಿದ್ಯಾಗುರುಗಳಾದ ಶ್ರೀ ವಿದ್ಯಾಮಾನ್ಯತೀರ್ಥರ ಛಾಪಿಗೆ ಒಳಗಾಗಿ ಯಾರ ತುಷ್ಟೀಕರಣಕ್ಕೂ ತೊಡಗದೆ ಕಟ್ಟುನಿಟ್ಟಾಗಿ 'ವೈಷ್ಣವದೀಕ್ಷೆ'ಯನ್ನು ಅಳವಡಿಸಿಕೊಂಡವರು. ಅಂತಹವರು ವೈಷ್ಣವ ದೀಕ್ಷೆಯ ಈ ಕೃತಿಗೆ ಅನುಗ್ರಹಸಂದೇಶವನ್ನು ಕೇಳಲು ಹೋದಾಗ ಮಾಮೂಲಿಯಾಗಿ 'ಕರೌ ತ್ವದರ್ಚನೇ ನಿತ್ಯಂ ಸುಖತೀರ್ಥಸ್ಯ ಲೇಖನೇ' –ಎಂಬ ಶ್ರೀ ವಾದಿರಾಜ ತೀರ್ಥರ ಪ್ರಾರ್ಥನಾದಶಕಸ್ತೋತ್ರದ ಮಾತಿನೊಂದಿಗೆ ಬರವಣಿಗೆಯ ಪ್ರವೃತ್ತಿಯನ್ನು ಅಭಿನಂದಿಸುತ್ತ, ಸಂತೋಷದಿಂದ ಅನುಗ್ರಹಸಂದೇಶವನ್ನು ನೀಡಿ ಹರಸಿರುವರು. ಅಲ್ಲದೆ, ಇದನ್ನು ಬಿಡುಗಡೆಗೊಳಿಸಿ ಓದುಗರ ಹೃದಯನಿವಾಸಿ ಶ್ರೀ ವೇದ–ವ್ಯಾಸಾಭಿನ್ನ ಶ್ರೀಕೃಷ್ಣನಿಗೆ ಸಮರ್ಪಿಸುವ ಮೂಲಕವೂ ಅನುಗ್ರಹಿಸಿರುವರು.
- ಉಡುಪಿ ಶ್ರೀ ರಾಮನಾಥಾಚಾರ್ಯರು ಈ ಕೃತಿಯನ್ನು ಪರಿಶೀಲಿಸಿ ಅಲ್ಲಲ್ಲಿ ಸೂಕ್ತ ಸಲಹೆ ಸೂಚನೆಗಳನ್ನು ನೀಡಿರುವರು...
- ಶ್ರೀ ರಾಮವಿಟ್ಠಲಾಚಾರ್ಯರು ವೈಷ್ಣವದೀಕ್ಷೆಯ ಬಗ್ಗೆ ವಿಷ್ಣುರಹಸ್ಯದಲ್ಲಿರುವ ವಿಚಾರಗಳ ಬಗ್ಗೆ ಮಾಹಿತಿ ನೀಡಿದವರು.
- ಬೆಂಗಳೂರಿನಲ್ಲಿ ಇದರ ಮುದ್ರಣಕಾರ್ಯವನ್ನು ನಿರ್ವಹಿಸುವಲ್ಲಿ ನೆರವು ನೀಡಿದವರು ಮಿತ್ರ ಶ್ರೀ ಬಿ. ಜಿ. ರವಿಕುಮಾರ್.
- ಅಕ್ಷರಜೋಡಣೆ ನಡೆಸಿದವರು 'ನವದುರ್ಗಾ ಲೇಸರ್‌ಟೆಕ್'ನ ಕೇಕುಣ್ಣಾಯದಂಪತಿಗಳು.
- ಕವಚ ಪುಟಗಳನ್ನು ನಿರೂಪಿಸಿದವರು 'ಗೋಪ್ಯ ಕಂಪ್ಯೂಟರ್' ಇದರ ಬಂಧುಗಳು.
- ಮುದ್ರಣ ನಡೆಸಿದವರು ಬೆಂಗಳೂರಿನ ರಾಷ್ಟ್ರೋತ್ಥಾನ ಮುದ್ರಣಾಲಯದವರು.

ಇವರೆಲ್ಲರಿಗೆ ಕೃತಜ್ಞತೆ

- ಮಿತ್ರ ಬಿ. ಜಿ. ರವಿಕುಮಾರ್ ಇವರ ಪಿತೃಪಾದರಾದ ಶ್ರೀ ಬಿ.ಎನ್. ಗೋಪಾಲಕೃಷ್ಣ ಇವರು ನಮ್ಮ ಸಂಸ್ಥೆಗೆ ತಮ್ಮ ಕೊನೆಯ ದೇಣಿಗೆಯನ್ನು ನೀಡಿ ಪ್ರೋತ್ಸಾಹಿಸಿದ್ದು, ಇತ್ತೀಚೆಗೆ ವೈಕುಂಠನ ಪಾದಾರವಿಂದದತ್ತ ತೆರಳಿದ ಅವರಿಗೆ ಹರಿಗುರುಗಳ ಅನುಗ್ರಹವಿಶೇಷವಿರಲಿ.

ಪಾರ್ಥಿವಸಂವತ್ಸರದ ನಾಗಪಂಚಮೀ
(10-8-2005)

ಸಗ್ರಿ ರಾಘವೇಂದ್ರ ಉಪಾಧ್ಯಾಯ

ಶ್ರೀ ರಾಘವೇಂದ್ರ ಚಿತ್ರವಾಣಿ ಸಂಸ್ಥೆ ಮೂಲಕ 28 ವರ್ಷಗಳಿಂದ ಚಲನಚಿತ್ರ ರಂಗದಲ್ಲಿ ಪತ್ರಿಕಾ ಸಂಪರ್ಕಾಧಿಕಾರಿ ಹುದ್ದೆಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಾ 850 ಕ್ಕೂ ಅಧಿಕ ಚಿತ್ರಗಳಿಗೆ ಪ್ರಚಾರ ಒದಗಿಸಿ ಮುನ್ನಡೆಯುತ್ತಿರುವ ಡಿ.ವಿ. ಸುಧೀಂದ್ರ ವೈಷ್ಣವ ದೀಕ್ಷೆಯ ಬಗೆಗೆ ಅಪಾರ ಗೌರವ ಹೊಂದಿದವರು.

ಶ್ರೀ ರಾಘವೇಂದ್ರ ಗುರುಗಳ ಅಂತರಂಗ ಭಜಕರಾಗಿ ಅವರ ಅನುಗ್ರಹವೇ ತಮ್ಮ ಯಶಸ್ಸಿಗೆ ಮುಖ್ಯ ಕಾರಣ ಎಂದು ನಂಬಿದವರು. ಪ್ರತಿ ವರ್ಷ ಶ್ರೀ ರಾಘವೇಂದ್ರತೀರ್ಥರ ಆರಾಧನೆಯನ್ನು ವೈಷ್ಣವರ ಮಾಧ್ಯಮದಲ್ಲಿ ನಡೆಸಿ ಭಗವಂತನನ್ನು ಆರಾಧಿಸುತ್ತಿರುವ ಸುಧೀಂದ್ರ ಅವರು ಈ ಕೃತಿಗೆ ವಿಶೇಷವಾಗಿ ಸಹಕರಿಸಿದ್ದಾರೆ. ಭಗವಂತ ಇವರಿಗೆ ಮಂಗಲವನ್ನುಂಟು ಮಾಡಲಿ.

ಶ್ರೀ ಮಧ್ವಾಚಾರ್ಯಮೂಲಸಂಸ್ಥಾನಮ್

ಪರ್ಯಾಯ ಶ್ರೀ ಅದಮಾರು ಮಠ

ರಥಬೀದಿ, ಉಡುಪಿ.



ಮಾನವನಾಗಿ ಹುಟ್ಟಬೇಕಾದರೇನೇ ತುಂಬಾ ಪುಣ್ಯ ಬೇಕು. ತತ್ರಾಪಿ ಬ್ರಾಹ್ಮಣನಾಗಿ ಹುಟ್ಟಲು, ತತ್ರಾಪಿ ವೈಷ್ಣವನಾಗಿ ಹುಟ್ಟಲು.

ವೈಷ್ಣವವಂಶದಲ್ಲಿ ಹುಟ್ಟುವುದು ದೊಡ್ಡದಲ್ಲ. ತನ್ನಲ್ಲಿ ವೈಷ್ಣವತ್ವವನ್ನು ಅಳವಡಿಸಿಕೊಳ್ಳುವುದು ದೊಡ್ಡದು. ಒಂದು ವಂಶದಲ್ಲಿ ಒಬ್ಬ ವೈಷ್ಣವ ಹುಟ್ಟಿದರೂ ಪಿತೃಗಳು ''वैष्णवः अस्मत्कुले जातः स नः सन्तारयिष्यति'' ಎಂದು ಕುಣಿಯುತ್ತಾರೆ. ವೈಷ್ಣವತ್ವವನ್ನು ಹೇಗೆ ಸಂಪಾದಿಸುವುದು? ಹುಟ್ಟುವಾಗ ಶೂದ್ರನಾಗಿರುತ್ತಾನೆ. ಕರ್ಮದಿಂದ ದ್ವಿಜನಾಗುತ್ತಾನೆ. ಹಾಗೆಯೇ ವೈಷ್ಣವನಾಗುತ್ತಾನೆ. ವೈಷ್ಣವನಾಗಲು ಬೇಕಾದ ಕರ್ಮಗಳು ಯಾವುವು? ಅವುಗಳನ್ನೆಲ್ಲಾ ವಿವರವಾಗಿ ಆಂತರಿಕ, ಬಾಹ್ಯ ಎಂಬ ವಿಭಾಗದಿಂದ ಈ 'ವೈಷ್ಣವದೀಕ್ಷೆ' ಎಂಬ ಪುಸ್ತಕದಲ್ಲಿ ನಮ್ಮ ಸಗ್ರಿಯವರು ಸಂಗ್ರಹಿಸಿದ್ದಾರೆ.

ದಿನದ ಹೆಚ್ಚಿನ ಸಮಯವನ್ನು ಬರವಣಿಗೆಯಲ್ಲಿಯೇ ಕಳೆಯುವ ಇವರು ವಿಷಯಸಂಗ್ರಹದಲ್ಲಿ ಬಹಳ ಚತುರರು.

ಇವರ ಈ ಕೃತಿಯನ್ನು ಉಪಯೋಗಿಸಿಕೊಂಡು ವೈಷ್ಣವಕುಲದಲ್ಲಿ ಹುಟ್ಟಿದವರು ವಿಶೇಷವಾಗಿ ನಮ್ಮ ತರುಣ ತರುಣಿಯರು ನಿಜವಾದ ವೈಷ್ಣವರಾಗಿ ಜೀವನ ಸಾರ್ಥಕ ಮಾಡಿಕೊಳ್ಳಲಿ ಎಂದು ನಮ್ಮ ಆರಾಧ್ಯಮೂರ್ತಿ ಶ್ರೀಕೃಷ್ಣ ಮುಖ್ಯಪ್ರಾಣರಲ್ಲಿ ನಮ್ಮ ಪ್ರಾರ್ಥನೆ.

ಸಗ್ರಿ ರಾಘವೇಂದ್ರ ಉಪಾಧ್ಯಾಯರಿಗೂ ದೇವರ ಅನುಗ್ರಹವನ್ನು ಬಯಸುವ

11-08-2005

ಶ್ರೀಶ್ರೀ ವಿಶ್ವಪ್ರಿಯತೀರ್ಥರು

ವಿಷಯಾನುಕ್ರಮಣಿಕೆ

ಪುಂಡ್ರಸಂಸ್ಕಾರ

ನಾಮಸಂಸ್ಕಾರ

ಮಂತ್ರಸಂಸ್ಕಾರ

ಯಾಗಸಂಸ್ಕಾರ

ಪರಿಶಿಷ್ಟ

* * *

ವೈಷ್ಣವದೀಕ್ಷೆ

ಮನುಷ್ಯಜನ್ಮ ತುಂಬ ದುರ್ಲಭ. ಶಾಸ್ತ್ರಕಾರರು ತಿಳಿಸುವಂತೆ ಎಂಬತ್ತನಾಲ್ಕುಲಕ್ಷ ಯೋನಿಗಳಲ್ಲಿ ಮತ್ತೆ ಮತ್ತೆ ಜನ್ಮ ಪಡೆದು ಪಡೆದು ಕೊನೆಗೆ ದೊರಕುವಂತಹದ್ದು ಮನುಷ್ಯಜನ್ಮ. ಉಳಿದ ಯಾವುದೇ ಪಶು–ಪಕ್ಷಿ–ಕೀಟಗಳ ಶರೀರಗಳಲ್ಲಿ ಕಾಣಿಸದ ಪೂರ್ಣತೆ ಮನುಷ್ಯನ ಶರೀರದಲ್ಲಿದೆ. ಇತರ ಯಾವುದೇ ಶರೀರದಲ್ಲಿ ಇಲ್ಲದ ಎಲ್ಲ ಅಂಗಾಂಗಗಳು, ಬುದ್ಧಿಶಕ್ತಿ, ವಾಕ್‌ಶಕ್ತಿ –ಇವನ್ನೆಲ್ಲ ಹೊಂದಿರುವ ಮನುಷ್ಯನ ಶರೀರ ಸಾರ್ಥಕಗೊಳ್ಳುವುದಾದರೂ ಯಾವ ಸಾಧನೆಯಿಂದ?

ಸಾಕಷ್ಟು ಭೋಗಗಳನ್ನು ಭೋಗಿಸುವುದೋ, ತುಂಬ ಹಣವನ್ನು ಸಂಪಾದಿಸುವುದೋ, ಆಸ್ತಿ, ಮನೆ, ಮಠಗಳನ್ನು ಹೆಚ್ಚಿಸುವುದೋ ಹೆಸರು ಗಳಿಸುವುದೋ, ಲೌಕಿಕ ಅಧಿಕಾರಾದಿಗಳನ್ನು ಗಿಟ್ಟಿಸಿಕೊಳ್ಳುವುದೋ –ಇವೆಲ್ಲ ಈ ಜನ್ಮಕ್ಕಷ್ಟೇ ಕೊನೆಗೊಳ್ಳುವವುಗಳಾಗಿದ್ದು ಶಾಶ್ವತಫಲಕ್ಕೇನೂ ಪ್ರಯೋಜಕಗಳಾಗಲಾರವು.

ಆದುದರಿಂದ ಶಾಶ್ವತಫಲವನ್ನು ಪಡೆಯುವುದಕ್ಕೆ ಬಳಸಿಕೊಂಡರಷ್ಟೇ ಮಾನವಶರೀರ ಸಾರ್ಥಕವೆನಿಸಬಹುದು. ಶಾಶ್ವತಫಲಸಾಧಕವಾಗಿ ಶರೀರವನ್ನು ಬಳಸಿಕೊಳ್ಳುವುದಾದರೂ ಹೇಗೆ?

ಶ್ರೀಮದಾನಂದತೀರ್ಥರು ಪುರಾಣಶ್ಲೋಕವೊಂದರ ಆಧಾರದಲ್ಲಿ ಪ್ರತಿಪಾದಿಸಿರುವರು– ವೈಷ್ಣವದೀಕ್ಷೆಯ ಅಳವಡಿಕೆ ಹಾಗೂ ಶ್ರೀಜನಾರ್ದನನ ಅರ್ಚನೆ –ಇವೆರಡೇ ಮಾನವಜನ್ಮಕ್ಕೆ ಸಾರ್ಥಕ್ಯವನ್ನು ತಂದುಕೊಡುವವು.

ಇದರ ಪ್ರತಿಪಾದನೆಗಾಗಿ ಶ್ರೀಮದಾಚಾರ್ಯರು (ಶ್ರೀಕೃಷ್ಣಾಮೃತಮಹಾರ್ಣವದಲ್ಲಿ –೩) ಉಲ್ಲೇಖಿಸಿರುವ ಶ್ಲೋಕ ಹೀಗಿದೆ–

ತೇ ನರಾಃ ಪಶವೋ ಲೋಕೇ ಕಿಂ ತೇಷಾಂ ಜೀವನೇ ಫಲಮ್ ।
ಯೈರ್ನ ಲಬ್ಧಾ ಹರೇರ್ದೀಕ್ಷಾ ನಾರ್ಚಿತೋ ವಾ ಜನಾರ್ದನಃ ॥

ಯಾರು ಶ್ರೀಹರಿಯ ದೀಕ್ಷೆಯಲ್ಲಿ ಅಳವಡಿಸಿಕೊಂಡಿಲ್ಲ, ಯಾರು ಜನಾರ್ದನನ ಅರ್ಚನೆಯನ್ನೂ ಮಾಡಿಲ್ಲ, ಅವರು ಪಶುಗಳು. ಮನುಷ್ಯರೆಂದು ಪರಿಗಣಿಸಲು ಅನರ್ಹರು. ಅಂತಹವರ ಮನುಷ್ಯಜನ್ಮ ನಿಷ್ಫಲ.

ವೈಷ್ಣವದೀಕ್ಷೆ–ವಿಷ್ಣುಪೂಜೆ

ಈ ಶ್ಲೋಕದಲ್ಲಿ ವೈಷ್ಣವದೀಕ್ಷೆಯನ್ನೂ ವಿಷ್ಣುಪೂಜೆಯನ್ನೂ ಪ್ರತ್ಯೇಕವಾಗಿ ಮಾನವ–ಜನ್ಮಸಾರ್ಥಕ್ಯಸಂಪಾದಕವನ್ನಾಗಿ ನಿರೂಪಿಸಿರುವಂತೆ ಕಾಣುವುದಾದರೂ ವೈಷ್ಣವದೀಕ್ಷೆ ಇಲ್ಲದ ಬರೇ ವಿಷ್ಣುಪೂಜೆಗೆ ಮಾನವಜನ್ಮಸಾರ್ಥಕ್ಯಸಂಪಾದಕತ್ವ ಇಲ್ಲದಿರುವುದರಿಂದ ಹಾಗೂ ವಿಷ್ಣುಪೂಜೆಯಿಲ್ಲದ ಬರೇ ವೈಷ್ಣವದೀಕ್ಷೆ ಇರಲೂ ಸಾಧ್ಯವೇ ಇಲ್ಲದಿರುವುದರಿಂದ

ವೈಷ್ಣವದೀಕ್ಷೆ ಹಾಗೂ ವಿಷ್ಣುಪೂಜೆ ಇವೆರಡೂ ಸೇರಿಯೇ ಮಾನವಜನ್ಮಕ್ಕೆ ಸಾರ್ಥಕ್ಯ-ಸಂಪಾದಕವೆನಿಸುವವು. ವೈಷ್ಣವದೀಕ್ಷೆಯನ್ನು ಜೀವನದಲ್ಲಿ ಅಳವಡಿಸಿಕೊಂಡು[1] ಆ ದೀಕ್ಷೆಯಿಂದ ಪ್ರಭಾವಿತನಾಗಿ ವಿಷ್ಣುಪೂಜೆ ನಡೆಸಿದರಷ್ಟೇ ಅಂತಹವನು ನಿಜವಾಗಿ ಮಾನವ ಎಂದು ಪರಿಗಣಿಸಲು ಅರ್ಹನಾಗುವನು.

ಆದ್ದರಿಂದ ಮಾನವಜನ್ಮವನ್ನು ಸಾರ್ಥಕಪಡಿಸಿಕೊಳ್ಳುವಲ್ಲಿ ವೈಷ್ಣವದೀಕ್ಷೆಯ ಪಾತ್ರ ತುಂಬ ಮಹತ್ತ್ವದ್ದು.

ಆದ್ದರಿಂದಲೇ ವೈಷ್ಣವದೀಕ್ಷೆಯ ಸ್ವರೂಪವನ್ನು ಚೆನ್ನಾಗಿ ಅರಿತುಕೊಂಡು ಸಾಧ್ಯವಾದಷ್ಟು ಮಟ್ಟಿಗೆ ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಯತ್ನಿಸಬೇಕು.

'ವಿಷ್ಣುರಹಸ್ಯ'ದಲ್ಲಿ ವೈಷ್ಣವದೀಕ್ಷೆಯ ಹಿರಿಮೆ:

ಪಂಚರಾತ್ರಾಗಮದ ಸಾರಸರ್ವಸ್ವ ಎಂದು ಪ್ರಸಿದ್ಧವಾಗಿರುವ 'ಶ್ರೀವಿಷ್ಣುರಹಸ್ಯ' ಕೃತಿಯಲ್ಲಿ ೭ನೇ ಅಧ್ಯಾಯದ ೩೮ನೇ ಶ್ಲೋಕದಿಂದ ೯೭ನೆಯ ಶ್ಲೋಕದ ವರೆಗಿನ ೫೯ ಶ್ಲೋಕಗಳಲ್ಲಿ, ೮ನೆಯ ಅಧ್ಯಾಯದ ೨೪ ಶ್ಲೋಕಗಳಲ್ಲಿ, ೯ನೇ ಅಧ್ಯಾಯದ ೬೧ ಶ್ಲೋಕಗಳಲ್ಲಿ, ೧೦ನೇ ಅಧ್ಯಾಯದ ಪ್ರಾರಂಭದ ೩೪ ಶ್ಲೋಕಗಳಲ್ಲಿ –ಹೀಗೆ ಒಟ್ಟು ೧೭೮ ಶ್ಲೋಕಗಳ ವ್ಯಾಪ್ತಿಯಲ್ಲಿ ವೈಷ್ಣವದೀಕ್ಷೆಯ ಬಗ್ಗೆ ವಿಸ್ತಾರವಾಗಿ ತಿಳಿಸಲಾಗಿದೆ. 'ಈ ರೀತಿಯಾಗಿ ಪಂಚರಾತ್ರಾಗಮದಲ್ಲಿ ಹೇಳಿರುವ ವಿಧಾನದಿಂದ ವೈಷ್ಣವದೀಕ್ಷೆಯನ್ನು ಪಡೆದುಕೊಳ್ಳಬೇಕೆಂದು ವೈಷ್ಣವದೀಕ್ಷಾನಿರೂಪಣೆಯ ಉಪಸಂಹಾರದ ಭಾಗದಲ್ಲಿ ಎರಡು ಬಾರಿ ಹೇಳಿರುವುದರಿಂದ[2] ಪಂಚರಾತ್ರಾಗಮಕ್ಕನುಗುಣವಾಗಿ ಇಲ್ಲಿ ವೈಷ್ಣವದೀಕ್ಷೆಯ ನಿರೂಪಣೆ ನಡೆದಿದೆ ಎಂದು ಸ್ಪಷ್ಟವಾಗುವುದು.

ವೈಷ್ಣವದೀಕ್ಷೆಯ ಹಿರಿಮೆಗರಿಮೆಗಳನ್ನು ಹೀಗೆ ಪ್ರತಿಪಾದಿಸಲಾಗಿದೆ–

ವೇದಾಧ್ಯಯನಾದಿಗಳಲ್ಲಿ ಉಪನಯನಸಂಸ್ಕಾರಕ್ಕೊಳಪಟ್ಟ ದ್ವಿಜರೆಲ್ಲ ಅಧಿಕಾರಿಗಳೆನಿಸುವರಾದರೂ ಪಂಚರಾತ್ರಾದಿಸ್ಮೃತ್ಯುಕ್ತಪೂಜಾದಿಗಳಲ್ಲಿ ವೈಷ್ಣವದೀಕ್ಷೆ ಪಡೆದವರಷ್ಟೇ ಅಧಿಕಾರಿಗಳು.[3] ವಿಷ್ಣುಭಕ್ತನಾದ ಬ್ರಾಹ್ಮಣ ತಾನು ವಿಷ್ಣುದೀಕ್ಷೆಗೆ ಒಳಗಾಗಿದ್ದರೂ,

---

1. ಭಗವದರ್ಚನಲಕ್ಷಣಕರ್ಮಣಃ 'ತಾಪಃ ಪುಂಡ್ರಸ್ತಥಾ ನಾಮ ಮಂತ್ರೋ ಯಾಗಶ್ಚ ಪಂಚಮಃ' ಇತ್ಯುಕ್ತವೈಷ್ಣವದೀಕ್ಷಾ ಅಂಗಮ್,

   'ಅಧೃತ್ವಾ ವಿಧಿವಚ್ಚಕ್ರಂ ಯದಿ ಕರ್ಮ ಸಮಾಚರೇತ್ ।
   ನಿಷ್ಫಲಂ ತದ್ ಭವೇತ್ ಸರ್ವಮಿಷ್ಟಾಪೂರ್ತಂ ದ್ವಿಜೋತ್ತಮ ॥'

   ಇತ್ಯಾದಿ ಪುರಾಣವಚನಾತ್ । ಅತಃ ಸಾಂಗಂ ತದನುಷ್ಠೇಯಮಿತಿ ಜ್ಞಾಪಯನ್ ತದಕರಣೇ ನಿಂದಾರ್ಥವಾದಮಾಹ- ತೇ ನರಾ ಇತಿ । –ಶ್ರೀನಿವಾಸಾಚಾರ್ಯಕೃತಾ ಟೀಕಾ.

2. ....ಏವಂ ಚ ವೈಷ್ಣವೀಂ ದೀಕ್ಷಾಂ ಪಂಚರಾತ್ರೋಕ್ತಮಾರ್ಗತಃ । ಗೃಹೀತ್ವಾ..........
   — ೧೦–೨೮.

* ....ಪೂರ್ವೋಕ್ತೇನ ವಿಧಾನೇನ ಪಂಚರಾತ್ರೋಕ್ತಮಾರ್ಗತಃ ।
   ಗ್ರಾಹ್ಯಾ ಹಿ ವೈಷ್ಣವೀ ದೀಕ್ಷಾ.......... –೧೦–೩೨

3. ಉಪನೀತಾ ದ್ವಿಜಾಃ ಸರ್ವೇ ವೇದೇಷ್ವಧಿಕೃತಾ ಮತಾಃ ।
   ತಂತ್ರೇಷು ದೀಕ್ಷಿತಾ ಏವ ಪ್ರೋಚ್ಯಂತೇ ಹ್ಯಧಿಕಾರಿಣಃ ॥ –ಅಧ್ಯಾಯ ೭–೨೮

ವಿಷ್ಣುದೀಕ್ಷೆಗೆ ಒಳಗಾಗದ ತನ್ನ ಪತ್ನಿಯಲ್ಲಿ ಪುತ್ರನನ್ನು ಪಡೆದರೆ, ಆ ಪುತ್ರ ಅನ್ಯ ಪುರುಷನಿಂದ ಹುಟ್ಟಿದವನಂತೆ ಪರಿಗಣಿತನಾಗುವನು. ಅವನು ವಿಷ್ಣುದೀಕ್ಷೆಗೆ ಒಳಗಾದ ಮೇಲಷ್ಟೇ ಪರಿಶುದ್ಧ ಎನಿಸುವನು.[4] ಯಾರದ್ದೋ ವಸ್ತುವನ್ನು ಕದ್ದ ಕಳ್ಳರನ್ನು ಕೊಂಡೊಯ್ಯುತ್ತಿರಲು ರಾಜಾನುವರ್ತಿಪ್ರಜೆಗಳು ಅವರ ಜೊತೆ ವ್ಯವಹಾರವನ್ನೇ ನಡೆಸುವುದಿಲ್ಲ. ಅಂತೆಯೇ ವಿಷ್ಣುದೀಕ್ಷೆ ಇಲ್ಲದ ವ್ಯಕ್ತಿಗಳು ಕಳ್ಳರಂತೆ, ಅನಾಥರಂತೆ. ಯಮದೂತರು ಅವರನ್ನು ಕೊಂಡೊಯ್ಯುವಾಗ ಯಾರೂ ತಡೆಯುವುದಿಲ್ಲ. ಕಳ್ಳರಿಗೆ ಹೊಡೆದಾಗ ಯಾರೂ ತಡೆಯುವುದಿಲ್ಲ ಹೇಗೋ ಹಾಗೆ.[5]

ಪತಿಯ ಚಿಹ್ನೆಯಾಗಿ ಪತಿವ್ರತೆ ತನ್ನ ಕಂಠದಲ್ಲಿ ಮಂಗಲಸೂತ್ರವನ್ನು ಧರಿಸುವಳು. ಇದರಿಂದ ಆಕೆ ಪತಿಯನ್ನು ಹೊಂದಿರುವವಳು, ಸೌಭಾಗ್ಯವತಿ, ಪವಿತ್ರಗಾತ್ರಳು ಆಗುವಳು. ಕಂಠದಲ್ಲಿ ಮಂಗಲಸೂತ್ರ ಇಲ್ಲದಿದ್ದಲ್ಲಿ ವಿಧವೆ ಎನಿಸಿ ಪವಿತ್ರಕಾರ್ಯಗಳಲ್ಲೆಲ್ಲ ಅಮಂಗಲೆ ಎನಿಸುವಳು. ಅಪವಿತ್ರದೇಹವುಳ್ಳವಳೆನಿಸುವಳು. ಇದೇ ರೀತಿಯಾಗಿ ವಿಷ್ಣು-ದೀಕ್ಷಾಹೀನನಾದ ವ್ಯಕ್ತಿ ಅಮಂಗಲ ಎನಿಸುವನು.[6] ವಿಷ್ಣುದೀಕ್ಷೆಗೆ ಒಳಗಾಗುವವನು ಎಲ್ಲರಿಂದ ಗೌರವವನ್ನು ಪಡೆಯುವರು. ಯಮನಿಗೂ ಅವನು ಭಯಪಡುವುದಿಲ್ಲ. ಹೀಗಿರುವಾಗ ರಾಜ, ಮಂತ್ರಿಗಳು, ಅವರಿಗಿಂತ ಬೇರೆಯಾದ ವ್ಯಕ್ತಿಗಳು –ಯಾರೂ ವಿಷ್ಣುದೀಕ್ಷೆಗೊಳಗಾದವನನ್ನು ಭಯಪಡಿಸಲಾರರು.[7] ಎಲ್ಲ ದೀಕ್ಷೆಗಳಿಗಿಂತಲೂ ವಿಷ್ಣು ದೀಕ್ಷೆಯೇ ಶ್ರೇಷ್ಠವಾದದ್ದು. ಯಾಕೆಂದರೆ ಸರ್ವೇಶ್ವರನಾದ ಶ್ರೀವಿಷ್ಣು ದೇವತೆಗಳಿಗೂ ದೇವತೆ ತಾನೇ?[8] ಯಾರು ವೈಷ್ಣವದೀಕ್ಷೆಗೆ ಒಳಗಾಗುವನು; ಅವನು ಎಲ್ಲರ ಮನ್ನಣೆಗೆ ಪಾತ್ರನಾಗುವನು. ಅಂತಹ ದೀಕ್ಷಿತನನ್ನು ಕಡೆಗಣಿಸುವವನು ಶ್ರೀಕೇಶವನನ್ನೇ ಕಡೆಗಣಿಸಿ

---

4. ವಿಷ್ಣುಭಕ್ತೋ ವಿಶೇಷೇಣ ಬ್ರಾಹ್ಮಣಶ್ಚ ವಿಶೇಷತಃ ।
ಅದೀಕ್ಷಿತಾಯಾಂ ಭಾರ್ಯಾಯಾಂ ದೀಕ್ಷಿತೋಽಜನಯತ್ ಸುತಮ್ ॥
ಸ ಹಿ ಜಾರಜವತ್ ಪ್ರೋಕ್ತೋ ದೀಕ್ಷಿತಶ್ಚೇತ್ ವಿಶುದ್ಧ್ಯತಿ । –೭–೪೪

5. ತಸ್ಕರಾಶ್ಚ ಯಥಾ ಲೋಕೇ ಕಸ್ಯಚಿನ್ನೀಯತೇ ತಥಾ ।
ರಾಜಕೀಯಾಃ ನ ತೈಃ ಸಾಕಂ ವ್ಯವಹಾರಂ ಹಿ ಕುರ್ವತೇ ॥
ತಥಾ ದೀಕ್ಷಾವಿಹೀನಾ ಯೇ ನಿರ್ನಾಥಾಸ್ತಸ್ಕರಾ ಇವ ।
ಯಮದೂತೈರ್ನೀಯಮಾನಾನ್ನ ಕಶ್ಚಿದ್ವಾರಯೇಚ್ಚ ತಾನ್ ॥
ಹನ್ಯಮಾನಾನ್ ಯಥಾ ಚೋರಾನ್ ನ ಹಿ ಕಶ್ಚಿನ್ನಿವಾರಯೇತ್ ॥ –೭–೪೫, ೪೬, ೪೭

6. ಪತ್ಯುಶ್ಚಿಹ್ನಂ ಯಥಾ ನಾರೀ ಕಂಠಸೂತ್ರಂ ಬಿಭರ್ತಿ ಹಿ ।
ಸನಾಥಾ ಸುಭಗಾ ತೇನ ಪೂತಗಾತ್ರಾ ಚ ಜಾಯತೇ ॥
ತೇನೈವ ಹೀನಾ ವಿಧವಾ ನಿಂದಿತಾ ಮಂಗಲಾದಿಷು ।
ಅನ್ಯಥಾ ಚಾಪವಿತ್ರಾಂಗೀ ದೀಕ್ಷಾಹೀನಸ್ತಥಾ ನರಃ ॥ –೭–೪೮, ೪೯

7. ದೀಕ್ಷಿತೋ ಲಭತೇ ಪೂಜಾಂ ಯಮಾದಪಿ ಬಿಭೇತಿ ನ ।
ನೃಪಾಮಾತ್ಯಃ ಕಥಂ ತ್ರಸ್ಯೇದನ್ಯಸ್ಮಾತ್ ನೃಪಬಾಹ್ಯತಃ ॥ –೭–೫೦

8. ಸರ್ವಾಸಾಮಪಿ ದೀಕ್ಷಾಣಾಂ ವಿಷ್ಣುದೀಕ್ಷಾಧಿಕಾ ಮತಾ ।
ಯತಃ ಸರ್ವೇಶ್ವರೋ ವಿಷ್ಣುರ್ದೇವಾನಾಮಪಿ ದೇವತಾ ॥ –೭–೫೧

ದಂತೆ.[9] ಕೆಳಗಿನ ವರ್ಣದವನಾದರೂ ವಿಷ್ಣುದೀಕ್ಷೆಯನ್ನು ಹೊತ್ತವನಾದಲ್ಲಿ ಅಂತಹವನು ಬಂಧುವಿನಂತೆ ಗೌರವಾರ್ಹನು. ದೀಕ್ಷೆಯ ಅಂಗವಾಗಿ ರಾಮ, ಕೃಷ್ಣ ಇತ್ಯಾದಿ ಹೆಸರುಗಳಿಂದ ಕೂಡಿದ ಅವನು ಪ್ರಣಾಮವನ್ನು ಹೊರತಾಗಿ ಮಾನ್ಯನೇ ಆಗಿರುವನು.[10] ಮೇಲಿನ ವರ್ಣದವನಾದರೂ, ವೇದವೇದಾಂಗಪಾರಗನಾದರೂ, ಸದಾಚಾರಸಂಪನ್ನನಾದರೂ ವಿಷ್ಣುದೀಕ್ಷಾಧಾರಕನಲ್ಲದಿದ್ದಲ್ಲಿ ಅಂತಹವನು ಕಳ್ಳ ಹೇಗೋ ಹಾಗೆ ಬಹಿಷ್ಕಾರಕ್ಕೆ ಯೋಗ್ಯನು. ಅಂತಹವನಿಗೆ ನೀಡಿದ ದಾನವೆಲ್ಲ ನಿಷ್ಫಲವೆನಿಸುವುದು.[11] ವಿಷ್ಣುದೀಕ್ಷೆ ಹೊತ್ತವನೇ ದೇವಕಾರ್ಯದಲ್ಲೂ, ಪಿತೃಕಾರ್ಯದಲ್ಲೂ ಉತ್ತಮಪಾತ್ರ. ಅವನಿಗೆ ನೀಡಿದ ದಾನಾದಿಗಳು ಅಕ್ಷಯಫಲಪ್ರದವಾಗುವವು.[12]

ಆದುದರಿಂದ ಎಲ್ಲ ಬ್ರಾಹ್ಮಣರು ಯತ್ನಪಟ್ಟು, ತ್ರಿಕರಣಪೂರ್ವಕವಾಗಿ ವೈಷ್ಣವದೀಕ್ಷೆಯನ್ನು ಅಳವಡಿಸಿಕೊಳ್ಳಬೇಕು. ಅದರಿಂದಾಗಿ ಎಲ್ಲರಿಗೆ ಪೂಜ್ಯನೆನಿಸುವನು. ಶ್ರೀಹರಿಗೆ ಪ್ರಿಯನೆನಿಸುವನು. ಐಹಿಕ ಹಾಗೂ ಪಾರತ್ರಿಕ ಇಷ್ಟಗಳನ್ನೆಲ್ಲ ಹೊಂದುವನು. ಕ್ರಮೇಣ ಮುಕ್ತಿಯನ್ನೂ ಹೊಂದುವನು.[13] ಯಾವಾಗಲೂ ಮೂರು ಬಗೆಯ ತಾಪಗಳಿಂದ ಪೀಡಿಸಲ್ಪಡುತ್ತಿರುವವರಿಗೆ ದುಃಖವನ್ನು ದೂರಮಾಡುವುದಕ್ಕೆ ಶ್ರೀವಿಷ್ಣುವಿನ ದೀಕ್ಷಾಗ್ರಹಣ ಒಂದೇ ಒಂದು ಉಪಾಯ ಎನಿಸಿದೆ.[14]

ವೈಷ್ಣವದೀಕ್ಷೆ ಯಾವಾಗ?

ಸಮಗ್ರ ಬದುಕಿನ ಮೇಲೆ ಪ್ರಭಾವ ಬೀರಬಲ್ಲ ವೈಷ್ಣವದೀಕ್ಷೆಯನ್ನು ಉತ್ತಮ ಕಾಲದಲ್ಲಿ ಸ್ವೀಕರಿಸಿದರೆ ಅದು ಅಧಿಕಫಲಪ್ರದವಾಗುವುದು. ಆದುದರಿಂದ ಅಂತಹ ದೀಕ್ಷೆಯನ್ನು ಸ್ವೀಕರಿಸಲು ಯೋಗ್ಯವಾದ ಕಾಲವನ್ನೂ ಹೀಗೆ ಉಲ್ಲೇಖಿಸಲಾಗಿದೆ-

---

9. ಯಸ್ಯ ಸ್ಯಾದ್ ವೈಷ್ಣವೀ ದೀಕ್ಷಾ ಸರ್ವೈರ್ಮಾನ್ಯಃ ಸ ದೀಕ್ಷಿತಃ ।
ಅವಜಾನಾತಿ ಯಸ್ತಂ ತು ಸೋಽವಜಾನಾತಿ ಕೇಶವಮ್ ॥ –೭–೫೫

10. ನೀಚವರ್ಣೋಽಪಿ ಯೋ ವಿಷ್ಣುದೀಕ್ಷಾವಾನ್ ಸ ಹಿ ಬಂಧುವತ್ ।
ವಿನಾ ಪ್ರಣಾಮಂ ಮಾನ್ಯಃ ಸ ರಾಮಕೃಷ್ಣಾದಿನಾಮಭಿಃ ॥ –೭–೫೮

11. ಉಚ್ಚವರ್ಣೋಽಪಿ ಯೋ ವಿಪ್ರೋ ವೇದವೇದಾಂಗಪಾರಗಃ ।
ಸದಾಚಾರರತೋಽಪಿ ಸ್ಯಾದ್ವಿಷ್ಣುದೀಕ್ಷಾವಿವರ್ಜಿತಃ ॥
ಸ ಚೋರವದ್ ಬಹಿಷ್ಕಾರ್ಯಸ್ತಸ್ಮೈ ದತ್ತಂ ಚ ನಿಷ್ಫಲಮ್ ॥ –೭–೫೯

12. ಪಾತ್ರಂ ಹಿ ಪರಮಂ ಪ್ರೋಕ್ತಂ ಹವ್ಯಕವ್ಯಾದಿತಃ ಸದಾ ।
ಯಸ್ಯ ಸ್ಯಾದ್ ವೈಷ್ಣವೀ ದೀಕ್ಷಾ ದತ್ತಂ ಭವತಿ ಚಾಕ್ಷಯಮ್ ॥ –೭–೬೦

13. ತಸ್ಮಾತ್ತು ವೈಷ್ಣವೀ ದೀಕ್ಷಾ ನಿಖಿಲೈರ್ಬ್ರಾಹ್ಮಣಾದಿಭಿಃ ।
ಮನಸಾ ಕರ್ಮಣಾ ವಾಚಾ ಗ್ರಹಣೀಯಾ ಪ್ರಯತ್ನತಃ ॥
ತಥೈವ ಪೂಜ್ಯತಾಂ ಯಾತಿ ಪ್ರಿಯತಾಂ ಚ ಹರೇರಪಿ ।
ಪ್ರಾಪ್ನೋತ್ಯಪಿ ಚ ಸರ್ವೇಷ್ಟಮೈಹಿಕಾಮುಷ್ಮಿಕಂ ಸದಾ ॥
ಕ್ರಮೇಣ ಮುಕ್ತಿಮಾಪ್ನೋತಿ ಪುನರ್ನಾವರ್ತತೇ ತತಃ । –೭–೭೨, ೭೩, ೭೪

14. ಅನಿಶಂ ಪೀಡ್ಯಮಾನಾನಾಂ ಪರಮಂ ದುಃಖಮೋಚನಮ್ ।
ದೀಕ್ಷಾಯಾ ಗ್ರಹಣಂ ವಿಷ್ಣೋರೇಕಮೇವಾಸ್ತಿ ನಾನ್ಯಥಾ ॥ –೯–೬

ಆಷಾಢ, ಕಾರ್ತಿಕ, ಮಾಘ, ವೈಶಾಖ, ಮಾರ್ಗಶೀರ್ಷ ಮಾಸಗಳಲ್ಲಿ ಶುಕ್ಲಪಕ್ಷದ ದಶಮ್ಯಾದಿ ತಿಥಿಗಳಲ್ಲಿ, ಬುಧವಾರ, ಶುಕ್ರವಾರ, ಗುರುವಾರ, ಶನಿವಾರ, ಭಾನುವಾರ ಗಳಲ್ಲಿ ಕುಯೋಗವರ್ಜಿತ ಶುಭಯೋಗಗಳಲ್ಲಿ, ಮೃದುಸಂಜ್ಞೆಯುಳ್ಳ ಚಿತ್ರಾದಿ ನಕ್ಷತ್ರ ಗಳಾಗಲೀ, ಕ್ಷಿಪ್ರ ಎನಿಸುವ ಅಶ್ವಿನ್ಯಾದಿ ನಕ್ಷತ್ರಗಳಾಗಲೀ ಸ್ಥಿರ ಎನಿಸುವ ರೋಹಿಣ್ಯಾದಿ ನಕ್ಷತ್ರಗಳಾಗಲೀ ಇರುವಂದು, ವಿಶೇಷವಾಗಿ ಶ್ರವಣನಕ್ಷತ್ರವಿರುವಂದು, ಯಾವಾಗ ಶನಿಗ್ರಹವು ಅನುಕೂಲವಾಗಿರುವುದೋ ಆಗ ವೈಷ್ಣವದೀಕ್ಷೆಯನ್ನು ಸ್ವೀಕರಿಸಿದಲ್ಲಿ ದೀಕ್ಷೆ ಹೆಚ್ಚು ಫಲಪ್ರದವಾಗುವುದು.[15]

ಗಂಗಾ ಮುಂತಾದ ಪುಣ್ಯತೀರ್ಥಗಳಲ್ಲಿ, ಚಂದ್ರ, ಸೂರ್ಯಗ್ರಹಣಗಳಲ್ಲಿ, ಮಹಾ ಗುರುಗಳಿರುವ ಸಮುದಾಯದಲ್ಲಿ ಹಿಂದೆ ತಿಳಿಸಲಾದ ಕಾಲವಿಶೇಷವನ್ನು ನಿರೀಕ್ಷೆ ಮಾಡದೆಯೇ ದೀಕ್ಷೆಯನ್ನು ಸ್ವೀಕರಿಸಬೇಕು. ಆಗಲೂ ಹಿಂದೆ ತಿಳಿಸಿದ ಉತ್ತಮಕಾಲ ದೊರಕಿತೆಂದರೆ ಆ ಪ್ರಯುಕ್ತ ವಿಷ್ಣುದೀಕ್ಷೆಯಲ್ಲಿ ಫಲಾಧಿಕ್ಯ ದೊರಕದೆ ಇರದು.[16]

ಬಾಲಕರ ನಾಮಕರಣದಂದು, ಉಪನಯನದಂದು ದೀಕ್ಷಾಸ್ವೀಕಾರಕ್ಕೆ ಉಚಿತಕಾಲ.[17]

ವೈಷ್ಣವದೀಕ್ಷಾಸ್ವೀಕಾರ ಹೇಗೆ?

ತಂದೆಯಿಂದಾಗಲೀ, ಕುಲಗುರುಗಳಿಂದಾಗಲೀ ಯತ್ನಪೂರ್ವಕವಾಗಿ ವೈಷ್ಣದೀಕ್ಷೆ ಯನ್ನು ಸ್ವೀಕರಿಸಬೇಕು. ಇದರಿಂದಾಗಿ ಶ್ರೀವಿಷ್ಣು ಸುಪ್ರೀತನಾಗುವನು.[18]

ಶಿಷ್ಯನಿಗೆ ತಪ್ತಮುದ್ರಾಧಾರಣ ಮಾಡಿಸಿದ ಗುರು ಶಿಷ್ಯನಿಗೆ ಯೋಗ್ಯವಾದ ಮಂತ್ರವನ್ನು ಉಪದೇಶಿಸಬೇಕು. ಮಂತ್ರೋಪದೇಶ ಮೂರು ಬಾರಿ ನಡೆಯಬೇಕು. ಬಳಿಕ ಶಿಷ್ಯನು ಗುರುಗಳನ್ನು ನಮಸ್ಕರಿಸಬೇಕು. **ತನ್ಮಂತ್ರಾಧಿದೇವತಾ ವಿಷ್ಣುಃ ಪ್ರಸನ್ನೋ ಭವತಾತ್** – 'ಆ ಮಂತ್ರದ ಅಧಿದೇವತೆಯಾದ ಶ್ರೀವಿಷ್ಣು ನಿನ್ನ ಬಗ್ಗೆ ಸುಪ್ರಸನ್ನನಾಗಲಿ'

---

15. ಆಷಾಢೇ ಕಾರ್ತಿಕೇ ಮಾಘೇ ವೈಶಾಖೇ ಮಾರ್ಗಶೀರ್ಷಕೇ ।
ಪುಷ್ಪಚಂದ್ರೇ ತಿಥೌ ತತ್ರ ದಶಮ್ಯಾದೌ ವಿಶೇಷತಃ ॥
ಬುಧಭಾರ್ಗವಜೀವಾನಾಂ (?) ಶನೇರರ್ಕಸ್ಯ ವಾ ದಿನೇ ।
ಮೃದುಕ್ಷಿಪ್ರಧ್ರುವರ್ಕ್ಷೇಷು ಕುಯೋಗೈರ್ವರ್ಜಿತೇ ಶುಭೇ ॥
ಗೃಹ್ಣೀಯಾದ್ವೈಷ್ಣವೀಂ ದೀಕ್ಷಾಂ ಶ್ರವಣೇ ಚ ವಿಶೇಷತಃ ।
ಶನಿರ್ಯದಾನುಕೂಲಃ ಸ್ಯಾತ್ತದಾ ದೀಕ್ಷಾ ಫಲಾದಿಕಾ ॥ –೭–೭೫, ೭೬, ೭೭

16. ಗಂಗಾದಿಪುಣ್ಯತೀರ್ಥೇಷು ಚಂದ್ರಸೂರ್ಯಗ್ರಹೇ ತಥಾ ।
ಮಹಾಗುರುಸಮಾಜೇ ಚ ಕಾಲಂ ನೈವ ಪ್ರತೀಕ್ಷಯೇತ್ ।
ತದಾನೀಂ ಯದಿ ಲಭ್ಯೇತ ಶುಭಕಾಲಸ್ತದಾಧಿಕಮ್ ॥ –೭–೭೮, ೭೯

17. ನಾಮಕರ್ಮಣಿ ಬಾಲಾನಾಂ ತಥೋಪನಯನೇಽಪಿ ಚ ।
ದೀಕ್ಷಾಕಾಲಃ ಸ ವಿಜ್ಞೇಯಃ .... ॥ –೭–೭೯

18. ....ಪಿತುಃ ಕುಲಗುರೋರಪಿ ।
ದೀಕ್ಷಾಂ ಗೃಹ್ಣೀತ ಯತ್ನೇನ ವಿಷ್ಣುಪ್ರೀಣನಹೇತವೇ ॥ –೭–೮೦

ಎಂದು ಗುರು ಶಿಷ್ಯನನ್ನು ಆಶೀರ್ವದಿಸಬೇಕು. ಬಳಿಕ ಗುರು ತನ್ನ ಹಸ್ತವನ್ನು ಶಿಷ್ಯನ ನೆತ್ತಿಯ ಮೇಲೆ ಇಡಬೇಕು. ಗುರುಶಿಷ್ಯರಿಬ್ಬರೂ ಅನ್ಯೋನ್ಯವಾಗಿ ದಿಟ್ಟಿಸಿ ನೋಡಬೇಕು. ಗುರು ಶಿಷ್ಯನನ್ನು ಪ್ರೀತಿಯಿಂದ ಬೀಳ್ಕೊಡಬೇಕು. ವೈಷ್ಣವದೀಕ್ಷೆಯನ್ನು ಸ್ವೀಕರಿಸಿದ ಶಿಷ್ಯನನ್ನು ಶ್ರೀವಾಸುದೇವನಲ್ಲಿ ಸಮರ್ಪಿಸಬೇಕು.

ಇದು ವಿಷ್ಣುದೀಕ್ಷಾವಿಧಾನ ಎನಿಸಿದೆ.19

ವಿಷ್ಣುದೀಕ್ಷೆ ಯಾರಿಂದ? ಯಾರಿಗೆ?

ವಿಷ್ಣುದೀಕ್ಷೆಯನ್ನು ನೀಡುವಲ್ಲಿ ಯಾರು ಮುಖ್ಯ ಅಧಿಕಾರಿಗಳು? ಅಮುಖ್ಯ ಅಧಿಕಾರಿಗಳಾದರೂ ಯಾರು?20 – ಎಂಬ ಚತುರ್ಮುಖನ ಪ್ರಶ್ನೆಗೆ ಹಯಗ್ರೀವ ವಿಸ್ತಾರವಾಗಿ ಸಮಾಧಾನಿಸಿರುವನು– ಎಲ್ಲ ವರ್ಣದವರಿಗೂ ಬ್ರಾಹ್ಮಣನು ಮುಖ್ಯ ಗುರು.21 ತಂದೆ ಮುಂತಾದವರು ಅಮುಖ್ಯ ಗುರುಗಳಷ್ಟೇ. ಎಲ್ಲ ಪ್ರಾಣಿಗಳಿಗೂ ಎಲ್ಲ ಆಶ್ರಮಗಳಿಗೆ ಸೇರಿದ ವ್ಯಕ್ತಿಗಳಿಗೂ ಬ್ರಾಹ್ಮಣನು ಮುಖ್ಯ ಗುರು.22 ಬ್ರಾಹ್ಮಣರಲ್ಲಿ ಅಧಿಕಜ್ಞಾನಿಗಳು ಅಲ್ಪಜ್ಞಾನಿಗಳಾದ ಬ್ರಾಹ್ಮಣರಿಗೆ ಗುರುಗಳೆನಿಸುವರು. ಅಧಿಕಜ್ಞಾನಿಗಳಲ್ಲೂ ವಾನಪ್ರಸ್ಥಾಶ್ರಮಿ, ಸಂನ್ಯಾಸಾಶ್ರಮಿ ಶ್ರೇಷ್ಠಗುರು ಎನಿಸುವನು.23

ಗೃಹಸ್ಥಾಶ್ರಮಿಗಳಲ್ಲಿಯೂ ಜ್ಞಾನದಿಂದ ಉತ್ತಮರಾದ ತಂದೆಯೇ ಮುಂತಾದವರು ಗುರುಗಳು; ಜ್ಞಾನದಿಂದ ಅಧಿಕರಾದ ಕುಲದ ಗುರುಗಳೂ ದೀಕ್ಷಾದಾನದಲ್ಲಿ ಅಧಿಕಾರಿಗಳು. ತಂದೆ, ಹಿರಿಯಣ್ಣ, ಚಿಕ್ಕಪ್ಪ, ದೊಡ್ಡಪ್ಪ, ಮಾವ, ಸೋದರಮಾವನ ಮಗ, ಹೆಣ್ಣು ಕೊಟ್ಟ ಮಾವ –ಮುಂತಾದವರಲ್ಲಿ ಯಾರುಯಾರು ಹೆಚ್ಚೆಚ್ಚು ಜ್ಞಾನವುಳ್ಳವರೋ ಅಂತಹವರು ವಿಷ್ಣುದೀಕ್ಷೆಯನ್ನು ನೀಡಲು ಅಧಿಕಾರಿಗಳೆನಿಸುವರು.24

---

19. ....ಮಂತ್ರಂ ವೋಪದಿಶೇತ್ ಪಶ್ಚಾತ್ತತ್ತದ್ಯೋಗ್ಯತಯಾ ಗುರುಃ ।
ತ್ರಿವಾರಮುಪದೇಶಃ ಸ್ಯಾದಂತೇ ಶಿಷ್ಯೋ ನಮೇದಪಿ ॥
ಪ್ರಸನ್ನೋ ಭವತಾದ್ವಿಷ್ಣುಸ್ತತ್ತನ್ಮಂತ್ರಾಧಿದೇವತಾ ।
ಇತ್ಯಾಶಿಷಂ ಪ್ರಯುಂಜ್ಯಾಥ ನ್ಯಸೇತ್ತನ್ಮಸ್ತಕೇ ಕರಮ್ ॥
ಪರಸ್ಪರಂ ನಿರೀಕ್ಷ್ಯಾಥ ಪ್ರೀತ್ಯಾ ಶಿಷ್ಯಂ ವಿಸರ್ಜಯೇತ್ ।
ಕೃಪಯಾ ತತ್ಪ್ರಗೃಹೀತಂ ವಾಸುದೇವೇ ಸಮರ್ಪಯೇತ್ ॥
ಇತಿ ದೀಕ್ಷಾವಿಧಾನಂ .... ॥ –೭–೯೪, ೯೫, ೯೬, ೯೭

20. ದೀಕ್ಷಾಪ್ರದಾನೇ ಭಗವನ್ ಕೇ ಕೇ ಸ್ಯುರಧಿಕಾರಿಣಃ ।
ಗೌಣಮುಖ್ಯಪ್ರಭೇದೇನ ವದ......... ॥ –೮–೧

21. ಬ್ರಾಹ್ಮಣೋ ಹಿ ಗುರುರ್ಮುಖ್ಯೋ ಗೌಣಾಃ ಪಿತ್ರಾದಯಃ ಸ್ಮೃತಾಃ । –೮–೨

22. ಬ್ರಾಹ್ಮಣಃ ಸರ್ವಜಂತೂನಾಂ ಗುರುರ್ಮುಖ್ಯಃ ಪ್ರಕೀರ್ತಿತಃ । –೮–೩

23. ವಿಪ್ರಾಣಾಂ ಗುರವೋ ವಿಪ್ರಾ ಮಿಥೋ ಯೇ ಜ್ಞಾನಿನೋಽಧಿಕಾಃ ।
ತೇಷಾಮಪಿ ವಿಶೇಷೇಣ ವನಸ್ಥೋ ವಾ ಯತಿರ್ಭವೇತ್ ॥ –೮–೪

24. ಗೃಹಸ್ಥೇಷ್ವಪಿ ಪಿತ್ರಾದ್ಯಾ ಯೇ ವಾ ಸ್ಯುರ್ವೈಷ್ಣವೋತ್ತಮಾಃ ।
ಜ್ಞಾನತೋ ವಾಧಿಕಾ ಯೇ ಸ್ಯುಃ ಕುಲಸ್ಯ ಗುರವೋಽಪಿ ಯೇ ॥

ಯತಿಗಳಿಗೆ ಯತಿಗಳೇ ಗುರುಗಳಾಗುವರೇ ಹೊರತು ಬೇರೆ ಆಶ್ರಮದವರು ಗುರುಗಳಾಗಲಾರರು. ಹಾಗೆಯೇ ನೈಷ್ಠಿಕಬ್ರಹ್ಮಚಾರಿಗಳಿಗೆ ಅಂತಹ ಬ್ರಹ್ಮಚಾರಿಗಳೇ ಗುರುಗಳಾಗುವರು.[25]

ಇತರ ವರ್ಣದವರಿಗೆ, ಆಶ್ರಮದವರಿಗೆ ಬ್ರಾಹ್ಮಣರೇ ಮುಖ್ಯ ಗುರು. ಕ್ಷತ್ರಿಯಾದಿಗಳೂ ಜ್ಞಾನಾದಿಗಳಿಂದ ನ್ಯೂನರಾದವರಿಗೆ ದೀಕ್ಷಾದಾನಮಾಡುವ ಗುರುಗಳೆನಿಸುವರು. ಬ್ರಾಹ್ಮಣನ ಆದೇಶವನ್ನು ಪಡೆದುಕೊಂಡಷ್ಟೇ ಅವರು ಗುರುಗಳಾಗಬೇಕು.[26]

ಗುರು ಎಷ್ಟೆಷ್ಟು ಅಧಿಕನೋ ಅಷ್ಟಷ್ಟು ದೀಕ್ಷೆಯ ಫಲ ಅಧಿಕವಾಗಿ ದೊರಕುವುದು.[27]

ಉತ್ತಮ ದೇಶಕಾಲಗಳಲ್ಲಿ ವಿಷ್ಣುಭಕ್ತಿಸಂಪನ್ನನಾಗಿ ವಿಷ್ಣುದೀಕ್ಷೆಯನ್ನು ಸ್ವೀಕರಿಸಿದಲ್ಲಿ ಅಂತಹವನಿಗೆ ಪೂರ್ಣ ಫಲ ದೊರಕುವುದು. ಇಲ್ಲದಿದ್ದಲ್ಲಿ ದೀಕ್ಷಾಸ್ವೀಕಾರದ ಪೂರ್ಣಫಲ ದೊರಕಲಾರದು.[28]

ಎಲ್ಲರಿಂದಲೂ ವಿಷ್ಣುದೀಕ್ಷೆ

ಯಾರ ದರ್ಶನಮಾತ್ರದಿಂದಲೇ ಶುದ್ಧಿಗೆ ಭಂಗ ಬರುವುದೋ ಅಂತಹ ಶ್ವಪಚ ಮುಂತಾದವರಿಗೆ ಮುದ್ರಾಧಾರಣೆ ಹೇಗೆ? ಅವರಿಗೆ ಉಪದೇಶ ಹೇಗೆ? ಯಾವ ಮಂತ್ರಗಳ ಉಪದೇಶ? ಅವರ ತಲೆಯ ಮೇಲೆ ಕೈ ಇಡುವುದಾದರೂ ಹೇಗೆ? ಎಂದು ಚತುರ್ಮುಖ ಸಮಾಜದಲ್ಲಿ ಕೆಳಮಟ್ಟದವರೆಂದು ಪರಿಗಣಿತರಾದ ವ್ಯಕ್ತಿಗಳ ವಿಷಯದಲ್ಲಿ ವಿಷ್ಣುದೀಕ್ಷೆಯ ದಾನದ ಬಗ್ಗೆ ಕೇಳಿದ ಪ್ರಶ್ನೆಗೆ[29] ಹಯಗ್ರೀವನ ಸಮಾಧಾನ ಹೀಗಿದೆ–

ಯಾವುದೇ ವರ್ಣದವರಿರಲಿ, ಯಾವುದೇ ಆಶ್ರಮದವರಿರಲಿ, ಯಾವುದೇ ಜಾತಿಯವರಿರಲಿ, ವಿಕೃತವಾಗಿ ಜನ್ಮಪಡೆದವರಿರಲಿ ಪ್ರತಿಯೊಬ್ಬರೂ ವಿಷ್ಣುಭಕ್ತಿಯನ್ನು ಮಾಡಬೇಕು; ಹಾಗೆಯೇ ಶ್ರೀಹರಿಯ ದೀಕ್ಷೆಯನ್ನು ಸ್ವೀಕರಿಸಬೇಕು.

ಪಿತಾ ಭ್ರಾತಾ ತು ಯೋ ಜ್ಯೇಷ್ಠಃ ಪಿತೃವ್ಯೋ ಮಾತುಲಸ್ತಥಾ ।
ತತ್ಸುತಃ ಶ್ವಶುರೋಽಪಿ ಸ್ಯಾದೇಷಾಂ ಪಿತ್ರಾದಯೋಽಪಿ ಚ ॥
ತತ್ರಾಪಿ ಜ್ಞಾನವಂತಃ ಸ್ಯುರ್ದೀಕ್ಷಾದಾನೇಽಧಿಕಾರಿಣಃ । –೮–೫, ೬

25. ಯತೀನಾಂ ಯತಯಃ ಪ್ರೋಕ್ತಾ ಗುರವೋಽನ್ಯೇ ನ ಹಿ ಕ್ವಚಿತ್ ।
ನೈಷ್ಠಿಕವ್ರತಿನಃ ಪ್ರೋಕ್ತೋ ನೈಷ್ಠಿಕವ್ರತವಾನ್ ಗುರುಃ ॥ –೮–೯

26. ಮುಖ್ಯೋ ಗುರುರ್ಭವೇದ್ವಿಪ್ರಃ ಕ್ಷತ್ರಿಯಾದಿಷು ಯೇಽಧಿಕಾಃ ।
ತೇಽಪಿ ವಿಪ್ರಾಜ್ಞಯಾ ತೇಷಾಂ ದೀಕ್ಷಾಯಾಂ ಗುರವೋ ಮತಾಃ ॥ –೮–೧೨

27. ಗುರ್ವಾಧಿಕ್ಯವಶಾತ್ ಪ್ರೋಕ್ತಂ ದೀಕ್ಷಾಗ್ರಹಣಜಂ ಫಲಮ್ । –೮–೧೫

28. ದೇಶೇ ಕಾಲೇ ವಿಶೇಷೇಣ ವಿಷ್ಣುಭಕ್ತಿಸಮನ್ವಿತಃ ।
ವಿಷ್ಣುದೀಕ್ಷಾಫಲಂ ಕೃತ್ಸ್ನಂ ಸಮ್ಯಕ್ ಸ ಲಭತೇ ನರಃ ।
ಅನ್ಯಥಾ ನ ತಥಾ ತಸ್ಯ ಫಲಂ ಭವತಿ ನಿಶ್ಚಿತಮ್ ॥ –೯–೨೨, ೨೪

29. ಯೇಷಾಂ ಚ ಪ್ರತಿಲೋಮಾನಾಂ ದರ್ಶನಾದೇವ ಜಾಯತೇ ।

ವೈರಾಗ್ಯವೇ ಮುಂತಾದ ಗುಣಗಳನ್ನು ಉಲ್ಲೇಖಿಸಿ, ಕೊನೆಯಲ್ಲಿ ವಿಷ್ಣುಭಕ್ತಿಯನ್ನೂ ಹೆಸರಿಸಿ ಇಂತಹ ಗುಣಸಂಪನ್ನನು ಯಾರೇ ಆಗಲಿ ಅಂತಹವನು ವಿಷ್ಣುದೀಕ್ಷೆಯ ಸ್ವೀಕಾರಕ್ಕೆ ಅಧಿಕಾರಿ ಎನಿಸುವನೆಂದು ಘೋಷಿಸಲಾಗಿದೆ.[30] ಹಿಂದೆ ಹೇಳಲಾಗಿದ್ದ ಗುಣಗಳಿಂದ ಕೂಡಿದ ವಿಪ್ರನು ವಿಷ್ಣುದೀಕ್ಷೆ ನೀಡುವ ಮುಖ್ಯ ಗುರು ಎನಿಸುವನು.[31]

ವಿಷ್ಣುದೀಕ್ಷೆಯನ್ನು ಅಪೇಕ್ಷಿಸಿ ತನ್ನನ್ನು ಶರಣಾಗತನಾದ, ವೈರಾಗ್ಯಾದಿ ಸಂಪನ್ನನಾದ ವ್ಯಕ್ತಿಗೆ ವಿಷ್ಣುದೀಕ್ಷೆಯನ್ನು ನೀಡಿ ಅನುಗ್ರಹಿಸಲೇಬೇಕು. ಖಂಡಿತಾ ಅವನನ್ನು ದೂರ ಮಾಡಬಾರದೆಂದು ಒತ್ತಿ ಹೇಳಲಾಗಿದೆ.[32] ವೈದ್ಯರು ಯಾವ ಜಾತಿಯ ರೋಗಿಗಳಿಗೂ ಚಿಕಿತ್ಸೆ ನೀಡುವಂತೆ ವಿಷ್ಣುಭಕ್ತಿಪರಾಯಣರಾದ, ಕರುಣಾಳುಗಳಾದ ಗುರುಗಳು ಪತಿತರನ್ನೂ ಶ್ವಪಚಾದಿಗಳನ್ನೂ ವಿಷ್ಣುದೀಕ್ಷೆ ನೀಡಿ ಅನುಗ್ರಹಿಸದೆ ಇರಲಾರರು.[33] ಅಥವಾ ಅಂತಹವರನ್ನು ತಾವು ದರ್ಶನಮಾತ್ರದಿಂದ ಅನುಗ್ರಹಿಸಿ, ಆಯಾ ಜಾತಿಯ ಶಿಷ್ಯರಲ್ಲಿ ಶ್ರೇಷ್ಠರಾದವರನ್ನು ಅವರಿಗೆ ವೈಷ್ಣವದೀಕ್ಷೆ ನೀಡಲು ಆದೇಶಿಸುವರು.[34]

ಆದ್ದರಿಂದ ಹರಿಪ್ರಿಯರಾದ ಭಕ್ತರು ತಮ್ಮ ಬಳಿಗೆ ವೈಷ್ಣವದೀಕ್ಷೆಗಾಗಿ ಬಂದ ವ್ಯಕ್ತಿಯನ್ನು ಸರ್ವಪ್ರಯತ್ನ ಮಾಡಿಯಾದರೂ ವೈಷ್ಣವದೀಕ್ಷೆ ನೀಡುವ ಮೂಲಕ ಅನುಗ್ರಹಿಸಲೇ ಬೇಕು. ಎಂದೂ ಅವನನ್ನು ತ್ಯಜಿಸಬಾರದು.[35]

ಶೌಚಭಂಗೋ ದ್ವಿಜಾತೀನಾಂ ತೇಷಾಂ ಮುದ್ರಾಂಕನಂ ಕಥಮ್ ॥
ಕಥಂ ಚೋಪದಿಶೇಯುಸ್ತಾನ್ ಶ್ವಪಾಕಾದೀನ್ ದ್ವಿಜೋತ್ತಮಾಃ ।
ಕಥಂ ವಾ ಬಿಭೃಯುರ್ಹಸ್ತಂ ತೇಷಾಮುಪರಿ ಮಸ್ತಕೇ ।
ಉಪಾದಿಶೇಯುಃ ಕಾನ್ ಮಂತ್ರಾನ್ ತೇಷು ಜಾತ್ಯಧಮೇಷು ವೈ ॥ –೯–೧, ೨, ೩

30. ನಾತ್ರ ವರ್ಣಾ ನಿಯಮ್ಯಂತೇ ನಾಪ್ಯಾಶ್ರಮನಿವಾಸಿನಃ ।
ಸರ್ವಾಶ್ರಮೈಃ ಸರ್ವವರ್ಣೈಃ ಸರ್ವಾಭಿರ್ಜಾತಿಭಿಸ್ತಥಾ ॥
ವಿಲೋಮೈಃ ಪ್ರತಿಲೋಮೈಶ್ಚ ತಥಾ ಕುಂಡೈಶ್ಚ ಗೋಳಕೈಃ ।
ಕರ್ತವ್ಯಾ ವಿಷ್ಣುಭಕ್ತಿಶ್ಚ ಗ್ರಾಹ್ಯಾ ದೀಕ್ಷಾ ಹರೇರಪಿ ॥ –೯–೭, ೮

31. ಸಂಸಾರೇ ದುಃಖಬಹುಲೇ....... ವಿಷ್ಣುಭಕ್ತಿಸಮನ್ವಿತಃ ।
ವಿಷ್ಣುದೀಕ್ಷಾಧಿಕಾರೀ ಸ್ಯಾದ್ಯೋ ವಾ ಕೋ ವಾ ಭವತ್ವಸೌ ।
ಪೂರ್ವೋಕ್ತಗುಣವಾನ್ ವಿಪ್ರೋ ಗುರುರ್ಮುಖ್ಯೋ ನಿಗದ್ಯತೇ ॥ –೯–೧೪, ೧೫

32. ಏವಂ ಯೋ ವಿದ್ಯತೇ ಕಶ್ಚಿತ್ ಪ್ರಪನ್ನಂ ದೀಕ್ಷಣೇ ಹರೇಃ ।
ಸೋಽನುಗ್ರಾಹ್ಯೋ ಭವೇದೇವ ನೈವ ತ್ಯಾಜ್ಯಃ ಕಥಂಚನ ॥ –೯–೧೬

33. ....ಶ್ವಪಾಕಾದೀನಪಿ ಧ್ರುವಮ್ ।
ರೋಗಿಣೋ ಹಿ ಚಿಕಿತ್ಸಂತೇ ದಯಾವಂತಶ್ಚಿಕಿತ್ಸಕಾಃ ॥
.......ತಥಾ ದಯಾಲವಃ ಶಾಂತಾ ವಿಷ್ಣುಭಕ್ತಿಪರಾಯಣಾಃ ।
ಪತಿತಾದೀನ್ ಶ್ವಪಾಕಾನ್ ತಾನನುಗೃಹ್ಣಂತಿ ದೀಕ್ಷತಃ ॥ –೯–೨೦

34. ಅನುಗೃಹ್ಣಾತಿ ದೃಷ್ಟ್ವೈವ ತತ್ತಜ್ಜಾತ್ಯಧಿಕಾನಪಿ ।
ಆಜ್ಞಾಪ್ಯ ತತ್ತಜ್ಜಾತೀಯಂ ದೀಕ್ಷಯಂತ್ಯಥವಾ ಹಿ ತೇ ॥ –೯–೨೦

35. ತಸ್ಮಾತ್ ಸರ್ವಪ್ರಯತ್ನೇನ ಪ್ರತಿಪನ್ನಂ ತು ವೈಷ್ಣವಮ್ ।

ಬ್ರಾಹ್ಮಣರಲ್ಲಿ ಪತಿತರಾದವರು; ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದವರು, ಆದರೆ ಪಶ್ಚಾತ್ತಾಪದಿಂದ ಸಂತಪ್ತರಾದವರು, ವೈದಿಕಕರ್ಮದಿಂದ ದೂರರಾದವರು, ಮದ್ಯ ಮಾಂಸಾದಿಭಕ್ಷಣಗಳಿಂದಲೂ, ಪರದಾರಾಭಿಗಮನ ಇತ್ಯಾದಿ ಪಾಪಕರ್ಮಗಳಿಂದಲೂ ನಿವೃತ್ತರಾಗಿರುವವರು– ಕರುಣಾಳುಗಳಾದ ಗುರುಗಳಿಂದ ಬ್ರಾಹ್ಮಣಸ್ತ್ರೀಯರು ಹೇಗೋ ಹಾಗೆ ಸಂಸ್ಕಾರ ಪಡೆದುಕೊಳ್ಳಲು ಅರ್ಹರೆನಿಸುವರು. ತಪ್ತಮುದ್ರಾಂಕನ, ಮಂತ್ರೋಪದೇಶ –ಇತ್ಯಾದಿ ವೈಷ್ಣವದೀಕ್ಷಾಂಗಗಳನ್ನು ಅವರಿಗೆ ನೀಡಿದಲ್ಲಿ ಅವರು ಕ್ರಮವಾಗಿ ಪಾಪ ಮುಕ್ತರಾಗಬಲ್ಲರು.36

* * *

ಎರಡು ಬಗೆಯ ದೀಕ್ಷೆ:

ಆಂತರ ಹಾಗೂ ಬಾಹ್ಯ ಎಂಬುದಾಗಿ ವೈಷ್ಣವದೀಕ್ಷೆ ಎರಡು ಬಗೆಗಳಲ್ಲಿದೆ. ಒಳಗಿನ ಬುದ್ಧಿ ಮತ್ತು ಮನಸ್ಸುಗಳಿಗೆ ಸಂಬಂಧಿಸುವ ದೀಕ್ಷೆ ಆಂತರದೀಕ್ಷೆ ಎನಿಸಿದರೆ, ಹೊರಗಿನ ದೇಹ, ಅಂಗಗಳ ನಡತೆ, ವೇಷಭೂಷಾದಿಗಳಿಗೆ ಸಂಬಂಧಿಸುವ ದೀಕ್ಷೆ ಬಾಹ್ಯದೀಕ್ಷೆ ಎನಿಸುವುದು. ಇವುಗಳಲ್ಲಿ ಆಂತರದೀಕ್ಷೆಯೇ ಪ್ರಮುಖವಾಗಿದ್ದು, ಅಂತಹ ದೀಕ್ಷೆಗೆ ಪೋಷಕವಾಗಿಯಷ್ಟೇ ಬಾಹ್ಯದೀಕ್ಷೆ ವಿಹಿತವಾಗಿದೆ. ಜ್ಞಾನಿಗಳು ಈ ಎರಡು ಬಗೆಯ ದೀಕ್ಷೆಯನ್ನೂ ಅಳವಡಿಸಿಕೊಳ್ಳಬೇಕು; ಅಜ್ಞಾನಿಗಳಿಗೆ ಒಂದೊಮ್ಮೆ ಎರಡೂ ಬಗೆಯ ದೀಕ್ಷೆಗಳನ್ನು ಅಳವಡಿಸಿಕೊಳ್ಳಲಾಗದಿದ್ದಲ್ಲಿ ಬಾಹ್ಯದೀಕ್ಷೆಯನ್ನಾದರೂ ಅಳವಡಿಸಿಕೊಳ್ಳ ಬೇಕೆಂದು ವಿಧಿಸಲಾಗಿದೆ–

ದೀಕ್ಷಾ ಹಿ ದ್ವಿವಿಧಾ ಪ್ರೋಕ್ತಾ ಬಾಹ್ಯಾಭ್ಯಂತರಭೇದತಃ ।
ಜ್ಞಾನಿನಾಮುಭಯಂ ತತ್ರ ಬಾಹ್ಯೋ ವಾಽಜ್ಞಾನಿನಾಂ ಭವೇತ್ ॥

ಆಂತರದೀಕ್ಷೆ

ಐದು ಅಂಶಗಳನ್ನೊಳಗೊಂಡ ಆಂತರದೀಕ್ಷೆಯ ಸ್ವರೂಪ ಹೀಗಿದೆ–

ಅಯಂ ಸರ್ವೇಷ್ಟದಾತಾ ಮೇ ಸರ್ವಾರಿಷ್ಟನಿವಾರಕಃ ।
ಸರ್ವೋತ್ಕೃಷ್ಟೋಽಯಮ್ಯೇವೇಕೋ ತದೀಯೋಽಹಂ ಸ ಮೇ ಪತಿಃ ।

ಯಥಾ ತಥಾಽನುಗೃಹ್ಣೀತ ನ ಸ ತ್ಯಾಜ್ಯೋ ಹರಿಪ್ರಿಯಃ ॥ –೯–೨೨

36. ಪತಿತಾ ಯೇ ದ್ವಿಜಾತೀನಾಂ ಪ್ರಾಯಶ್ಚಿತ್ತವಿವರ್ಜಿತಾಃ ।
ಪಶ್ಚಾತ್ತಾಪೇನ ಸಂತಪ್ತಾ ವೈದಿಕಾತ್ ಕರ್ಮಣೋ ಗತಾಃ ॥
ಮದ್ಯಮಾಂಸಸುರಾಭಕ್ಷೈರುಜ್ಝಿತಾಃ ಧರ್ಮಬುದ್ಧಯಃ ।
ಪಾಪಕರ್ಮಭಿರಪ್ಯನ್ಯೇ ಪರದಾರಧನಾದಿತಃ ।
ನಿವೃತ್ತಾಸ್ತೇಽಪಿ ಸಂಸ್ಕಾರ್ಯಾ ದ್ವಿಜಸ್ತ್ರೀವದ್ದಯಾಲುಭಿಃ ॥
ತಪ್ತಚಂದ್ರಾಂಕನಂ ತದ್ವತ್ತನ್ಮಂತ್ರೋಪದೇಶನಮ್ ।
ತಥಾಕೃತೇ ಕ್ರಮೇಣೈವ ಪಾಪಮುಕ್ತಾ ಭವಂತಿ ಹಿ ॥ –೯–೪೯, ೫೦

ಇತಿ ಜ್ಞಾನಂ ನಿಶ್ಚಿತಂ ಯತ್ ಸಾ ದೀಕ್ಷಾಽಭ್ಯಂತರಾ ಮತಾ ॥

೧. ಈ ಶ್ರೀಹರಿಯೇ ನನ್ನ ಎಲ್ಲ ಇಷ್ಟಗಳನ್ನೂ ಪೂರೈಸುವವನು.

೨. ಇವನೇ ನನ್ನ ಎಲ್ಲ ಅನಿಷ್ಟಗಳನ್ನೂ ಪರಿಹರಿಸುವವನು.

೩. ಇವನೊಬ್ಬನೇ ಸರ್ವಶ್ರೇಷ್ಠನಾಗಿರುವವನು.

೪. ನಾನು ಅವನಿಗೆ ಸೇರಿರುವವನು.

೫. ಅವನು ನನ್ನ ಒಡೆಯ.

ಈ ಐದು ಅಂಶಗಳ ಬಗ್ಗೆ ದೃಢವಾದ ನಿರ್ಧಾರವೇ ಆಂತರದೀಕ್ಷೆ.

ಬಾಹ್ಯದೀಕ್ಷೆ

ಆಂತರವೈಷ್ಣವದೀಕ್ಷೆಯಂತೆ ಬಾಹ್ಯವೈಷ್ಣವದೀಕ್ಷೆಯೂ ಐದು ಅಂಗಗಳನ್ನು ಹೊಂದಿರುವುದು.

ಐದು ಅಂಗಗಳಿಂದೊಡಗೂಡಿದ ಬಾಹ್ಯದೀಕ್ಷೆ ಹೀಗಿದೆ–

ತಾಪಃ ಪುಂಡ್ರಸ್ತಥಾ ನಾಮ ಮಂತ್ರೋ ಯಾಗಶ್ಚ ಪಂಚಮಃ ।

೧. ಸುದರ್ಶನಹೋಮದ ಅಗ್ನಿಯಿಂದ ಬಿಸಿಯಾದ ಚಕ್ರಾದಿ ಮುದ್ರೆಗಳ ಧಾರಣೆ.

೨. ಗೋಪೀಚಂದನದಿಂದ ಊರ್ಧ್ವಪುಂಡ್ರಗಳ ಧಾರಣೆ.

೩. ಶ್ರೀವಿಷ್ಣುವಿಗೆ ಸಂಬಂಧಿಸುವ ಹೆಸರುಗಳನ್ನು ಇಟ್ಟುಕೊಳ್ಳುವುದು.

೪. ಶ್ರೀವಿಷ್ಣುಪರಗಳಾದ ಮಂತ್ರಗಳ ಜಪ.

೫. ಶ್ರೀವಿಷ್ಣುವಿನ ಪೂಜೆ.

ಪದ್ಮಪುರಾಣದಲ್ಲಿ (ಪಾತಾಲಖಂಡ, ೮೨) ರುದ್ರದೇವ ನಾರದರಿಗೆ ವೈಷ್ಣವದೀಕ್ಷೆಗೆ ಸಂಬಂಧಿಸುವ ಪಂಚಸಂಸ್ಕಾರಗಳನ್ನು ಹೀಗೆ ತಿಳಿಸಿರುವನು–

ಅಂಕನಂ ಚೋರ್ಧ್ವಪುಂಡ್ರಶ್ಚ ಮಂತ್ರೋ ನಾಮವಿಧಾರಣಮ್ ।
ಪಂಚಮೋ ಯಾಗ ಇತ್ಯುಕ್ತಾಃ ಸಂಸ್ಕಾರಾ ಪೂರ್ವಸೂರಿಭಿಃ ॥

–೫–೮೨–೧೯

ಪ್ರಾಚೀನಜ್ಞಾನಿಗಳು ಚಕ್ರಾದಿಮುದ್ರಾಧಾರಣ, ಊರ್ಧ್ವಪುಂಡ್ರಗಳ ಧಾರಣ, ವೈಷ್ಣವಮಂತ್ರಗಳ ಜಪ, ವೈಷ್ಣವನಾಮಧಾರಣ ಹಾಗೂ ಪೂಜೆ –ಹೀಗೆ ವೈಷ್ಣವದೀಕ್ಷೆಗೆ ಸಂಬಂಧಿಸಿದಂತೆ ಐದು ಸಂಸ್ಕಾರಗಳನ್ನು ಗುರುತಿಸಿರುವರು.

ಈ ಐದು ಸಂಸ್ಕಾರಗಳ ಅರ್ಥವನ್ನೂ ಸ್ಥೂಲವಾಗಿ ಅಲ್ಲಿ ತಿಳಿಸಲಾಗಿದೆ–

ಅಂಕನಂ ಶಂಖಚಕ್ರಾದ್ಯೈಃ ಸಚ್ಛಿದ್ರಂ ಪುಂಡ್ರಮುಚ್ಯತೇ ।
ದಾಸಶಬ್ದಯುತಂ ನಾಮ ಮಂತ್ರೋ ಯುಗಲಸಂಜ್ಞಕಃ ॥

ಗುರುವೈಷ್ಣವಯೋಃ ಪೂಜಾ ಯಾಗ ಇತ್ಯಭಿಧೀಯತೇ ।
ಏತೇ ಪರಮಸಂಸ್ಕಾರಾ ಮಯಾ ತೇ ಪರಿಕೀರ್ತಿತಾಃ ॥

–೫–೮೨–೨೦, ೨೧

ಶಂಖಚಕ್ರಾದಿಗಳಿಂದ ಮುದ್ರೆಯನ್ನು ಹಾಕಿಸಿಕೊಳ್ಳುವುದು, ಮಧ್ಯಭಾಗದಲ್ಲಿ ಖಾಲಿ ಸ್ಥಳ ಬಿಟ್ಟು ನಾಮದ ಧಾರಣೆ, ದಾಸ ಎಂಬ ಶಬ್ದಸಹಿತವಾಗಿ ಶ್ರೀವಿಷ್ಣುವಿಗೆ ಸಂಬಂಧಿಸಿದ ನಾಮದ ಧಾರಣೆ, ನಾರಾಯಣಾಷ್ಟಾಕ್ಷರವೇ ಮುಂತಾದ ಮಂತ್ರಗಳು, ಗುರು ಹಾಗೂ ವೈಷ್ಣವರ ಪೂಜೆ –ಹೀಗೆ ಪಂಚಸಂಸ್ಕಾರಗಳು ಹೇಳಲ್ಪಟ್ಟಿವೆ.

ಆಂತರದೀಕ್ಷೆಯ ಅಂಗಗಳು: ವೈಷ್ಣವ ಆಂತರದೀಕ್ಷೆಯಲ್ಲಿ ಮೇಲ್ನೋಟಕ್ಕೆ ಐದು ಅಂಗಗಳನ್ನು ಒಳಗೊಂಡಿರುವಂತೆ ಕಾಣುವುದಾದರೂ ಪರಸ್ಪರ ಸಾಪೇಕ್ಷಗಳಾದ ಅವು ಮೂರೇ:

೧. ಶ್ರೀಹರಿಯೇ ನನ್ನ ಎಲ್ಲ ಇಷ್ಟಪ್ರಾಪಕ ಹಾಗೂ ಅನಿಷ್ಟಪರಿಹಾರಕ.

೨. ಶ್ರೀಹರಿಯೇ ಸರ್ವಶ್ರೇಷ್ಠ.

೩. ಶ್ರೀಹರಿಯೇ ನನ್ನ ಸ್ವಾಮಿ, ನಾನು ಅವನ ದಾಸ.

ಇವುಗಳಲ್ಲೂ 'ಶ್ರೀಹರಿಯೇ ಸರ್ವಶ್ರೇಷ್ಠ' ಎಂಬ ವಿಚಾರ ಆಂತರವೈಷ್ಣವದೀಕ್ಷೆಯ ಕೇಂದ್ರಬಿಂದು. ಯಾಕೆಂದರೆ, ಶ್ರೀಹರಿ ಸರ್ವಶ್ರೇಷ್ಠನಾದರೆ ಎಲ್ಲರಿಗೂ ಅವನು ಸ್ವಾಮಿಯಾಗಿರುವಂತೆ, ನನಗೂ ಅವನೇ ಸ್ವಾಮಿ; ಅವನು ಸ್ವಾಮಿ ಎಂದರೆ ನಾನು ಅವನ ದಾಸ. ಹೀಗೆ ಅವನು ನನಗೆ ಸ್ವಾಮಿಯಾಗಿರುವುದರಿಂದಲೇ ನನ್ನ ಎಲ್ಲ ಇಷ್ಟಗಳನ್ನೂ ಈಡೇರಿಸುವವನೂ ಅನಿಷ್ಟಗಳನ್ನು ಪರಿಹರಿಸುವವನೂ ಅವನೇ.

ಈ ರೀತಿಯಾಗಿ ಶ್ರೀಹರಿಯ ಸರ್ವಶ್ರೇಷ್ಠತ್ವ ವಿಚಾರದ ಆಧಾರದಲ್ಲೇ ಉಳಿದ ಎರಡು ಅಂಶಗಳೂ ರೂಪುಗೊಳ್ಳುವವುಗಳಾಗಿರುವುದರಿಂದ ಅವನ ಸರ್ವಶ್ರೇಷ್ಠತ್ವದ ಪ್ರಮೇಯವೇ ಪ್ರಮುಖವಾದದ್ದು. ಈ ಪ್ರಮೇಯವನ್ನು ದೃಢವಾಗಿ ಮನವರಿಕೆ ಮಾಡಿಕೊಳ್ಳಲಾಯಿತೆಂದರೆ ಉಳಿದ ಎರಡು ಅಂಶಗಳನ್ನೂ ಒಪ್ಪಿಕೊಳ್ಳಲೇಬೇಕಾಗುವುದು.

ಆದುದರಿಂದ ಆಂತರವೈಷ್ಣವದೀಕ್ಷೆಯನ್ನು ಅಳವಡಿಸಿಕೊಂಡು ದೃಢಪಡಿಸಿಕೊಳ್ಳಬೇಕೆಂದರೆ ಮೊತ್ತಮೊದಲು ಆ ದೀಕ್ಷೆಯ ಕೇಂದ್ರಬಿಂದು ಶ್ರೀವಿಷ್ಣುಸರ್ವೋತ್ತಮತ್ವದ ದೃಢೀಕರಣ ಆವಶ್ಯಕ. ಸಮಗ್ರ ಶಾಸ್ತ್ರಪ್ರಪಂಚವೂ ಶ್ರೀವಿಷ್ಣುವಿನ ಸರ್ವೋತ್ತಮತ್ವದ ಪ್ರತಿಪಾದನೆಗಾಗಿಯೇ ಹೊರಟಿರುವುದಾದರೂ ಶಾಸ್ತ್ರದಲ್ಲಿ ಪ್ರಸ್ತುತಗಳಾದ ಶ್ರೀವಿಷ್ಣುಸರ್ವೋತ್ತಮತ್ವದ ವಿಚಾರಗಳನ್ನು ಬರೇ ತಿಳಿದುಕೊಂಡರಷ್ಟೇ ಸಾಲದು. ಅವುಗಳನ್ನು ಯುಕ್ತಿಗಳಿಂದ ಮನನ ಮಾಡಬೇಕು. ಶ್ರೀವಿಷ್ಣುವೇ ನಮ್ಮ ಪ್ರತ್ಯಕ್ಷಕ್ಕೆ ಅಗೋಚರ ಎಂದ ಮೇಲೆ ಅವನ ಪಾರಮ್ಯವೂ ಪ್ರತ್ಯಕ್ಷಕ್ಕೆ ಎಟಕದಿರುವಂತಹದ್ದು. ಆದುದರಿಂದ ಶ್ರೀವಿಷ್ಣುವನ್ನು, ಅವನ ಪಾರಮ್ಯವನ್ನು ಪ್ರತ್ಯಕ್ಷವಾಗಿ ಕಂಡ ಜ್ಞಾನಿಗಳ ಅನುಭವದ ಹಿನ್ನೆಲೆಯಲ್ಲಿ ಮೂಡಿ ಬಂದ ಮಾತುಗಳಿಂದ ವಿಷ್ಣುಸರ್ವೋತ್ತಮತ್ವವನ್ನು ದೃಢಪಡಿಸಿಕೊಳ್ಳಬೇಕು. ಅಂತಹ ಮಾತುಗಳಿಗೆ ಯುಕ್ತಿಗಳ ಬಲವನ್ನು ಬೆರೆಸಿದಾಗ ಅವು ದಾರ್ಢ್ಯಸಂಪಾದಕವೆನಿಸಬಲ್ಲವು.

ಶಾಸ್ತ್ರದಲ್ಲಿ ಪ್ರಸ್ತುಗಳಾದ ವಿಷ್ಣುಸರ್ವೋತ್ತಮತ್ವವಿಚಾರಗಳಲ್ಲಿ ನೂರಒಂದು ವಿಚಾರಗಳನ್ನು ಆಯ್ಕೆ ಮಾಡಿ ಚಿಂತನೆಗೆ ಅನುಕೂಲವಾಗುವಂತೆ 'ಅಸಾಧಾರಣಧರ್ಮಾಧಾರಿತಗಳು' 'ಪೌರಾಣಿಕ ಹಾಗೂ ಐತಿಹಾಸಿಕ ಘಟನಾಧಾರಿತಗಳು' 'ಭಗವದ್ಗೀತಾ

ಧಾರಿತಗಳು' 'ಉಪನಿಷದಾಧಾರಿತಗಳು' 'ಬ್ರಹ್ಮಸೂತ್ರಾಧಾರಿತಗಳು' ಹಾಗೂ ಆಗಮ ಹಾಗೂ ಆಗಮಾಧಾರಿತ ಯುಕ್ತ್ಯಾಧಾರಿತಗಳು' –ಹೀಗೆ ಆರು ವಿಭಾಗಗಳಲ್ಲಿ ಕ್ರೋಢೀಕರಿಸಲಾಗಿದೆ.

ಇಲ್ಲಿಯ ಕೆಲವು ವಿಚಾರಗಳು ಶ್ರೀವಿಷ್ಣುವಿನ ಸರ್ವೋತ್ತಮವನ್ನು ನೇರವಾಗಿ ಸಮರ್ಥಿಸುತ್ತಿದ್ದರೆ, ಮತ್ತೆ ಕೆಲವು ಪರೋಕ್ಷವಾಗಿಯಷ್ಟೇ ಸಮರ್ಥಿಸುವವು. ಕೆಲವು ವಿಚಾರಗಳಲ್ಲಿ ಆರ್ಥಿಕವಾಗಿ ಪೌನರುಕ್ತ್ಯದೋಷ ಕಾಣಿಸಬಹುದಾದರೂ ದೃಢೀಕರಣಕ್ಕೆ ಉಪಯುಕ್ತವಾಗದಿರಲಾರವೆಂದು ಅಂತಹ ವಿಚಾರಗಳನ್ನು ಸಂಗ್ರಹಿಸಲಾಗಿದೆ.

ಅಂತಹ ಶ್ರೀವಿಷ್ಣುಸರ್ವೋತ್ತಮವನ್ನು ಸಮರ್ಥಿಸುವ ನೂರಒಂದು ವಿಚಾರಗಳನ್ನು ಹೃದಯದ ಮೇಲೆ ಪರಿಣಾಮಕಾರಿಯಾಗುವಂತೆ ಶ್ರದ್ಧೆಯಿಂದ, ಏಕಾಗ್ರತೆಯಿಂದ ಪರಿಶೀಲಿಸೋಣ.

ಶ್ರೀವಿಷ್ಣುಸರ್ವೋತ್ತಮತ್ವವನ್ನು ಸಾಧಿಸುವ ನೂರಒಂದು ವಿಚಾರಗಳು

ಅಸಾಧಾರಣಧರ್ಮಾಧಾರಿತಗಳು

1. ಜಗತ್ತು ಬಹಳ ಅದ್ಭುತವಾಗಿ ಹಾಗೂ ಭಿನ್ನಭಿನ್ನವಾಗಿ ಸೃಷ್ಟಿಗೊಂಡಿದೆ. ಸೃಷ್ಟಿ ನಡೆಯುತ್ತಲೂ ಇದೆ. ಸೃಷ್ಟಗಳಾದ ಪದಾರ್ಥಗಳ ಪಾಲನೆಯೂ ವ್ಯವಸ್ಥಿತವಾಗಿ ನಡೆಯುವುದು. ಕಾಲಕಾಲಕ್ಕೆ ಆಯಾ ಪದಾರ್ಥಗಳ ನಾಶದಲ್ಲೂ ವ್ಯವಸ್ಥೆ ಇದೆ. ಹುಟ್ಟಿನಿಂದ ನಾಶದ ವರೆಗೆ ಆಯಾ ವ್ಯಕ್ತಿಯನ್ನು, ವಸ್ತುವನ್ನು ಆಯಾ ಚಟುವಟಿಕೆಯಲ್ಲಿ ತೊಡಗಿಸುವಿಕೆಯೂ ಸುವ್ಯವಸ್ಥಿತವಾಗಿ ನಡೆಯುವುದು. ಅದಕ್ಕೆ ಬೇಕಾದ ಜ್ಞಾನದ ಬೆಳಕನ್ನು ಒದಗಿಸುವಲ್ಲೂ, ಅಜ್ಞಾನದ ಕತ್ತಲೆಯನ್ನು ಆವರಿಸುವಲ್ಲೂ ಸುವ್ಯವಸ್ಥೆ ಎದ್ದು ಕಾಣುವುದು. ಇವೆಲ್ಲವುಗಳನ್ನೊಳಗೊಂಡ ಸಂಸಾರಾವಸ್ಥೆಗೆ ಕೆಲವರನ್ನು ಒಳಪಡಿಸುವುದನ್ನೂ, ಸಂಸಾರಾವಸ್ಥೆಯಿಂದ ಕೆಲವರನ್ನು ಬಿಡುಗಡೆಗೊಳಿಸುವುದನ್ನೂ ಸುವ್ಯವಸ್ಥಿತವಾಗಿ ನಡೆಸಲಾಗುವುದು.

ಹೀಗೆ ಜಗತ್ತಿಗೆ ಸಂಬಂಧಿಸಿದ ಸೃಷ್ಟಿಯೇ ಮುಂತಾದ ಎಂಟು ಚಟುವಟಿಕೆಗಳು ಚತುರ್ಮುಖನೇ ಮುಂತಾದವರ ಮೂಲಕ ನಡೆಯುವಂತೆ ಕಂಡುಬಂದರೂ ಮೂಲ–ಭೂತವಾಗಿ ಶ್ರೀಮನ್ನಾರಾಯಣನ ಮೂಲಕವೇ ಅವು ನಡೆಯುವವು. ಚತುರ್ಮು–ಖಾದಿಗಳೆಲ್ಲ ಸೃಷ್ಟ್ಯಾದಿಗಳಿಗೆ ಮಾಧ್ಯಮರಷ್ಟೇ.

ಶಾಸ್ತ್ರದಲ್ಲಿ ಅಲ್ಲಲ್ಲಿ ಬೇರೆಬೇರೆ ಬಗೆಯ ಸೃಷ್ಟ್ಯಾದಿಗಳ ನಿರೂಪಣೆ, ವರ್ಣನೆ ನಡೆದಿದ್ದು, ಅದರಿಂದಾಗಿ ಶ್ರೀವಿಷ್ಣುವಿನ ಸರ್ವೋತ್ತಮತ್ವವು ಸಮರ್ಥಿತವಾದಂತಾಗುವುದು.37

---

37. ಸೃಷ್ಟಿಃ ಸ್ಥಿತಿಶ್ಚ ಸಂಹಾರೋ ನಿಯತಿಜ್ಞಾನಮಾವೃತಿಃ ।
ಬಂಧಮೋಕ್ಷೌ ಚ ಕಥ್ಯಂತೇ ಯಸ್ಯೋತ್ಕರ್ಷಪ್ರಸಿದ್ಧಯೇ ॥
........ಸ ಹರಿಃ ಪರಃ ॥ –ಛಾಂ.ಉ.ಭಾ. ೬–೩–೧೬

2. ತಮ್ಮ ಸ್ವರೂಪ, ಪ್ರಮಿತಿ, ಪ್ರವೃತ್ತಿಗಳ ವಿಷಯದಲ್ಲಿ ಮತ್ತೊಬ್ಬರನ್ನು ಅವಲಂಬಿಸದೆ ಇರುವುದೇ ಸ್ವಾತಂತ್ರ್ಯವೆನಿಸಿದ್ದು, ಅಂತಹ ಸ್ವಾತಂತ್ರ್ಯವನ್ನು ಹೊಂದಿರುವ ಏಕೈಕವ್ಯಕ್ತಿ ಎಂದರೆ ಶ್ರೀಹರಿ ಆಗಿದ್ದು,[38] 'ತನ್ನ ಮಹಿಮೆಯ ಮೇಲೆ ಅವಲಂಬಿತನಾಗಿರುವವನು[39] –ಎಂದು ಅಂತಹ ಸ್ವಾತಂತ್ರ್ಯಸಂಪನ್ನನಾಗಿ ಉಪನಿಷತ್ತುಗಳಲ್ಲಿ ಸ್ತುತನಾಗಿರುವ ಶ್ರೀಹರಿಯ ಸರ್ವೋತ್ತಮತ್ವವೂ ಅದರಿಂದ ಘೋಷಿತವಾಗುವುದು.

3. ಅಜ್ಞರಿಗೆ ಜ್ಞಾನವನ್ನು ನೀಡುವವನೂ; ಜ್ಞಾನಿಗಳಿಗೆ ಮೋಕ್ಷವನ್ನು ನೀಡುವವನೂ; ಮುಕ್ತರಾದವರಿಗೆ ತಮ್ಮ ಸ್ವರೂಪಸುಖವನ್ನು ಅನುಭವಿಸುವಂತೆ ಮಾಡುವವನೂ[40] ಶ್ರೀವಿಷ್ಣು ಪುರುಷಾರ್ಥಗಳಲ್ಲಿ ಶ್ರೇಷ್ಠವಾದ ಮೋಕ್ಷಪುರುಷಾರ್ಥವನ್ನು, ನೀಡುವುದರಿಂದಲೂ, ಮೋಕ್ಷಾವಸ್ಥೆಯಲ್ಲೂ ಆನಂದವನ್ನು ನೀಡುವುದರಿಂದಲೂ ಸರ್ವೋತ್ತಮನೆಂದು ಸಿದ್ಧಿಸುವುದು.

4. ಸಂಸಾರಬಂಧನದಿಂದ ಬಿಡುಗಡೆ ಪಡೆದು ಮುಕ್ತರೆನಿಸಿದವರಿಗೂ ಶ್ರೀಹರಿ ಶ್ರೇಷ್ಠ ಅಧಿಪತಿ ಆಗಿರುವನೆಂದ[41] ಮೇಲೆ ಅವನು ಸರ್ವೋತ್ತಮನಾಗಿದ್ದಿರಲೇಬೇಕು.

5. ಲಕ್ಷ್ಮೀದೇವಿ ನಿತ್ಯಮುಕ್ತಳು. ತನ್ನ ಕಾಮನೆಗಳನ್ನೆಲ್ಲ ಹೊಂದಿರುವವಳು. ಆದರೂ ಶ್ರೀವಿಷ್ಣುವನ್ನು ಯಾವಾಗಲೂ ಉಪಾಸನೆ ನಡೆಸುತ್ತಿರುವಳು.[42] ಇದರಿಂದ ಅವನ ಸರ್ವೋತ್ತಮತ್ವವು ಸಿದ್ಧವಾಗುವುದು.

6. ಸ್ವತಃ ಈಡೇರಿದ ಇಚ್ಛೆಯುಳ್ಳವನಾಗಿ 'ಸತ್ಯಕಾಮ' ಎನಿಸಿರುವವನು ಶ್ರೀಹರಿಯೊಬ್ಬನೇ. ನಿತ್ಯಮುಕ್ತಳಾದ ಲಕ್ಷ್ಮೀದೇವಿ ಹಾಗೂ ಇತರ ಮುಕ್ತರೂ 'ಸತ್ಯಕಾಮ'ರಾಗಿರುವವರಾದರೂ, ಶ್ರೀಹರಿಯ ಕಾಮನೆಗಳಿಗನುಗುಣವಾದ ಕಾಮನೆಗಳನ್ನು ತಾಳಿದ್ದರಿಂದಷ್ಟೇ ಅವರು ಸತ್ಯಕಾಮರೆನಿಸಿರುವರು.[43] ಹೀಗೆ ಸ್ವಾಭಾವಿಕವಾಗಿ 'ಸತ್ಯಕಾಮ'ನಾಗಿರುವುದರಿಂದ ಅವನೇ ಸರ್ವೋತ್ತಮನು ಎನಿಸಲು ಅರ್ಹ.

---

38. ಸ್ವತಂತ್ರಮಸ್ವತಂತ್ರಂ ಚ ದ್ವಿವಿಧಂ ತತ್ತ್ವಮಿಷ್ಯತೇ ।
ಸ್ವತಂತ್ರೋ ಭಗವಾನ್ ವಿಷ್ಣುಃ ಅಸ್ವತಂತ್ರಂ ದ್ವಿಧೇತರತ್ ॥ –ತತ್ತ್ವಸಂಖ್ಯಾನ.

* ಸ್ವರೂಪಪ್ರಮಿತಿಪ್ರವೃತ್ತಿಲಕ್ಷಣಸತ್ತಾತ್ರೈವಿಧ್ಯೇ ಪರಾನಪೇಕ್ಷಂ ಸ್ವತಂತ್ರಮ್ ।
ಪರಾಪೇಕ್ಷಂ ಅಸ್ವತಂತ್ರಮ್ ॥ –ಟೀಕಾ

39. ಸ ಭಗವಃ ಕಸ್ಮಿನ್ ಪ್ರತಿಷ್ಠಿತ ಇತಿ ಸ್ವೇ ಮಹಿಮ್ನಿ । –ಛಾ.ಉ. ೭–೨೪–೧

40. ಅಜ್ಞಾನಾಂ ಜ್ಞಾನದೋ ವಿಷ್ಣುಃ ಜ್ಞಾನಿನಾಂ ಮೋಕ್ಷದಶ್ಚ ಸಃ ।
ಆನಂದದಶ್ಚ ಮುಕ್ತಾನಾಂ ಸ ಏವೈಕೋ ಜನಾರ್ದನಃ ॥
– ಅನುವ್ಯಾಖ್ಯಾನ, ೧–೧–೧೫

41. ಪರಮೋಽಧಿಪತಿಸ್ತೇಷಾಂ ವಿಷ್ಣುರೇವ ನ ಸಂಶಯಃ ।
– ವಾರಾಹ (ಬ್ರ.ಸೂ.ಭಾ. ೪–೪–೯)

42. ಯಥಾ ಶ್ರೀರ್ನಿತ್ಯಮುಕ್ತಾಪಿ ಪ್ರಾಪ್ತಕಾಮಾಪಿ ಸರ್ವದಾ ।
ಉಪಾಸ್ತೇ ನಿತ್ಯಶೋ ವಿಷ್ಣುಂ............ ॥ –ಬೃಹತ್ತಂತ್ರ (ಬ್ರ.ಸೂ.ಭಾ. ೩–೩–೪೧)

43. ಸತ್ಯಕಾಮೋಽಪರೋ ನಾಸ್ತಿ ತಮೃತೇ ವಿಷ್ಣುಮವ್ಯಯಮ್ ।

7. ಯಾವಾಗಲೂ ತಿನ್ನುವ ಇಚ್ಛೆ, ಕುಡಿಯುವ ಇಚ್ಛೆ, ಶೋಕ, ಮೋಹ, ಜರಾ ಹಾಗೂ ಮೃತ್ಯು –ಇವುಗಳನ್ನು ಸ್ವಾಭಾವಿಕವಾಗಿ ಅತಿಕ್ರಮಿಸಿ ಇರುವವನು ಶ್ರೀವಿಷ್ಣು ಮಾತ್ರ. ಮುಕ್ತಾದಿಗಳು ಅವನ ಅನುಗ್ರಹಕ್ಕೆ ಪಾತ್ರರಾಗಿಯಷ್ಟೇ ಆ ದೋಷಗಳನ್ನು ಮೀರಿರುವರು.[44] ಹೀಗೆ ಸ್ವಾಭಾವಿಕವಾಗಿ ಶೋಕಾದಿಗಳನ್ನು ಅತಿಕ್ರಮಿಸಿರುವುದರಿಂದ ಅವನೇ 'ಸರ್ವೋತ್ತಮ' ಎನಿಸಲು ಯೋಗ್ಯ.

8. ಶ್ರೀಹರಿಯ 'ಪರಬ್ರಹ್ಮ' 'ಪರಮಾತ್ಮಾ' 'ನಾರಾಯಣ' 'ಕೃಷ್ಣ' 'ಇಂದ್ರ' 'ವಾಸುದೇವ' ಮುಂತಾದ ನಾಮಗಳು ಅವನ ಗುಣಪರಿಪೂರ್ಣತ್ವ ಮುಂತಾದ ಅಸಾಧಾರಣಗುಣಗಳನ್ನು ಪ್ರತಿಪಾದಿಸುವ ಮೂಲಕ ಅವನ ಸರ್ವೋತ್ತಮತ್ವವನ್ನು ಸಾರುತ್ತಿವೆ.

9. ಶ್ರೀವಿಷ್ಣು ತನ್ನ ಶಿಂಶುಮಾರರೂಪದಿಂದ ಮೇಲಿನ ಲೋಕಗಳಲ್ಲಿ ಇರುವ ಆದಿತ್ಯಾದಿ ಗ್ರಹಗಳಿಗೆಲ್ಲ ಆಶ್ರಯನಾಗಿರುವನು.[45] ಅವನ ಈ ಮಹಿಮೆ ಅವನ ಸರ್ವೋತ್ತಮತ್ವಕ್ಕೆ ಸೂಚಕ.

10. ಶ್ರೀವಿಷ್ಣುವು ತನ್ನ ನರಸಿಂಹರೂಪದಿಂದ ವಾಡವಾಗ್ನಿ ರೂಪತಾಳಿ ಸಮುದ್ರದ ನೀರನ್ನೆಲ್ಲ ಭಸ್ಮ ಮಾಡುವನೆಂದು ಘೋಷಿಸುವ ವೈಹಾಯಸಸಂಹಿತೆಯ ಮೂಲಕ ಅವನ ಸರ್ವೋತ್ತಮತ್ವವು ಸೂಚಿಸಲ್ಪಡುವುದು.[46]

ಪೌರಾಣಿಕ, ಐತಿಹಾಸಿಕ ಘಟನಾಧಾರಿತಗಳು

11. ಲಕ್ಷ್ಮೀದೇವಿ ಶಾಶ್ವತವಾಗಿ ಶ್ರೀಹರಿಯನ್ನು ಆಶ್ರಯಿಸಿಕೊಂಡೇ ಇರುವವಳು. ಆದರೂ ಚಾಕ್ಷುಷಮನ್ವಂತರದಲ್ಲಿ ಕ್ಷೀರಸಾಗರಮಥನ ನಡೆದಾಗ ಮತ್ತೊಂದು ರೂಪದಿಂದ ಪ್ರಾದುರ್ಭವಿಸಿ, ಸ್ವಯಂವರದ ನಾಟಕದ ಮೂಲಕ ಆ ಸಂದರ್ಭದಲ್ಲಿ ಅಲ್ಲಿ ನೆರೆದಿದ್ದ ದೇವಾದಿಗಳ ದೋಷಗಳನ್ನು ಉಲ್ಲೇಖಿಸಿ, 'ನಿರವದ್ಯನಾದವನು',

---

ಸತ್ಯಕಾಮತ್ವಮನ್ಯೇಷಾಂ ಭವೇತ್ ತತ್ಕಾಮ್ಯಕಾಮತಾ ॥
– ಸ್ಕಾಂದೇ (ಬ್ರ.ಸೂ.ಭಾ. ೨–೩–೧೪)

44. ನಿತ್ಯ ತೀರ್ಣಾಶನಾಯಾದಿರೇಕ ಏವ ಹರಿಃ ಸ್ವತಃ ।
ಅಶನಾಯಾದಿಕಾನನ್ಯೇ ತತ್ಪ್ರಸಾದಾತ್ ತರಂತಿ ಹಿ ॥
– ಪಾದ್ಮ (ಬ್ರ.ಸೂ.ಭಾ. ೧–೩–೧೪)

45. ಜ್ಞಾನಾನಂದಾತ್ಮಕೇ ವಿಷ್ಣೌ ಶಿಂಶುಮಾರವಪುಷ್ಯಥ ।
ಊರ್ಧ್ವಲೋಕೇಷು ಸಂವ್ಯಾಪ್ತ ಆದಿತ್ಯಾದ್ಯಾ ಸಮಾಶ್ರಿತಾಃ ॥
– ಬ್ರಹ್ಮಾಂಡೇ (ಭಗ.ತಾ.ನಿ. ೫–೨೦–೩೭)

46. ಭೂತಾದಿಭೂತೋಽಂಬುನಿಧಾನಮಧ್ಯೇ ಭೂತ್ವಾ ಹರಿಃ ಸರ್ವಪರೋಽತಿಧಾಮ್ನಾ ।
ಅಗಾಧಮಂಭೋ ವಿದಧಾತಿ ಭಸ್ಮ ಯೋ ವಾಡವಾಗ್ನಿಸ್ಸ ಸರ್ವಾಚಿಂತ್ಯಃ ॥
(ಖಂಡಾರ್ಥನಿರ್ಣಯ)

'ಅವ್ಯಭಿಚಾರಿಸದ್ಗುಣ'ನಾಗಿರುವವನು. ಅಂದರೆ ನಿರ್ದುಷ್ಟ ಹಾಗೂ ಗುಣಪೂರ್ಣನಾಗಿರುವವನು ಶ್ರೀಹರಿಯೇ –ಎಂದು ನಿರ್ಧರಿಸಿ, ಅವನ ಕೊರಳಿಗೆ ಮಾಲೆ ಹಾಕಿ ಅವನನ್ನು ವರಿಸುವಳು. ಆ ಮೂಲಕ ಅವನ ಸರ್ವೋತ್ತಮತ್ವವನ್ನು ಸಮರ್ಥಿಸುವಳು.[47]

12. ತ್ರಿಮೂರ್ತಿಗಳಲ್ಲಿ ಯಾರು ಶ್ರೇಷ್ಠರೆಂದು ಪರೀಕ್ಷಿಸಿ, ಶ್ರೀವಿಷ್ಣುವೇ ಶ್ರೇಷ್ಠನೆಂದು ಋಷಿಗಳೆದುರು ಉದ್ಘೋಷಿಸಿರುವ ಭೃಗುವಿನ ಆ ನಿರ್ಧಾರದಿಂದ ಇತರ ದೇವತೆಗಳಿಗಿಂತೆಲ್ಲ ಶ್ರೇಷ್ಠರೆಂದು ಪ್ರಸಿದ್ಧರಾಗಿರುವ ಬ್ರಹ್ಮರುದ್ರರಿಗಿಂತಲೂ ಶ್ರೀವಿಷ್ಣು ಶ್ರೇಷ್ಠನೆಂದರೆ ಸರ್ವೋತ್ತಮನೆಂದೇ ಸಿದ್ಧಿಸುವುದು.

13. ಹರಿವಂಶದ ಧನ್ಯಾಶ್ಚರ್ಯ ಪ್ರಕರಣದಲ್ಲಿ ನಿರೂಪಿತವಾಗಿರುವಂತೆ 'ಧನ್ಯೋಽಸಿ' 'ಆಶ್ಚರ್ಯೋಽಸಿ' –ಎಂಬುದಾಗಿ 'ಸರ್ವೋತ್ತಮನಾಗಿರುವಿ' –ಎಂದು ನಾರದರಿಂದ ರೈವತಪರ್ವತದಲ್ಲಿ ಒಗಟಿನ ರೂಪದಲ್ಲಿ ಸ್ತುತನಾದ ಶ್ರೀಕೃಷ್ಣ 'ದಕ್ಷಿಣಾಭಿಃ ಸಾಕಂ' –ಎಂದು ಸೇರಿಸಿ, ತಾವು ತಿಳಿಸಿರುವಂತೆ ಬರೇ ಕೂರ್ಮಾದಿದೇವತೆಗಳಿಂದಷ್ಟೇ ಅಲ್ಲ ನನ್ನ ಪತ್ನಿಯಾದ ದಕ್ಷಿಣಾದೇವಿಯಿಂದಲೂ ಕೂಡಿದ ಪ್ರಪಂಚಕ್ಕಿಂತಲೂ ನಾನು ಉತ್ತಮನೆಂದು ಹೇಳುವ ಮೂಲಕ ತನ್ನ ಸರ್ವೋತ್ತಮತ್ವವನ್ನು ನಾರದರ ಮೂಲಕ ಆ ಪ್ರಸಂಗದಲ್ಲಿ ಸ್ಪಷ್ಟಪಡಿಸಿರುವನು.[48]

14. ರೈವತಕಪರ್ವತದಲ್ಲಿ ಕುಂತಿಯ ಪ್ರಾರ್ಥನೆಗನುಗುಣವಾಗಿ ಶ್ರೀಕೃಷ್ಣ ತಾನೊಬ್ಬನೇ ಅಲ್ಲಿ ನೆರೆದಿದ್ದ ಭೀಮಸಹಿತ ಪಾಂಡವರು, ಕೌರವರು, ಭೀಷ್ಮಾದಿಗಳೆಲ್ಲರ ವಿರುದ್ಧ ಕಾದಾಡಿ, ಅವರೆಲ್ಲರನ್ನೂ ಜಯಿಸುವ ಮೂಲಕ[49] ಎಲ್ಲರಿಗಿಂತ ಅತ್ಯಂತ ಪರಾಕ್ರಮಿಯಾದ ತಾನು ಸರ್ವಶ್ರೇಷ್ಠನೆಂದು ಸಮರ್ಥಿಸಿರುವನು.

15. ಪಾಂಡವರ ರಾಜಸೂಯಯಾಗದ ಸಂದರ್ಭದಲ್ಲಿ ದೇವತೆಗಳೇ ಮುಂತಾದವರೆಲ್ಲ ಸೇರಿದ್ದ ಆ ಸಭೆಯಲ್ಲಿ ಶ್ರೀಕೃಷ್ಣನಿಗೆ ಅಗ್ರಪೂಜೆ ಸಂದಿದೆ ಎಂದರೆ ಇದರಿಂದ ಕೃಷ್ಣರೂಪದ ಶ್ರೀವಿಷ್ಣುವಿನ ಸರ್ವೋತ್ತಮತ್ವ ಸಾರಲ್ಪಟ್ಟಂತೆ.

---

47. ಅನಾದ್ಯನಂತಕಾಲೇಽಪಿ ವಿಷ್ಣುಮೇವಾಶ್ರಿತಾ ರಮಾ ।
ಅನ್ಯೇಷಾಂ ಜ್ಞಾಪನಾರ್ಥಾಯ ದೋಷಾನುಕ್ತೇತರಾನ್ ಜಹೌ ॥
– ಭಾಗ.ತಾ.ನಿ. ೮–೮–೨೩

48. ಏತ್ಯಾಕಾಶಾನ್ನಾರದಃ ಕೃಷ್ಣಮಾಹ ಸರ್ವೋತ್ತಮಸ್ತ್ವಂ ತ್ವಾದೃಶೋ ನಾಸ್ತಿ ಕಶ್ಚಿತ್ ।
ಇತ್ಯಾಶ್ಚರ್ಯೋ ಧನ್ಯ ಇತ್ಯೇವ ಶಬ್ದದ್ವಯೇ ತೂಕ್ತೇ ವಾಸುದೇವಸ್ತಮಾಹ ॥
ದಕ್ಷಿಣಾಭಿಸ್ಸಾಕಮಿತ್ಯೇವ........ ತಾಭಿಶ್ಚೈತಾಭಿರ್ದಕ್ಷಿಣಾಭಿಸ್ಸಮೇತಾದ್ ।
ವರಿಷ್ಠೋಽಹಂ ಜಗತಸ್ಸರ್ವದೈವ .... ॥
– ಮ.ಭಾರ. ತಾ.ನಿ. ೨೦–೬೫, ೭೬

49. ....ಕುಂತ್ಯಾ ಯುಧೇಽರ್ಥಿತಃ ಕೇಶವೋ ವೀರ್ಯಮಸ್ಯೈ ।
ಅದರ್ಶಯತ್ ಪಾಂಡವಾನ್ ಧಾರ್ತರಾಷ್ಟ್ರಾನ್ ಭೀಷ್ಮದ್ರೋಣದ್ಯೈವತ್ಯೈರಪ್ಯಜೇಯಾನ್ ॥
– ಮ.ಭಾರ.ತಾ.ನಿ. ೨೦–೭೮, ೭೯.

16. ಶ್ರೀ ವೇದವ್ಯಾಸರು ಅವತರಿಸಿದಾಕ್ಷಣ ಮಹಾಭಾರತವನ್ನು ರಚಿಸಿರುವರು. ಮುಂದೆ ಆರುನೂರು ವರ್ಷದವರಾದಾಗ ನಿಯೋಗಪದ್ಧತಿಯಿಂದ ಧೃತರಾಷ್ಟ್ರನನ್ನು ಹುಟ್ಟಿಸಿರುವರು.50 ಮುಂದೆ ಸುಮಾರು ನೂರು ವರ್ಷಗಳ ಅನಂತರ ಮಹಾಭಾರತ ಯುದ್ಧ ನಡೆದಿದೆ. ಹೀಗೆ ಏಳುನೂರು ವರ್ಷಗಳ ಹಿಂದೆಯೇ ಶ್ರೀವೇದವ್ಯಾಸರು ಮುಂದೆ ನಡೆಯಲಿರುವ ಮಹಾಭಾರತಯುದ್ಧದ ಪೂರ್ಣಚಿತ್ರಣ ಮಹಾಭಾರತದಲ್ಲಿ ನಿಡಿರಬೇಕೆಂದರೆ ಶ್ರೀವಿಷ್ಣು ವೇದವ್ಯಾಸರೂಪದಿಂದ ಮುಂದೆ ಆಗಲಿರುವ ಘಟನೆಗಳನ್ನು ಕರಾರುವಾಕ್ಕಾಗಿ ತಿಳಿಯಬಲ್ಲ ಸರ್ವಜ್ಞತಮರೂ, ಘಟನೆಗಳನ್ನು ನಿಯಂತ್ರಿಸಬಲ್ಲ ಮುಖ್ಯ ನಿಯಾಮಕರೂ ಎಂದು ಸಿದ್ಧಿಸುವ ಮೂಲಕ ವೇದವ್ಯಾಸರೂಪದಿಂದ ಅವನ ಸರ್ವೋತ್ತಮತ್ವವೂ ಸಿದ್ಧವಾಗುವುದು.

17. ಕೃಷ್ಣಾವತಾರದ ಹಿನ್ನೆಲೆಯೇ ಮುಂತಾದ ಇತಿಹಾಸ-ಪುರಾಣಗಳಲ್ಲಿ ಪ್ರಸ್ತುತಗಳಾದ ಅನೇಕಪ್ರಸಂಗಗಳಲ್ಲಿ ಅಸುರಾದಿಗಳಿಂದ ಉಂಟಾಗುವ ಆಪತ್ತುಗಳ ಪರಿಹಾರ ಲಕ್ಷ್ಮೀದೇವಿಯೇ ಮುಂತಾದ ಇತರ ಯಾವ ದೇವತೆಗಳಿಂದಲೂ ಅಸಾಧ್ಯವಾದರೂ ಶ್ರೀಹರಿಯ ಮೂಲಕ ಸಂಭವಿಸಿದ್ದು ಉಲ್ಲೇಖಗೊಂಡಿದೆ. ಇದರಿಂದ ಶ್ರೀಹರಿ ಸರ್ವೋತ್ತಮನೆಂದು ಸಿದ್ಧಿಸುವುದು.

18. ಧೃತರಾಷ್ಟ್ರ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ಕುರುಕ್ಷೇತ್ರದಲ್ಲಿ ಇದ್ದಾಗ ಒಮ್ಮೆ ಶ್ರೀವೇದವ್ಯಾಸರು ಕಾಣಿಸಿಕೊಂಡು ಧೃತರಾಷ್ಟ್ರಾದಿಗಳ ಇಚ್ಛೆಯನ್ನು ಪೂರೈಸುವುದಾಗಿ ತಿಳಿಸುವರು. ಆಗ ಧೃತರಾಷ್ಟ್ರ ಮತ್ತು ಗಾಂಧಾರಿ ಯೋಚಿಸಿ ಮಹಾಭಾರತ ಯುದ್ಧದಲ್ಲಿ ಮಡಿದವರನ್ನೆಲ್ಲ ಕಾಣಬೇಕು ಎಂದು ಕೇಳಿಕೊಳ್ಳುವರು. ಕೂಡಲೇ ವೇದವ್ಯಾಸರ ಆದೇಶಕ್ಕನುಗುಣವಾಗಿ ವೀರಸ್ವರ್ಗದಿಂದ, ಮಹಾಭಾರತಯುದ್ಧದಲ್ಲಿ ಮಡಿದ ಎಲ್ಲರೂ ಅಲ್ಲಿಗೆ ಬರುವರು. ಧೃತರಾಷ್ಟ್ರನಿಗೆ ಅವರನ್ನು ಕಾಣಲು ದಿವ್ಯದೃಷ್ಟಿಯನ್ನು ನೀಡುವರು. ಆ ದಿನದ ರಾತ್ರಿ ತಮ್ಮತಮ್ಮ ಭಾರ್ಯಾಸಹಿತರಾಗಿ ಅವರೆಲ್ಲ ಅಲ್ಲಿಯೇ ಇರುವರು. ಮರುದಿನ ಆ ಯೋಧರ ಎಲ್ಲ ಸ್ತ್ರೀಯರೂ ತಮ್ಮತಮ್ಮ ಗಂಡಂದಿರ ಜೊತೆಗೆ ವೀರಸ್ವರ್ಗಕ್ಕೆ ತೆರಳುವರು.51 ಇಷ್ಟೂ ಅದ್ಭುತಘಟನೆಗಳು ಶ್ರೀವ್ಯಾಸರ ಆದೇಶದಿಂದಲೇ ನಡೆದಿವೆ. ಇದರಿಂದ ವ್ಯಾಸರೂಪದಲ್ಲಿ ಶ್ರೀವಿಷ್ಣುವಿನ ಸರ್ವೋತ್ತಮತ್ವವು ಸ್ಪಷ್ಟವಾಗುವುದು.

19. ಮತ್ಸ್ಯರೂಪದಲ್ಲಿ ಪ್ರಲಯಜಲವಿಹಾರ, ಕೂರ್ಮರೂಪದಲ್ಲಿ ಮಂದರಪರ್ವತದ ಧಾರಣೆ, ವರಾಹರೂಪದಲ್ಲಿ ಭೂಮಿಯ ಉದ್ಧಾರ, ನರಸಿಂಹರೂಪದಲ್ಲಿ ಹಿರಣ್ಯಕಶಿಪುವಿನ ಸಂಹಾರ, ವಾಮನರೂಪದಲ್ಲಿ ಮೂರು ಹೆಜ್ಜೆಗಳಿಂದ ಸಮಗ್ರ ಬ್ರಹ್ಮಾಂಡದ ಆಕ್ರಮಣ, ಪರಶುರಾಮರೂಪದಲ್ಲಿ ೨೧ ಬಾರಿ ಭೂಮಿಯಲ್ಲಿ ಅಡ್ಡಾಡಿ ದುಷ್ಟಕ್ಷತ್ರಿಯರ ಸಂಹಾರ, ರಾಮರೂಪದಲ್ಲಿ ಸಮುದ್ರ ಸೇತುನಿರ್ಮಾಣ,

---

50. ವ್ಯಾಸಃ ಷಟ್‌ಶತವರ್ಷೀಯೋ ಧೃತರಾಷ್ಟ್ರಮಜೀಜನತ್ ।

– ಸ್ಕಾಂದೇ (ಭಾಗ.ತಾ.ನಿ. ೨-೧-೮)

51. ಮ.ಭಾರ. ತಾ.ನಿ. ೩೧-೬೪..... ೬೯ -ಈ ಭಾಗದಲ್ಲಿ ನಿರೂಪಿತವಾಗಿದೆ.

ರಾವಣಾದಿಗಳ ಸಂಹಾರ, ಕೃಷ್ಣರೂಪದಲ್ಲಿ ಗೋವರ್ಧನೋದ್ಧಾರಾದಿ ಅನೇಕ ಮಹಿಮೆಗಳು, ಬುದ್ಧರೂಪದಲ್ಲಿ ಸಮಾನ ಉಪದೇಶದಿಂದ ದೇವತೆಗಳಿಗೆ ಸರಿಯಾದ ಜ್ಞಾನ ದೊರಕುವಂತೆಯೂ, ದೈತ್ಯರಿಗೆ ವಿಪರೀತಜ್ಞಾನ ಬರುವಂತೆಯೂ ಮಾಡಿರುವ ಚಮತ್ಕಾರ, ಕಲ್ಕಿರೂಪದಲ್ಲಿ ಒಂದೇ ದಿನದಲ್ಲಿ ದಸ್ಯುಗಳನ್ನೆಲ್ಲ ನಿಗ್ರಹಿಸಿ ಕಲಿಯುಗ ವನ್ನು ಕೃತಯುಗವನ್ನಾಗಿ ಮಾರ್ಪಡಿಸಿದುದು -ಹೀಗೆ ಶ್ರೀವಿಷ್ಣು ತನ್ನ ದಶಾವತಾರ ಗಳ ಬೇರೆಬೇರೆ ರೂಪಗಳಲ್ಲಿ ನಡೆಸಿರುವ ಅಸಾಧಾರಣಮಹಿಮೆಗಳಲ್ಲಿ ಒಂದೊಂದೂ ಅವನ ಸರ್ವೋತ್ತಮತ್ವವನ್ನು ಸಮರ್ಥಿಸಬಲ್ಲರು.

20. ಚಾಕ್ಷುಷಮನ್ವಂತರದಲ್ಲಿ ಶ್ರೀವಿಷ್ಣುವು ತನ್ನ ಅಜಿತರೂಪದಿಂದ ದೇವಾಸುರರನ್ನು ಮಾಧ್ಯಮರನ್ನಾಗಿಕೊಂಡು ಮಂದರಪರ್ವತದ ಮೂಲಕ ಕ್ಷೀರಸಾಗರದ ಮಥನ ನಡೆಸಿರುವನು.[52] ಈ ಅಸಾಧಾರಣ ಮಹಿಮೆಯು ಅವನ ಸರ್ವೋತ್ತಮತ್ವಕ್ಕೆ ಜ್ಞಾಪಕವಾಗಬಲ್ಲದು.

21. ಭಕ್ತ ಅಂಬರೀಷನಿಗೆ ರಕ್ಷಣೆ ನೀಡುತ್ತಿದ್ದ ಚಕ್ರದ ವಿರುದ್ಧ ರಕ್ಷಣೆ ನೀಡಬೇಕೆಂದು ದೂರ್ವಾಸರು ಮೊದಲು ಚತುರ್ಮುಖಬ್ರಹ್ಮನಲ್ಲಿಗೆ ಹೋಗಲು ಅವನು 'ನಾವೆಲ್ಲ ಶ್ರೀಹರಿಯ ನಿಯಮವನ್ನು ತಲೆಯಲ್ಲಿ ಹೊತ್ತುಕೊಂಡು ಲೋಕಹಿತವನ್ನು ಮಾಡುತ್ತಿದ್ದೇವೆ.[53] ಎಂದು ಶ್ರೀವಿಷ್ಣುವನ್ನು ಸ್ತುತಿಸಿರುವ ಮಾತು, ರುದ್ರನಲ್ಲಿಗೆ ಹೋದಾಗ ಅವನು 'ಅವನ ಮಾಯೆಯನ್ನು ನಾವು ಪೂರ್ಣವಾಗಿ ತಿಳಿಯಲಾರೆವು[54] ಇತ್ಯಾದಿಯಾಗಿ ನಡೆಸಿರುವ ಸ್ತುತಿ ಶ್ರೀಹರಿಯ ಸರ್ವೋತ್ತಮತ್ವವನ್ನು ಸಮರ್ಥಿಸಬಲ್ಲುದು.

22. ಭಾಗವತದ 'ಶ್ರುತಿಗೀತೆ'ಯ ಹಿನ್ನೆಲೆಯಲ್ಲಿ ಪ್ರಸ್ತಾವಿಸಲ್ಪಟ್ಟಿರುವಂತೆ ಶ್ರೀಹರಿಯು ಪ್ರಲಯಕಾಲದಲ್ಲಿ ಲಕ್ಷ್ಮಿಯ ಶ್ರೀ, ಭೂ, ದುರ್ಗಾರೂಪಗಳಿಂದ ಕೂಡಿ ಪವಡಿಸಿರಲು ಪ್ರಲಯದ ಕೊನೆಯಲ್ಲಿ ಶ್ರುತ್ಯಭಿಮಾನಿನಿ ಲಕ್ಷ್ಮೀದೇವಿ ಶ್ರೀಹರಿಯ ಅಸಾಧಾರಣ ಧರ್ಮಗಳನ್ನು ಪ್ರತಿಪಾದಿಸುವ ಮಾತುಗಳಿಂದ ಸ್ತುತಿಸುತ್ತ ಎಬ್ಬಿಸುವಳು. ಇದು ಶ್ರೀಹರಿಯ ಸರ್ವೋತ್ತಮತ್ವವನ್ನು ಸಾಧಿಸಿಕೊಡಬಲ್ಲುದು.

23. ಶ್ರೀಹರಿ ತನ್ನ ರಾಮಾವತಾರದಲ್ಲಿ ಪರಂಧಾಮಕ್ಕೆ ತೆರಳುವಾಗ ಯೋಗ್ಯಜೀವರಾದ ಮನುಷ್ಯರ್ನು ಮಾತ್ರವಲ್ಲದೆ ಪಕ್ಷಿಗಳನ್ನೂ ಮೃಗಗಳನ್ನೂ ಕ್ರಿಮಿಕೀಟಾದಿಗಳನ್ನೆಲ್ಲ ಕರೆದೊಯ್ದು ಚತುರ್ಮುಖನ ಮೂಲಕ ನಿತ್ಯಗಳಾದ ಸಾಂತಾನಿಕಲೋಕಗಳನ್ನು ಕೊಡಿಸುವನು. ಇದು ಅವನ ಸರ್ವೋತ್ತಮತ್ವಕ್ಕೆ ಸಾಧಕವಾಗಬಲ್ಲದು.[55]

---

52. ....ನಿರ್ಮಮಂಥಾಜಿತಃ ಸ್ವಯಮ್ । —ಭಾಗ. ೮-೭-೧೬

53. ....ಸರ್ವೇ ವಯಂ ಯನ್ನಿಯಮಂ ಪ್ರಪನ್ನಾ
ಮೂರ್ಧ್ನಾರ್ಪಿತಂ ಲೋಕಹಿತಂ ವಹಾಮಃ ॥ —ಭಾಗ. ೯-೪-೫೨

54. ....ವಿದಾಮ ನ ವಯಂ ಸರ್ವೇ ಯನ್ಮಾಯಾಂ ಮಾಯಯಾssವೃತಾಃ ॥
— ಭಾಗ. ೯-೪-೫೬

55. ಮ.ಭಾರ.ತಾ.ನಿ. ೯-೧೦೬ರಲ್ಲಿ ಈ ಮಹಿಮೆ ನಿರೂಪಿತವಾಗಿದೆ.

ಭಗವದ್ಗೀತಾಧಾರಿತಗಳು

24. ಶ್ರೀವಿಷ್ಣು ಕೃಷ್ಣರೂಪದಿಂದ ರಣಾಂಗಣದಲ್ಲಿ ಸಮಸ್ತಶಾಸ್ತ್ರದ ಸಾರಸರ್ವಸ್ವ ಸಂಗೃಹೀತವಾಗುವಂತೆ ಗೀತಾರೂಪದಲ್ಲಿ ಅರ್ಜುನನಿಗೆ ಉಪದೇಶಿಸಿ, ಅವನ ವ್ಯಾಮೋಹವನ್ನು ಪರಿಹರಿಸಿ ಕರ್ತವ್ಯೋನ್ಮುಖನನ್ನಾಗಿ ಮಾಡಬೇಕೆಂದರೆ ಸರ್ವೋತ್ತಮನಾಗಿರಲೇಬೇಕು.

25. ಮೂರು ಲೋಕಗಳಲ್ಲೂ ತನಗೆ ಯಾವುದೇ ರೀತಿಯ ಕರ್ತವ್ಯ ಎಂಬುದಿಲ್ಲ; ತಾನು ಈಗಾಗಲೇ ಹೊಂದದೆ ಇದ್ದದ್ದನ್ನು ಮುಂದೆ ಹೊಂದಬೇಕಾದದ್ದು ಎಂದೂ ಇಲ್ಲ. ಆದರೂ 'ಲೋಕಸಂಗ್ರಹ'ದ ದೃಷ್ಟಿಯಿಂದಷ್ಟೇ ತಾನು ಬೇರೆಬೇರೆ ಚಟುವಟಿಕೆಯಲ್ಲಿ ತೊಡಗಿರುವೆನೆಂದು ತನ್ನ ಪರಿಪೂರ್ಣವ್ಯಕ್ತಿತ್ವವನ್ನು ಸಾರಿರುವ ಗೀತಾಚಾರ್ಯನಿಂದ ತಾನೇ 'ಸರ್ವೋತ್ತಮ' ಎಂದು ಸಮರ್ಥಿಸಿದಂತಾಗಿದೆ.56

26. ಶ್ರೀಹರಿ ಯಾವುದೇ ಕ್ರಿಯೆಯನ್ನು ನಿರ್ವಹಿಸಲು ಬೇಕಾದ ಸ್ವಾತಂತ್ರ್ಯವನ್ನಾಗಲೀ ಕ್ರಿಯೆಯಿಂದ ಫಲ ಪಡೆಯುವುದರಲ್ಲಾಗಲೀ ಬೇರೆ ಯಾರಿಗೂ ಸ್ವಾತಂತ್ರ್ಯವನ್ನು ನೀಡಿರುವುದಿಲ್ಲ ಎಂಬ ಗೀತಾಚಾರ್ಯನ ಸಂದೇಶದಿಂದ57 ಕ್ರಿಯಾಸ್ವತಂತ್ರಕರ್ತೃತ್ವ, ಫಲಪ್ರಾಪಕತ್ವರೂಪವಾದ ಅಸಾಧಾರಣ ಮಹಿಮೆಯನ್ನೊಳಗೊಂಡ ಶ್ರೀಹರಿ ಸರ್ವೋತ್ತಮನೆಂದು ಸಿದ್ಧವಾಗುವುದು.

27. ತಾನು ಸಮಸ್ತ ಜಗತ್ತಿನ ಇರವು, ಪ್ರತೀತಿ, ಹುಟ್ಟು, ಸಾವು –ಇವುಗಳಿಗೆಲ್ಲ ಕಾರಣ; ಹಗ್ಗದಲ್ಲಿ ಮಣಿಗಳ ಸಮೂಹ ಹೇಗೋ ಹಾಗೆ ನನ್ನಲ್ಲಿ ಸಮಸ್ತವೂ ಓತಪ್ರೋತವಾಗಿ ಅವಲಂಬಿಸಿದೆ.58 ಎಂದ ಗೀತಾಚಾರ್ಯನು ತನಗಿಂತ ಉತ್ತಮನಾದವನು ಮತ್ತೊಬ್ಬನಿಲ್ಲ ಎಂದು ಸಾರಿರುವನು.

28. ನಾನೇ ಸಕಲಯಜ್ಞಗಳಿಗೂ ಸ್ವಾಮಿ ಹಾಗೂ ಭೋಕ್ತೃ ಎಂದು ತನ್ನನ್ನು ಪರಿಚಯಿಸಿಕೊಂಡಿರುವ59 ಗೀತಾಚಾರ್ಯನಿಂದ ತನ್ನ ಸರ್ವೋತ್ತಮತ್ವ ಘೋಷಿಸಲ್ಪಟ್ಟಂತಾಗಿದೆ.

29. ಯಾವುದ್ಯಾವುದು ಯಾವುದೇ ಬಗೆಯ ಹೆಚ್ಚುಗಾರಿಕೆಯುಳ್ಳದೋ ಶ್ರೀಮಂತವಾಗಿದೆಯೋ ಬಲಿಷ್ಠವಾಗಿದೆಯೋ ಸಮೃದ್ಧವಾಗಿದೆಯೋ ಅವೆಲ್ಲ ನನ್ನ ತೇಜಸ್ಸಿನ

---

56. ನ ಮೇ ಪಾರ್ಥಾಽಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ ।
ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ ॥ –ಭ. ಗೀ. ೩–೨೨

57. ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ । –ಗೀ. ೫–೧೪

58. ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ ।
ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ ॥
ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ॥ –ಗೀ. ೭–೬, ೭

59. ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ । –ಗೀ. ೯–೨೪

ಅಂಶದಿಂದ ಕೂಡಿದ್ದೆಂದು ತನ್ನ ವಿಭೂತಿರೂಪಗಳ ಬಗ್ಗೆ ಪ್ರತಿಪಾದಿಸಿದ[60] ಶ್ರೀಕೃಷ್ಣನಿಂದ ತನ್ನ ಸರ್ವೋತ್ತಮತ್ವ ಸೂಚಿತವಾದಂತಾಗುವುದು.

30. ಶ್ರೀಕೃಷ್ಣನ ಅನುಗ್ರಹದಿಂದ ಅವನ ವಿಶ್ವರೂಪವನ್ನು ಕಂಡ ಅರ್ಜುನ ಆ ರೂಪದಲ್ಲಿ ಚತುರ್ಮುಖ, ರುದ್ರ ಇತ್ಯಾದಿ ಎಲ್ಲ ದೇವತೆಗಳೂ, ಎಲ್ಲ ಜೀವಿಗಳೂ, ಎಲ್ಲ ಋಷಿಗಳೂ ಹಾಗೂ ಎಲ್ಲ ಸರ್ಪಗಳು– ಆಶ್ರಯಿಸಿಕೊಂಡಿರುವುದನ್ನು ಉದ್ಗರಿಸಿರುವನು.[61] ಇದರಿಂದ ಶ್ರೀವಿಷ್ಣುವಿನ ಸರ್ವೋತ್ತಮತ್ವವು ಘೋಷಿಸಲ್ಪಟ್ಟಂತಾಗಿದೆ.

31. ಕ್ಷೇತ್ರ ಎನಿಸುವ ಅವ್ಯಕ್ತತತ್ವವೇ ಮುಂತಾದ ಇಪ್ಪತ್ತನಾಲ್ಕು ತತ್ವಗಳನ್ನೂ, ಇಚ್ಛೆ ಮುಂತಾದ ಅವುಗಳ ವಿಕಾರಗಳನ್ನೂ ಅವುಗಳ ಪ್ರವರ್ತಕರನ್ನೂ ಅವರ ಪ್ರಭಾವವನ್ನೂ ಚೆನ್ನಾಗಿ ಬಲ್ಲವನಾಗಿದ್ದು 'ಕ್ಷೇತ್ರಜ್ಞ' ಎಂದು ಅಸಾಧಾರಣವಾಗಿ ಗುರುತಿಸಲ್ಪಡುವ[62] ಶ್ರೀಹರಿ ಸರ್ವೋತ್ತಮನೆಂದು ಸೂಚಿಸಲ್ಪಡುವುದು.

32. ಶ್ರೀಕೃಷ್ಣನು ತಾನು ಅಮೃತಳಾದ, ನಿರ್ವಿಕಾರಳಾದ ಲಕ್ಷ್ಮೀದೇವಿಗೂ ಆಧಾರ, ಶಾಶ್ವತವಾದ ಮುಖ್ಯಸುಖ ಎನಿಸುವ ಮೋಕ್ಷಕ್ಕೂ ಆಧಾರ ಎಂದು ಘೋಷಿಸುವ ಮೂಲಕ ತನ್ನ ಸರ್ವೋತ್ತಮತ್ವವನ್ನು ಸಾರಿರುವನು.[63]

33. ಭಗವದ್ಗೀತೆಯ ಹದಿನೈದನೆಯ ಅಧ್ಯಾಯ ಪುರುಷೋತ್ತಮಯೋಗಾಧ್ಯಾಯ ಎಂದೇ ಪ್ರಸಿದ್ಧವಾಗಿದ್ದು ಅದರಲ್ಲಿ ಶ್ರೀಕೃಷ್ಣನು ಲಕ್ಷ್ಮೀಸಹಿತವಾದ ಪ್ರಪಂಚಕ್ಕಿಂತೆಲ್ಲ ಎತ್ತರದಲ್ಲಿರುವ ಪ್ರಯುಕ್ತ ತನ್ನನ್ನು 'ಊರ್ಧ್ವ' ಎಂದೇ ಗುರುತಿಸಿ, ಸಂಸಾರವೃಕ್ಷಕ್ಕೆ ಮೂಲದಂತಿರುವ ತನ್ನ ಪಾತ್ರವನ್ನೂ, ಪ್ರಕಾಶ ನೀಡುವುದೇ ಮುಂತಾದ ಬ್ರಹ್ಮಾಂಡದ ಪ್ರಾಕೃತಿಕ ಘಟನೆಗಳಲ್ಲಿ ತನ್ನ ಪ್ರಮುಖಪಾತ್ರವನ್ನೂ, ಪಿಂಡಾಂಡದಲ್ಲಿ ಇಂದ್ರಿಯ ಪ್ರೇರಕತ್ವವೇ ಮುಂತಾದ ತನ್ನ ಗುಣಗಳನ್ನೂ ಉದ್ಘೋಷಿಸಿ, ಅಧ್ಯಾಯದ ಕೊನೆಯಲ್ಲಿ ಕ್ಷರಾಕ್ಷರಜೀವರಾಶಿಯಿಂದೆಲ್ಲ ಎತ್ತರ ಇರುವ ತಾನು ಶಾಸ್ತ್ರದಲ್ಲಿ ಪುರುಷೋತ್ತಮ ಎಂದೇ ಪ್ರಸಿದ್ಧನಾಗಿರುವುದಾಗಿ ಪ್ರತಿಪಾದಿಸುತ್ತ ತನ್ನ ಸರ್ವೋತ್ತಮತ್ವವನ್ನು ಸ್ಪಷ್ಟಪಡಿಸಿರುವನು.

---

60. ಯದ್ಯದ್ ವಿಭೂತಿಮತ್ ಸತ್ತ್ವಂ ಶ್ರೀಮದೂರ್ಜಿತಮೇವ ವಾ ।
ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶಸಂಭವಮ್ ॥ –ಗೀ. ೧೦–೪೧

61. ಪಶ್ಯಾಮಿ ದೇವಾಂಸ್ತವ ದೇವ ದೇಹೇ ಸರ್ವಾಂಸ್ತಥಾ ಭೂತವಿಶೇಷಸಂಘಾನ್ ।
ಬ್ರಹ್ಮಾಣಮೀಶಂ ಕಮಲಾಸನಸ್ಥಮೃಷೀಂಶ್ಚ ಸರ್ವಾನುರಗಾಂಶ್ಚ ದಿವ್ಯಾನ್ ॥
– ಗೀ. ೧೧–೧೫

62. ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ .... ॥ –ಗೀ. ೧೩–೩

* ಕ್ಷೇತ್ರಜ್ಞೋ ಭಗವಾನ್ ವಿಷ್ಣುರ್ನಹ್ಯನ್ಯಃ ಕ್ಷೇತ್ರಮಂಜಸಾ ।
ವೇತ್ತ್ಯಸೌ ಭಗವಾನ್ .... ॥ –ಗೀ.ತಾ. ೧೩–೩

63. ಬ್ರಹ್ಮಣೋ ಹಿ ಪ್ರತಿಷ್ಠಾಹಮಮೃತಸ್ಯಾವ್ಯಯಸ್ಯ ಚ ।
ಶಾಶ್ವತಸ್ಯ ಚ ಧರ್ಮಸ್ಯ ಸುಖಸ್ಯೈಕಾಂತಿಕಸ್ಯ ಚ ॥ –ಗೀ. ೧೪–೨೭

34. ವೈಷ್ಣವಧರ್ಮಕ್ಕಿಂತ ವಿರುದ್ಧವಾದ ಧರ್ಮಗಳನ್ನೆಲ್ಲ ತ್ಯಜಿಸಿ, ತನ್ನನ್ನೊಬ್ಬನನ್ನೇ ಸ್ವತಂತ್ರನನ್ನಾಗಿ ತಿಳಿದು ಶರಣಾಗತನಾಗಲು, ನಾನು ನಿನ್ನ ಪಾಲಿನ ಎಲ್ಲ ಪಾಪಗಳನ್ನು ಪರಿಹರಿಸುವೆನು ಎಂದು ಭಗವದ್ಗೀತೆಯ ಉಪಸಂಹಾರದಲ್ಲಿ ಗೀತಾಚಾರ್ಯ ಅರ್ಜುನನಿಗೆ ಕೊಟ್ಟಿರುವ ಆಶ್ವಾಸನೆಯಿಂದಾಗಿ[64] ಭಕ್ತರ ಸಕಲಪಾಪಗಳನ್ನೂ ಪರಿಹರಿಸುವ ಸರ್ವೋತ್ತಮತ್ವ ಗೀತಾಚಾರ್ಯನಲ್ಲಿದೆ ಎಂದು ಸ್ಪಷ್ಟವಾಗುವುದು.

ಉಪನಿಷದಾಧಾರಿತಗಳು

35. ಆರಣ್ಯಕ ಎನಿಸುವ ಉಪನಿಷತ್ತುಗಳಲ್ಲಿ ಶ್ರೀವಿಷ್ಣು ವಿಶೇಷವಾಗಿ ಪ್ರತಿಪಾದ್ಯನಾಗಿರುವನು. ಅವನನ್ನು ಬಿಟ್ಟು ಬೇರೆ ಯಾವುದರ ಪ್ರತಿಪಾದನೆಯೂ ನಡೆದಿಲ್ಲ ಎಂಬ 'ಬ್ರಹ್ಮಾಂಡ'ದಿಂದ[65] ಶ್ರೀವಿಷ್ಣುವಿನಲ್ಲಿ ಉಪನಿಷತ್‌ಪ್ರತಿಪಾದ್ಯತ್ವದಿಂದಾಗಿ ಸರ್ವೋತ್ತಮತ್ವ ಸಾರಿದಂತಾಗಿದೆ.

36. ಶ್ರೀವಿಷ್ಣು ಗುಣಪೂರ್ಣನಾಗಿರದೆ ಸುಖಪೂರ್ಣನಾಗಿರಲು ಸಾಧ್ಯವಿಲ್ಲದುದರಿಂದ ಸುಖಪೂರ್ಣನಾದ ಅವನು ಗುಣಪೂರ್ಣನೂ ಆಗಿದ್ದಿರಲೇಬೇಕು[66] ಎಂದು ವ್ಯಾಪ್ತಿಯ ಮೂಲಕ ಶ್ರೀವಿಷ್ಣುವಿನಲ್ಲಿ ಸುಖಪೂರ್ಣತ್ವವನ್ನೂ ಗುಣಪೂರ್ಣತ್ವವನ್ನೂ ಸಾರುತ್ತಿರುವ ಛಾಂದೋಗ್ಯೋಪನಿಷತ್ತು ಗುಣಪೂರ್ಣನಾಗಿರುವುದರಿಂದ, ಸುಖಪೂರ್ಣನಾಗಿರುವುದರಿಂದ ಶ್ರೀವಿಷ್ಣು ಸರ್ವೋತ್ತಮ ಎಂದೂ ಸೂಚಿಸಿದೆ.

37. ಉಪನಿಷತ್ತುಗಳಲ್ಲಿ ಅಲ್ಲಲ್ಲಿ ಪುನಃಪುನಃ ದೇವತೆಗಳ ತಾರತಮ್ಯವನ್ನು ತಿಳಿಸಿ, ಶ್ರೀವಿಷ್ಣುವಿನ ಸರ್ವೋತ್ತಮತ್ವವನ್ನು ಪ್ರತಿಪಾದಿಸಲಾಗುವುದು. ಇದರಿಂದಾಗಿ ದೇವತೆಗಳ ತಾರತಮ್ಯಜ್ಞಾನಪೂರ್ವಕವಾದ ಶ್ರೀವಿಷ್ಣುವಿನ ಸರ್ವೋತ್ತಮತ್ವಜ್ಞಾನದಲ್ಲಿ ಸಕಲವಾಕ್ಯಗಳಿಗೂ ಮಹಾತಾತ್ಪರ್ಯ ಇದೆ ಎಂದು ತಿಳಿಸಿದಂತಾಗುವುದು.[67]

38. ಶ್ರೀವಿಷ್ಣು ಜಗತ್ತೆಂಬ ಅಶ್ವತ್ಥವೃಕ್ಷಕ್ಕೆ ಭೂಮಿಯಂತೆ ಮೂಲನಾಗಿರುವೆನೆಂದು ಪರಿಚಯಿಸಿಕೊಡುವ ಉಪನಿಷತ್ತಿನಿಂದ ಅಂತಹ ವಿಷ್ಣುವಿನಲ್ಲಿ ಎಲ್ಲರೂ ಆಶ್ರಿತ

---

64. ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥ –ಗಿ. ೧೮–೬೬

65. ವಿಷ್ಣುರುಕ್ತಃ....... ಆರಣ್ಯಕೇ ವಿಶೇಷೇಣ ನೈವಾನ್ಯತ್ ಕಿಂಚಿದುಚ್ಯತೇ....... ಆರಣ್ಯಕೇಷ್ವಲ್ಪತೇ ವಿಷ್ಣುಂ ನೈವಾನ್ಯತ್ ಕಿಂಚಿದುಚ್ಯತೇ । –ಬ್ರಹ್ಮಾಂಡ (ಛಾಂ.ಉ.ಭಾ. ೩–೧–೫)

66. ಯೋ ವೈ ಭೂಮಾ ತತ್ಸುಖಂ ನಾಲ್ಪೇ ಸುಖಮಸ್ತಿ ಭೂಮೈವ ಸುಖಂ......... ॥
– ಛಾಂ.ಉ. ೭–೨–೮

67. ಪುನರಿಂದ್ರಿಯೇಭ್ಯಃ ಪರಂ ಮನ ಇತ್ಯಾದಿ ದೇವತಾನಾಂ ತಾರತಮ್ಯಜ್ಞಾನಪೂರ್ವಕಂ ಭಗವತಃ ಸರ್ವೋತ್ತಮತ್ವಜ್ಞಾನ ಏವ ಸರ್ವವಾಕ್ಯಾನಾಂ ಮಹಾತಾತ್ಪರ್ಯಮಿತಿ ಜ್ಞಾಪಯಿತುಮ್ ।

* ತಾರತಮ್ಯಪರಿಜ್ಞಾನಪೂರ್ವಕಂ ಸರ್ವತೋ ಹರೇಃ ।
ಆಧಿಕ್ಯೇ ಸರ್ವವಾಕ್ಯಾನಾಂ ತಾತ್ಪರ್ಯಂ ಮಹದಿಷ್ಯತೇ ॥ –ಕಾ.ಉ.ಭಾ. ೨–೪–೮

ರಾಗಿದ್ದು, ಅವನನ್ನು ಯಾರೂ ಅತಿಕ್ರಮಿಸುವವರಿಲ್ಲ[68] ಎಂದು ಉದ್ಘೋಷಿಸುವ ಮೂಲಕ ಅವನೇ ಸರ್ವೋತ್ತಮ ಎಂದು ಸೂಚಿಸಿದಂತಾಗಿದೆ.

39. ಜೀವೋತ್ತಮನಾದ ವಾಯುದೇವನಿಗೂ ಕಾರಣನಾದವನು ಭಗವಂತನು; ನೆರಳು ಬಿಂಬವನ್ನು ಹೇಗೋ ಹಾಗೆ ವಾಯುದೇವ ಶ್ರೀವಿಷ್ಣುವನ್ನು ಅವಲಂಬಿಸಿರುವನು ಎಂಬ ಷಟ್‌ಪ್ರಶ್ನೋಪನಿಷತ್ತಿನ ಸಂದೇಶದ[69] ಮೂಲಕ ಶ್ರೀವಿಷ್ಣುವಿನ ಸರ್ವೋತ್ತಮತ್ವವು ಸೂಚಿತವಾಗುವುದು.

40. ಪ್ರಕೃತಿಯ ಆಧಾರದಲ್ಲಿರುವ ಪ್ರತಿಯೊಂದೂ ಸ್ವತಂತ್ರವಾಗಿ ನಡೆದುಕೊಳ್ಳಲು ಅಶಕ್ತವಾಗಿರುವುದರಿಂದ, ಅವುಗಳ ಪ್ರವೃತ್ತಿಗಾಗಿ ಶ್ರೀವಿಷ್ಣು ಎಲ್ಲದರಲ್ಲೂ ನೆಲೆಸಿರುವುದರಿಂದ ಇವೆಲ್ಲ 'ಈಶಾವಾಸ್ಯ' –ಅವನ 'ಆವಾಸಸ್ಥಾನ' ಎಂದು ಘೋಷಿಸುತ್ತಿರುವ ಈಶಾವಾಸ್ಯ ಉಪನಿಷತ್ತಿನ ಸಂದೇಶದಿಂದ[70] ಅವನ ಸರ್ವೋತ್ತಮತ್ವವು ಸಾರಲ್ಪಟ್ಟಂತಾಗಿದೆ.

41. ಶ್ರೀವಿಷ್ಣು ಎಲ್ಲೆಡೆ ನೆಲೆಸಿ, ಅವುಗಳ ಪ್ರವೃತ್ತಿಗಳಿಗೆ ಪ್ರೇರಕನಾಗಿರುವುದರಿಂದ ಎಲ್ಲವುಗಳ ಒಡೆಯ ಅವನೇ ಆಗಿರುವನೆಂಬ ಅಭಿಪ್ರಾಯದಲ್ಲಿ, ಅವನು ಅನುಗ್ರಹಿಸಿದ ವಸ್ತುವಿನಿಂದಲೇ ತೃಪ್ತನಾಗಿರಬೇಕು; ಅವನನ್ನು ಬಿಟ್ಟು ಇನ್ನಾರಲ್ಲೂ ಬೇಡಬಾರದೆಂದು ಆದೇಶಿಸುತ್ತಿರುವ ಈಶಾವಾಸ್ಯೋಪನಿಷತ್ತಿನಿಂದ[71] ಅವನೇ ಸರ್ವೋತ್ತಮ ಎಂದು ಸಾಧಿಸಲ್ಪಟ್ಟಂತಾಗಿದೆ.

42. ಜ್ಞಾನಿಗಳಾದ ವಾಯ್ವಾದಿದೇವತೆಗಳೂ ಶ್ರೀಹರಿಯ ನಿಯತಿಗೆ ಭಯಪಟ್ಟೇ ತಮ್ಮತಮ್ಮ ಕರ್ತವ್ಯವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿರುವರೆಂದು ಸಾರುವ[72] ತೈತ್ತಿರೀಯೋಪನಿಷತ್ತಿನಿಂದ ಶ್ರೀಹರಿಯ ಸರ್ವೋತ್ತಮತ್ವವು ಸೂಚಿತವಾಗಿದೆ.

---

68. ಊರ್ಧ್ವಮೂಲೋ.......... ಏಷೋಽಶ್ವತ್ಥಃ ಸನಾತನಃ.......... ತಸ್ಮಿನ್ ಲೋಕಾಃ ಶ್ರಿತಾಃ ಸರ್ವೇ ತದು ನಾತ್ಯೇತಿ ಕಶ್ಚನ । —*ಕಾ.ಉ. ೨–೬–೨*

69. ಆತ್ಮತ ಏಷ ಪ್ರಾಣೋ ಜಾಯತೇ । ಯಥೈಷಾ ಪುರುಷೇ ಛಾಯಾ ಏತಸ್ಮಿನ್ನೇತ-ದಾತತಮ್ ॥ —*ಪ್ರ.ಉ. ೩–೧–೫*

70. ಈಶಾವಾಸ್ಯಮಿದಂ ಸರ್ವಂ ಯತ್ ಕಿಂಚ ಜಗತ್ಯಾಂ ಜಗತ್ ।

* ಸ್ವತಃ ಪ್ರವೃತ್ತ್ಯಶಕ್ತತ್ವಾದೀಶಾವಾಸ್ಯಮಿದಂ ಜಗತ್ । ಪ್ರವೃತ್ತಯೇ ಪ್ರಕೃತಿಗಂ........ ।
— *ಬ್ರಾಹ್ಮ. (ಈ.ಉ.ಭಾ.)*

71. ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯಸ್ವಿದ್ ಧನಮ್ । —*ಈ. ಉ.*

* ತದಧೀನಪ್ರವೃತ್ತಿತ್ವಾತ್ ತದೀಯಂ ಸರ್ವಮೇವ ಯತ್ ।
ತದ್ದತ್ತೇನೈವ ಭುಂಜೀಥಾ ಅತೋ ನಾನ್ಯಂ ಪ್ರಯಾಚಯೇತ್ ॥
— *ಬ್ರಾಹ್ಮ. (ಈ.ಉ.ಭಾ.)*

72. ಭೀಷಾಽಸ್ಮಾದ್ ವಾತಃ ಪವತೇ ಭೀಷೋದೇತಿ ಸೂರ್ಯಃ । ಭೀಷಾಽಸ್ಮಾದಗ್ನಿಶ್ಚೇಂದ್ರಶ್ಚ ಮೃತ್ಯುರ್ಧಾವತಿ ಪಂಚಮ । ಇತಿ ॥ —*ತೈ.ಉ.೨–೮*

43. ಉಳಿದೆಲ್ಲವೂ ಶ್ರೀಹರಿಗೆ ಭಯಪಡುವುದು; ಶ್ರೀಹರಿ ಮಾತ್ರ ಯಾರಿಗೂ ಭಯಪಡುವುದಿಲ್ಲ[73] ಎಂದು ಶ್ರೀಹರಿಯನ್ನು ಸ್ತುತಿಸುತ್ತಿರುವ ಈಶಾವಾಸ್ಯೋಪನಿಷತ್ತಿನಿಂದ ಅವನ ಸರ್ವೋತ್ತಮತ್ವವು ಸಾಧಿತವಾಗುವುದು.

44. ಮಾಂಡೂಕೋಪನಿಷತ್ತಿನಲ್ಲಿ ಓಂಕಾರ ಪ್ರತಿಪಾದ್ಯನಾದ ಶ್ರೀವಿಷ್ಣುವೊಬ್ಬನೇ ಗುಣಪೂರ್ಣನಾಗಿರುವವನು; ಮೂರು ಕಾಲಗಳಲ್ಲೂ ವಿಕಾರಕ್ಕೊಳಗಾಗದವನೂ ಶ್ರೀವಿಷ್ಣುವೇ. ಚಿತ್‌ಪ್ರಕೃತಿಯೂ ವಿಕಾರರಹಿತಳಾದರೂ ಶ್ರೀವಿಷ್ಣುವಿನ ಅನುಗ್ರಹದಿಂದಷ್ಟೇ ಅವಳು ವಿಕಾರರಹಿತಳಾಗಿರುವುದರಿಂದ ಸ್ವತಂತ್ರವಾಗಿ ವಿಕಾರರಹಿತನಾದವನು ಶ್ರೀವಿಷ್ಣು ಮಾತ್ರ ಎಂದು ಉದ್ಘೋಷಿಸಲಾಗಿದ್ದು[74] ಇಂತಹ ಅಸಾಧಾರಣ ಮಹಿಮೋಪೇತನಾದ ಶ್ರೀವಿಷ್ಣುವೇ ಸರ್ವೋತ್ತಮ ಎಂದು ಸಾರಿದಂತಾಗುವುದು.

45. ಶ್ರೀಹರಿಯು ಆನಂದಪರಿಪೂರ್ಣನಲ್ಲದಿದ್ದಲ್ಲಿ ಜಗತ್ತಿನ ಪ್ರೇರಣೆಯ ಚಟುವಟಿಕೆಯಲ್ಲಿ ಯಾಕೆ ತೊಡಗುವನು? ಒಂದು ವೇಳೆ ಅವನು ಜಗತ್ತನ್ನು ಪ್ರೇರಿಸದಿದ್ದರೆ ಬೇರೆ ಯಾರು ತಾನೇ ಪ್ರೇರಿಸಿಯಾರು? –ಎಂಬುದಾಗಿ ತೈತ್ತಿರೀಯೋಪನಿಷತ್ತಿನಲ್ಲಿ[75] ಜಗತ್ತಿನ ಪ್ರೇರಣೆಯನ್ನು ನಡೆಸುವವನು ಶ್ರೀಹರಿಯೇ ಎಂದೂ, ಜಗತ್‌ಪ್ರೇರಣೆಯ ಹಿನ್ನೆಲೆಯಲ್ಲಿ ಅವನು ಆನಂದಪರಿಪೂರ್ಣನೂ ಆಗಿರುವನೆಂದೂ ಸಾರಲಾಗಿರುವ ಪ್ರಯುಕ್ತ ಸಮಸ್ತ ಜಗತ್‌ಪ್ರೇರಕನಾದ, ಆನಂದಪರಿಪೂರ್ಣನದ ಅವನೇ ಸರ್ವೋತ್ತಮನೆಂದು ಸಮರ್ಥಿತವಾಗಿದೆ.

46. ತಲವಕಾರೋಪನಿಷತ್ತಿನಲ್ಲಿ ಪ್ರಸ್ತುತವಾದ ಆಖ್ಯಾಯಿಕೊಂದರಲ್ಲಿ[76] ಅಹಂಕಾರಗ್ರಸ್ತರಾದ ಅಗ್ನ್ಯಾದಿದೇವತೆಗಳು ಯಕ್ಷರೂಪದಲ್ಲಿ ಬಂದ ಶ್ರೀಹರಿಯನ್ನು ಪರಿಚಯಿಸಿಕೊಳ್ಳುವುದರಲ್ಲಿ, ಅವನು ಮುಂದಿಟ್ಟ ಹುಲ್ಲುಕಡ್ಡಿಯನ್ನು ಸುಡುವುದೇ

---

* ತಸ್ಮಾದ್ ವಾಯ್ವಾದಯೋ ದೇವಾ ವಿದ್ವಾಂಸೋಽಪಿ ವಿಶೇಷತಃ । ಭೀತಾಃ ಸ್ವಕರ್ಮ ಕುರ್ವಂತಿ ವಿಷ್ಣೋಃ ಪ್ರೀತ್ಯರ್ಥಮಂಜಸಾ । –ಯಜುಃಸಂಹಿತಾ (ತೈ.ಉ.ಭಾ.)

73. ತದೇಜತಿ ತನ್ನೇಜತಿ......... ॥ –ಈ.ಉ. ೧-೫

* ತತೋ ಬಿಭೇತಿ ಸರ್ವೋಽಪಿ ನ ಬಿಭೇತಿ ಹರಿಃ ಸ್ವಯಮ್ ।

– ತತ್ತ್ವಸಂಹಿತಾ (ಈ.ಉ.ಭಾ.)

74. ಸರ್ವಮೋಂಕಾರ ಏವ ಯಚ್ಚಾನ್ಯತ್ ತ್ರಿಕಾಲಾತೀತಂ ತದಪ್ಯೋಂಕಾರ ಏವ ।

– ಮಾಂ.ಉ.

* ಸರ್ವಮೋಂಕಾರ ಏವೇತ್ಯನ್ಯಸ್ಯ ಪೂರ್ಣತ್ವನಿವಾರಣಮ್ । ತ್ರಿಕಾಲಾತೀತ್ವಂ ಚ ತಸ್ಯೈವ । ಪ್ರಕೃತೇರಪಿ ತ್ರಿಕಾಲಾತೀತತ್ವಂ ವಿದ್ಯತ ಇತಿ ಅನ್ಯದಿತಿ ವಿಶೇಷಣಮ್ । –ಮಾ.ಉ.ಭಾ.

75. ಕೋ ಹ್ಯೇವಾನ್ಯಾತ್ ಕಃ ಪ್ರಾಣ್ಯಾತ್ । ಯದೇಷ ಆಕಾಶ ಆನಂದೋ ನ ಸ್ಯಾತ್ ।

– ತೈ. ೨-೧೨

76. ಬ್ರಹ್ಮ ಹ ದೇವೇಭ್ಯೋ ವಿಜಿಗ್ಯೇ........ ತಸ್ಮಾತ್ ತಿರೋದಧೇ ।

– ತಲ.ಉ. ೪೭-೧.... ೧೨

ಮುಂತಾದ ಚಟುವಟಿಕೆ ನಡೆಸುವಲ್ಲೂ ಅಸಮರ್ಥರಾಗುವರು. ಇದರಿಂದ ಅವನ ಸರ್ವೋತ್ತಮತ್ವ ಸಿದ್ಧವಾಗುವುದು.

47. ತೈತ್ತಿರೀಯೋಪನಿಷತ್ತಿನಲ್ಲಿ ಉಲ್ಲೇಖಗೊಂಡ ಮುಕ್ತ ಚತುರ್ಮುಖನ ಉದ್ಗಾರದಲ್ಲಿ 'ನಾನು ಶ್ರೀಹರಿಯ ಕೀರ್ತಿಯನ್ನು ಹಾಡುವವನು; ನಾನು ಯಾವಾಗಲೂ ಶ್ರೀಹರಿಯ ಅನ್ನ; ಸುವರ್ಣ ಎನಿಸುವ ಶ್ರೀಹರಿ ನನ್ನನ್ನು ಬೆಳಗಿಸುವವನು[77] –ಎಂಬ ಮಾತುಗಳು ಶ್ರೀಹರಿಯ ಸರ್ವೋತ್ತಮತ್ವವನ್ನು ಸಾಧಿಸುವವು.

48. ಶ್ರೀಹರಿಯನ್ನು ಬಿಟ್ಟು ಇತರ ದೇವತೆಗಳಲ್ಲಿಗೆ ಹೋಗಬಾರದು –ಎಂದು ಆದೇಶಿಸುವ ಐತರೇಯೋಪನಿಷತ್ತು ಬ್ರಹ್ಮಾದಿಗಳು ಹಾಗೂ ಲಕ್ಷ್ಮೀದೇವಿ ಅವನನ್ನು ಎಂದೂ ತ್ಯಜಿಸದಿರುವುದರಿಂದ, ಬ್ರಹ್ಮಾದಿಗಳು ಮುಕ್ತರೂ, ಲಕ್ಷ್ಮೀದೇವಿ ನಿತ್ಯ ಮುಕ್ತಳೂ ಆಗಿರುವಳು –ಎಂದು ಪ್ರತಿಪಾದಿಸುವ[78] ಮೂಲಕ ಶ್ರೀದೇವಿ ಹಾಗೂ ಚತುರ್ಮುಖ ಮುಂತಾದ ದೇವತೆಗಳೂ ಶ್ರೀಹರಿಯನ್ನು ಆಶ್ರಯಿಸಿಕೊಂಡಿರುವುದರಿಂದ ಶ್ರೀಹರಿ ಸರ್ವೋತ್ತಮ ಎಂದು ಸಿದ್ಧಿಸುವುದು.

49. ಎಲ್ಲ ಋಙ್ಮಂತ್ರಗಳು, ಎಲ್ಲ ವೇದಗಳು, ಸಮುದ್ರದ ಗೊರೆತ ಮುಂತಾದ ಎಲ್ಲ ಧ್ವನ್ಯಾತ್ಮಕಶಬ್ದಗಳೂ ಶ್ರೀಹರಿಯ ಗುಣಗಾನ ನಡೆಸುವ ನಾಮವೇ ಆಗಿದೆ –ಎಂದು ಸಾರುವ ಐತರೇಯೋಪನಿಷತ್ತಿನ[79] ಪ್ರಕಾರ ಸಕಲವಾಙ್ಮಯಪ್ರತಿಪಾದ್ಯಗುಣ–ಸಂಪನ್ನನಾಗಿರುವ ಶ್ರೀವಿಷ್ಣು ಸರ್ವೋತ್ತಮನು.

50. ಶ್ರೀಹರಿ ಈ ಭೂಮಿಯಲ್ಲಿರುವ ತನ್ನ ಮಹಿದಾಸಾದಿ ಪುರುಷರೂಪದಿಂದ ಸ್ವರ್ಗದಲ್ಲಿ ದೇವತಾಸ್ತ್ರೀಯರಲ್ಲಿರುವ ತನ್ನ ಸ್ತ್ರೀರೂಪದ ಜೊತೆಗೆ ಕ್ರೀಡಿಸುತ್ತಾನೆ. ಸ್ವರ್ಗದಲ್ಲಿರುವ ಪುರುಷರೂಪದಿಂದ ಈ ಭೂಮಿಯಲ್ಲಿ ಮನುಷ್ಯಸ್ತ್ರೀಯರಲ್ಲಿರುವ ತನ್ನ ಸ್ತ್ರೀರೂಪದಿಂದ ಕ್ರೀಡಿಸುವನು[80] –ಎಂಬುದಾಗಿ ಐತರೇಯೋಪನಿಷತ್ತಿನಲ್ಲಿ ಶ್ರೀಹರಿಯ ಸ್ವರತತ್ವವನ್ನು ಪ್ರತಿಪಾದಿಸುವ ಮೂಲಕ ಅವನ ಸ್ವಾತಂತ್ರ್ಯವನ್ನು ದೃಢಪಡಿಸಿ, ಅದರಿಂದ ಅವನ ಸರ್ವೋತ್ತಮತ್ವವನ್ನು ಸೂಚಿಸಲಾಗಿದೆ.

---

77. ಏತತ್ ಸಾಮ ಗಾಯನ್ನಾಸ್ತೇ........ ಅಹಮನ್ನಮಹಮನ್ನಮಹಮನ್ನಮ್ । .... ಅಹಂ ಶ್ಲೋಕಕೃದಹಂ ಶ್ಲೋಕಕೃದಹಂ ಶ್ಲೋಕಕೃತ್... ಸುವರ್ಣಜ್ಯೋತೀಃ........ ॥
– ತೈ.ಉ. ೩–೧೦

78. ....ತಂ ನಾತೀಯಾನ್ನ ಹ್ಯತ್ಯಾಯನ್ ಪೂರ್ವೇ । –ಐ.ಉ. ೧–೧

* ....ತ್ಯಕ್ತ್ವಾ ತಂ ನೇತರಂ ವ್ರಜೇತ್ । ಪೂರ್ವೇ ನೈನಂ ತತ್ಯಜುರ್ಹಿ ಬ್ರಹ್ಮಾದ್ಯಾಸ್ತೇನ ಸಂಸ್ಕೃತೇಃ । ಮುಕ್ತಾಃ ಶ್ರೀಶ್ಚ ತದತ್ಯಾಗಾನ್ನಿತ್ಯಮುಕ್ತಾ ಗುಣಾದಿಕಾಃ । –ಐ.ಉ.ಭಾ.

79. ತಾ ವಾ ಏತಾಃ ಸರ್ವಾ ಋಚಃ ಸರ್ವೇ ವೇದಾಃ ಸರ್ವೇ ಘೋಷಾ ಏಕೈವ ವ್ಯಾಹೃತಿಃ ಪ್ರಾಣ ಏವ । –ಐ.ಉ. ೨–೧–೧೨

80. ತಾವನ್ಯೋನ್ಯಂ ಅಭಿಸಂಭವತಃ । ಅನೇನಾ ಹ ರೂಪೇಣಾಮುಂ ಲೋಕಮಭಿಸಂಭವತ್ಯ–ಮುನಾ ರೂಪೇಣೇಮಂ ಲೋಕಮಾಭವತಿ । –ಐ.ಉ. ೨–೨–೬–೧೦

51. ನಿತ್ಯಪೂರ್ಣಗುಣವುಳ್ಳವನೆಂಬ ದೃಷ್ಟಿಯಲ್ಲಿ ಶ್ರೀಹರಿಯನ್ನು 'ಆತ್ಮಾ' ಎಂದು ಕರೆದು, ಪ್ರಲಯಕಾಲದಲ್ಲಿ ಅವನೊಬ್ಬನೇ ಇದ್ದನು. ಬ್ರಹ್ಮ ರುದ್ರ ಇತ್ಯಾದಿ ದೇವತೆಗಳೂ ಪ್ರಲಯಕಾಲದಲ್ಲಿ ಇರುವರಾದರೂ ಅವರು ಸುಪ್ತರಾಗಿರುವರೇ ಹೊರತು ಎಚ್ಚರದಿಂದ ಇರುವುದಿಲ್ಲ. ಲಕ್ಷ್ಮೀದೇವಿ ಮತ್ತು ಮುಕ್ತರು ಎಚ್ಚರದಿಂದಲೇ ಆಗ ಇರುವರಾದರೂ ಸ್ವತಂತ್ರವಾಗಿ ಎಚ್ಚರದಿಂದ ಇರುವುದಿಲ್ಲ. ಅವರು ಸ್ವತಂತ್ರವಾಗಿ ಎಚ್ಚರವಾಗಿರದಿರುವುದರಿಂದ ಎಚ್ಚರವಾಗಿರುವುದಿಲ್ಲ ಎಂದೇ ಪರಿಗಣಿಸಲಾಗುವುದು. ಆದುದರಿಂದ ಸ್ವತಂತ್ರವಾಗಿ ಪ್ರಲಯಕಾಲದಲ್ಲೂ ಎಚ್ಚರದಿಂದಿರುವವನು ಶ್ರೀಹರಿಯೊಬ್ಬನೇ ಎಂದು ಸಾರುವ[81] ಮೂಲಕ ಅವನ ಸರ್ವೋತ್ತಮತ್ವವನ್ನು ಸೂಚಿಸಲಾಗಿದೆ.

52. ಚತುರ್ಮುಖಬ್ರಹ್ಮನ ಶರೀರವನ್ನು ದೇವತೆಗಳು ಪ್ರವೇಶಿಸುವುದಕ್ಕಿಂತ ಮುಂಚೆ ಶ್ರೀವಿಷ್ಣುವು ಹೀಗೆ ಯೋಚಿಸುವನು– ನನ್ನ ಪ್ರೇರಣೆ ಇಲ್ಲದೆಯೇ ಬ್ರಹ್ಮಾದಿ ದೇವತೆಗಳು ಆಯಾ ಕ್ರಿಯೆಗಳಲ್ಲಿ ಸಮರ್ಥರಾದರೆ ನನಗೆ ವಿಷ್ಣು ಎನ್ನುವ ಹೆಸರು ಕೂಡದು. ಎಲ್ಲರ ಪ್ರವೃತ್ತಿಗೆ ಕಾರಣನಾದುದರಿಂದಲೂ, ವಿಶಿಷ್ಟ ಬಲವಿರುವುದರಿಂದಲೂ ನಾನು ವಿಷ್ಣು ಎನಿಸಿರುವುದು ತಾನೇ? ಆದುದರಿಂದ ಉಳಿದ ದೇವತೆಗಳ ಪ್ರವೃತ್ತಿಗಾಗಿ ನಾನು ವಾಯುವಿನಿಂದ ಕೂಡಿಕೊಂಡು ಪ್ರವೇಶಿಸುವೆನು. ಹೀಗೆ ಯೋಚಿಸಿದ ಶ್ರೀವಿಷ್ಣು ಚತುರ್ಮುಖನ ಶರೀರವನ್ನು ಅವನ ನೆತ್ತಿಯನ್ನು ಒಡೆದು, ಸುಷುಮ್ನಾ ನಾಡಿಯ ಮೂಲಕ ಪ್ರವೇಶಿಸುವನು. ಬಳಿಕ ಅಗ್ನ್ಯಾದಿಗಳು ಪ್ರವೇಶಿಸುವರು. ಶ್ರೀಹರಿಯೇ ವಾಸುದೇವ ಎಂಬ ಮತ್ತೊಂದು ರೂಪದಿಂದ ಪಾದದ ತುದಿಯಿಂದ ಪ್ರವೇಶಿಸುವನು. ಹೀಗೆ ಚತುರ್ಮುಖನ ಶರೀರದಲ್ಲಿ ಹೇಗೆ ಎರಡು ರೂಪಗಳಿಂದ ಪ್ರವೇಶಿಸುವ ಶ್ರೀಹರಿ ತತ್ತ್ವಾಭಿಮಾನಿಗಳನ್ನು ಕ್ರಿಯಾಶಕ್ತಿಯುತರನ್ನಾಗಿ ಮಾಡುವನೋ ಹಾಗೆಯೇ ಪ್ರತಿಯೊಬ್ಬರ ಶರೀರವನ್ನೂ ಎರಡು ರೂಪಗಳಿಂದ ಪ್ರವೇಶಿಸಿ, ಅಲ್ಲಿ ದೇವತೆಗಳನ್ನು ಕ್ರಿಯಾಶಕ್ತಿಯುತರನ್ನಾಗಿ ಮಾಡುವನು –ಎಂದು ತಿಳಿಸುವ ಐತರೇಯೋಪನಿಷತ್ತಿನಿಂದ[82] ಅವನ ಸರ್ವೋತ್ತಮತ್ವ ಸಿದ್ಧಿಸುವುದು.

53. 'ವಿಷ್ಣು' ಎಂಬ ನಾಮದ ಣಕಾರವು ಶ್ರೀಹರಿಯ ಬಲವನ್ನೂ, ಷಕಾರವು ರಮಾಬ್ರಹ್ಮಾದಿ ದೇವತೆಗಳನ್ನು ಪ್ರೇರಿಸುವಿಕೆಯನ್ನೂ, ದೇಶಕ್ಕೆ, ಕಾಲಕ್ಕೆ ಹಾಗೂ ಗುಣಗಳಿಗೆ ಸಂಬಂಧಿಸುವ ಮೂರು ಬಗೆಯ ವ್ಯಾಪ್ತಿಯನ್ನೂ ತಿಳಿಸುತ್ತಿದೆ. 'ವಿ' ಉಪಸರ್ಗವು ಆ ಗುಣಗಳ ವೈಶಿಷ್ಟ್ಯವನ್ನೂ, 'ಉ' ಎಂಬ ಕೊನೆಯ ವರ್ಣವು ಆ

---

81. ಆತ್ಮಾ ವಾ ಇದಮೇಕ ಏವಾಗ್ರ ಆಸೀತ್, ನಾನ್ಯತ್ ಕಿಂಚನ ಮಿಷತ್ ।
– ಐ.ಉ. ೨-೪-೧-೧

82. ಸ ಈಕ್ಷತ ಕಥಂ ನ್ವಿದಂ ಮದೃತೇ ಸ್ಯಾದಿತಿ ಈಕ್ಷತ ಕತರೇಣ ಪ್ರಪದ್ಯಾ ಇತಿ......... ಅಥ ಕೋಽಹಮಿತಿ ಸ ಏತಮೇವ ಸೀಮಾನಂ ವಿದಾರ್ಯೈತಯಾ ದ್ವಾರಾ ಪ್ರಾಪದ್ಯತ .... ।
– ಐ.ಉ. ೨-೪-೩-೮, ೯

83. ತಸ್ಯೈ ವಾ ಏತಸ್ಯೈ ಸಂಹಿತಾಯ್ಯೈ ಣಕಾರೋ ಬಲಂ ಷಕಾರಃ ಪ್ರಾಣ ಆತ್ಮಾ...... ।
– ಐ. ಉ. ೨-೮-೭-೩

ಗುಣಗಳೆಲ್ಲ ಅವನ ಶೀಲ, ಸ್ವಭಾವ –ಎಂದೂ ತಿಳಿಸುವವು. ಋಕ್‌ಗಳ ಸಂಹಿತೆಗಳಲ್ಲೆಲ್ಲ ಈ ವಿಷ್ಣುನಾಮದ ಅರ್ಥವೇ ಹೇಳಲ್ಪಡುವುದು –ಎಂದು ವಿವರಿಸುವ ಐತರೇಯೋಪನಿಷತ್ತಿನಿಂದ[83] 'ವಿಷ್ಣು' ಎಂಬ ವಿಶಿಷ್ಟವಾದ ನಾಮವನ್ನು ಹೊಂದಿರುವುದರಿಂದಲೂ, ಎಲ್ಲ ಸಂಹಿತೆಗಳಿಂದ ಪ್ರತಿಪಾದ್ಯನಾಗಿರುವುದರಿಂದಲೂ ಅವನ ಸರ್ವೋತ್ತಮತ್ವ ಸಾಧಿಸಿದಂತಾಗಿದೆ.

54. ಶ್ರೀವಿಷ್ಣು ಪುತ್ರನಿಗಿಂತ, ಹಣಕ್ಕಿಂತ, ತನಗಿಂತ, ಉಳಿದೆಲ್ಲ ವ್ಯಕ್ತಿಗಳಿಗಿಂತಲೂ ಸ್ವಾಭಾವಿಕವಾಗಿ ಅತ್ಯಂತ ಪ್ರಿಯನಾಗಿರುವವನು. ವ್ಯಕ್ತಿಗೆ ಉಳಿದೆಲ್ಲರಿಗಿಂತ ಅತ್ಯಂತ ತಾನು ಪ್ರಿಯನಾಗುವಂತೆ ಮಾಡುವವನೂ ಶ್ರೀಹರಿ ಎಂಬುದಾಗಿ ಪ್ರೀತಿಗೆ ಕೇಂದ್ರಬಿಂದುವನ್ನಾಗಿ ಶ್ರೀಹರಿಯನ್ನು ತೋರಿಸಿಕೊಡುವ ಬೃಹದಾರಣ್ಯಕೋಪನಿಷತ್ತಿನಿಂದ[84] ಅಂತಹ ಪ್ರಿಯಕೃತ್ತ್ವಮಹಿಮಾಪ್ರಯುಕ್ತ ಶ್ರೀಹರಿಯ ಸರ್ವೋತ್ತಮತ್ವ ಸಾಧಿಸಲ್ಪಟ್ಟಿದೆ.

55. ಬೃಹದಾರಣ್ಯಕೋಪನಿಷತ್ತಿನ ಅಂತರ್ಯಾಮಿ ಬ್ರಾಹ್ಮಣದಲ್ಲಿ ಶ್ರೀಹರಿ ಪ್ರತಿಯೊಬ್ಬ ವ್ಯಕ್ತಿಯಲ್ಲೂ ವಸ್ತುವಿನಲ್ಲೂ ಅಂತರ್ಯಾಮಿಯಾಗಿ ಇರುವನೆಂದು ಪ್ರತಿಪಾದಿಸಲ್ಪಟ್ಟಿರುವುದರಿಂದ, ಅವನನ್ನು ಬಿಟ್ಟರೆ ಉಳಿದ ಯಾರೂ ಸ್ವತಂತ್ರವಾಗಿ ದರ್ಶನ ಮುಂತಾದ ಕ್ರಿಯೆ ನಡೆಸುವವರಿಲ್ಲ –ಎಂದು ಸಮರ್ಥಿಸಿರುವುದರಿಂದ[85] ಅವನೇ ಸರ್ವೋತ್ತಮ ಎಂದು ಸಮರ್ಥಿಸಿದಂತಾಗಿದೆ.

56. ಶ್ರೀಹರಿಯ ಮೇಲೆ ಪುಣ್ಯಕರ್ಮವಾಗಲೀ, ಪಾಪಕರ್ಮವಾಗಲೀ ಏನೂ ಪ್ರಭಾವ ಬೀರಲಾರದು ಎಂಬುದರಿಂದ[86] ಅವನ ಸರ್ವೋತ್ತಮತ್ವದ ಸಾಧನೆ ನಡೆದಂತಾಗಿದೆ.

57. ಶ್ರೀಹರಿ ಸಂಸಾರಬದ್ಧರಿಗಿಂತಲೂ, ಮುಕ್ತರಿಗಿಂತಲೂ, ನಿತ್ಯಮುಕ್ತಳಾದ ಲಕ್ಷ್ಮೀದೇವಿಗಿಂತಲೂ ವಿಲಕ್ಷಣನಾಗಿರುವವನು –ಎಂದು ಘೋಷಿಸುವ[87] ಬೃಹದಾರಣ್ಯಕದ ಸಂದೇಶದಿಂದ ಅವನ ಸರ್ವೋತ್ತಮತ್ವ ಸಾಧಿತವಾಗುವುದು.

58. ಶ್ರೀಹರಿಯ ಆನಂದ ಸರ್ವಶ್ರೇಷ್ಠವಾದದ್ದೆಂದು ಪ್ರತಿಜ್ಞೆ ಮಾಡಿರುವ ಬೃಹದಾರಣ್ಯಕೋಪನಿಷತ್ತು ಶ್ರೀಹರಿಯ ಆನಂದದ ಪ್ರತಿಬಿಂಬರೂಪದ ಬಿಂದುವನ್ನೇ ಮುಕ್ತರೇ ಮುಂತಾದ ಪ್ರತಿಯೊಬ್ಬರೂ ತಮ್ಮತಮ್ಮ ಯೋಗ್ಯತಾನುಸಾರವಾಗಿ

---

84. ತದೇತತ್ ಪ್ರೇಯಃ ಪುತ್ರಾತ್ ಪ್ರೇಯೋ ವಿತ್ತಾತ್ ಪ್ರೇಯೋಽನ್ಯಸ್ಮಾತ್ ಸರ್ವಸ್ಮಾದಂತರಂತರಂ ಯದಯಮಾತ್ಮಾ........ । –ಬೃ.ಉ. ೧-೪-೮

85. ಯಃ ಪೃಥಿವ್ಯಾಂ ತಿಷ್ಠನ್....... ಯಃ ಪೃಥಿವೀಮಂತರೋ ಯಮಯತಿ....... ನಾನ್ಯೋಽತೋಽಸ್ತಿ ದ್ರಷ್ಟಾ............ –ಬೃ.ಉ. ೩-೭-೩.....೨೩

86. .... ಸ ನ ಸಾಧುನಾ ಕರ್ಮಣಾ ಭೂಯಾನ್ ನೋ ಏವಾಸಾಧುನಾ ಕನೀಯಾನ್..... । – ಬೃ.ಉ. ೪-೪-೨೨

87. .... ಸ ಏಷ ನೇತಿ ನೇತ್ಯಾತ್ಮಾ.......... । –ಬೃ.ಉ. ೪-೪-೨೨

ಅನುಭವಿಸುವರೆಂದು ಪ್ರತಿಪಾದಿಸುವ88 ಮೂಲಕ ಅವನ ಸರ್ವೋತ್ತಮತ್ವವನ್ನು ಸಮರ್ಥಿಸಿದೆ.

59. ಛಾಂದೋಗ್ಯೋಪನಿಷತ್ತಿನಲ್ಲಿ ಶ್ರೀಹರಿ ಸರ್ವೋತ್ತಮ ಎಂಬ ಅಭಿಪ್ರಾಯದಲ್ಲಿ 'ಸತ್' –ಎಂಬ ನಾಮದಿಂದ ಅವನನ್ನು ಉಲ್ಲೇಖಿಸಿ, ಸೃಷ್ಟಿಯ ಪ್ರಾರಂಭದಲ್ಲಿ ಅವನೊಬ್ಬನೇ ಇದ್ದನು. ಅವನಿಗೆ ಸದೃಶನಾಗಲೀ, ಉತ್ತಮನಾಗಲೀ ಇರಲಿಲ್ಲ –ಎಂದು ಘೋಷಿಸಲಾಗಿದೆ.89

60. ಛಾಂದೋಗ್ಯೋಪನಿಷತ್ತಿನಲ್ಲಿ ನಾರದರು ಕಲಿತಿದ್ದ ಋಗ್ವೇದವೇ ಮುಂತಾದ ೧೮ ವಿದ್ಯೆಗಳು ಶ್ರೀವಿಷ್ಣುವಿನ ನಾಮಗಳೇ90 ಆಗಿವೆ –ಎಂದು ಸನತ್ಕುಮಾರರು ಹೇಳಿರುವರು. ಹೀಗೆ ಹದಿನೆಂಟು ವಿದ್ಯೆಗಳನ್ನು ತನ್ನ 'ನಾಮ'ವಾಗಿ ಹೊಂದಿರುವ ಶ್ರೀವಿಷ್ಣು ಸರ್ವೋತ್ತಮನೆಂದು ಸಿದ್ಧಿಸುವುದು.

ಬ್ರಹ್ಮಸೂತ್ರಾಧಾರಿತಗಳು

61. ಬ್ರಹ್ಮಸೂತ್ರವಾಙ್ಮಯದ ಸಮನ್ವಯಾಧ್ಯಾಯದಲ್ಲಿ ಶ್ರೀಹರಿ ಸಕಲಗುಣಪೂರ್ಣನೆಂದು ಸಾಧಿಸಿದ್ದರೆ, ಅವಿರೋಧಾಧ್ಯಾಯದಲ್ಲಿ ಅವನು ಸಕಲದೋಷದೂರನಾಗಿರುವವನೆಂದು ಸಮರ್ಥಿಸಲಾಗಿದೆ. ಬೇರೆ ಯಾರಲ್ಲೂ ಇರದ ಈ ಅರ್ಹತೆಗಳನ್ನು ಶ್ರೀಹರಿ ಮಾತ್ರ ಹೊಂದಿರುವುದರಿಂದ ಅವನು ಸರ್ವೋತ್ತಮ ಆಗಿರಲೇಬೇಕು.

62. ಅಕ್ಷರನಾಮಕ ಶ್ರೀಹರಿ ಆಕಾಶವೇ ಮುಂತಾದ ಎಲ್ಲವುಗಳ ಧಾರಣೆಯನ್ನು ಬರೇ ತನ್ನ ಶಾಸನದ ಮೂಲಕ, ಆದೇಶದ ಮೂಲಕ ನಡೆಸುತ್ತಿರುವನೆಂದರೆ91 ಇದರಿಂದ ಅವನ ಸರ್ವೋತ್ತಮತ್ವವನ್ನು ಮನವರಿಕೆ ಮಾಡಿಕೊಳ್ಳಬಹುದು.

63. ಶ್ರೀಹರಿಯು ಜಗತ್ಸೃಷ್ಟಿಯನ್ನು ಸ್ವರೂಪಸಾಮರ್ಥ್ಯದಿಂದಲೇ ನಡೆಸುವನು. ಅವನಿಗೆ ಅಧೀನವಾಗಿ ಸಾಧನತ್ವವನ್ನು ಪಡಕೊಂಡ ಕಾಲ ಮುಂತಾದ ಅಸ್ವತಂತ್ರ ಸಾಧನಗಳನ್ನು ಸೃಷ್ಟಿಕ್ರಿಯೆಯಲ್ಲಿ ಬಳಸಿಕೊಳ್ಳುವನಾದರೂ ಸ್ವತಂತ್ರಸಾಧನಗಳನ್ನು

---

88. .... ಏಷೋಽಸ್ಯ ಪರಮ ಆನಂದ ಏತಸ್ಯೈವಾಽಽನಂದಸ್ಯಾನ್ಯಾನಿ ಭೂತಾನಿ ಮಾತ್ರಾಮುಪಜೀವಂತಿ । –ಬೃ.ಉ. ೪–೩–೩೨

* ಪ್ರತಿಬಿಂಬರೂಪವಿಪ್ಲುಟ್ಕಾಂಸ್ತದಾನಂದಸ್ಯ ಚಾಖಿಲಾಃ । ಮುಕ್ತಾ ಬ್ರಹ್ಮಾದಯೋಽಶ್ನಂತಿ ತಾರತಮ್ಯೇನ ನಿತ್ಯದಾ । –ಬೃ.ಉ.ಭಾ.

89. ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ......... । –ಛಾ.ಉ. ೬–೨–೧

90. ಯದ್ ವೈ ಕಿಂಚೈತದಧ್ಯಗೀಷ್ಠಾ ನಾಮ್ನೈವೈತತ್....... । –ಛಾ.ಉ. ೭–೧–೨

* ವಿಷ್ಣೋರ್ನಾಮ ಯತೋ ವಿದ್ಯಾಃ ಸರ್ವನಾಮೇತ್ಯತಃ ಸ್ಮೃತಾಃ । –ಛಾ.ಉ.ಭಾ.

91. 'ಅಕ್ಷರಮಂಬರಾಂತಧೃತೇಃ' –(ಬ್ರ.ಸೂ. ೧–೩–೧೦)

* 'ಸಾ ಚ ಪ್ರಶಾಸನಾತ್' –(ಬ್ರ.ಸೂ. ೧–೩–೧೧)

ಬಳಸಿಕೊಂಡು ಸೃಷ್ಟಿ ಮಾಡುವುದಿಲ್ಲ.[92] ಹೀಗೆ ಸ್ವತಂತ್ರಸಾಧನಗಳ ಅಪೇಕ್ಷೆ ಇಲ್ಲದೆ ಅವನ ಮೂಲಕ ನಡೆಯುವ ಜಗತ್ಸೃಷ್ಟಿ ಅವನ ಸರ್ವೋತ್ತಮತ್ವಕ್ಕೆ ಸಾಧಕವಾಗಬಲ್ಲುದು.

64. ಶ್ರೀಹರಿ ವಿಚಿತ್ರಶಕ್ತಿಸಂಪನ್ನನಾಗಿಯೂ,[93] ಸರ್ವಶಕ್ತಿಸಂಪನ್ನನಾಗಿಯೂ ಶಾಸ್ತ್ರದಲ್ಲಿ ಪ್ರತಿಪಾದ್ಯನಾಗಿರುವನು. ಅಂತಹವನು ಸರ್ವೋತ್ತಮನೆನಿಸಲೇಬೇಕು.

65. ಎಲ್ಲ ಗುಣಗಳೂ ದೋಷಗಳೂ ಶ್ರೀಹರಿಯ ಅಧೀನಗಳಾಗಿವೆ ಎಂದ ಮೇಲೆ ವಿವೇಕಿಯಾದ ಅವನು ಎಲ್ಲ ಗುಣಗಳು ತನ್ನಲ್ಲಿ ಸೇರಿಕೊಳ್ಳುವಂತೆಯೂ, ಎಲ್ಲ ದೋಷಗಳೂ ತನ್ನಿಂದ ದೂರ ಸರಿಯುವಂತೆಯೂ ಮಾಡದಿರಲು ಸಾಧ್ಯವೇ ಇಲ್ಲ.[94] ಆದುದರಿಂದ ಸಕಲಗುಣಗಳಿಂದ ಕೂಡಿದ, ಸಕಲದೋಷಗಳಿಂದ ದೂರನಾದ ಅವನು ಸರ್ವೋತ್ತಮನಾಗಿರಲೇಬೇಕು.

66. 'ಈ ಎಲ್ಲವನ್ನೂ ಶ್ರೀಹರಿ ಸೃಷ್ಟಿಸಿದನು' –ಎಂಬ ಉಪನಿಷತ್ತಿನ ಪ್ರತಿಜ್ಞೆ ತಪ್ಪು ಆಗಬಾರದೆಂದರೆ ಶ್ರೀಹರಿಯನ್ನು ಬಿಟ್ಟು ಉಳಿದ ಲಕ್ಷ್ಮೀದೇವಿಯೇ ಮುಂತಾದವರಿಗೆಲ್ಲ ಒಂದಲ್ಲ ಒಂದು ಬಗೆಯ ಉತ್ಪತ್ತಿಯನ್ನು ಹೇಳಲೇಬೇಕು.[95] 'ಪರಾಧೀನವಿಶೇಷಾವಾಪ್ತಿ' –ಅಂದರೆ ಇನ್ನೊಬ್ಬನಿಗೆ ಅಧೀನವಾದ ಧರ್ಮವೊಂದರ ಹೊಂದಿಕೆಯೇ ಉತ್ಪತ್ತಿ ಎನಿಸಿದ್ದು– ಈ ಉತ್ಪತ್ತಿ ಲಕ್ಷ್ಮೀದೇವಿ ಮುಂತಾದವರಿಗೆಲ್ಲ ಇದ್ದೇ ಇದೆ.[96] ಅಲ್ಪಶಕ್ತಿವುಳ್ಳವರಿಗೆ ಒಂದಲ್ಲ ಒಂದು ಬಗೆಯ ವಿಕಾರ ಇದ್ದೇ ಇರುವುದರಿಂದ ಅಲ್ಪಶಕ್ತಿಯ ಪ್ರಕೃತಿಯೇ ಮುಂತಾದವರಿಗೆಲ್ಲ ವಿಕಾರ ಇದ್ದೇ ಇದೆ. ಆದ್ದರಿಂದ ಅವರೆಲ್ಲ ಒಂದಲ್ಲ ಒಂದು ಬಗೆಯ ಉತ್ಪತ್ತಿಗೆ ಒಳಗಾಗಿರುವವರು. ಯಾವುದೇ ಉತ್ಪತ್ತಿಯನ್ನು ಹೊಂದದಿರುವವರು ಪರಿಪೂರ್ಣಶಕ್ತಿಯುಳ್ಳ ಶ್ರೀಹರಿ ಮಾತ್ರ.[97]

---

92. ತದನನ್ಯತ್ವಮಾರಂಭಣಶಬ್ದಾದಿಭ್ಯಃ –(ಬ್ರ.ಸೂ. ೨-೧-೧೫)
 * ಭಾವೇ ಚೋಪಲಬ್ಧೇಃ –(ಬ್ರ.ಸೂ. ೨-೧-೧೬)
 * ಸತ್ತ್ವಾಚ್ಚಾವರಸ್ಯ –(ಬ್ರ.ಸೂ. ೨-೧-೧೭)

93. ಆತ್ಮನಿ ಚೈವಂ ವಿಚಿತ್ರಾಶ್ಚ ಹಿ –(ಬ್ರ.ಸೂ. ೨-೧-೨೯)
 * ಸರ್ವೋಪೇತಾ ಚ ತದ್ದರ್ಶನಾತ್ –(ಬ್ರ.ಸೂ. ೨-೧-೩೦)

94. ಸರ್ವಧರ್ಮೋಪಪತ್ತೇಶ್ಚ –(೨-೧-೩೮)
 * ಯದಧೀನಾ ಗುಣಾಶ್ಚೈವ ದೋಷಾ ಅಪಿ ಹಿ ಸರ್ವಶಃ ।
 ಗುಣಾಸ್ತಸ್ಯ ಕಥಂ ನ ಸ್ಯುಃ ಸ್ಯುರ್ದೋಷಾಶ್ಚ ಕಥಂ ಪುನಃ ॥
 ಸರ್ವಧರ್ಮೋಪಪತ್ತೇಃ.......... ॥ –ಅನುವ್ಯಾಖ್ಯಾನ.

95. ಪ್ರತಿಜ್ಞಾಹಾನಿರವ್ಯತಿರೇಕಾಚ್ಛಬ್ದೇಭ್ಯಃ –(ಬ್ರ.ಸೂ. ೨-೩-೬)

96. ಪ್ರಕೃತಿಃ ಪುರುಷಃ ಕಾಲೋ ದೇವಾಸ್ತದಭಿಮಾನಿನಃ ।
 ಮಹದಾದ್ಯಾಶ್ಚ ಜಾಯಂತೇ ಪರಾಧೀನವಿಶೇಷತಾ ॥
 ಇದಂ ಸರ್ವಂ ಸಸರ್ಜೇತಿ ಜನಿಮತ್ತ್ವಮಿಹೋದಿತಮ್ । –ಅನುವ್ಯಾಖ್ಯಾನ

97. ಯಾವದ್ವಿಕಾರಂ ತು ವಿಭಾಗೋ ಲೋಕವತ್ । –(ಬ್ರ.ಸೂ. ೨-೩-೭)

ಅವನು ಸ್ವತಂತ್ರನಾಗಿರುವುದರಿಂದ 'ಪರಾಧೀನವಿಶೇಷಾವಾಪ್ತಿ'ರೂಪವಾದ ಉತ್ಪತ್ತಿಯೂ ಅವನ ಪಾಲಿಗೆ ಇರದು.98 ಆದುದರಿಂದಲೇ ಅವನು ಸರ್ವೋತ್ತ-ಮನು.

67. ಸ್ವಪ್ನಾವಸ್ಥೆಯನ್ನೂ ಅದರಲ್ಲಿ ಕಾಣಿಸುವ ವಸ್ತುಗಳನ್ನೂ,99 ಎಚ್ಚರಿಕೆಯ ಅವಸ್ಥೆಯನ್ನೂ,100 ಸುಷುಪ್ತಿಯ ಅವಸ್ಥೆಯನ್ನೂ101 ಮೂರ್ಛಾವಸ್ಥೆಯನ್ನೂ ಸೃಷ್ಟಿಸುವವನೂ102 ಆಯಾ ಅವಸ್ಥೆಯನ್ನು ಕೊನೆಗೊಳಿಸುವವನೂ ಶ್ರೀಹರಿಯೇ ಆಗಿರುವುದರಿಂದ,103 ಇಂತಹ ಅಸಾಧಾರಣಮಹಿಮೆಯುಳ್ಳ ಅವನು ಸರ್ವೋತ್ತಮ ಆಗಿರಲೇಬೇಕು.

68. ನಾನಾ ಕ್ಲೇಶಗಳಿಗೊಳಗಾಗಿದ್ದರೂ ಮುಮುಕ್ಷುಗಳು ಶ್ರೀಹರಿಯನ್ನು 'ಆತ್ಮಾ' ನನಗೂ, ಇತರ ಎಲ್ಲರಿಗೂ ಸ್ವಾಮಿ ಎಂಬುದಾಗಿ ಯಾವಾಗಲೂ ಉಪಾಸನೆ ಮಾಡುತ್ತ ಇರಬೇಕು. ಎಂದೂ ಮರೆಯಬಾರದು104 –ಎಂದು ವಿಧಿಸಿರುವುದರಿಂದ ಶ್ರೀಹರಿ ಎಲ್ಲರಿಗೂ ಸ್ವಾಮಿಯಾಗಿದ್ದು, ಸರ್ವೋತ್ತಮನೆನಿಸಿರುವನೆಂದು ಸಿದ್ಧಿಸುವುದು.

69. ಲಕ್ಷ್ಮೀದೇವಿ ಶ್ರೀಹರಿಯಂತೆ ದೈಶಿಕವ್ಯಾಪ್ತಿಯನ್ನೂ, ಕಾಲಿಕವ್ಯಾಪ್ತಿಯನ್ನೂ ಹೊಂದಿರುವಳು. ನಿತ್ಯಮುಕ್ತಳಾಗಿರುವಳು. ಆದರೂ ಶ್ರೀಹರಿ ಲಕ್ಷ್ಮೀದೇವಿಗಿಂತಲೂ ಸೂಕ್ಷ್ಮತರ-

---

* ಏಕೋಽವಿಭಕ್ತಃ ಪರಮಃ ಪುರುಷೋ ವಿಷ್ಣುರುಚ್ಯತೇ ।
ಪ್ರಕೃತಿಃ ಪುರುಷಃ ಕಾಲಸ್ತ್ರಯ ಏತೇ ವಿಭಾಗತಃ....... ॥
ಯೋ ವಿಭಾಗೀ ವಿಕಾರಃ ಸ ಸೋಽವಿಕಾರಃ ಪರೋ ಹರಿಃ ।
.........ವಿಭಾಗೋ ಹ್ಯಲ್ಪಶಕ್ತಿತ್ವಂ ನ ಹಿ ತತ್ ಪರಮಾತ್ಮನಃ ॥ –ಅನುವ್ಯಾಖ್ಯಾನ

98. ನ ಚ ಸತಃ ಪರಾಧೀನವಿಶೇಷವತ್ತ್ವಮ್ । ಸ್ವಾತಂತ್ರ್ಯಾತ್ । –ನ್ಯಾಯವಿವರಣ

99. ಸಂಧ್ಯೇ ಸೃಷ್ಟಿರಾಹ ಹಿ –(ಬ್ರ.ಸೂ. ೩–೨–೧)

* ನಿರ್ಮಾತಾರಂ ಚೈಕೇ ಪುತ್ರಾದಯಶ್ಚ –(೩–೨–೨)

100. ದೇಹಯೋಗಾದ್ ವಾಸೋಽಪಿ –(೩–೨–೬)

101. ಸ್ವಪ್ನಾಂತಂ ಜಾಗರಿತಾಂತಂ ಚ ಉಭೌ ಯೇನಾನುಪಶ್ಯತಿ......... ಏತದ್ ವಯ ತತ್ ।
– ಕಾಠಕೋಪನಿಷತ್

102. ಮುಗ್ಧೇಽರ್ಧಸಂಪತ್ತಿಃ ಪರಿಶೇಷಾತ್ । –(೩–೨–೧೦)

* ಸೋಽಪಿ ತತ ಏವೇತಿ ಸಿದ್ಧಮ್ । –ಭಾಷ್ಯಮ್

103. ಪರಾಭಿಧ್ಯಾನಾತ್ತು ತಿರೋಹಿತಂ ತತೋ ಹ್ಯಸ್ಯ ಬಂಧವಿಪರ್ಯಂತೌ । –೩–೨–೫

104. ಆತ್ಮೇತಿ ತೂಪಗಚ್ಛಂತಿ ಗ್ರಾಹಯಂತಿ ಚ । –(ಬ್ರ.ಸೂ. ೪–೧–೩)

* ಆತ್ಮೇತ್ಯುಪಾಸನಂ ಕಾರ್ಯಂ ಸರ್ವಥೈವ ಮುಮುಕ್ಷುಭಿಃ ।
ನಾನಾಕ್ಲೇಶಸಮಾಯುಕ್ತೋಽಪ್ಯೇತಾವನ್ನೈವ ವಿಸ್ಮರೇತ್ ॥ –ಭವಿಷ್ಯತ್ಪರ್ವ (ಸೂ.ಭಾ.)

* ....ಷಾಡ್ಗುಣ್ಯವಚನಂ ಪರಮ್ ।
ಮಮ ಸ್ವಾಮೀ ಹರಿರ್ನಿತ್ಯಂ ಸರ್ವಸ್ಯ ಪತಿರೇವ ಚ ॥
ಇತಿ ಧ್ಯೇಯಃ ಸರ್ವದೈವ ಭಗವಾನ್ ವಿಷ್ಣುರವ್ಯಯಃ । –ಅನುವ್ಯಾಖ್ಯಾನ

ಮಾಣವನ್ನು ಹೊಂದಿರುವವನಾಗಿರುವನು. ಹಾಗೆಯೇ ಜ್ಞಾನ, ಆನಂದ, ಐಶ್ವರ್ಯ –ಮುಂತಾದ ಗುಣಗಳು ಶ್ರೀದೇವಿಗಿಂತಲೂ ಅಧಿಕಪ್ರಮಾಣದಲ್ಲಿ ಶ್ರೀಹರಿಯಲ್ಲಿವೆ.[105] ಅಂತೆಯೇ ಲಕ್ಷ್ಮೀದೇವಿ ಪರಮಾತ್ಮನಂತೆ ಸಂಸಾರಬಂಧನಕ್ಕೊಳಗಾಗುವುದಿಲ್ಲವಾದರೂ –ಪರಮಾತ್ಮನ ಅನುಗ್ರಹದಿಂದಾಗಿ, ಸಂಸಾರಬಂಧನದಿಂದ ದೂರಳಾಗಿರುವಳು. ಪರಮಾತ್ಮನಾದರೂ ಸ್ವಾಭಾವಿಕವಾಗಿಯೇ ಬಂಧನದಿಂದ ದೂರನಾಗಿರುವನು. ಲಕ್ಷ್ಮೀದೇವಿ ಯಾವಾಗಲೂ ಪರಮಾತ್ಮನನ್ನು ಉಪಾಸಿಸುತ್ತಿರುವಳು. ಲಕ್ಷ್ಮೀದೇವಿಯ ಹಾಗೆ ಅವಳಿಂದ ನಿರ್ಮಿತ ಪ್ರಪಂಚದ ಎಲ್ಲ ಗುಣಗಳೂ ಶ್ರೀವಿಷ್ಣುವಿನ ನಿಯಂತ್ರಣಕ್ಕೆ ಒಳಗಾದವು. ಆದರೆ ಶ್ರೀಹರಿಯ ಗುಣಗಳಾದರೂ ಯಾರ ನಿಯಂತ್ರಣಕ್ಕೂ ಒಳಗಾಗದೆ, ಸ್ವಾಭಾವಿಕವಾದವು.[106] ಹೀಗೆ ಲಕ್ಷ್ಮೀದೇವಿಗಿಂತಲೂ ಎತ್ತರದಲ್ಲಿರುವ ಶ್ರೀಹರಿ ಸರ್ವೋತ್ತಮ.

70. ವೇದವು ಅನಂತವಾಗಿರುವುದಾದರೂ ಸಮಸ್ತ ವೇದಗಳಿಂದಲೂ ಉಂಟಾಗುವ ಜ್ಞಾನ ಸಮಾನವಾಗಿರುವುದರಿಂದ[107] ಈಗ ಉಪಲಬ್ಧವಾಗಿರುವ ವೇದದ ಭಾಗದಲ್ಲಿ ಶ್ರೀಹರಿಯೇ ಸರ್ವೋತ್ತಮ ಎಂದು ಪ್ರತಿಪಾದಿತವಾಗಿರುವುದರಿಂದ ಅನುಪಲಬ್ಧವಾಗಿರುವ ವೇದದ ಭಾಗದಲ್ಲೂ ಉಪಲಬ್ಧವಾಗಿರುವ ವೇದದ ಭಾಗದಲ್ಲಿ ಹೇಗೋ ಹಾಗೆಯೇ ಶ್ರೀವಿಷ್ಣುವೇ ಸರ್ವೋತ್ತಮನೆಂದು ಪ್ರತಿಪಾದ್ಯನಾಗಿರುವನೆಂದು ನಿರ್ಧರಿಸಿಕೊಳ್ಳಬಹುದು.

ಆಗಮಗಳಿಂದ ಮತ್ತು ಆಗಮಾಧಾರಿತ ಯುಕ್ತಿಗಳಿಂದ ಆಧಾರಿತಗಳು

71. ಶ್ರೀವೇದವ್ಯಾಸರು ಮಹಾಭಾರತದ ಉಪಕ್ರಮದಲ್ಲಿ– ತೋಳುಗಳನ್ನೆತ್ತಿ, ಇದು ಸತ್ಯ, ಇದು ಸತ್ಯ, ಇದು ಸತ್ಯ –ಎಂದು ಶಪಥ ಮಾಡಿ ಉದ್ಘೋಷಿಸಿರುವರು. ಹೇಗೆ

---

105. ಸೂಕ್ಷ್ಮಂ ಪ್ರಮಾಣತಶ್ಚ ತಥೋಪಲಬ್ಧೇಃ –*(ಬ್ರ.ಸೂ. ೪–೨–೯)*

* ಸರ್ವತಃ ಪ್ರಕೃತಿಃ ಸೂಕ್ಷ್ಮಾ ಪ್ರಕೃತೇಃ ಪರಮೇಶ್ವರಃ ।
ಜ್ಞಾನಾನಂದೌ ತಥೈಶ್ವರ್ಯಂ ಗುಣಾಶ್ಚಾನ್ಯೇಽಧಿಕಾಃ ಪ್ರಭೋಃ ॥–*ತುರಶ್ರುತಿ (ಸೂ.ಭಾ)*

106. ನೋಪಮರ್ದೇನಾತಃ –*(ಬ್ರ.ಸೂ. ೪–೨–೧೦)*

* ದೇಶತಃ ಕಾಲತಶ್ಚೈವ ಸಮಾ ಪ್ರಕೃತಿರೀಶ್ವರೇ ।
ಉಭಯೋರಪ್ಯಬದ್ಧತ್ವಂ ತದಬಂಧಃ ಪರಾತ್ಮನಃ ॥
ಸ್ವತ ಏವ ಪರೇಶಸ್ಯ ಸಾ ಚೋಪಾಸ್ತೇ ಸದಾ ಹರಿಮ್ ।
ಪ್ರಕೃತೇಃ ಪ್ರಾಕೃತಸ್ಯಾಪಿ ಯೇ ಗುಣಾಸ್ತೇ ತು ವಿಷ್ಣುನಾ ॥
ನಿಯತಾ ನೈವ ಕೇನಾಪಿ ನಿಯತಾ ಹಿ ಹರೇರ್ಗುಣಾಃ ।–*ಭವಿಷ್ಯತ್ಪರ್ವ (ಬ್ರ.ಸೂ.ಭಾ.)*

107. ಗತಿಸಾಮ್ಯಾತ್ –*(ಬ್ರ.ಸೂ. ೧–೧–೧೦)*

* ಸರ್ವೇ ವೇದಾ ಯುಕ್ತಯಃ ಸುಪ್ರಮಾಣಾ ಬ್ರಾಹ್ಮಂ ಜ್ಞಾನಂ ಪರಮಂ ತ್ವೇಕಮೇವ ।
ಪ್ರಕಾಶಯಂತೇ ನ ವಿರೋಧಃ ಕುತಶ್ಚಿತ್ ವೇದೇಷು ಸರ್ವೇಷು ತಥೇತಿಹಾಸೇ ॥
– *ಪೈಂಗಿಶ್ರುತಿ (ಬ್ರ.ಸೂ.ಭಾ.)*

ವೇದಶಾಸ್ತ್ರಕ್ಕಿಂತ ಉತ್ತಮಶಾಸ್ತ್ರ ಇಲ್ಲವೋ ಹಾಗೆಯೇ ಕೇಶವನಿಗಿಂತ ಉತ್ತಮದೇವತೆ ಮತ್ತೊಬ್ಬನಿಲ್ಲ.[108]

72. ವಿಶ್ವಗುರುಗಳಾದ ಶ್ರೀಮಧ್ವಾಚಾರ್ಯರು ತಮ್ಮ ಸರ್ವಮೂಲಗ್ರಂಥಗಳಲ್ಲಿ ವಿಷ್ಣುಸರ್ವೋತ್ತಮತ್ವಪ್ರಮೇಯಕ್ಕೆ ಬಾಧಕಗಳಾದ ಕುವಾದಗಳನ್ನೆಲ್ಲ ನಿರಾಕರಿಸಿ, 'ಶ್ರೀವಿಷ್ಣುವೇ ಸರ್ವೋತ್ತಮ' ಎಂದು ಸಮರ್ಥಿಸಿರುವರು.[109] ಇದರಿಂದ ಶ್ರೀವಿಷ್ಣು ಸರ್ವೋತ್ತಮತ್ವ ಸಿದ್ಧಿಸುವುದು.

73. ದೇವೋತ್ತಮನಾದ ವಾಯುದೇವನಿಗೆ ಶ್ರೀಹರಿ ಸರ್ವದೇವೋತ್ತಮ ಎಂದು ತಿಳಿಯುವುದು ಅತ್ಯಂತಪ್ರಿಯವಾದುದು.[110] ಇದರಿಂದ ಶ್ರೀಹರಿಯು ಸರ್ವೋತ್ತಮನೆಂದು ಸಿದ್ಧಿಸುವುದು.

74. ಶ್ರೀವಿಷ್ಣು ಸರ್ವಪ್ರಧಾನನಾಗಿರುವವನು ಎಂಬ ತಿಳಿವಳಿಕೆಯೇ ಶ್ರೇಷ್ಠ ತಿಳಿವಳಿಕೆ ಎನಿಸಿದೆ.[111] ಇದರಿಂದ ಶ್ರೀವಿಷ್ಣುವಿನ ಸರ್ವಪ್ರಾಧಾನ್ಯ ಸಿದ್ಧಿಸುವುದು.

75. ಶ್ರೀಮಧ್ವಮತಾವಲಂಬಿಗಳಾದ ಶ್ರೀಜಯತೀರ್ಥಾಚಾರ್ಯರೇ ಮುಂತಾದ ಮಹನೀಯರು ತಮ್ಮ ತಮ್ಮ ಗ್ರಂಥಗಳಲ್ಲಿ ಶ್ರೀಮಧ್ವರು ಹಾಕಿಕೊಟ್ಟ ಪ್ರಣಾಡಿಗನುಗುಣವಾಗಿ ಅಲ್ಲಲ್ಲಿ ಶ್ರೀವಿಷ್ಣುಸರ್ವೋತ್ತಮತ್ವವನ್ನು ಸಮರ್ಥಿಸಿರುವರು. ಇದರಿಂದ ಶ್ರೀವಿಷ್ಣು ಸರ್ವೋತ್ತಮತ್ವ ಸಿದ್ಧಿಸುವುದು.

76. ಶ್ರೀಮಧ್ವಮತಾವಲಂಬಿಗಳಾದ ಶ್ರೀಪಾದರಾಜರೇ ಮುಂತಾದ ಹರಿದಾಸರುಗಳು ತಮ್ಮ ಸಾಹಿತ್ಯದಲ್ಲಿ ಶ್ರೀಮಧ್ವರ ಸಿದ್ಧಾಂತಕ್ಕನುಗುಣವಾಗಿ ಶ್ರೀವಿಷ್ಣು ಸರ್ವೋತ್ತಮತ್ವವನ್ನು ಉಪಪಾದಿಸಿರುವರು. ಇದರಿಂದ ಶ್ರೀವಿಷ್ಣು ಸರ್ವೋತ್ತಮತ್ವ ಸಿದ್ಧಿಸುವುದು.

---

108. ಸತ್ಯಂ ಸತ್ಯಂ ಪುನಸ್ಸತ್ಯಮುದ್ಧೃತ್ಯ ಭುಜಮುಚ್ಯತೇ ।
ವೇದಶಾಸ್ತ್ರಾತ್ ಪರಂ ನಾಸ್ತಿ ನ ದೈವಂ ಕೇಶವಾತ್ ಪರಮ್ ॥
– ಮ.ಭಾ. (ಮು.ಭಾ.ತಾ.ನಿರ್ಣಯ ಉದ್ಧೃತ ೨-೭೦)

109. ಯೋ ವಿಪ್ರಲಂಭವಿಪರೀತಮತಿಪ್ರಭೂತ-
ವಾದಾನ್ನಿರಸ್ಯ ಕೃತವಾನ್ ಭುವಿ ತತ್ತ್ವವಾದಮ್ ।
ಸರ್ವೇಶ್ವರೋ ಹರಿರಿತಿ ಪ್ರತಿಪಾದಯಂತ-
ಮಾನಂದತೀರ್ಥಮುನಿವರ್ಯಮಹಂ ನಮಾಮಿ ॥

110. ಸರ್ವದೇವೋತ್ತಮೋ ವಾಯುರಿತಿ ಜ್ಞಾನಾನ್ನಚಾಪರಮ್ ।
ಪ್ರಿಯಮಸ್ತಿ ಹರೇಃ ಕಿಂಚಿತ್ ತಥಾ ವಾಯೋರ್ಹರೇಃ ವಿದಃ ॥
ಮಾಹಾತ್ಮ್ಯ (ಭಾಗ.ತಾ.ನಿ. ೧೧-೧೧-೪೩)

111. ಏಕಃ ಪ್ರಧಾನ ಉದ್ದಿಷ್ಟೋ ವಿಷ್ಣೋಃ ಪ್ರಾಧಾನ್ಯದರ್ಶನಮ್ ।
ಐಕಾತ್ಮ್ಯದರ್ಶನಂ ಪ್ರೋಕ್ತಂ ಸರ್ವಜ್ಞಾನೋತ್ತಮಂ ಚ ತತ್ ॥
ತ್ರೈಕಾಲ್ಯ (ಭಾಗ.ತಾ.ನಿ. ೧೧-೧೯-೨೭)

77. ಒಂದು ವೇಳೆ ಶ್ರೀಹರಿ ಸರ್ವೋತ್ತಮನಲ್ಲದಿದ್ದರೆ, ಸಮಸ್ತ ಪ್ರಪಂಚ ಅವನ ವಶದಲ್ಲಿ ಹೇಗೆ ಇರಬಲ್ಲದು? ಒಂದು ವೇಳೆ ಪ್ರಪಂಚ ಅವನ ವಶದಲ್ಲಿ ಇಲ್ಲದಿದ್ದಲ್ಲಿ ಪ್ರಪಂಚದ ವ್ಯಕ್ತಿಗಳು ನಿತ್ಯಸುಖಿಗಳು, ನಿಯತಸುಖಿಗಳು ಯಾಕೆ ಆಗಲಾರದು? ಎಂಬ ಶ್ರೀಮಧ್ವರು ದ್ವಾದಶಸ್ತೋತ್ರದಲ್ಲಿ ತೋರಿಸಿರುವ ಯುಕ್ತಿಯು[112] ಶ್ರೀವಿಷ್ಣು ಸರ್ವೋತ್ತಮನೆಂದು ಸಾಧಿಸಬಲ್ಲದು.

78. ವೇದ, ರಾಮಾಯಣ, ಪುರಾಣ, ಮಹಾಭಾರತ –ಮುಂತಾದ ಸಚ್ಛಾಸ್ತ್ರಗ್ರಂಥ ಗಳ ಆದಿ–ಮಧ್ಯ–ಅ ತ್ಯ –ಹೀಗೆ ಎಲ್ಲೆಡೆ ಶ್ರೀವಿಷ್ಣುವಿನ ಗಾನವೇ ನಡೆದಿದೆ –ಎಂದು ಸಾರುತ್ತಿರುವ[113] ಹರಿವಂಶ ಶ್ರೀವಿಷ್ಣುವಿನಲ್ಲಿ ಸಕಲಶಾಸ್ತ್ರಪ್ರತಿಪಾದ್ಯತ್ವವನ್ನು ಘೋಷಿ ಸುವ ಮೂಲಕ ಅವನ ಸರ್ವೋತ್ತಮವನ್ನು ಸೂಚಿಸಿದೆ.

79. ಅಂಭ್ರಿಣೀಸೂಕ್ತದಲ್ಲಿ ಶ್ರೀಲಕ್ಷ್ಮೀದೇವಿ ಜಗತ್ತಿನ ಆಗುಹೋಗುಗಳಲ್ಲೆಲ್ಲ ತನ್ನ ಪ್ರಮುಖಪಾತ್ರವನ್ನು ಪರಿಚಯಿಸಿಕೊಟ್ಟು, ಕೊನೆಯಲ್ಲಿ ಅಂತಹ ತನಗೂ ಶಕ್ತಿಪ್ರದ ನಾಗಿದ್ದು, ನಿಮಿತ್ತ ಎನಿಸುವವನು ಸಮುದ್ರಶಾಯಿ ಎಂದು ಶ್ರೀಮನ್ನಾರಾಯಣನನ್ನು ಸ್ತುತಿಸಿರುವಳು.[114] ಇದರಿಂದ ಅವನ ಸರ್ವೋತ್ತಮತ್ವದ ಪ್ರತಿಪಾದನೆ ನಡೆದಂತಾಗಿದೆ.

80. ವೇದಗಳು ತಮ್ಮ ಪ್ರತಿಯೊಂದು ವಾಕ್ಯದಿಂದಲೂ, ಶಬ್ದದಿಂದಲೂ, ಅಕ್ಷರ ದಿಂದಲೂ, ಸ್ವರದಿಂದಲೂ ಬೇರೆಬೇರೆ ಬಗೆಯ ಸಮನ್ವಯದ ಮೂಲಕ ಶ್ರೀವಿಷ್ಣುವಿನ ಗುಣಗಾನವನ್ನೇ ನಡೆಸುತ್ತಿವೆ. ಹೀಗೆ ಬೇರೆ ಯಾರಿಗೂ ಇರದ ಅನಂತವೇದ ಪ್ರತಿಪಾದ್ಯಗುಣಸಂಪನ್ನತೆಯಿಂದಾಗಿ ಅವನ ಸರ್ವೋತ್ತಮತ್ವವು ಸಿದ್ಧಿಸುವುದು.[115]

81. ತನ್ನ ಮೂರುವರ್ಗಗಳ ಮೂಲಕ ಮೂರು ವೇದಗಳಿಗೂ ಅಭಿವ್ಯಂಜಕ ವಾಗಿರುವ 'ಪುರುಷಸೂಕ್ತ'ದಲ್ಲಿ ಪುರುಷನಾಮಕ ನಾರಾಯಣನ ಗುಣಮಹಿಮೆಗಳ

---

112. ಯದಿ ನಾಮ ಪರೋ ನ ಭವೇತ್ ಸ ಹರಿಃ
ಕಥಮಸ್ಯ ವಶೇ ಜಗದೇತದಭೂತ್ ।
ಯದಿ ನಾಮ ನ ತಸ್ಯ ವಶೇ ಸಕಲಂ
ಕಥಮೇವ ತು ನಿತ್ಯಸುಖಂ ನ ಭವೇತ್ ॥ –ದ್ವಾ.ಸ್ತೋ.

113. ವೇದೇ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ ।
ಆದಾವಂತೇ ಚ ಮಧ್ಯೇ ಚ ವಿಷ್ಣುಃ ಸರ್ವತ್ರ ಗೀಯತೇ ॥ –ಹರಿವಂಶ

114. ಅಹಂ ರುದ್ರೇಭಿರ್ವಸುಭಿಶ್ಚರಾಮಿ.............
ಮಮ ಯೋನಿರಪ್ಸ್ವಂತಃ ಸಮುದ್ರೇ............ । –ಅಂಭ್ರಿಣೀಸೂಕ್ತ

115. ಇತ್ಯಶೇಷಕ್ರಿಯಾನಾಮಶಬ್ದೈರೇಕೋ ಜನಾರ್ದನಃ ।
ಉಚ್ಯತೇ ಮುಖ್ಯತೋ ಯಸ್ಮಾತ್ ಪದವರ್ಣಸ್ವರಾದಿಭಿಃ ॥
ತಸ್ಮಾದನಂತಗುಣತಾ ಶ್ರುತಿತಾತ್ಪರ್ಯತೋಽಸ್ಯ ಹಿ ॥
– ಅನುವ್ಯಾಖ್ಯಾನ ೧–೪–೧೭, ೧೭

ಪ್ರತಿಪಾದನೆ ನಡೆದಿದೆ.116 ಪುರುಷಸೂಕ್ತಪ್ರತಿಪಾದ್ಯತ್ವವೂ ಅವನ ಸರ್ವೋತ್ತಮತ್ವಕ್ಕೆ ಸಾಧಕವಾಗಬಲ್ಲದು.

82. ಪುರುಷಸೂಕ್ತಕ್ಕೂ ಅಭಿವ್ಯಂಜಕವಾದದ್ದು ಮೂರು ಪಾದಗಳನ್ನೊಳಗೊಂಡ ಗಾಯತ್ರಿಮಂತ್ರವಾಗಿದ್ದು, ಅಂತಹ ಗಾಯತ್ರಿಮಂತ್ರ ಸವಿತೃನಾಮಕನಾರಾಯಣನ ಜಗತ್ಸೃಷ್ಟಿಕರ್ತೃತ್ವ, ಬುದ್ಧಿಪ್ರಚೋದಕತ್ವ ಮುಂತಾದ ಮಹಿಮೆಗಳನ್ನು ಸಾರುತ್ತಿದ್ದು, ಇದರಿಂದಾಗಿಯೂ ಅವನ ಸರ್ವೋತ್ತಮತ್ವವು ಸಿದ್ಧಿಸುವುದು.117

83. ತ್ರಿಪಾದಾತ್ಮಕವಾದ ಗಾಯತ್ರೀಮಂತ್ರಕ್ಕೆ 'ಭೂಃ ಭುವಃ ಸ್ವಃ' ಎಂಬ ತ್ರಿಪದಾತ್ಮಕವಾದ ವ್ಯಾಹೃತಿಯು ಅಭಿವ್ಯಂಜಕವಾಗಿದ್ದು, ಅಂತಹ ವ್ಯಾಹೃತಿಯೂ ಅವನ ಗುಣಗಾನವನ್ನೇ ನಡೆಸುತ್ತಿದೆ ಎಂದು, ಅದರಿಂದಲೂ ಅವನ ಸರ್ವೋತ್ತಮತ್ವವು ಸಿದ್ಧಿಸುವುದು.118

84. ತ್ರಿಪದಾತ್ಮಕವಾದ ವ್ಯಾಹೃತಿಗೂ ಅ–ಉ–ಮ –ಎಂಬ ಮೂರು ವರ್ಣಾತ್ಮಕವಾದ ಓಂಕಾರ ಅಭಿವ್ಯಂಜಕವಾಗಿದ್ದು, ಅಂತಹ ಓಂಕಾರವೂ ತನ್ನ, ಮೂರು ವರ್ಣಗಳಿಂದಲೂ, ಎಂಟು ವರ್ಣಗಳಿಂದಲೂ, ಅನಂತಮಾತ್ರೆಗಳಿಂದಲೂ ಶ್ರೀಮನ್ನಾರಾಯಣನನ್ನೇ ಪ್ರತಿಪಾದಿಸುತ್ತಿರುವುದರಿಂದ, ಅವನ ಸರ್ವೋತ್ತಮತ್ವವು ಘೋಷಿಸಲ್ಪಡುವುದು.119

---

116. ಸರ್ವತಃ ಪೌರುಷೇ ಸೂಕ್ತೇ ಗುಣಾ ವಿಷ್ಣೋರುದೀರಿತಾಃ ।
– ಬ್ರಹ್ಮತರ್ಕ (ಬ್ರ.ಸೂ.ಭಾ. ೩–೩–೨೫)

117. ಗುಣೈಸ್ತತಃ ಪ್ರಸವಿತಾ ವರಣೀಯೋ ಗುಣೋನ್ನತೇಃ ।
ಭಾರತಿಜ್ಞಾನರೂಪತ್ವಾದ್ ಭರ್ಗೋ ಧ್ಯೇಯೋಽಖಿಲೈರ್ಜನೈಃ ॥
ಪ್ರೇರಕೋಽಶೇಷಬುದ್ಧೀನಾಂ ಸ ಗಾಯತ್ರ್ಯರ್ಥ ಈರಿತಃ ॥ *–ಋ.ಭಾ. ೩*

118. ಪೂರ್ಣೋ ಭೂತಿವರೋಽನಂತಸುಖೋ ಯದ್ ವ್ಯಾಹೃತೀರಿತಃ । *–ಋ.ಭಾ. ೨*

119. ಓಮಶೇಷಗುಣಾಧಾರ ಇತಿ ನಾರಾಯಣೋಽಪ್ಯಸೌ । *–ಋ.ಭಾ.*

* ....ತಸ್ಮಾದ್ ವರ್ಣತ್ರಯಾತ್ಮಾಽಯಂ ಪ್ರಣವೋಽಪಿ ತ್ರಯಾತ್ಮಕಮ್ ।
ಹರಿಮೇವ ಸದಾ ವಕ್ತಿ ನೈವಾನ್ಯಂ ಕಂಚನ ಕ್ವಚಿತ್ ।
.... ಅಂತರ್ಯಾಮೀ ವಿರಿಂಚಸ್ಯ ಸೋಽಕಾರಾರ್ಥೋ ಜನಾರ್ದನಃ ।
ವೈಕುಂಠಲೋಕ ಆಸ್ತೇ ಸ ದ್ವಿತೀಯವಪುಷಾ ಹರಿಃ ।
ಉಕಾರವಾಚ್ಯಃ ಸ ವಿಭುಃ .... ನೃಸಿಂಹೋ ರುದ್ರನಾಮಕಃ ।
.... ಅಂತರ್ಯಾಮೀ ಶಿವಸ್ಯಾಪಿ ಮಕಾರಾರ್ಥಃ ಪ್ರಕೀರ್ತಿತಃ ।
– ತತ್ವಸಾರ (ಐ.ಉ.ಭಾ. ೨–೨–೭–೫)

* ....ಅಕಾರಾದ್ಯತಿಶಾಂತಾಂತಃ ಸೋಽಯಮಷ್ಟಾಕ್ಷರೋ ಮತಃ ।
ಸ ವಿಶ್ವತೈಜಸಪ್ರಾಜ್ಞತುರೀಯಾತ್ಮಾಂತರಾತ್ಮನಾಮ್ ।
ಪರಮಾತ್ಮಜ್ಞಾನಾತ್ಮಯುಜಾಂ ಮದ್ರೂಪಾಣಾಂ ಚ ವಾಚಕಃ ॥
– ತಂ. ಸಾ. ಸಂ. ೧–೪

85. ಓಂಕಾರಕ್ಕೂ ಮೂಲಬೀಜದಂತಿರುವ ಅಕಾರವು ಅಭಾವಾರ್ಥಕವಾಗಿ ನಾರಾಯಣನಲ್ಲಿಯ ದೋಷಾಭಾವವನ್ನೂ, ಭೇದಾರ್ಥಕವಾಗಿ ಅವನ ಸರ್ವವಿಲಕ್ಷಣತ್ವವನ್ನೂ, ವಿರೋಧಾರ್ಥಕವಾಗಿ ಅವನಲ್ಲಿಯ ದೋಷವಿರುದ್ಧಗುಣರೂಪತ್ವವನ್ನೂ ಸಾರುತ್ತ, ಅವನ ಅಸಾಧಾರಣನಾಮ ಎನಿಸಿದೆ. ಇದೂ ಅವನ ಸರ್ವೋತ್ತಮಕ್ಕೆ ಸಾಧಕವಾಗಬಲ್ಲದು.[120]

86. ಬ್ರಹ್ಮಾಂಡ ಸಾರುತ್ತಿರುವಂತೆ ಸಚ್ಛಾಸ್ತ್ರಗಳ ಸಕಲವಾಕ್ಯಗಳಿಗೂ, ಯುಕ್ತಿಗಳಿಗೂ ಶ್ರೀವಿಷ್ಣುವಿನ ಉತ್ಕರ್ಷದಲ್ಲಿಯೇ ಮಹಾತಾತ್ಪರ್ಯ ಎಂದಾದರೆ,[121] ಅವನು ಸರ್ವೋತ್ಕೃಷ್ಟನು ಎಂದು ಸಿದ್ಧವಾಗುವುದು.

87. ಚತುರ್ಮುಖ-ವಾಯು-ರುದ್ರಾದಿದೇವತೆಗಳಿಗೂ, ಶ್ರೀದೇವಿಗೂ ಯಾವ ಶ್ರೀಹರಿಯಿಂದಾಗಿಯೇ 'ಜ್ಞಾನಸ್ಫೂರ್ತಿ' ಉಂಟಾಗುವುದೋ ಅಂತಹ ಎಲ್ಲರ ಪಾಲಿಗೆ ಮುಖ್ಯಾರ್ಥದಲ್ಲಿ 'ಗುರು' ಎನಿಸಿರುವ ಶ್ರೀಹರಿಗೆ ಪ್ರಣಾಮ -ಎಂಬ ಶ್ರೀಮದಾಚಾರ್ಯರ ಮಂಗಳಪದ್ಯದಿಂದ[122] ಲಕ್ಷ್ಮ್ಯಾದಿದೇವತೆಗಳಿಗೂ ಬುದ್ಧಿಯನ್ನು ನೀಡುವವನೇ ಶ್ರೀಹರಿ ಎಂದ ಮೇಲೆ ಅವನೇ ಲಕ್ಷ್ಮ್ಯಾದಿಗಳಿಗಿಂತೆಲ್ಲ ಉತ್ತಮನಾಗಿರುವವನೆಂದು ಘೋಷಿಸಿದಂತಾಗಿದೆ.

88. ನೂರುನೂರುಗುಣಧರ್ಮಗಳಿಗೆ ಸಂಬಂಧಿಸುವ ನೂರುನೂರು ಅರ್ಥಗಳಲ್ಲಿ ತೆರೆದುಕೊಳ್ಳಬಲ್ಲ[123] ವಿಷ್ಣುಸಹಸ್ರನಾಮದಿಂದ ಶ್ರೀವಿಷ್ಣು ಪ್ರತಿಪಾದ್ಯನಾಗಿ ಸಾವಿರಾರು ಗುಣಗಳನ್ನು ಹೊಂದಿರುವವನೆಂದ ಮೇಲೆ ಅವನು ಸರ್ವೋತ್ತಮನೆನಿಸಲೇಬೇಕು.

89. ಬೃಹತೀಛಂದಸ್ಸಿನ ಸಾವಿರ ಋಕ್-ಮಂತ್ರಗಳನ್ನೊಳಗೊಂಡ ವಿಶಿಷ್ಟಸ್ತೋತ್ರ ಬೃಹತೀಸಹಸ್ರ. ಮೂವತ್ತಾರು ಅಕ್ಷರಗಳನ್ನೊಳಗೊಂಡ ಬೃಹತೀಛಂದಸ್ಸಿನ ಪ್ರತಿ

---

120. ಅನ್ಯೋಽಸೌ ಸರ್ವತೋ ವಿಷ್ಣುಃ ಸ್ವಾತಂತ್ರ್ಯಾತ್ ಗುಣಪೂರ್ತಿತಃ ।
ಸರ್ವವಸ್ತುಸ್ವಭಾವಸ್ಯ ವಿರುದ್ಧೋರುಸ್ವಭಾವತಃ ॥
ಪಾರತಂತ್ರ್ಯಾಲ್ಪತಾಽಜ್ಞಾನಜನಿನಾಶಾದಿವರ್ಜಿತಃ ।
ಅಕಾರೇಣ ತತೋ ವಿಷ್ಣುಃ.......ಮತ್ತೋಽನ್ಯೋ ನ ಹಿ ಪೂರ್ಣೋಽಸ್ತಿ ಯತೋಽಕಾರಶ್ಚ ಪೂರ್ಣತಾಮ್ । ವಕ್ತಿ ತಸ್ಮಾದಕಾರೋಽಯಂ ಮಾಮೇವ ವದತಿ ಸ್ಫುಟಮ್ ॥
— *ಐ.ಉ.ಭಾ. ೨-೨-೩-೫*

121. ಮಹಾತತ್ಪರತಾ ವಿಷ್ಣೋರುತ್ಕರ್ಷೇಽವಾಂತರತಾ ತತಃ ।
ಅನ್ಯತ್ರ ಸರ್ವವಾಕ್ಯಾನಾಂ ಯುಕ್ತೀನಾಂ ಚ ವಿಶೇಷತಃ ॥
— *ಬ್ರಹ್ಮಾಂಡ (ಛಾ.ಉ.ಭಾ. ೬-೩-೧೪)*

122. ಯಸ್ಮಾದ್ ಬ್ರಹ್ಮೇಂದ್ರರುದ್ರಾದಿದೇವತಾನಾಂ ಶ್ರಿಯೋಽಪಿ ಚ ।
ಜ್ಞಾನಸ್ಫೂರ್ತಿಃ ಸದಾ ತಸ್ಮೈ ಹರಯೇ ಗುರವೇ ನಮಃ ॥ —ಈಶಾ.ಉ.ಭಾ.

123. .... ವಿಷ್ಣೋಃ ಸಹಸ್ರನಾಮಾಪಿ ನಿರಂತರಶತಾರ್ಥಕಮ್ ।
— *ಸ್ಕಾಂದ (ಋ.ಭಾ. ೧-೭೬)*

ಯೊಂದು ಮಂತ್ರದಲ್ಲಿ ಮೂವತ್ತಾರು ಸ್ವರಾಕ್ಷರಗಳೂ ಮೂವತ್ತಾರು ವ್ಯಂಜನಾಕ್ಷರಗಳೂ ಸೇರಿರುವವು. ಹೀಗೆ ಒಟ್ಟು ಬೃಹತೀಸಹಸ್ರದಲ್ಲಿ ೭೨ ಸಾವಿರ ವರ್ಣಗಳು ಸೇರಿಕೊಂಡಿವೆ. ಅವುಗಳ ೩೬ ಸಾವಿರ ವರ್ಣಗಳಿಂದ ಪ್ರತಿಪಾದ್ಯಗಳಾದ ೩೬ ಸಾವಿರ ರೂಪಗಳಿಂದ ಪ್ರತಿಯೊಬ್ಬರ ದೇಹದ ಬಲಬದಿಯ ೩೬ ಸಾವಿರ ನಾಡಿಗಳಲ್ಲಿದ್ದುಕೊಂಡೂ ಮತ್ತೆ ೩೬ ಸಾವಿರ ವರ್ಣಗಳಿಂದ ಪ್ರತಿಪಾದ್ಯಗಳಾದ ೩೬ ಸಾವಿರ ರೂಪಗಳಿಂದ ಪ್ರತಿಯೊಬ್ಬರ ದೇಹದ ಎಡಬದಿಯ ೩೬ ಸಾವಿರ ನಾಡಿಗಳಲ್ಲಿದ್ದುಕೊಂಡೂ ದೇಹವನ್ನು ಧರಿಸಿಕೊಂಡಿರುವ ಹಾಗೆಯೇ ಬೃಹತೀಸಹಸ್ರದ ೩೬ ಸಾವಿರ ವರ್ಣಗಳಿಂದ ಪ್ರತಿಪಾದ್ಯಗಳಾದ ೩೬ ಸಾವಿರ ರೂಪಗಳಿಂದ ಸೂರ್ಯನಲ್ಲಿದ್ದುಕೊಂಡು ಆಯಾ ವ್ಯಕ್ತಿಯ ನೂರು ವರ್ಷ ಆಯುಷ್ಯದ ೩೬ ಸಾವಿರ ರೂಪಗಳಿಂದ ಹಗಲುಗಳನ್ನೂ ಬೃಹತೀಸಹಸ್ರದ ಬೇರೆ ೩೬ ಸಾವಿರ ವರ್ಣಗಳಿಂದ ಪ್ರತಿಪಾದ್ಯಗಳಾದ ೩೬ ಸಾವಿರ ರೂಪಗಳಿಂದ ಸೂರ್ಯನಲ್ಲಿದ್ದುಕೊಂಡು ಆಯಾ ವ್ಯಕ್ತಿಯ ನೂರು ವರ್ಷ ಆಯುಷ್ಯದ ೩೬ ಸಾವಿರ ರಾತ್ರಿಗಳನ್ನೂ ನಿಯಂತ್ರಿಸುತ್ತಿರುವ[124] ಶ್ರೀವಿಷ್ಣುವು ಇಂತಹ ವಿಶಿಷ್ಟ ಮಹಿಮೆಯಿಂದಾಗಿ ಸರ್ವೋತ್ತಮನಾಗಿರುವನೆಂದು ಸಿದ್ಧಿಸುವುದು.

90. 'ಸ್ಕಾಂದ'ಪುರಾಣದಲ್ಲಿ ಉಲ್ಲೇಖಗೊಂಡಿರುವ ವಚನದಲ್ಲಿ ಅಚ್ಯುತ ಎಂದು ಶ್ರೀವಿಷ್ಣುವನ್ನು ಸಂಬೋಧಿಸಿ ಒಂದು ವೇಳೆ ಚತುರ್ಮುಖಾದಿಗಳ ವಿಷಯದಲ್ಲಿ ಪರಾಙ್ಮುಖನಾದ ಎಂದರೆ ಆ ಕ್ಷಣದಲ್ಲೇ ಚತುರ್ಮುಖ, ರುದ್ರ ಮುಂತಾದ ದೇವತೆಗಳೆಲ್ಲ ಶ್ವಪಚನಿಗಿಂತಲೂ ನೀಚತ್ವವನ್ನು ಹೊಂದುವರು[125] –ಎಂದು ನೀಡಿರುವ ಹೇಳಿಕೆಗನುಗುಣವಾಗಿ ಶ್ರೀವಿಷ್ಣು ಚತುರ್ಮುಖಾದಿಗಳಿಗಿಂತೆಲ್ಲ ಉತ್ತಮನಾಗಿರುವವನೆಂದು ಸಿದ್ಧಿಸುವುದು.

91. ಋಗ್ವೇದದಲ್ಲಿ ಶ್ರೀಹರಿಯು ತನ್ನ ವಾಸುದೇವಾದಿ ನಾಲ್ಕು ರೂಪಗಳಿಂದ ಕೂಡಿಕೊಂಡು ಸೋಮಪಾನಾರ್ಹರಾಗಿದ್ದು ವಿಶಿಷ್ಟರೆನಿಸಿರುವ ತೊಂಬತ್ತು ದೇವತೆಗಳನ್ನು ಚಕ್ರವನ್ನು ತಿರುಗಿಸುವಂತೆ ನಿಯಂತ್ರಿಸುತ್ತಿರುವನೆಂದು ಅವನ ಸರ್ವೋತ್ತಮತ್ವ ಘೋಷಿಸಲ್ಪಟ್ಟಿದೆ.*

92. ದೇಶಕ್ಕೆ ಸಂಬಂಧಿಸುವ ವ್ಯಾಪ್ತಿ, ಕಾಲಕ್ಕೆ ಸಂಬಂಧಿಸುವ ವ್ಯಾಪ್ತಿ ಹಾಗೂ ಗುಣಗಳಿಗೆ ಸಂಬಂಧಿಸುವ ವ್ಯಾಪ್ತಿ ಎಂಬುದಾಗಿ ಮೂರು ಬಗೆಯ ವ್ಯಾಪ್ತಿಗಳಿವೆ. ದೇಶಕ್ಕೆ ಸಂಬಂಧಿಸುವ ವ್ಯಾಪ್ತಿ ಎಂದರೆ ಎಲ್ಲೆಡೆ ಇರುವಿಕೆ; ಕಾಲಕ್ಕೆ ಸಂಬಂಧಿಸುವ ವ್ಯಾಪ್ತಿ ಎಂದರೆ ಯಾವಾಗಲೂ ಇರುವಿಕೆ –ಈ ಎರಡು ವ್ಯಾಪ್ತಿಗಳು ಆಕಾಶಾದಿಗಳಲ್ಲಿ

---

124. ಷಟ್‌ತ್ರಿಂಶತಿಸಹಸ್ರಾಣಿ ಬೃಹತ್ಯುಕ್ತಾರ್ಣಗಾನಿ ತು .... ।
   – *ಅರ್ಧನಾರೀನಾರಾಯಣತಂತ್ರೇ (ಐ.ಉ.ಭಾ. ೨-೨-೭-೫)*

125. ಶ್ವಪಚಾದಪಿ ಕಷ್ಟತ್ವಂ ಬ್ರಹ್ಮೇಶಾನಾದಯಃ ಸುರಾಃ ।
   ತದೈವಾಚ್ಯುತ ಯಾಂತ್ಯೇವ ಯದೈವ ತ್ವಂ ಪರಾಙ್ಮುಖಃ ॥
   – *ಸ್ಕಾಂದ (ಬ್ರ.ಸೂ.ಭಾ. ೧-೧-೧)*

* ಚತುರ್ಭಿಸ್ಸಾಕಂ ನವತಿಂ ಚ ನಾಮಭಿಶ್ಚಕ್ರಂ
   ನ ವೃತ್ತಂ ವ್ಯತೀಂರವೀವಿಪತ್
   –ಋ. ವೇ. ೧-೧೫೫-೬

ಇರುವವಾದರೂ, ಗುಣಪೂರ್ಣತ್ವರೂಪದ ಗುಣಗಳಿಗೆ ಸಂಬಂಧಿಸುವ ವ್ಯಾಪ್ತಿ ಶ್ರೀಹರಿಯಲ್ಲಿ ಮಾತ್ರ ಇರುವಂತಹದ್ದು. ಯಾಕೆಂದರೆ ಲಕ್ಷ್ಮಿಯೇ ಮುಂತಾದ ಉಳಿದ ಎಲ್ಲರೂ ಪರಿಪೂರ್ಣಗುಣಸಂಪನ್ನರು ಆಗಿಲ್ಲ. ಆದುದರಿಂದ ಮೂರೂ ಬಗೆಯ ವ್ಯಾಪ್ತಿಯನ್ನು ಹೊಂದಿರುವವನು ಶ್ರೀಹರಿ ಮಾತ್ರ ಎಂದು ಉದ್ಘೋಷಿಸುತ್ತಿರುವ ಪರಮಶ್ರುತಿಯಿಂದ[126] ಅಂತಹ ಶ್ರೀಹರಿಯೇ ಸರ್ವೋತ್ತಮನೆಂದು ಸಾಧಿಸಲ್ಪಟ್ಟಂತಾಗಿದೆ.

93. ಸ್ವರೂಪದಿಂದಲೇ ನಾಶಕ್ಕೊಳಗಾಗುವುದು, ದೇಹವನ್ನಷ್ಟೇ ಕಳಕೊಳ್ಳುವುದು, ದುಃಖಕ್ಕೊಳಗಾಗುವುದು ಹಾಗೂ ಅಪೂರ್ಣತೆ –ಎಂಬುದಾಗಿ ನಾಲ್ಕು ಬಗೆಯ ಅಭಾವವನ್ನು ಪರಿಚಯಿಸಿಕೊಡುವ ಮಹಾವರಾಹಾದಲ್ಲಿ, ಲಕ್ಷ್ಮೀದೇವಿಯಲ್ಲಿ ಅಪೂರ್ಣತೆ ರೂಪವಾದ ನಾಶ; ಅಮರರಾದ ದೇವತೆಗಳಲ್ಲಿ ಈ ನಾಶದ ಜೊತೆಗೆ ದುಃಖಪ್ರಾಪ್ತಿರೂಪವಾದ ನಾಶ –ಹೀಗೆ ಪ್ರತಿಯೊಬ್ಬರಲ್ಲೂ ಒಂದಲ್ಲ ಒಂದು ಬಗೆಯ ನಾಶ ಇದ್ದೇ ಇದೆಯಾದರೂ ಯಾವುದೇ ಬಗೆಯ ನಾಶ ಇಲ್ಲದವನು ಶ್ರೀಹರಿ ಮಾತ್ರ ಎಂದು ಘೋಷಿಸಲ್ಪಟ್ಟದ್ದರಿಂದ[127] ಅವನೇ ಸರ್ವೋತ್ತಮ ಎಂದು ಸಿದ್ಧವಾಗುವುದು.

94. ಸ್ಕಾಂದಪುರಾಣದಲ್ಲಿ ಪ್ರಲಯಕಾಲದ ಜಲಸಮೂಹಕ್ಕೂ ಒಂದು ಬಿಂದು ನೀರಿಗೂ ಎಷ್ಟು ಅಂತರ್ಯ ಇದೆಯೋ, ಒಂದು ಹುಲ್ಲಿಗೂ ಚತುರ್ಮುಖನಿಗೂ ಎಷ್ಟು ಆಂತರ್ಯವಿದೆಯೋ ಪ್ರಲಯದ ಬೆಂಕಿಗೂ, ಬೆಂಕಿಯ ಕಿಡಿಗೂ ಎಷ್ಟು ಆಂತರ್ಯವಿದೆಯೋ ಶ್ರೀವಿಷ್ಣು ಹಾಗೂ ಚತುರ್ಮುಖ ಇವರೊಳಗೆ ಅಷ್ಟು ಆಂತರ್ಯ ಇದೆ –ಎಂದು ತಿಳಿಸಿ, ಶ್ರೀವಿಷ್ಣು ಅನಂತನಾಗಿರುವುದರಿಂದ ಅಂತಹ ವಿಷ್ಣುವಿಗೂ ಚತುರ್ಮುಖನಿಗೂ ಇರುವ ಆಂತರ್ಯವೂ ಅನಂತವಾದುದೇ, ಆದರೂ ಮಾಹಾತ್ಮ್ಯಸೂಚನೆಗಾಗಿಯಷ್ಟೇ ಕೆಲವು ದೃಷ್ಟಾಂತಗಳನ್ನು ತೋರಿಸಿರುವುದು. ನಿಜವಾಗಿ ಶ್ರೀಹರಿಗೆ ಸದೃಶನಾದವನಾಗಲೀ, ಉತ್ತಮನಾದವನಾಗಲೀ ಎಂದೂ ಎಲ್ಲೂ ಇಲ್ಲವೇ ಇಲ್ಲ ಎಂಬ ಸತ್ಯವಾಕ್ಯದೊಂದಿಗೆ ಅಂತಹ ಶ್ರೀಹರಿಯನ್ನೇ ಪ್ರವೇಶಿಸುವೆನು –ಎಂದು ಶಪಥಪೂರ್ವಕವಾಗಿ ಶ್ರೀವಿಷ್ಣುವಿನ ಸರ್ವೋತ್ತಮತ್ವವನ್ನು ಘೋಷಿಸಲಾಗಿದೆ.[128]

---

126. ದೇಶತಃ ಕಾಲತಶ್ಚೈವ ಗುಣತಶ್ಚ ತ್ರಿಧಾ ತತಿಃ ।
ಸಾ ಸಮಸ್ತಾ ಹರೇರೇವ ನ ಹ್ಯನ್ಯೇ ಪೂರ್ಣಸದ್ಗುಣಾಃ ॥
– ಪರಮಶ್ರುತಿ (ಗೀ.ತಾ. ೨-೧೮)

127. ಅನಿತ್ಯತ್ವಂ ದೇಹಹಾನಿರ್ದುಃಖಪ್ರಾಪ್ತಿರಪೂರ್ಣತಾ ।
ನಾಶಶ್ಚತುರ್ವಿಧಃ ಪ್ರೋಕ್ತಸ್ತದಭಾವೋ ಹರೇಃ ಸದಾ ॥
ತದನ್ಯೇಷಾಂ ತು ಸರ್ವೇಷಾಂ ನಾಶಾಃ ಕೇಚಿದ್ ಭವಂತಿ ಹಿ ॥
– ಮಹಾವರಾಹ (ಗೀ.ತಾ. ೨-೧೭)

128. ಯದಂತರಂ ಪ್ರಲಯಜವಾರಿವಿಪ್ರುಷೋ-
ರ್ಯದಂತರಂ ಸ್ತಂಬಹಿರಣ್ಯಗರ್ಭಯೋಃ ।
ಸ್ಫುಲಿಂಗಸಂವರ್ತಕಯೋರ್ಯದಂತರಂ
ತದಂತರಂ ವಿಷ್ಣುಹಿರಣ್ಯಗರ್ಭಯೋಃ ॥

95. ಗೀತಾತಾತ್ಪರ್ಯದಲ್ಲಿ ಉದಾಹೃತವಾದ ಪ್ರಮಾಣವೊಂದರಲ್ಲಿ ದೇವದೇವನಾದ ಶ್ರೀವಿಷ್ಣುವಿನ ಸರ್ವೋತ್ಕರ್ಷದಲ್ಲಿ ಸರ್ವಾಗಮಗಳಿಗೂ ಮಹಾತಾತ್ಪರ್ಯ ಇರುವುದು ಕಂಡಿದೆ. ಇತರ ಪ್ರಮೇಯಗಳಲ್ಲಿ ಅವಾಂತರತಾತ್ಪರ್ಯವಷ್ಟೇ ಇರುವುದು ಕಂಡಿದೆ. ಆದುದರಿಂದ ಶ್ರೀವಿಷ್ಣುವಿನ ಸರ್ವೋತ್ಕರ್ಷದ ತಿಳಿವಳಿಕೆಯಿಂದಲೇ ಮಹಾ ಪುರುಷಾರ್ಥವಾದ ಮೋಕ್ಷವು ಸಿದ್ಧಿಸುವುದು –ಎಂಬುದಾಗಿ129 ಮೋಕ್ಷಸಾಧನಜ್ಞಾನಕ್ಕೆ ವಿಷಯವಾದದ್ದು ಶ್ರೀವಿಷ್ಣುವಿನ ಸರ್ವೋತ್ಕರ್ಷ ಎಂದು ಪ್ರತಿಪಾದಿಸುವ ಮೂಲಕ ಶ್ರೀವಿಷ್ಣು ಸರ್ವೋತ್ತಮತ್ವವನ್ನು ಸಮರ್ಥಿಸಲಾಗಿದೆ.

96. ಗೀತಾತಾತ್ಪರ್ಯದಲ್ಲಿ ಉದಾಹೃತವಾದ ಮತ್ತೊಂದು ಶ್ರುತಿಯಲ್ಲಿ ಶ್ರೀಹರಿ ಅನಂತ ಮಾಹಾತ್ಮ್ಯಗಳನ್ನೂ, ಗುಣಗಳನ್ನೂ ಹೊಂದಿರುವವನು, ನಿರ್ದುಷ್ಟನಾಗಿರುವವನು. ಅಂತಹವನಿಗೆ ಸಮಾನರಾಗಲೀ, ಅಧಿಕರಾಗಲೀ ಈಗಲೂ ಇಲ್ಲ; ಹಿಂದೆಯೂ ಇರಲಿಲ್ಲ; ಮುಂದೆಯೂ ಉಂಟಾಗುವುದಿಲ್ಲ –ಎಂದು ಘೋಷಿಸಲಾಗಿದೆ.130

97. ಜೀವರು ಮಾಡುವ ಒಳ್ಳೆಯ ಕರ್ಮಗಳಿಗೆ ಶುಭಫಲವನ್ನೂ, ಕೆಟ್ಟ ಕರ್ಮಗಳಿಗೆ ಅಶುಭಫಲವನ್ನೂ ಆಯಾ ಜೀವರು ಪಡೆಯುವಂತೆ ಸಂಯೋಜಿಸುವವನು ಶ್ರೀಹರಿಯೇ. ಅವನು ಮಾತ್ರ ಒಳ್ಳೆಯ ಅಥವಾ ಕೆಟ್ಟ ಕರ್ಮಗಳ ಫಲಗಳ ಲೇಪಕ್ಕೆ ಒಳಗಾಗುವುದಿಲ್ಲ131 –ಎಂದು ಕರ್ಮಗಳು ಫಲಿಸುವ ವಿಷಯದಲ್ಲಿ ಶ್ರೀಹರಿಯ ಪ್ರಭಾವವನ್ನು ಸಾರುತ್ತಿರುವ 'ಪೈಂಗಿಶ್ರುತಿ'ಯಿಂದ ಅವನ ಈ ಅಸಾಧಾರಣ ಮಹಿಮೆಯ ಮೂಲಕ ಸರ್ವೋತ್ತಮತ್ವವು ಸೂಚಿತವಾಗಿದೆ.

98. ಎಲ್ಲರಿಗೂ ಮುಖ್ಯ ಪ್ರೇರಕ ಶ್ರೀವಿಷ್ಣು. ಶುಭಕರ್ಮಗಳಲ್ಲಿ ಬ್ರಹ್ಮಾದಿದೇವತೆಗಳು ಅವಾಂತರಪ್ರೇರಕರಾದರೆ, ಅಶುಭಕರ್ಮಗಳಲ್ಲಿ ಅಸುರರು ಅವಾಂತರಪ್ರೇರಕರು

ಅನಂತತ್ವಾನ್ಮಹಾವಿಷ್ಣೋಸ್ತದಂತರಮನಂತಕಮ್ ।
ಮಾಹಾತ್ಮ್ಯಸೂಚನಾರ್ಥಾಯ ಹ್ಯುದಾಹರಣಮೀರಿತಮ್ ॥
ತತ್ಸಮೋಽಭ್ಯಧಿಕೋ ವಾಽಪಿ ನಾಸ್ತಿ ಕಶ್ಚಿತ್ ಕದಾಚನ ।
ಏತೇನ ಸತ್ಯವಾಕ್ಯೇನ ತಮೇವ ಪ್ರವಿಶಾಮ್ಯಹಮ್ ॥ –ಸ್ಕಾಂದ (ಗೀ.ಭಾ. ೨-೨೪)

129. ಸರ್ವೋತ್ಕರ್ಷೇ ದೇವದೇವಸ್ಯ ವಿಷ್ಣೋರ್ಮಹತ್ ತಾತ್ಪರ್ಯಂ ನೈವ ಚಾನ್ಯತ್ರ ದೃಷ್ಟಮ್ ।
ಅವಾಂತರಂ ತತ್ಪರತ್ವಂ ತದನ್ಯತ್ ಸರ್ವಾಗಮಾನಾಂ ಪುರುಷಾರ್ಥಸ್ತತೋಽತಃ ॥
– ಗೀ.ತಾ. (ಪೀಠಿಕೆಯಲ್ಲಿ)

130. ಅನಂತಗುಣಮಾಹಾತ್ಮ್ಯೋ ನಿರ್ದೋಷೋ ಭಗವಾನ್ ಹರಿಃ ।
ನ ಸಮೋ ವಾಽಧಿಕೋ ವಾಽಪಿ ವಿದ್ಯತೇ ತಸ್ಯ ಕಶ್ಚನ ॥
ನಾಽಸೀನ್ನ ಚ ಭವಿಷ್ಯೋ ವಾ ಪರತಃ ಸ್ವತ ಏವ ವಾ ॥ –ಗೀ.ತಾ. (ಪೀಠಿಕೆಯಲ್ಲಿ)

131. ಏಷ ಉ ಏವ ಶುಭಾಶುಭೈಃ ಕರ್ಮಫಲೈರೇನಂ ಸಂಯೋಜಯತಿ ನ ಸ್ವಯಂ ಸಂಯುಕ್ತೋ ಭವತಿ । ಯದೇನಂ ಕರ್ಮಫಲೈಃ ಸಂಯೋಜಯತಿ ನ ಸ್ವಯಂ ಸಂಯುಕ್ತೋ ಭವತಿ ತಸ್ಮಾದನ್ಯ ಏವಾಸೌ ಭಗವಾನ್ ವೇದಿತವ್ಯಃ ॥ –ಪೈಂಗಿಶ್ರುತಿ (ಗೀ.ತಾ. ೨-೪೭)

–ಎಂದು ಪ್ರತಿಪಾದಿಸುತ್ತಿರುವ 'ಬ್ರಹ್ಮತರ್ಕ'ದಿಂದ[132] ಸಕಲ ಪ್ರೇರಕತ್ವಪ್ರಯುಕ್ತ ಶ್ರೀವಿಷ್ಣುವಿನ ಸರ್ವೋತ್ತಮತ್ವವು ಸೂಚಿತವಾಗುವುದು.

99. ಬ್ರಹ್ಮರುದ್ರಶ್ರೀದೇವಿಶೇಷ ಮುಂತಾದ ದೇವತೆಗಳೆಲ್ಲ ಇತರರಿಗಿಂತ ಅಧಿಕ ಸಮರ್ಥರಾಗಿದ್ದು 'ಈಶ' ಎನಿಸುವರು. ಅವರೆಲ್ಲರಿಗಿಂತಲೂ ಉತ್ತಮನಾಗಿರುವುದರಿಂದ 'ಈಶ್ವರ' ಎಂಬ ಹೆಸರನ್ನು ಹೊಂದಿರುವವನು ಶ್ರೀಹರಿ ಎಂದು ತಿಳಿಸುತ್ತಿರುವ 'ಬ್ರಹ್ಮವೈವರ್ತ'ದಿಂದ ಶ್ರೀವಿಷ್ಣುವಿನ ಸರ್ವೋತ್ತಮತ್ವವು ಪ್ರತಿಪಾದಿತವಾಗಿದೆ.[133]

100. ಗೀತಾತಾತ್ಪರ್ಯದಲ್ಲಿ ಉದಾಹರಿಸಿರುವ ಪ್ರಮಾಣವೊಂದು ಯಾರು ಕೇಶವನನ್ನು ಸಕಲದೇವತೆಗಳಿಗಿಂತಲೂ ಉತ್ತಮನಾಗಿರುವನೆಂದು ಯಾರು ತಿಳಿದಿರುವುದಿಲ್ಲವೋ ಅವನ ಪುಣ್ಯವೆಲ್ಲ ವ್ಯರ್ಥ –ಎಂದು ಪ್ರತಿಪಾದಿಸುವ ಮೂಲಕ ಶ್ರೀಕೇಶವ ಸರ್ವೋತ್ತಮ ಎಂದು ಸಾಧಿಸಿದೆ.[134]

101. ಮಹಾವಿಷ್ಣುಪುರಾಣ ಪ್ರಸ್ತುತಪಡಿಸುವ ಶ್ರೀವಿಷ್ಣುವಿಷಯಕವಾದ ಮೋಕ್ಷಫಲಕವಾದ ಶರಣಾಗತಿಯ ಅಂಗವಾಗಿ ಶ್ರೀವಿಷ್ಣುವಿನ ಸರ್ವೋತ್ತಮತ್ವದ ತಿಳಿವಳಿಕೆಯೊಂದಿಗೆ ಅವನಲ್ಲಿ ಸರ್ವಾಧಿಕಪ್ರೇಮದಿಂದ ಕೂಡಿದ ಮನಸ್ಸನ್ನು ತೊಡಗಿಸಬೇಕಾದರೆ[135] ಅವನು ಸರ್ವೋತ್ತಮನಾಗಿರಲೇಬೇಕು ತಾನೇ?

* * *

ಅವನು ಸ್ವಾಮಿ; ನಾನು ದಾಸ

ಆಂತರವೈಷ್ಣವದೀಕ್ಷೆಯ ಕೇಂದ್ರಬಿಂದು– ಸರ್ವೋತ್ಕೃಷ್ಟೋಽಯಮೇವೈಕೋ.............. ಶ್ರೀವಿಷ್ಣುವೇ ಸರ್ವೋತ್ತಮನಾಗಿರುವವನು– ಎಂಬ ಚಿಂತನೆಯನ್ನು ನೂರಾರು ಪ್ರಮಾಣಗಳಿಂದ, ಮಾತುಗಳಿಂದ, ಯುಕ್ತಿಗಳಿಂದ ದೃಢಪಡಿಸಿಕೊಂಡಾಗ ಅಂತಹ ಸರ್ವೋತ್ತಮತ್ವದಿಂದ ಸಂಪನ್ನನಾದ ಅವನಲ್ಲಿ ಅಸಾಧಾರಣವಾದ ಗೌರವಬುದ್ಧಿ ಉಂಟಾಗುವುದು. ಇದರ

---

132. ಅಖಿಲಪ್ರೇರಕೋ ವಿಷ್ಣುರ್ಬ್ರಹ್ಮಾದ್ಯಾಸ್ತದವಾಂತರಾಃ ।
ಅಸುರಾ ಅಶುಭೇಷ್ವೇವ ಕಾಮಾದೇರಭಿಮಾನಿನಃ ॥ –ಬ್ರಹ್ಮತರ್ಕ (ಗೀ.ತಾ. ೩–೩೭)

133. ಈಶೇಭ್ಯೋ ಬ್ರಹ್ಮರುದ್ರಶ್ರೀಶೇಷಾದಿಭ್ಯೋ ಯತೋ ಭವಾನ್ ।
ಪರೋಽತ ಈಶ್ವರಾಖ್ಯಾ ತೇ ಮುಖ್ಯಾ ನಾನ್ಯತ್ರ ಕಸ್ಯಚಿತ್ ॥
– ಬ್ರಹ್ಮವೈವರ್ತ (ಗೀ.ಭಾ. ೪–೬)

134. ಸರ್ವದೇವವರತ್ವೇನ ಯೋ ನ ಜಾನಾತಿ ಕೇಶವಮ್ ।
ತಸ್ಯ ಪುಣ್ಯಾನಿ ಮೋಘಾನಿ ಯಾತಿ ಚಾಂಧಂ ತಮೋ ಧ್ರುವಮ್ ॥
– ಗೀ.ತಾ. ೯–೨೩

135. ಸರ್ವೋತ್ತಮತ್ವವಿಜ್ಞಾನಪೂರ್ವಂ ತತ್ರ ಮನಃ ಸದಾ ।
ಸರ್ವಾಧಿಕಪ್ರೇಮಯುಕ್ತಂ........ ಶರಣಾಗತಿರೇಷಾ ಸ್ಯಾದ್ ವಿಷ್ಣೌ ಮೋಕ್ಷಫಲಪ್ರದಾ ।
– ಮಹಾವಿಷ್ಣುಪುರಾಣ (ಗೀ.ತಾ. ೧೮–೬೬)

ಜೊತೆಗೆ ಅವನ ಬಗ್ಗೆ ಪ್ರೀತಿಯೂ ಉಂಟಾಗಬೇಕು. ಆತ್ಮೀಯತೆಯಿಂದಷ್ಟೇ ಪ್ರೀತಿ ಉಂಟಾಗಲು ಸಾಧ್ಯ. ಅಂದರೆ ಶ್ರೀವಿಷ್ಣು ಎಷ್ಟೇ ಎತ್ತರದ ವ್ಯಕ್ತಿತ್ವವನ್ನೊಳಗೊಂಡಿದ್ದರೂ, ಅವನಿಂದ ನಮಗೆ ಏನಾದರೂ ನಂಟು ಇದ್ದರಷ್ಟೇ ನಾವು ಅವನ ಬಗ್ಗೆ ಗಮನ ಹರಿಸುವೆವು; ಅವನನ್ನು ಪ್ರೀತಿಸುವೆವು. ಆದುದರಿಂದ ಅವನಿಗೂ ನಮಗೂ ಇರುವ ನಂಟನ್ನು ವಿಶ್ಲೇಷಿಸಿಕೊಂಡು ಅವನ ಕುರಿತು ಆತ್ಮೀಯತೆಯನ್ನೂ, ಪ್ರೀತಿಯನ್ನೂ ಹೆಚ್ಚಿಸಿಕೊಳ್ಳಬೇಕು. ಗೌರವಬುದ್ಧಿಯ ಜೊತೆಗೆ ಬೆರೆಯುವ ಪ್ರೀತಿ ಭಕ್ತಿಯಾಗಿ ಮಾರ್ಪಡುವುದು. ಅಂತಹ ಭಕ್ತಿಯ ಪಾಶದಿಂದಲೇ ಹೃದಯದಲ್ಲಿ ಅವನನ್ನು ಸ್ಥಾಪನೆಗೊಳಿಸಬಹುದು. ಇದರಿಂದಾಗಿ ಅವನ ಬಗೆಗಿನ ದೀಕ್ಷೆ, ನಿಷ್ಠೆ ಸುದೃಢಗೊಳ್ಳುವುದು.

ಶ್ರೀವಿಷ್ಣು ಸರ್ವೋತ್ತಮನೆನಿಸಲು ಲಕ್ಷ್ಮೀದೇವಿಯಿಂದ ಪ್ರಾರಂಭಿಸಿ ಪ್ರತಿಯೊಬ್ಬರಿಗೂ ಸಂಬಂಧಿಸಿದ ಸೃಷ್ಟಿಯೇ ಮುಂತಾದ ಪ್ರತಿಯೊಂದು ಚಟುವಟಿಕೆಯನ್ನೂ ನಿರ್ವಹಿಸುತ್ತಿರುವನೆಂಬುದು ಹೇಗೆ ಒಂದು ನಿಮಿತ್ತವವೋ ಹಾಗೆಯೇ ಪ್ರತಿಯೊಬ್ಬರಿಗೂ ತಾಯಿ, ತಂದೆ, ಗುರು –ಹೀಗೆ ಪ್ರತಿಯೊಂದು ಬಂಧು ಆಗಿಯೂ ಉಪಕರಿಸುತ್ತಿದ್ದಾನೆಂಬುದು ಮತ್ತೊಂದು ನಿಮಿತ್ತ. ಹೀಗೆ ಶ್ರೀವಿಷ್ಣು ಎಲ್ಲರ ಪಾಲಿಗೆ ಎಲ್ಲ ಬಗೆಯ ಬಂಧುವೂ ಆಗಿರುವನಾದರೂ ಎಲ್ಲರಿಗೂ ಸ್ವಾಮಿ ಆಗಿ ನಿಯಮಿಸುತ್ತಿದ್ದಾನೆ; ಅನುಗ್ರಹಿಸುತ್ತಿದ್ದಾನೆ –ಎಂಬುದಕ್ಕೆ ಶಾಸ್ತ್ರದಲ್ಲಿ ತುಂಬ ಪ್ರಾಶಸ್ತ್ಯ ನೀಡಲಾಗಿದೆ. ಶಾರೀರಿಕ ರೋಗಗಳಿಗೆ, ಮಾನಸಿಕವ್ಯಥೆಗಳಿಗೆ ಬಲಿಯಾಗಿ ಶ್ರೀಹರಿಯ ಬಗ್ಗೆ ಏನನ್ನೂ ಚಿಂತನೆ ನಡೆಸಲು ಆಗದ ದುಃಸ್ಥಿತಿಯಲ್ಲೂ, 'ಅವನು ನನಗೆ ಸ್ವಾಮಿ' –ಎಂಬ ಚಿಂತನೆಯನ್ನು ಮಾತ್ರ ಎಂದೆಂದಿಗೂ ಕೈಬಿಡಬಾರದೆಂದು ಎಚ್ಚರಿಸಲಾಗಿದೆ.136 ಮುಕ್ತಿಯನ್ನು ಬಯಸುವ ಪ್ರತಿಯೊಬ್ಬರೂ ನಡೆಸಲೇಬೇಕೆಂದು ವಿಧಿಸಲಾದ ಶ್ರೀಹರಿಯ ನಾಲ್ಕು ಗುಣಗಳ ಉಪಾಸನೆಯಲ್ಲಿ ಸ್ವಾಮಿತ್ವದ ಉಪಾಸನೆಯನ್ನೂ ಸೇರಿಸಲಾಗಿದೆ.137 ಆತ್ಮಶಬ್ದದಿಂದ ಅವನ ಸ್ವಾಮಿತ್ವದ ಉಪಾಸನೆಯನ್ನು ನಡೆಸಲು ತಿಳಿಸಲಾಗಿದೆ.138

ಶ್ರೀಹರಿ ನಮಗೆ ತಾಯಿಯಾಗಿ, ತಂದೆಯಾಗಿ, ಸಹೋದರನಾಗಿ, ಬಂಧುವಾಗಿ –ಉಪಕರಿಸುತ್ತಿರುವನೆಂಬ ಅನುಸಂಧಾನ ನಡೆಸುವಾಗಲೂ ಅವನು ಎಲ್ಲರಿಗೆ ಸ್ವಾಮಿ ಆಗಿರುವುದರಿಂದಲೇ ತನ್ನ ಸ್ವಾಮ್ಯಕ್ಕೆ ಒಳಪಟ್ಟ ಆಯಾ ವ್ಯಕ್ತಿಗಳನ್ನು ಮಾಧ್ಯಮರನ್ನಾಗಿಸಿಕೊಂಡು ಪಿತೃತ್ವಾದಿಬಾಂಧವ್ಯ ವ್ಯಕ್ತಪಡಿಸುವನೆಂದು ಪಿತೃತ್ವಾದಿಬಾಂಧವ್ಯದ ಅನು–

---

136. ಆತ್ಮೇತ್ಯುಪಾಸನಂ ಕಾರ್ಯಂ ಸರ್ವಥೈವ ಮುಮುಕ್ಷುಭಿಃ ।
ನಾನಾಕ್ಲೇಶಸಮಾಯುಕ್ತೋಽಪ್ಯೇತಾವನ್ನೈವ ವಿಸ್ಮರೇತ್ ॥
– ಭವಿಷ್ಯತ್‌ಪರ್ವ (ಬ್ರ.ಸೂ.ಭಾ. ೪–೩)

137. ಸಚ್ಚಿದಾನಂದ ಆತ್ಮೇತಿ ಬ್ರಹ್ಮೋಪಾಸಾ ವಿನಿಶ್ಚಿತಾ ।
ಸರ್ವೇಷಾಂ ಚ ಮುಮುಕ್ಷೂಣಾಂ ಫಲಸಾಮ್ಯಾದಪೇಕ್ಷಿತಾ ॥
– ಬ್ರ.ಸೂ.ಭಾ. ೩–೩–೧೨

138. ಮಮ ಸ್ವಾಮೀ ಹರಿರ್ನಿತ್ಯಂ ಸರ್ವಸ್ಯ ಪತಿರೇವ ಚ ।
ಇತಿ ಧ್ಯೇಯಃ ಸದೈವ ಭಗವಾನ್ ವಿಷ್ಣುರವ್ಯಯಃ ॥ *–ಅನು. ೪–೧–೧೬*

ಸಂಧಾನದ ಜೊತೆಗೂ ಸ್ವಾಮಿತ್ವದ ಅನುಸಂಧಾನ ಬೇಕೇ ಬೇಕು. ಆದರೆ ಶ್ರೀಹರಿ ಎಲ್ಲರಿಗೂ ನನಗೂ ಸ್ವಾಮಿ ಆಗಿರುವುದರಿಂದಲೇ ನನ್ನ ಪಾಲಿಗೆ ತಂದೆಯೂ, ತಾಯಿಯೂ, ಗುರುವೂ, ಸಹೋದರನೂ ಆಗಿ ಉಪಕರಿಸುತ್ತಿರುವನು ಎಂದು ಭಾವಿಸಿಕೊಳ್ಳಬೇಕು.

ಹೀಗೆ ಶ್ರೀಹರಿ ಲಕ್ಷ್ಮೀದೇವಿಯಿಂದ ಸಹಿತವಾದ ಸಮಸ್ತ ಪ್ರಪಂಚಕ್ಕೂ ಬೇರೆಬೇರೆ ಬಗೆಯ ಬಂಧುತ್ವದ ಜೊತೆಗೆ, ಅಂತಹ ಬಂಧುತ್ವಕ್ಕೆ ಅಡಿಗಲ್ಲಿನಂತೆ ಸ್ವಾಮಿತ್ವವನ್ನೂ ಹೊಂದಿರುವನು. ಸಮಸ್ತ ಪ್ರಪಂಚಕ್ಕೆ ಸ್ವಾಮಿ ಎಂದಮೇಲೆ ಪ್ರಪಂಚದಲ್ಲಿ ಘಟಕನಾದ ನನಗೂ ಸ್ವಾಮಿ ಎಂದು ಸಮಷ್ಟಿಚಿಂತನೆಯಿಂದ ವ್ಯಷ್ಟಿಚಿಂತನೆ ಸಾಗಬೇಕು.

'ನಾನು' ಎನಿಸುವುದರಲ್ಲಿ ಏನೇನು ಸೇರಿಕೊಂಡಿದೆ ಎಂಬುದನ್ನು ವಿವೇಚಿಸಿಕೊಂಡು, ಅದರ ಘಟಕವಾದ ಪ್ರತಿಯೊಂದಕ್ಕೂ ಸ್ವಾಮಿಯಾಗಿರುವುದರಿಂದಲೇ ಶ್ರೀಹರಿ 'ಸ ಮೇ ಪತಿಃ' 'ನನಗೆ ಒಡೆಯ' ಎಂದು ಗುರುತಿಸಿಕೊಳ್ಳಲು ಅರ್ಹನೆನಿಸುವನೆಂದು ದೃಢಪಡಿಸಿ ಕೊಳ್ಳಬೇಕು.

ಮುಖ್ಯವಾಗಿ ಜೀವಸ್ವರೂಪ ನಾನು ಎನಿಸಿದರೆ, ಅದಕ್ಕೆ ಸಂಬಂಧಪಟ್ಟಂತೆ ಇರುವ ಪಾಂಚಭೌತಿಕದೇಹ, ಅದರ ನಿರ್ಮಾಣದಲ್ಲಿ ಪಾತ್ರ ವಹಿಸುವ ಪ್ರಕೃತಿತತ್ವವೇ ಮುಂತಾದ ಇಪ್ಪತ್ತನಾಲ್ಕು ತತ್ತ್ವಗಳು, ಅವುಗಳ ಅಭಿಮಾನಿದೇವತೆಗಳು –ಇವರೆಲ್ಲ ನಾನು ಶಬ್ದಾರ್ಥದ ವ್ಯಾಪ್ತಿಯಲ್ಲಿಯೇ ಸೇರಿಕೊಳ್ಳುವರು. ಆದುದರಿಂದ 'ನನಗೆ ಸ್ವಾಮಿ' ಎಂದು ಭಾವಿಸುವಾಗ, ನನ್ನ ಸ್ವರೂಪಕ್ಕೆ ದೇಹಗಳಿಗೆ, ಇಂದ್ರಿಯಗಳಿಗೆ, ತತ್ವಗಳಿಗೆ, ತತ್ವಾಭಿಮಾನಿ ಗಳಿಗೆ –ಇವೆಲ್ಲವುಗಳಿಗೆ ಸ್ವಾಮಿಯಾಗಿರುವವನು ಶ್ರೀಹರಿ ಎಂಬ ಅನುಸಂಧಾನವನ್ನೇ ತಂದುಕೊಳ್ಳಬೇಕು. ಅವೆಲ್ಲವುಗಳಿಗೆ ಸಂಬಂಧಪಡುವ ಸ್ವಾಮಿತ್ವದ ಬೇರೆ ಬೇರೆ ರೂಪ ಹಾಗೂ ಅವುಗಳಿಗೆ ಪ್ರಯೋಜಕಗಳಾಗುವ ಗುಣಧರ್ಮಗಳು ಇವೆಲ್ಲವನ್ನೂ ವಿಶ್ಲೇಷಿಸಿ ಕೊಳ್ಳಬೇಕು.

ಹೀಗೆ ಶ್ರೀಹರಿ ನನಗೆ ಸ್ವಾಮಿ ಎಂಬ ಅನುಸಂಧಾನವನ್ನು ದೃಢಪಡಿಸಿಕೊಳ್ಳುತ್ತಿರು ವಂತೆಯೇ ನಾನು ಅವನಿಗೆ ಸೇರಿರುವವನು; ಅವನ ದಾಸ –ಎಂಬ ಅನುಸಂಧಾನವನ್ನೂ ನಮ್ಮಲ್ಲಿಯ ದಾಸ್ಯಕ್ಕೆ ಪ್ರಯೋಜಕಗಳಾದ ಗುಣಧರ್ಮಗಳ ವಿಶ್ಲೇಷಣೆಯಿಂದ ದೃಢ ಪಡಿಸಿಕೊಳ್ಳುತ್ತಿರಬೇಕು. **'ತದೀಯೋಽಹಂ'** –ನಾನು ಅವನಿಗೆ ಸೇರಿದವನೆಂಬ ಭಾವನೆ ಯಲ್ಲಿ ಅವನ ಕುರಿತಾದ ದಾಸ್ಯದಂತೆ, ಅವನಲ್ಲಿ ತನ್ನನ್ನು ಪೂರ್ಣವಾಗಿ ಅರ್ಪಿಸಿ ಕೊಂಡಿರುವ 'ಆತ್ಮನಿವೇದನೆ'ಯ ಧ್ವನಿಯೂ ಬೆರೆತುಕೊಂಡಿರುವುದು.

'ತದೀಯೋಽಹಂ ಸ ಮೇ ಪತಿಃ' –ನಾನು ಅವನಿಗೆ ಸೇರಿದವನು; ಅವನು ನನ್ನ ಒಡೆಯ– ಈ ಎರಡು ಅಂಶಗಳು ಪರಸ್ಪರ ಸಾಪೇಕ್ಷಗಳಾದರೂ ಪ್ರತ್ಯೇಕವಾಗಿ ಅವುಗಳ ಆಳ ಮತ್ತು ವೈಶಾಲ್ಯವನ್ನು ಅನುಸಂಧಾನಕ್ಕೆ ತಂದುಕೊಂಡಾಗಷ್ಟೇ ಅವನಿಗೂ ನಮಗೂ ಇರುವ ಸ್ವಾಮಿ–ದಾಸಭಾವಸಂಬಂಧದ ಅನುಸಂಧಾನ ದೃಢವಾಗುತ್ತ ಹೋಗಲು ಸಾಧ್ಯ –ಎಂಬ ದೃಷ್ಟಿಯಿಂದಲೇ ಆ ಎರಡು ಅಂಶಗಳನ್ನು ಬೇರೆಬೇರೆಯಾಗಿಯೇ ಉಲ್ಲೇಖಿಸ ಲಾಗಿದೆ.

'ವೃದ್ಧಹಾರೀತಸ್ಮೃತಿ'ಯಲ್ಲಿ ಪರಮಾತ್ಮಜೀವಾತ್ಮರ ಸ್ವಾಮಿದಾಸಭಾವದ ಬಗ್ಗೆ ಇನ್ನಷ್ಟು ಬೆಳಕನ್ನು ಚೆಲ್ಲಲಾಗಿದೆ–

ಯಾವಾಗಲೂ ಶ್ರೀಹರಿಗೆ ದಾಸರಾಗಿರುವುದು ಎಲ್ಲರ ಸ್ವಾಭಾವಿಕಧರ್ಮ.139 ಎಲ್ಲದರ ಬಗ್ಗೆ ಒಡೆತನ ಹೇಗೆ ಶ್ರೀಹರಿಯ ಸ್ವರೂಪಾತ್ಮಕಧರ್ಮವೋ ಅಂತೆಯೇ ಯಾವಾಗಲೂ ಶ್ರೀಹರಿಯ ದಾಸ್ಯ ಜೀವರ ಸ್ವರೂಪಾತ್ಮಕಧರ್ಮ. ಆದುದರಿಂದ ಶ್ರೀಹರಿಯ ಕುರಿತಾದ ದಾಸ್ಯ ಜೀವರ ಪಾಲಿಗೆ ಶ್ರೇಷ್ಠವಾದ ಧರ್ಮ. ಪರಮ ಹಿತಕರವಾದುದು. ಅಂತಹ ದಾಸ್ಯದ ಅನುಸಂಧಾನದಿಂದಲೇ ಮುಕ್ತಿ ಲಭ್ಯ. ಅವನ ದಾಸ್ಯವನ್ನು ಅನುಸಂಧಾನಕ್ಕೆ ತಂದುಕೊಳ್ಳದ ವ್ಯಕ್ತಿಗಳಿಗೆ ನರಕಭಯ ತಪ್ಪಿದ್ದಲ್ಲ.

ಆದುದರಿಂದ ಭಗವಂತನ ದಾಸ್ಯವನ್ನು ವಿಶ್ಲೇಷಿಸಿಕೊಂಡು, ಅದರ ಹಿನ್ನೆಲೆಯಲ್ಲಿ ಅವನ ಬಗ್ಗೆ ಶ್ರೇಷ್ಠಭಕ್ತಿಯನ್ನು ಅಳವಡಿಸಿಕೊಂಡು ಅವನ ಪ್ರೀತಿಗಾಗಿ ನಿತ್ಯಕರ್ಮಗಳನ್ನೂ, ನೈಮಿತ್ತಿಕಕರ್ಮಗಳನ್ನೂ ಮಾಡಬೇಕು. ಶಂಖಚಕ್ರಗಳ, ಊರ್ಧ್ವಪುಂಡ್ರಗಳ ಧಾರಣೆ ಹಾಗೂ ಶ್ರೀವಿಷ್ಣುವಿಗೆ ಸಂಬಂಧಿಸುವ ಹೆಸರುಗಳನ್ನಿಟ್ಟುಕೊಳ್ಳುವುದು ಅವನ ದಾಸ್ಯದ ಲಕ್ಷಣ ಎನಿಸಿದೆ.

ಇಷ್ಟಸಾಧಕ – ಅನಿಷ್ಟನಿವಾರಕ

ಶ್ರೀಹರಿ ಸರ್ವೋತ್ತಮ ಎನಿಸುವಷ್ಟೂ ಎತ್ತರ ವ್ಯಕ್ತಿತ್ವದವನು. ಅಂತಹವನ ಒಡೆತನ ದಲ್ಲಿ ಸಮಸ್ತ ಪ್ರಪಂಚ ಇರುವಂತೆ ನಾನೂ ಸೇರಿಕೊಂಡಿರುವೆನು. ಅವನ ದಾಸನಾಗಿರು ವೆನು. ಇದರಿಂದಾಗಿ ಅವನ ಬಗ್ಗೆ ದೀಕ್ಷೆ, ನಿಷ್ಠೆ ಉಂಟಾಗುವುದು.

ಆ ದೀಕ್ಷೆ ದೃಢವಾಗಬೇಕೆಂದರೆ ನಾನು ನಿವೇದಿಸಿಕೊಂಡಿರುವ ದಾಸ್ಯವನ್ನು ಅವನು ಎಷ್ಟರಮಟ್ಟಿಗೆ ಪರಿಗಣಿಸಿರುವನೆಂಬುದು ನಿಶ್ಚಿತವಾಗಬೇಕು. ಈ ಬಗೆಯ ನಿಶ್ಚಯವನ್ನು ತಂದುಕೊಳ್ಳುವುದಕ್ಕಾಗಿಯೇ ಅವನಿಂದ ಅನುಗೃಹೀತಗಳಾಗುತ್ತಿರುವ ಮತ್ತೆರಡು ಅಂಶ ಗಳನ್ನು ವಿಶ್ಲೇಷಿಸಿಕೊಳ್ಳಬೇಕು– 'ಅಯಂ ಸರ್ವೇಷ್ಟದಾತಾ ಮೇ ಸರ್ವಾರಿಷ್ಟನಿವಾರಕಃ'–

---

139. ನೈಸರ್ಗಿಕಂ ಹಿ ಸರ್ವೇಷಾಂ ದಾಸ್ಯಮೇವ ಹರೇಃ ಸದಾ ।
ಸ್ವಾಮ್ಯಂ ಪರಸ್ವರೂಪಂ ಸ್ಯಾದ್ ದಾಸ್ಯಂ ಜೀವಸ್ಯ ಸರ್ವದಾ ॥
ಪ್ರಕೃತ್ಯಾ ತ್ವಾತ್ಮನೋ ರೂಪಂ ಸ್ವಾಮ್ಯಂ ದಾಸ್ಯಮಿತಿ ಸ್ಥಿತಿಃ ।
ದಾಸ್ಯಮೇವ ಪರಂ ಧರ್ಮಂ ದಾಸ್ಯಮೇವ ಪರಂ ಹಿತಮ್ ॥
ದಾಸ್ಯೇನೈವ ಭವೇನ್ಮುಕ್ತಿರನ್ಯಥಾ ನಿರಯಂ ಭವೇತ್ ।
....
ತಸ್ಮಾದ್ ದಾಸ್ಯಂ ಪರಾಂ ಭಕ್ತಿಮಾಲಂಬ್ಯ ನೃಪಸತ್ತಮ ॥
ನಿತ್ಯಂ ನೈಮಿತ್ತಿಕಂ ಸರ್ವಂ ಕುರ್ಯಾತ್ ಪ್ರೀತ್ಯೈ ಹರೇಃ ಸದಾ ।
....
ಶಂಖಚಕ್ರೋರ್ಧ್ವಪುಂಡ್ರಾದಿಧಾರಣಂ ದಾಸ್ಯಲಕ್ಷಣಮ್ ॥
ತನ್ನಾಮಕರಣಂ ಚೈವ ವೈಷ್ಣವಂ ತದಿಹೋಚ್ಯತೇ ॥ –ವೃದ್ಧಹಾರೀತಸ್ಮೃತಿ ೧–೧೭–೨೪

ನನ್ನ ಎಲ್ಲ ಬಗೆಯ ಇಷ್ಟಗಳನ್ನೂ ಪೂರೈಸುವವನೂ ಅವನೇ. ಹಾಗೆಯೇ ನನ್ನ ಎಲ್ಲ ಅನಿಷ್ಟಗಳನ್ನೂ ದೂರಮಾಡುವವನೂ ಅವನೇ. ನನ್ನ ಕೈಂಕರ್ಯವನ್ನು ಪೂರ್ಣವಾಗಿ ಒಪ್ಪಿಕೊಂಡು, ಅದಕ್ಕೆ ಸ್ಪಂದಿಸುತ್ತ ಕಿಂಕರನಾದ ನನ್ನ ವ್ಯಕ್ತಿತ್ವಕ್ಕೆ ಸ್ವಭಾವಕ್ಕೆ ಒಗ್ಗುವಂತಹ ಬೇಕು–ಬೇಡಗಳನ್ನೆಲ್ಲ ಅರಿತು ಅವೆಲ್ಲವನ್ನೂ ಪೂರೈಸುವ ಸಮರ್ಥ ಹಾಗೂ ದಯಾ–ಮಯ ಸ್ವಾಮಿಯಾಗಿರುವವನು ಅವನು.

ದಾಸನೊಬ್ಬನ ಸಕಲೇಷ್ಟಗಳನ್ನೂ ಪೂರೈಸಬೇಕೆಂದರೆ, ಸಕಲಾನಿಷ್ಟಗಳನ್ನೂ ಪರಿ–ಹರಿಸಬೇಕೆಂದರೆ ಸ್ವಾಮಿಯಾದವನಲ್ಲಿ ಮುಖ್ಯವಾಗಿ ಮೂರು ಗುಣಗಳು ಇರಬೇಕಾಗುವವು. ಸೇವಕನ ಸ್ವಭಾವಕ್ಕೆ ಒಗ್ಗುವಂತೆ ಅವನ ಬೇಕುಬೇಡಗಳನ್ನು ಚೆನ್ನಾಗಿ ಅರ್ಥೈಸಿಕೊಳ್ಳುವ ಪ್ರಜ್ಞೆ ಸ್ವಾಮಿಯಲ್ಲಿ ಮೊತ್ತಮೊದಲನೆಯದಾಗಿ ಇರಬೇಕು. ಆ ಬೇಕುಬೇಡಗಳನ್ನು ಈಡೇರಿಸಲು ಬೇಕಾದ ಸಾಮರ್ಥ್ಯ ಅವನಲ್ಲಿ ಇರಬೇಕು. ದಾಸನ ಬೇಕುಬೇಡಗಳನ್ನು ಆದಷ್ಟು ಬೇಗ ಈಡೇರಿಸಬೇಕು –ಎಂಬ ಕಳಕಳಿ ಸ್ವಾಮಿಯಲ್ಲಿ ಇರಬೇಕು.

ಶ್ರೀಹರಿಯಲ್ಲಿ ಈ ಮೂರೂ ಗುಣಗಳು ಪೂರ್ಣಪ್ರಮಾಣದಲ್ಲಿಯೇ ಇವೆ. ಶ್ರೀವಿಷ್ಣುವಿನ 'ಕಾಮಮಯ' –ಎಂದೇ ಗುರುತಿಸಲ್ಪಡುವ ಜೀವನ ಇಚ್ಛೆ ಭಗವದಿಚ್ಛಾ–ನುಸಾರವಾಗಿಯೇ ಇರುವುದು. ಅಂತಹ ಇಚ್ಛೆಗನುಗುಣವಾಗಿ ನಿಷ್ಠೆ ಉಂಟಾಗುವುದು. ನಿಷ್ಠೆಗನುಸಾರವಾಗಿ ಕರ್ಮ ಮಾಡುವನು. ಕರ್ಮಾನುಸಾರವಾಗಿ ಫಲ140 ದೊರಕುವುದು. ಅಂದ ಮೇಲೆ ಇಷ್ಟಗಳನ್ನು ಗುರುತಿಸಿಕೊಳ್ಳುವ ಪ್ರಜ್ಞೆ ಭಗವಂತನಲ್ಲಿದೆ ಎಂದು ಸಿದ್ಧಿಸುವುದು. ಅಲ್ಲದೆ, ತನ್ನ ಬಗ್ಗೆ ಹಾಗೂ ಇತರರ ಬಗ್ಗೆ ಸಮಸ್ತ ಧರ್ಮಗಳನ್ನೂ ಗೋಚರಿಸುವ ಜ್ಞಾನ ಎಂದು ಶಾಸ್ತ್ರದಲ್ಲಿ ಪ್ರತಿಪಾದಿತವಾದ ಜ್ಞಾನವನ್ನು* ಹೊಂದಿ ಸರ್ವಜ್ಞತಮ ಎಂದು ಪ್ರಸಿದ್ಧನಾಗಿರುವ ಶ್ರೀಹರಿ ತನ್ನ ಭಕ್ತನಾದ ನನ್ನ ಬೇಕುಬೇಡ–ಗಳಾವುವು? ಅವುಗಳಲ್ಲಿ ನನ್ನ ಸ್ವಭಾವಕ್ಕೆ ಒಗ್ಗುವವು ಯಾವುವು? ನನ್ನ ವ್ಯಕ್ತಿತ್ವಕ್ಕೆ ಮಾರಕಗಳಾಗುವವು ಯಾವುವು? –ಎಂಬುದನ್ನು ಕರಾರುವಾಕ್ಕಾಗಿ ಬಲ್ಲವನಾಗಿರಬೇಕು.

'ಕರ್ತುಂ–ಅಕರ್ತುಂ–ಅನ್ಯಥಾಕರ್ತುಂ ಚ ಸಮರ್ಥಃ' ಇತರರು ಯಾರೂ ಮಾಡಲು ಅಸಾಧ್ಯವಾದ ಕರ್ಮವನ್ನು ಮಾಡಲೂ, ಇತರರೆಲ್ಲರಿಂದಲೂ ಅನಿವಾರ್ಯವಾಗಿ ಮಾಡಲೇಬೇಕಾದ ಕರ್ಮವನ್ನು ಮಾಡದಿರಲೂ, ಇತರರೆಲ್ಲರ ಮೂಲಕ ಒಂದು ಕ್ರಮದಿಂದ ಮಾಡಲ್ಪಡಬೇಕಾದದ್ದನ್ನು ಮತ್ತೊಂದು ಕ್ರಮದಿಂದ ಮಾಡುವುದಕ್ಕೂ ಸಮರ್ಥನಾಗಿರುವವನು ಎಂಬುದಾಗಿ ಸಮಗ್ರಸಾಮರ್ಥ್ಯಸಂಪನ್ನನಾಗಿ ಶಾಸ್ತ್ರದಲ್ಲಿ ಪ್ರತಿಪಾದ್ಯನಾಗಿರುವ ಶ್ರೀಹರಿಗೆ ನನ್ನ ಎಂತಹ ಇಷ್ಟವಾದರೂ ಅದನ್ನು ಈಡೇರಿಸುವ, ಎಂತಹ ಅನಿಷ್ಟವಾದರೂ ಅದನ್ನು ದೂರಮಾಡುವ ಸಾಮರ್ಥ್ಯ ಇರದಿರಲು ಸಾಧ್ಯವೇ ಇಲ್ಲ.

---

140. ತತ್ಕಾಮಾದಸ್ಯ ಕಾಮಃ ಸ್ಯಾದ್ ಯಥಾಕಾಮಸ್ತಥಾ ಭವೇತ್ ।
ಕಾಮಾನುಸಾರಿಣೀ ನಿಷ್ಠಾ ಕರ್ಮನಿಷ್ಠಾನುಸಾರತಃ ॥
ಫಲಂ ಕರ್ಮಾನುಸಾರೇಣ ವಿಷ್ಣೋಃ ಕಾಮಮಯಸ್ತತಃ ।
ಜೀವೋಽಯಂ ಸರ್ವದೈವ ಸ್ಯಾನ್ನಾನ್ಯಥಾ ತು ಕಥಂಚನ ॥ –ಬೃ.ಉ.ಭಾ. ೩–೪–೩

* ಪೂರ್ಣಂ (ಈಶಜ್ಞಾನಂ) ಸ್ವಪರಗತಾಖಿಲವಿಶೇಷವಿಷಯಮ್ । –ಪ್ರಮಾಣಲಕ್ಷಣಮ್

ಅಸ್ಮದಿಷ್ಟೈಕಕಾರ್ಯ - ಶ್ರೀಹರಿ

'ಅಸ್ಮದಿಷ್ಟೈಕಕಾರ್ಯಾಯ ಪೂರ್ಣಾಯ ಹರಯೇ ನಮಃ' -ಎಂದು ದ್ವಾದಶ-ಸ್ತೋತ್ರದಲ್ಲಿ (೨-೯) ಶ್ರೀಮಧ್ವರು ಭಕ್ತರ ಇಷ್ಟವೇ ಮುಖ್ಯ ಕರ್ತವ್ಯವಾಗಿ ಉಳ್ಳವನು ಶ್ರೀಹರಿ ಎಂದು ಸ್ತುತಿಸಿರುವರು.

ಶ್ರೀಹರಿಯು ತಾನು ಸುಖಾದಿಗುಣಗಳಿಂದ ಪರಿಪೂರ್ಣನಾಗಿರುವುದರಿಂದ ಸ್ವಾರ್ಥಕ್ಕಾಗಿ ಯಾವ ಕಾರ್ಯವನ್ನೂ ನಡೆಸುವ ಆವಶ್ಯಕತೆ ಅವನಿಗೆ ಇಲ್ಲ ಎಂಬುದನ್ನು ಮುಂದಿನ 'ಪೂರ್ಣಾಯ' ಎಂಬ ವಿಶೇಷಣದಿಂದ ಸೂಚ್ಯವಾಗಿ ಸಮರ್ಥಿಸಿರುವರು.

ಭಕ್ತರಾದ ನಮ್ಮ ಇಷ್ಟಕ್ಕಾಗಿಯೇ ಅಂದರೆ ಇಷ್ಟದ ಪೂರಣೆಗಾಗಿಯೇ ಜಗತ್ ಸೃಷ್ಟ್ಯಾದಿಕಾರ್ಯಗಳನ್ನು ನಡೆಸುವವನೆನ್ನುವಾಗ, ತನ್ನ ಸ್ವಾರ್ಥಕ್ಕಾಗಿ ಯಾವುದೇ ಕಾರ್ಯವನ್ನು ನಡೆಸುವವನಲ್ಲ ಎಂದು ಸೂಚಿತವಾಗುವಂತೆ ಭಕ್ತರಾದ ನಮ್ಮ ಇಷ್ಟಕ್ಕಾಗಿಯೇ ಅವನ ಎಲ್ಲ ಕಾರ್ಯಗಳು ಹೊರತು ನಮ್ಮ ಯಾವುದೇ ಬಗೆಯ ಅನಿಷ್ಟಕ್ಕಾಗಿ ಯಾವುದೇ ಕಾರ್ಯವನ್ನು ನಡೆಸುವವನಲ್ಲ ಎಂಬ ಅರ್ಥವೂ ಸೂಚಿತವಾಗುವುದು.

ಆನಂದಾದಿಗುಣಗಳಿಂದ ಪರಿಪೂರ್ಣನಾದ ಭಗವಂತನು ತನ್ನನ್ನು ಆಶ್ರಯಿಸಿರುವ ತನ್ನ ಭಕ್ತರು ಮೋಕ್ಷಾದಿಸಂಪತ್ತನ್ನು ಪಡೆಯುವಂತಾಗಲಿ ಎಂಬ ಬಯಕೆಯಿಂದ ಜಗತ್ತಿನ ಸೃಷ್ಟಿಯನ್ನು ನಡೆಸಿರುವಂತೆ,141 ಸೃಷ್ಟಿಗೊಳಗಾದ ಜಗತ್ತಿನ ರಕ್ಷಣಾದಿ ಪ್ರತಿಯೊಂದು ಕಾರ್ಯವೂ ಭಕ್ತರು ಮೋಕ್ಷಾದಿಸಂಪತ್ತನ್ನು ಪಡೆಯಬೇಕು ಎಂಬ ಉದ್ದೇಶದಿಂದಲೇ. ಭಕ್ತವತ್ಸಲನಾದ ಅವನು ಭಕ್ತರ ಶ್ರೇಯಸ್ಸಿಗಾಗಿ ಸಾರಥ್ಯದಂತಹ ಎಷ್ಟು ಚಿಕ್ಕಪುಟ್ಟ ಕಾರ್ಯಗಳನ್ನು ನಡೆಸುವುದಕ್ಕೂ ಹಿಂಜರಿಯುವುದಿಲ್ಲ. ಸಮಗ್ರ ಬ್ರಹ್ಮಾಂಡದ ನಿರ್ಮಾಣವೇ ಮುಂತಾದ ಎಷ್ಟು ದೊಡ್ಡ ಕಾರ್ಯಗಳನ್ನು ನಡೆಸುವುದಕ್ಕೂ ಸಿದ್ಧನಾಗುವನು. ಭಕ್ತರ ಹಿತವನ್ನೇ ಬಯಸುವ ಅವನಿಂದ ಭಕ್ತರಿಗೆ ಅಹಿತವಾಗುವ ಯಾವುದೇ ಕಾರ್ಯ ನಡೆಯಲು ಸಾಧ್ಯವೇ ಇಲ್ಲ. ಆದುದರಿಂದ ಸಂಸಾರಾವಸ್ಥೆಯಲ್ಲಿ ಮೇಲ್ನೋಟಕ್ಕೆ ಅಹಿತಗಳಂತೆ ಕಾಣುವ ಕೆಲವು ಕಾರ್ಯಗಳೂ, ಘಟನೆಗಳೂ ಸಂಭವಿಸಿದರೂ ಭಕ್ತವತ್ಸಲ ಭಗವಂತನ ಪ್ರೇರಣೆಯಿಂದಲೇ ನಡೆದ ಅವುಗಳ ಹಿನ್ನೆಲೆಯಲ್ಲೂ ಮೋಕ್ಷ- ಸಾಧನಾ ದೃಷ್ಟಿಯಿಂದ ಏನೋ ಹಿತಕರ ಅಂಶ ಇದ್ದೇ ಇದೆ ಎಂದು ದೃಢಪಡಿಸಿಕೊಳ್ಳಬೇಕು. ಪ್ರಾರಬ್ಧಕರ್ಮ, ಯೋಗ್ಯತೆ -ಇವುಗಳ ಆಧಾರದಲ್ಲಿ ದುಃಖವನ್ನು ಅನುಭವಿಸಬೇಕಾಗುವಾಗಲೂ ಆ ದುಃಖದ ಪ್ರಾಪ್ತಿಯಲ್ಲೂ ಭಗವಂತನ ಪಾತ್ರ ಇದ್ದೇ ಇದೆ.142 ಹಾಗೆಯೇ ಆ ರೀತಿಯಾಗಿ ಭಕ್ತರಿಗೂ ದುಃಖವನ್ನು ಒದಗಿಸುವಲ್ಲೂ ಉದ್ಧಾರದ ದೃಷ್ಟಿಯೂ ಇದ್ದೇ ಇದೆ -ಎಂದು ದೃಢಪಡಿಸಿಕೊಳ್ಳಬೇಕು.

---

141. ತಸ್ಯೋದರಸ್ಥಜಗತಃ ಸದಮಂದ್ರಸಾಂದ್ರ-
ಸ್ವಾನಂದತುಷ್ಟವಪುಷೋಽಪಿ ರಮಾರಮಸ್ಯ ।
ಭೂತ್ಯೈ ನಿಜಾಶ್ರಿತಜನಸ್ಯ ಹಿ ಸೃಜ್ಯಸೃಷ್ಟ್ಯಾ-
ವೀಕ್ಷಾ ಬಭೂವ ಪರನಾಮನಿಮೇಷಕಾಂತೇ ॥ —ಮ.ಭಾರ.ತಾ.ನಿ. ೧-೩

142. ಫಲಮತ ಉಪಪತ್ತೇಃ —ಬ್ರ.ಸೂ.

ಒಂದು ಹಂತದಲ್ಲಿ ಎಲ್ಲ ಜೀವರಿಗೂ 'ಸುಹೃತ್' ಎನಿಸಿರುವ ಭಗವಂತನು ಭಕ್ತರ ಪಾಲಿಗಂತೂ ಪ್ರತಿಯೊಂದು ಹಂತದಲ್ಲೂ 'ಸುಹೃತ್'.[143] ಭಕ್ತರಿಂದ ಯಾವುದೇ ಪ್ರತ್ಯುಪಕಾರವನ್ನು ಬಯಸದೆ ಬರೇ ಅವರ ಬಗೆಗಿರುವ ವಾತ್ಸಲ್ಯದಿಂದ ಅವರಿಗೆ ಉಪಕಾರ ಮಾಡುವವನು.[144]

ಶ್ರೀವಿಷ್ಣು ತನ್ನ ಭಕ್ತಕೋಟಿಯಲ್ಲಿ ನನ್ನನ್ನೂ ಒಬ್ಬನನ್ನಾಗಿ ಸೇರಿಸಿಕೊಂಡಿರುವನೆಂದ ಮೇಲೆ ನನ್ನ ಇಷ್ಟಗಳನ್ನೂ ಈಡೇರಿಸಿಯೇ ತೀರುವನು. ದೇವರು-ಧರ್ಮ-ಪುಣ್ಯಪಾಪ ಇತ್ಯಾದಿಗಳನ್ನೊಳಗೊಂಡ ಅಧ್ಯಾತ್ಮಪ್ರಪಂಚದಲ್ಲಿ ಷ್ವಾದರೂ ಹೆಜ್ಜೆ ಇಟ್ಟಿರುವೆನೆಂದರೆ ಅವನು ತನ್ನ ಭಕ್ತರಲ್ಲಿ ಒಬ್ಬನನ್ನಾಗಿ ನನ್ನನ್ನೂ ಪರಿಗಣಿಸಿರುವನೆಂದೇ ಸಿದ್ಧ.

ಜೀವನದಲ್ಲಿ ಈವರೆಗೆ ನನ್ನ ಯಾವಯಾವ ಇಷ್ಟಗಳು ಈಡೇರಿವೆಯೋ ಅವೆಲ್ಲ ಅವನ ಅನುಗ್ರಹದಿಂದಲೇ ಈಡೇರಿರುವವು. ಇಷ್ಟಗಳ ಈಡೇರುವಿಕೆಯಲ್ಲಿ ನನ್ನ ಅಥವಾ ನನ್ನ ಬಂಧುಗಳ ಪ್ರಯತ್ನ ಪರಿಶ್ರಮಗಳೂ ಪ್ರಯೋಜಕಗಳಾಗಿದ್ದರೆ, ಅಂತಹ ಪ್ರಯತ್ನ ಪರಿಶ್ರಮಾದಿಗಳಿಗೂ ಪ್ರೇರಕನಾಗಿ, ನಿಯಾಮಕನಾಗಿ ಅನುಗ್ರಹಿಸಿರುವ ಅವನ ಪಾತ್ರವೇ ಪ್ರಮುಖವಾದದ್ದು.

ಜೀವನದಲ್ಲಿ ಅನೇಕಾನೇಕ ಇಷ್ಟಗಳು ಈಡೇರದಿರುವಲ್ಲೂ ಅವನ ಪಾತ್ರವೇ. ಕೆಲವು ಇಷ್ಟಗಳು ಆ ಭಕ್ತನ ಸ್ವಭಾವಕ್ಕೆ ಹೊಂದಿಕೆಯಾಗದವುಗಳೆಂದು ಅವನ್ನು ಈಡೇರದಂತೆ ಮಾಡಿದರೆ, ಸಂಸಾರಾವಸ್ಥೆಯ ಇತಿಮಿತಿಗಳನ್ನು ಮನವರಿಕೆ ಮಾಡಿಕೊಳ್ಳುವಂತಾಗಲೆಂದು ಮತ್ತೆ ಕೆಲವು ಇಷ್ಟಗಳನ್ನು ಈಡೇರದಂತೆ ಮಾಡುವನು. ಅಂತೂ ಇಷ್ಟಗಳು ಈಡೇರದಂತೆ ಮಾಡುವಲ್ಲೂ ಉದ್ಧಾರದ ದೃಷ್ಟಿಯೇ.

'ಅಯಂ ಸರ್ವೇಷ್ಟದಾತಾ ಮೇ........' ನನ್ನ ಸಕಲ ಅಭೀಷ್ಟಗಳ ಪೂರಣೆಯೂ ಶ್ರೀಹರಿಯಿಂದಲೇ ನಡೆದಿದೆ ಎಂಬುದನ್ನು ಹೀಗೆ ವಿವೇಚಿಸಿಕೊಳ್ಳಬೇಕಾದಂತೆ, ಈ ವಿಚಾರದ್ದೇ ಮತ್ತೊಂದು ಮಗ್ಗುಲಂತೆ ಇರುವ 'ಸರ್ವಾನಿಷ್ಟನಿವಾರಕಃ' –ನನ್ನ ಎಲ್ಲ ಬಗೆಯ ಅನಿಷ್ಟಗಳನ್ನೂ ಶ್ರೀಹರಿಯೇ ಪರಿಹರಿಸುವವನು –ಎಂಬುದನ್ನೂ ವಿಶ್ಲೇಷಿಸಿ ಕೊಳ್ಳಬೇಕು.

ಸಾಮಾನ್ಯವಾಗಿ ಎಲ್ಲ ಅನಿಷ್ಟಗಳೂ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ –ಎಂಬ ತಾಪತ್ರಯದಲ್ಲಿ ಸೇರುವವು. ಶರೀರದ ಮೇಲೆ, ಪಂಚಭೂತಗಳ ಮೇಲೆ, ತತ್ತ್ವಾಭಿ-ಮಾನಿದೇವತೆಗಳ ಮೇಲೆ ಪೂರ್ಣಪ್ರಭುತ್ವವುಳ್ಳ ಶ್ರೀಹರಿ ಶರೀರಾದಿಗಳ ಮಾಧ್ಯಮದಿಂದ ವೈರಾಗ್ಯ ಸಿದ್ಧಿಸಲಿ –ಇತ್ಯಾದಿ ದೃಷ್ಟಿಯಿಂದ ತಾಪತ್ರಯವನ್ನು ನೀಡುವವನೂ ಅವನೇ ಎಂದ ಮೇಲೆ ಅವನ್ನು ಪರಿಹರಿಸುವವೂ ಅವನೇ.

---

143. ....ಸುಘೋಷಃ ಸುಖದಃ ಸ್ಯುಹೃತ್ । –ವಿ.ಸ.ನಾ. (೪೬೪)
* ಅಹಮಾತ್ಮೋದ್ಧವಾಮೀಷಾಂ ಭೂತಾನಾಂ ಸುಹೃದೀಶ್ವರಃ । –ಭಾಗ. ೧೧-೧೬-೯

144. ....ಉಪಕಾರಂ ತು ಅನಪೇಕ್ಷ್ಯೋಪಕಾರಕೃತ್ ।
ಯಸ್ತತಃ ಸ ಸುಹೃತ್ ಪ್ರೋಕ್ತಃ......... । –ಗೀ.ಭಾ. (೬-೯)
* ಅನಿಮಿತ್ತಸ್ನೇಹವಾಂಸ್ತು ಸುಹೃತ್....... । –ನಾರದೀಯ (ಗೀ.ತಾ. ೬-೯)

ಅನಿಷ್ಟಗಳಲ್ಲೆಲ್ಲ ಅತ್ಯಂತ ಹೇಯವಾದವು ಸಂಸಾರಬಂಧನ. ಅದಕ್ಕೆ ಮೂಲಗಳಾದ ಅಜ್ಞಾನ, ಕಾಮ –ಇತ್ಯಾದಿಗಳಾದರೆ, ಇಷ್ಟಗಳಲ್ಲೆಲ್ಲ ಅತ್ಯಂತ ಶ್ರೇಷ್ಠವಾದವು ಮೋಕ್ಷಾ-ವಸ್ಥೆ, ಅದಕ್ಕೆ ಕಾರಣಗಳಾದ ಜ್ಞಾನ, ಭಕ್ತಿ, ವೈರಾಗ್ಯಾದಿಗಳು. ಸಂಸಾರಬಂಧನವೇ ಮುಂತಾದ ಅನಿಷ್ಟಪರಿಹಾರಕತ್ವ ಶ್ರೀಹರಿಯನ್ನು ಬಿಟ್ಟರೆ ಇನ್ನಾರಲ್ಲೂ ಇಲ್ಲ ಹೇಗೋ ಹಾಗೆಯೇ ಮೋಕ್ಷಾವಸ್ಥೆ ಮುಂತಾದ ಇಷ್ಟಸಂಪಾದಕತ್ವವೂ ಅವನನ್ನು ಹೊರತಾಗಿ ಇನ್ನಾರಲ್ಲೂ ಇಲ್ಲ.

ಹೀಗೆ ನನ್ನ ಎಲ್ಲ ಬಗೆಯ ಅನಿಷ್ಟಪರಿಹಾರಕನೂ, ಎಲ್ಲ ಬಗೆಯ ಇಷ್ಟಸಂಪಾದಕನೂ ಶ್ರೀಹರಿಯೇ ಎಂಬುದನ್ನು ಶಾಸ್ತ್ರಸಂದೇಶಗಳ ಆಧಾರದಲ್ಲಿ ವಿಶ್ಲೇಷಿಸಿಕೊಂಡು ಪುರಾಣಗಳಲ್ಲಿ, ಇತಿಹಾಸಗಳಲ್ಲಿ ಪ್ರಸ್ತುತರಾದ ಬೇರೆಬೇರೆ ಭಕ್ತರ ಪಾಲಿಗೆ ಶ್ರೀಹರಿ ಹೇಗೆ ಸಕಲೇಷ್ಟಸಂಪಾದಕನಾಗಿರುವನು; ಸಕಲಾನಿಷ್ಟಪರಿಹಾರಕನಾಗಿರುವನು –ಎಂಬುದನ್ನು ದೃಢಪಡಿಸಿಕೊಳ್ಳಬೇಕು.

ಪರಸ್ಪರ ಪೂರಕಗಳು:

ಈ ರೀತಿಯಾಗಿ ಆಂತರವೈಷ್ಣವದೀಕ್ಷೆಯಲ್ಲಿ ಐದು ನಿಶ್ಚಯಗಳು ಸೇರಿಕೊಂಡಿವೆಯಾದರೂ ಪ್ರಮುಖವಾಗಿ ಅವು ಮೂರೆಂದು ಪರಿಗಣಿಸಲಾಗುವುದು. ಆ ಮೂರೂ ಪರಸ್ಪರಸಾಪೇಕ್ಷವಾದವು. ಶ್ರೀಹರಿ ಸರ್ವೋತ್ತಮನಾಗಿರುವುದರಿಂದ, ಅವನು ಸಮಸ್ತ ಪ್ರಪಂಚಕ್ಕೇ ಒಡೆಯನಾದವನು. ಅಂತಹ ಪ್ರಪಂಚದಲ್ಲಿ ಸೇರಿರುವ ನನಗೂ ಸ್ವಾಮಿಯಾಗಿರುವವನು. ನಾನು ಪೂರ್ಣವಾಗಿ ಅವನಿಗೆ ಸೇರಿಕೊಂಡ ದಾಸ. ಅವನ ದಾಸನಾಗಿ ಇರುವುದರಿಂದಲೇ ನನ್ನ ಎಲ್ಲ ಇಷ್ಟಗಳನ್ನೂ ಪೂರೈಸವವನೂ, ಎಲ್ಲ ಅನಿಷ್ಟಗಳನ್ನು ಪರಿಹಾರಮಾಡುವವನೂ ಅವನೇ.

ಈ ಆಂತರದೀಕ್ಷೆಯ ಘಟಕಗಳಲ್ಲಿ ಒಂದೊಂದನ್ನೇ ಮತ್ತೆಮತ್ತೆ ಚೆನ್ನಾಗಿ ವಿಶ್ಲೇಷಿಸಿಕೊಂಡು ಅವುಗಳ ವಿಷಯದಲ್ಲಿ ದಾರ್ಢ್ಯ ತಾಳಿದಷ್ಟು ಆಂತರದೀಕ್ಷೆಯೂ ದೃಢವಾಗುತ್ತ ಹೋಗುವುದು. ಈ ನಿಟ್ಟಿನಲ್ಲಿ ಅತ್ಯಂತ ಸ್ಥೈರ್ಯ ತಾಳುವುದೇ ಭಕ್ತನಾದವನ ಪ್ರಮುಖ ಲಕ್ಷಣವೆಂದು 'ಭಕ್ತಿವಿವೇಕ' ಘೋಷಿಸಿದೆ.145 ತಾಪತ್ರಯಗಳಿಗೊಳಗಾದರೂ, ವೇದಾದಿಗಳ ಉಪದೇಶವಿದ್ದರೂ, ಪ್ರಬಲವಾದ ಆದೇಶಗಳಿಗೂ ಭಗವದ್‌ಭಕ್ತಿ ಕಿಂಚಿತ್ತೂ ವಿಚಲಿತವಾಗಿಲ್ಲ ಎಂದರೆ ಅಂತಹವನೇ ಶ್ರೀವಿಷ್ಣುವಿಗೆ ಅತ್ಯಂತ ಪ್ರಿಯನಾದ ಶ್ರೇಷ್ಠ ಭಕ್ತ ಎಂಬುದಾಗಿ.

---

145. ....ಆಧಿಕ್ಯೇನ ತು ತತ್ರಾಪಿ ಸ್ಥೈರ್ಯಮೇವ ವಿಶೇಷತಃ ।
.....ಅತ ಆಧ್ಯಾತ್ಮಿಕೈಃ ಕ್ಲೇಶೈರಧಿಭೂತಾಧಿದೈವಿಕೈಃ ॥
ವಾಕ್ಯೈಶ್ಚ ವೇದತಂತ್ರಾದ್ಯೈರುಪದೇಶೈಶ್ಚ ತಾದೃಶೈಃ ।
ಬಲವಚ್ಛಾಸನೈರ್ವಾಪಿ ಯಸ್ಯ ಭಕ್ತಿರ್ನ ಚಾಲ್ಯತೇ ॥
ಸ ಏವ ಪರಮೋ ಭಕ್ತೋ ವಿಷ್ಣೋರ್ಹೃದಯವಲ್ಲಭಃ ।
– ಭಾಗ. ತಾ.ನಿ. ೧೧-೧೪-೨

ಭಗವಂತನಲ್ಲಿ ಆತ್ಮೀಯತೆಯನ್ನು ದೃಢಪಡಿಸುವ ವಿಚಾರಗಳು

ಭಗವಂತನ ಬಗೆಗಿನ ಹಿರಿಮೆಗರಿಮೆಗಳ ಜ್ಞಾನ ಭಕ್ತಿಯಾಗಿ ಪರಿಣಮಿಸಬೇಕೆಂದರೆ ಅವನಲ್ಲಿ ಪ್ರೀತಿ ಉಂಟಾಗಬೇಕು. ಆತ್ಮೀಯತೆಯಿಂದ ಪ್ರೀತಿ ಉಂಟಾಗುವುದು. ನಮ್ಮ ಇಷ್ಟಗಳ ಗಳಿಕೆ, ಅನಿಷ್ಟಗಳ ನಿವಾರಣೆ –ಇವುಗಳಲ್ಲಿಯ ಅವನ ಸ್ಪಂದನೆಯನ್ನು ಗುರುತಿಸಿ ಕೊಂಡಾಗ ಅವನ ಬಗ್ಗೆ ಆತ್ಮೀಯತೆ ಉಂಟಾಗಲು, ವೃದ್ಧಿಯಾಗಲು ಸಾಧ್ಯ. ಆದುದರಿಂದ ನಮ್ಮ ಇಷ್ಟಗಳ, ಸುಖದ ಸಂಪಾದನೆಯಲ್ಲೂ, ಅನಿಷ್ಟಗಳ, ದುಃಖದ ಪರಿಹಾರದಲ್ಲೂ ಅವನ ಸ್ಪಂದನೆಯನ್ನು, ಪಾತ್ರವನ್ನು ಶಾಸ್ತ್ರಾಧಾರದಿಂದ ಹೀಗೆ ಸ್ಪಷ್ಟಪಡಿಸಿಕೊಳ್ಳಬೇಕು–

೧. **ಭಕ್ತರಾದ ನಮ್ಮ ಆತ್ಮೀಯ ಬಂಧು, ಯಾವಾಗಲೂ ಜೊತೆಗಾರನಾದ ಗೆಳೆಯ ಭಗವಂತನು.**[146]

೨. **ಭಕ್ತರ ಇಷ್ಟವನ್ನು ಪೂರೈಸುವುದೇ ಮುಖ್ಯ ಗುರಿಯಾಗಿ ಉಳ್ಳ**[147] **ಅವನಿಂದ ಭಕ್ತರ ಅನಿಷ್ಟಕ್ಕೆ ಪೂರಕವಾದ ಯಾವುದೇ ಚಟುವಟಿಕೆ ನಡೆಯಲಾರದು.**

೩. **ಭಕ್ತರ ಎಂತಹ ಇಷ್ಟವನ್ನೂ ಪೂರೈಸಲು ಬೇಕಾದ ಸರ್ವಸಾಮರ್ಥ್ಯಸಂಪನ್ನ ನಾಗಿರುವವನು ಅವನು.**[148]

೪. **'ಸತ್ಯಕಾಮ', 'ಸತ್ಯಸಂಕಲ್ಪ' ಎನಿಸಿರುವ ಅವನ ತನ್ನ ಭಕ್ತರನ್ನು ಉದ್ಧರಿಸ ಬೇಕೆಂಬ ಇಚ್ಛೆ ಸಂಕಲ್ಪ ಯಾವ ದೇವತೆಯಿಂದಲೂ ಯಾವ ಆಸುರೀಶಕ್ತಿ ಯಿಂದಲೂ ತಡೆಹಿಡಿಯಲ್ಪಡದು.**

೫. **ಕಾಲ, ಕರ್ಮ, ಪ್ರಕೃತ್ಯಾದಿ ಜಡಗಳನ್ನೂ ನಿಯಂತ್ರಿಸುವ ಅವನ ನಿಯಂತ್ರಣ ವನ್ನು ಮೀರಿ ಪ್ರಾರಬ್ಧಕರ್ಮವೇ ಮುಂತಾದ ಯಾವ ಜಡಗಳೂ ಅವನ ಭಕ್ತರ ಮೇಲೆ ಪ್ರಭಾವ ಬೀರಲಾರವು.**

೬. **ಸಮಗ್ರ ಬ್ರಹ್ಮಾಂಡವನ್ನೂ, ಲಕ್ಷ್ಮ್ಯಾದಿ ಹಿರಿಯ ದೇವತೆಗಳನ್ನೂ ನಿಯಮಿಸು ತ್ತಿರುವ ಅವನು ಚಿಕ್ಕಪುಟ್ಟ ಚೇತನವನ್ನೂ ಆಯಾ ಚೇತನದ ಬಿಂಬರೂಪಿ ಯಾಗಿಯೇ ಇದ್ದುಕೊಂಡು ಅದರ ಉದ್ಧಾರದಲ್ಲೂ ಪೂರ್ಣ ಕಾಳಜಿಯನ್ನು ಹೊಂದಿರುವನು.**[149]

೭. **ಮಹಾ ಭಕ್ತವತ್ಸಲನಾದ ಅವನು ತನ್ನ ಭಕ್ತರಿಗೆ ಆಗುವ ಕಿಂಚಿತ್ ಅನಿಷ್ಟವನ್ನೂ ಸಹಿಸುವುದಿಲ್ಲ.**

---

146. ದ್ವಾ ಸುಪರ್ಣಾ ಸಯುಜಾ ಸಖಾಯಾ.......... ॥ *–ಆಥರ್ವಣೋಪನಿಷತ್, 3-1*

147. ಅಸ್ಮದಿಷ್ಟೈಕಕಾರ್ಯಾಯ ಪೂರ್ಣಾಯ ಹರಯೇ ನಮಃ । *–ದ್ವಾ.ಸ್ತೋ.*

148. ಸರ್ವೈರ್ಯುಕ್ತಾ ಶಕ್ತಿಭಿರ್ದೇವತಾ ಸಾ.......... ॥
– ಚತುರ್ವೇದಶಿಖಾ (ಸೂ.ಭಾ.2-1-31)

149. ಯಥಾ ರಾಜ್ಞಃ ಪ್ರಿಯತ್ವಂ ತು ಭೃತ್ಯೋ ವೇದ ನ ಚಾತ್ಮನಃ ।
ತಥಾ ಜೀವೋ ನ ಯತ್ಸಖ್ಯಂ ವೇತ್ತಿ ತಸ್ಮೈ ನಮೋಽಸ್ತು ತೇ ॥
– ಸ್ಕಾಂದೇ (ಭಾಗ.ತಾ.ನಿ. 6-1-24)

೮. ಹೀಗಿದ್ದರೂ ಭಕ್ತರ ಬದುಕಿನಲ್ಲೂ ಅನಿಷ್ಟಗಳು ಸಂಭವಿಸುವವೆಂದರೆ ಏನೋ ಉದ್ಧಾರದ ದೃಷ್ಟಿಯಿಂದಲೇ ಅವನೇ ಆ ಅನಿಷ್ಟವನ್ನು ನೀಡಿರುವನು.

೯. ಹೀಗಿದ್ದರೂ ಭಕ್ತರಾದವರು ತಮ್ಮ ಬದುಕಿನಲ್ಲಿ ಸಂಭವಿಸುವ ಅನಿಷ್ಟಗಳಿಗಾಗಿ ಧೃತಿಗೆಟ್ಟು, 'ದೇವರು ಯಾಕೆ ಹೀಗೆ ಮಾಡಿದ?' 'ನನ್ನ ದುರದೃಷ್ಟ' –ಹೀಗೆಲ್ಲ ಕರುಬುವುದರಿಂದ ಪರೋಕ್ಷವಾಗಿ ಭಗವಂತನ ಸಾಮರ್ಥ್ಯವನ್ನೂ, ಭಕ್ತ-ವಾತ್ಸಲ್ಯವನ್ನೂ ಶಂಕಿಸಿದಂತೆ! ಆಕ್ಷೇಪಿಸಿದಂತೆ!

೧೦. ಆಧ್ಯಾತ್ಮಿಕಕ್ಷೇತ್ರದಲ್ಲಿ, ಧಾರ್ಮಿಕಕ್ಷೇತ್ರದಲ್ಲಿ ಇಷ್ಟು ಮುಂದುವರಿಯುವಂತೆ ಮಾಡಿರುವನೆಂದರೆ, ಭಗವಂತನು ತನ್ನ ಭಕ್ತಕೋಟಿಯಲ್ಲಿ ಒಬ್ಬನನ್ನಾಗಿ ನನ್ನನ್ನೂ ಖಂಡಿತಾ ಪರಿಗಣಿಸಿರುವನು. ಹೀಗೆ ಅವನಿಂದ ಭಕ್ತನೆಂದು ಪರಿಗಣಿತನಾಗಿರು ವನೆಂದರೆ 'ಯೋಗಕ್ಷೇಮಂ ವಹಾಮ್ಯಹಮ್' –ಎಂದು ಆಶ್ವಾಸನೆ ನೀಡಿರುವ ಅವನಿಂದ ನನ್ನ ಜೀವನಕ್ಕೆ ಸಂಬಂಧಿಸುವ ಎಲ್ಲ ಬಗೆಯ ಯೋಗದ (ಅಪ್ರಾಪ್ತವಸ್ತುಗಳ ಪ್ರಾಪ್ತಿ) ಹಾಗೂ ಕ್ಷೇಮದ (ಪ್ರಾಪ್ತವಸ್ತುಗಳ ಪರಿರಕ್ಷಣೆ) ನಿರ್ವ ಹಣೆಯೂ ನಡೆದೇ ತೀರುವುದು.

ಬಾಹ್ಯದೀಕ್ಷೆಯಿಂದ ದೃಢೀಕರಣ:

ಆಂತರವೈಷ್ಣವದೀಕ್ಷೆಯನ್ನು ದೃಢಪಡಿಸಿಕೊಳ್ಳಲು ಶಾಸ್ತ್ರವೇ ಪ್ರಸ್ತುತಪಡಿಸಿದ ಮತ್ತೊಂದು ದೀಕ್ಷೆ ಬಾಹ್ಯದೀಕ್ಷೆ, ಸುದರ್ಶನಹೋಮದ ಅಗ್ನಿಯಿಂದ ಬಿಸಿಮಾಡಿ ಚಕ್ರಾದಿಚಿಹ್ನೆಗಳ ಧಾರಣೆ, ಕೇಶವಾದಿ ಭಗವದ್ರೂಪಗಳ ಸ್ಮರಣೆಯೊಂದಿಗೆ ಊರ್ಧ್ವ-ಪುಂಡ್ರಧಾರಣ ತನ್ನ ದೇಹದ ಬಗ್ಗೆ ಅವನ ಒಡೆತನವನ್ನು ದೃಢಪಡಿಸಿಕೊಳ್ಳಲು ಪ್ರಯೋಜಕವಾದರೆ150 ಶ್ರೀವಿಷ್ಣುವಿಗೆ ಸಂಬಂಧಿಸುವ ನಾಮಗಳನ್ನು ಇಟ್ಟುಕೊಳ್ಳುವ ಮೂಲಕ ಅವನ ದಾಸ್ಯವನ್ನು ದೃಢಪಡಿಸಿಕೊಂಡಂತಾಗುವುದು. ಶ್ರೀವಿಷ್ಣುವಿನ ಪರವಾದ ಮಂತ್ರಗಳ ಜಪ, ಅವನ ಪೂಜೆ, ಹೋಮ –ಇವೆಲ್ಲ ಅವನ ಸರ್ವೋತ್ತಮತ್ವದ ಅಂಶವನ್ನು ದೃಢಪಡಿಸಬಲ್ಲವು. ಹೀಗೆ ತಾಪ, ಪುಂಡ್ರ, ನಾಮ, ಮಂತ್ರ ಹಾಗೂ ಯಾಗ ಎಂಬ ಐದು ಅಂಗಗಳನ್ನೊಳಗೊಂಡ ಬಾಹ್ಯದೀಕ್ಷೆಯ ಒಂದೊಂದು ಅಂಗವೂ ಬೇರೆಬೇರೆ ದೃಷ್ಟಿಯಿಂದ ಆಂತರದೀಕ್ಷೆಯ ಬೇರೆಬೇರೆ ಅಂಗಗಳಿಗೆ ಪುಷ್ಟಿ ನೀಡುತ್ತ ಸಮಷ್ಟಿಯಾಗಿ ಆಂತರದೀಕ್ಷೆಯನ್ನು ದೃಢಗೊಳಿಸುವುದು.

* * *

150. ಚಕ್ರಾದಿಧಾರಣಂ ಪುಂಸಾಂ ಪರಸಂಬಂಧನಿವೇದನಮ್ ।
ಸಂಸ್ಕಾರಾಣಾಂ ತು ಸರ್ವೇಷಾಮಾದ್ಯಂ ಚಕ್ರಾದಿಧಾರಣಮ್ ॥

– ವೃದ್ಧಹಾರೀತಸ್ಮೃತಿ ೨-೩

ತಾಪಸಂಸ್ಕಾರ

ವೈಷ್ಣವ ಬಾಹ್ಯದೀಕ್ಷೆ ಐದು ಸಂಸ್ಕಾರಗಳನ್ನು ಒಳಗೊಂಡಿದ್ದು, ಅವುಗಳಲ್ಲಿ ಒಂದು ತಾಪಸಂಸ್ಕಾರ.

'ವೃದ್ಧಹಾರೀತಸ್ಮೃತಿ'ಯ ಪ್ರಕಾರ ಐದು ವೈಷ್ಣವ ಸಂಸ್ಕಾರಗಳಲ್ಲಿ ಚಕ್ರಾದಿಗಳ ಧಾರಣೆ ಮೊತ್ತಮೊದಲ ಸಂಸ್ಕಾರ.

ಶ್ರೇಷ್ಠಗುರುಗಳ ಮೂಲಕ ತಾಪಸಂಸ್ಕಾರ ಪಡೆಯಬೇಕೆಂದು ತಿಳಿಸುವ 'ವೃದ್ಧ-ಹಾರೀತಸ್ಮೃತಿ' ಪ್ರಾರಂಭದಲ್ಲಿ ಶ್ರೇಷ್ಠಗುರುಗಳ ಲಕ್ಷಣಗಳನ್ನು ಹೀಗೆ ಸಂಗ್ರಹಿಸುವುದು–151 ನಿರ್ದುಷ್ಟನಾದ, ವೈಷ್ಣವನಾದ, ಶುದ್ಧಸತ್ತ್ವಗುಣಸಂಪನ್ನನಾದ, ಸತ್‌ಸಂಪ್ರ-ದಾಯಯುಕ್ತನಾದ, ಶ್ರೇಷ್ಠಮಂತ್ರಾರ್ಥಗಳನ್ನೆಲ್ಲ ಬಲ್ಲವನಾದ, ಜ್ಞಾನವೈರಾಗ್ಯಸಂಪನ್ನನಾದ, ಸತ್‌ಸಂಪ್ರದಾಯಯುಕ್ತನಾದ, ಶ್ರೇಷ್ಠಮಂತ್ರಾರ್ಥಗಳನ್ನೆಲ್ಲ ಬಲ್ಲವನಾದ, ಜ್ಞಾನವೈರಾಗ್ಯ-ಸಂಪನ್ನನಾದ, ವೇದವೇದಾಂಗಪಾರಂಗತನಾದ, ಶ್ರೇಷ್ಠ ಆಚರಣೆಗಳಿಂದ ಆದೇಶ ಮಾಡುತ್ತಿರುವ, ಸರ್ವಧರ್ಮವನ್ನು ಬಲ್ಲ, ಮಹಾಭಾಗವತನಾದ, ಸದಾಚಾರಮಗ್ನನಾದ, ಸರ್ವಶಾಸ್ತ್ರಗಳನ್ನೂ, ಪುರಾಣಗಳನ್ನೂ ಚೆನ್ನಾಗಿ ವಿಮರ್ಶೆ ಮಾಡಿ, ಅದರ ಅಂತರ್ಯವನ್ನು ಜೀವನದಲ್ಲಿ ಅಳವಡಿಸಿಕೊಂಡವನೇ ನಿಜವಾದ ಗುರು. ಶಿಷ್ಯನಾದವನು ಇಂತಹ ಗುರುಗಳನ್ನೇ ತನಗೆ ಸಂಸ್ಕಾರ ನೀಡುವುದಕ್ಕೆ ಆಯ್ಕೆ ಮಾಡಿಕೊಳ್ಳಬೇಕು. ಗುರುವೂ152 ಕೂಡ ಆಸ್ತಿಕ್ಯಬುದ್ಧಿಯ, ಉತ್ತಮಗುಣಸಂಪನ್ನನಾದ, ಧರ್ಮವತ್ಸಲನಾದ, ಶ್ರದ್ಧಾಳುವಾದ, ಸದಾಚಾರಸಂಪನ್ನನಾದ, ಗುರುಶುಶ್ರೂಷೆಯಲ್ಲಿ ಆಸಕ್ತನಾದ ವ್ಯಕ್ತಿಯನ್ನಷ್ಟೇ ಶಿಷ್ಯನನ್ನಾಗಿ ಸ್ವೀಕರಿಸಬೇಕು. ಒಂದು ವರ್ಷ ಅವನ ಗುಣಧರ್ಮಗಳನ್ನು ಪರೀಕ್ಷಿಸಿ, ಆ ಬಳಿಕವಷ್ಟೇ ಅವನ ಶಿಷ್ಯತ್ವವನ್ನು ಸ್ವೀಕರಿಸಬೇಕು.

---

151. ಆಚಾರ್ಯಂ ಸಂಶ್ರಯೇತ್ ಪೂರ್ವಮನಘಂ ವೈಷ್ಣವಂ ದ್ವಿಜಮ್ ।
ಶುದ್ಧಸತ್ತ್ವಗುಣೋಪೇತಂ ನವೇಜ್ಯಾಕರ್ಮಕಾರಣಮ್ ॥
ಸತ್‌ಸಂಪ್ರದಾಯಸಂಯುಕ್ತಂ ಮಂತ್ರರತ್ನಾರ್ಥಕೋವಿದಮ್ ।
ಜ್ಞಾನವೈರಾಗ್ಯಸಂಪನ್ನಂ ವೇದವೇದಾಂಗಪಾರಗಮ್ ॥
ಶಾಸಿತಾರಂ ಸದಾಚಾರ್ಯೈಃ(ರ್ಯೈಃ) ಸರ್ವಧರ್ಮವಿದಾಂ ವರಮ್ ।
ಮಹಾಭಾಗವತಂ ವಿಪ್ರಂ ಸದಾಚಾರನಿಷೇವಣಮ್ ॥
ಆಲೋಕ್ಯ ಸರ್ವಶಾಸ್ತ್ರಾಣಿ ಪುರಾಣಾನಿ ಚ ವೈಷ್ಣವಾಃ ।
ತದರ್ಥಮಾಚರೇದ್ ಯಸ್ತು ಸ ಆಚಾರ್ಯ ಉದಾಹೃತಃ ॥
– ವೃದ್ಧಹಾರೀತಸ್ಮೃತಿ ೨-೪...೮

152. ಆಸ್ತೀಕ್ಯಮಾನಸಂ ಸದ್ಭಿರುಪೇತಂ ಧರ್ಮವತ್ಸಲಮ್ ।
ಶ್ರದ್ಧಧಾನಂ ಸದಾಚಾರಂ ಗುರುಶುಶ್ರೂಷತತ್ಪರಮ್ ॥
ಸಂವತ್ಸರಂ ಪ್ರತೀಕ್ಷ್ಯಾರ್ಥೇ ತಂ ಶಿಷ್ಯಂ ಶಾಸಯೇದ್ ಗುರುಃ । –೨-೮, ೯

ಶ್ರೀಮದಾಚಾರ್ಯರೂ ಗುರು ಶಿಷ್ಯನನ್ನು ಹೇಗೋ ಹಾಗೆಯೇ ಶಿಷ್ಯ ಗುರುವನ್ನೂ ಪರೀಕ್ಷಿಸಿಯೇ ಸ್ವೀಕರಿಸಬೇಕು; ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡರೆ ನರಕಾನಿಷ್ಟವಾಗುವುದೆಂದು ಎಚ್ಚರಿಸಿರುವರು.153

ಹೀಗೆ ಗುರುಶಿಷ್ಯಭಾವಸಂಬಂಧವನ್ನು ಒಪ್ಪಿಕೊಂಡ ಮೇಲೆ ಗುರು ಮೊತ್ತಮೊದಲು ಶಿಷ್ಯನಿಗೆ ವಿಧಿವತ್ತಾಗಿ ಪಂಚವೈಷ್ಣವಸಂಸ್ಕಾರಗಳನ್ನು ನೀಡಬೇಕೆಂದು ತಿಳಿಸುವ 'ವೃದ್ಧ-ಹಾರೀತಸ್ಮೃತಿ' – ಮೊದಲನೆಯದಾಗಿ ತಾಪಸಂಸ್ಕಾರದ ವಿಧಾನವನ್ನು ಹೀಗೆ ವಿವರಿಸಿದೆ154

ಅಂದು ಬೆಳಗ್ಗೆ ಸ್ನಾನ ಮಾಡಿ ಶ್ರೀಜನಾರ್ದನನನ್ನು ಪೂಜಿಸಬೇಕು. ಮಿಂದ ಶಿಷ್ಯನನ್ನು ಕರೆದು ಕುಳ್ಳಿರಿಸಿ ಗವ್ಯಗಳಾದ ಪಂಚಾಮೃತಗಳಿಂದ, ಸ್ನಾನಮಾಡಿಸಬೇಕು. ಶ್ರೀಹರಿಯ ಎದುರು ಚಕ್ರವೇ ಮುಂತಾದ ಮುದ್ರೆಗಳನ್ನು ಪುಷ್ಪ, ಧೂಪ, ದೀಪ, ಬೇರೆಬೇರೆ ಬಗೆಯ ನೈವೇದ್ಯಗಳಿಂದ, ಆಯಾ ಮುದ್ರೆಗಳ ಬಗೆಗೆ ಹೊರಟ ಮಂತ್ರಗಳನ್ನು ಪಠಿಸುತ್ತ ಪೂಜಿಸಬೇಕು. ಮತ್ತೆ ಅಗ್ನಿಯಲ್ಲಿ ಹೋಮ ನಡೆಸಬೇಕು. ಆ ಹೋಮದಲ್ಲಿ ಪುರುಷಸೂಕ್ತದಿಂದ ತುಪ್ಪ ಮಿಶ್ರಿತ ಪಾಯಸದ ಆಹುತಿ ನೀಡಬೇಕು. ಮೂಲಮಂತ್ರದಿಂದ

---

153. ಪರೀಕ್ಷ್ಯೈವ ಗುರುಃ ಶಿಷ್ಯಃ ಶಿಷ್ಯೋऽಪಿ ಗುರುಮಾವ್ರಜೇತ್ ।
ಅನ್ಯಥಾ ನರಕಾಯ್ಯೈವ ಪ್ರಾಯಶ್ಚಿತ್ತಂ ಗುರೋಸ್ತಥಾ ॥ –ಭಾಗ. ತಾ.ನಿ. ೧೧–೩–೪೮

154. ಪ್ರಾತಃ ಸ್ನಾತ್ವಾ ಶುಚೌ ದೇಶೇ ಪೂಜಯಿತ್ವಾ ಜನಾರ್ದನಮ್ ।
ಸ್ನಾತಂ ಶಿಷ್ಯಂ ಸಮಾನೀಯ ತೇನೈವ ಸಹ ದೇಶಿಕಃ ॥
ಸ್ನಾಪ್ಯ ಪಂಚಾಮೃತೈರ್ಗವ್ಯೈಶ್ಚಕ್ರಾದೀನರ್ಚಯೇತ್ತತಃ ।
ಪುಷ್ಪೈರ್ಧೂಪೈಶ್ಚ ದೀಪೈಶ್ಚ ನೈವೇದ್ಯೈರ್ವಿವಿಧೈರಪಿ ॥
ತತ್ತತ್ಪ್ರಕಾಶಕೈರ್ಮಂತ್ರೈರರ್ಚಯೇತ್ ಪುರತೋ ಹರೇಃ ।
ಅಗ್ನೌ ಹೋಮಂ ಪ್ರಕುರ್ವೀತ ಇಧ್ಮಾಧಾನಾದಿ ಪೂರ್ವಕಮ್ ॥
ಪೌರುಷೇಣ ತು ಸೂಕ್ತೇನ ಪಾಯಸಂ ಘೃತಮಿಶ್ರಿತಮ್ ।
ಆಜ್ಯೇನ ಮೂಲಮಂತ್ರೇಣ ಹುತ್ವಾ ಚಾಷ್ಟೋತ್ತರಂ ಶತಮ್ ॥
ವೈಷ್ಣವ್ಯಾ ಚೈವ ಗಾಯತ್ರ್ಯಾ ಜುಹುಯಾತ್ ಪ್ರಯತೋ ಗುರುಃ ।
ಪಶ್ಚಾದಗ್ನೌ ವಿನಿಕ್ಷಿಪ್ಯ ಚಕ್ರಾದ್ಯಾಯುಧಪಂಚಕಮ್ ॥
ಪೂಜಯಿತ್ವಾ ಸಹಸ್ರಾರಂ ಧ್ಯಾತ್ವಾ ತದ್ವಹ್ನಿಮಂಡಲೇ ।
ಷಡಕ್ಷರೇಣ ಜುಹುಯಾದಾಜ್ಯಂ ವಿಂಶತಿಸಂಖ್ಯಯಾ ॥
ಸರ್ವೈಶ್ಚ ಹೇತಿಮಂತ್ರೈಶ್ಚ ಏಕೈಕಾಜ್ಯಾಹುತಿಂ ಕ್ರಮಾತ್ ।
ತತಃ ಪ್ರದಕ್ಷಿಣಂ ಕೃತ್ವಾ ಸಶಿಷ್ಯೋ ವಹ್ನಿಮಾತ್ಮವಾನ್ ॥
ನಮಸ್ಕೃತ್ವಾ ತತೋ ವಿಷ್ಣುಂ ಜಪ್ತ್ವಾ ಮಂತ್ರವರಂ ಶುಭಮ್ ।
ಪ್ರಾಙ್ಮುಖಂ ತು ಸಮಾಸೀನಂ ಶಿಷ್ಯಮೇಕಾಗ್ರಚೇತಸಮ್ ।
ಪ್ರತಪೇಚ್ಚಕ್ರಶಂಖೌ ದ್ವೌ ಹೇತಿಭಿರ್ಮಂತ್ರಮುಚ್ಚರನ್ ॥
– ವೃದ್ಧಹಾರೀತಸ್ಮೃತಿ ೨–೧೧....೧೮

(ನಾರಾಯಣಾಷ್ಟಾಕ್ಷರಮಂತ್ರದಿಂದ) ನೂರೆಂಟು ಬಾರಿ ತುಪ್ಪದ ಆಹುತಿ ನೀಡಬೇಕು. ವಿಷ್ಣುಗಾಯತ್ರಿಯಿಂದ ಹೋಮಿಸಬೇಕು. ಬಳಿಕ ಚಕ್ರ, ಶಂಖ, ಗದಾ, ನಂದಕ, ಶಾರ್ಙ್ಗ-ಧನುಸ್ ಹೋಮದ ಬೆಂಕಿಯಲ್ಲಿ ಹಾಕಬೇಕು. ಚಕ್ರವನ್ನು ವಹ್ನಿಮಂಡಲದಲ್ಲಿ ಧ್ಯಾನಿಸಬೇಕು. ವಿಷ್ಣುಷಡಕ್ಷರಮಂತ್ರದಿಂದ ಇಪ್ಪತ್ತು ಆಜ್ಯಾಹುತಿಗಳನ್ನು ನೀಡಬೇಕು. ಚಕ್ರಾದಿ ಆಯುಧಗಳ ಮಂತ್ರಗಳಿಂದ ಒಂದೊಂದು ಆಜ್ಯಾಹುತಿ ನೀಡಬೇಕು. ಅನಂತರ ಶಿಷ್ಯ-ಸಹಿತನಾಗಿ ಆ ಹೋಮದ ವಹ್ನಿಗೆ ಪ್ರದಕ್ಷಿಣೆ ಬರಬೇಕು. ಶ್ರೀವಿಷ್ಣುವಿಗೆ ನಮಸ್ಕರಿಸಬೇಕು. ನಾರಾಯಣಾಷ್ಟಾಕ್ಷರಮಂತ್ರವನ್ನು ಜಪಿಸಬೇಕು. ಶಿಷ್ಯನು ಪೂರ್ವಾಭಿಮುಖವಾಗಿ ಕುಳಿತುಕೊಂಡಿರಬೇಕು. ಏಕಾಗ್ರಮನಸ್ಕನಾಗಿರಬೇಕು. ಅಂತಹ ಶಿಷ್ಯನಿಗೆ ಗುರು ಮಂತ್ರವನ್ನು ಉಚ್ಚರಿಸುತ್ತ ಚಕ್ರ ಮತ್ತು ಶಂಖಮುದ್ರೆಗಳನ್ನು ಇಡಬೇಕು.

ಬಲತೋಳಿನಲ್ಲಿ ಚಕ್ರ ಎಡತೋಳಿನಲ್ಲಿ ಶಂಖ, ಹಣೆಯ ಮಧ್ಯದಲ್ಲಿ ಗದೆ, ಹೃದಯದಲ್ಲಿ ನಂದಕ ಖಡ್ಗ ಹಾಗೆಯೇ ನೆತ್ತಿಯ ಮೇಲೆ ಶಾರ್ಙ್ಗಧನುಸ್ಸನ್ನು ಚಿಹ್ನೆಯಾಗಿ ಮುದ್ರೆ ಒತ್ತಬೇಕು. ಬಳಿಕ ನೀರಿನಿಂದ ತೊಳೆದು ಆ ಆಯುಧಗಳನ್ನು ಪೂಜಿಸಬೇಕು. ಉಳಿದ ಹೋಮದ ಭಾಗವನ್ನು ಮುಗಿಸಿ ಬ್ರಾಹ್ಮಣಸಂತರ್ಪಣೆ ನಡೆಸಬೇಕು.

ಇದು ಪ್ರಧಾನ ವೈಷ್ಣವಸಂಸ್ಕಾರ ಎನಿಸಿದೆ. ಮೋಕ್ಷಪ್ರಾಪ್ತಿಗೆ ಪ್ರಯೋಜಕವಾದುದು.155

ಕೆಲವರು ಚಕ್ರ ಮತ್ತು ಶಂಖಗಳನ್ನಷ್ಟೇ ತೋಳುಗಳ ಬುಡದಲ್ಲಿ ಮುದ್ರೆಯನ್ನಾಗಿ ಧರಿಸಿಕೊಂಡರೆ, ಮತ್ತೆ ಕೆಲವರು ಚಕ್ರಮುದ್ರೆಯನ್ನಷ್ಟೇ ಧರಿಸಿಕೊಳ್ಳುವರು. ಯಾಕೆಂದರೆ ಶ್ರೀವಿಷ್ಣುವಿನ ಆಯುಧಗಳಲ್ಲೆಲ್ಲ ಚಕ್ರವು ಶ್ರೇಷ್ಠ. ಆದುದರಿಂದ ಅಂತಹ ಚಕ್ರಮುದ್ರೆಯಿಂದಲೇ ಮುದ್ರೆ ಹಾಕಲಾಗುವುದು.156

---

155. ದಕ್ಷಿಣೇ ತು ಭುಜೇ ಚಕ್ರಂ ವಾಮಾಂಶೇ ಶಂಖಮೇವ ಚ ।
ಗದಾಂ ಚ ಭಾಲಮಧ್ಯೇ ತು ಹೃದಯೇ ನಂದಕಂ ತದಾ ॥
ಮಸ್ತಕೇ ತು ತಥಾ ಶಾರ್ಙ್ಗಮಂಕಯೇದ್ದ್ವಿಮಲಂ ತದಾ ।
ಪಶ್ಚಾತ್ ಪ್ರಕ್ಷಾಲ್ಯ ತೋಯೇನ ಪುನಃ ಪೂಜಾಂ ಸಮಾಚರೇತ್ ॥
ಹೋಮಶೇಷಂ ಸಮಾಪ್ಯಾಥ ವೈಷ್ಣವಾನ್ ಭೋಜಯೇತ್ತತಃ ।
.... ॥
ಪ್ರಧಾನಂ ವೈಷ್ಣವಂ ತೇಷಾಂ ತಾಪಸಂಸ್ಕಾರಮುತ್ತಮಮ್ ।
ತಾಪಸಂಸ್ಕಾರಮಾತ್ರೇಣ ಪರಾಂ ಸಿದ್ಧಿಮವಾಪ್ನುಯಾತ್ ॥
– ವೃದ್ಧಹಾರೀತಸ್ಮೃತಿ ೨-೧೯.....೨೨

156. ಕೇಚಿತ್ತು ಚಕ್ರಶಂಖೌ ದ್ವೌ ಪ್ರತಪ್ತೌ ಬಾಹುಮೂಲಯೋಃ ।
ಧಾರಯಂತಿ ಮಹಾತ್ಮಾನಶ್ಚಕ್ರಮೇಕಂ ತು ಚಾಪರೇ ॥
ವೈಷ್ಣವಾನಾಂ ತು ಹೇತೀನಾಂ ಪ್ರಧಾನಂ ಚಕ್ರಮುಚ್ಯತೇ ।
ತೇನೈವ ಬಾಹುಮೂಲೇ ತು ಪ್ರತಪ್ತೇನಾಂಕಯೇದ್ ಬುಧಃ ॥
– ವೃದ್ಧಹಾರೀತಸ್ಮೃತಿ ೨-೨೩, ೨೪

ತಪ್ತಮುದ್ರಾಧಾರಣೆಯ ವಿಷಯದಲ್ಲಿ ಇನ್ನೂ ಕೆಲವು ಪ್ರಮಾಣಗಳು

ಹೀಗೆ ವೃದ್ಧಹಾರೀತಸ್ಮೃತಿಯಲ್ಲಿ ಗುರು ಶಿಷ್ಯನಿಗೆ ವೈಷ್ಣವದೀಕ್ಷೆ ನೀಡುವಾಗ ಮೊತ್ತಮೊದಲು 'ತಪ್ತಮುದ್ರಾಧಾರಣ' ಮಾಡಿಸಬೇಕೆಂದು ತಿಳಿಸಿದ್ದರೆ, ಮತ್ತೆ ಕೆಲವು ಪ್ರಮಾಣಗಳಲ್ಲಿ ಆಷಾಢಮಾಸದ 'ಶಯನೀ' ಏಕಾದಶಿಯಂದೂ, ಪ್ರಬೋಧ–ಏಕಾದಶಿಯಂದೂ ತಪ್ತಮುದ್ರಾಧಾರಣೆ ನಡೆಸಬೇಕೆಂದು ವಿಧಿಸಲಾಗಿದೆ.157

ವಿಷ್ಣುರಹಸ್ಯದಲ್ಲಿ 'ತಪ್ತಮುದ್ರಾಧಾರಣೆ'

ವಿಷ್ಣುರಹಸ್ಯದಲ್ಲಿ ಬಾಹ್ಯವಾದ ವಿಷ್ಣುದೀಕ್ಷೆಯ ಅಂಗವಾಗಿ ವಿಧಿಸಲಾಗಿರುವ 'ತಪ್ತಮುದ್ರಾಧಾರಣೆ'ಯ ಮಹತ್ತ್ವದ ಬಗ್ಗೆ ಹಾಗೂ ವಿಧಾನದ ಬಗ್ಗೆ ತುಂಬ ಮಾಹಿತಿಗಳನ್ನು ನೀಡಲಾಗಿದೆ.

ತಪ್ತಮುದ್ರಾಧಾರಣೆಯ ಮಹತ್ತ್ವ:

ಬ್ರಾಹ್ಮಣನೇ ಮುಂತಾದ ಯಾರ ಭುಜದಲ್ಲಿ 'ತಪ್ತಚಕ್ರ' –ಅಗ್ನಿಯಿಂದ ಬಿಸಿ ಮಾಡಲ್ಪಟ್ಟ ಚಕ್ರದ ಚಿಹ್ನೆಯು ಇರುವುದೋ ಅಂತಹವರು ಶ್ರೀವಿಷ್ಣುವಿನ 'ಮೂರ್ತಿ' ಎನಿಸುವರು. ಆದ್ದರಿಂದ ಅಂತಹವರನ್ನು ಎಂದೂ ಅವಮಾನಿಸಬಾರದು.158 ಯಾರು ಶಂಖಚಕ್ರಾದಿಗಳಿಂದ ಚಿಹ್ನಿತರಾಗಿರುವರೋ, ವಿಷ್ಣುದೀಕ್ಷೆಗೆ ಒಳಗಾಗಿರುವರೋ ಅಂತಹವರನ್ನು ನಿಂದಿಸುವವನು ಶ್ರೀವಿಷ್ಣುವನ್ನೇ ದ್ವೇಷಿಸಿದಂತೆ.159 ತಪ್ತಚಕ್ರಾಂಕಿತನಾದ ಚಾಂಡಾಲನೂ ಉತ್ತಮನೆನಿಸುವನು. ಹೀಗಿರುವಾಗ ಸದಾಚಾರಸಂಪನ್ನರಾದ, ಪುಣ್ಯಶಾಲಿಗಳಾದ ಬ್ರಾಹ್ಮಣರು ತಪ್ತಚಕ್ರಾಂಕಿತರಾದರೆ ಶ್ರೇಷ್ಠರೆನಿಸುವರೆಂಬುದು ಚೆನ್ನಾಗಿ ಸಿದ್ಧಿಸುವುದು.160 ನಾರಿಯಾಗಲೀ ಪುರುಷನಾಗಲೀ ತಪ್ತಚಕ್ರಾಂಕಿತನಾಗದಿದ್ದರೆ ಶ್ಮಶಾನದ ಕಟ್ಟಿಗೆಯಂತೆ ಮೈಲಿಗೆ ಎನಿಸಿದ್ದು ಅಂತಹ ವ್ಯಕ್ತಿಯ ಸ್ಪರ್ಶ ಆದರೆ ಸ್ನಾನವನ್ನು ನಡೆಸಬೇಕು.161

---

157. ಶಯನ್ಯಾಂ ಚೈವ ಬೋಧಿನ್ಯಾಂ ಚಕ್ರತೀರ್ಥೇ ತಥೈವ ಚ ।
ಶಂಖಚಕ್ರವಿಧಾನೇನ ವಹ್ನಿಪೂತೋ ಭವೇನ್ನರಃ ॥

158. ತಪ್ತಚಕ್ರಂ ಭುಜೇ ಯಸ್ಯ ವಿಪ್ರಾದೇರ್ಯಸ್ಯ ಕಸ್ಯ ವಾ ।
ವಿಷ್ಣೋರೇವ ಹಿ ಸಾ ಮೂರ್ತಿರ್ನಾವಮನ್ಯೇತ ಕರ್ಹಿಚಿತ್ ॥ –೨–೫–೨

159. ಅಂಕಿತಂ ಶಂಖಚಕ್ರಾದ್ಯೈರ್ವಿಷ್ಣುದೀಕ್ಷಾನ್ವಿತಂ ನರಮ್ ।
ಯೋ ನಿಂದತಿ ವಿಮೂಢಾತ್ಮಾ ಸ ದ್ವೇಷ್ಟಾ ವಿಷ್ಣುಮೇವ ಹಿ ॥ –೨–೫೬

160. ತಪ್ತಚಕ್ರಾಂಕಿತೋ ಯಃ ಸ್ಯಾತ್ ಸ ಚಾಂಡಾಲೋ ವರೋ ಭವೇತ್ ।
ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾಃ ಸದಾಚಾರಾ ವಿಶೇಷತಃ ॥ –೨–೬೧

161. ನಾರೀ ವಾ ಪುರುಷೋ ವಾಪಿ ತಪ್ತಚಕ್ರಾಂಕವರ್ಜಿತಃ ।
ಶ್ಮಶಾನಕಾಷ್ಠವತ್ತಸ್ಯ ಸ್ಪರ್ಶೇ ಸ್ನಾನಂ ಸಮಾಚರೇತ್ ॥ –೨–೬೩

ಯಾವ ಸ್ತ್ರೀಯ ದೇಹದಲ್ಲಿ ತಪ್ತಚಕ್ರದ ಹಾಗೂ ಶಂಖದ ಚಿಹ್ನೆ ಇಲ್ಲವೋ ಅಂತಹ ಸ್ತ್ರೀ ಮುಟ್ಟಿದ ಹವ್ಯವನ್ನು ದೇವತೆಗಳು ಸ್ವೀಕರಿಸಲಾರರು; ಕವ್ಯವನ್ನು ಪಿತೃಗಳು ಸ್ವೀಕರಿಸರು. ನಾಯಿಯ ಸ್ಪರ್ಶಕ್ಕೆ ಒಳಗಾದ ವಸ್ತುವಿನ ಬಗ್ಗೆ ಹೇಗೋ ಹಾಗೆ ಆ ಹವ್ಯಕವ್ಯಗಳ ಬಗ್ಗೆ ತೀವ್ರ ಅಸಮಾಧಾನವನ್ನು ತಾಳುವರು.162 ಪತಿತರಾದವರೂ ತಪ್ತ ಚಕ್ರಾದಿಗಳನ್ನು ಧರಿಸಿದರೆಂದರೆ ಶುದ್ಧರಾಗುವರು. ಹೀಗಿರುವಾಗ ತಮ್ಮತಮ್ಮ ವರ್ಣಾಶ್ರಮಧರ್ಮನಿಷ್ಠರಾದ ಬ್ರಾಹ್ಮಣಾದಿಗಳು ತಪ್ತಚಕ್ರಾದಿಗಳ ಧಾರಣೆಯಿಂದ ಪರಿಶುದ್ಧರಾಗುವರೆಂದು ಚೆನ್ನಾಗಿ ಸಿದ್ಧಿಸುವುದು.163 ಶಿಖೆ ಹಾಗೂ ಯಜ್ಞೋಪವೀತ ಗಳಿಲ್ಲದವನು ಯಾವುದೇ ಕರ್ಮದಲ್ಲಿ ಹೇಗೆ ಅಧಿಕಾರಿ ಎಂದೆನಿಸುವುದಿಲ್ಲವೋ ಅದೇ ರೀತಿಯಾಗಿ ತಪ್ತಚಕ್ರಾದಿಚಿಹ್ನೆಯಿಲ್ಲದವನು ಯಾವುದೇ ಕರ್ಮದಲ್ಲಿ ಅಧಿಕಾರಿ ಎನಿಸುವುದಿಲ್ಲ.164 ಗಾಯತ್ರ್ಯಾದಿ ಮಂತ್ರಗಳ ಜಪದಲ್ಲಾಗಲೀ, ವೇದಾಧ್ಯಯನದಲ್ಲಾಗಲೀ ತಪ್ತಮುದ್ರಾಧಾರಣೆಯಿಲ್ಲದವನು ಖಂಡಿತ ಅಧಿಕಾರಿ ಎನಿಸುವುದಿಲ್ಲ.165 ವೈಷ್ಣವರು ಮಂತ್ರಗ್ರಹಣಕಾಲದಲ್ಲಿ ತಪ್ತಚಕ್ರಾದಿಗಳ ಧಾರಕರಾಗಿದ್ದರೆಂದರೆ ಅವರ ಪಾಲಿಗೆ ಮಂತ್ರ ಆರುಪಟ್ಟು ಹೆಚ್ಚು ಫಲಿಸುವುದು.166 ಮಂತ್ರದ ಉಪದೇಶದ ಅಂಗವಾಗಿ ಅಲ್ಲದೆ, ಇತರ ಸಂದರ್ಭಗಳಲ್ಲೂ, ತಪ್ತಮುದ್ರಾಧಾರಣ ನಡೆಸಿಕೊಳ್ಳಲ್ಪಟ್ಟಲ್ಲಿ ಅದರಿಂದ ಪಾಪಗಳ ಪರಿಹಾರ; ಪುಣ್ಯಗಳ ಸಮೃದ್ಧಿ ಉಂಟಾಗುವುದು.167 ಇದಕ್ಕಿಂತಲೂ ಹೆಚ್ಚಾಗಿ ಶ್ರೀವಿಷ್ಣು ವಿಗೆ ಪ್ರೀತಿಕರವಾದುದು.

ಯಾರು ಮನಸ್ಸಿನಿಂದ ನಾನು ಶ್ರೀವಿಷ್ಣುವಿಗೆ ಸೇರಿರುವವನು ಎಂದು ಭಾವಿಸುತ್ತ ವೈಷ್ಣವಚಿಹ್ನೆಯಾದ ತಪ್ತಚಕ್ರಾದಿಮುದ್ರೆಗಳ ಚಿಹ್ನೆಯನ್ನು ಧರಿಸಿರುವವನೋ, ಶ್ರೀವಿಷ್ಣುಪರ

---

162. ತಪ್ತಚಕ್ರಂ ತಥಾ ಶಂಖಂ ಯಸ್ಯಾ ಗಾತ್ರೇ ನ ವಿದ್ಯತೇ ।
ಹವ್ಯಂ ಕವ್ಯಂ ತಯಾ ಸ್ಪೃಷ್ಟಂ ದೇವಾಶ್ಚ ಪಿತರೋಽಪಿ ಹಿ ।
ನೈವ ಗೃಹ್ಣಂತಿ ಕುಪಿತಾ ಶುನಾ ಸ್ಪೃಷ್ಟಂ ಯಥಾ ತಥಾ ॥ –೨–೬೪

163. ಪತಿತಾ ಅಪಿ ಶುದ್ಧ್ಯಂತಿ ತಪ್ತಚಕ್ರಾದಿಧಾರಣಾತ್ ।
ಸ್ವಸ್ವವರ್ಣಾಶ್ರಮಾಚಾರಾಃ ಕಿಂ ಪುನರ್ಬ್ರಾಹ್ಮಣಾದಯಃ ॥ –೨–೬೬

164. ಶಿಖಾಯಜ್ಞೋಪವೀತಾಭ್ಯಾಂ ಯಥಾ ಹೀನೋ ನ ಕರ್ಮಸು ।
ಅಧಿಕಾರೀ ತಥಾ ನ ಸ್ಯಾತ್ತಪ್ತಚಕ್ರಾದಿವರ್ಜಿತಃ ॥ –೨–೧೦

165. ಗಾಯತ್ರ್ಯಾದಿಷು ಮಂತ್ರೇಷು ವೇದಸ್ಯಾಧ್ಯಯನಾದಿಷು ।
ಅತಪ್ತಚಕ್ರಗಾತ್ರೋಽಪಿ ನಾಧಿಕಾರೀ ಭವೇದ್ ಧ್ರುವಮ್ ॥ –೨–೧೨

166. ಮಂತ್ರಗ್ರಹಣಕಾಲೇ ತು ತಪ್ತಚಕ್ರಾದಿಧಾರಣಮ್ ।
ವೈಷ್ಣವೈಃ ಕ್ರಿಯತೇ ತದ್ಧಿ ಮಂತ್ರಷಾಡ್ಗುಣ್ಯಕೃದ್ ಭವೇತ್ ॥ –೨–೧೩

167. ವಿನಾ ಮಂತ್ರಗ್ರಹಂ ಯತ್ತು ತಪ್ತಚಕ್ರಾದಿಧಾರಣಮ್ ।
ಪಾಪಾನಾಂ ನಾಶಕಂ ತತ್ ಸ್ಯಾತ್ ಪುಣ್ಯಾನಾಂ ಚ ವಿವರ್ಧಕಮ್ ।
ವಿಷ್ಣುಪ್ರೀತಿಕರಂ ಭೂಯಸ್ತತೋಽಪಿ....... ॥ –೨–೧೪, ೧೫

ಮಂತ್ರಗಳನ್ನು ಜಪಿಸುವವನೋ, ಅವನ ನಾಮಗಳ ಕೀರ್ತನೆಯನ್ನು ನಡೆಸುತ್ತಿರುವವನೋ ಅವನು ಶ್ರೀಹರಿಯ ಮೂರ್ತಿ ಯಾಕೆ ಆಗಲಾರ?168

ಹೀಗೆ ಶ್ರೀವಿಷ್ಣುವಿನ ವಿಶೇಷಸನ್ನಿಧಾನಕ್ಕೆ ಪ್ರಯೋಜಕವಾದುದು ನಾನು ಶ್ರೀವಿಷ್ಣುವಿಗೆ ಸೇರಿದವನೆಂಬ ಅನುಸಂಧಾನಪೂರ್ವಕವಾದ ತಪ್ತಮುದ್ರಾಧಾರಣೆ.

ವಿಧಿವತ್ತಾಗಿ ಶಿಷ್ಯನಿಗೆ ಮುದ್ರಾಧಾರಣೆ ಮಾಡಿಸದೆ ವೈಷ್ಣವಮಂತ್ರವನ್ನು ಉಪದೇಶಿಸಿದಲ್ಲಿ ಉಪದೇಶಿಸಿದ ಗುರುವೂ, ಉಪದೇಶ ಪಡಕೊಂಡ ಶಿಷ್ಯನೂ ನರಕವನ್ನು ಹೊಂದುವರು.169

ಗೋಪೀಚಂದನಾದಿಗಳಿಂದ ಚಕ್ರಾದಿಗಳ ಧಾರಣೆ

ಹೀಗೆ ತಪ್ತಮುದ್ರಾಧಾರಣೆಯಲ್ಲದೆ, ಪ್ರತಿನಿತ್ಯ ಹೃದಯ, ಬಾಹು, ಉದರಾದಿಗಳಲ್ಲಿ ಚಕ್ರ, ಶಂಖ ಇತ್ಯಾದಿಗಳ ಚಿಹ್ನೆಗಳನ್ನು ಶಾಸ್ತ್ರದಲ್ಲಿ ಹೇಳಿರುವ ಕ್ರಮದಂತೆ ಗೋಪೀಚಂದನಾದಿಗಳಿಂದ ಊರ್ಧ್ವಪುಂಡ್ರಗಳ ಮೇಲೆ ಮೂಡಿಸಿಕೊಳ್ಳಬೇಕು.170

ತಪ್ತಮುದ್ರಾಧಾರಣೆಯ ವಿಧಾನ

ವಿಧಿವತ್ತಾಗಿ ಅಗ್ನಿಪ್ರತಿಷ್ಠೆ ನಡೆಸಿ ಎಳ್ಳು ಹಾಗೂ ತುಪ್ಪದಿಂದ ಅಥವಾ ಬರೇ ತುಪ್ಪದಿಂದ ವ್ಯಾಹೃತಿಮಂತ್ರದಿಂದ ಸಾವಿರ ಬಾರಿ ಹೋಮಿಸಬೇಕು. ವಷಟ್ಕಾರರೂಪದ ವಿಷ್ಣುಮಂತ್ರದಿಂದ ನೂರೆಂಟು ಬಾರಿ ಹೋಮಿಸಬೇಕು. ಹೀಗೆ ಹೋಮದ ಬಳಿಕ, ಅಂತಹ ಹೋಮದ ಅಂಗವಾದ ಅಗ್ನಿಯಿಂದ ಚಕ್ರ ಹಾಗೂ ಶಂಖಗಳನ್ನು ಬಿಸಿಮಾಡಿ ಅವುಗಳ ಚಿಹ್ನೆಯನ್ನು ದೇಹದಲ್ಲಿ ಸ್ಥಾಪಿಸಬೇಕು. ತಂದೆಯಾಗಲೀ, ಗುರುವಾಗಲೀ, ಮಹಾತ್ಮರಾದ ಯಾರೂ ಆಗಬಹುದು. ಅಂತಹವರು ಮುದ್ರಾಧಾರಣ ಮಾಡಬೇಕು. ಮುದ್ರಾಧಾರಣ ಮಾಡಿಸಿಕೊಳ್ಳುವ ವ್ಯಕ್ತಿ ಸಾಷ್ಟಾಂಗಪ್ರಣಾಮ ಸಲ್ಲಿಸಿ, ವಿಷ್ಣುದೀಕ್ಷೆಗಾಗಿ ಶರಣಾಗತನಾಗಬೇಕು; ವಿಷ್ಣುಭಕ್ತನಾಗಿರಬೇಕು. ಅಂತಹವನಿಗೆ ಬಲಬಾಹುವಿನಲ್ಲಿ ಚಕ್ರಚಿಹ್ನೆಯನ್ನೂ ಎಡ ಬಾಹುವಿನಲ್ಲಿ ಶಂಖಚಿಹ್ನೆಯನ್ನೂ –ಹೀಗೆ ಎರಡು ಮುದ್ರೆಗಳನ್ನು ಹಾಕಬೇಕು. ಸ್ತನಗಳ ಮೇಲ್ಭಾಗದಲ್ಲೂ ಹೊಟ್ಟೆಯಲ್ಲೂ ಹೀಗೆ ಐದು ಮುದ್ರೆಗಳನ್ನೂ ಹಾಕಿಸಿಕೊಳ್ಳಬಹುದು. ಬಾಹ್ಯದೀಕ್ಷೆಯ ಪ್ರಮುಖ ಅಂಗವಾದ ಮುದ್ರಾಧಾರಣೆಯನ್ನು

---

168. ಯಃ ಕುರ್ಯಾದ್ವೈಷ್ಣವಂ ಚಿಹ್ನಂ ತಪ್ತಚಕ್ರಾದಿಧಾರಣಮ್ ।
ತದೀಯೋಽಸ್ಮೀತಿ ಯೋ ನಿತ್ಯಂ ಭಾವಯನ್ ಮನಸಾಽಪಿ ಹಿ ॥
ತನ್ಮಂತ್ರಜಾಪಕೋ ಯಃ ಸ್ಯಾತ್ತನ್ನಾಮ್ನಾಂ ಚಾಪಿ ಕೀರ್ತಕಃ ।
ಕಥಂ ಸ ನ ಭವೇನ್ಮೂರ್ತಿಃ ಸರ್ವದೇವಪತೇರ್ಹರೇಃ ॥ –೨–೬೮, ೬೯

169. ಅದತ್ವಾ ವಿಧಿವನ್ಮುದ್ರಾಂ ಯೋ ಮಂತ್ರಂ ವೈಷ್ಣವಂ ವದೇತ್ ।
ಸ ಯಾತಿ ನರಕಂ ಘೋರಂ ಶಿಷ್ಯೇಣಾಪಿ ಸಹೈವ ತು ॥ –೮–೧೮

170. .... ಪ್ರತ್ಯಹಂ ಲಿಖೇತ್ ।
ಸ್ವಸ್ವವರ್ಣೋಕ್ತಪುಂಡ್ರೇಷು ಹೃದಿ ಬಾಹೂದರಾದಿಷು ।
ಚಕ್ರಾದೀನಿ ಯಥಾಸ್ಥಾನಂ ದ್ವಾರವತ್ಯಾದಿಮೃತ್ಸ್ನಯಾ ॥ –೨–೮೬

ಯತ್ನದಿಂದ ಮಾಡಿಸಿಕೊಳ್ಳಬೇಕು.[171] ಬಾಲಕರಿಗೆ ಹೊಟ್ಟೆಯ ಮೇಲಷ್ಟೇ ತಪ್ತಮುದ್ರಾಧಾರಣ ಮಾಡಿಸಬೇಕು. ಸ್ತ್ರೀಯರಿಗೆ ಎರಡು ಬಾಹುಗಳಲ್ಲಷ್ಟೇ ತಪ್ತಮುದ್ರಾಧಾರಣ. ಶೂದ್ರಾದಿಗಳಿಗೂ ಹಾಗೆಯೇ. ಶೂದ್ರಾದಿಗಳಿಗೆ ಹೋಮಾಗ್ನಿಯಿಂದ ಬಿಸಿಗೊಳಿಸಿದ ಮುದ್ರೆಗಳ ಚಿಹ್ನೆ ಹಾಕಬಾರದು. ಬ್ರಾಹ್ಮಣರಿಗಷ್ಟೇ ಹೋಮಾಗ್ನಿತಪ್ತಮುದ್ರಾಧಾರಣೆ. ಹಾಗೆಯೇ ಬ್ರಾಹ್ಮಣಸ್ತ್ರೀಯರಿಗೆ, ಮಕ್ಕಳಿಗೆ ಹೋಮಾಗ್ನಿತಪ್ತಗಳಾದ ಚಕ್ರಾದಿಗಳ ಚಿಹ್ನೆಯನ್ನು ಹಾಕಬಹುದು.[172]

ಸ್ಥಂಡಿಲದಲ್ಲಿ ಅಗ್ನಿಪ್ರತಿಷ್ಠಾಪನೆ ಮಾಡಿ ಆ ಅಗ್ನಿಯನ್ನು 'ವಾಸುದೇವಾಯ ನಮಃ' –ಇತ್ಯಾದಿ ನಾಲ್ಕು ಮಂತ್ರಗಳಿಂದ ಅಭಿಮಂತ್ರಿಸಬೇಕು. ಆ ಅಗ್ನಿಯಲ್ಲಿ ಚಕ್ರಾದಿಗಳನ್ನು ಬಿಸಿ ಮಾಡಿ ದ್ವಿಜರಲ್ಲದ ಶೂದ್ರಾದಿಗಳಿಗೆ ತಪ್ತಮುದ್ರಾಧಾರಣೆಯ ಸಂಸ್ಕಾರವನ್ನು ಮಾಡಬೇಕು.[173]

ಅಯೋಗ್ಯದೇಶಕಾಲಗಳಲ್ಲಿ, ವಿಧಾನವನ್ನು ಉಲ್ಲಂಘಿಸಿ, ಹಣ ಇತ್ಯಾದಿಗಳ ಲೋಭಕ್ಕೊಳಗಾಗಿ, ಅಯೋಗ್ಯ ಪುರುಷನಿಂದ, ಅಥವಾ ತಾನೇ ಶಂಖಚಕ್ರಾದಿಗಳ ಧಾರಣೆ ನಡೆಸಿದಲ್ಲಿ ಗುರುವೂ, ಶಿಷ್ಯನೂ ನರಕದಲ್ಲಿ ಬೀಳಬೇಕಾಗುವುದು. ಆದುದರಿಂದ ಸದ್ಗುರವಿನ ಮೂಲಕ ವಿಧಿವತ್ತಾಗಿಯೇ ಮುದ್ರಾಧಾರಣ ಮಾಡಿಸಿಕೊಳ್ಳಬೇಕು.[174]

---

171. ಅಭಿವಾದನತಃ ಪಶ್ಚಾತ್ ಪ್ರಪನ್ನಂ ವಿಷ್ಣುತತ್ಪರಮ್ ।
ಪಿತಾ ವಾಽಪಿ ಗುರುರ್ವಾಽಪಿ ಯಃ ಕೋಽಪಿ ಹಿ ಮಹಾನ್ ಭವೇತ್ ॥
ಸ ದಹೇದ್ದಕ್ಷಿಣೇ ಬಾಹೌ ಚಕ್ರಂ ಶಂಖಂ ಚ ವಾಮತಃ ।
ಸ್ತನಯೋರೂರ್ಧ್ವತಶ್ಚಾಪಿ ಸ್ವೇಚ್ಛಯಾ ಚ ತಥೋದರೇ ॥
ಏವಂ ಮುದ್ರಾಪಂಚಕಂ ವಾ ಮುದ್ರಾದ್ವಯಮಥಾಪಿ ವಾ ।
ಗೃಹ್ಣೀಯಾತ್ತು ಪ್ರಯತ್ನೇನ ಬಾಹ್ಯದೀಕ್ಷಾ ತು ಸಾ ಭವೇತ್ ॥ –೭–೮೮, ೮೯, ೯೦

172. ಬಾಲಾನಾಮುದರೇಷ್ವೇವ ಬಾಹ್ವೋರೇವ ಹಿ ಯೋಷಿತಾಮ್ ।
ಶೂದ್ರಾದೀನಾಂ ತಥೈವ ಸ್ಯಾನ್ಮುದ್ರಾದ್ವಿತಯಮೇವ ಹಿ ॥
ಶೂದ್ರಾದಿಯೋಷಿತಾದೀನಾಂ ನ ದಹೇತ್ ಹೋಮವಹ್ನಿನಾ ।
ದ್ವಿಜಾನಾಮೇವ ಹೋಮಾಗ್ನಿತಪ್ತಚಕ್ರಾದಿಧಾರಣಮ್ ॥
ದ್ವಿಜಾನಾಂ ಯೋಷಿತೋ ಬಾಲಾಶ್ಚಕ್ರಶಂಖಾದಿಮುದ್ರಯಾ ।
ಹೋಮಾಗ್ನಿನಾಪಿ ದಗ್ಧವ್ಯಾಃ ಶೂದ್ರಾದೀನ್ ನ ತಥಾ ದಹೇತ್ ॥ –೭–೯೩

173. ಸ್ಥಂಡಿಲೇಽಗ್ನಿಂ ಪ್ರತಿಷ್ಠಾಪ್ಯ ವಾಸುದೇವಾದಿನಾಮಭಿಃ ।
ಚತುರ್ಭಿಶ್ಚ ಚತುರ್ಥ್ಯಂತೈರ್ನಮೋಽಂತೈರ್ಮಂತ್ರಯೇಚ್ಚ ತಮ್ ।
ಚಕ್ರಾದಿ ತತ್ರ ಸಂತಾಪ್ಯ ಸಂಸ್ಕಾರ್ಯಾ ಹಿ ದ್ವಿಜೇತರಾಃ ॥ –೮–೮

174. ಅಕಾಲೇ ಚಾಪ್ಯದೇಶೇ ಚ ವಿಧಿಮುಲ್ಲಂಘ್ಯ ಯೋ ನರಃ ।
ಲೋಭಾದ್ಯುಪಾಧಿನಾ ವಾಽಪಿ ಯಸ್ಮಾತ್ ಕಸ್ಮಾಚ್ಚ ಪೂರುಷಾತ್ ॥
ಸ್ವಯಂ ವಾಽಪಿ ದಹೇದ್ಗಾತ್ರಂ ಚಕ್ರಶಂಖಾದಿಕೈರಪಿ ।
ಸೋಽಪಿ ವ್ರಜೇತ ನಿರಯಂ ಸಾಕಂ ಸ್ವಗುರುಣಾ ಚಿರಮ್ ।
ತಸ್ಮಾತ್ತು ವಿಧಿನಾ ಬ್ರಹ್ಮನ್ ಗೃಹ್ಣೀಯಾತ್ ಸದ್ಗುರೋರಪಿ ॥ –೯–೨೦, ೨೧, ೨೨

ಶ್ರೀ ವಿಜಯೀಂದ್ರತೀರ್ಥವಿರಚಿತ

'ಚಕ್ರಮೀಮಾಂಸಾ'ದಲ್ಲಿ ತಪ್ತಮುದ್ರಾಧಾರಣೆಯ ಬಗ್ಗೆ ಶ್ರುತಿಗಳು

ಶ್ರೀ ರಾಘವೇಂದ್ರಸ್ವಾಮಿಗಳ ಪರಮಗುರುಗಳಾದ ಶ್ರೀ ವಿಜಯೀಂದ್ರಸ್ವಾಮಿಗಳು ಮುದ್ರಾಧಾರಣೆಯ ಬಗ್ಗೆ 'ಚಕ್ರಮೀಮಾಂಸಾ' – ಎಂಬ ವಿಶಿಷ್ಟವಾದ ಕೃತಿಯನ್ನು ರಚಿಸಿರುವರು. ಅದರಲ್ಲಿ ಮುಖ್ಯವಾಗಿ ಚಕ್ರಾದಿಮುದ್ರಾಧಾರಣೆಯ ವಿಷಯದಲ್ಲಿ ಹತ್ತಕ್ಕಿಂತಲೂ ಅಧಿಕ ಶ್ರುತಿವಚನಗಳನ್ನೂ, ಮೂವತ್ತಕ್ಕಿಂತಲೂ ಅಧಿಕ ಸ್ಮೃತಿವಚನಗಳನ್ನೂ ಉದಾಹರಿಸಿರುವರು. ಅದರಲ್ಲಿ ಉದಾಹೃತಗಳಾದ ಶ್ರುತಿವಚನಗಳು ಹೀಗಿವೆ–

ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ ಪ್ರಭುರ್ಗಾತ್ರಾಣಿ ಪರ್ಯೇಷಿ ವಿಶ್ವತಃ ।
ಅತಪ್ತತನೂರ್ನ ತದಾಮೋ ಅಶ್ನುತೇ ಶೃತಾಸ ಇದ್ವಹಂತಸ್ತತ್ಸಮಾಶತ ॥

–[ಮೂರು ವೇದಗಳಲ್ಲೂ ಬಂದಿರುವ ಮಾತು]

ಬ್ರಹ್ಮ ಎನಿಸುವ ವೇದಕ್ಕೆ, ಚತುರ್ಮುಖನಿಗೆ, ಬ್ರಾಹ್ಮಣಜಾತಿಗೆ ರಕ್ಷಕನಾಗಿದ್ದು ಬ್ರಹ್ಮಣಸ್ಪತಿ ಎನಿಸಿರುವ ವಿಷ್ಣುವೇ! ಸಮರ್ಥನಾದ ನೀನು ಎಲ್ಲರ ಶರೀರಗಳಲ್ಲಿ ಅಂತರ್ಯಾಮಿರೂಪದಿಂದ ಇದ್ದುಕೊಂಡು ವ್ಯಾಪಿಸಿರುವೆ. ಅಂತಹ ನಿನ್ನ –ಪವಿತ್ರಗೊಳಿಸುವುದರಿಂದಲೂ, ರಕ್ಷಿಸುವುದರಿಂದಲೂ ಪವಿತ್ರ ಎನಿಸಿರುವ– ಸುದರ್ಶನಚಕ್ರವು ವಿಷ್ಣುಭಕ್ತರಲ್ಲಿ ವ್ಯಾಪಿಸಿದೆ.

ಅಂತಹ ಅಗ್ನಿಯಿಂದ ಬಿಸಿ ಮಾಡಲ್ಪಟ್ಟ ಚಕ್ರದಿಂದ ಯಾರ ಶರೀರವು ಅಂಕಿತವಾಗಿರುವುದಿಲ್ಲವೋ, ಸುಟ್ಟುಹೋಗದ ಪಾಪವುಳ್ಳ ಅಂತಹವನು ಬ್ರಹ್ಮನನ್ನು ಹೊಂದುವುದಿಲ್ಲ. ಸಂಸ್ಕಾರಕ್ಕೊಳಗಾದ ವಹ್ನಿಯ ಸಂಪರ್ಕಕ್ಕೊಳಗಾದ ಚಕ್ರದ ಮುದ್ರೆಯನ್ನು ಅನೇಕ ಬಾರಿ ಧರಿಸಿಕೊಂಡವರು ಹಾಗೂ ಗೋಪೀಚಂದನಾದಿಗಳಿಂದ ಪ್ರತಿನಿತ್ಯ ಚಕ್ರಾದಿಗಳ ಚಿಹ್ನೆ ಧರಿಸುತ್ತ ಇರುವವರು ಬ್ರಹ್ಮನನ್ನು ಹೊಂದುವರು.

ಚರಣಂ ಪವಿತ್ರಂ ವಿತತಂ ಪುರಾಣಂ ಯೇನ ಪೂತಸ್ತರತಿ ದುಷ್ಕೃತಾನಿ ।
ತೇನ ಪವಿತ್ರೇಣ ಶುದ್ಧೇನ ಪೂತಾ ಅತಿ ಪಾಪ್ಮಾನಮರಾತಿನ್ತರೇಮ ॥

– ತೈತ್ತಿರೀಯಶ್ರುತಿ

ಯಾವ ಚಕ್ರದ ಚಿಹ್ನೆಗೊಳಪಟ್ಟವನು ಶುದ್ಧನಾಗಿ ಪಾಪಗಳನ್ನು ದಾಟುವನು. ಅಂತಹ ವಿಸ್ತೃತವಾದ, ಪುರಾತನವಾದ ಆ ಸುದರ್ಶನವು ಪವಿತ್ರಗೊಳಿಸುವುದು. ಅಂತಹ ಯಾವುದೇ ದೋಷವಿಲ್ಲದ, ತನ್ನ ಸಂಪರ್ಕಕ್ಕೆ ಒಳಗಾದವರನ್ನೂ ಪವಿತ್ರಗೊಳಿಸುವ ಚಕ್ರದ ಚಿಹ್ನೆಯಿಂದ ಪವಿತ್ರರಾಗಿ ಪಾಪರೂಪವಾದ ಶತ್ರುವನ್ನು ಅತಿಕ್ರಮಿಸಿ ಇರುವೆವು.

ಲೋಕಸ್ಯ ದ್ವಾರಮರ್ಚಿಷ್ಮತ್ ಪವಿತ್ರಂ ಜ್ಯೋತಿಷ್ಮದ್ ಭ್ರಾಜಮಾನಂ ಮಹಸ್ವತ್ । ಅಮೃತಸ್ಯ ಧಾರಾ ಬಹುಧಾ ದೋಹಮಾನಂ ಚರಣಂ ನೋ ಲೋಕೇ ಸುಧಿತಾನ್ದಧಾತು ॥

– ತೈತ್ತಿರೀಯಶ್ರುತಿ

ಜನರಿಗೆ ಪುರುಷಾರ್ಥದ ಗಳಿಕೆಗೆ ಉಪಾಯವೆನಿಸಿರುವ, ಜ್ವಾಲೆಗಳಿಂದ, ಕಿರಣಗಳಿಂದ ಕೂಡಿದ, ಪ್ರಕಾಶವುಳ್ಳ, ಶೋಭಿಸುತ್ತಿರುವ, ಮೋಕ್ಷದ ಅನುಭವವಿಶೇಷಗಳನ್ನು ಬೇರೆಬೇರೆ ಉಪಾಯಗಳಿಂದ ಸುರಿಸುತ್ತಿರುವ ಸುದರ್ಶನಚಕ್ರವು ನಮ್ಮನ್ನು ಈ ಲೋಕದಲ್ಲೂ ಪರಲೋಕದಲ್ಲೂ ಸುಪ್ರತಿಷ್ಠಿತರನ್ನಾಗಿ ಮಾಡಲಿ. [ನಮ್ಮ ದೇಹದಲ್ಲಿ ಧರಿಸಿಕೊಳ್ಳಲ್ಪಡುವ ತಪ್ತಚಕ್ರವು ಹೀಗೆ ಅನುಗ್ರಹಿಸುವುದು ಎಂದು ತಾತ್ಪರ್ಯ.]

ಚಮೂಷಚ್ಛ್ಯೇನಃ ಶಕುನೋ ಬಿಭೃತ್ವಾ ಗೋವಿಂದುರ್ದ್ರಪ್ಸ ಆಯುಧಾನಿ ಬಿಭ್ರತ್ । ಅಪಾಮೂರ್ಮಿಂ ಸಚಮಾನಃ ಸಮುದ್ರಂ ತುರೀಯಂ ಧಾಮ ಮಹಿಷೋ ವಿವಕ್ತಿ ॥ – *ಋ.ವೇ. (೧೯-೯೬-೯), ಸಾ.ವೇ. (೧೧೭೭)*

ಮಾತು ಮುಂತಾದುವನ್ನು ಹೊಂದಿರುವ ಪ್ರಯುಕ್ತ ಗೋವಿಂದ ಎನಿಸುವ ಭಗವಂತನ ಆಯುಧಗಳಾದ ಚಕ್ರಾದಿಗಳನ್ನು ಧರಿಸಿರುವ ಪುರುಷನು ಪಾಪಸಮೂಹದ ನಾಶಕ್ಕೆ ಕಾರಣವಾಗುವ ತನ್ನ ಉದ್ಧಾರಕ್ಕೆ ಸಮರ್ಥನಾದ, ತನ್ನ ಸಂಬಂಧಿಗಳ ಧಾರಣೆ ಹಾಗೂ ಭರಣೆಗಳಿಗೂ ಸಮರ್ಥನಾಗಿರುವ, ಆದಿತ್ಯನಿಗೆ ಸದೃಶನಾದ, ಗುಣಗಳಿಂದ ತುಂಬಿತುಳುಕುತ್ತಿರುವ, ತಾಯಿಯ ಗರ್ಭದೊಳಗಿನ ಜಲದ ಮುದ್ದೆಯಂತಿರುವ ಸಂಸಾರದಲ್ಲಿ ಸ್ವಚ್ಛಂದವಾಗಿ ಸಂಚರಿಸುವ ಸ್ವಭಾವದ, ಪೂಜಿತನಾದ –ಹೀಗೆ ಏಳು ಪದಗಳಿಂದ ಹೇಳಲ್ಪಟ್ಟ ಗುಣಗಳಿಂದ ಕೂಡಿದವನಾಗಿ, ವಾಸುದೇವ ಎಂಬ ಹೆಸರಿನ ನಾಲ್ಕನೇ ಸ್ವರೂಪವಾದ ವಾಸುದೇವ ಎನಿಸುವ ತೇಜಸ್ಸನ್ನು ಪಡೆಯುವನು.

ಹೀಗೆ ಸಂಸಾರನಿವೃತ್ತಿಪೂರ್ವಕವಾಗಿ ನಾಲ್ಕನೇ ಸ್ವರೂಪವಾದ ವಾಸುದೇವನನ್ನು ಹೊಂದಬೇಕೆಂಬ ಬಯಕೆ ಉಳ್ಳವನು ಗೋವಿಂದನ ತಪ್ತಚಕ್ರಾದ್ಯಾಯುಧಗಳನ್ನು ಬಾಹುಮೂಲಾದಿಗಳಲ್ಲಿ ಧರಿಸಿಕೊಳ್ಳಬೇಕು.

ನಿಚಿಕ್ಷೇಪ ಸುಷಣಂ ಭಿದ್ಯಮಾನಂ ಮಧ್ಯೇ ಬಾಹುಮುದಧತ್ ಸುದರ್ಶನಮ್ । ವಿಷ್ಣೋರಿದಂ ಭೂರಿದಂ ಭೂರಿತೇಜಃ ಪ್ರಧರ್ಷತಿ ದಿವಾನಕ್ತಂ ಬಿಭ್ರಯುಸ್ತಜ್ಜನಾಸಃ ॥ – *ಬೃಹದಾರಣ್ಯಕವಿಶೇಷೇ*

ಬಾಹುಗಳ ಮಧ್ಯದ ಎದೆಯಲ್ಲಿ ಸುದರ್ಶನಚಕ್ರವನ್ನು ಯಾರು ಧರಿಸಿರುವನೋ ಅಂತಹ ಚಕ್ರಧಾರಿಯು ಜನರನ್ನು ಭೇದಿಸುವಂತಿರುವ, ಅವರ ನಾಶಕರವಾದ ಪಾಪವನ್ನು ಚೆನ್ನಾಗಿ ಪರಿಹರಿಸುವನು. ಯಾಕೆಂದರೆ ಬಹುಫಲಪ್ರದವಾದ ವಿಷ್ಣುಸಂಬಂಧಿ ಸುದರ್ಶನವು ಪಾಪವನ್ನು ಪರಿಹರಿಸುವುದು. ಆದುದರಿಂದ ಜನರು ಅದನ್ನು ಯಾವಾಗಲೂ ಧರಿಸುವರು.

[ಆದುದರಿಂದ ಅನಿಷ್ಟದ ಪರಿಹಾರ ಆಗಬೇಕೆಂದು ಬಯಸುವವನು ತಪ್ತಚಕ್ರವನ್ನು ಬಾಹುಮೂಲದಲ್ಲಿ ಹಾಗೂ ಎದೆಯಲ್ಲಿ ಯಾವಾಗಲೂ ಧರಿಸಿಕೊಳ್ಳಬೇಕು ಎಂಬ ಆಶಯ.]

ಪ್ರತೇ ವಿಷ್ಣೋ ಅಬ್ಜಚಕ್ರೇ ಪವಿತ್ರೇ ಜನ್ಮಾಂಭೋಧಿಂ ತರ್ತವೇ ಚರ್ಷಣೀಂದ್ರಾಃ । ಮೂಲೇ ಬಾಹ್ವೋಃ ದಧತೇ ಪುರಾಣಾ ಲಿಂಗಾನ್ಯಂಗೇ ತಾವಕಾನ್ಯರ್ಪಯಂತಿ ॥ – *ಬಾಷ್ಕಲಶಾಖಾ*

ಹೇ ವಿಷ್ಣೋ! ಜ್ಞಾನಿಗಳು ತಮ್ಮ ಬಾಹುಗಳ ಮೂಲದಲ್ಲಿ ನಿನ್ನ ಪವಿತ್ರಗಳಾದ ಶಂಖಚಕ್ರಗಳನ್ನು ಚೆನ್ನಾಗಿ ಧರಿಸುವರು. ಮತ್ತೆ ಕೆಲವು ಪ್ರಾಚೀನ ಋಷಿಗಳು ನಿನ್ನ ಚಿಹ್ನೆಗಳಾದ ಚಕ್ರ ಇತ್ಯಾದಿ ಆಯುಧಗಳನ್ನು ಬಾಹುಗಳ ಬುಡದಲ್ಲಿ, ಹಣೆ, ನೆತ್ತಿ, ಹೃದಯ – ಈ ಅವಯವಗಳಲ್ಲಿ ಅರ್ಪಿಸುವರು.

* * *

ದಕ್ಷಿಣೇ ತು ಭುಜೇ ವಿಪ್ರೋ ಬಿಭೃಯಾದ್ವೈ ಸುದರ್ಶನಮ್ ।
ಸವ್ಯೇ ತು ಶಂಖಂ ಬಿಭೃಯಾದಿತಿ ಬ್ರಹ್ಮವಿದೋ ವಿದುಃ ॥

– *ಆಥರ್ವಣಮಹೋಪನಿಷತ್*

ವಿಪ್ರನು ತನ್ನ ಬಲಭುಜದಲ್ಲಿಯೇ ಸುದರ್ಶನಚಕ್ರವನ್ನು ಧರಿಸಬೇಕು. ಎಡ ಭುಜದಲ್ಲಿಯೇ ಪಾಂಚಜನ್ಯಶಂಖವನ್ನು ಧರಿಸಬೇಕು ಎಂದು ಬ್ರಹ್ಮಜ್ಞಾನಿಗಳು ಅಭಿಪ್ರಾಯಪಡುವರು.

[ಎಲ್ಲ ವರ್ಣದವರೂ ಶಂಖಚಕ್ರಗಳನ್ನು ಧರಿಸಬೇಕೆಂದು ಶ್ರುತ್ಯಾದಿಗಳಿಂದ ಸಿದ್ಧವಾಗುವುದರಿಂದ ವಿಪ್ರನು ಶಂಖಚಕ್ರಗಳನ್ನು ಧರಿಸಿಕೊಳ್ಳಲೇಬೇಕು. ಒಂದೊಮ್ಮೆ ಧರಿಸಿಕೊಳ್ಳದಿದ್ದರೆ ತುಂಬ ಪಾಪಕ್ಕೆ ಪಾತ್ರನಾಗಬೇಕಾಗುವುದೆಂದು ಸೂಚಿಸುವುದ ಕ್ಕಾಗಿಯಷ್ಟೇ ಇಲ್ಲಿ 'ವಿಪ್ರನು ಧರಿಸಿಕೊಳ್ಳಬೇಕು' ಎಂದು ವಿಶೇಷವಾಗಿ ತಿಳಿಸಲಾಗುವುದು.]

* * *

ಧೃತೋರ್ಧ್ವಪುಂಡ್ರಃ ಕೃತಚಕ್ರಧಾರೀ
ವಿಷ್ಣುಂ ಪರಂ ಧ್ಯಾಯತಿ ಯೋ ಮಹಾತ್ಮಾ ।
ಸ್ವರೇಣ ಮಂತ್ರೇಣ ಸದಾ ಹೃದಿ ಸ್ಥಿತಂ
ಪರಾತ್ಪರಂ ಯನ್ಮಹತೋ ಮಹಾಂತಮ್ ॥ – *ಕಠಶಾಖಾ*

ಶಮದಮಾದಿಗುಣಸಂಪನ್ನನಾದ ಯಾವ ಮಹಾತ್ಮನು ಯಾವಾಗಲೂ ತನ್ನ ಹೃದಯದಲ್ಲಿ ನಿವಸಿಸುವ, ಬ್ರಹ್ಮಾದಿಗಳಿಗಿಂತಲೂ ಉತ್ಕೃಷ್ಟನಾದ, ಮಹತ್‌ಪದಾರ್ಥ ಗಳಿಗಿಂತಲೂ ಅಧಿಕ ಮಹತ್ತ್ವಪೂರ್ಣನಾದ, ವಿಷ್ಣುವನ್ನು ಪ್ರಣವದಿಂದ, ಮಂತ್ರದಿಂದ ನಿರಂತರ ಧ್ಯಾನಿಸುವನೋ ಅವನು ಯಾವಾಗಲೂ ಊರ್ಧ್ವಪುಂಡ್ರಧಾರಿಯಾಗಿರಬೇಕು. ತಪ್ತಚಕ್ರಧಾರಿಯಾಗಿರಬೇಕು.

* * *

ಚಕ್ರಂ ಬಿಭರ್ತಿ ವಪುಷಾಽಭಿತಪ್ತಂ ಬಲಂ ದೇವಾನಾಮಮೃತಸ್ಯ ವಿಷ್ಣೋಃ ।
ಸ ಏತಿ ನಾಕಂ ದುರಿತಂ ವಿಧಾಯ ಪ್ರಯಾಂತಿ ಯದ್ಭಕ್ತಯೋ ವೀತರಾಗಾಃ ॥

– *ಋಗ್ವೇದ ಖಿಲೇ*

ಯಾವ ಅಧಿಕಾರಿಯು ದೇವತೆಗಳ ರಕ್ಷಣೆಗೆ ಕಾರಣವಾಗಿದ್ದು ಅವರ ಬಲದಂತಿರುವ, ಮರಣರಹಿತನಾದ ಶ್ರೀವಿಷ್ಣುವಿಗೆ ಸಂಬಂಧಿಸುವ, ಅಗ್ನಿಯಿಂದ ಚೆನ್ನಾಗಿ ಬಿಸಿಯಾದ, ಚಕ್ರವನ್ನು ಭುಜ, ಎದೆ ಮುಂತಾದ ಅವಯವಗಳಲ್ಲಿ ಧರಿಸುವನೋ ಅವನು ಪಾಪವನ್ನು ಕಳಕೊಂಡವನಾಗಿ, ವಿರಕ್ತರಾದ ಯತಿಗಳು ದುಃಖರಹಿತವಾದ ಯಾವ ಮೋಕ್ಷವನ್ನು, ಅಥವಾ ಪರಬ್ರಹ್ಮನನ್ನು ಹೊಂದುವರೋ ಅಂತಹ ಮೋಕ್ಷವನ್ನು ಅಥವಾ ಪರಬ್ರಹ್ಮವನ್ನು ಹೊಂದುವರು.

ಏಭಿರ್ವಯಮುರುಕ್ರಮಸ್ಯ ಚಿಹ್ನೈರಂಕಿತಾ ಲೋಕೇ ಸುಭಗಾ ಭವೇಮ ।
ತದ್ವಿಷ್ಣೋಃ ಪರಮಂ ಪದಂ ಯೇಽನುಗಚ್ಛಂತಿ ಲಾಂಛಿತಾಃ ॥

ಎಂತಹ ವ್ಯಕ್ತಿಗಳೇ ಆಗಲಿ, ತ್ರಿವಿಕ್ರಮನ ಚಕ್ರಾದಿಚಿಹ್ನೆಗಳಿಂದ ಅಂಕಿತರಾಗಿ ಪ್ರಸಿದ್ಧವಾದ ವೈಕುಂಠರೂಪವಾದ ಸ್ಥಾನವನ್ನು ಹೊಂದುವರು.

[ಆದುದರಿಂದ ನಾವು ಕೂಡಾ ತ್ರಿವಿಕ್ರಮನ ಚಿಹ್ನೆಗಳಿಂದ ಅಂಕಿತರಾಗಿ ವೈಕುಂಠಲೋಕದಲ್ಲಿ ಉತ್ತಮಸಂಪತ್ತನ್ನು ಹೊಂದಿರುವವರು ಆಗೋಣ –ಎಂಬುದು ಮುಮುಕ್ಷುಗಳ ಅನುಸಂಧಾನ.]

* * *

ಸ್ಮೃತಿಪುರಾಣಗಳಲ್ಲಿ ಉಲ್ಲೇಖ

ಹೀಗೆ ಹತ್ತಕ್ಕಿಂತಲೂ ಅಧಿಕ ಶ್ರುತಿವಚನಗಳು ತಪ್ತಮುದ್ರಾಧಾರಣವಿಷಯದಲ್ಲಿ ಉದಾಹರಿಸಲ್ಪಟ್ಟಿವೆ. ಈ ಶ್ರುತಿವಚನಗಳು ಬೇರೆ ಅರ್ಥಗಳಲ್ಲಿ ತೆರೆದುಕೊಳ್ಳಬಲ್ಲ ವಾದರೂ ಇವುಗಳಿಗೆ ತಪ್ತಮುದ್ರಾಧಾರಣೆಗೆ ಸಂಬಂಧಿಸುವ ಅರ್ಥದಲ್ಲಿ ತಾತ್ಪರ್ಯವಿಲ್ಲ ಎಂದೇನೂ ಹೇಳುವಂತಿಲ್ಲ.

ಪಾದ್ಮಪುರಾಣ, ಸನಕಸ್ಮೃತಿ –ಇತ್ಯಾದಿಗಳಲ್ಲಿ ತಪ್ತಮುದ್ರಾಧಾರಣೆಗೆ ಸಂಬಂಧಿಸಿ ದಂತೆಯೇ ಈ ಶ್ರುತಿವಚನಗಳನ್ನು ಪ್ರಮಾಣಗಳನ್ನಾಗಿ ಉಲ್ಲೇಖಿಸಲಾಗಿದೆ ಎಂದ ಮೇಲೆ ಶ್ರುತಿವಚನಗಳಿಗೆ ತಪ್ತಮುದ್ರಾಧಾರಣೆಗೆ ಸಂಬಂಧಿಸುವ ಅರ್ಥವನ್ನು ಒಪ್ಪಿಕೊಳ್ಳಲೇ ಬೇಕಾಗುವುದು.

ಸನಕಸ್ಮೃತಿಯಲ್ಲಿ:

ವಿಷ್ಣೋರ್ನುಕೇತಿ ಮಂತ್ರೇಣ ತಾಪಯಿತ್ವಾ ಸುದರ್ಶನಮ್ ।
ಚರಣಂ ಪವಿತ್ರಮಿತಿ ತದ್ ದ್ವಾಭ್ಯಾಮಭಿಮಂತ್ರಯೇತ್ ॥

ಪವಿತ್ರಂ ತೇ ವಿತತಮಿತಿ ಮುದ್ರಯೇದ್ದಕ್ಷಿಣೇ ಭುಜೇ ।
ಜ್ಞಾನಂ ವೈರಾಗ್ಯಮಾಸ್ತಿಕ್ಯಂ ಶ್ರದ್ಧಾ ಹ್ಯಸ್ಯಾಭಿವರ್ಧತೇ ॥

'ವಿಷ್ಣೋರ್ನುಕಂ........' ಎಂಬ ಮಂತ್ರದಿಂದ ಸುದರ್ಶನಚಕ್ರವನ್ನು ಹೋಮದ ಅಗ್ನಿಯಿಂದ ಬಿಸಿಮಾಡಬೇಕು. 'ಚರಣಂ ಪವಿತ್ರಂ ವಿತತಂ........' ಎಂಬ ಮಂತ್ರದಿಂದಲೂ,

'ಪವಿತ್ರಂ ತೇ ವಿತತಂ.....' ಎಂಬ ಮಂತ್ರದಿಂದಲೂ ಅಭಿಮಂತ್ರಿಸಬೇಕು. 'ಪವಿತ್ರಂ ತೇ ವಿತತಂ.......' ಎಂಬ ಮಂತ್ರವನ್ನು ಹೇಳುತ್ತ ಬಲಭುಜದಲ್ಲಿ ಮುದ್ರೆ ಹಾಕಬೇಕು. ಹೀಗೆ ಮುದ್ರಾಧಾರಣೆ ಮಾಡಿಕೊಂಡವನಿಗೆ ಜ್ಞಾನ, ವೈರಾಗ್ಯ, ಆಸ್ತಿಕ್ಯ ಹಾಗೂ ಶ್ರದ್ಧೆ ಅಭಿವೃದ್ಧಿಯಾಗುವುದು.

ಪಾದ್ಮಪುರಾಣದಲ್ಲಿ:

ಸರ್ವಾಶ್ರಮೇಷು ವಸತಾಂ ಬ್ರಾಹ್ಮಣಾನಾಂ ವಿಶೇಷತಃ ।
ವಿಧಿನಾ ವೈಷ್ಣವಂ ಚಕ್ರಂ ಧಾರ್ಯಂ ಹಿ ಶ್ರುತಿಚೋದನಾತ್ ॥

ಎಲ್ಲ ವರ್ಣದವರೂ, ಎಲ್ಲ ಆಶ್ರಮದವರೂ ವಿಶೇಷವಾಗಿ ಬ್ರಾಹ್ಮಣರು ವಿಧಿವತ್ತಾಗಿ ಸುದರ್ಶನಚಕ್ರವನ್ನು ಧರಿಸಿಕೊಳ್ಳಬೇಕು ಎಂಬುದಾಗಿ ಶ್ರುತಿಯು ವಿಧಿಸಿದೆ.

ಹೀಗೆ ತಪ್ತಮುದ್ರಾಧಾರಣೆ ಶ್ರುತಿವಿಹಿತವಾದದ್ದೆಂದು ಸ್ಥೂಲವಾಗಿ ತಿಳಿಸಿ, ಶ್ರುತಿವಿಶೇಷಗಳನ್ನೂ ಪಾದ್ಮಪುರಾಣವು ಉಲ್ಲೇಖಿಸಿದೆ–

ದಕ್ಷಿಣೇ ತು ಭುಜೇ ವಿಪ್ರೋ ಬಿಭೃಯಾದ್ವೈ ಸುದರ್ಶನಮ್ ।
ಸವ್ಯೇ ತು ಶಂಖಂ ಬಿಭೃಯಾದಿತಿ ಬ್ರಹ್ಮವಿದೋ ವಿದುಃ ॥

ಏವಂ ಮಹೋಪನಿಷದಿ ಪ್ರೋಕ್ತಂ ಚಕ್ರಾದಿಧಾರಣಮ್ ।
ತಥೈವ ಸಾಮ್ನಿ ಯಜುಷಿ ಋಚಿ ಪ್ರೋಕ್ತಂ ಶುಭಾನನೇ ॥

ಬಲಗೈಯಲ್ಲಿ ಸುದರ್ಶನಚಕ್ರವನ್ನೇ ಧರಿಸಿಕೊಳ್ಳಬೇಕು. ಎಡ ಭುಜದಲ್ಲಿ ಶಂಖವನ್ನೇ ಧರಿಸಿಕೊಳ್ಳಬೇಕು. ಬ್ರಹ್ಮಜ್ಞಾನಿಗಳು ಹೀಗೆ ಅಭಿಪ್ರಾಯಪಡುವರು.

ಹೀಗೆ ಮುದ್ರಾಧಾರಣವಿಷಯವು ಮಹೋಪನಿಷತ್ತಿನಲ್ಲಿ, ಸಾಮವೇದದಲ್ಲಿ, ಯಜುರ್ವೇದದಲ್ಲಿ ಹಾಗೂ ಋಗ್ವೇದದಲ್ಲಿ ಹೇಳಲ್ಪಟ್ಟಿದೆ.

ಪಾದ್ಮಪುರಾಣದಲ್ಲಿ ಶ್ರುತಿಗಳ ಉಲ್ಲೇಖ:

ಚರಣಂ ಪವಿತ್ರಂ ವಿತತಂ ಪುರಾಣಂ ವಾಙ್ಮಯಂ ಶುಭಮ್ ।
ತೇನ ಚಕ್ರೇಣ ಸಂತಪ್ತಾಸ್ತರೇಯುಃ ಪಾತಕಾಂಬುಧಿಮ್ ॥

ಪವಿತ್ರಂ ಬ್ರಹ್ಮಣಸ್ಪತ್ಯಂ ಜಗದ್ವ್ಯಾಪ್ತಂ ಹರೇಸ್ಸದಾ ।
ತೇನ ತಪ್ತತನುರ್ಯೇಷಾಂ ತೇ ತು ಯಾಂತಿ ಹರೇಃ ಪದಮ್ ॥

ತೇನ ಸಹಸ್ರಧಾರೇಣ ಪಾವಮಾನ್ಯಃ ಪುನಂತು ಮಾಮ್ ।
ಪ್ರಾಜಾಪತ್ಯಂ ಪವಿತ್ರಂ ಶತೋದ್ಯಾಮಂ ಹಿರಣ್ಮಯಮ್ ॥
ತೇನ ಬ್ರಹ್ಮವಿದೋ ವಯಂ ಪೂತಂ ಬ್ರಹ್ಮ ಪುನೀಮಹೇ ॥

'ಸನೇಮಿ ಚಕ್ರಮಜರಂ ಚಕ್ಷುರಸ್ಯ ಮಹಾತ್ಮನಃ ।
ತಸ್ಮಿನ್ನರ್ಪಿತೇ ದೇಹೇ ಮಹೋನ್ನತಿಪದಂ ಯಯುಃ ॥

ಯತ್ತೇ ಪವಿತ್ರಮರ್ಚಿಷ್ಯಗ್ನೇ ತೇನ ಪುನೀಹಿ ನಃ ।

ಇತ್ಯೇವಂ ಶ್ರುತಯಃ ಸರ್ವಾಃ ಶ್ರಾವಯಂತಿ ವರಾನನೇ ।
ತಸ್ಮಾದ್ವೈ ವಿಧಿವದ್‌ಧಾರ್ಯಾಃ ಶಂಖಚಕ್ರಾದಿಹೇತಯಃ ॥

ಪಾಪಸಮೂಹವನ್ನು ಸುಟ್ಟುಹಾಕುವ, ಶುದ್ಧಗೊಳಿಸುವ ಹಾಗೂ ರಕ್ಷಿಸುವ, ವಿಸ್ತಾರವಾದ, ಪುರಾತನವಾದ, ಮಂಗಲವಾದ ಚಕ್ರವು 'ಚರಣಂ ಪವಿತ್ರಂ.........' ಇತ್ಯಾದಿ ತೈತ್ತಿರೀಯವೇದದಲ್ಲಿ ಪ್ರತಿಪಾದ್ಯವಾದುದು. ಅಂತಹ ಚಕ್ರದ ಚಿಹ್ನೆಗೆ ಒಳಗಾಗಿ ಪಾತಕಸಾಗರದಿಂದ ಪಾರಾಗುವರು.

[ಈ ಪದ್ಯ 'ಚರಣಂ ಪವಿತ್ರಂ......' ಎಂಬ ತೈತ್ತಿರೀಯಶ್ರುತಿಯ ವಚನದ ಛಾಯಾನುವಾದ ನಡೆಸಿ ಅದರ ಸಂದೇಶವನ್ನೇ ಸಾರುತ್ತಿದೆ.]

ಪವಿತ್ರವಾದ, ಚತುರ್ಮುಖನಿಗೆ ಒಡೆಯನಾಗಿದ್ದು 'ಬ್ರಹ್ಮಣಸ್ಪತಿ' ಎನಿಸಿರುವ ಭಗವಂತನಿಗೆ ಸಂಬಂಧಿಸಿರುವ, ಜಗತ್ತನ್ನು ವ್ಯಾಪಿಸಿರುವ, ಶ್ರೀಹರಿಯ ಚಕ್ರದಿಂದ ಯಾರ ಶರೀರವು ತಪ್ತವಾಗುವುದೋ ಅವರು ಶ್ರೀಹರಿಯ ಲೋಕವನ್ನು ಹೊಂದುವರು.

[ಈ ಪದ್ಯದಲ್ಲಿ 'ಪವಿತ್ರಂ ತೇ ವಿತತಂ.......' ಎಂಬ ಶ್ರುತಿಯ ಛಾಯಾನುವಾದ ನಡೆದಿದೆ.]

ಪ್ರಜಾಪತಿ ಎನಿಸುವ ಭಗವಂತನಿಗೆ ಸಂಬಂಧಿಸುವ, ಪವಿತ್ರವಾದ, ನೂರಾರು ಸುತ್ತುಗಳುಳ್ಳ ಚಿನ್ನದ ಸುದರ್ಶನಚಕ್ರದ ಸಂಪರ್ಕದಿಂದಾಗಿ ನಾವು ಪರಬ್ರಹ್ಮನನ್ನು ತಿಳಿದು ಅವನನ್ನು ಹೊಂದಿರುವೆವು.

ಸುದರ್ಶನಚಕ್ರವು ಮಹಾತ್ಮನಾದ ಭಗವಂತನ ಚಕ್ಷುಸ್ಸಿನಂತೆ ಇದೆ. ದೇಹದಲ್ಲಿ ಅದರ ಸಂಪರ್ಕ ಪಡೆದು ದೊಡ್ಡ ಸ್ಥಾನವಾದ ಮೋಕ್ಷವನ್ನು ಹೊಂದಿರುವರು.

'ನಿನ್ನ ಕಿರಣದೊಳಗಿರುವ ಪವಿತ್ರನಾದ ಭಗವಂತನ ಸಂಪರ್ಕದಿಂದಾಗಿ ನಮ್ಮನ್ನು ಪವಿತ್ರಗೊಳಿಸು'

ಹೇ ಪಾರ್ವತಿ! ಹೀಗೆ ಅನೇಕಶ್ರುತಿಗಳು ತಪ್ತಮುದ್ರಾಧಾರಣೆಯನ್ನು ಸಾರುತ್ತಿವೆ. ಆದುದರಿಂದ ಭಗವಂತನ ಆಯುಧಗಳಾದ ಶಂಖಚಕ್ರಾದಿಗಳ ಚಿಹ್ನೆಯನ್ನು ವಿಧಿವತ್ತಾಗಿ ಧರಿಸಿಕೊಳ್ಳಬೇಕು.

ಈ ರೀತಿಯಾಗಿ ಪಾದ್ಮಪುರಾಣದಲ್ಲಿ ಅನೇಕಶ್ರುತಿವಚನಗಳು ತಪ್ತಮುದ್ರಾಧಾರಣೆಗೆ ಸಂಬಂಧಿಸಿದಂತೆ ಛಾಯಾನುವಾದಕ್ಕೆ ಒಳಪಡಿಸಲ್ಪಟ್ಟಿರುವ ಪ್ರಯುಕ್ತ ಆ ಶ್ರುತಿಗಳಲ್ಲಿ ತಪ್ತಮುದ್ರಾಧಾರಣೆಯ ವಿಚಾರದ ಪ್ರತಿಪಾದನೆ ನಡೆದಿದೆ ಎಂಬುದು ಸ್ಪಷ್ಟವಾಗಬಲ್ಲದು.

* * *

'ಚಕ್ರಮೀಮಾಂಸಾ'ದಲ್ಲಿ ತಪ್ತಮುದ್ರಾಧಾರಣೆಯ ಬಗ್ಗೆ ಉದಾಹರಿಸಲ್ಪಟ್ಟಿರುವ ಸ್ಮೃತಿಗಳು

'ಚಕ್ರಮೀಮಾಂಸಾ'ದಲ್ಲಿ ತಪ್ತಮುದ್ರಾಧಾರಣೆಯ ಬಗ್ಗೆ ಅನೇಕಶ್ರುತಿಗಳನ್ನು ಉದಾಹರಿಸಿ, 'ಸ್ಮೃತಯೋಽಪಿ ತತ್ರ ಪ್ರಮಾಣಮ್' ತಪ್ತಮುದ್ರಾಧಾರಣೆಯ ವಿಷಯದಲ್ಲಿ ಸ್ಮೃತಿಗಳೂ ಪ್ರಮಾಣಗಳಾಗಿವೆ –ಎಂದು ಘೋಷಿಸಿ, ಕೆಳಗಿನ ಸ್ಮೃತಿಗಳನ್ನು ಉಲ್ಲೇಖಿಸಲಾಗಿದೆ–

ಊರ್ಧ್ವಪುಂಡ್ರಂ ತಥಾ ಚಕ್ರಂ ನಿತ್ಯಂ ಧಾರಯತೇ ಹಿ ಯಃ ।
ತೇನ ತಸ್ಯಾಶುಭಂ ನಶ್ಯೇತ್ ಶುಭಮಸ್ಯ ವಿವರ್ಧತೇ ॥ – *ವೃದ್ಧಮನುಃ*

ಯಾರು ಊರ್ಧ್ವಪುಂಡ್ರವನ್ನೂ, ಸುದರ್ಶನಚಕ್ರದ ಚಿಹ್ನೆಯನ್ನೂ ಧರಿಸಿಕೊಂಡಿರುವನೋ ಅಂತಹವನ ಪಾಲಿಗೆ ಅಶುಭವೆಲ್ಲ ದೂರಸರಿದು ಶುಭವು ಹೆಚ್ಚಾಗುವುದು.

ಪಶುಪುತ್ರಾದಿಕಂ ಸರ್ವಂ ಗೃಹೋಪಕರಣಾನಿ ಚ ।
ಅಂಕಯೇಚ್ಛಂಖಚಕ್ರಾಭ್ಯಾಂ ನಾಮ ಕುರ್ಯಾಚ್ಚ ವೈಷ್ಣವಮ್ ॥
– *ಶಾಂಡಿಲ್ಯ*

ಪಶು, ಪುತ್ರ ಮುಂತಾದುವನ್ನೂ, ಮನೆಯ ಸಾಮಗ್ರಿಯನ್ನೂ ಶಂಖ ಮತ್ತು ಚಕ್ರಗಳ ಚಿಹ್ನೆಗಳಿಗೊಳಪಡಿಸಬೇಕು. ಹಾಗೂ ಅವುಗಳಿಗೆ ಶ್ರೀವಿಷ್ಣುವಿನ ನಾಮವನ್ನು ಇಡಬೇಕು.

ಉಪವೀತಾದಿವದ್ಧಾರ್ಯಂ ಶಂಖಚಕ್ರಗದಾದಿಕಮ್ ।
ಬ್ರಾಹ್ಮಣಸ್ಯ ವಿಶೇಷೇಣ ವೈಷ್ಣವಸ್ಯ ವಿಶೇಷತಃ ॥ – *ಶಂಖಃ*

ಬ್ರಾಹ್ಮಣನಾದವನು ಯಜ್ಞೋಪವೀತ ಇತ್ಯಾದಿಗಳನ್ನು ಹೇಗೋ ಹಾಗೆ ಶಂಖ, ಚಕ್ರ, ಗದಾ ಹಾಗೂ ಪದ್ಮಗಳ ಚಿಹ್ನೆಯನ್ನು ಧರಿಸಬೇಕು. ವೈಷ್ಣವನಾದವನು ವಿಶೇಷವಾಗಿ ಧರಿಸಬೇಕು.

ಉಪವೀತೀ ಶಿಖೀ ವಿಪ್ರಃ ಚಕ್ರಲಾಂಛನಸಂಯುತಃ ।
ಚಕ್ರಲಾಂಛನಹೀನಸ್ಯ ವಿಪ್ರಸ್ಯ ವಿಫಲಾ ಕ್ರಿಯಾ ॥ – *ಯಮಃ*

ವಿಪ್ರ ಎನಿಸಿಕೊಂಡವನು ಯಜ್ಞೋಪವೀತ, ಶಿಖಾ ಉಳ್ಳವನು ಹೇಗೋ ಹಾಗೆ ಸುದರ್ಶನಚಕ್ರದ ಚಿಹ್ನೆಯನ್ನೂ ಒಳಗೊಂಡಿರುವವನು. ಅಂತಹ ಚಕ್ರದ ಚಿಹ್ನೆ ಇಲ್ಲದ ಬ್ರಾಹ್ಮಣನ ಪ್ರತಿಯೊಂದು ಕ್ರಿಯೆಯೂ ನಿಷ್ಫಲ ಎನಿಸುವುದು.

ಲಲಾಟೇ ತು ಗದಾ ಧಾರ್ಯಾ ಮೂರ್ಧ್ನಿ ಚಾಪಶರೌ ತಥಾ ।
ಹೃನ್ಮಧ್ಯೇ ನಂದಕಶ್ಚೈವ ಶಂಖಚಕ್ರೇ ಭುಜದ್ವಯೇ ॥ – *ವ್ಯಾಸಃ*

ಹಣೆಯಲ್ಲಿ ಕೌಮೋದಕೀಗದೆಯ ಚಿಹ್ನೆಯನ್ನೂ, ನೆತ್ತಿಯಲ್ಲಿ ಶಾರ್ಙ್ಗಧನುಸ್ಸಿನ ಚಿಹ್ನೆಯನ್ನೂ, ಬಾಣದ ಚಿಹ್ನೆಯನ್ನೂ, ಹೃದಯಮಧ್ಯದಲ್ಲಿ ನಂದಕಖಡ್ಗದ ಚಿಹ್ನೆಯನ್ನೂ

ಬಲಭುಜದಲ್ಲಿ ಸುದರ್ಶನಚಕ್ರದ, ಎಡ ಭುಜದಲ್ಲಿ ಪಾಂಚಜನ್ಯಶಂಖದ ಮುದ್ರೆಯನ್ನೂ ಧರಿಸಿಕೊಳ್ಳಬೇಕು.

ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈಃ ಶೂದ್ರೈಶ್ಚ ಕೃತಲಕ್ಷಣೈಃ ।
ಅರ್ಚನೀಯಶ್ಚ ಸೇವ್ಯಶ್ಚ ನಿತ್ಯಯುಕ್ತೈಃ ಸ್ವಕರ್ಮಸು ॥

– ಮಹಾಭಾರತ ಭೀಷ್ಮಪರ್ವ

ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ ಚಕ್ರಶಂಖಾದಿ ಚಿಹ್ನೆಯನ್ನೂ ಧರಿಸಿದವರಾಗಿ, ತಮ್ಮತಮ್ಮ ವರ್ಣಾಶ್ರಮಧರ್ಮಗಳಿಂದ ಭಗವಂತನನ್ನು ಸೇವಿಸಬೇಕು; ಪೂಜಿಸಬೇಕು.

ಚಕ್ರಾಂಕಿತಾಃ ಪ್ರವೇಷ್ಟವ್ಯಾಃ ಯಾವದಾಗಮನಂ ಮಮ ।
ನಾಮುದ್ರಿತಾಃ ಪ್ರವೇಷ್ಟವ್ಯಾಃ ಯಾವದಾಗಮನಂ ಮಮ ॥ *– ಹರಿವಂಶ*

ನನ್ನ ಆಗಮನದವರೆಗೆ ಚಕ್ರದಿಂದ ಚಿಹ್ನಿತರಾದವರಿಗಷ್ಟೇ ಪ್ರವೇಶಕ್ಕೆ ಅವಕಾಶ ನೀಡಬಹುದು. ಚಿಹ್ನಿತರಲ್ಲದವರಿಗೆ ಪ್ರವೇಶಾವಕಾಶವನ್ನು ನೀಡಬಾರದು.

ಭವತಾಂ ಭ್ರಮತಾಮತ್ರ ವಿಷ್ಣುಸಂಶ್ರಯಮುದ್ರಯಾ ।
ವಿನಾಜ್ಞಾಭಂಗಕೃನ್ನೈವ ಭವಿಷ್ಯತಿ ನರಃ ಕ್ವಚಿತ್ ॥

– ವಿಷ್ಣುಧರ್ಮ [ಯಮಕಿಂಕರಸಂವಾದಃ]

ಶ್ರೀವಿಷ್ಣುವಿಗೆ ಸಂಬಂಧಿಸಿದ ಚಿಹ್ನೆಗಳನ್ನು ಧರಿಸಿ ನೀವು ಅಲೆದಾಡುತ್ತಿರುವುದರಿಂದ ಯಾವ ಮನುಷ್ಯನೂ ಎಲ್ಲೂ ಆದೇಶವನ್ನು ಉಲ್ಲಂಘನೆ ಮಾಡುತ್ತಿಲ್ಲ.

ಅಗ್ನಿನೈವ ತು ಸಂಯುಕ್ತಂ ಚಕ್ರಮಾದಾಯ ವೈ ದ್ವಿಜಃ ।
ದಾಹಯೇತ್ ಸರ್ವವರ್ಣಾನಾಂ ಹರಿಸಾಲೋಕ್ಯಸಿದ್ಧಯೇ ॥ *– ಗಾರುಡ*

ಅಗ್ನಿಯ ಸಂಪರ್ಕಕ್ಕೆ ಒಳಪಡಿಸಿದ ಚಕ್ರದಿಂದ ದೇಹವನ್ನು ಸುಡಬೇಕು. ಶ್ರೀಹರಿಯ ಲೋಕದ ಪ್ರಾಪ್ತಿಗಾಗಿ ಎಲ್ಲ ವರ್ಣದ ಸಾಧಕರಿಗೂ ಇದು ವಿಹಿತವಾದದ್ದು.

ಚಕ್ರಧಾರಿಣಂ ವಿಪ್ರಂ ಯಜ್ಞಾರ್ಥೇ ಭೋಜಯಿಷ್ಯತಿ ।
ರೇತೋಮೂತ್ರಪುರೀಷ್ಯಾದಿ ಸ್ವಪಿತೃಭ್ಯಃ ಪ್ರಯಚ್ಛತಿ ॥ *– ವಾರಾಹೇ*

ಒಂದೊಮ್ಮೆ ಯಜ್ಞಕ್ಕಾಗಿ ಚಕ್ರಧರನಲ್ಲದ ಬ್ರಾಹ್ಮಣನಿಗೆ ಭೋಜನ ನೀಡಿದಲ್ಲಿ ತನ್ನ ಪಿತೃಗಳಿಗೆ ರೇತಸ್ಸು, ಮೂತ್ರ, ಮಲ –ಇತ್ಯಾದಿಗಳನ್ನು ನೀಡಿದಷ್ಟು ಪಾಪ ಸಂಭವಿಸುವುದು.

ಶಂಖಚಕ್ರಾಂಕಿತಾನ್ ಭಕ್ತ್ಯಾ ಯಃ ಪೂಜಯತಿ ಮಾನವಃ ।
ಸ ಸಾಕ್ಷಾದ್ವಿಷ್ಣುಸಾಮೀಪ್ಯಂ ಲಭತೇ ನಾತ್ರ ಸಂಶಯಃ ॥ *– ಬ್ರಹ್ಮಾಂಡೇ*

ಭಗವಂತನ ಚಿಹ್ನೆಯಾದ ಶಂಖಚಕ್ರಾದಿಗಳಿಂದ ಯಾರು ಚಿಹ್ನಿತರಾಗಿರುವರೋ ಅಂತಹವರನ್ನು ಭಕ್ತಿಯಿಂದ ಪೂಜಿಸುವವನಿಗೂ ವಿಷ್ಣುವಿನ ಸಾಮೀಪ್ಯ ದೊರಕುವುದು.

ಚಕ್ರಾಂಕಿತಭುಜಂ ಮರ್ತ್ಯಂ ಯೋ ವೈ ನಿಂದತಿ ಮೂಢಧೀಃ ।
ಪ್ರಯಾತಿ ನರಕಂ ಘೋರಂ ಯಾವದಾಭೂತಸಂಪ್ಲವಮ್ ॥

— ಬ್ರಹ್ಮವೈವರ್ತೇ

ಚಕ್ರದಿಂದ ಚಿಹ್ನಿತವಾದ ಭುಜವುಳ್ಳ ಮಾನವನನ್ನು ನಿಂದಿಸುವ ವ್ಯಕ್ತಿ ಮಹಾ ಪ್ರಲಯದ ವರೆಗೆ ಘೋರನರಕವನ್ನು ಅನುಭವಿಸುವನು.

ಚಕ್ರಾಂಕಿತಭುಜಂ ದೃಷ್ಟ್ವಾ ಯಸ್ತು ತಂ ನಾಭಿವಾದಯೇತ್ ।
ತಿರ್ಯಗ್ಯೋನಿಶತಂ ಪ್ರಾಪ್ಯ ವಿಷ್ಠಾಯಾಂ ಜಾಯತೇ ಕ್ರಿಮಿಃ ॥

— ಭವಿಷ್ಯಪುರಾಣ

ಚಕ್ರದಿಂದ ಚಿಹ್ನಿತವಾದ ಭುಜದ ವ್ಯಕ್ತಿಯನ್ನು ಕಂಡೂ ಅವನಿಗೆ ನಮಸ್ಕರಿಸದಿದ್ದಲ್ಲಿ ಅಂತಹವನು ನೂರು ಪಶುಜನ್ಮಗಳನ್ನು ಪಡೆದು ಬಳಿಕ ಮಲದಲ್ಲಿ ಕ್ರಿಮಿಯಾಗಿ ಹುಟ್ಟುವನು.

ಚಕ್ರಾದಿಧಾರಣಂ ಪುಂಸಾಂ ಹರಿಸಂಬಂಧವೇದನಮ್ ।
ಪತಿವ್ರತಾನಿಮಿತ್ತಂ ಹಿ ವಲಯಾದಿವಿಭೂಷಣಮ್ ॥ *— ಮಾರ್ಕಂಡೇಯೇ*

ಚಕ್ರಾದಿಗಳ ಧಾರಣೆಯು ವ್ಯಕ್ತಿಗೆ ಶ್ರೀಹರಿಯ ನಂಟನ್ನು ಜ್ಞಾಪಿಸಿಕೊಡುವಂತಹದ್ದು. ಹೇಗೆ ಪತಿವ್ರತಾಸ್ತ್ರೀಗೆ ಬಳೆ ಮುಂತಾದ ಆಭರಣಗಳ ಧಾರಣೆ ಪಾತಿವ್ರತ್ಯದ ಜ್ಞಾಪಕವೋ ಹಾಗೆ.

ಲೀಲಯಾಪಿ ಲಿಖೇದ್ಯಸ್ತು ಬಾಹುಮೂಲೇ ಸುದರ್ಶನಮ್ ।
ಕುಲಕೋಟಿಂ ಸಮುದ್ಧೃತ್ಯ ಸ ಗಚ್ಛೇದ್ವೈಷ್ಣವಂ ಪದಮ್ ॥ *— ವಾಮನೇ*

ಯಾರು ಕ್ರೀಡೆಗಾಗಿಯಾದರೂ ತನ್ನ ಭುಜದ ಪ್ರಾರಂಭದಲ್ಲಿ ಸುದರ್ಶನಚಕ್ರದ ಚಿಹ್ನೆಯನ್ನು ಬರೆದುಕೊಳ್ಳುವನೋ ಅಂತಹವನು ತನ್ನ ಕೋಟಿಕುಲಗಳನ್ನು ಉದ್ಧರಿಸುವನಲ್ಲದೆ, ಶ್ರೀವಿಷ್ಣುವಿನ ಸ್ಥಾನವನ್ನು ಪಡೆಯುವನು.

ಶರೀರಂ ದೃಶ್ಯತೇ ಯಸ್ಯ ಕೃಷ್ಣಚಕ್ರೇಣ ಲಾಂಛಿತಮ್ ।
ಗಂಗಾಜಲಮಯಂ ಮನ್ಯೇ ದೇಹಂ ತತ್ಪಾಪವರ್ಜಿತಮ್ ॥ *— ಬ್ರಾಹ್ಮೇ*

ಯಾರ ದೇಹವು ಶ್ರೀಕೃಷ್ಣನ ಚಕ್ರದಿಂದ ಚಿಹ್ನಿತವಾಗಿದೆಯೋ ಆ ದೇಹ ಗಂಗಾಜಲದಂತೆ ಪವಿತ್ರ ಹಾಗೂ ಪಾಪರಹಿತ.

ಚಕ್ರಾಂಕಿತನರಾಃ ಕೇಚಿತ್ ಕೇಚಿಚ್ಛಂಖಧರಾಸ್ತಥಾ ।
ಶಂಖಚಕ್ರಧರಾಃ ಕೇಚಿತ್ ಕುಲೇ ವಿಷ್ಣುಪರಿಗ್ರಹೇ ॥ *— ಕೌರ್ಮೇ*

ಶ್ರೀವಿಷ್ಣುವಿನಿಂದ ಅನುಗೃಹೀತವಾದ ಕುಲದಲ್ಲಿ ಕೆಲವರು ಚಕ್ರಾಂಕಿತರಾದರೆ, ಮತ್ತೆ ಕೆಲವರು ಶಂಖಧಾರಿಗಳು; ಇನ್ನು ಕೆಲವರು ಶಂಖಚಕ್ರಧಾರಿಗಳು.

ಗದಾಲಾಂಛನಯುಕ್ತಾಶ್ಚ ಶುಕ್ಲದಂತಾಃ ದೃಢವ್ರತಾಃ ।
ಅಂಕಿತಾಶ್ಚೈವ ಚಕ್ರೇಣ ದೇವದೇವಸ್ಯ ಚಕ್ರಿಣಃ ॥ *— ಲೈಂಗೇ*

ಗದೆಯ ಚಿಹ್ನೆಯಿಂದ ಕೂಡಿದ, ಶುಭ್ರವಾದ ಹಲ್ಲುಗಳುಳ್ಳವರು, ವ್ರತಗಳಲ್ಲಿ ದಾರ್ಢ್ಯವುಳ್ಳವರು, ದೇವದೇವನಾದ ಶ್ರೀಹರಿಯ ಸುದರ್ಶನಚಕ್ರದಿಂದ ಚಿಹ್ನಿತರಾದವರು.

ಯೇಷಾಂ ಚಕ್ರಾಂಕಿತಂ ಗಾತ್ರಂ ಶೂದ್ರೇಷ್ವಪಿ ಹಿ ದೃಶ್ಯತೇ ।
ತೇ ವೈ ಸ್ವರ್ಗಸ್ಯ ನೇತಾರೋ ಬ್ರಾಹ್ಮಣಾಃ ಭುವಿ ದೇವತಾಃ ॥ *–ಸ್ಕಾಂದೇ*

ಶೂದ್ರವರ್ಣದವರ ದೇಹವೂ ಚಕ್ರದಿಂದ ಚಿಹ್ನಿತವಾದದ್ದು ಕಾಣಿಸುವುದು. ಅಂತಹ ಚಕ್ರದಿಂದ ಚಿಹ್ನಿತವಾದ ದೇಹವುಳ್ಳ ಬ್ರಾಹ್ಮಣರು ಭೂಮಿಯಲ್ಲಿ ದೇವತೆಗಳಂತೆ ಇರುವವರು. ಅವರೇ ಸ್ವರ್ಗಕ್ಕೆ ಕೊಂಡೊಯ್ಯುವವರು.

ಶ್ರಾವಕಾಃ ವಾಸುದೇವಸ್ಯ ತಥೈವ ನಟನರ್ತಕಾಃ ।
ಅನ್ಯೇ ಚ ವೈಷ್ಣವಾಸ್ತತ್ರ ಸರ್ವೇ ಚಕ್ರೇಣ ಲಾಂಛಿತಾಃ ॥ *–ಶಿವಪುರಾಣೇ*

ಶ್ರೀವಾಸುದೇವನ ಲೀಲೆಗಳನ್ನು ಮಹಿಮೆಗಳನ್ನು ಕುರಿತು ನಟನೆ, ನರ್ತನಗಳನ್ನು ನಡೆಸುವವರೂ, ಅವನ ಮಹಿಮಾದಿಗಳನ್ನು ಕೇಳುವವರೂ, ಉಳಿದ ವೈಷ್ಣವರೂ ಹೀಗೆ ಅಲ್ಲಿ ನೆರೆದಿದ್ದ ಎಲ್ಲರೂ ಸುದರ್ಶನಚಕ್ರದಿಂದ ಚಿಹ್ನಿತರಾದವರು.

ಶಂಖಚಕ್ರಾಂಕನಂ ಕುರ್ಯಾದಾತ್ಮನೋ ಬಾಹುಮೂಲಯೋಃ ।
ಕಲತ್ರಾಪತ್ಯಭೃತ್ಯೇಷು ಪಶ್ವಾದಿಷು ಚ ಸಂಪದೇ ॥ *–ಆಗ್ನೇಯೇ*

ಸಾಧಕನು ತನ್ನ ಭುಜಗಳ ಬುಡದಲ್ಲಿ ಶಂಖ ಮತ್ತು ಚಕ್ರಗಳ ಚಿಹ್ನೆಯನ್ನು ಧರಿಸಬೇಕು. ಹಾಗೆಯೇ ತನ್ನ ಪತ್ನಿ, ಪುತ್ರ, ಸೇವಕರಿಗೂ, ಪಶ್ವಾದಿಗಳಿಗೂ ಶಂಖ ಮತ್ತು ಚಕ್ರಗಳ ಚಿಹ್ನೆಯನ್ನು ಹಾಕಬೇಕು. ಇದು ಭೌತಿಕ ಹಾಗೂ ಆಧ್ಯಾತ್ಮಿಕ ಸಂಪತ್ತಿನ ಪ್ರಾಪ್ತಿಗೆ ಕಾರಣವಾಗಬಲ್ಲದು.

ಉಪವೀತಾದಿವದ್ಧಾರ್ಯಾಃ ಶಂಖಚಕ್ರಗದಾದಯಃ ।
–ವಾಯವ್ಯೇ [ಉಪಪುರಾಣೇ]

ಉಪವೀತ, ಶಿಖಾಗಳನ್ನು ಹೇಗೋ ಹಾಗೆಯೇ ಶಂಖ, ಚಕ್ರ, ಗದಾ, ಪದ್ಮಗಳ ಚಿಹ್ನೆಯನ್ನೂ ಧರಿಸಿಕೊಳ್ಳಲೇಬೇಕು.

ಚಕ್ರಾದೀನ್ ಧಾರಯೇದ್ ವಿಪ್ರೋ ಲಲಾಟೇ ಮಸ್ತಕೇ ಭುಜೇ ।
–ಆದಿತ್ಯಪುರಾಣೇ

ವಿಪ್ರನು ಹಣೆಯಲ್ಲಿ, ತಲೆಯಲ್ಲಿ ಹಾಗೂ ಭುಜಗಳಲ್ಲಿ ಚಕ್ರ, ಶಂಖ, ಗದಾ, ಪದ್ಮಗಳ ಚಿಹ್ನೆಗಳನ್ನು ಧರಿಸಿಕೊಳ್ಳಬೇಕು.

ಚಕ್ರಾದಿಗಳ ಧಾರಣೆಯ ವಿಧಿಯ ಬಗ್ಗೆ ಬೆಳಕು ಚೆಲ್ಲುವ ಕೆಲವು ಸ್ಮೃತಿಗಳ ಮಾತುಗಳು:

ಪಾದ್ಮದ ಉತ್ತರಖಂಡ(೩೦ನೇ ಅಧ್ಯಾಯ)ದಲ್ಲಿ ಚತುರ್ಮುಖನನ್ನು ಕುರಿತು ಭಗವಂತನು ಹೇಳಿರುವ ಮಾತುಗಳ ಉಲ್ಲೇಖ ಹೀಗೆ ಬಂದಿದೆ–

ಶೃಣು ವತ್ಸ ಪ್ರವಕ್ಷ್ಯಾಮಿ ಮಂತ್ರದೀಕ್ಷಾವಿಧಿಂ ಪರಮ್ ।
ಸುದರ್ಶನಂ ಪಾಂಚಜನ್ಯಂ ಸುವರ್ಣೇನ ಪ್ರಕಾರಯೇತ್ ॥

ರೌಪ್ಯೇಣ ವಾಽಪಿ ತಾಮ್ರೇಣ ಕಾಂಸ್ಯೇನಾಪಿ ಪ್ರಕಾರಯೇತ್ ।
ಸ್ನಾಪ್ಯ ಪಂಚಾಮೃತೈಃ ಶುದ್ಧೈರರ್ಚಯೇತ್ ಪುರತೋ ಮಮ ॥

ಅರ್ಚಯೇದ್ ಗಂಧಪುಷ್ಪಾದ್ಯೈಃ ತನ್ಮಂತ್ರೇಣ ವಿಧಾನತಃ ।
ತಸ್ಮಿನ್ನಗ್ನೌ ಕ್ಷಿಪೇಚ್ಚಕ್ರಂ ಶಂಖಂ ಚ ದ್ವಿಜಸತ್ತಮ ॥

ಷಡಕ್ಷರೇಣ ಜುಹುಯಾದಾಜ್ಯಂ ವಿಂಶತಿಸಂಖ್ಯಯಾ ।
ಪ್ರತಪ್ತಂ ಚಕ್ರಮಾದಾಯ ಮಂತ್ರೇಣೈವಾಂಕಯೇದ್ ಗುರುಃ ॥

ಏವಮೇವಾಂಕನಂ ಕುರ್ಯಾತ್ ಬಾಹ್ವೋಃ ದಕ್ಷಿಣಸವ್ಯಯೋಃ ।
ಊರ್ಧ್ವಪುಂಡ್ರಧರಂ ಶಿಷ್ಯಂ ಮಂತ್ರಮಧ್ಯಾಪಯೇದ್ ಗುರುಃ ॥

— ನಾರದಃ

ಏವಮುಕ್ತ್ವಾ ವಿಧಾತಾರಂ ದೇವದೇವೋ ಹರಿಃ ಪಿತಾ ।
ಸ್ವಚಕ್ರೇಣಾಂಕಯಿತ್ವಾ ತಂ ತಸ್ಯ ಮಂತ್ರಮದಾತ್ ಸ್ವಯಮ್ ॥

ಸರ್ವಲೋಕೇಶ್ವರೋ ದೇವೋ ಬ್ರಹ್ಮಾ ಮಮ ಪಿತಾ ಪ್ರಭುಃ ।
ಮಮಾಪಿ ವಿಧಿವನ್ಮಂತ್ರಂ ಪ್ರದದೌ ಮುನಿಸತ್ತಮಾಃ ।
ತಸ್ಮಾದ್ ಯೂಯಂ ಮುನಿಶ್ರೇಷ್ಠಾಃ ಧಾರಯಧ್ವಂ ಸುದರ್ಶನಮಿತಿ ॥

ಪುತ್ರ! ಶ್ರೇಷ್ಠವಾದ ಮಂತ್ರದ ದೀಕ್ಷಾವಿಧಾನವನ್ನು ಹೇಳುವೆ ಕೇಳು– ಚಿನ್ನದ, ಬೆಳ್ಳಿಯ, ತಾಮ್ರದ ಅಥವಾ ಕಂಚಿನ ಸುದರ್ಶನಚಕ್ರವನ್ನೂ, ಪಾಂಚಜನ್ಯಶಂಖವನ್ನೂ ಮಾಡಿಸಬೇಕು. ಭಗವಂತನ ಎದುರು ಶುದ್ಧವಾದ ಪಂಚಾಮೃತಗಳಿಂದ ಅವುಗಳಿಗೆ ಅಭಿಷೇಕ ನಡೆಸಬೇಕು. ಸುದರ್ಶನಚಕ್ರಕ್ಕೂ, ಪಾಂಚಜನ್ಯಶಂಖಕ್ಕೂ ಸಂಬಂಧಪಡುವ ಮಂತ್ರದಿಂದ ವಿಧಿವತ್ತಾಗಿ ಗಂಧಪುಷ್ಪಾದಿಗಳಿಂದ ಅವುಗಳನ್ನು ಪೂಜಿಸಬೇಕು. ಹೋಮದ ಅಗ್ನಿಯಲ್ಲಿ ಸುದರ್ಶನಚಕ್ರವನ್ನೂ ಪಾಂಚಜನ್ಯಶಂಖವನ್ನೂ ಇಡಬೇಕು. ಕೃಷ್ಣಷಡಕ್ಷರ ಮಂತ್ರದಿಂದ ಇಪ್ಪತ್ತು ಆಜ್ಯಾಹುತಿಗಳನ್ನು ನೀಡಬೇಕು. ಆ ಅಗ್ನಿಯಲ್ಲಿ ಬಿಸಿಯಾದ ಚಕ್ರದ ಮೂಲಕ ಗುರು ಮಂತ್ರವನ್ನು ಜಪಿಸುತ್ತ ಮುದ್ರೆಯನ್ನು ಹಾಕಬೇಕು. ಇದೇ ರೀತಿಯಾಗಿ ಬಲ ಮತ್ತು ಎಡ ಬಾಹುಗಳಲ್ಲಿಯೂ ಚಕ್ರ ಹಾಗೂ ಶಂಖಗಳ ಮುದ್ರೆಯನ್ನು ಹಾಕಬೇಕು. ಆ ಬಳಿಕ ಊರ್ಧ್ವಪುಂಡ್ರಧಾರಿಯಾದ ಶಿಷ್ಯನಿಗೆ ಗುರುವು ಮಂತ್ರೋಪದೇಶ ನೀಡಬೇಕು.

ಹೀಗೆ ಭಗವಂತನು ಚತುರ್ಮುಖನಿಗೆ ತಿಳಿಸಿದನೆಂದು ಮುನಿಗಳಲ್ಲಿ ಹೇಳಿರುವ ನಾರದರು ತನಗೂ ಚತುರ್ಮುಖ ಮುದ್ರಾಧಾರಣೆ ಮಾಡಿಸಿ ಮಂತ್ರೋಪದೇಶ ನೀಡಿದ್ದನ್ನು ನಿರೂಪಿಸುವರು–

ಹೀಗೆ ಚತುರ್ಮುಖನ ತಂದೆ ಶ್ರೀಹರಿ ಚತುರ್ಮುಖನಿಗೆ ತಿಳಿಸಿ, ತನ್ನ ಚಕ್ರದಿಂದ ಅವನಿಗೆ ಮುದ್ರೆ ಹಾಕಿ ತನ್ನ ಮಂತ್ರವನ್ನು ಉಪದೇಶಿಸಿದನು. ಭಗವಂತನಿಂದ ಉಪದೇಶ ಪಡೆದುಕೊಂಡ ನನ್ನ ತಂದೆಯಾದ ಚತುರ್ಮುಖನು ನನಗೂ ವಿಧಿವತ್ತಾಗಿ ಮಂತ್ರವನ್ನು

ಉಪದೇಶಿಸಿರುವನು. ಆದುದರಿಂದ "ಋಷಿಶ್ರೇಷ್ಠರೇ! ನೀವೂ ಕೂಡಾ ಸುದರ್ಶನಚಕ್ರದ ಮುದ್ರೆಯನ್ನು ಧರಿಸಿಕೊಳ್ಳಿ" –ಎಂಬುದಾಗಿ.

ಈ ರೀತಿಯಾಗಿ ನಾರದರು ಋಷಿಗಳೆದುರು ಸದಾಚಾರದ ಉಲ್ಲೇಖದೊಂದಿಗೆ ಚಕ್ರಮುದ್ರಾಧಾರಣೆಯ ಬಗ್ಗೆ ಘೋಷಿಸಿದ್ದನ್ನು ಉಲ್ಲೇಖಿಸಿರುವ 'ಪದ್ಮಪುರಾಣ' ಮುಂದೆ ಮೂವತ್ತನೆಯ ಅಧ್ಯಾಯದಲ್ಲಿ ಮುದ್ರಾಧಾರಣೆಯ ಬಗ್ಗೆ ಇನ್ನಷ್ಟು ಮಾಹಿತಿಯನ್ನು ನೀಡುತ್ತಿದೆ–

ಚಕ್ರಂ ವಾ ಶಂಖಚಕ್ರೇ ವಾ ತಥಾ ಪಂಚಾಯುಧಾನಿ ವಾ ।
ಧಾರಯಿತ್ವೈವ ವಿಧಿವದ್ ಬ್ರಹ್ಮಕರ್ಮ ಸಮಾರಭೇತ್ ॥

ಸುದರ್ಶನಂ ಧಾರಯಿತ್ವಾ ವಹ್ನಿತಪ್ತಂ ದ್ವಿಜೋತ್ತಮಃ ।
ಉಪನೀಯ ವಿಧಾನೇನ ಪಶ್ಚಾತ್ ಕರ್ಮಸು ಯೋಜಯೇತ್ ॥

ದದ್ಯಾದ್ ಗೋಭೂಹಿರಣ್ಯಾದಿ ಚಕ್ರಾಂಕಿತಭುಜಾಯ ವೈ ।
ವೈಷ್ಣವತ್ವಸ್ಯ ಸಿದ್ಧ್ಯರ್ಥಂ ಜ್ಞಾನಸಿದ್ಧ್ಯೈ ವಿಶೇಷತಃ ॥
ಪ್ರತಪೇತ್ ಶಂಖಚಕ್ರಾಭ್ಯಾಂ ಹುತ್ವಾ ಹೋಮಂ ವಿಧಾನತಃ ।
ಅನ್ಯೈರ್ನ ದಾಹಯೇತ್ ಗಾತ್ರಂ ಬ್ರಾಹ್ಮಣೋ ಹರಿಲಾಂಛನಾತ್ ॥

ಶಂಖಚಕ್ರಗದಾಖಡ್ಗಶಾರ್ಙ್ಗಾದನ್ಯೈರ್ಹರೇರಪಿ ।
ನ ಲಕ್ಷಣೈರ್ದಹೇದಂಗಾನ್ಯದಗ್ಧೋ ನಾರ್ಹತಿ ಕ್ರಿಯಾಮ್ ।
ಅಚಕ್ರಧಾರಿಣಂ ವಿಪ್ರಂ ದೂರತಃ ಪರಿವರ್ಜಯೇತ್ ॥

ಚಕ್ರ ಅಥವಾ ಶಂಖಚಕ್ರ ಅಥವಾ ಅವನ ಐದು ಆಯುಧಗಳ ಚಿಹ್ನೆಯನ್ನು ವಿಧಿವತ್ತಾಗಿ ಧರಿಸಿಕೊಂಡ ಮೇಲೆಯೇ ವೇದೋಕ್ತಕರ್ಮಗಳನ್ನು ನಡೆಸಬೇಕು. ಬ್ರಾಹ್ಮಣಶ್ರೇಷ್ಠನಾದವನು ವಹ್ನಿಯಿಂದ ಬಿಸಿಮಾಡಲ್ಪಟ್ಟ ಸುದರ್ಶನಚಕ್ರದ ಮುದ್ರೆಯ ಧಾರಣೆ ಮಾಡಿಸಿ, ವಿಧಿವತ್ತಾಗಿ ಉಪನಯನ ಮಾಡಿಸಿ, ಬಳಿಕ ವೈದಿಕಕರ್ಮಗಳಲ್ಲಿ ತೊಡಗಿಸಬೇಕು. ಯಾರ ಭುಜ ಸುದರ್ಶನಚಕ್ರದಿಂದ ಚಿಹ್ನಿತವಾಗಿದೆಯೋ ಅಂತಹ ದ್ವಿಜನಿಗೆ ಗೋ, ಭೂ, ಹಿರಣ್ಯ ಇತ್ಯಾದಿಗಳ ದಾನ ನೀಡಬೇಕು. ವೈಷ್ಣವತ್ವದ ಸಿದ್ಧಿಗಾಗಿ, ವಿಶೇಷವಾಗಿ ಜ್ಞಾನಸಿದ್ಧಿಗಾಗಿ ವಿಧಿವತ್ತಾಗಿ ಹೋಮಿಸಿ ಅದರ ಬೆಂಕಿಯಿಂದ ಕಾಯಿಸಿ ಚಕ್ರಶಂಖಗಳ ಚಿಹ್ನೆಯನ್ನು ಹಾಕಬೇಕು. ಬ್ರಾಹ್ಮಣನಾದವನು ಶ್ರೀಹರಿಯ ಚಿಹ್ನೆಗಿಂತ ಇತರ ದೇವತೆಗಳ ಚಿಹ್ನೆಗಳಿಂದ ದೇಹವನ್ನು ಸುಟ್ಟುಕೊಳ್ಳಬಾರದು. ಶ್ರೀಹರಿಯ ಶಂಖಚಕ್ರಗದಾಖಡ್ಗಶಾರ್ಙ್ಗಬಿಲ್ಲು ಇವುಗಳ ಚಿಹ್ನೆಯನ್ನು ಧರಿಸಿಕೊಳ್ಳಬೇಕೇ ಹೊರತು ಶ್ರೀಹರಿಗೇ ಸೇರಿದ ಬೇರೆ ಲಕ್ಷಣಗಳಿಂದ ದೇಹವನ್ನು ಸುಟ್ಟುಕೊಳ್ಳಬಾರದು. ಭಗವಂತನ ಚಕ್ರಾದಿಚಿಹ್ನೆಗಳಿಂದ ದೇಹವನ್ನು ಸುಟ್ಟುಕೊಳ್ಳದವನು ಯಾವುದೇ ವೈದಿಕಕ್ರಿಯೆಗೆ ಅನರ್ಹ. ಚಕ್ರದ ಮುದ್ರೆ ಧರಿಸದ ವಿಪ್ರನನ್ನು ದೂರದಿಂದಲೇ ತ್ಯಜಿಸಬೇಕು.

ಪಂಚರಾತ್ರಾಗಮೋಽಪಿ ತತ್ರ ಪ್ರಮಾಣಮ್– ಮುದ್ರಾಧಾರಣೆಯ ವಿಷಯದಲ್ಲಿ ಪಂಚರಾತ್ರಾಗಮವೂ ಪ್ರಮಾಣವೆನಿಸಿದೆ– ಎಂದು ಉದ್ಘೋಷಿಸಿ, ಪಂಚರಾತ್ರಾಗಮದ

'ವಿಹಗೇಶ್ವರಸಂಹಿತೆ'ಯನ್ನು ಉದಾಹರಿಸಲಾಗಿದೆ. 'ವಿಹಗೇಶ್ವರಸಂಹಿತೆ' ಮುದ್ರಾಧಾರಣೆಯ ವಿಧಾನದ ವಿಷಯದಲ್ಲಿ ಹೀಗೆ ಬೆಳಕು ಚೆಲ್ಲುತ್ತಿದೆ–

ತದ್ಧಾರಣವಿಧಿಂ ವಕ್ಷ್ಯೇ ಮಹಾಪಾತಕನಾಶನಮ್ ।
ಚಕ್ರಂ ಶಂಖಂ ಸಮಾರಾಧ್ಯ ಗಂಧಪುಷ್ಪಾದಿಭಿಃ ಶುಭೈಃ ॥

ಅನವದ್ಯಂ ಚ ನೈವೇದ್ಯಂ ವಿನಿವೇದ್ಯ ಸ್ವಶಕ್ತಿತಃ ।
ಸುದರ್ಶನ ನಮಸ್ತುಭ್ಯಂ ಪಾಂಚಜನ್ಯ ನಮೋಽಸ್ತು ತೇ ॥

ಇತಿ ಮಂತ್ರಂ ಸಮುಚ್ಚಾರ್ಯ ನಮಸ್ಕುರ್ಯಾತ್ ಪುನಃಪುನಃ ।
ತತಃ ಪಾವಕಮಭ್ಯರ್ಚ್ಯ ಜುಹುಯಾದ್ ವೈಷ್ಣವಾಹುತೀಃ ॥

ವೇದಾದಿಭಿಸ್ತಥಾ ಮಂತ್ರೈಃ ಸ್ರುಚೈವ ಜುಹುಯಾದ್ ಘೃತಮ್ ।
ಚಕ್ರಂ ಚ ಪಾಂಚಜನ್ಯಂ ಚ ತಸ್ಮಿನ್ನಗ್ನೌ ವಿನಿಕ್ಷಿಪೇತ್ ॥

ಅಗ್ನಿನೈವ ತು ಸಂಯುಕ್ತಂ ಚಕ್ರಮಾದಾಯ ಮಾಮಕಮ್ ।
ದಕ್ಷಿಣಂ ಬಾಹುಮೂಲಂ ಚ ದಹೇದ್ ವಿಗತಸಾಧ್ವಸಃ ॥

ಅಥವಾನ್ಯೇನ ಕೇನಾಪಿ ವೈಷ್ಣವೇನ ಮಹಾತ್ಮನಾ ।
ಲಾಂಛನಂ ಬಿಭ್ರಿಯಾಚ್ಚಕ್ರಂ ಪಾಂಚಜನ್ಯಂ ತಥೈವ ಚ ॥

ಉಚ್ಚಾರಯನ್ನಿಮಂ ಮಂತ್ರಂ ಹೃದಯೇ ಮಾಂ ವಿಚಿಂತಯೇತ್ ।
ಸುದರ್ಶನ ಮಹಾಜ್ವಾಲ ಕೋಟಿಸೂರ್ಯ ಸಮಪ್ರಭ ॥

ಅಜ್ಞಾನಾಂಧಸ್ಯ ಮೇ ನಿತ್ಯಂ ವಿಷ್ಣೋರ್ಮಾರ್ಗಂ ಪ್ರದರ್ಶಯ ।
ಇತಿ ಮಂತ್ರಂ ಸಮುಚ್ಚಾರ್ಯ ದಕ್ಷಿಣಂ ಬಾಹುಮಂಕಯೇತ್ ॥

ಪಾಂಚಜನ್ಯ ನಿಜಧ್ವಾನಧ್ವಸ್ತಪಾತಕಸಂಚಯ ।
ಪಾಹಿ ಮಾಂ ಪಾಪಿನಂ ಘೋರಸಂಸಾರಾರ್ಣವಪಾತಿನಮ್ ।
ಇತಿ ಮಂತ್ರಂ ಸಮುಚ್ಚಾರ್ಯ ದಹೇತ್ ಸವ್ಯಭುಜಂ ತಥಾ ॥

ಮಹಾಪಾತಕಪರಿಹಾರಕವಾದ ಮುದ್ರಾಧಾರಣೆಯ ವಿಧಾನವನ್ನು ತಿಳಿಸುವೆನು. ಗಂಧಪುಷ್ಪಾದಿಗಳಿಂದ ಚಕ್ರವನ್ನೂ ಶಂಖವನ್ನೂ ಪೂಜಿಸಬೇಕು. ತನ್ನ ಶಕ್ತ್ಯನುಸಾರ ನಿರ್ದುಷ್ಟವಾದ ನೈವೇದ್ಯವನ್ನು ಸಮರ್ಪಿಸಬೇಕು. 'ಸುದರ್ಶನ ನಮಸ್ತುಭ್ಯಂ' ಎಂಬ ಮಂತ್ರವನ್ನು ಪಠಿಸಿ ಸುದರ್ಶನಚಕ್ರವನ್ನೂ, 'ಪಾಂಚಜನ್ಯ ನಮೋಽಸ್ತು ತೇ' ಎಂಬ ಮಂತ್ರವನ್ನು ಪಠಿಸಿ ಶಂಖವನ್ನೂ ಮತ್ತೆಮತ್ತೆ ನಮಸ್ಕರಿಸಬೇಕು. ಅಗ್ನಿಯನ್ನು ಆರಾಧಿಸಿ ವೇದಾದಿಮಂತ್ರಪಠನಪೂರ್ವಕ ವೈಷ್ಣವಾಹುತಿಗಳನ್ನು ನೀಡಬೇಕು. ಸ್ರುಕ್‌ನಿಂದ ತುಪ್ಪವನ್ನು ಹೋಮಿಸಬೇಕು. ಚಕ್ರವನ್ನು, ಶಂಖವನ್ನು ಆ ಹೋಮದ ಅಗ್ನಿಯಲ್ಲಿ ಇಡಬೇಕು. ಅಗ್ನಿಯಿಂದ ಕೂಡಿದ ನನ್ನ (ಪರಮಾತ್ಮನ) ಚಕ್ರದ ಮೂಲಕ ನಿರ್ಭೀತನಾಗಿ ಬಲ ಬಾಹುವಿನ ಬುಡವನ್ನು ತಾನೇ ಸುಟ್ಟುಕೊಳ್ಳಬೇಕು. ಅಥವಾ ಬೇರೆ ಮಹನೀಯ

ವೈಷ್ಣವರು ಇದ್ದಲ್ಲಿ ಅವರ ಮೂಲಕವಾದರೂ ಮುದ್ರಾಧಾರಣೆ ಮಾಡಿಸಿಕೊಳ್ಳಬೇಕು. ಇದೇ ರೀತಿಯಾಗಿ ಪಾಂಚಜನ್ಯಶಂಖದ ಚಿಹ್ನೆಯನ್ನೂ ಧರಿಸಿಕೊಳ್ಳಬೇಕು.

ಹೀಗೆ ಚಕ್ರಮುದ್ರೆಯನ್ನು ಧರಿಸಿಕೊಳ್ಳುವಾಗ 'ಸುದರ್ಶನ ಮಹಾಜ್ವಾಲ........' ಎಂಬ ಮಂತ್ರವನ್ನೂ, ಶಂಖಮುದ್ರೆಯನ್ನು ಧರಿಸಿಕೊಳ್ಳುವಾಗ 'ಪಾಂಚಜನ್ಯ ನಿಜಧ್ವಾನ-ಧ್ವಸ್ತಪಾತಕಸಂಚಯ.........' ಎಂಬ ಮಂತ್ರವನ್ನೂ ಪಠಿಸುತ್ತಿರಬೇಕು. ಹಾಗೆಯೇ ಹೃದಯದಲ್ಲಿ ನನ್ನನ್ನು (ಭಗವಂತನನ್ನು) ಧ್ಯಾನಿಸುತ್ತಿರಬೇಕು.

ಇನ್ನೂ ಅನೇಕ ಪ್ರಮಾಣಗಳು

ಇನ್ನೂ ಬೇರೆ ಬೇರೆ ಪುರಾಣಗಳಲ್ಲಿ ಸಾವಿರಕ್ಕಿಂತಲೂ ಅಧಿಕ ಮಾತುಗಳು ಮುದ್ರಾಧಾರಣೆಯ ಬಗ್ಗೆ ದೊರಕುವವು. ಆದರೆ 'ಗ್ರಂಥಗೌರವಭಯ'ಕ್ಕೊಳಗಾಗಿ ಕೆಲವು ಮಾತುಗಳನ್ನಷ್ಟೇ ಉದಾಹರಿಸಲಾಗಿದೆ ಎಂದು ತಿಳಿಸಲಾಗಿದೆ–

ಯದ್ಯಪ್ಯೇವಂ ಪುರಾಣಾಂತರೇಷ್ವಪಿ ಪರಃ ಸಹಸ್ರವಚನಾನ್ಯುಪಲಭ್ಯಂತೇ ತಥಾಪಿ ಗ್ರಂಥಗೌರವಭಯಾತ್ ತತ್ರ ತತ್ರ ವಿದ್ಯಮಾನಂ ಕಿಂಚಿದೇವ ವಚನಂ ಉದಾಹ್ರಿಯತೇ ।

ಪಂಚರಾತ್ರಾಗಮದ ವಿಹಗೇಶ್ವರಸಂಹಿತೆಯನ್ನು ಉದಾಹರಿಸಿ, ಇದೇ ರೀತಿಯಾಗಿ ಪರಮೇಶ್ವರ ಸನತ್ಕುಮಾರಾದಿಸಂಹಿತೆಗಳ ವಚನಗಳನ್ನೂ ಉದಾಹರಿಸಬಹುದಾಗಿದೆ- ಎಂದು ಉಪಸಂಹರಿಸಲಾಗಿದೆ–

'ಏವಂ ಪರಮೇಶ್ವರಸನತ್ಕುಮಾರಾದಿಸಂಹಿತಾವಚನಾನ್ಯುದಾಹರ್ತವ್ಯಾನಿ'.

ಅಲ್ಲದೆ, ಶ್ರೀವಿಷ್ಣುಸರ್ವೋತ್ತಮತ್ವವನ್ನು ಒಪ್ಪುವ ರಾಮಾನುಜೀಯರೂ, ನಿಂಬಾರ್ಕಾದಿ ಮತಸ್ಥರೂ ಮುದ್ರಾಧಾರಣೆ ಮಾಡಿಕೊಳ್ಳುವುದರಿಂದ ಮುದ್ರಾಧಾರಣವಿಷಯದಲ್ಲಿ ಶಿಷ್ಟಾಚಾರವೂ ಪ್ರಮಾಣವಾಗುವುದೆಂದು ತಿಳಿಸಲಾಗಿದೆ.

'ಚಕ್ರಮೀಮಾಂಸಾ'ದಲ್ಲಿ ತಪ್ತಮುದ್ರಾಧಾರಣೆಯನ್ನು ನಿಷೇಧಿಸುವ ವಚನಗಳ ಆಂತರ್ಯ

ತಪ್ತಮುದ್ರಾಧಾರಣದ ವಿಷಯದಲ್ಲಿ ಶ್ರುತಿಗಳನ್ನೂ, ಸ್ಮೃತಿಗಳನ್ನೂ, ಸದಾಚಾರವನ್ನೂ ಪ್ರಮಾಣವನ್ನಾಗಿ ತೋರಿಸಲಾದ ಚಕ್ರಮೀಮಾಂಸಾದಲ್ಲಿ ತಪ್ತಮುದ್ರಾಧಾರಣವನ್ನು ನಿಷೇಧಿಸುವಂತೆ ಮೇಲ್ನೋಟಕ್ಕೆ ಕಾಣಿಸುವ ಕೆಲವು ಮಾತುಗಳನ್ನು ಉಲ್ಲೇಖಿಸಿ, ಅವುಗಳ ನೈಜ ಆಂತರ್ಯವನ್ನು ಸ್ಪಷ್ಟಪಡಿಸಲಾಗಿದೆ.

'**ನ ಲೋಹಿತಂ ಕುರ್ಯಾತ್**' –ಎಂಬ ಶ್ರುತಿಯು ಲೋಹಿತಕರಣವನ್ನು, ಅಂದರೆ ಮೈಯನ್ನು ಗಾಯ ಮಾಡಿಕೊಂಡು ರಕ್ತ ಬರಿಸುವುದನ್ನು ನಿಷೇಧಿಸಿದೆ. ತಪ್ತಮುದ್ರಾಧಾರಣೆ ನಡೆಸಿದಾಗ ಮೈಯಲ್ಲಿ ರಕ್ತ ಬಾರದೆ ಇರುವುದಿಲ್ಲ. ಆದುದರಿಂದ, ತಪ್ತಮುದ್ರಾಧಾರಣೆಯನ್ನೂ ನಿಷೇಧಿಸಿದಂತಾಗುವುದು.

ಹೀಗೆ ವಾದಿಸುವುದು ಉಚಿತವಲ್ಲ. 'ನ ಲೋಹಿತಂ ಕುರ್ಯಾತ್' ಎಂಬುದು ನೇರವಾಗಿ ತಪ್ತಮುದ್ರಾಧಾರಣವನ್ನು ನಿಷೇಧಿಸುತ್ತಿಲ್ಲ. ಮೈಯನ್ನು ರಕ್ತಮಯವನ್ನಾಗಿಸುವುದಕ್ಕೆ ನಿಷೇಧವನ್ನು ಈ ಶ್ರುತಿ ಸಾರುತ್ತಿದೆ. ಶಸ್ತ್ರಾದಿಗಳಿಂದ ಗಾಯ ಮಾಡಿಕೊಂಡಾಗ ಯಾವ ರೀತಿಯಾಗಿ ರಕ್ತವು ಚಿಮ್ಮುವುದೋ ಹಾಗೆ ತಪ್ತಮುದ್ರಾಧಾರಣೆ ಮಾಡಿಸಿದಾಗ ಚಿಮ್ಮುವುದಿಲ್ಲ. ಸ್ವಲ್ಪ ಕಾಲದ ಅನಂತರ ಕೆಲವರಿಗಷ್ಟೇ ತಪ್ತಮುದ್ರಾಧಾರಣೆಯಿಂದ ರಕ್ತ ಚಿಮ್ಮಬಹುದು ಅಷ್ಟೇ. ಇಷ್ಟುಮಾತ್ರಕ್ಕೆ 'ಲೋಹಿತಕರಣ'ಕ್ಕೆ ಕಾರಣವೆಂದು ತಪ್ತಮುದ್ರಾಧಾರಣೆಯನ್ನು ನಿಷೇಧಿಸುವುದು ಸರಿಯಲ್ಲ. ಕಿವಿ ಚುಚ್ಚುವುದೂ ಕೆಲವರ ಪಾಲಿಗೆ 'ಲೋಹಿತಕರಣ'ಕ್ಕೆ ಪ್ರಯೋಜಕವಾಗುವುದೆಂದು ಅದನ್ನೂ ನಿಷೇಧಿಸಬೇಕಾದೀತು!

ತಪ್ತಮುದ್ರಾಧಾರಣದಿಂದ ನಿಯತವಾಗಿ 'ಲೋಹಿತಕರಣ' ಆಗುವುದೆಂದು ಇಟ್ಟುಕೊಂಡರೂ 'ನ ಲೋಹಿತಂ ಕುರ್ಯಾತ್' ಎಂಬುದರಿಂದ ತಪ್ತಮದ್ರಾಧಾರಣೆ ನಿಷೇಧಿಸಲ್ಪಡುವುದೆಂದು ಹೇಳಲಾಗದು. ಯಾಕೆಂದರೆ 'ನ ಲೋಹಿತಂ ಕುರ್ಯಾತ್' ಎಂಬುದು ಸಾಮಾನ್ಯ ವಿಧಿ. ಅದಕ್ಕೆ ವಿಶೇಷವಿಧಿಯಾದ 'ತಪ್ತಮುದ್ರಾಧಾರಣೆ'ಯಿಂದ ಬಾಧವನ್ನು ಹೇಳಬಹುದಾಗಿದೆ. 'ಮಾ ಹಿಂಸ್ಯಾತ್ ಸರ್ವಾಭೂತಾನಿ' ಎಂಬ ಸಾಮಾನ್ಯ ನಿಷೇಧಕ್ಕೆ 'ಅಗ್ನೀಷೋಮೀಯಂ ಶ್ವೇತಮಾಲಭೇತ ಭೂತಿಕಾಮಃ' ಎಂದು ಅಗ್ನೀಷೋಮೀಯ ಪಶುವಿನ ಹಿಂಸೆಯನ್ನು ಬೋಧಿಸುವ ಶ್ರುತಿ ವಿಶೇಷವಿಧಿ ಆಗಿರುವುದರಿಂದ ಸಾಮಾನ್ಯನಿಷೇಧಕ್ಕೆ ಹೇಗೆ ಬಾಧಕವಾಗುವುದೋ ಹಾಗೆ.

ಆದುದರಿಂದ 'ನ ಲೋಹಿತಂ ಕುರ್ಯಾತ್' ಎಂಬ ಮಾತಿನಿಂದ 'ತಪ್ತಮುದ್ರಾಧಾರಣೆ' ನಿಷಿದ್ಧವೆನಿಸುವುದಿಲ್ಲ.

'ನ ಲೋಹಿತಂ ಕುರ್ಯಾತ್' ಎಂಬ ಮಾತಿನ ಆಂತರ್ಯವನ್ನು ಪಾದ್ಮಪುರಾಣ ಸ್ಪಷ್ಟಪಡಿಸಿದೆ–

'ವೈಷ್ಣವತ್ವಸ್ಯ ಸಿದ್ಧ್ಯರ್ಥಂ ಜ್ಞಾನಸಿದ್ಧ್ಯೈ ವಿಶೇಷತಃ ।
ಪ್ರತಪೇಚ್ಛಂಖಚಕ್ರಾಭ್ಯಾಂ ಹುತ್ವಾ ಹೋಮಂ ವಿಶೇಷತಃ ॥

ಅನ್ಯೈರ್ನ ದಾಹಯೇದ್ಗಾತ್ರಂ ಬ್ರಾಹ್ಮಣೋ ಹರಿಲಾಂಛನಾತ್ ।
ಶಂಖಚಕ್ರಗದಾಖಡ್ಗಶಾರ್ಙ್ಗಾದನ್ಯೈರ್ಹರೇರಪಿ ।
ನ ಲಕ್ಷಣೈರ್ದಹೇದಂಗಾನ್ಯದಗ್ಧೋ ನಾರ್ಹತಿ ಕ್ರಿಯಾಮ್ ॥

ಪಾದ್ಮಪುರಾಣದ ಈ ಮಾತಿನಲ್ಲಿ ಹೋಮ ಮಾಡಿ ವೈಷ್ಣವತ್ವದ ಸಿದ್ಧಿಗಾಗಿ, ಜ್ಞಾನ ಸಿದ್ಧಿಗಾಗಿ ಶ್ರೀವಿಷ್ಣುವಿನ ಆಯುಧಗಳಾದ ಶಂಖಚಕ್ರಗಳಿಂದ ಶರೀರವನ್ನು ಅಂಕಿತಗೊಳಿಸಬೇಕು; ಹೀಗೆ ಯಾರ ಶರೀರವು ಅಂಕಿತವೆನಿಸುವುದಿಲ್ಲವೋ ಅವನು ಯಾವುದೇ ವೈದಿಕಕ್ರಿಯೆಯ ನಿರ್ವಹಣೆಗೆ ಯೋಗ್ಯ ಎನಿಸುವುದಿಲ್ಲ ಎಂದು ಒತ್ತಿಹೇಳಿ, ಶ್ರೀಹರಿಯ ಚಿಹ್ನೆಗಳಿಗಿಂತ ಬೇರೆ ಚಿಹ್ನೆಗಳಿಂದ ದೇಹವನ್ನು ಅಂಕಿತಗೊಳಿಸಬಾರದು; ಶ್ರೀಹರಿಯ ಚಿಹ್ನೆಗಳಲ್ಲೂ ಶಂಖ, ಚಕ್ರ, ಗದಾ, ಖಡ್ಗ, ಶಾರ್ಙ್ಗ –ಈ ಆಯುಧಗಳನ್ನು ಬಿಟ್ಟು ಬೇರೆ ಚಿಹ್ನೆಗಳಿಂದ ಅಂಕಿತಗೊಳಿಸಬಾರದು –ಎಂದು ಎಚ್ಚರಿಸಿದೆ. 'ನ ಲೋಹಿತಂ ಕುರ್ಯಾತ್'

ಎಂಬ ಮಾತಿನ ಆಂತರ್ಯ ಇದೇ. ಶ್ರೀವಿಷ್ಣುವಿನ ಚಕ್ರಾದಿ ಆಯುಧಗಳನ್ನು ಬಿಟ್ಟು ಇತರ ಆಯುಧಾದಿಗಳಿಂದ ಶರೀರದಲ್ಲಿ 'ಲೋಹಿತಕರಣ' ಮಾಡಿಕೊಳ್ಳಬಾರದು ಎಂಬುದಾಗಿದೆ.

* * *

'ಏಕಜಾತೇರಯಂ ಧರ್ಮಃ' – ಹೇಗೆ?

ವಿಷ್ಣುಸ್ಮೃತಿಯಲ್ಲಿ ಹೀಗಿದೆ–

ಶಂಖಚಕ್ರಾದ್ಯಂಕನಂ ಚ ನೃತ್ತಗೀತಾದಿಕಂ ತಥಾ ।
ಏಕಜಾತೇರಯಂ ಧರ್ಮೋ ನ ಜಾತು ಸ್ಯಾದ್ದ್ವಿಜನ್ಮನಃ ॥

ಶಂಖಚಕ್ರಾದಿಗಳ ಮುದ್ರೆಯನ್ನು ಧರಿಸುವುದೂ, ನರ್ತನ, ಗಾನ –ಇತ್ಯಾದಿಗಳೂ ಶೂದ್ರರ ಧರ್ಮವೇ ಹೊರತು ದ್ವಿಜರ ಧರ್ಮ ಆಗಲಾರದು. 'ವಿಷ್ಣುಸ್ಮೃತಿ'ಯ ಈ ವಚನದ ಮೇಲ್ನೋಟದ ಅರ್ಥವನ್ನು ಇಟ್ಟುಕೊಂಡಲ್ಲಿ ಶಂಖಚಕ್ರಾದಿಮುದ್ರಾಧಾರಣೆಯನ್ನು ವಿಧಿಸುವ ಹತ್ತಾರು ಪ್ರಮಾಣಗಳಿಗೆ ಬಾಧವನ್ನು ಅಂದರೆ ನಿರರ್ಥಕತ್ವವನ್ನು ಹೇಳಿದಂತಾಗುವುದು. ಅಪೌರುಷೇಯ ವೇದದ ವಚನಗಳಿಗೆ ಹಾಗೂ ಅಂತಹ ವೇದದ ಸಂವಾದವುಳ್ಳ ಪುರಾಣವಚನಗಳಿಗೆ ಬಾಧವನ್ನು ಹೇಳುವುದು ಸಮುಚಿತವಲ್ಲ. ಅದಕ್ಕಾಗಿ ಆ ವಚನಗಳಿಗೆ ವಿರೋಧ ಬಾರದಂತೆ 'ವಿಷ್ಣುಸ್ಮೃತಿ'ಯ ವಚನವನ್ನು ವ್ಯಾಖ್ಯಾನಿಸಬೇಕು. ನೇರವಾದ ಅರ್ಥವಲ್ಲದಿದ್ದರೂ ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕು.

ಈ ಹಿನ್ನೆಲೆಯಲ್ಲಿ ವಿಷ್ಣುಸ್ಮೃತಿಯ ಮಾತನ್ನು ಎರಡು ಬಗೆಗಳಿಂದ ವ್ಯಾಖ್ಯಾನಿಸಬಹುದಾಗಿದೆ.

ಶಂಖಚಕ್ರಾದಿಗಳ ಧಾರಣೆ, ಭಗವಂತನ ಪ್ರೀತಿಗಾಗಿ ನರ್ತನ, ಗಾನ ಇತ್ಯಾದಿಗಳು ಶೂದ್ರಜಾತಿಯವರ ಧರ್ಮ. ಇವು ದ್ವಿಜನ ಧರ್ಮವೂ ಆಗಬಲ್ಲುದಾದರೂ, ದ್ವಿಜನಿಗೆ ಇದು ಮಾತ್ರ ಧರ್ಮವಲ್ಲ. ಯಜ್ಞಾದ್ಯನುಷ್ಠಾನವೂ ದ್ವಿಜನ ಧರ್ಮವಾಗಿದೆ. ಶೂದ್ರನ ಪಾಲಿಗೆ ಯಜ್ಞಾದಿಗಳು ಧರ್ಮ ಎನಿಸವು –ಎಂಬುದು ಆ ಮಾತಿನ ಆಂತರ್ಯ.

ಈ ಅರ್ಥದಲ್ಲಿ 'ಜಾತು' ಎಂಬ ಶಬ್ದಕ್ಕೆ 'ಕೇವಲ' ಎಂಬ ಅರ್ಥದಲ್ಲಿ ಅನಿವಾರ್ಯವಾಗಿ ಲಕ್ಷಣಾವನ್ನು ಆಶ್ರಯಿಸಲಾಗಿದೆ.

ಇನ್ನೊಂದು ಬಗೆಯ ವ್ಯಾಖ್ಯಾನ–

ಶಂಖಚಕ್ರಾದ್ಯಂಕನ ಹಾಗೂ ನೃತ್ತಗಾನಾದಿ ಧರ್ಮವನ್ನು ಶೂದ್ರನಿಂದ ಸ್ವೀಕಾರ ಮಾಡಬಾರದು; ದ್ವಿಜನಿಂದಲೇ ಸ್ವೀಕಾರ ಪಡೆದುಕೊಳ್ಳಬೇಕು.

ಸ್ತ್ರಿಯಃ ಶೂದ್ರಾದಯಶ್ಚಾಪಿ ಬೋಧಯೇಯುಃ ಹಿತಾಹಿತಮ್ ।
ಯಥಾರ್ಹಂ ಮಾನನೀಯಾಶ್ಚ ನಾರ್ಹಂತ್ಯಾಚಾರ್ಯತಾಂ ಕ್ವಚಿತ್ ॥

ಸ್ತ್ರೀಯರು ಹಾಗೂ ಶೂದ್ರಾದಿಗಳು ಹಿತಾಹಿತಗಳನ್ನು ತಿಳಿಸಬಹುದು. ಯೋಗ್ಯತಾನುಗುಣವಾಗಿ ಗೌರವಾರ್ಹರೂ ಕೂಡಾ. ಆದರೆ ಎಂದೂ ಅವರು ಗುರುಗಳೆನಿಸಲಾರರು.

ಈ ಪ್ರಮಾಣದ ಆಧಾರದಲ್ಲಿ ವಿಷ್ಣುಸ್ಮೃತಿಯ ವಚನದಿಂದ ಎರಡನೆಯ ಅರ್ಥವನ್ನು ಹೊರಡಿಸಲಾಗಿದೆ. ಈ ಅರ್ಥವನ್ನಿಟ್ಟುಕೊಂಡಾಗ 'ಏಕಜಾತೇಃ ಸಕಾಶಾತ್ ನ ಜಾತು ಗ್ರಾಹ್ಯಃ, ದ್ವಿಜನ್ಮನಃ ಸಕಾಶಾತ್ ಗ್ರಾಹ್ಯಃ' ಎಂಬುದಾಗಿ 'ಸಕಾಶಾತ್' 'ಗ್ರಾಹ್ಯಃ' –ಈ ಎರಡು ಶಬ್ದಗಳನ್ನು ಅನಿವಾರ್ಯವಾಗಿ ಅಧ್ಯಾಹಾರ ಮಾಡಿಕೊಳ್ಳಬೇಕಾಗುವುದು.

* * *

'ಸ ಶೂದ್ರವದ್ ಬಹಿಷ್ಕಾರ್ಯಃ' – ಹೇಗೆ?

ತಪ್ತಮುದ್ರಾಧಾರಣೆಯನ್ನು ಟೀಕಿಸುವಂತೆ ಕಾಣುವ ಮತ್ತೆ ಕೆಲವು ಸ್ಮೃತಿವಚನ ಗಳು–

ಯಥಾ ಶ್ಮಶಾನಜಂ ಕಾಷ್ಠಮನರ್ಹಂ ಸರ್ವಕರ್ಮಸು ।
ತಥಾ ಚಕ್ರಾಂಕಿತೋ ವಿಪ್ರಃ ಸರ್ವಕರ್ಮಸು ಗರ್ಹಿತಃ ॥

ಶಂಖಚಕ್ರಂ ಮೃದಾ ಯಸ್ತು ಕುರ್ಯಾತ್ತಪ್ತಾಯಸೇನ ವಾ ।
ಸ ಶೂದ್ರವದ್ ಬಹಿಷ್ಕಾರ್ಯಃ ಸರ್ವಸ್ಮಾದ್ ದ್ವಿಜಕರ್ಮಣಃ ॥

ಶ್ಮಶಾನದಲ್ಲಿ ಹುಟ್ಟಿಕೊಂಡ ಕಟ್ಟಿಗೆ ಹೇಗೆ ಎಲ್ಲ ಕರ್ಮಗಳಿಗೂ ಅನರ್ಹವೋ ಹಾಗೆಯೇ ಚಕ್ರಾಂಕಿತನಾದ ವಿಪ್ರ ಎಲ್ಲ ಕರ್ಮಗಳಿಗೂ ನಿಂದ್ಯ.

ಶಂಖಚಕ್ರಗಳನ್ನು ಮಣ್ಣಿನಿಂದಾಗಲೀ ಬಿಸಿಲೋಹದಿಂದಾಗಲೀ ಯಾರು ಧರಿಸಿ ಕೊಳ್ಳುವನೋ ಅವನು ಎಲ್ಲ ಬ್ರಾಹ್ಮಣಕಾರ್ಯಗಳಿಂದಲೂ ಬಹಿಷ್ಕರಿಸಲ್ಪಡಲು ಯೋಗ್ಯ ನಾದವನು.

ಬೋಧಾಯನಸ್ಮೃತಿಯಲ್ಲಿ–

ನಾಂಕನಾಯ ದಹೇದ್ದೇಹಂ ದಹೇಚ್ಚೇತ್ ಕಾಮಕಾರತಃ ।
ನಾಧಿಕುರ್ವಂತಿ ದಗ್ಧಾಂಗಾಃ ಶ್ರೌತಸ್ಮಾರ್ತೇಷು ಕರ್ಮಸು ॥

ಸ್ವೇಚ್ಛಾನುಸಾರವಾಗಿ ಚಿಹ್ನೆಯನ್ನು ಧರಿಸಬೇಕೆಂದು ದೇಹವನ್ನು ಸುಟ್ಟುಕೊಳ್ಳ ಬಾರದು. ಒಂದೊಮ್ಮೆ ಹಾಗೆ ಅಂಗಾಂಗಗಳನ್ನು ಸುಟ್ಟುಕೊಂಡವರು ಶ್ರೌತ ಹಾಗೂ ಸ್ಮಾರ್ತ ಕರ್ಮಗಳಿಗೆ ಅನರ್ಹನೆನಿಸುವರು.

ಶಾತಾತಪಸ್ಮೃತಿಯಲ್ಲಿ–

ಅಂಗೇಷು ನಾಂಕಯೇದ್ ವಿಪ್ರೋ ದೇವತಾಯುಧಲಾಂಛನೈಃ ।
ದಹನಾದ್ ಲೇಖನಾದ್ ವಿಪ್ರಃ ಪಾತಿತ್ಯಂ ಯಾತಿ ತತ್‌ಕ್ಷಣಾತ್ ॥

ದೇವತೆಗಳ ಆಯುಧಗಳ ಚಿಹ್ನೆಗಳಿಂದ ವಿಪ್ರನಾದವನು ಅಂಗಗಳಲ್ಲಿ ಮುದ್ರೆ ಹಾಕಿಕೊಳ್ಳಬಾರದು. ಒಂದೊಮ್ಮೆ ಆ ಉದ್ದೇಶದಿಂದ ತನ್ನ ಅಂಗಗಳನ್ನು ಸುಟ್ಟುಕೊಳ್ಳು ವುದೋ, ಅಂಗಗಳಲ್ಲಿ ಬರೆದುಕೊಳ್ಳುವುದೋ –ಇವನ್ನು ಮಾಡಿದಲ್ಲಿ ಆ ಕ್ಷಣದಲ್ಲಿಯೇ ಪತಿತನಾಗುವನು!

ಹಾರೀತಸ್ಮೃತಿಯಲ್ಲಿ–

ರಾಗಾತ್ ಸಂದಗ್ಧಗಾತ್ರಾಣಾಂ ನ ಸ್ಯಾತ್ ಪಾರತ್ರಿಕಂ ಶುಭಮ್ ।

ಯಾರು ಏನೋ ಬಯಕೆಯಿಂದ ತಮ್ಮ ಶರೀರವನ್ನು ಸುಟ್ಟುಕೊಳ್ಳುವರೋ ಅವರಿಗೆ ಪಾರತ್ರಿಕಶ್ರೇಯಸ್ಸು ದೊರಕದು.

ಹೀಗೆ ಕೆಲವು ಸ್ಮೃತಿಗಳಲ್ಲಿ ಹಾಗೆಯೇ ಪುರಾಣಗಳಲ್ಲಿ ತಪ್ತಮುದ್ರಾಧಾರಣೆಯನ್ನು ನಿಷೇಧಿಸುತ್ತಿರುವಂತೆ ಕಾಣುವುದು. ಆದರೆ ಆ ವಚನಗಳಿಗೆ ಮೇಲ್ನೋಟದ ಅರ್ಥವನ್ನೇ ಒಪ್ಪಿಕೊಂಡಲ್ಲಿ ತಪ್ತಮುದ್ರಾಧಾರಣೆಯನ್ನು ವಿಧಿಸುವ ವೇದದ ಹಾಗೂ ಪುರಾಣ ಸ್ಮೃತ್ಯಾದಿಗಳ ಅನೇಕ ಮಾತುಗಳಿಗೆ ಬಾಧ ಹೇಳಿದಂತಾಗುವುದು! ಹಾಗಾಗಬಾರದೆಂದು ತಪ್ತಮುದ್ರಾಧಾರಣೆಯನ್ನು ನಿಷೇಧಿಸುತ್ತಿರುವಂತೆ ಕಾಣುವ ವಚನಗಳಿಗೆ ಬೇರೆಯೇ ತಾತ್ಪರ್ಯವನ್ನು ಹೇಳಬೇಕು. ಆ ವಚನಗಳಲ್ಲಿಯೇ ಇರುವ 'ಕಾಮಕಾರತಃ' ಇತ್ಯಾದಿ ಶಬ್ದಗಳಿಗೆ ಒತ್ತುಕೊಟ್ಟು ಬೇರೆ ಅರ್ಥವನ್ನು ಹೊರಡಿಸಬಹುದಾಗಿದೆ.

ಚಿನ್ನದ, ಬೆಳ್ಳಿಯ ಅಥವಾ ಕಂಚಿನ ಮುದ್ರೆಗಳಿಂದ ಗುರುಗಳ ಮೂಲಕ ಮುದ್ರಾ ಧಾರಣ ಮಾಡಿಕೊಳ್ಳುವ ಬದಲು ತಾನೇ, ಯಾವುದೋ ಲೋಹದ ಮುದ್ರೆಗಳಿಂದ 'ಮುದ್ರಾಧಾರಣೆ' ಮಾಡಿಕೊಂಡರೂ ಮಾಡಿಕೊಳ್ಳದಂತೆಯೇ. ಆದುದರಿಂದ ಮುದ್ರಾ ಧಾರಣೆ ಮಾಡಿಸಿಕೊಳ್ಳದ ವ್ಯಕ್ತಿಯಂತೆಯೇ ಅವನೂ ಸಕಲದ್ವಿಜಕರ್ಮಗಳಿಗೆ ಅನಧಿಕಾರಿ ಎನಿಸಿದ್ದು ಬಹಿಷ್ಕರಿಸಲು ಯೋಗ್ಯನು. ಅಂತಹವನ ನಿಂದನೆಯನ್ನಷ್ಟೇ ಮುದ್ರಾಧಾರಣೆ ಯನ್ನು ನಿಷೇಧಿಸುವಂತೆ ಕಾಣುವ ಮಾತುಗಳಲ್ಲಿ ಮಾಡಿರುವುದು.

ಮುಂದಿನ ಪ್ರಮಾಣ ಈ ಆಂತರ್ಯವನ್ನು ಸ್ಪಷ್ಟಪಡಿಸುವುದು–

ಸುದರ್ಶನಂ ಪಾಂಚಜನ್ಯಂ ಸೌವರ್ಣೇನ ಪ್ರಕಾರಯೇತ್ ।
ರೌಪ್ಯೇಣ ವಾಽಪಿ ತಾಮ್ರೇಣ ಕಾಂಸ್ಯೇನಾಪಿ ಪ್ರಕಾರಯೇತ್ ॥

ಆಚಾರ್ಯಾದನಭಿಪ್ರಾಪ್ತಃ ಪ್ರಾಪ್ತೋ ವಾ ಭೂರಿದಕ್ಷಿಣಮ್ ।
ಅಂಗೋಪಾಂಗೈಶ್ಚ ಸಂಯುಕ್ತಃ ಕೃತೋಽಪಿ ನ ಕೃತೋ ಭವೇತ್ ॥

ಸುದರ್ಶನಚಕ್ರವನ್ನೂ, ಪಾಂಚಜನ್ಯಶಂಖವನ್ನೂ ಚಿನ್ನ, ಬೆಳ್ಳಿ, ತಾಮ್ರ ಅಥವಾ ಕಂಚು ಲೋಹದಿಂದ ಮಾಡಿಸಬೇಕು. ಗುರುಗಳಿಂದಲೇ ಮುದ್ರಾಧಾರಣ ಮಾಡಿಸಬೇಕು. ಇದಕ್ಕೆ ವ್ಯತಿರಿಕ್ತವಾಗಿ ಬೇರೆ ಯಾವುದೋ ಲೋಹದಿಂದ ಮುದ್ರೆಗಳನ್ನು ಮಾಡಿಸಿ ಅವುಗಳಿಂದ ಮುದ್ರಾಧಾರಣೆ ಮಾಡಿಕೊಂಡರೆ, ಅಥವಾ ಗುರುಗಳಿಂದ ಮುದ್ರಾಧಾರಣೆ ಮಾಡಿಸಿಕೊಳ್ಳುವ ಬದಲು ತಾನೇ ಮಾಡಿಕೊಳ್ಳುವುದು, ಆಚಾರ್ಯರಿಂದ ಭಾರೀ ದಕ್ಷಿಣೆ ಪಡೆದು ಅವರಿಂದ ಮುದ್ರಾಧಾರಣೆ ಮಾಡಿಸಿಕೊಳ್ಳುವುದು –ಹೀಗೆ ಮಾಡಿಸಿಕೊಂಡಲ್ಲಿ ಅಂಗೋಪಾಂಗಗಳಿಂದ ಸಹಿತವಾಗಿಯೇ ಮುದ್ರಾಧಾರಣ ನಡೆಸಿದರೂ ವಿಧಿವತ್ತಾಗಿ ಮುದ್ರಾಧಾರಣ ನಡೆಯದ ಪ್ರಯುಕ್ತ ಅವನ ಪಾಲಿಗೆ ಮುದ್ರಾಧಾರಣೆ ನಡೆಯ ದಂತೆಯೇ.

ಈ ಹಿನ್ನೆಲೆಯಲ್ಲಿ 'ಸರ್ವಕರ್ಮಸು ಗರ್ಹಿತಃ' 'ಶೂದ್ರವದ್ ಬಹಿಷ್ಕಾರ್ಯಃ' –ಇತ್ಯಾದಿ ತಪ್ತಮುದ್ರಾಧಾರಣೆಯನ್ನು ಟೀಕಿಸುವಂತೆ ಕಾಣುವ ಮಾತುಗಳು ಹೊರಟಿವೆಯಷ್ಟೇ. ಅಂದರೆ ತಪ್ತಮುದ್ರಾಧಾರಣೆಯನ್ನು ನಿಷೇಧಿಸುವ ಆ ಮಾತುಗಳಿಗೆ ಅಶಾಸ್ತ್ರೀಯವಾಗಿ ತಪ್ತಮುದ್ರಾಧಾರಣೆ ಮಾಡಿಸಿಕೊಳ್ಳಬಾರದೆಂಬುದರಲ್ಲಷ್ಟೇ ತಾತ್ಪರ್ಯ.

'ನಾಂಕನಾಯ ದಹೇದ್ದೇಹಂ ದಹೇಚ್ಚೇತ್ ಕಾಮಕಾರತಃ.......' ಎಂಬ ಬೋಧಾಯನ ಸ್ಮೃತಿಯಲ್ಲಂತೂ 'ಕಾಮಕಾರತಃ' ಎಂಬ ಶಬ್ದದ ಪ್ರಯೋಗವೇ ಇರುವುದರಿಂದ ಶಾಸ್ತ್ರಕ್ಕನುಗುಣವಾಗಿ ಮುದ್ರಾಧಾರಣೆ ನಡೆಯಬೇಕೇ ಹೊರತು ಸ್ವೇಚ್ಛಾನುಸಾರವಾಗಿ ಅಲ್ಲ ಎಂಬ ತಾತ್ಪರ್ಯ ಸ್ಪಷ್ಟ.

'ಅಂಗೇಷು ನಾಂಕಯೇದ್ ವಿಪ್ರೋ ದೇವತಾಯುಧಲಾಂಛನೈಃ' ಎಂಬ ಶಾತಾತಪ ಸ್ಮೃತಿಯ ಆಂತರ್ಯ ಶ್ರೀವಿಷ್ಣುವನ್ನು ಬಿಟ್ಟು ಇತರ ದೇವತೆಗಳ ಆಯುಧಗಳ ಚಿಹ್ನೆಗಳಿಂದ ಮುದ್ರಾಧಾರಣೆ ನಡೆಸಬಾರದು ಎಂಬುದಷ್ಟೇ.

'ರಾಗಸಂಚ್ಛಿನ್ನಗಾತ್ರಾಣಾಂ ನ ಸ್ಯಾತ್ ಪಾರತ್ರಿಕಂ ಶುಭಮ್' ಎಂಬ ಹಾರೀತ ಸ್ಮೃತಿಯಲ್ಲಿ ದೇಹದ ಛೇದವನ್ನು ಅಂದರೆ ತುಂಡರಿಸುವಿಕೆಯನ್ನು ನಿಷೇಧಿಸಲಾಗಿದೆ. ತಪ್ತಮುದ್ರಾಧಾರಣೆದಿಂದ ದೇಹದ ಛೇದ ಆಗುವುದಿಲ್ಲ ತಾನೇ!

'ರಾಗಾತ್ ಸಂದಗ್ಧಗಾತ್ರಾಣಾಂ ನ ಸ್ಯಾತ್ ಪಾರತ್ರಿಕಂ ಶುಭಮ್' –ಎಂಬುದೇ ಹಾರೀತಸ್ಮೃತಿಯ ಪಾಠ ಎಂದಿರುವಲ್ಲಿ ರಾಗದಿಂದ, ಏನೋ ಲೌಕಿಕ ಬಯಕೆಯಿಂದ ತಪ್ತಮುದ್ರಾಧಾರಣೆಯನ್ನಷ್ಟೇ ಅಲ್ಲಿ ನಿಷೇಧಿಸಲಾಗಿದೆ ಎಂದು ಇಟ್ಟುಕೊಳ್ಳಬೇಕು.

ಹೀಗೆ ತಪ್ತಮುದ್ರಾಧಾರಣೆಯ ನಿಷೇಧ ಸ್ಮೃತಿಗಳಲ್ಲೋ ಪುರಾಣಗಳಲ್ಲೋ ಕಂಡು ಬಂದಲ್ಲಿ ಏನೋ ಬೇರೆ ಅಭಿಪ್ರಾಯದಿಂದ ಆ ನಿಷೇಧ ನಡೆದಿದೆಯೇ ಹೊರತು ತಪ್ತಮುದ್ರಾಧಾರಣವನ್ನು ಅಲ್ಲಗಳೆಯುವ ಆಂತರ್ಯ ಶಾಸ್ತ್ರಕ್ಕೆ ಇಲ್ಲ ಎಂದು ದೃಢಪಡಿಸಿಕೊಳ್ಳಬೇಕು.

ಆಭರಣರೂಪದಿಂದ ಧಾರಣೆ ಅಲ್ಲ:

ಜಾತಸ್ಯ ತು ಕುಮಾರಸ್ಯ ಧಾರಯೇತ್ ಪಂಚಮೇ ದಿನೇ ।
ಚಕ್ರಂ ಕೃತ್ವಾ ಸುವರ್ಣೇನ ಷಡರಂ ಮಂತ್ರಸಂಯುತಮ್ ॥

ಈ ಬೃಹಸ್ಪತಿಸ್ಮೃತಿಯಲ್ಲಿ ಹುಟ್ಟಿದ ಮಗುವಿಗೆ ಐದನೆಯ ದಿನದಂದು ಆರು ಸುತ್ತುಗಳುಳ್ಳ ಚಿನ್ನದ, ಮಂತ್ರಸಹಿತವಾದ ಚಕ್ರವನ್ನು ಮಾಡಿಸಿ ಧಾರಣೆ ಮಾಡಿಸಬೇಕೆಂದು ತಿಳಿಸಲಾಗಿದೆ.

ಕಾರಯಿತ್ವಾ ಸುವರ್ಣೇನ ಪಂಚಾಯುಧಗಣಂ ಹರೇಃ ।
ಬಧ್ನೀಯಾತ್ ಕರ್ಣದೇಶೇಷು ಬಾಲಾನಾಂ ಸೂತಿಕಾಗೃಹೇ ॥

ಮುಕ್ತಾಮಣಿಸುವರ್ಣಾದ್ಯೈಃ ಕೃತ್ವಾ ಚಕ್ರಾದಿಭೂಷಣಮ್ ।
ಯಥಾರ್ಹಂ ಬಿಭೃಯುಃ ಸರ್ವೇ ಪುಮಾಂಸಃ ಸ್ತ್ರೀಜನೋಽಪಿ ವಾ ॥

ಈ ಶಾಂಡಿಲ್ಯಸ್ಮೃತಿಯಲ್ಲಿ ಶ್ರೀಹರಿಯ ಚಕ್ರಾದಿ ಐದು ಆಯುಧಗಳನ್ನು ಚಿನ್ನದಿಂದ ಮಾಡಿಸಿ ಮಕ್ಕಳ ಕಿವಿಯ ಹತ್ತಿರ ಕಟ್ಟಬೇಕು. ಹೆರಿಗೆಯ ಮನೆಯಲ್ಲಿ ಇವುಗಳ ಬಂಧನ ನಡೆಯಬೇಕು. ಮುತ್ತು, ಮಣಿ, ಚಿನ್ನ ಮುಂತಾದವುಗಳಿಂದ ಚಕ್ರ ಮುಂತಾದ ಭೂಷಣ ಗಳನ್ನು ಮಾಡಿ ಪುರುಷರೂ, ಸ್ತ್ರೀಯರೂ ಧರಿಸಿಕೊಳ್ಳಬೇಕು ಎಂದು ತಿಳಿಸಲಾಗಿದೆ.

ಸ್ಮೃತಿಪುರಾಣಾದಿಗಳಲ್ಲಿ ಬರುವ ಇಂತಹ ಮಾತುಗಳಿಗೆ ಅನುಗುಣವಾಗಿ 'ಗೋವಿಂದುರ್ದ್ರಪ್ಸ ಆಯುಧಾನಿ ಬಿಭ್ರತ್......' ಇತ್ಯಾದಿ ಪ್ರಮಾಣಗಳಲ್ಲೂ ಭಗವಂತನ ಚಕ್ರಾದಿ ಆಯುಧಗಳನ್ನು ಚಿನ್ನದಿಂದ ಆಭರಣರೂಪದಿಂದ ಮಾಡಿಸಿ ಧರಿಸಿಕೊಳ್ಳಲು ವಿಧಿಸಿರುವುದೇ ವಿನಾ ತಪ್ತಮುದ್ರಾಧಾರಣೆ ನಡೆಸಲು ಹೇಳಿರುವುದಲ್ಲ.

ಈ ಸಂದೇಹವನ್ನು ಹೀಗೆ ಪರಿಹರಿಸಲಾಗುವುದು– 'ಉರುಕ್ರಮಸ್ಯ ಚಿಹ್ನೈರಂಕಿತಾಃ' 'ಚಕ್ರಂ ಬಿಭರ್ತಿ ವಪುಷಾಭಿತಪ್ತಮ್' –ಮುಂತಾದ ಪ್ರಮಾಣಗಳಲ್ಲಿ ತಪ್ತಮುದ್ರಾ ಧಾರಣೆಯೇ ವಿಹಿತವಾಗಿದೆ ಎಂಬುದು ಸ್ಪಷ್ಟ. ಹೀಗಿರುವಾಗ ಇದೇ ಪ್ರಮಾಣದಲ್ಲಿ ಪಠಿತಗಳಾದ ಇತರ ಪ್ರಮಾಣಗಳಲ್ಲೂ ಚಕ್ರಾದಿಚಿಹ್ನೆಗಳ ಮುದ್ರಾಧಾರಣೆ ಹೇಳಲಾ ಗಿದೆಯೇ ಹೊರತು ಆಭರಣರೂಪದಿಂದ ಧಾರಣೆ ಅಲ್ಲ –ಎಂದು ನಿರ್ಧರಿಸಿ ಕೊಳ್ಳಬಹುದು. 'ಜಾತಸ್ಯ ತು ಕುಮಾರಸ್ಯ.........' ಇತ್ಯಾದಿ ಪ್ರಮಾಣಗಳಲ್ಲಿ ಗ್ರಹಾದಿಗಳ ಪೀಡೆ ಪರಿಹಾರಕ್ಕಾಗಿ ಬೇರೆ ಬಗೆಯ ವಿಧಾನವನ್ನು ತಿಳಿಸಿರುವುದಷ್ಟೇ.

ಚಕ್ರಾದಿಗಳ ಧಾರಣೆ ಎಲ್ಲಿ?

'ಅತಪ್ತತನೂಃ.......' 'ನೇಮಿನಾ ತಪ್ತತನುಃ' 'ಚಕ್ರಂ ಬಿಭರ್ತಿ ವಪುಷಾಭಿತಪ್ತಂ........' –ಮುಂತಾದ ಪ್ರಮಾಣಗಳಲ್ಲಿ ದೇಹದ ಯಾವುದೇ ನಿರ್ದಿಷ್ಟ ಅವಯವವನ್ನು ಉಲ್ಲೇಖಿಸದೆ ದೇಹದಲ್ಲಿ ಮುದ್ರಾಧಾರಣೆ ನಡೆಸಬೇಕೆಂದಷ್ಟೇ ಹೇಳಲಾಗಿದೆ.

ಮತ್ತೆ ಕೆಲವು ಪ್ರಮಾಣಗಳಲ್ಲಿ 'ಮಧ್ಯೇ ಬಾಹುಂ.........' ಎಂಬುದಾಗಿ ಬಾಹುಮಧ್ಯ ದಲ್ಲೂ, 'ದಕ್ಷಿಣೇ ತು ಭುಜೇ ವಿಪ್ರಃ.........' ಎಂಬ ಪ್ರಮಾಣದಲ್ಲಿ ಭುಜದಲ್ಲೂ, 'ಮೂಲೇ ಬಾಹ್ವೋಃ..........' ಎಂಬ ಪ್ರಮಾಣದಲ್ಲಿ ಬಾಹುಮೂಲದಲ್ಲೂ ಮುದ್ರಾಧಾರಣೆ ನಡೆಸಬೇಕೆಂದು ತಿಳಿಸಲಾಗಿದೆ.

ಹೀಗಿರುವಾಗ ಚಕ್ರಾದಿ ಮುದ್ರೆಗಳ ಧಾರಣೆ ಎಲ್ಲಿ? ಎಂಬ ಸಂಶಯ ಸಹಜ.

'ಸಾಮಾನ್ಯವಿಶೇಷನ್ಯಾಯ'ವನ್ನು ಅವಲಂಬಿಸಿ ಈ ಸಂದೇಹವನ್ನು ಪರಿಹರಿಸಿಕೊಳ್ಳ ಬಹುದಾಗಿದೆ.

'ದೇಹದಲ್ಲಿ ಮುದ್ರೆ ಧರಿಸಬೇಕು' 'ಬಾಹುಗಳಲ್ಲಿ ಮುದ್ರೆ ಧರಿಸಬೇಕು' –ಎಂದೆಲ್ಲ ಮಾತುಗಳು ಸಾಮಾನ್ಯವಾಗಿ ಮುದ್ರಾಧಾರಣದ ಸ್ಥಳವನ್ನು ಸೂಚಿಸುತ್ತಿರುವವು. 'ಬಾಹುಗಳ ಬುಡದಲ್ಲಿ ಮುದ್ರಾಧಾರಣೆ ನಡೆಯಬೇಕು' –ಎಂಬುದು ವಿಶೇಷವಚನ. ಇದಕ್ಕನುಗುಣವಾಗಿ ಬಾಹುಗಳ ಬುಡದಲ್ಲಿ ಮುದ್ರಾಧಾರಣ ನಡೆಸಲಾಯಿತೆಂದರೆ ದೇಹದಲ್ಲಿ ಮುದ್ರಾಧಾರಣ ನಡೆಸಬೇಕೆಂಬ ಮಾತನ್ನೂ ಪಾಲಿಸಿದಂತಾಗುವುದು.

ಆದ್ದರಿಂದ ವಿಶೇಷವಚನಕ್ಕನುಗುಣವಾಗಿ ಚಕ್ರಶಂಖಮುದ್ರೆಗಳನ್ನು ಬಾಹುಗಳ ಬುಡದಲ್ಲಿ ಧರಿಸಬೇಕು.

ಯಾವ ಯಾವ ಆಯುಧಗಳ ಧಾರಣೆ?

'ಚರಣಂ ಪವಿತ್ರಂ......' 'ಪವಿತ್ರಂ ತೇ ವಿತತಂ..........' 'ಚಕ್ರಂ ಬಿಭರ್ತಿ..........' 'ಅದಧತ್ ಸುದರ್ಶನಮ್' '.........ಶೃತಚಕ್ರಧಾರೀ' –ಇತ್ಯಾದಿ ಪ್ರಮಾಣಗಳಲ್ಲಿ ಚಕ್ರಧಾರಣೆ ಮಾತ್ರ ಕಂಡುಬರುವುದು.

'ಅಬ್ಜಚಕ್ರೇ ಪವಿತ್ರೇ..........' 'ಬಿಭ್ರಯಾದ್ವ್ಯ ಸುದರ್ಶನಂ ಸವ್ಯೇ ತು ಶಂಖಮ್' –ಮುಂತಾದ ಪ್ರಮಾಣಗಳಲ್ಲಿ ಚಕ್ರ ಮತ್ತು ಶಂಖ –ಇವೆರಡರ ಮುದ್ರೆ ಧರಿಸಬೇಕೆಂದು ಕಾಣುವುದು.

'ಉರುಕ್ರಮಸ್ಯ ಚಿಹ್ನೈಃ.........' 'ಆಯುಧಾನಿ ಬಿಭ್ರತ್........' ಇತ್ಯಾದಿ ಪ್ರಮಾಣಗಳಲ್ಲಿ ಶಂಖಚಕ್ರ ಮುಂತಾದ ಅನೇಕ ಆಯುಧಗಳ ಧಾರಣೆ ಮಾಡಬೇಕೆಂದು ಕಂಡು ಬರುವುದು.

ಆದರೆ ಯಾರೂ ತಪ್ತಗಳಾದ ಪಂಚಾಯುಧಗಳ ಮುದ್ರೆಗಳ ಧಾರಣೆ ಮಾಡಿಸಿ ಕೊಳ್ಳುವುದಿಲ್ಲ. ಹೀಗಿರುವಾಗ ಎಷ್ಟು ಅವಯವಗಳ ಮುದ್ರೆಗಳನ್ನು ಧರಿಸಿಕೊಳ್ಳಬೇಕು?

ಈ ಸಂದೇಹಕ್ಕೆ ಕೆಲವರ ಸಮಾಧನ ಹೀಗೆ–

ಎಲ್ಲರೂ, ಯಾವಾಗಲೂ ಭಗವಂತನ ಐದೂ ಆಯುಧಗಳ ಮುದ್ರೆಯನ್ನೂ ಧರಿಸಬೇಕು.

ಲಲಾಟೇ ತು ಗದಾ ಧಾರ್ಯಾ ಮೂರ್ಧ್ನಿ ಚಾಪಶರೌ ತಥಾ ।
ಹೃನ್ಮಧ್ಯೇ ನಂದಕಂ ಚೈವ ಶಂಖಚಕ್ರೇ ಭುಜದ್ವಯೇ ॥

ಉಪವಿತಾದಿವದ್ಧಾರ್ಯಾಃ ಶಂಖಚಕ್ರಗದಾದಯಃ ।
ಪಂಚಾಯುಧಾನಿ ಧಾರ್ಯಾಣಿ ಭಕ್ತಿಶ್ರದ್ಧೋಪಬೃಂಹಿತೈಃ ॥

ಹಣೆಯಲ್ಲಿ ಗದೆಯ, ನೆತ್ತಿಯಲ್ಲಿ ಬಿಲ್ಲುಬಾಣಗಳ, ಹೃದಯಮಧ್ಯದಲ್ಲಿ ನಂದಕ ಖಡ್ಗದ, ಎರಡು ಭುಜಗಳಲ್ಲಿ ಶಂಖಚಕ್ರಗಳ ಮುದ್ರೆಗಳನ್ನು ಯಜ್ಞೋಪವೀತವನ್ನು ಹೇಗೆ ಕಡ್ಡಾಯವಾಗಿ ಧರಿಸಲಾಗುವುದೋ ಹಾಗೆ ಕಡ್ಡಾಯವಾಗಿ ಧರಿಸಬೇಕು. ಭಕ್ತಿಶ್ರದ್ಧೆಗಳಿಂದ ಕೂಡಿ ಚಕ್ರಶಂಖಾದಿ ಐದೂ ಆಯುಧಗಳ ಮುದ್ರೆಗಳನ್ನೂ ಧರಿಸಿಕೊಳ್ಳಲೇಬೇಕು.

ಈ ಮಾತಿಗನುಗುಣವಾಗಿ ಭಗವಂತನ ಐದು ಆಯುಧಗಳ ಮುದ್ರೆಗಳನ್ನೂ ಧರಿಸಿಕೊಳ್ಳಬೇಕು. 'ಚಕ್ರವನ್ನೂ ಧರಿಸಬೇಕು' 'ಶಂಖಚಕ್ರಗಳನ್ನೂ ಧರಿಸಬೇಕು' –ಮುಂತಾದ ಮಾತುಗಳು ಪಂಚಾಯುಧಮುದ್ರಾಧಾರಣವಿಧಿಯ ಏಕದೇಶವಾಗಿಯಷ್ಟೇ ಹೊರಟವು ಎಂದು ಇಟ್ಟುಕೊಳ್ಳಬೇಕು.

ಮತ್ತೆ ಕೆಲವರ ಆಶಯ ಹೀಗಿದೆ– 'ಪ್ರತೇ ವಿಷ್ಣೋ ಅಬ್ಜಚಕ್ರೇ ಪವಿತ್ರೇ........' ಇತ್ಯಾದಿಯಾಗಿ ಶಂಖಚಕ್ರಧಾರಣೆಯ ವಿಧಾನ ಮಾಡಿ, '.......ಅನ್ಯೇ ಪುರಾಣಾಃ

ಅಂಗಾನ್ಯಂಗೇ ತಾವಕಾನ್ಯರ್ಪಯಂತಿ' –ಕೆಲವು ವಿಶಿಷ್ಟಾಧಿಕಾರಿಗಳು ನಿನ್ನ ಐದು ಆಯುಧಗಳ ಮುದ್ರೆಗಳನ್ನೂ ಧರಿಸುವರೆಂದು ವಿಶಿಷ್ಟಾಧಿಕಾರಿಗಳಿಗಷ್ಟೇ ಪಂಚಾಯುಧ ಮುದ್ರಾಧಾರಣೆ ವಿಧಿಸಲ್ಪಟ್ಟಿದೆ.

ಚಕ್ರಂ ವಾ ಶಂಖಚಕ್ರೇ ವಾ ತಥಾ ಪಂಚಾಯುಧಾನಿ ವಾ ।
ಧಾರಯಿತ್ವೈವ ವಿಧಿವದ್ ಬ್ರಹ್ಮಕರ್ಮ ಸಮಾರಭೇತ್ ॥

ಎಂಬ ಪ್ರಮಾಣದಲ್ಲಿ ಒಂದೋ ಚಕ್ರವನ್ನು, ಇಲ್ಲವೇ ಶಂಖಚಕ್ರಗಳನ್ನು ಅಥವಾ ಶ್ರೀವಿಷ್ಣುವಿನ ಐದೂ ಆಯುಧಗಳನ್ನು ವಿಧಿವತ್ತಾಗಿ ಧರಿಸಿಕೊಂಡೇ ವೇದವಿಹಿತಕರ್ಮ ಮಾಡಬೇಕೆಂದು ವಿಕಲ್ಪವನ್ನು ತಿಳಿಸಿರುವುದು ಈ ಆಶಯದಲ್ಲಿಯೇ.

ಅದರಂತೆಯೇ–

ಚಕ್ರಾಂಕಿತಧರಾಃ ಕೇಚಿತ್ ಕೇಚಿಚ್ಛಂಖಧರಾಸ್ತಥಾ ।
ಶಂಖಚಕ್ರಧರಾಃ ಕೇಚಿತ್.........॥

ಎಂಬ ಪ್ರಮಾಣದಲ್ಲಿ ಕೆಲವರು ಚಕ್ರವನ್ನು ಧರಿಸಿದ್ದರೆ, ಮತ್ತೆ ಕೆಲವರು ಶಂಖವನ್ನು ಧರಿಸಿರುವರು. ಇನ್ನು ಕೆಲವರು ಶಂಖಚಕ್ರಗಳೆರಡನ್ನೂ ಧರಿಸಿರುವರು. ಹೀಗೆ ಇರುವುದರಿಂದ ಶಕ್ತರು ಐದು ಆಯುಧಗಳನ್ನೂ, ಅಶಕ್ತರು ಒಂದೋ ಎರಡೋ ಆಯುಧಗಳನ್ನು ಮುದ್ರೆಯಾಗಿ ಧರಿಸಿಕೊಳ್ಳಬೇಕೆಂದು ವ್ಯವಸ್ಥೆ ಮಾಡಬೇಕು.

ತಪ್ತಮುದ್ರಾಧಾರಣೆ ಯಾವ ಬಗೆಯ ಕರ್ಮ?

ತಪ್ತಮುದ್ರಾಧಾರಣೆ ನಿತ್ಯಕರ್ಮವೋ? ನೈಮಿತ್ತಿಕಕರ್ಮವೋ? ಕಾಮ್ಯಕರ್ಮವೋ? ಅಥವಾ ಪ್ರಾಯಶ್ಚಿತ್ತರೂಪಕರ್ಮವೋ?

'ದಿವಾ ನಕ್ತಂ ಬಿಭೃಯುಸ್ತಜ್ಜನಾಸಃ'
'ಊರ್ಧ್ವಪುಂಡ್ರಂ ತಥಾ ಚಕ್ರಂ ನಿತ್ಯಂ ಧಾರಯತೇ ದ್ವಿಜಃ'

'ಚಕ್ರಾಂಕಿತಸ್ಸದಾ ತಿಷ್ಠೇತ್ ಚಿಹ್ನಂ ಕೃಷ್ಣಾಯುಧಾದಿನಾ ।
ನಿತ್ಯಂ ಕುರ್ವನ್ನತಂದ್ರಿತಃ'

ಇತ್ಯಾದಿ ಶ್ರುತಿ, ಸ್ಮೃತಿ, ಪುರಾಣಗಳಲ್ಲಿ ತಪ್ತಮುದ್ರಾಧಾರಣೆ ನಿತ್ಯಕರ್ಮವಾಗಿ ವಿಧಿಸಲ್ಪಟ್ಟಿದೆ.

'ಸುದರ್ಶನಂ ಧಾರಯಿತ್ವಾ ವಹ್ನಿತಪ್ತಂ ದ್ವಿಜೋತ್ತಮಃ ।
ಉಪನೀಯ ವಿಧಾನೇನ ಪಶ್ಚಾತ್ ಕರ್ಮಸು ಯೋಜಯೇತ್ ॥

ಮುಂತಾದ ವಚನಗಳಲ್ಲಿ ಉಪನಯನ ನಡೆದಾಕ್ಷಣ ಮುದ್ರಾಧಾರಣೆ ವಿಧಿಸಲ್ಪಟ್ಟಿದೆ.

ಉಪನೀತಾದಿವದ್ಧಾರ್ಯಾಃ ಶಂಖಚಕ್ರಗದಾದಯಃ ।
ಬ್ರಾಹ್ಮಣಸ್ಯ ವಿಶೇಷೇಣ ವೈಷ್ಣವಸ್ಯ ವಿಶೇಷತಃ ॥

ಮುಂತಾದ ವಚನಗಳಲ್ಲಿ ಉಪನಯನಾದ್ಯಂಗವಾಗಿಯೂ, ಭಗವನ್ಮಂತ್ರೋಪ-ದೇಶಾಂಗವಾಗಿಯೂ ಮುದ್ರಾಧಾರಣೆ ವಿಧಿಸಲ್ಪಟ್ಟಿದೆ.

ಬ್ರಾಹ್ಮಣರಾದವರೆಲ್ಲ ಮುದ್ರಾಧಾರಣೆ ಮಾಡಿಸಿಕೊಳ್ಳಲೇಬೇಕಾದರೂ ವೈಷ್ಣವ ನಾದವನು ಧಾರಣೆ ಮಾಡಿಸಿಕೊಳ್ಳದಿದ್ದರೆ ಅಧಿಕ ಪ್ರತ್ಯವಾಯ ಸಂಭವಿಸುವುದೆಂಬ ಆಶಯದಿಂದಷ್ಟೇ 'ವೈಷ್ಣವಸ್ಯ ವಿಶೇಷತಃ' ಎಂಬ ಮಾತು ಹೊರಟಿದೆ.

ಅಂತೂ ಈ ಪ್ರಮಾಣಗಳಲ್ಲಿ ಮುದ್ರಾಧಾರಣೆ ನೈಮಿತ್ತಿಕವಾಗಿ ವಿಹಿತವಾಗಿದೆ.

ಒಂದೇ ಕರ್ಮ ವಿನಿಯೋಗಭೇದದಿಂದ ನಿತ್ಯವೂ ಆಗಬಹುದು; ನೈಮಿತ್ತಿಕವೂ ಆಗಬಹುದು.

'ಶೃತಾಸ ಇದ್ವಹಂತಸ್ತತ್ಸಮಾಶತ' 'ತದ್ವಿಷ್ಣೋಃ ಪರಮಂ ಪದಮ್' 'ನೇಮಿನಾ ತಪ್ತತನೂಃ ಬ್ರಹ್ಮಣಃ ಸಾಯುಜ್ಯಂ ಸಲೋಕತಾಮಾಪ್ನೋತಿ.....' ಇತ್ಯಾದಿ ಶ್ರುತಿಗಳಲ್ಲಿ ತಪ್ತಮುದ್ರಾಧಾರಣವು ಮೋಕ್ಷಫಲಸಾಧನವಾಗಿ ಪ್ರತಿಪಾದಿತವಾಗಿದ್ದು ಅದು ಕಾಮ್ಯವೂ ಆಗಬಲ್ಲುದು.

ಹಾಗೆಯೇ '.......ಅತಿಪಾಪ್ಮಾನಮರಾತಿಂ ತರೇಮ' 'ಸ ಏತಿ ನಾಕಂ ದುರಿತಾ ವಿಧೂಯ' –ಮುಂತಾದ ಶ್ರುತಿಗಳಲ್ಲಿ ತಪ್ತಮುದ್ರಾಧಾರಣವು ಪಾಪನಿವರ್ತಕವಾಗಿ ಪ್ರಾಯಶ್ಚಿತ್ತ ಎಂದೂ ಪರಿಗಣಿತವಾಗಿದೆ.

ಆದುದರಿಂದ ತಪ್ತಮುದ್ರಾಧಾರಣವು ನಿತ್ಯಕರ್ಮವೂ, ನೈಮಿತ್ತಿಕಕರ್ಮವೂ, ಕಾಮ್ಯಕರ್ಮವು, ಪ್ರಾಯಶ್ಚಿತ್ತಕರ್ಮವೂ ಆಗಿದೆ. ಇದೂ ಒಂದು ತಪ್ತಮುದ್ರಾಧಾರಣೆಯ ವೈಶಿಷ್ಟ್ಯ.

ತಪ್ತಮುದ್ರಾಧಾರಣೆ ಮೋಕ್ಷಕ್ಕೆ ಹೇಗೆ ಸಾಧನ?

'ಚಕ್ರಂ ಬಿಭರ್ತಿ ವಪುಷಾಽಭಿತಪ್ತಂ........' 'ಸ ಏತಿ ನಾಕಂ ದುರಿತಂ ವಿಧೂಯ........' –ಮುಂತಾದ ಪ್ರಮಾಣಗಳಲ್ಲಿ ತಪ್ತಮುದ್ರಾಧಾರಣೆ ಮೋಕ್ಷಕ್ಕೆ ಸಾಧನವಾಗಿ ಪ್ರತಿಪಾದಿತವಾಗಿದೆ.

ಬ್ರಹ್ಮಜ್ಞಾನೈಕಸಾಧ್ಯವಾದ ಮೋಕ್ಷ ತಪ್ತಮುದ್ರಾಧಾರಣದಿಂದ ಸಾಧ್ಯವಾಗುವುದಾದರೂ ಹೇಗೆ?


'ವೈಷ್ಣವತ್ವಸ್ಯ ಸಿದ್ಧ್ಯರ್ಥಂ ಜ್ಞಾನಸಿದ್ಧ್ಯೈ ವಿಶೇಷತಃ ।
ಪ್ರತಪೇಚ್ಛಂಖಚಕ್ರಾಭ್ಯಾಂ ಹುತ್ವಾ ಹೋಮಂ ವಿಶೇಷತಃ ॥

ಮುಂತಾದ ಪ್ರಮಾಣಗಳಲ್ಲಿ ತಪ್ತಮುದ್ರಾಧಾರಣೆ ಬ್ರಹ್ಮಜ್ಞಾನಾಂಗವಾಗಿ ತಿಳಿಸಲ್ಪಟ್ಟಿದೆ. ಆದುದರಿಂದ ಅಂಗಿಯಾದ ಬ್ರಹ್ಮಜ್ಞಾನದ ಮೋಕ್ಷರೂಪವಾದ ಫಲವನ್ನು ಅಂಗವಾದ ತಪ್ತಮುದ್ರಾಧಾರಣೆಗೆ ಔಪಚಾರಿಕವಾಗಿ ಹೇಳಬಹುದಾಗಿದೆ.

ಹೀಗೆ ತಪ್ತಮುದ್ರಾಧಾರಣೆ ಬ್ರಹ್ಮಜ್ಞಾನಕ್ಕೆ ಸಾಧನವಾಗಿ ಪರಂಪರಯಾ ಮೋಕ್ಷಕ್ಕೆ ಸಾಧನ ಎನಿಸುವುದು.

* * *

‘ಯುಕ್ತಿಮಲ್ಲಿಕಾ’ದಲ್ಲಿ ತಪ್ತಮುದ್ರಾಧಾರಣೆ



ಹಯವದನಾನುಗ್ರಹೀತ
ಶ್ರೀ ವಾದಿರಾಜ

ಶ್ರೀವಾದಿರಾಜಸ್ವಾಮಿಗಳ ಯುಕ್ತಿಮಲ್ಲಿಕಾದ ‘ಫಲಸೌರಭ’ದ [೫೭೮ರಿಂದ ೬೫೦ನೆಯ ಶ್ಲೋಕದ ವರೆಗೆ] ಎಪ್ಪತ್ತಕ್ಕಿಂತಲೂ ಅಧಿಕ ಶ್ಲೋಕಗಳು ತಪ್ತ-ಮುದ್ರಾಧಾರಣೆಯ ಬಗ್ಗೆ ಬೆಳಕು ಚೆಲ್ಲುತ್ತಿವೆ. ವಿಶೇಷವಾಗಿ ತಪ್ತಮುದ್ರಾಧಾರಣೆಯಲ್ಲಿ ವಿನಿಯೋಗಿಸಬಹುದಾದ ಪವಮಾನಮಂಡಲದ ಖಿಲಭಾಗದ ಎರಡು ಮಂತ್ರಗಳನ್ನು ಅರ್ಥಸಹಿತವಾಗಿ ವಿವರಿಸಲಾಗಿದೆ. ಸುಮಾರು ೪೩ ಶ್ಲೋಕಗಳು [೫೭೮ರಿಂದ ೬೨೬ರ ವರೆಗೆ ಮಧ್ಯದಲ್ಲಿ ೬೦೧ರಿಂದ ೬೦೫ರವರೆಗಿನ ಶ್ಲೋಕಗಳನ್ನು ಹೊರತುಪಡಿಸಿ] ಆ ಪವಮಾನ-ಮಂಡಲದ ಮಂತ್ರಗಳಲ್ಲಿ ತಪ್ತಮುದ್ರಾಧಾರಣೆ ಹೇಗೆ ಪ್ರಸ್ತುತವಾಗಿದೆ ಎಂದು ಸಮರ್ಥಿಸುವುದಕ್ಕಾಗಿಯೇ ಮೀಸಲಾಗಿವೆ. ‘ಯೇನ ದೇವಾಃ ಪವಿತ್ರೇಣ....’ ‘ಪ್ರಾಜಾಪತ್ಯಂ ಪವಿತ್ರಂ........’ ಎಂಬ ಪವಮಾನ ಮಂಡಲದ ಖಿಲಭಾಗದ ಎರಡು ಮಂತ್ರಗಳನ್ನೂ ‘ಯತ್ತೇ ಪವಿತ್ರಮರ್ಚಿಷ್ಯಗ್ನೇ....’ ಎಂಬ ಪವಮಾನದ ಮಂತ್ರವನ್ನೂ ಜೊತೆಗೆ ಪ್ರಾಸಂಗಿಕವಾಗಿ ‘ಪ್ರತಪ್ತಂ ಬಿಭ್ರಯಾಚ್ಚಕ್ರಂ.......’ ಎಂಬ ಪದ್ಮ-ಪುರಾಣದ ಮಾತನ್ನೂ ‘ಯಸ್ತು ನಾರಾಯಣಂ ದೇವಂ.......’ ಎಂಬ ವಸಿಷ್ಠಸ್ಮೃತಿ-ವಾಕ್ಯವನ್ನೂ, ‘ಪ್ರಾಜಾಪತ್ಯಂ ಶತೋದ್ಯಾಮಂ........’ ಎಂಬ ಶ್ರುತಿವಾಕ್ಯವನ್ನೂ, ಪೂಯ-ಮಾನಸೂಕ್ತದ ‘ಚಮೂಚ್ಛ್ಯೇನಃ.........’ ಎಂಬ ಶ್ರುತಿವಾಕ್ಯವನ್ನೂ, ಸೃಗಾಲೋಪನಿಷತ್ತಿನ ‘ಧೃತೋರ್ಧ್ವಪುಂಡ್ರಃ....’ ಎಂಬ ಮಾತನ್ನೂ, ಕಾಣ್ವರ ಶತಪಥಬ್ರಾಹ್ಮಣದ ‘ದ್ವಿರೇಖ-ಮೂರ್ಧ್ವಂ ಪುಂಡ್ರಂ.........’ ಎಂಬ ಮಾತನ್ನೂ ಉದಾಹರಿಸಲಾಗಿದೆ. ಸ್ಪಷ್ಟಾರ್ಥವುಳ್ಳ ಪುರಾಣದ ಮಾತುಗಳನ್ನು ಹಾಗೆಯೇ ಉದಾಹರಿಸಿದಿದ್ದರೆ, ಶ್ರುತಿವಚನಗಳನ್ನು ಅರ್ಥಾನುವಾದದ ರೂಪದಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಮಾತುಗಳಲ್ಲಿ ತಪ್ತಮುದ್ರಾ-ಧಾರಣೆಗೆ ಸಂಬಂಧಿಸಿದಂತೆ ಈ ಕೆಳಗಿನ ವಿಶಿಷ್ಟಪ್ರಮೇಯಗಳ ಪ್ರತಿಪಾದನೆ ನಡೆದಿದೆ-

೧. ದೇವತೆಗಳೂ ಕೂಡ ತಪ್ತಮುದ್ರಾಧಾರಣೆ ಮಾಡಿ ಆ ಮೂಲಕ ತಮ್ಮ ದೇಹ ಹಾಗೂ ಮನಸ್ಸು ಪವಿತ್ರ ಆಗುವಂತೆ ಮಾಡಿಕೊಳ್ಳುವರು.175

೨. ದೇವತೆಗಳು ಆಷಾಢ ಏಕಾದಶಿ ಮುಂತಾದ ವಿಶೇಷದಿನಗಳಲ್ಲಿ ತಪ್ತಮುದ್ರಾ ಧಾರಣ ಮಾಡಿಕೊಳ್ಳುವರಾದರೆ ಪ್ರತಿನಿತ್ಯ ಗೋಪೀಚಂದನದಿಂದಲೇ ಚಕ್ರದ ಚಿಹ್ನೆಯನ್ನು ಧರಿಸಿಕೊಳ್ಳುವರು.176

---

175. ದೇವಾಶ್ಚ ಯೇನ ಚಕ್ರೇಣ ಲಾಂಛಿತೇನ ಭುಜೇ ಸದಾ ।
ಸ್ವಸ್ವದೇಹಂ ಮನಶ್ಚಾಪಿ ಪುನತೇ ವೈಷ್ಣವೋತ್ತಮಾಃ ॥ —ಫಲಸೌರಭ, ೫೭೯

176. ದೇವಾಸ್ತು ತಪ್ತಚಕ್ರಾಂಕಯೋಗ್ಯೇ ಶುಭದಿನೇ ಸದಾ ।
ತಪ್ತೇನ ತೇನ ಪುನತೇ ಮೃದಾ ತಲ್ಲಾಂಛನೈಃ ಸದಾ ॥ —ಫಲಸೌರಭ, ೫೮೩

'ಪಾವಮಾನೀಃ ಪುನಂತು ಮಾಂ' -ಎಂಬ ಮಾತಿನಲ್ಲಿ ಪವಮಾನದೇವನ ಶ್ರೀಮಧ್ವ ರೂಪವು ಪ್ರಾರ್ಥಿಸಲ್ಪಡುವುದು. ಈ ತಪ್ತಚಕ್ರಾಂಕನ ಎಂಬ ವೈಷ್ಣವಧರ್ಮದ ಪ್ರವರ್ತಕ ರೂಪ ಅದಾಗಿರುವುದರಿಂದ ಅದರಲ್ಲಿ ಮುದ್ರಾಧಾರಣದ ಸಂದರ್ಭದಲ್ಲಿ ಪವಿತ್ರಗೊಳಿಸುವಂತೆ ಪ್ರಾರ್ಥಿಸಿಕೊಳ್ಳುವುದು ಔಚಿತ್ಯಪೂರ್ಣ. ಪ್ರತಿಯೊಂದು ಯುಗದಲ್ಲೂ ಅವತರಿಸುವ ಪ್ರಯುಕ್ತ ಆ ಅವತಾರಗಳ ಹಿನ್ನೆಲೆಯಲ್ಲಿ 'ಪಾವ-ಮಾನೀಃ' -ಎಂಬ ಬಹುವಚನವನ್ನೂ ಹೊಂದಿಸಬಹುದಾಗಿದೆ.[177]

೪. ಚಕ್ರದ ಮುದ್ರಾಧಾರಣೆ ಮಾಡಿಕೊಳ್ಳದಿದ್ದರೆ ವೇದಾಭ್ಯಾಸ ವ್ಯರ್ಥವೆನಿಸುವುದು. ಅಂತಹವನ ಬಾಯಿಯಿಂದ ಬಂದ ವೇದ ಅಪವಿತ್ರದಂತೆ![178]

೫. 'ದಶಾಪವಿತ್ರ' ಪರವಾದ 'ಯೇನ ಪವಿತ್ರೇಣ.......' ಎಂಬ ಮಂತ್ರವನ್ನು ಸುದರ್ಶನಧಾರಣೆಯಲ್ಲೂ ವಿನಿಯೋಗಿಸಬಹುದಾಗಿದೆ. ಗಾಯತ್ರೀಮಂತ್ರವನ್ನು ಅನ್ನಾಭಿಮಂತ್ರಣದಲ್ಲಿ ಹೇಗೆ ವಿನಿಯೋಗಿಸಲಾಗುವುದೋ ಹಾಗೆ.[179]

೬. ಸುದರ್ಶನಚಕ್ರ ಹಾಗೂ ಅದರ ಧಾರಣೆಯ ಬಗ್ಗೆ ವಿಸ್ತಾರವಾಗಿ ತಿಳಿದುಕೊಳ್ಳ ಬೇಕೆಂದಿದ್ದರೆ 'ಸುದರ್ಶನಮೀಮಾಂಸಾ' -ಎಂಬ ಕೃತಿಯನ್ನು ವಿಶೇಷವಾಗಿ ಪರಿಶೀಲಿಸಬೇಕು.[180]

ತಪ್ತಮುದ್ರಾಧಾರಣೆಯಲ್ಲಿ 'ಪವಮಾನ'ನ ಪಾತ್ರ

ಶ್ರೀವಾದಿರಾಜಸ್ವಾಮಿಗಳು ತಪ್ತಮುದ್ರಾಧಾರಣೆಯಲ್ಲಿ ಪವಮಾನಪಾತ್ರವನ್ನು ಎತ್ತಿ ತೋರಿಸಿರುವರಲ್ಲದೆ, ಪವಮಾನದ ಕೆಲವು ಮಂತ್ರಗಳನ್ನು ತಪ್ತಮುದ್ರಾಧಾರಣೆಯ ಅನುಸಂಧಾನಕ್ಕೆ ಪೋಷಕವಾಗುವಂತೆ ಹೇಗೆ ಬಳಸಿಕೊಳ್ಳಬೇಕೆಂಬುದನ್ನೂ ಪ್ರತಿಪಾದಿಸಿರುವರು.

"ಪಾವಮಾನ್ಯಃ ಪುನಂತು ಮಾಮ್"

ಪವಮಾನಮಂಡಲದ ಖಿಲಭಾಗದ 'ಯೇನ ದೇವಾಃ ಪವಿತ್ರೇಣ.......' ಇತ್ಯಾದಿ ಮಂತ್ರಗಳಲ್ಲಿ ಚಕ್ರಧಾರಣೆಯ ಪ್ರಸ್ತಾವ ಬಂದಿದೆ ಎಂದು ಸಮರ್ಥಿಸಿರುವ ಶ್ರೀವಾದಿರಾಜ

---

177. ಪಾವಮಾನೀ ತನುಶ್ಶ್ರೇಯಂ ಸ್ಯಾದಾಚಾರ್ಯಸ್ವರೂಪಿಣೀ ।
ಯಾಽಸ್ಯ ವೈಷ್ಣವಧರ್ಮಸ್ಯ ಸರ್ವತ್ರಾಪಿ ಪ್ರವರ್ತಿಕಾ ॥
..........ಮಾಧ್ವೀ ಭವಿತುಮರ್ಹತಿ ।
ಯುಗೇ ಯುಗೇಽವತೀರ್ಣಾನಾಂ ಬಹುತ್ವಮಪಿ ಯುಕ್ತಿಕಮ್ ॥
— *ಫಲಸೌರಭ, ೫೯೧, ೫೯೨, ೫೯೩*

178. ಅತಶ್ಚಕ್ರಾಂಕಶೂನ್ಯಾನಾಂ ವೇದಾಭ್ಯಾಸೋ ವೃಥಾ ಭವೇತ್ ।
ಯದಾ ಚಕ್ರಾಂಕಶೂನ್ಯೋಕ್ತವೇದಸ್ಯಾಪ್ಯಪವಿತ್ರತಾ ॥ —*ಫಲಸೌರಭ, ೫೯೯, ೬೦೦*

179. '...........ನಿಯೋಗಃ........... ।
ಅನ್ಯತ್ರಾಪಿ ಭವೇದನ್ನಮಂತ್ರಣೇ ಸೌರಮಂತ್ರವತ್ ॥ —*೫೮೮*

180. ಸುದರ್ಶನಸ್ಯ ಮೀಮಾಂಸಾ ದ್ರಷ್ಟವ್ಯಾ ವಿಸ್ತರಾರ್ಥಿಭಿಃ । —*ಫಲಸೌರಭ, ೬೫೦*

ತೀರ್ಥರು ಆ ಮಂತ್ರದ 'ಪಾವಮಾನ್ಯಃ ಪುನಂತು ಮಾಮ್' –ಎಂಬ ಭಾಗವನ್ನು ಪವಮಾನದೇವನ ಮಧ್ವರೂಪಪರವಾಗಿ ವ್ಯಾಖ್ಯಾನಿಸಿರುವರು.

ತಪ್ತಮುದ್ರಾಧಾರಣರೂಪವಾದ ವೈಷ್ಣವಧರ್ಮದ ಪ್ರಸಾರವನ್ನು ವಿಶೇಷವಾಗಿ ನಡೆಸಿರುವ ಶ್ರೀ ಮಧ್ವಾಚಾರ್ಯರ ರೂಪವೇ ಪವಮಾನಖಿಲಭಾಗದ ಆ ಮಂತ್ರದ 'ಪಾವಮಾನ್ಯಃ' –ಎಂಬ ಶಬ್ದದಿಂದ ಉಲ್ಲೇಖಿಸಲ್ಪಟ್ಟಿದೆ. ಬೇರೆಬೇರೆ ಯುಗದಲ್ಲಿ ಅವತಾರ ತಾಳುತ್ತಿರುವ ಆ ಮಧ್ವರೂಪದ ಬಹುತ್ವವನ್ನು ಇಟ್ಟುಕೊಂಡು 'ಪಾವಮಾನ್ಯಃ' –ಎಂದು ಬಹುವಚನದ ಪ್ರಯೋಗ ನಡೆದಿದೆ.[181] ದೇವತೆಗಳೂ ಯಾವ ಸುದರ್ಶನದ ಧಾರಣೆ ಯಿಂದ ತಮ್ಮ ಪಾವಿತ್ರ್ಯವನ್ನು ಗಳಿಸಿಕೊಂಡಿರುವರೋ ಅಂತಹ ಚಕ್ರದಿಂದ ಪವಮಾನನ ಮೂರ್ತಿಗಳಾದ ಮಧ್ವರೂಪಗಳು ನನ್ನನ್ನು ಪವಿತ್ರಗೊಳಿಸಲಿ –ಎಂದು ಈ ಶ್ರುತಿಯ ದ್ರಷ್ಟಾರಋಷಿ ಪ್ರಾರ್ಥಿಸುವನು.

ಪವಮಾನನೇ ಯಜ್ಞದ ಅಗ್ನಿಯಲ್ಲಿ ಹಾಕಿದ ಸುದರ್ಶನಚಕ್ರವನ್ನು ತನ್ನ ಪುಣ್ಯಪ್ರದ ಜ್ವಾಲೆಯಿಂದ ಬಿಸಿಗೊಳಿಸುವನು. ಹಾಗೆಯೇ ಅವನೇ ಮಧ್ವರೂಪದಿಂದ ಮುನಿಗಳ ಭುಜಗಳಲ್ಲಿ ತಪ್ತಮುದ್ರಾಂಕನ ನಡೆಸುವನು. ಮುದ್ರಾಧಾರಣ ಕರ್ತೃಗಳಾದ ಗುರುಗಳಲ್ಲಿ ಶ್ರೀ ಮಧ್ವರೇ ಒಂದು ರೂಪದಿಂದ ಇದ್ದು ಮುದ್ರಾಧಾರಣ ಮಾಡಿಸುವರು.[182]


---

* ಸುದರ್ಶನಮೀಮಾಂಸಾಯಾಃ ಪೃಥಕ್ಕೃತತ್ವೇ ಕಿಮತ್ರಾಪಿ ।
ತನ್ಮೀಮಾಂಸಯಾ.......... ॥ –ಸುರೋತ್ತಮತೀರ್ಥೀಯೇ

181. ಪಾವಮಾನೀ ತನುಶ್ಶ್ರೇಯಂ ಸ್ಯಾದಾಚಾರ್ಯಸ್ವರೂಪಿಣೀ ।
ಯಯಾಸ್ಯ ವೈಷ್ಣವಧರ್ಮಸ್ಯ ಸರ್ವತ್ರಾಪಿ ಪ್ರವರ್ತಿಕಾ ॥
.........ಸಾ ಚ ಪ್ರಸಿದ್ಧೇಃ........ಮಾಧ್ವೀ ಭವಿತುಮರ್ಹತಿ ।
ಯುಗೇ ಯುಗೇಽವತೀರ್ಣಾನಾಂ ಬಹುತ್ವಮಪಿ ಯುಕ್ತಿವತ್ ॥
– ಫಲಸೌರಭ, ೫೯೧, ೫೯೨, ೫೯೩

182. ಅತೋಽಗ್ನಾವಾಹಿತಂ ಚಕ್ರಂ ಸ್ವಾರ್ಚಿಷಾ ಪುಣ್ಯದಾಯಿನಾ ।
ಸ ಏವ ತಪ್ತಂ ಕುರುತೇ ಗುರುರ್ಭೂತ್ವಾ ಸ ಏವ ಚ ॥
ಸತಾಂ ಭುಜೇ ಧಾರಯತಿ ಮುನೀನಾಂ ಮಧ್ವರೂಪಧೃಕ್ ।
ಸ ಏವ ಧಾರಯೇದ್ವಾಯುರನ್ಯತ್ರ ಗುರುಷು ಸ್ಥಿತಃ ॥
ಮಧ್ವಾಖ್ಯಗುರುರೂಪೇಣ ಪೂಯಮಾನಸ್ಯ ಪಾವಯನ್ ।
ಧಾರಯೇತ್ತಾನಿ ರೂಪಾಣಿ ಮಧ್ವಸ್ಯೈವ ಬಹೂನಿ ತತ್ ॥ –೬೧೫, ೬೧೬, ೬೧೭

ತಪ್ತಮುದ್ರಾಧಾರಣೆಯ ಅವಧಿಯಲ್ಲಿ ಪಠಿಸಬೇಕಾದ ಪವಮಾನನ ಪ್ರಾರ್ಥನಾರೂಪದ ಮಂತ್ರಗಳು



ಶ್ರೀ ವಾದಿರಾಜ ಪ್ರತಿಷ್ಠಾಪಿತ
ಉಡುಪಿ ಶ್ರೀಮುಖ್ಯಪ್ರಾಣ

**ಯತ್ತೇ ಪವಿತ್ರಮರ್ಚಿಷ್ಯಗ್ನೇ ವಿತತಮಂತರಾ ।
ಬ್ರಹ್ಮ ತೇನ ಪುನೀಹಿ ನಃ ॥**

ಅಗ್ನಿಯಲ್ಲಿ ಸನ್ನಿಹಿತನಾಗಿ ಅಗ್ನಿಪದವಾಚ್ಯನಾದ ಪವಮಾನ! ನಿನ್ನ ಜ್ವಾಲೆಯೊಳಗೆ ಸುಡುವುದಕ್ಕಾಗಿ ಸಾಕಷ್ಟು ತಾಪದ ಮೂಲಕ ವಿಸ್ತರಿಸಿದ, ನಮ್ಮ ಭುಜಗಳಲ್ಲಿ ಅಂಕಿತವಾದ ಪವಿತ್ರೀಕರಿಸುವ ಪ್ರಯುಕ್ತ ಪವಿತ್ರ ಎನಿಸುವ ಸುದರ್ಶನದಿಂದ ನಾವು ಅಧ್ಯಯನ ಮಾಡಿದ ವೇದವನ್ನು ಪವಿತ್ರಗೊಳಿಸು.[183]

ಹೀಗೆ ಪವಮಾನದ ಸಂಹಿತಾಭಾಗದಲ್ಲಿ ತಪ್ತ ಮುದ್ರಾಧಾರಣೆಯ ಪ್ರಸ್ತಾವವೇ ಬಂದಿರುವುದರಿಂದ 'ಯೇನ ದೇವಾಃ.......' ಇತ್ಯಾದಿ ಇದರ ಪರಿಶಿಷ್ಟ ಎನಿಸಿರುವ ಎರಡು ಮಂತ್ರಗಳಲ್ಲೂ ತಪ್ತಚಕ್ರಧಾರಣೆಯ ಪ್ರತಿಪಾದನೆ ನಡೆದಿದೆ. ಈ ಮಂತ್ರದ ಶೇಷರೂಪದಲ್ಲಿ ಅಂದರೆ ಉಳಿದ ಭಾಗವಾಗಿ ಇರುವುದರಿಂದಲೇ ಅದು ಪರಿಶಿಷ್ಟ ಎನಿಸಿರುವುದು ತಾನೇ?[184]

**ಯೇನ ದೇವಾಃ ಪವಿತ್ರೇಣಾತ್ಮಾನಂ ಪುನತೇ ಸದಾ ।
ತೇನ ಸಹಸ್ರಧಾರೇಣ ಪಾವಮಾನ್ಯಃ ಪುನಂತು ಮಾಮ್ ॥**

---

183. ಯತ್ತೇ ಪವಿತ್ರಮರ್ಚಿಷ್ಯಗ್ನೇ ವಿತತಮಂತರಾ ।
ಬ್ರಹ್ಮ ತೇನ ಪುನೀಹೀತಿ ತಸ್ಯೈವ ಪ್ರಾರ್ಥನಾಂತರಮ್ ॥
ಸಖ್ಯುರಗ್ರೇ ಹೃದಿಗತಮಗ್ನ್ಯಾಖ್ಯಂ ತಂ ಗುರುಂ ಪ್ರತಿ ।
ಸ್ವಪ್ಲೀಕರ್ತುಂ ಮಹಾಧರ್ಮಂ ತಪ್ತಚಕ್ರಾಂಕಧಾರಣಮ್ ॥
........ಅಗ್ನೇ ತೇಽರ್ಚಿಷಿ ಯಚ್ಚಕ್ರಮಂತರಾ ವಿತತಂ ಕೃತಮ್ ।
ತಪ್ತೇನ ತೇನ ಚಕ್ರೇಣ ಬ್ರಹ್ಮ ವೇದಂ ಪುನೀಹಿ ನಃ ॥
ಇತಿ ಪ್ರಾರ್ಥರೂಪ್ಯೋಽರ್ಥೋ ಯಸ್ಪಷ್ಟೋಽತ್ರ ಪ್ರತೀಯತೇ ।
ಅತಶ್ಚಕ್ರಾಂಕಶೂನ್ಯಾನಾಂ ವೇದಾಭ್ಯಾಸೋ ವೃಥಾ ಭವೇತ್ ॥
— *ಫಲಸೌರಭ, ೫೯೫.....೫೯೯*

184. ಪ್ರಸ್ತಾವಂಯತ್ಸಂಹಿತಾ ಯತ್ತದೇವ ಪರಿಶಿಷ್ಟವಾಕ್ ।
ಪ್ರಪಂಚಯತಿ ತೇನಾಽಭೂತ್ತಚ್ಚ ಶಿಷ್ಟಾನುಶಾಸನಮ್ ॥
ಪ್ರಪಂಚನಂ ಚ ಪ್ರೋಕ್ತಸ್ಯ ತೇನ ವಾಕ್ಯದ್ವಯೇನ ತತ್ ।
ತಪ್ತಚಕ್ರಾಂಕನಂ ವಕ್ತಿ ವಾಕ್ಯಭೇದೋ ನ ಚೇದ್ ಭವೇತ್ ॥
ಯತೋಽಸ್ಯ ಪರಿಶಿಷ್ಟತ್ವಂ ತಚ್ಛೇಷತ್ವಮಪೇಕ್ಷತೇ । —*ಫಲಸೌರಭ, ೬೨೦, ೬೨೧*

ಬ್ರಹ್ಮಾದಿದೇವತೆಗಳು ಪವಿತ್ರವೆಂಬ ತಪ್ತಸುದರ್ಶನಚಕ್ರದಿಂದ ಆಷಾಢ ಏಕಾದಶಿ ಮುಂತಾದ ಪುಣ್ಯದಿನಗಳಲ್ಲಿ ತಮ್ಮ ಶರೀರವನ್ನೂ, ಮನಸ್ಸನ್ನೂ ಪವಿತ್ರಗೊಳಿಸುವರು. ಗೋಪೀಚಂದನದಿಂದ ಪ್ರತಿನಿತ್ಯ ಚಕ್ರವನ್ನು ಧರಿಸಿಕೊಂಡೂ ತಮ್ಮನ್ನು ಪವಿತ್ರಗೊಳಿಸಿಕೊಳ್ಳುವರು. ಅಂತಹ 'ಸಹಸ್ರಾರ' ಎನಿಸುವ ಚಕ್ರದಿಂದ ಪವಮಾನನ ರೂಪರಾದ ಶ್ರೀ ಮಧ್ವರು ನನ್ನನ್ನು ಪವಿತ್ರಗೊಳಿಸಲಿ.[185]

ಪ್ರಾಜಾಪತ್ಯಂ ಪವಿತ್ರಂ ಶತೋದ್ಯಾಮಂ ಹಿರಣ್ಮಯಮ್ ।
ತೇನ ಬ್ರಹ್ಮವಿದೋ ವಯಂ ಪೂತಂ ಬ್ರಹ್ಮ ಪುನೀಮಹೇ ॥

ಶ್ರೀವಿಷ್ಣು ತನ್ನ ಕರಕಮಲದಿಂದ ಪ್ರಜಾಪತಿ ಎನಿಸುವ ಚತುರ್ಮುಖನಿಗೇ ಚಕ್ರಾಂಕನ ಮಾಡಿದ್ದರಿಂದ ಪ್ರಾಜಾಪತ್ಯ ಎನಿಸುವ, ನೂರಾರು ಬಾರಿ ದುಷ್ಟರ ವಿರುದ್ಧ ತೊಡಗಿಸಲ್ಪಟ್ಟಿರುವ, ಸುವರ್ಣಾತ್ಮಕವಾದ ಸುದರ್ಶನದಿಂದ, ಅದರ ಅಂಕನದಿಂದಾಗಿ ವೇದಜ್ಞಾನಿಗಳಾದ ನಾವು ಸ್ವಾಭಾವಿಕವಾಗಿಯೇ ಪವಿತ್ರವಾಗಿರುವ ವೇದವನ್ನು ನಮ್ಮ ಪಾಲಿಗೂ ಪವಿತ್ರವೆನಿಸುವಂತೆ ಮಾಡುವೆವು.[186]

ಹೀಗೆ ತಪ್ತಮುದ್ರಾಧಾರಣೆಯಲ್ಲಿ ಪವಮಾನನ, ಅವನ ರೂಪ ಶ್ರೀ ಮಧ್ವರ ಪ್ರಮುಖಪಾತ್ರವನ್ನು ವಿಶ್ಲೇಷಿಸಿಕೊಂಡು, ಅವರ ಕುರಿತ ಅನುಸಂಧಾನಕ್ಕೆ ಪುಷ್ಟಿದೊರಕುವಂತೆ, ಅವರಲ್ಲಿ ಪ್ರಾರ್ಥನಾರೂಪದಲ್ಲಿ ಇರುವ ಈ ಮಂತ್ರಗಳನ್ನು ಪಠಿಸುತ್ತ ತಪ್ತಮುದ್ರಾಧಾರಣೆ ಮಾಡಿಕೊಳ್ಳಬೇಕು.


ತಪ್ತಮುದ್ರಾಧಾರಣೆ ಮಾಡುವ ಗುರುಗಳೂ ತಮ್ಮಲ್ಲಿ ಶ್ರೀ ಮಧ್ವರು ಇದ್ದುಕೊಂಡು ತಪ್ತಮುದ್ರಾಧಾರಣೆ ಮಾಡಿಸುತ್ತಿದ್ದಾರೆ ಎಂಬ ಜಾಗೃತಿಯನ್ನು ತಂದುಕೊಳ್ಳಬೇಕು. ತಪ್ತಮುದ್ರಾಧಾರಣೆ ಮಾಡಿಸಿಕೊಳ್ಳುವವರೂ ತಮ್ಮ ಗುರುಗಳಲ್ಲಿ ಶ್ರೀ ಮಧ್ವರೇ ಇದ್ದುಕೊಂಡು ತಮಗೆ ತಪ್ತಮುದ್ರಾಧಾರಣೆ ಮಾಡಿಸುತ್ತಿದ್ದಾರೆ ಎಂಬ ಎಚ್ಚರಿಕೆಯಿಂದ ಇರಬೇಕು. ಹಾಗೆಯೇ ತಮ್ಮ ಭುಜಗಳಲ್ಲಿ ಸ್ಥಾಪಿತಗಳಾದ ಚಕ್ರಮುದ್ರೆಯಲ್ಲಿಯ ತಾಪವೂ ಪವಮಾನ ಅಗ್ನಿಯ ಜ್ವಾಲೆಯಲ್ಲಿದ್ದುಕೊಂಡು ನೀಡಿರುವಂತಹದ್ದೆಂದು ಅನುಸಂಧಾನ ಇರಬೇಕು.

---

185. ....ಇತಿ ಶ್ರುತಿಃ ಪ್ರಾಕ್ ಪವಿತ್ರಮಾಮ್ನಾಯಾಹೂಯ ಪುನಶ್ಚ ತತ್ ।
ಸಹಸ್ರಧಾರಂ ಯತ್ ಪ್ರಾಹ ತತ್ಸಹಸ್ರಾರಮೇವ ತತ್ ।
ದೇವಾಶ್ಚ ಯೇನ ಚಕ್ರೇಣ ಲಾಂಛಿತೇನ ಭುಜೇ ಸದಾ ॥
ಸ್ವಸ್ವದೇಹಂ ಮನಶ್ಚಾಪಿ ಪುನತೇ ವೈಷ್ಣವೋತ್ತಮಾಃ ।
ತೇನ ಚಕ್ರೇಣ ಮರುತೋ ಮೂರ್ತಯೋ ಮಾಂ ಪುನಂತ್ವಿತಿ ॥
ಮುನಿಃ ಪ್ರಾರ್ಥಯತೇ ಕಶ್ಚಿದಿತ್ಯರ್ಥೋಽತ್ರ ಪ್ರದೃಶ್ಯತೇ ।
ಶಬ್ದಾನನುಪಪತ್ತ್ಯೈವ ಶಬ್ದಶಬ್ದಾರ್ಥವೇದಿಭಿಃ ॥
— ಫಲಸೌರಭ, ೫೭೮, ೫೭೯, ೫೮೦

186. ....ಅತಶ್ಚಕ್ರಾಂಕಶೂನ್ಯಾನಾಂ ವೇದಾಭ್ಯಾಸೋ ವೃಥಾ ಭವೇತ್ ।
— ಫಲಸೌರಭ, ೫೯೯

ಶ್ರೀವಾದಿರಾಜರಚಿತ
ಸಹಸ್ರಾರಸ್ತುತಿ ಹಾಗೂ ಚಕ್ರಸ್ತುತಿ – ಒಂದು ಅವಲೋಕನ


ಶ್ರೀ ವಾದಿರಾಜತೀರ್ಥರು ತಮ್ಮ ಮಾತೃಶ್ರೀಗಾಗಿ ರಚಿಸಿಕೊಟ್ಟ ತಮ್ಮ ವಿಗ್ರಹ

ಶ್ರೀ ವಾದಿರಾಜಸ್ವಾಮಿಗಳು ಸುದರ್ಶನಚಕ್ರದ ವಿಷಯದಲ್ಲಿ ಎರಡು ಕೃತಿಗಳನ್ನು ರಚಿಸಿರುವರು– ಸಹಸ್ರಾರಸ್ತುತಿ ಹಾಗೂ ಚಕ್ರಸ್ತುತಿ.

ಹನ್ನೆರಡು ಶ್ಲೋಕಗಳನ್ನೊಳಗೊಂಡ 'ಸಹಸ್ರಾರ ಸ್ತುತಿ'ಯಲ್ಲಿ ದುಷ್ಜ್ವರ ನಾಶವೇ ಮುಂತಾದ ಸುದರ್ಶನ ಚಕ್ರದ ಮಹಿಮೆಗಳನ್ನು ಉಲ್ಲೇಖಿಸಿ, ಸುದರ್ಶನಚಕ್ರ ವನ್ನು ಸಂಬೋಧಿಸಿ ಸ್ತುತಿಸಲಾಗುವುದು.

ತಪ್ತಚಕ್ರಮುದ್ರಾಧಾರಣೆಯ ಬಗ್ಗೆ ಹೀಗೊಂದು ಶ್ಲೋಕವಷ್ಟೇ ಹೊರಟಿದೆ–

ಯಸ್ತ್ವತ್ತಸ್ತಪ್ತಸುತನುಃ ಸೋಽತ್ತಿ ಮುಕ್ತಿಫಲಂ ಕಿಲ ।
ನಾತಪ್ತತನುರಿತ್ಯಸ್ತೌತ್ ಖ್ಯಾತಾ ವಾಕ್ ತ್ವಾಂ ಮಹೌಜಸ ॥

ಮಹಾ ಓಜಸ್ಸುಳ್ಳ ಚಕ್ರವೇ, ನಿನ್ನಿಂದಾಗಿ ತಪ್ತದೇಹವುಳ್ಳವನು, ಮುಕ್ತಿಫಲವನ್ನು ಅನುಭವಿಸುವನು. ನಿನ್ನಿಂದ ತಪ್ತದೇಹವುಳ್ಳವನಾಗದಿದ್ದರೆ ಅವನಿಗೆ ಮೋಕ್ಷ ಫಲಾನು ಭವಕ್ಕೆ ಅವಕಾಶವಿಲ್ಲ ಎಂದು 'ಅತಪ್ತತನೂಃ.....' ಇತ್ಯಾದಿಯಾದ ಪ್ರಸಿದ್ಧವಾದ ವೇದದ ಮಾತು ನಿನ್ನನ್ನು ಹೊಗಳುತ್ತಿದೆ.

76 ಶ್ಲೋಕಗಳನ್ನೊಳಗೊಂಡ 'ಚಕ್ರಸ್ತುತಿ'ಯಲ್ಲಾದರೂ ಸಹಸ್ರಾರಸ್ತುತಿಯಲ್ಲಿ ಮಾಡಿರುವಂತೆ ಸುದರ್ಶನಚಕ್ರದ ಸ್ತುತಿಯನ್ನು ನೇರವಾಗಿ ಮಾಡಿಲ್ಲ. ಅದರಲ್ಲಿ ತಪ್ತ ಮುದ್ರಾಧಾರಣವನ್ನು ಆಕ್ಷೇಪಿಸುವ ವಾದಿಯನ್ನು ಸಂಬೋಧಿಸಿ ತಪ್ತಮುದ್ರಾಧಾರಣೆಗೆ ಶಾಸ್ತ್ರಪ್ರತಿಪಾದ್ಯತ್ವವನ್ನು ಸಮರ್ಥಿಸುವ ಮೂಲಕ ಪರೋಕ್ಷವಾಗಿಯಷ್ಟೇ ಸುದರ್ಶನ ಚಕ್ರದ ಸ್ತುತಿಯನ್ನು ನಡೆಸಿದಂತಾಗಿದೆ.

ಹೀಗೆ 'ಚಕ್ರಸ್ತುತಿ'ಯಲ್ಲಿ ತಪ್ತಮುದ್ರಾಧಾರಣವನ್ನು ಸಮರ್ಥಿಸಿ ಪ್ರತಿಪಾದಿಸಿರುವ ವಿಚಾರಗಳನ್ನು ಹೀಗೆ ಸಂಗ್ರಹಿಸಬಹುದಾಗಿದೆ–

೧. ಗ್ರಂಥಾದಿಯಲ್ಲಿ ವಿಘ್ನಪರಿಹಾರಾದಿಗಳಿಗಾಗಿ ಮಂಗಳಾಚರಣೆ ನಡೆಸಬೇಕೆಂದು ವಿಧಿಸುವ ಶ್ರುತಿವಾಕ್ಯ ಉಪಲಬ್ಧವಿಲ್ಲದಿದ್ದರೂ ಶಿಷ್ಟರು ಮಂಗಲಾಚರಣೆ ನಡೆಸು ವುದರಿಂದ ಅಂತಹ ಶಿಷ್ಟಾಚಾರಕ್ಕೆ ಮೂಲವಾಗಿ ಸ್ಮೃತಿಯನ್ನೂ ಅದಕ್ಕೆ ಮೂಲ ವಾಗಿ ಶ್ರುತಿಯನ್ನೂ ಕಲ್ಪಿಸಿ ಮಂಗಲಾಚರಣೆಯನ್ನು ವೈದಿಕಸಂಪ್ರದಾಯವೆಂದು ಪರಿಗಣಿಸುವಂತೆಯೇ ತಪ್ತಮುದ್ರಾಧಾರಣೆಯ ಶಿಷ್ಟಾಚಾರಕ್ಕೆ ಮೂಲವಾಗಿ ಸ್ಮೃತಿ

ಯನ್ನೂ, ಅದಕ್ಕೆ ಮೂಲವಾಗಿ ಶ್ರುತಿಯನ್ನೂ ಕಲ್ಪಿಸಿ ತಪ್ತಮುದ್ರಾಧಾರಣೆಯನ್ನೂ ವೈದಿಕಸಂಪ್ರದಾಯ ಎಂದು ಒಪ್ಪಿಕೊಳ್ಳಲೇಬೇಕು.

–(2, 3 –ಶ್ಲೋಕಗಳಲ್ಲಿ)

೨. ದ್ವಾರಕೆಗೆ ಯಾತ್ರೆ ಮಾಡುವ ಯಾತ್ರಿಕರು ದ್ವಾರಕೆಯನ್ನು ಪ್ರವೇಶಿಸುವ ಮೊದಲು ಚಕ್ರಮುದ್ರಾಧಾರಣೆ ನಡೆಸುವ ಪರಿಪಾಟ ಈಗಲೂ ಇದೆ.

–(ಮೂರನೆಯ ಶ್ಲೋಕದಲ್ಲಿ)

೩. ನಿಂಬಾದಿತ್ಯರ ಅನುಯಾಯಿಗಳಾದ ವಿವೇಕಿಗಳೂ, ಮಾಯಾವಾದಿಗಳಲ್ಲಿ ಒಂದು ಗುಂಪಿನವರೂ, ವಿಷ್ಣುಸ್ವಾಮಿಮತಾನುಯಾಯಿಗಳೂ, ರಾಮಾನುಜಮತಾನುಯಾಯಿಗಳೂ ತಪ್ತಮುದ್ರಾಧಾರಣವನ್ನು ಈಗಲೂ ನಡೆಸುವರು.

–(ಆರನೇ ಶ್ಲೋಕದಲ್ಲಿ)

೪. ತತ್ವವಾದಿ ಮಧ್ವಾಚಾರ್ಯರ ಸಂಪ್ರದಾಯದಲ್ಲಿ ಬಂದಿರುವ ಶಿಷ್ಟಶ್ರೇಷ್ಠರೆಲ್ಲ ತಪ್ತಮುದ್ರಾಧಾರಣೆಯ ಅನುಷ್ಠಾನ ಮಾಡುತ್ತ ಬಂದಿರುವರು.

ಹೀಗೆ ಬಹುಶಿಷ್ಟಜನಾಚಾರವು ತಪ್ತಮುದ್ರಾಧಾರಣೆಯ ವಿಷಯದಲ್ಲಿ ಪ್ರಮಾಣವಾಗಬಲ್ಲದು. *–(೫ನೇ ಪದ್ಯದಲ್ಲಿ)*

೫. ಯಾರಿಂದಲೂ ತಮ್ಮ ಮೂಲಗ್ರಂಥಗಳ ಭಾಗಗಳಲ್ಲಾಗಲೀ ಪ್ರಕರಣಗಳಲ್ಲಾಗಲೀ ನಿಬಂಧಗ್ರಂಥಗಳಲ್ಲಾಗಲೀ ತಪ್ತಮುದ್ರಾಧಾರಣವು ನಿಷೇಧಿಸಲ್ಪಟ್ಟಿಲ್ಲ.

–(೬ ಮತ್ತು ೭ನೇ ಪದ್ಯದಲ್ಲಿ)

೬. ಕೆಲವರು ತಪ್ತಮುದ್ರಾಧಾರಣೆಯನ್ನು ಆಚರಿಸುವುದಿಲ್ಲ –ಎಂಬುದು ಅವರ 'ಅನಾಚಾರ' ಎಂದೇ ಯಾಕೆ ಕಲ್ಪಿಸಬಾರದು? 'ತ್ಯಜೇದೇಕಂ ಕುಲಸ್ಯಾರ್ಥೇ.....' ಎಂಬ ನ್ಯಾಯದಲ್ಲಿ ಒಂದು ದೊಡ್ಡ ಕುಲದ ರಕ್ಷಣೆಗಾಗಿ ಅದಕ್ಕೆ ಕೆಡುಕು ಮಾಡುವ ವ್ಯಕ್ತಿಯನ್ನು ಬಿಟ್ಟುಬಿಡಬೇಕೆಂದು ಸಾರಲ್ಪಡುತ್ತಿದ್ದು, ಅದಕ್ಕನುಗುಣವಾಗಿ ಅನೇಕ ಶಿಷ್ಟರ ಆಚರಣೆಯನ್ನು ಉಳಿಸುವುದಕ್ಕಾಗಿ ಕೆಲವರ ಅನಾಚರಣೆಯನ್ನು ತಳ್ಳಿಹಾಕಬೇಕು. *–(೭ ಮತ್ತು ೮ನೇ ಪದ್ಯದಲ್ಲಿ)*

೭. ನೃಸಿಂಹಪರಿಚರ್ಯಾ, ರಾಮಾರ್ಚಾಚಂದ್ರಿಕಾ ಇತ್ಯಾದಿ ಗ್ರಂಥಗಳಲ್ಲಿ ಶ್ರುತಿ, ಸ್ಮೃತಿ, ಪುರಾಣಗಳ ಮಾತುಗಳಿಂದ ತಪ್ತಮುದ್ರಾಧಾರಣೆಯ ಸಮರ್ಥನೆ ನಡೆದಿದೆ.

–(೮ ಮತ್ತು ೯ನೆಯ ಶ್ಲೋಕಗಳಲ್ಲಿ)

೮. ಹಿಂದೆ ಎಲ್ಲರಿಗೂ ತಪ್ತಮುದ್ರಾಧಾರಣೆ ಸಮ್ಮತವಾಗಿತ್ತು. ಆದುದರಿಂದಲೇ ನಮ್ಮ ಹಿರಿಯರು ಅದನ್ನು ಸಮರ್ಥಿಸಲು ಹೊರಟಿಲ್ಲವಷ್ಟೇ.

–(೯ನೇ ಶ್ಲೋಕದಲ್ಲಿ)

೯. ತಪ್ತಮುದ್ರಾಧಾರಣೆಯ ವಿಷಯದಲ್ಲಿ ಶ್ರುತಿಗಳು ಪ್ರಮಾಣಗಳಾಗಿಲ್ಲ. ಆದುದರಿಂದ ಅದು ಅವೈದಿಕ. ತಪ್ತಮುದ್ರಾಧಾರಣೆಯ ವಿಷಯದಲ್ಲಿ ಪ್ರಮಾಣಗಳೆಂದು ತೋರಿಸಲಾಗುವ ಶ್ರುತಿಗಳಿಗಾದರೂ ಬೇರೆ ಅರ್ಥವನ್ನು ಹೇಳಲಾಗುವ ಪ್ರಯುಕ್ತ ಅವು ಅದರ ವಿಷಯದಲ್ಲಿ ಪ್ರಮಾಣಗಳೆನಿಸಲಾರವು ಎಂದು ಸಾಧಿಸುವುದಾದರೆ

ಇದೇ ರೀತಿಯಲ್ಲಿ ಜೀವಬ್ರಹ್ಮೈಕ್ಯವನ್ನೂ ಅವೈದಿಕ ಎಂದು ಸಾಧಿಸಬಹುದಾಗಿದೆ ಎಂದು ಪ್ರತಿಬಂಧೀಮುಖದಿಂದ ನಿರಾಕರಿಸಲಾಗಿದೆ.

– (೧೧ರಿಂದ ೧೮ನೇ ಶ್ಲೋಕದವರೆಗಿನ ಶ್ಲೋಕಗಳಲ್ಲಿ)

೧೦. ಸುದರ್ಶನಚಕ್ರಧಾರಣೆಯ ಫಲ ದೊರಕಬೇಕೆಂದು ಪವಿತ್ರಮುದ್ರೆಯನ್ನೊಳಗೊಂಡ ಚಿನ್ನದ ಉಂಗುರವನ್ನು ಎಲ್ಲರೂ ಧರಿಸಿಕೊಳ್ಳುವರು. ಹೀಗಿರುವಾಗ ಸುದರ್ಶನ ಚಕ್ರವನ್ನೇ ಬಿಸಿ ಮಾಡಿ ಅದರ ಚಿಹ್ನೆಯನ್ನು ಧರಿಸುವುದರಲ್ಲಿ ಏನು ತಪ್ಪು ಇದೆ?

– (೧೯ ಮತ್ತು ೨೦ನೇ ಶ್ಲೋಕಗಳಲ್ಲಿ)

೧೧. ತಪ್ತಮುದ್ರಾಧಾರಣೆಯನ್ನು ನಿಷೇಧಿಸುವ ವಾಕ್ಯಗಳಿರುವಂತೆಯೇ ಅದನ್ನು ವಿಧಿಸುವ ವಾಕ್ಯಗಳೂ ಇವೆ. ಈ ಎರಡು ಬಗೆಯ ವಾಕ್ಯಗಳನ್ನೂ ಸಮನ್ವಯ ಗೊಳಿಸಬೇಕೆಂದರೆ ಮಂತ್ರವಿಲ್ಲದೆ, ಹೋಮವಿಲ್ಲದೆ ತಪ್ತಮುದ್ರಾಧಾರಣೆ ಮಾಡ ಬಾರದು ಎಂಬ ಅಭಿಪ್ರಾಯದಲ್ಲಷ್ಟೇ ತಪ್ತಮುದ್ರಾಧಾರಣೆಯನ್ನು ನಿಷೇಧಿಸುವ ಮಾತುಗಳು ಹೊರಟಿವೆ –ಎಂದು ವ್ಯಾಖ್ಯಾನಿಸಿಕೊಳ್ಳಬೇಕು.

೧೨. ಶಾಸ್ತ್ರದಲ್ಲಿ 'ಅಪ್ರತಿಷಿದ್ಧಂ ಅನುಮತಂ ಭವತಿ' –ನಿಷೇಧಿಸಲ್ಪಡದಿದ್ದದ್ದು ಅನುಮತ ವಾದಂತೆಯೇ ಎಂದು ವ್ಯವಹರಿಸಲ್ಪಡುವುದರಿಂದ ಒಂದೊಮ್ಮೆ ವೇದದಲ್ಲಿ ತಪ್ತಮುದ್ರಾಧಾರಣೆಯ ವಿಧಾನ ಇಲ್ಲದಿದ್ದರೂ, ಅದರ ನಿಷೇಧ ಇಲ್ಲದಿರುವುದ ರಿಂದ ಅದು ವೇದಶಾಸ್ತ್ರಕ್ಕೆ ಅನುಮತ ಎಂದೇ ಒಪ್ಪಿಕೊಳ್ಳಬೇಕು.

೧೩. ಶ್ರುತಿಯಲ್ಲಿ ಅನುಪಲಬ್ಧಗಳಾದ ಅನೇಕ ಆಚಾರಗಳು ಸ್ಮೃತಿಯಲ್ಲಿ ವಿಹಿತವಾಗಿವೆ ಎಂದು ಆಚರಿಸಲ್ಪಡುತ್ತಿವೆ. ಒಂದೊಮ್ಮೆ ಶ್ರುತಿಯಲ್ಲಿ ಇಲ್ಲದ ಪ್ರಯುಕ್ತ 'ಅಶ್ರೌತ' ಎನ್ನುವುದಾಗಿದ್ದರೆ ಆ ಎಲ್ಲ ಆಚಾರಗಳು ಅಶ್ರೌತಗಳೆಂದು ತ್ಯಾಜ್ಯಗಳಾಗ ಬೇಕಾದೀತು! – (೨೬ರಿಂದ ೩೦ನೇ ಪದ್ಯದವರೆಗಿನ ಪದ್ಯಗಳಲ್ಲಿ)

೧೪. ತಪ್ತಮುದ್ರಾಧಾರಣೆಯ ವಿಷಯದಲ್ಲಿ ಬೃಹನ್ನಾರದೀಯದಲ್ಲಿ ನಾಲ್ಕು ಪ್ರಮಾಣ ವಾಕ್ಯಗಳಿವೆ. ಪಾದ್ಮ, ಗಾರುಡ ಮುಂತಾದವುಗಳಲ್ಲಿ ಸಾವಿರಾರು ಮಾತುಗಳಿವೆ. ಹೀಗೆ ಅನೇಕ ಪ್ರಮಾಣಗಳಿರುವುದರಿಂದ 'ದ್ವೈಧೇ ಬಹೂನಾಂ ವಚನಂ' –ಸಂದೇಹ ಉಂಟಾಗಲು ಅನೇಕರ ಮಾತುಗಳನ್ನು ಅವಲಂಬಿಸಿ ನಡೆದುಕೊಳ್ಳ ಬೇಕೆಂದು ಇರುವುದರಿಂದ ಅನೇಕ ಪ್ರಮಾಣಗಳಿರುವ ತಪ್ತಮುದ್ರಾಧಾರಣೆಯ ಪಕ್ಷವನ್ನೇ ಸ್ವೀಕರಿಸಬೇಕು. – (೩೦ ಮತ್ತು ೩೧ನೆಯ ಪದ್ಯಗಳಲ್ಲಿ)

೧೫. ತಪ್ತಮುದ್ರಾಧಾರಣೆಯನ್ನು ನಿಷೇಧಿಸುವ ವಾಕ್ಯಗಳು ಉಪಪುರಾಣಗಳ ವಾಕ್ಯ ಗಳಾಗಿದ್ದು, ಅವುಗಳಿಗೆ ಪಾದ್ಮ, ಗಾರುಡ ಮುಂತಾದ ಪುರಾಣವಾಕ್ಯಗಳ ವಿರೋಧ ಬಂತೆಂದರೆ ಅವು ಅಪ್ರಮಾಣವೆನಿಸುವವು. – (೩೨ನೇ ಪದ್ಯದಲ್ಲಿ)

೧೬. ದೇವತಾಪ್ರತಿಷ್ಠೆ, ಪೂಜೆ ಮುಂತಾದ ವಿಷಯಗಳಿಗೆ ಪ್ರಮಾಣವೆಂದು ಎಲ್ಲ ರಿಂದಲೂ ಒಪ್ಪಲಾಗುವ ಪಂಚರಾತ್ರದಲ್ಲಿ 'ಪವಿತ್ರಂ ತೇ....' ಎಂಬ ಶ್ರುತಿಪ್ರತೀಕ ವನ್ನು ಸ್ವೀಕರಿಸಿ ಸುದರ್ಶನಚಕ್ರಕ್ಕೆ ಪವಿತ್ರ ಎಂಬ ಹೆಸರನ್ನು ಸಮರ್ಥಿಸಿ, ತಪ್ತಚಕ್ರ ಧಾರಣೆಯನ್ನು ಪ್ರಥಮ ವೈಷ್ಣವಸಂಸ್ಕಾರವನ್ನಾಗಿ ವಿಧಿಸುತ್ತಿದೆ. ಶ್ರೀವಿಷ್ಣುವಿನಿಂದ

ಉಕ್ತವಾದ ಪಂಚರಾತ್ರದ ಈ ಮಾತುಗಳಿಗೆ ತಪ್ತಮುದ್ರಾಧಾರಣೆಯನ್ನು ನಿಷೇಧಿಸುವ ಋಷಿಗಳ ಮಾತುಗಳು ಹೇಗೆ ಬಾಧಕಗಳಾದಾವು?

–(೩೩, ೩೪ ಹಾಗೂ ೩೫ನೆಯ ಪದ್ಯಗಳಲ್ಲಿ)

೧೭. ತಾಮಸಪುರಾಣದಲ್ಲೂ 'ಮಲ್ಲಕ್ಷಣಮಿಮಂ ಕಾಮಂ ಕೃತ್ವಾ ಮದ್ಧರ್ಮಮಾಶ್ರಿತಃ । ಸ್ವಲಿಂಗಧಾರಣೇನ.....'ಎಂಬುದಾಗಿ ಈ ಮಾನವಶರೀರವನ್ನು ನನ್ನ (ಭಗವಂತನ ಚಿಹ್ನೆಗಳಿಂದ ಅಂಕಿತವನ್ನಾಗಿ ಮಾಡಿಕೊಂಡು ನನ್ನ ಸೇವಾರೂಪಧರ್ಮವನ್ನು ನಡೆಸುತ್ತಿರಬೇಕೆಂದು ತಪ್ತಮುದ್ರಾಧಾರಣೆಯನ್ನು ಹೇಳಲಾಗಿದೆ.

–(೪೩ನೆಯ ಪದ್ಯದಲ್ಲಿ)

೧೮. ಋಗ್ವೇದದ 'ಪವಿತ್ರಂ ತೇ ವಿತತಂ....' ಎಂಬ ಶ್ರುತಿಯೂ, 'ಗೋವಿಂದುಃ ಬಿಭ್ರದಾಯುಧಮ್...' ಎಂಬ ಶ್ರುತಿಯೂ, 'ಯೇನ ದೇವಾಃ ಪವಿತ್ರೇಣ.....' ಎಂಬ ಶ್ರುತಿಯೂ, ಯಜುರ್ವೇದದ 'ಲೋಕಸ್ಯ ದ್ವಾರಂ....' ಎಂಬ ಶ್ರುತಿಯೂ, ಸಾಮವೇದದ 'ಚರಣಂ ಪೂತಂ.....' ಎಂಬ ಶ್ರುತಿಯೂ, ಅಥರ್ವವೇದದ 'ನೇಮಿನಾ ತಪ್ತಸುತನುಃ.....' ಎಂಬ ಶ್ರುತಿಯೂ ತಪ್ತಮುದ್ರಾಧಾರಣೆಯನ್ನು ಸಾರುತ್ತಿವೆ. ಗುಜರಾಥೀ ಬ್ರಾಹ್ಮಣರಲ್ಲಿ ಈ ಶ್ರುತಿವಾಕ್ಯಗಳೆಲ್ಲ ಉಪಲಬ್ಧಗಳೇ ಆಗಿವೆ. *–(೪೫......೪೯ನೆಯ ಪದ್ಯಗಳಲ್ಲಿ)*

೧೯. 'ಧೃತೋರ್ಧ್ವಪುಂಡ್ರಃ.....' ಮುಂತಾದ ಸ್ಪಷ್ಟ ಅರ್ಥವುಳ್ಳ ತಪ್ತಮುದ್ರಾಧಾರಣೆಯ ವಿಷಯಕ್ಕಿಂತ ಬೇರೆ ವಿಷಯದವುಗಳೆಂದು ಹೇಳಲಿಕ್ಕೆ ಬರಲಾರದ ಸ್ಮೃತಿ, ಇತಿಹಾಸ, ಪುರಾಣಗಳಲ್ಲಿ ಕೋಟಿಸಂಖ್ಯೆಯ ಮಾತುಗಳು ತಪ್ತಮುದ್ರಾಧಾರಣೆಯ ವಿಷಯದಲ್ಲಿ ಇವೆ. *–(೫೦ನೆಯ ಪದ್ಯದಲ್ಲಿ)*

೨೦. 'ಸುದರ್ಶನಮೀಮಾಂಸಾ' ಎಂಬ ಗ್ರಂಥದಲ್ಲಿ ತಪ್ತಮುದ್ರಾಧಾರಣೆಯ ವಿಷಯದಲ್ಲಿ ಅನೇಕ ಪ್ರಮಾಣಗಳನ್ನು ಉಲ್ಲೇಖಿಸಲಾಗಿದೆ. ಆ ಪ್ರಮಾಣಗಳು ಅವರಿಂದಲೇ ರಚಿತಗಳಾದವೆಂದು ಆರೋಪಿಸುವುದಾದರೆ, ವೇದಗಳಲ್ಲಿ ಸ್ಪಷ್ಟವಾಗಿ ತಪ್ತಮುದ್ರಾಧಾರಣೆಯ ಅರ್ಥವುಳ್ಳ ಮಾತುಗಳನ್ನು ಮಾಡಿ ಅವರು ಯಾಕೆ ಸೇರಿಸಿಲ್ಲ? ಎಂದು ಪ್ರಶ್ನಿಸಲಾಗುವುದು.

–(೫೩ ಮತ್ತು ೫೪ನೆಯ ಪದ್ಯಗಳಲ್ಲಿ)

೨೧. 'ಪವಿತ್ರಂ ತೇ ವಿತತಂ.....' ಎಂಬ ಶ್ರುತಿವಾಕ್ಯದಲ್ಲಿ ತಪ್ತಚಕ್ರಮುದ್ರಾಧಾರಣೆಯ ಪ್ರಸ್ತಾವ ಬಂದಿದೆ ಎಂದು ಪಾದ್ಮಪುರಾಣ ಸ್ಪಷ್ಟಪಡಿಸುತ್ತಿರುವಾಗ ಆ ವಾಕ್ಯಕ್ಕೆ ಬೇರೆ ಅರ್ಥವನ್ನು ಯಾಕೆ ಹೇಳಬೇಕು? *–(೫೫.....೬೦ನೆಯ ಶ್ಲೋಕಗಳಲ್ಲಿ)*

೨೨. 'ಅತಪ್ತತನೂಃ....' ಎಂಬ ಶ್ರುತಿಗೂ ತಪ್ತಮುದ್ರಾಧಾರಣೆ ಪರವಾಗಿ ಅರ್ಥ ಹೇಳಬೇಕೇ ಹೊರತು ಪಂಚಾಗ್ನಿಮಧ್ಯದಲ್ಲಿ ಮಾಡುವ ತಪಸ್ಸಿನ ಪರವಾಗಿ ಅರ್ಥಹೇಳಬಾರದು. ತಪ್ತಮುದ್ರಾಧಾರಣೆಯ ಅರ್ಥಕ್ಕೆ ಪದ್ಮಪುರಾಣದ ಸಂವಾದ ಇರುವುದರಿಂದ ಆ ಅರ್ಥವೇ ಗ್ರಾಹ್ಯ.

–(೬೭......೭೩ರ ವರೆಗಿನ ಪದ್ಯಗಳಲ್ಲಿ)

‘ಚಕ್ರಸ್ತುತಿ’ಯೇ ‘ಸುದರ್ಶನ ಮೀಮಾಂಸಾ’ ಅಲ್ಲ

ಶ್ರೀ ವಾದಿರಾಜಸ್ವಾಮಿಗಳು ತಮ್ಮ ಯುಕ್ತಿಮಲ್ಲಿಕಾಗ್ರಂಥದಲ್ಲೂ ಫಲಸೌರಭದಲ್ಲಿ ತಪ್ತಮುದ್ರಾಧಾರಣೆಯ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ನೀಡಿ ಕೊನೆಗೆ ‘ಸುದರ್ಶನಸ್ಯ ಮೀಮಾಂಸಾ ದ್ರಷ್ಟವ್ಯಾ ವಿಸ್ತರಾರ್ಥಿಭಿಃ’ (ಫಲಸೌರಭ ೬೫೦) ಇನ್ನೂ ಈ ಬಗ್ಗೆ ಹೆಚ್ಚಿನ ಮಾಹಿತಿ ಬೇಕೆಂದರೆ ‘ಸುದರ್ಶನ ಮೀಮಾಂಸಾ’ ಗ್ರಂಥವನ್ನು ನೋಡಿ ಎಂದು ಸೂಚನೆ ನೀಡಿರುವರು. ಈ ‘ಸುದರ್ಶನಮೀಮಾಂಸಾ’ ಅವರದ್ದೇ ಮತ್ತೊಂದು ಕೃತಿ ಎಂಬ ಅಭಿಪ್ರಾಯ ಬರುವಂತೆ ಸುರೋತ್ತಮತೀರ್ಥೀಯ ವ್ಯಾಖ್ಯಾನ ಇದೆ.[187] ಶ್ರೀ ಸತ್ಯಪ್ರಮೋದತೀರ್ಥರೂ ಹಾಗೆಯೇ ಅಭಿಪ್ರಾಯಪಟ್ಟಿರುವರು.[188] ಆದರೆ ‘ಸುದರ್ಶನ ಮೀಮಾಂಸಾ’ ಎಂಬ ಮತ್ತೊಂದು ಕೃತಿಯ ಉಪಲಬ್ಧಿ ಇಲ್ಲದೆ ಇರುವುದರಿಂದ ಈ ‘ಚಕ್ರಸ್ತುತಿ’ಯೇ ಸುದರ್ಶನ ಮೀಮಾಂಸಾ ಎಂದು ಉಲ್ಲೇಖಿಸಲ್ಪಟ್ಟದೆ ಎಂದು ಕೆಲವರ ಅಭಿಪ್ರಾಯ. ಆದರೆ ಈ ‘ಚಕ್ರಸ್ತುತಿ’ಯಲ್ಲಿಯೇ –‘ಸುದರ್ಶನಸ್ಯ ಮೀಮಾಂಸಾ ಕೃತಾಽಸ್ಮತ್ಪುರಾತನೈಃ’ (೫೧ನೇ ಪದ್ಯ) ಎಂಬುದಾಗಿ ನಮ್ಮ ಹಿರಿಯರು ‘ಸುದರ್ಶನ ಮೀಮಾಂಸಾ’ ಕೃತಿಯನ್ನು ರಚಿಸಿರುವರೆಂದು ತಿಳಿಸಿರುವುದರಿಂದ ಚಕ್ರಸ್ತುತಿಯೇ ಸುದರ್ಶನಮೀಮಾಂಸಾ ಅಲ್ಲ ಎಂದೂ, ‘ಸುದರ್ಶನ ಮೀಮಾಂಸಾ’ ಶ್ರೀ ವಾದಿರಾಜರಿಂದ ರಚಿತವಾದುದೇ ಅಲ್ಲ; ಬೇರೆ ಯಾರಿಂದಲೋ ರಚಿತವಾದ ಆ ಗ್ರಂಥವನ್ನು ಶ್ರೀ ವಾದಿರಾಜತೀರ್ಥರು ಯುಕ್ತಿಮಲ್ಲಿಕಾದಲ್ಲೂ ಚಕ್ರಸ್ತುತಿಯಲ್ಲೂ ಉಲ್ಲೇಖಿಸಿರುವರಷ್ಟೇ ಎಂದು ಸಿದ್ಧಿಸುವುವು.

ಶ್ರೀ ವಿಜಯೀಂದ್ರತೀರ್ಥರು ರಚಿಸಿರುವ ‘ಚಕ್ರಮೀಮಾಂಸಾ’ ಗ್ರಂಥವೇ ‘ಸುದರ್ಶನಮೀಮಾಂಸಾ’ ಎಂಬ ಹೆಸರಿನಿಂದ ಉಲ್ಲೇಖಿಸಲ್ಪಟ್ಟಿದೆಯೇ? ಅಥವಾ ಬೇರೆ ಯಾರಿಂದಲಾದರೂ ‘ಸುದರ್ಶನಮೀಮಾಂಸಾ’ ಎಂಬ ಗ್ರಂಥವೇ ರಚಿತವಾಗಿದೆಯೇ? ಎಂಬುದು ವಿಚಾರಣೀಯ.

* * *

ಶ್ರೀಕೃಷ್ಣಾಚಾರ್ಯಸಂಗೃಹೀತ

‘ಸ್ಮೃತಿಮುಕ್ತಾವಲಿ’ಯಲ್ಲಿ ‘ಮುದ್ರಾಧಾರಣೆ’

ಶ್ರೀ ರಾಘವೇಂದ್ರಸ್ವಾಮಿಗಳ ಶಿಷ್ಯರಾದ ಶ್ರೀಕೃಷ್ಣಾಚಾರ್ಯರು ಸಂಗ್ರಹಿಸಿರುವ ‘ಸ್ಮೃತಿಮುಕ್ತಾವಲಿ’ಯಲ್ಲಿ ಸಂಧ್ಯಾವಂದನೆಯ ಪ್ರಸ್ತಾವದಲ್ಲೂ, ಉಪನಯನದ ಪ್ರಸ್ತಾವದಲ್ಲೂ ಮುದ್ರಾಧಾರಣೆಯ ಕುರಿತೂ, ತಪ್ತಮುದ್ರಾಧಾರಣೆಯ ಕುರಿತೂ ಅನೇಕ

---

187. ಸುದರ್ಶನಮೀಮಾಂಸಾಯಾಃ ಪೃಥಕ್ ಕೃತತ್ವೇ ಕಿಮತ್ರಾಪಿ ತನ್ಮೀಮಾಂಸಯಾ.....।
— *ಸುರೋತ್ತಮತೀರ್ಥೀಯೇ ।*

188. ಸುದರ್ಶನಸ್ಯ ಮೀಮಾಂಸೇತಿ ಗ್ರಂಥಕಾರೇಣ ವಿರಚಿತಂ ಪ್ರಬಂಧಾಂತರಮ್ ।
— *ಸತ್ಯಪ್ರಮೋದತೀರ್ಥೀಯಾ*

ಪ್ರಮಾಣಗಳನ್ನು ಸಂಗ್ರಹಿಸಿರುವರು. ಸಂಧ್ಯಾವಂದನೆಯ ಪ್ರಸ್ತಾವದಲ್ಲಿ ಗೋಪೀಚಂದನದಿಂದ ಚಕ್ರಾದಿಧಾರಣೆಯ ಹಿರಿಮೆಯನ್ನೂ, ಚಕ್ರಾದಿಧಾರಣೆಯ ಸ್ಥಾನಗಳನ್ನೂ ಹೋಮದ ಪ್ರಸ್ತಾವದಲ್ಲಿ ಏಕಾದಶಿಯಂದೂ ಸುದರ್ಶನ ಹೋಮ ನಡೆಸಬಹುದೆಂದೂ ಪ್ರತಿಪಾದಿಸಿರುವರು. ಅಲ್ಲಿ ಉದಾಹರಿಸಲಾದ 'ಪ್ರಕಾಶಸಂಹಿತೆ' – ಈ ನಿಟ್ಟಿನಲ್ಲಿ ವ್ಯಾಪಕವಾಗಿ ಬೆಳಕು ಚೆಲ್ಲುತ್ತಿದ್ದು, ಅದರ ಪ್ರಕಾರ ಹೀಗೆ ಮುದ್ರೆಗಳನ್ನು ಧರಿಸಿಕೊಳ್ಳಬೇಕು–

೧. ಹೊಟ್ಟೆಯಲ್ಲಿ ನಾಲ್ಕು ಚಕ್ರಮುದ್ರೆಗಳು.

೨. [ಬಲಕಣ್ಣಿನ] ಬಲಬದಿಯಲ್ಲಿ ಎರಡು.

೩. ಬಲಬಾಹುವಿನಲ್ಲಿ ಎರಡು

೪. ಕಂಠದ ಬಲ ಮಗ್ಗುಲಲ್ಲಿ ಎರಡು

೫. ಹೃದಯದಲ್ಲಿ ಎರಡು

೬. ಕಂಠದ ಮುಂಭಾಗದಲ್ಲಿ ಒಂದು

೭. ಬೆನ್ನಿನ ಮೇಲ್ಭಾಗದಲ್ಲಿ ಒಂದು

೮. ಬೆನ್ನಿನ ಕೆಳ ಭಾಗದಲ್ಲಿ ಒಂದು

–ಹೀಗೆ ದೇಹದ ಒಟ್ಟು ಎಂಟು ಕಡೆಗಳಲ್ಲಿ ಹದಿನೈದು ಚಕ್ರಮುದ್ರೆಗಳನ್ನು ಧರಿಸಿಕೊಳ್ಳಬೇಕು.

೧. [ಎಡಗಣ್ಣಿನ] ಎಡಬದಿಯಲ್ಲಿ ಎರಡು ಶಂಖಮುದ್ರೆಗಳು

೨. ಎಡ ಸ್ತನದಲ್ಲಿ ಎರಡು ಶಂಖಮುದ್ರೆ

೩. ಬಲ ಬಾಹುವಿನ ಎರಡು ಚಕ್ರಗಳ ಅಡಿ ಭಾಗದಲ್ಲಿ ಒಂದು ಶಂಖಮುದ್ರೆ

೪. ಎಡಬಾಹುವಿನಲ್ಲಿ ಎರಡು ಶಂಖಮುದ್ರೆ

[ಅವುಗಳ ಕೆಳ ಭಾಗದಲ್ಲಿ ಒಂದು ಚಕ್ರಮುದ್ರೆ]

೫. ಎಡ ಕೊರಳ ಭಾಗದಲ್ಲಿ ಎರಡು ಶಂಖಮುದ್ರೆ

೬. ಹೃದಯದಲ್ಲಿ ಒಂದು ಶಂಖಮುದ್ರೆ

೭. ಕೊರಳ ಹಿಂಭಾಗದಲ್ಲಿ ಒಂದು ಶಂಖಮುದ್ರೆ

೮. ಬೆನ್ನಿನ ಮೇಲ್ಭಾಗದಲ್ಲಿ ಒಂದು ಶಂಖಮುದ್ರೆ

– ಹೀಗೆ ಒಟ್ಟು ಎಂಟು ಕಡೆಗಳಲ್ಲಿ ಹನ್ನೆರಡು ಶಂಖಮುದ್ರೆಗಳನ್ನು ಧರಿಸಿಕೊಳ್ಳಬೇಕು.

೧. ಹೃದಯದಲ್ಲಿ ಒಂದು ಪದ್ಮಮುದ್ರೆ

೨. ಬಲಬಾಹುವಿನಲ್ಲಿ ಎರಡು ಪದ್ಮಮುದ್ರೆ

೧. ಹಣೆಯಲ್ಲಿ ಗದಾಮುದ್ರೆ

೨. ಎಡ ಬಾಹುವಿನಲ್ಲಿ ಎರಡು ಗದಾಮುದ್ರೆ

– ಈ ಎಲ್ಲ ಸ್ಥಾನಗಳಲ್ಲಿ ಕೆಳಭಾಗದಲ್ಲಿ ಕವಚದ ಆಕಾರದಲ್ಲಿ ನಾರಾಯಣಮುದ್ರೆ. ನೆತ್ತಿಯಲ್ಲಿ ಸುಷುಮ್ನಾನಾಡಿ ಆರಂಭವಾಗುವಲ್ಲಿ ಐದೂ ಮುದ್ರೆಗಳು. ಬಲಸ್ತನದ ಎರಡು ಚಕ್ರಗಳ ಮೇಲೆ ಒಂದು ಪದ್ಮ. ಎಡ ಸ್ತನದ ಎರಡು ಶಂಖಗಳ ಮೇಲೆ ಒಂದು ಗದಾ. ಹದಿನಾರು ಸ್ಥಾನಗಳಲ್ಲೂ ನಾರಾಯಣಮುದ್ರೆ.[189]

ಸ್ತ್ರೀಯರೂ ಶಂಖಚಕ್ರಮುದ್ರೆಗಳನ್ನು ಧರಿಸಲೇಬೇಕು:

'ಸ್ಮೃತಿಮುಕ್ತಾವಲಿ'ಯಲ್ಲಿ ಸ್ತ್ರೀಯರೂ ಬಾಹುಗಳ ಬುಡಗಳಲ್ಲಿ ಶಂಖ ಮತ್ತು ಚಕ್ರಗಳ ಮುದ್ರೆಯನ್ನು ಧರಿಸಬೇಕೆಂದು ಅಭಿಪ್ರಾಯಪಡಲಾಗಿದೆ.

'ಪಾದ್ಮ'ದ ಸಂವಾದವನ್ನು ಈ ವಿಷಯದಲ್ಲಿ ನೀಡಲಾಗಿದೆ–

ಶಂಖಚಕ್ರಾಂಕನಂ ಕುರ್ಯಾದಾತ್ಮನೋ ಬಾಹುಮೂಲಯೋಃ ।
ಕಲತ್ರಾಪತ್ಯಭೃತ್ಯೇಷು ಪಶ್ವಾದೀನಾಂ ಚ ಮುಕ್ತಯೇ ॥

ಸಾಧಕನಾದವನು ತಾನು ಹೇಗೆ ಬಾಹುಗಳ ಬುಡಗಳಲ್ಲಿ ಶಂಖ ಮತ್ತು ಚಕ್ರಗಳ ಮುದ್ರೆಯನ್ನು ಧರಿಸಬೇಕೋ ಹಾಗೆಯೇ ತನ್ನ ಪತ್ನಿ, ಮಕ್ಕಳು, ಸೇವಕರು, ಪಶ್ವಾದಿಗಳು –ಇವುಗಳೆಲ್ಲವುಗಳಿಗೆ ಮುದ್ರಾಧಾರಣೆ ಮಾಡಿಸಬೇಕು. ಇದು ಪರಂಪರಯಾ ಮುಕ್ತಿ ಸಾಧನವಾಗಬಲ್ಲುದು.

'ಆಗ್ನೇಯ'ದಲ್ಲೂ ಹೀಗೆಯೇ ಹೇಳಲಾಗಿದೆ–

ಶಂಖಚಕ್ರಾಂಕನಂ ಕುರ್ಯಾದಾತ್ಮನೋ ಬಾಹುಮೂಲಯೋಃ ।
ಕಲತ್ರಾಪತ್ಯಭೃತ್ಯೇಷು ಪಶ್ವಾದಿಷು ಚ ಸಂಪದೇ ॥

---

189. ಕುಕ್ಷೌ ಚಕ್ರಾಣಿ ಚತ್ವಾರಿ ಪಾರ್ಶ್ವೇ ದ್ವೇ ದಕ್ಷಿಣೇ ತಥಾ ।
ದ್ವೇ ಚಕ್ರೇ ದಕ್ಷಿಣೇ ಬಾಹೌ ಚಕ್ರಮೇಕಂ ಗಲೇ ಪುರಃ ॥
ತಥಾ ಪಶ್ಚಾದ್ ಧರೇದೇಕಂ ದ್ವೇ ಪಾರ್ಶ್ವೇ ದಕ್ಷಿಣೇ ತಥಾ ।
ಪೃಷ್ಠಾದಧಸ್ತಥಾ ಚೈಕಂ ಧಾರ್ಯಮೇವಂ ಸುದರ್ಶನಮ್ ॥
ಶಂಖದ್ವಯಂ ವಾಮಪಾರ್ಶ್ವೇ ಸ್ತನೇ ವಾಮೇ ದ್ವಯಂ ತಥಾ ।
ವಾಮಬಾಹೌ ದ್ವಯಂ ಧಾರ್ಯಮೇಕಮೇಕಂ ಗಲಸ್ಯ ಚ ॥
ಮೂಲೇ ಪಾರ್ಶ್ವೇ ತಥಾ ಧಾರ್ಯಂ ತಥಾ ಪಶ್ಚಾದ್ಗಲಸ್ಯ ಚ ।
ಪೃಷ್ಠಮೂಲೇ ತಥಾ ಚೈಕಂ ಹೃದಯೇ ಚೈಕಮೇವ ಚ ॥
ಧಾರ್ಯಮೇವಂ ಪಾಂಚಜನ್ಯಂ ಶಂಖಸ್ಥಾಂ ವಿದೋ ವಿದುಃ ।
ಹೃದಿ ಚೈಕಂ ಸ್ತನೇ ಚೈಕಂ ಬಾಹುಮೂಲೇ ದ್ವಯಂ ತಥಾ ॥
ಧಾರ್ಯಂ ಪದ್ಮಂ ದಕ್ಷಭಾಗೇ ಗದಾಂ ವಾಮೇ ತು ಪಾರ್ಶ್ವಕೇ ।
ಸ್ಥಾನೇಷ್ವೇತೇಷು ಸರ್ವತ್ರ ಮುದ್ರಾಂ ನಾರಾಯಣಾಹ್ವಯಾಮ್ ।
ಅಧೋ ಭಾಗೇ ಧರೇದ್‌ವಿದ್ವಾನ್ ಕವಚಾಕಾರತಃ ಸುಧೀಃ ॥ –ಪ್ರಕಾಶಸಂಹಿತಾ

* ಧಾರ್ಯಾಃ ಪಂಚ ತಥಾ ಮುದ್ರಾಃ ಬ್ರಹ್ಮಸ್ಥಾನೇ ವಿಶೇಷತಃ । –ಕಪಿಂಜಲಿಸಂಹಿತಾ

ಇದರಿಂದ ಸ್ತ್ರೀಯರೂ ಚಕ್ರಶಂಖಗಳ ತಪ್ತಮುದ್ರಾಧಾರಣೆಯನ್ನೂ, ಪ್ರತಿನಿತ್ಯ ಗೋಪೀಚಂದನದಿಂದ ಚಕ್ರಶಂಖಗಳ ಚಿಹ್ನೆಯ ಧಾರಣೆಯನ್ನೂ ನಡೆಸಬೇಕೆಂದು ಸಿದ್ಧಿಸುವುದು.

'ಸ್ಮೃತಿಮುಕ್ತಾವಲಿ'ಯಲ್ಲಿ ತಪ್ತಮುದ್ರಾಧಾರಣೆಯ ಪ್ರಶಂಸೆ

ಸ್ಮೃತಿಮುಕ್ತಾವಲಿಯಲ್ಲಿ ಉಪನಯನಸಂಸ್ಕಾರವನ್ನು ನಿರೂಪಿಸುವಾಗ ಆ ಸಂಸ್ಕಾರಕ್ಕೆ ಅಂಗವಾಗಿ ತಪ್ತಮುದ್ರಾಧಾರಣೆಯ ಬಗ್ಗೆ ಅನೇಕ ಮಾಹಿತಿಗಳನ್ನು ನೀಡಲಾಗಿದೆ.

ತಪ್ತಮುದ್ರಾಧಾರಣೆ ಯಾವಾಗ?

'ವಸಿಷ್ಠಸ್ಮೃತಿ'ಯ ಪ್ರಕಾರ ತಪ್ತಮುದ್ರಾಧಾರಣೆಯ ಕಾಲ–

ಚಕ್ರಸ್ಯ ಧಾರಣೇ ಕಾಲಂ ಬ್ರಾಹ್ಮಣಾನಾಂ ವಿದುರ್ಬುಧಾಃ ।
ಜಾತಕರ್ಮಣಿ ವೈ ಕುರ್ಯಾಚ್ಚೌಲೋಪನಯನೇಽಪಿ ವಾ ।
ಮಂತ್ರಗ್ರಹಣಕಾಲೇ ವಾ ಚಕ್ರಂ ಧಾರ್ಯಂ ವಿಧಾನತಃ ॥

ನಾಮಕರಣದ ಸಂದರ್ಭದಲ್ಲಿ, ಚೌಲದ ಸಂದರ್ಭದಲ್ಲಿ, ಉಪನಯನದ ಸಂದರ್ಭದಲ್ಲಿ ಹಾಗೂ ಮಂತ್ರಗ್ರಹಣದ ಸಂದರ್ಭದಲ್ಲಿ ವಿಧಿವತ್ತಾಗಿ ತಪ್ತಚಕ್ರಧಾರಣೆ ಮಾಡಿಸಿಕೊಳ್ಳಬೇಕೆಂದು ಜ್ಞಾನಿಗಳು ಅಭಿಪ್ರಾಯಪಡುವರು.

ವೃದ್ಧಮನುಸ್ಮೃತಿಯಲ್ಲಿ–

ಉದ್ವಾಹಸಮಯೇ ಸ್ತ್ರೀಣಾಂ ಪುಂಸಾಂ ಚೈವೋಪನಾಯಕೇ ।
ಚಕ್ರಸ್ಯ ಧಾರಣಂ ಪ್ರೋಕ್ತಂ ಮಂತ್ರೈಃ ಪಂಚಾಯುಧಾನಿ ವಾ ॥

ಸ್ತ್ರೀಯರಿಗೆ ಮದುವೆಯ ಸಂದರ್ಭದಲ್ಲೂ, ಪುರುಷರಿಗೆ ಉಪನಯನದ ಸಂದರ್ಭದಲ್ಲೂ ಚಕ್ರದ ಧಾರಣೆ ಅಥವಾ ಭಗವಂತನ ಐದೂ ಆಯುಧಗಳ ಧಾರಣೆ ಮಾಡಿಸಿಕೊಳ್ಳಬೇಕೆಂದು ತಿಳಿಸಲಾಗಿದೆ.

ದೇವತೆಗಳೂ ತಪ್ತಮುದ್ರಾಧಾರಣಾಧಿಕಾರಿಗಳು

'ಸ್ಮೃತಿಮುಕ್ತಾವಲಿ'ಯಲ್ಲಿ ತಪ್ತಮುದ್ರಾಧಾರಣೆಯ ವಿಷಯದಲ್ಲಿ ಶ್ರುತಿಗಳೂ, ಸ್ಮೃತಿಗಳೂ, ಇತಿಹಾಸವೂ, ಆಗಮಗಳೂ, ಪುರಾಣಗಳೂ ಪ್ರಮಾಣಗಳಾಗಿವೆ ಎಂದು ವಿಸ್ತಾರವಾಗಿ ಅವನ್ನೆಲ್ಲ ಉದಾಹರಿಸಿ, ಶ್ರುತಿವಾಕ್ಯಗಳಿಗೆ ತಪ್ತಮುದ್ರಾಧಾರಣೆಯಲ್ಲೇ ತಾತ್ಪರ್ಯ ಎಂಬುದನ್ನೂ ಸಮರ್ಥಿಸಿ, ತಪ್ತಮುದ್ರಾಧಾರಣೆಗೆ ದೇವತೆಗಳೂ ಅಧಿಕಾರಿಗಳೆಂಬುದಕ್ಕೆ 'ಸ್ಕಾಂದ'ದ ಒಂದು ಆಖ್ಯಾಯಿಕೆಯನ್ನು ಉದಾಹರಿಸಲಾಗಿದೆ– ವೃತ್ರಾಸುರನಿಂದ ಸೋತ ದೇವತೆಗಳು ಭಗವಂತನಲ್ಲಿ ಹೋಗಿ ತಮ್ಮನ್ನು ರಕ್ಷಿಸಲು ಪ್ರಾರ್ಥಿಸುವರು. ಆಗ ಭಗವಂತನು ಸೂಚಿಸುವ ಉಪಾಯ ಇದು–

ಮಮಾಯುಧೈಃ ಶಂಖಚಕ್ರೈಃ ಲಾಂಛಯಿತ್ವಾ ಸುರೋತ್ತಮಾಃ ।
ಯುಧ್ಯತಾಂ ಸಮರೇ ದೈತ್ಯೈರ್ಮತ್ಪ್ರಸಾದೇನ ದೇವತಾಃ ॥

ಮಮಾಯುಧಾಂಕಿತೇ ದೇಹೇ ಭವತಾಂ ಸುರಸತ್ತಮಾಃ ।
ಕ್ಷಯಂ ಯಾಸ್ಯಂತಿ ಸಮರೇ ಶತ್ರವೋ ಮತ್ಪ್ರಸಾದತಃ ॥

ನನ್ನ ಆಯುಧಗಳ ಚಿಹ್ನೆಗಳಿಗೆ ನಿಮ್ಮ ದೇಹಗಳನ್ನು ಒಳಪಡಿಸಿ ದೈತ್ಯರ ವಿರುದ್ಧ ಕಾದಾಡಿ. ನನ್ನ ಆಯುಧಗಳಿಂದ ಚಿಹ್ನಿತವಾದ ದೇಹದಿಂದ ಯುದ್ಧ ನಡೆಸಿದಾಗ, ನನ್ನ ಅನುಗ್ರಹದಿಂದಾಗಿ ದೈತ್ಯರು ನಾಶವಾಗಿಯೇ ತೀರುವರು. ಅದರಂತೆ ದೇವತೆಗಳು ಶಂಖಚಕ್ರಾದಿಚಿಹ್ನೆಗಳನ್ನು ಧರಿಸಿ ದೈತ್ಯರ ವಿರುದ್ಧ ಕಾದಾಡಿದಾಗ ಅನಾಯಾಸವಾಗಿ ಅವರನ್ನು ಸೋಲಿಸುವರು. ಅದರ ಬಳಿಕ ಎಲ್ಲ ದೇವತೆಗಳೂ ತಮ್ಮತಮ್ಮ ಸ್ಥಾನದಲ್ಲಿ ಭಗವಂತನ ಆಯುಧಗಳ ಚಿಹ್ನೆಗಳನ್ನು ಧರಿಸಿಕೊಂಡೇ ಇರುವರು. ಋಷಿಗಳೂ, ಸಿದ್ಧ ಗಂಧರ್ವರೂ, ಸರ್ಪಶ್ರೇಷ್ಠಗಳೂ ಶಂಖಚಕ್ರಾದಿಚಿಹ್ನೆಗಳನ್ನು ಧರಿಸಿಕೊಂಡೇ ಇರುವರು.

ಈ ಆಖ್ಯಾಯಿಕೆಯಿಂದ ದೇವತೆಗಳೇ ಮುಂತಾದವರೂ ಶಂಖಚಕ್ರಾದಿಗಳನ್ನು ಧರಿಸಿಕೊಂಡಿರುವರು –ಎಂಬ ವಿಚಾರದ ಜೊತೆಗೆ ಶಂಖಚಕ್ರಾದಿಗಳನ್ನು ಧರಿಸಿದಲ್ಲಿ ಆಸುರೀಶಕ್ತಿಗಳ ಆಕ್ರಮಣ ಆಗುವುದಿಲ್ಲ ಎಂದೂ ಸಿದ್ಧಿಸುವುದು.

ಏಕಾದಶಿಯಂದೂ ಸುದರ್ಶನಹೋಮ:

'ವಿಷ್ಣುಧರ್ಮ'ದಲ್ಲಿ ಏಕಾದಶಿಗೆ ಸಂಬಂಧಿಸಿದಂತೆ ಹೀಗೊಂದು ಮಾತು ಬಂದಿದೆ–

ವಿಷ್ಣೋರಹನಿ ಸಂಪ್ರಾಪ್ತೇ ಪಕ್ಷಯೋರುಭಯೋರಪಿ ।
ನಾನ್ನಂ ದದ್ಯಾತ್ ಜಲಂ ವಾಪಿ ನ ಹೋತವ್ಯಂ ಸುರಾದಿಷು ।
ಹವಿಷೋ ಗರ್ಹಿತತ್ವಾದ್ಧಿ ನ ಗೃಹ್ಣಂತಿ ದಿವೌಕಸಃ ॥

ಏಕಾದಶಿಯಂದು ಅನ್ನದಾನ, ಜಲದಾನ ಹೇಗೆ ಮಾಡಬಾರದೋ ಅಂತೆಯೇ ದೇವತೆಗಳಿಗೆ ಹೋಮಿಸಲೂ ಬಾರದು. ಅಂದು ಹವಿಸ್ಸು ನಿಂದಿತವಾಗಿರುವುದರಿಂದ ದೇವತೆಗಳು ಆ ಹವಿಸ್ಸನ್ನು ಸ್ವೀಕರಿಸುವುದಿಲ್ಲ.

ಆದರೆ ಏಕಾದಶಿಯಂದು ಸುದರ್ಶನಹೋಮದ ವಿಧಾಯಕಪ್ರಮಾಣ ಇರುವುದ ರಿಂದ ಸುದರ್ಶನಹೋಮವನ್ನು ನಡೆಸಬಹುದಾಗಿದೆ. ಪಂಚರಾತ್ರಾಗಮದಲ್ಲಿ ಏಕಾದಶಿ ಯಂದು ಸುದರ್ಶನಹೋಮವನ್ನು ವಿಧಿಸುವ ಪ್ರಮಾಣ ಹೀಗಿದೆ–

ಏಕಾದಶ್ಯಾಂ ಯದಾ ಬ್ರಹ್ಮನ್ ಸುದರ್ಶನಮಖೋ ಭವೇತ್ ।
ಅನ್ವಾಧಾನಂ ತು ದೇವಾನಾಂ ಮಂತ್ರಾನುಚ್ಚಾರ್ಯ ಕೇವಲಮ್ ।
ತತ್‌ಸ್ಥಾನೇ ವಿಷ್ಣುಮುದ್ದಿಶ್ಯ ಮೂಲೇನೈವ ಹುನೇತ್ ಸುಧೀಃ ॥

ಏಕಾದಶಿಯಂದು ಸುದರ್ಶನಹೋಮ ನಡೆಸುವುದಾದರೆ ಬರೇ ಮಂತ್ರಗಳನ್ನು ಉಚ್ಚರಿಸಿ ದೇವತೆಗಳ ಅನ್ವಾಧಾನ ನಡೆಸಬೇಕು. ದೇವತೆಗಳ ಸ್ಥಾನದಲ್ಲಿ ವಿಷ್ಣುವನ್ನೇ ಉದ್ದೇಶಿಸಿ ಮೂಲಮಂತ್ರದಿಂದಲೇ ಹೋಮಿಸಬೇಕು. ಆದುದರಿಂದ 'ನ ಹೋತವ್ಯಂ ಸುರಾದಿಷು........' ಇತ್ಯಾದಿ ವಾಕ್ಯಗಳಿಗೆ ವಿಷ್ಣುವ್ಯತಿರಿಕ್ತದೇವಾದಿಗಳ ಹೋಮನಿಷೇಧ ದಲ್ಲಷ್ಟೇ ತಾತ್ಪರ್ಯ.

ಆದ್ದರಿಂದ ತಪ್ತಮುದ್ರಾಧಾರಣೆಗೆ ಸಂಬಂಧಿಸಿದಂತೆ ಸುದರ್ಶನಹೋಮವನ್ನು ಏಕಾದಶಿಯಂದೂ ನಡೆಸಬಹುದಾಗಿದೆ.

* * *

ಸ್ಕಂದಪುರಾಣದಲ್ಲಿ ಮುದ್ರಾಧಾರಣೆ

ಸ್ಕಂದಪುರಾಣದ ವೈಷ್ಣವಖಂಡದಲ್ಲಿ (೩ನೇ ಅಧ್ಯಾಯ ೨೪ನೇ ಶ್ಲೋಕದಿಂದ ೬೭ನೇ ಶ್ಲೋಕದವರೆಗೆ) ೪೩ ಶ್ಲೋಕಗಳ ವ್ಯಾಪ್ತಿಯಲ್ಲಿ ಚಕ್ರಾದಿ ಮುದ್ರಾಧಾರಣೆಯ ಹಿರಿಮೆ ಗರಿಮೆಗಳನ್ನು ಪ್ರತಿಪಾದಿಸಲಾಗಿದೆ. ಅದನ್ನು ವಿಧಿ ಮುಖಸ್ತುತಿ ಹಾಗೂ ಮುದ್ರಾ ಧಾರಣೆಯ ವಿಧಾನ –ಎಂಬ ವಿಭಾಗಗಳಿಂದ ಹೀಗೆ ಸಂಗ್ರಹಿಸಿ ಪರಿಶೀಲಿಸಬಹುದು.

ವಿಧಿಮುಖದ ಸ್ತುತಿ:

೧. **ಪಾಪಂ ಸುಕೃತರೂಪಂ ತು ಜಾಯತೇ ತಸ್ಯ ದೇಹಿನಃ ।**
ಮಯಾಯುಧಾನಿ ದೃಶ್ಯಂತೇ ಲಿಖಿತಾನಿ ಕಲೌ ಯುಗೇ ॥

ಯಾರ ದೇಹದಲ್ಲಿ ನನ್ನ (ಪರಮಾತ್ಮನ) ಆಯುಧಗಳಾದ ಚಕ್ರಾದಿಗಳ ಚಿಹ್ನೆಗಳು ಧರಿಸಲ್ಪಟ್ಟಿವೆಯೋ ಅವನ ಪಾಪವೂ ಪುಣ್ಯವಾಗಿ ಪರಿಣಮಿಸುವುದು.

೨. **ನಾರಾಯಣಾಯುಧೈರ್ನಿತ್ಯಂ ಚಿಹ್ನಿತೋ ಯಸ್ಯ ವಿಗ್ರಹಃ ।**
ಪಾಪಕೋಟಿಪ್ರಯುಕ್ತಸ್ಯ ಕಿಂ ತಸ್ಯ ಕುರುತೇ ಯಮಃ ।

ಯಾರ ಶರೀರ ನಾರಾಯಣನ ಚಕ್ರಾದಿ ಆಯುಧಗಳಿಂದ ಅಂಕಿತವಾಗಿದೆಯೋ ಅಂತಹವನು ಕೋಟಿಗಟ್ಟಲೆ ಪಾಪಗಳನ್ನೆಸಗಿದ್ದರೂ ಯಮನು ಅವನಿಗೇನನ್ನೂ ಮಾಡಲಾರ.

೩. **ವಾಮೇ ಭುಜೇ ಗದಾ ಯಸ್ಯ ಲಿಖಿತಾ ದೃಶ್ಯತೇ ಕಲೌ ।**
ಗದಾಧರೋ ಗಯಾಪುಣ್ಯಂ ಪ್ರತ್ಯಹಂ ತಸ್ಯ ಯಚ್ಛತಿ ॥

ಯಾರ ಎಡಭುಜದಲ್ಲಿ ಕೌಮೋದಕೀಗದೆಯ ಚಿಹ್ನೆ ಬರೆಯಲ್ಪಡುವುದೋ ಅಂತಹವನಿಗೆ ಗದಾಧರ ಶ್ರೀಹರಿಯು ಪ್ರತಿನಿತ್ಯ ಗಯಾವಾಸದ ಪುಣ್ಯವನ್ನು ನೀಡುವನು.

೪. **ಮಮಾಯುಧಾಂಕಿತಂ ದೇಹಂ ಗೋಪೀಚಂದನಮೃತ್ಸ್ನಯಾ ।**
ಪ್ರಯಾಗಾದಿಷು ತೀರ್ಥೇಷು ಸ ಗತ್ವಾ ಕಿಂ ಕರಿಷ್ಯತಿ ॥

ಭಗವಂತನ ಆಯುಧಗಳಿಂದ ಗೋಪೀಚಂದನದ ಮೂಲಕ ಯಾರ ದೇಹವು ಚಿಹ್ನಿತವಾಗಿದೆಯೋ ಅಂತಹವನಿಗೆ ಪ್ರಯಾಗಾದಿ ತೀರ್ಥಕ್ಷೇತ್ರದ ಯಾತ್ರೆಯ ಆವಶ್ಯಕತೆ ಇಲ್ಲ. ಅದರಿಂದ ಗಳಿಸಬೇಕಾದ ಪುಣ್ಯ ಆ ಚಿಹ್ನೆಗಳ ಧಾರಣೆಯಿಂದಲೇ ಸಿದ್ಧಿಸುವುದು.

೫. **ಯದಾ ಯದಾ ಪ್ರಪಶ್ಯೇತ ದೇಹಂ ಶಂಖಾದಿ ಚಿಹ್ನಿತಮ್ ।**
ತದಾ ತದಾ ಪ್ರಸನ್ನೋಽಹಂ ಪಾಪಂ ತಸ್ಯ ದಹಾಮಿ ವೈ ॥

ಶಂಖಾದಿಗಳಿಂದ ಚಿಹ್ನಿತವಾದ ದೇಹವನ್ನು ಯಾವಾಗ ಯಾವಾಗ ನಾನು ಕಾಣುವೆನೋ ಆವಾಗೆಲ್ಲ ಪ್ರಸನ್ನನಾಗಿ ಅವನ ಪಾಪವನ್ನು ಸುಟ್ಟುಹಾಕುವೆನು.

೬. ತಿಷ್ಠತೇ ಯಸ್ಯ ದೇಹೇ ತು ಅಹೋರಾತ್ರಂ ದಿನೇ ದಿನೇ ।
ಶಂಖಚಕ್ರಗದಾಪದ್ಮ ಲಿಖಿತಂ ಸ ಮದಾತ್ಮಕಃ ॥

ಯಾರ ದೇಹದಲ್ಲಿ ಹಗಲುರಾತ್ರಿಗಳಲ್ಲೂ ಶಂಖಚಕ್ರಗದಾಪದ್ಮಗಳ ಚಿಹ್ನೆ ಬರೆಯಲ್ಪಡುವುದೋ ಅಂತಹವನಲ್ಲಿ ಭಗವಂತನು ವಿಶೇಷವಾಗಿ ಸನ್ನಿಹಿತನಾಗಿರುವನು.

೭. ನಾರಾಯಣಾಯುಧೈರ್ಯುಕ್ತಂ ಕೃತ್ವಾSತ್ಮಾನಂ ಕಲೌ ಯುಗೇ ।
ಯತ್ಪುಣ್ಯಂ ಕರ್ಮ ಕುರುತೇ ಮೇರುತುಲ್ಯಂ ನ ಸಂಶಯಃ ॥

ಭಗವಂತನ ಚಕ್ರಾದಿ ಆಯುಧಗಳಿಂದ ಚಿಹ್ನಿತವಾದ ಶರೀರದ ಮೂಲಕ ನಡೆಸುವ ಪುಣ್ಯಕಾರ್ಯಕ್ಕೆ ಮೇರು ಪರ್ವತದಷ್ಟು ದೊಡ್ಡ ಪ್ರಮಾಣದಲ್ಲಿ ಪುಣ್ಯ ಸಿದ್ಧಿಸುವುದು.

೮. ಶಂಖಾಯುಧಾಂಕಿತೋ ಭಕ್ತ್ಯಾ ಯಃ ಶ್ರಾದ್ಧಂ ಕುರುತೇ ಸುತ ।
ವಿಧಿಹೀನಂ ತು ಸಂಪೂರ್ಣಂ ಪಿತೃಣಾಂ ದತ್ತಮಕ್ಷಯಮ್ ॥

ಶಂಖಾಯುಧದಿಂದ ಚಿಹ್ನಿತನಾಗಿ ಭಕ್ತಿಪೂರ್ವಕವಾಗಿ ಶ್ರಾದ್ಧವನ್ನು ನಡೆಸಿದನೆಂದರೆ, ಅದು ಇತರ ಯಾವುದೇ ವಿಧಿಹೀನವಾಗಿದ್ದರೂ ಸಂಪೂರ್ಣವೆನಿಸಿ ಪಿತೃಗಳಿಗೆ ಅಕ್ಷಯ ಫಲಪ್ರದವಾಗುವುದು.

೯. ಯಥಾSಗ್ನಿರ್ದಹತೇ ಕಾಷ್ಠಂ ವಾಯುನಾ ಪ್ರೇಷಿತೋ ಭೃಶಮ್ ।
ತಥಾ ದಹ್ಯಂತಿ ಪಾಪಾನಿ ದೃಷ್ಟ್ವಾ ಮ ಆಯುಧಾನಿ ವೈ ॥

ವಾಯುವಿನಿಂದ ಪ್ರೇರಿತವಾದ ಅಗ್ನಿ ಹೇಗೆ ಕಟ್ಟಿಗೆಯನ್ನು ಸುಟ್ಟುಹಾಕುವುದೋ ಹಾಗೆ ಭಗವಂತನ ಆಯುಧಗಳ ದರ್ಶನ ಪಾಪಗಳನ್ನು ಸುಟ್ಟುಹಾಕಬಲ್ಲದು.

೧೦. ಮಮ ನಾಮಾಂಕಿತಾಂ ಮುದ್ರಾಮಷ್ಟಾಕ್ಷರಸಮನ್ವಿತಾಮ್ ।
ಶಂಖಾದಿಸ್ವಾಯುಧೈರ್ಯುಕ್ತಾಂ ಸ್ವರ್ಣರೌಪ್ಯಮಯೀಮಪಿ ।

ಧತ್ತೇ ಭಗವತೋ ಯಸ್ತು ಕಲಿಕಾಲೇ ವಿಶೇಷತಃ ।
ಪ್ರಹ್ಲಾದಸ್ಯ ಸಮೋ ಜ್ಞೇಯೋ ನಾನ್ಯಥಾ ಮಮ ವಲ್ಲಭಃ ।

ಯಾರು ಭಗವಂತನ ಶಂಖಾದಿ ಆಯುಧಗಳಿಂದ ಕೂಡಿದ ಹಾಗೂ ಭಗವಂತನ ನಾರಾಯಣ ನಾಮದಿಂದ ಚಿಹ್ನಿತವಾದ ಚಿನ್ನದ ಅಥವಾ ಬೆಳ್ಳಿಯ ಮುದ್ರೆಯಿಂದ ಚಿಹ್ನೆಯನ್ನು ಧರಿಸುವನೋ ಅಂತಹವನು ಪ್ರಹ್ಲಾದನಂತೆ ಭಕ್ತನೆಂದು ಪರಿಗಣಿಸಲರ್ಹ ನಾಗುವನು.

೧೧. ಶಂಖಾಂಕಿತತನುರ್ವಿಪ್ರೋ ಭುಂಕ್ತೇ ವೈ ಯಸ್ಯ ವೇಶ್ಮನಿ ।
ತದನ್ನಂ ಸ್ವಯಮಶ್ನಾಮಿ ಪಿತೃಭಿಃ ಸಹ ಪುತ್ರಕ ॥

ಯಾರ ಮನೆಯಲ್ಲಿ ಶಂಖಾಂಕಿತ ದೇಹವುಳ್ಳವನಾಗಿ ಅನ್ನವನ್ನು ಉಣ್ಣುವನೋ ಆ ಅನ್ನವನ್ನು ಭಗವಂತನೇ ಪಿತೃಗಳಿಂದ ಕೂಡಿಕೊಂಡು ಉಂಡಂತೆ. ಅರ್ಥಾತ್ ಅದರಿಂದ ಭಗವಂತನಿಗೂ ಪಿತೃಗಳಿಗೂ ತೃಪ್ತಿ ಆಗುವುದು.

೧೨. ಕೃಷ್ಣಾಯುಧಾಂಕಿತೋ ಯಸ್ತು ಶ್ಮಶಾನೇ ಮ್ರಿಯತೇ ಯದಿ ।
ಪ್ರಯಾಗೇ ಯಾ ಗತಿಃ ಪ್ರೋಕ್ತಾ ಸಾ ಗತಿಸ್ತಸ್ಯ ಮಾನದ ॥

ಭಗವಂತನ ಆಯುಧಗಳಿಂದ ಚಿಹ್ನಿತವಾದ ಶರೀರವುಳ್ಳವನಾಗಿ ಯಾರು ಶ್ಮಶಾನದಲ್ಲಿ ಸಾಯುವನೋ ಅಂತಹವನಿಗೆ ಪ್ರಯಾಗದಲ್ಲಿ ಮರಣ ಹೊಂದಿದರೆ ಎಂತಹ ಸದ್ಗತಿ ಆಗುವುದೋ ಅಂತಹ ಸದ್ಗತಿ ದೊರಕುವುದು.

೧೩. **ಮಮಾಯುಧೈಃ ಕಲೌ ನಿತ್ಯಂ ಮಂಡಿತೋ ಯಸ್ಯ ವಿಗ್ರಹಃ ।**
ತತ್ರಾಽಶ್ರಮಂ ಪ್ರಕುರ್ವಂತಿ ವಿಬುಧಾ ವಾಸವಾದಯಃ ॥

ಯಾರ ಶರೀರ ಭಗವಂತನ ಆಯುಧಗಳಿಂದ ನಿತ್ಯ ಅಲಂಕೃತವಾಗಿರುವುದೋ ಅಂತಹ ಶರೀರವನ್ನು ಇಂದ್ರಾದಿ ದೇವತೆಗಳು ತಮ್ಮ ಆಶ್ರಮವನ್ನಾಗಿ ಪರಿಗಣಿಸುವರು.

೧೪. **ಯಃ ಕರೋತಿ ಚ ಮೇ ಪೂಜಾಂ ಮಮ ಶಸ್ತ್ರಾಂಕಿತೋ ನರಃ ।**
ಅಪರಾಧಸಹಸ್ರಾಣಿ ನಿತ್ಯಂ ತಸ್ಯ ಹರಾಮ್ಯಹಮ್ ॥

ಯಾರು ಭಗವಂತನ ಚಕ್ರ ಮುಂತಾದ ಆಯುಧಗಳಿಂದ ಚಿಹ್ನಿತನಾಗಿ ಭಗವಂತನ ಪೂಜೆಯನ್ನು ನಡೆಸುವನೋ ಅಂತಹವನ ಸಾವಿರಾರು ಅಪರಾಧಗಳನ್ನು ಭಗವಂತನು ಸಹಿಸುವನು.

೧೫. **ಅಷ್ಟಾಕ್ಷರಾಂಕಿತಾ ಮುದ್ರಾ ಯಸ್ಯ ಧಾತುಮಯೀಕರೇ ।**
ಶಂಖಪದ್ಮಾದಿಭಿರ್ಯುಕ್ತಾ ಪೂಜ್ಯತೇಽಸೌ ಸುರಾಸುರೈಃ ॥

ಯಾರ ಧಾತುಮಯಿ ಶರೀರದಲ್ಲಿ ಅಷ್ಟಾಕ್ಷರಮಂತ್ರದ ಮುದ್ರೆ ಹಾಗೂ ಶಂಖಚಕ್ರಾದಿಗಳ ಮುದ್ರೆ –ಇವು ಕಾಣಿಸುವವೋ ಅಂತಹ ವ್ಯಕ್ತಿ ಸುರಾಸುರರಿಂದಲೂ ಪೂಜ್ಯನೆನಿಸುವನು.

೧೬. **ಧೃತಾ ನಾರಾಯಣೀ ಮುದ್ರಾ ಪ್ರಹ್ಲಾದೇನ ಪುರಾ ಕರೇ ।**
ವಿಭೀಷಣೇನ ಬಲಿನಾ ಧ್ರುವೇಣ ಚ ಶುಕೇನ ಚ ।
ಮಾಂಧಾತ್ರಾ ಹ್ಯಂಬರೀಷೇಣ ಮಾರ್ಕಂಡೇಯಮುಖೈರ್ದ್ವಿಜೈಃ ॥

ನಾರಾಯಣೀ ಮುದ್ರೆಯನ್ನು ಹಿಂದೆ ಪ್ರಹ್ಲಾದ ಧರಿಸಿದ್ದನು. ಹಾಗೆಯೇ ವಿಭೀಷಣ, ಬಲಿ, ಧ್ರುವ, ಶುಕ, ಮಾಂಧಾತೃ, ಅಂಬರೀಷ ಮುಂತಾದ ರಾಜರೂ ಮಾರ್ಕಂಡೇಯ ಮುಂತಾದ ಬ್ರಾಹ್ಮಣರೂ ಧರಿಸಿದ್ದರು.

೧೭. **ಶಂಖಾದಿಚಿಹ್ನಿತೈಃ ಶಸ್ತ್ರೈರ್ದೇಹಂ ಕೃತ್ವಾ ಚ ಮಾನದ ।**
ಏವಮಾರಾಧ್ಯ ಮಾಂ ಪ್ರಾಪ್ತಂ ಸಮೀಹಿತಫಲಂ ಮಹತ್ ॥

ಶಂಖಾದಿ ಚಿಹ್ನೆಗಳಿಂದ ದೇಹವನ್ನು ಅಲಂಕರಿಸಿಕೊಂಡು ಭಗವಂತನ ಆರಾಧನೆ ನಡೆಸಿದಲ್ಲಿ ಇಷ್ಟವಾದ ಫಲವೆಲ್ಲ ದೊರಕುವುದು ಎಂದೇ ಭಾವಿಸಬಹುದು.

೧೮. **ಗೋಪೀಚಂದನಮೃತ್ಸ್ನಯಾ ಲಿಖಿತೋ ಯಸ್ಯ ವಿಗ್ರಹಃ ।**
ಶಂಖಚಕ್ರಾದಿಪದ್ಮಾಂಕೋ ದೇಹೇ ತಸ್ಯ ವಸಾಮ್ಯಹಮ್ ॥

ಯಾರ ಶರೀರವು ಗೋಪೀಚಂದನದಿಂದ ಶಂಖ, ಚಕ್ರ, ಪದ್ಮಾದಿಗಳಿಂದ ಬರೆಯಲ್ಪಡುವುದೋ ಅಂತಹವನ ಶರೀರದಲ್ಲಿ ಭಗವಂತನು ಶಂಖಚಕ್ರಾದಿಧಾರಕನಾಗಿ ನೆಲೆಸುವನು.

೧೯. **ಮಮ ಚಕ್ರಾಂಕಿತೋ ದೇಹಃ ಪವಿತ್ರ ಇತಿ ವೈ ಶ್ರುತಿಃ ।**

ಭಗವಂತನ ಸುದರ್ಶನಚಕ್ರದಿಂದ ಚಿಹ್ನಿತವಾದ ದೇಹ ಪರಮಪವಿತ್ರ ಎಂದು ಶ್ರುತಿ ಘೋಷಿಸುತ್ತಿದೆ.

೨೦. **ಮಮ ಚಕ್ರಾಂಕಕವಚಮಭೇದ್ಯಂ ದೇವದಾನವೈಃ ।**
ಅಜೇಯಂ ಸರ್ವಭೂತಾನಾಂ ಶತ್ರೂಣಾಂ ರಕ್ಷಸಾಮಪಿ ॥

ಭಗವಂತನ ಚಕ್ರದಿಂದ ಅಂಕಿತವಾದ ಕವಚ ದೇವತೆಗಳಿಂದಲೂ ದಾನವರಿಂದಲೂ ಅಭೇದ್ಯವಾದುದು. ಸಕಲ ಭೂತಗಳಿಂದಲೂ ರಾಕ್ಷಸರಿಗೂ ಶತ್ರುಗಳಿಗೂ ಜಯಿಸಲು ಅಶಕ್ಯವಾದುದು.

೨೧. **ಮಮ ಚಕ್ರಾಂಕಕವಚಂ ಶರೀರೇ ಯಸ್ಯ ತಿಷ್ಠತಿ ।**
ನಾಽಶುಭಂ ವಿದ್ಯತೇ ತಸ್ಯ ಗೃಹಪುತ್ರಾದಿಕಸ್ಯ ಹಿ ॥

ಭಗವಂತನ ಚಕ್ರದಿಂದ ಚಿಹ್ನಿತವಾದ ಕವಚ ಯಾರ ಶರೀರದಲ್ಲಿ ಇರುವುದೋ ಅವನಿಗಾಗಲೀ ಅವನ ಮನೆ, ಪುತ್ರಾದಿಗಳಿಗಾಗಲೀ ಅಶುಭ ಆಗಲಾರದು.

ಚಕ್ರಾದಿಧಾರಣೆಯ ವಿಧಾನದ ಬಗ್ಗೆ

೨೨. **ಕೃತ್ವಾ ಕಾಷ್ಠಮಯಂ ಬಿಂಬಂ ಮಮ ಶಸ್ತ್ರೈಃ ಸುಚಿಹ್ನಿತಮ್ ।**
ಯೋ ವಾ ಅಂಕಯತೇ ದೇಹೇ ತತ್ಸಮೋ ನಾಸ್ತಿ ವೈಷ್ಣವಃ ॥

ಯಾರು ಮರದ ಪ್ರತಿಮೆಯನ್ನು ಮಾಡಿ ಅದರಲ್ಲಿ ಭಗವಂತನ ಚಕ್ರಾದಿ ಚಿಹ್ನೆಗಳನ್ನು ಮೂಡಿಸಿ, ಅದರಿಂದ ದೇಹದಲ್ಲಿ ಚಿಹ್ನೆಗಳನ್ನು ಹಾಕಿಕೊಳ್ಳುವನೋ ಅಂತಹವನು ಉತ್ತಮ ವೈಷ್ಣವ.

೨೩. **ಸೌವರ್ಣಂ ರಾಜತಂ ತಾಮ್ರಂ ಕಾಂಸ್ಯಮಾಯಸಮೇವ ಚ ।**
ಚಕ್ರಂ ಕೃತ್ವಾ ತು ಮೇಧಾವೀ ಧಾರಯೀತ ವಿಚಕ್ಷಣಃ ॥

ಮೇಧಾವಿ ಎನಿಸುವ ಭಕ್ತನು ಚಿನ್ನದ, ಬೆಳ್ಳಿಯ, ತಾಮ್ರದ, ಕಂಚಿನ ಅಥವಾ ಕಬ್ಬಿಣದ ಚಕ್ರವನ್ನು ಮಾಡಿಸಿ ಅದನ್ನು ಧರಿಸಿಕೊಳ್ಳಬೇಕು.

೨೪. **ದ್ವಾದಶಾರಂ ತು ಷಟ್ಕೋಣಂ ವಲಿತ್ರಯವಿಭೂಷಿತಮ್ ।**
ಏವಂ ಸುದರ್ಶನಂ ಚಕ್ರಂ ಕಾರಯೀತ ವಿಚಕ್ಷಣಃ ।

ಹನ್ನೆರಡು ಸುತ್ತುಗಳುಳ್ಳ ಆರು ಮೂಲೆಗಳುಳ್ಳ ಮೂರು ಪದರಗಳಿಂದ ಅಲಂಕೃತವಾದ ಸುದರ್ಶನಚಕ್ರವನ್ನು ಮಾಡಿಸಬೇಕು.

೨೫. **ಉಪವೀತಾದಿವದ್ಧಾರ್ಯಾಃ ಶಂಖಚಕ್ರಗದಾಃ ಸದಾ ।**
ಬ್ರಾಹ್ಮಣೈಶ್ಚ ವಿಶೇಷೇಣ ವೈಷ್ಣವೈಶ್ಚ ವಿಶೇಷತಃ ॥

ವೈಷ್ಣವರಾದವರು ಉಪವೀತ, ಶಿಖಾದಿಗಳಂತೆ ಶಂಖಚಕ್ರಗದೆಗಳನ್ನೂ ಯಾವಾಗಲೂ ಧರಿಸಬೇಕು. ವಿಶೇಷವಾಗಿ ಬ್ರಾಹ್ಮಣರು ಅದಕ್ಕಿಂತಲೂ ವಿಶೇಷವಾಗಿ ವೈಷ್ಣವರು ಧರಿಸಲೇ ಬೇಕು.

೨೬. **ಉಪವೀತಂ ಶಿಖಾ ಯದ್ವಚ್ಚಕ್ರಂ ಲಾಂಛನಸಂಯುತಮ್ ।**
ಚಕ್ರಲಾಂಛನಹೀನಸ್ಯ ವಿಪ್ರಸ್ಯ ವಿಫಲಂ ಭವೇತ್ ॥

ಉಪವೀತ, ಶಿಖಾಗಳಂತೆ ಚಕ್ರದ ಚಿಹ್ನೆಯನ್ನು ಧರಿಸಬೇಕು. ಚಕ್ರದ ಚಿಹ್ನೆ ಇಲ್ಲದ ವಿಪ್ರನು ನಡೆಸಿದ ಶಾಸ್ತ್ರೀಯ ಕ್ರಿಯೆಗಳೆಲ್ಲ ನಿಷ್ಫಲವಾಗುವವು.

೨೭. **ಚಕ್ರಾಂಕಿತಾಯ ದಾತವ್ಯಂ ಹವ್ಯಂ ಕವ್ಯಂ ವಿಚಕ್ಷಣೈಃ**

ಜ್ಞಾನಿಗಳಾದವರು ಚಕ್ರಾಂಕಿತನಾದ ಬ್ರಾಹ್ಮಣನಿಗೇ ದೇವಕಾರ್ಯದ ವಸ್ತುವನ್ನೂ ಪಿತೃಕಾರ್ಯದ ವಸ್ತುವನ್ನೂ ದಾನನೀಡಬೇಕು.

೨೮. **ದಕ್ಷಿಣೇ ಚ ಭುಜೇ ವಿಪ್ರೋ ಬಿಭೃಯಾದ್ವೈ ಸುದರ್ಶನಮ್ ।**
ಸವ್ಯೇ ಚ ಶಂಖಂ ಬಿಭೃಯಾದಿತಿ ವೇದವಿದೋ ವಿದುಃ ॥

ಬ್ರಾಹ್ಮಣರು ತನ್ನ ಬಲಭುಜದಲ್ಲಿ ಸುದರ್ಶನವನ್ನು ಧರಿಸಬೇಕು. ಎಡಭುಜದಲ್ಲಿ ಶಂಖವನ್ನು ಧರಿಸಬೇಕು ಎಂದು ವೇದಜ್ಞಾನಿಗಳು ಅಭಿಪ್ರಾಯಪಡುವರು.

೨೯. **ತತ್ತನ್ಮಂತ್ರೇಣ ಮಂತ್ರಜ್ಞಃ ಪ್ರತಿಷ್ಠಾಪ್ಯ ಪೃಥಕ್ ಪೃಥಕ್ ।**

ಮಂತ್ರಜ್ಞನಾದವನು ಆಯಾ ಆಯುಧಕ್ಕೆ ಸಂಬಂಧಿಸುವ ಮಂತ್ರದಿಂದ ಆಯಾ ಆಯುಧದ ಚಿಹ್ನೆಯನ್ನು ಪ್ರತ್ಯೇಕವಾಗಿ ಧರಿಸಿಕೊಳ್ಳಬೇಕು.

೩೦. **ತಸ್ಮಾತ್ ಸರ್ವಪ್ರಯತ್ನೇನ ಚಕ್ರಾದೀನ್ ಧಾರಯೇತ್ ಸದಾ ।**

ಆದುದರಿಂದ ಎಲ್ಲ ಯತ್ನವನ್ನು ಮಾಡಿ ಚಕ್ರಾದಿ ಆಯುಧಗಳ ಚಿಹ್ನೆಯನ್ನು ಯಾವಾಗಲೂ ಧರಿಸಬೇಕು.

೩೧. **ಧಾರಣಾನಂತರಂ ಬ್ರೂಯಾತ್ತತ್ರ ಚೈವಂ ದ್ವಿಜೋತ್ತಮಃ ।**
ಪುತ್ರಮಿತ್ರಕಲತ್ರಾದಿರ್ಯಃ ಕಶ್ಚಿನ್ಮತ್ಪರಿಗ್ರಹಃ ।
ಸಹ ದೇಹೇನ ಸರ್ವೋಽಸೌ ವಿಷ್ಣುಪ್ರೀತ್ಯೈ ಮಯಾರ್ಪಿತಃ ॥

ದೇಹ ಹಾಗೂ ದೇಹ ಬಂಧುಗಳಾದ ಪುತ್ರ, ಪತ್ನಿ, ಮಿತ್ರ ಮುಂತಾದವರಿಗೆಲ್ಲ ಚಕ್ರಾದಿಗಳ ಚಿಹ್ನೆಯ ಧಾರಣೆ ನಡೆಸಿ ಬಳಿಕ ಹೀಗೆ ಹೇಳಬೇಕು– 'ನಾನು ಯಾವ ಪುತ್ರ, ಮಿತ್ರ, ಪತ್ನಿ ಇತ್ಯಾದಿಗಳನ್ನು ಸ್ವೀಕರಿಸಿರುವೆನೋ ಈ ದೇಹದಿಂದ ಸಹಿತವಾಗಿ ಅವರೆಲ್ಲ ಶ್ರೀವಿಷ್ಣುವಿನ ಪ್ರೀತಿಗಾಗಿ ಸಮರ್ಪಿತರು' ಎಂದು.

೩೨. **ಶಂಖಚಕ್ರಾಂಕಿತಂ ದೃಷ್ಟ್ವಾ ಯೇ ನಿಂದಂತಿ ನರಾಧಮಾಃ ।**
ಅವಲೋಕ್ಯ ಮುಖಂ ತೇಷಾಮಾದಿತ್ಯಮವಲೋಕಯೇತ್ ।
ಶ್ರೀಕೃಷ್ಣನಾಮ ಚೋಚ್ಚಾರ್ಯ ಶುದ್ಧೋ ಭವತಿ ನಾನ್ಯಥಾ ॥

ಯಾವ ಕೆಟ್ಟ ಮನುಷ್ಯರು ಶಂಖಚಕ್ರಾಂಕಿತ ವ್ಯಕ್ತಿಯನ್ನು ನಿಂದಿಸುವರೋ ಅಂತಹವರ ಮುಖವನ್ನು ಕಂಡಲ್ಲಿ ಅದರ ಪ್ರಾಯಶ್ಚಿತ್ತರೂಪದಿಂದ ಸೂರ್ಯನನ್ನು ಕಾಣಬೇಕು. ಹಾಗೂ ಶ್ರೀಕೃಷ್ಣನಾಮವನ್ನು ಉಚ್ಚರಿಸಬೇಕು. ಹಾಗಾದರಷ್ಟೇ ಪವಿತ್ರನಾಗ ಬಹುದು.

ಚಕ್ರಾದಿಗಳ ಸ್ಮರಣೆ

'ತಪ್ತಮುದ್ರಾಧಾರಣೆ' ಮಾಡಿಸಿಕೊಳ್ಳುವಾಗಲೂ, ಗೋಪೀಚಂದನದಿಂದ ಮುದ್ರೆಗಳನ್ನು ಧರಿಸಿಕೊಳ್ಳುವಾಗಲೂ ಆಯಾ ಮುದ್ರೆಗಳು ಸಂಕೇತಿಸುವ ಚಕ್ರಾದಿಗಳನ್ನು ಸ್ಮರಿಸಿಕೊಳ್ಳಬೇಕು.

ಸುದರ್ಶನಚಕ್ರದ ಸ್ಮರಣೆ:

ಸುದರ್ಶನ ಮಹಾಜ್ವಾಲ ಕೋಟಿಸೂರ್ಯಸಮಪ್ರಭ ।
ಅಜ್ಞಾನಾಂಧಸ್ಯ ಮೇ ನಿತ್ಯಂ ವಿಷ್ಣೋರ್ಮಾರ್ಗಂ ಪ್ರದರ್ಶಯ ॥

ಹೇ ಸುದರ್ಶನಚಕ್ರ! ನೀನು ಮಹಾಜ್ವಾಲೆಗಳನ್ನೊಳಗೊಂಡವನು. ನಿನ್ನ ಪ್ರಭೆ ಕೋಟಿಸೂರ್ಯರ ಪ್ರಭೆಗೆ ಸಮಾನವಾದುದು. ಅಂತಹ ನೀನು ಅಜ್ಞಾನದಿಂದ ಕುರುಡನಾದ ನನಗೆ ಯಾವಾಗಲೂ ಶ್ರೀವಿಷ್ಣುವಿನ ಮಾರ್ಗವನ್ನು ತೋರಿಸಿಕೊಡು.

ಪಾಂಚಜನ್ಯಶಂಖದ ಸ್ಮರಣೆ:

ಪಾಂಚಜನ್ಯ ನಿಜಧ್ವಾನಧ್ವಸ್ತಪಾತಕಸಂಚಯ ।
ತ್ರಾಹಿ ಮಾಂ ಪಾಪಿನಂ ಘೋರಸಂಸಾರಾರ್ಣವಪಾತಿನಮ್ ॥

ಹೇ ಪಾಂಚಜನ್ಯಶಂಖವೇ! ನಿನ್ನ ಧ್ವನಿಯಿಂದ ಪಾತಕಗಳ ಸಮೂಹವನ್ನೇ ನಿರ್ಮೂಲನಗೊಳಿಸುವ ನೀನು ಈ ಭಯಂಕರವಾದ ಸಂಸಾರಸಾಗರದಲ್ಲಿ ಬಿದ್ದಿರುವ ಪಾಪಿಯಾದ ನನ್ನನ್ನು ಉದ್ಧರಿಸು.

[ವಿ.ಸೂ. 'ಘೋರ' ಎಂಬ ಪದವನ್ನು ಸಂಸಾರಕ್ಕೆ ವಿಶೇಷಣವಾಗಿ ಸಂಸಾರಪದದ ಜೊತೆಗೇ ಉಚ್ಚರಿಸಬೇಕು. ಇದಕ್ಕೆ ಬದಲಾಗಿ 'ಘೋರ' ಎನ್ನುವುದನ್ನು ಪ್ರತ್ಯೇಕವಾಗಿ ಪಠಿಸಿದಲ್ಲಿ ಅದು ಪಾಂಚಜನ್ಯಶಂಖಕ್ಕೆ ಸಂಬೋಧನೆಯಾಗಿ ಪಾಂಚಜನ್ಯದಲ್ಲಿ ಘೋರತ್ವದ ಆರೋಪಕ್ಕೆ ಪ್ರಯೋಜಕವಾದೀತು!]

ಕೌಮೋದಕೀಗದೆಯ ಸ್ಮರಣೆ:

ಬ್ರಹ್ಮಾಂಡಭುವನಾರಂಭಮೂಲಸ್ತಂಭೋ ಗದಾಧರಃ ।
ಕೌಮೋದಕೀ ಕರೇ ಯಸ್ಯ ತಂ ನಮಾಮಿ ಗದಾಧರಮ್ ॥

ಬ್ರಹ್ಮಾಂಡವೆಂಬ ಭುವನದ ನಿರ್ಮಾಣದಲ್ಲಿ ಆಧಾರಭೂತವಾದ ಕಂಭದಂತೆ ಇರುವವನು ಗದಾಧಾರಿ ಶ್ರೀವಿಷ್ಣು. ಕೌಮೋದಕೀಗದೆ ಅವನ ಕೈಯಲ್ಲಿದೆ. ಅವನಿಗೆ ಪ್ರಣಾಮ. ಹೀಗೆ ಗದಾಧರನನ್ನು ಸ್ಮರಿಸುವ ಮೂಲಕ, ಅವನ ಸಂಬಂಧದಿಂದಾಗಿ ಗದೆಯನ್ನು ಸ್ಮರಿಸಿಕೊಂಡಂತಾಗುವುದು.

ಪದ್ಮದ ಸ್ಮರಣೆ:

ಸಂಸಾರಭಯಭೀತಾನಾಂ ಯೋಗಿನಾಮಭಯಪ್ರದಃ ।
ಪದ್ಮಹಸ್ತೇನ ಯೋ ದೇವೋ ಯೋಗೀಶಂ ತಂ ನಮಾಮ್ಯಹಮ್ ॥

ಸಂಸಾರಭಯದಿಂದ ಕೂಡಿರುವ ಯೋಗಿಗಳಿಗೆ ಅಭಯವನ್ನು ಅನುಗ್ರಹಿಸಿರುವ ಯೋಗೀಶನಾದ ಶ್ರೀಹರಿಯು ತನ್ನ ಒಂದು ಕೈಯಲ್ಲಿ ಪದ್ಮವನ್ನು ಧರಿಸಿರುವನು. ಅಂತಹ ಶ್ರೀಹರಿಯನ್ನು ನಮಸ್ಕರಿಸುವೆನು.

ಅರಳಿರುವ ಪದ್ಮ ವ್ಯಕ್ತಿಯ ಸ್ವಾಭಾವಿಕಸುಖಾದಿಗಳ ಪೂರ್ಣವಿಕಾಸಾತ್ಮಕವಾದ ಮುಕ್ತಿಯ ಸಂಕೇತ. ಶ್ರೀಹರಿಯು ಪದ್ಮವನ್ನು ಧರಿಸಿಕೊಂಡಿರುವ ಮೂಲಕ ಅದರಿಂದ ಯೋಗಿಗಳಿಗೆ ಮುಕ್ತಿಯನ್ನು ನೀಡಿ ಅಭಯಪ್ರದನಾಗುವೆನೆಂದು ಸಾಂಕೇತಿಕವಾಗಿ ತಿಳಿಸುತ್ತಿರುವನೆಂಬುದು ಇಲ್ಲಿಯ ಸೂಚನೆ.

ಇಲ್ಲಿಯೂ 'ಪದ್ಮಹಸ್ತ' ಭಗವಂತನ ಸ್ಮರಣೆಯ ಮೂಲಕ ಅವನ ಹಸ್ತದಲ್ಲಿ ವಿರಾಜಿಸುತ್ತಿರುವ ಪದ್ಮವನ್ನು ಸ್ಮರಿಸಿಕೊಂಡಂತಾಗಿದೆ.

ನಾರಾಯಣನಾಮುದ ಸ್ಮರಣೆ:

ನಾರಾಯಣ ನಮಸ್ತೇಽಸ್ತು ನಾಮಮುದ್ರಾಂಕಿತಂ ನರಮ್ ।
ದೃಷ್ಟ್ವೈವ ಲಭತೇ ಮುಕ್ತಿಂ ಚಾಂಡಾಲೋ ಬ್ರಹ್ಮಘಾತಕಃ ॥

ಹೇ ನಾರಾಯಣ! ನಿನಗಿದೋ ಪ್ರಣಾಮ. ನಿನ್ನ ನಾರಾಯಣ ಎಂಬ ನಾಮದ ಮುದ್ರೆಯಿಂದ ಅಂಕಿತನಾದ ನರನನ್ನು ಕಂಡೇ ಬ್ರಹ್ಮಘಾತಕ ಚಾಂಡಾಲನೂ ಮುಕ್ತಿಯನ್ನು ಹೊಂದುವನು.

ನಾರಾಯಣನನ್ನು ಸಂಬೋಧಿಸಿ, ಅವನ ನಾಮದ ಮುದ್ರಾಂಕನದ ಹಿರಿಮೆಯನ್ನು ಸಾರುವ ಮೂಲಕ ನಾರಾಯಣನಾಮಾಂಕಿತ ಮುದ್ರೆಯ ಮಹತ್ತ್ವವನ್ನು ಪ್ರತಿಪಾದಿಸಿದಂತಾಗಿದೆ.

ಚಕ್ರಾದಿಗಳಲ್ಲಿ ಯಾರ ಸ್ಮರಣೆ?

ಹೀಗೆ ಚಕ್ರಾದಿಗಳ ಹಿರಿಮೆಗರಿಮೆಗಳನ್ನು ಪ್ರತಿಪಾದಿಸುವ ಮಂತ್ರಗಳನ್ನು ಪಠಿಸುತ್ತ ಯಾರನ್ನು ಸ್ಮರಿಸಿಕೊಳ್ಳಬೇಕು? ಜಡಗಳಾದ ಚಕ್ರಾದಿಗಳು ಸ್ತುತಿಗೆ ಸ್ಪಂದಿಸಲು ಸಾಧ್ಯವೇ ಇಲ್ಲ. ಯಾವುದೇ ಅಚೇತನ ಸ್ತುತ್ಯಾದಿಗಳಿಗೆ ಸ್ಪಂದಿಸಿ ಫಲಪ್ರದವಾಗಲು ಸಾಧ್ಯವೇ ಇಲ್ಲ ತಾನೇ?[190] ಶ್ರೀಹರಿಯ ಶಕ್ತ್ಯಾತ್ಮಕಗಳಾಗಿದ್ದು ಅವನ ಸ್ವರೂಪಗಳೇ ಆಗಿರುವ ಚಕ್ರಾದಿಗಳೂ ಇವೆ.[191] ದುರ್ಗೆಯೇ ಮುಂತಾದವರು ಅಭಿಮಾನಿಯಾಗಿ ಉಳ್ಳ ಚಕ್ರಾದಿಗಳೂ ಇವೆ. ಕಾಮನು ಸುದರ್ಶನಚಕ್ರಕ್ಕೆ ಅವಾಂತರ ಅಭಿಮಾನಿ ಎನಿಸಿದರೆ, ದುರ್ಗಾದೇವಿ ಚಕ್ರಕ್ಕೆ ಮುಖ್ಯಾಭಿಮಾನಿನಿ. ಶಂಖಕ್ಕೆ ಶ್ರೀದೇವಿ ಅಭಿಮಾನಿನಿ. ಪದ್ಮಕ್ಕೆ ಭೂದೇವಿ ಅಭಿಮಾನಿನಿ. ಗದೆಗೆ ವಾಯುದೇವನು ಅಭಿಮಾನಿ.[192]

---

190. ನ ಹ್ಯಚೇತನಕಂ ಕಿಂಚಿತ್ ಫಲದಂ ಸ್ಯಾತ್ ಕದಾಚನ ।
— *ಉಪಾಸನಾಲಕ್ಷಣೇ (ಛಾಂ.ಉ.ಭಾ. ೭-೧-೧೪೩)*

191. ಏಕ ಏವ ಪರೋ ವಿಷ್ಣುರ್ಭೂಷಾಹೇತಿಧ್ವಜೇಷ್ವಜಃ ।
ತತ್ತಚ್ಛಕ್ತಿಸ್ವರೂಪೇಣ ಸ್ವಯಮೇವ ವ್ಯವಸ್ಥಿತಃ ॥ *—ಭಾಗ.ತಾ.ನಿ. ೯-೪-೧೨*

192. .... ಸ ಚಕ್ರತಾಂ ಚ ।

ಆದುದರಿಂದ ಭಗವದ್ರೂಪಗಳೇ ಆದ ಚಕ್ರಾದಿಗಳಲ್ಲೂ ನಮ್ಮ ಪ್ರಾರ್ಥನೆ ಸಲ್ಲಬಹುದು. ಚಕ್ರಾದಿಗಳಿಗೆ ಅಭಿಮಾನಿಗಳಾದ ದೇವತೆಗಳನ್ನೂ ನಾವು ಪ್ರಾರ್ಥಿಸಬಹುದು.

ಇದರಿಂದಾಗಿ ಶರೀರದಲ್ಲಿ ಭಗವಂತನ ಆಯುಧಗಳಾದ ಚಕ್ರಾದಿಗಳ ಚಿಹ್ನೆಯನ್ನು ಧರಿಸುವುದರಿಂದ ಭಗವಂತನ ದಾಸ್ಯವನ್ನು ಒಪ್ಪಿಕೊಂಡು193 ಅವನ ಕೈಂಕರ್ಯಕ್ಕೆ ಶರೀರವನ್ನು ಅರ್ಪಿಸಿಕೊಂಡಂತಾಗುವುದಲ್ಲದೆ, ಅಭಿಮಾನಿ ದೇವತೆಗಳಾದ ದುರ್ಗಾದಿಗಳ ಅನುಗ್ರಹದಿಂದಾಗಿ ತಮೋವಿಕಾರಾದಿಗಳನ್ನು ತಪ್ಪಿಸಿಕೊಳ್ಳಬಹುದು ಕೂಡಾ.

ಚಕ್ರಧಾರಣೆಯಿಂದಾಗಿ ಅದರ ಅವಾಂತರ ಅಭಿಮಾನಿ ಕಾಮನು ದೇಹದ ಮೇಲೆ ಕೆಟ್ಟ ಕಾಮದ ವಿಕಾರ ಆಗದಂತೆ ಅನುಗ್ರಹಿಸಿದರೆ, ಅದರ ಮುಖ್ಯಾಭಿಮಾನಿನಿ ತಮೋಽಭಿಮಾನಿನಿಯೂ ಆಗಿರುವ ದುರ್ಗಾದೇವಿ ದೇಹದ ಮೇಲೆ ತಮೋಗುಣದ ವಿಕಾರಗಳು ಆಗದಂತೆ ರಕ್ಷಿಸುವಳು. ಸತ್ವದ ಅಭಿಮಾನಿನಿಯಾದ ಶ್ರೀದೇವಿ ಶಂಖಕ್ಕೆ ಅಭಿಮಾನಿನಿಯಾಗಿರುವುದರಿಂದ ಅಂತಹ ಶಂಖದ ಚಿಹ್ನೆಯನ್ನು ದೇಹದಲ್ಲಿ ಧರಿಸಿದಾಗ ದೇಹದ ಮೇಲೆ ಸತ್ತ್ವದ ಪ್ರಭಾವ ಆಗುವಂತೆ ಅನುಗ್ರಹಿಸುವಳು. ರಜೋಗುಣಕ್ಕೆ ಅಭಿಮಾನಿನಿಯಾಗಿರುವ ಭೂದೇವಿ ಪದ್ಮಕ್ಕೆ ಅಭಿಮಾನಿನಿಯಾಗಿರುವುದರಿಂದ, ಅಂತಹ ಪದ್ಮದ ಚಿಹ್ನೆಯನ್ನು ದೇಹದಲ್ಲಿ ಧರಿಸಿದಾಗ ರಜೋಗುಣದ ಪರಿಣಾಮಗಳಿಂದ ಕಾಮ, ಕ್ರೋಧಾದಿಗಳ ಆಕ್ರಮಣ ಶರೀರದ ಮೇಲೆ ಆಗದೆ ರಜೋಗುಣದ ಮೂಲಕ ಮೋಕ್ಷಪ್ರಾಪ್ತಿಗೆ ಪೂರಕವಾದ ಸೃಷ್ಟಿಕಾರ್ಯ ನಡೆಯುವಂತೆ ಅನುಗ್ರಹಿಸುವಳು.

ಗದಾಮುದ್ರೆಯ ಧಾರಣೆಯಿಂದಾಗಿ ಭಗವಂತನ ಗದೆಗೆ ಅಭಿಮಾನಿಯಾದ ವಾಯುದೇವನು ಗದಾಂಕಿತ ದೇಹ ಜ್ಞಾನಾರ್ಜನೆಗೆ ಅನುಕೂಲವಾಗುವಂತೆ ಹಾಗೂ ಆಸುರೀ ಶಕ್ತಿಯನ್ನು ವಿರೋಧಿಸಲು ಬೇಕಾದ ಬಲ ಸಿದ್ಧಿಸುವಂತೆ ಅನುಗ್ರಹಿಸುವನು.

ನಾರಾಯಣಾಷ್ಟಾಕ್ಷರಮಂತ್ರದಿಂದ ಅಂಕಿತವಾದ ನಾರಾಯಣಮುದ್ರೆಯ ಧಾರಣೆಯಿಂದಾಗಿ ನಾರಾಯಣಮಂತ್ರಾಂಕಿತವಾದ ಶರೀರ ನಾರಾಯಣನ ಸ್ವಾಮ್ಯಕ್ಕೆ ಸೇರಿದ್ದೆಂಬ ಅನುಸಂಧಾನಕ್ಕೆ ಪುಷ್ಟಿ ದೊರೆಯುವುದಲ್ಲದೆ, ನಾರಾಯಣನಾಮಕ್ಕೇ ಅಂಜಿ ಆಸುರೀ ಶಕ್ತಿಗಳು ದೂರ ಸರಿಯುವವು; ದೈವೀಶಕ್ತಿಗಳು ನಾರಾಯಣನಾಮದ ಸೆಳೆತಕ್ಕೆ ಒಳಗಾಗಿ ಆ ದೇಹವನ್ನು ಸುತ್ತುವರಿಯುವವು. ಅಂತಹ ಮಹತ್ತ್ವಪೂರ್ಣವಾದ ನಾರಾಯಣನಾಮವನ್ನು ದೇಹ ತುಂಬ ಧರಿಸಿಕೊಳ್ಳುತ್ತಿದ್ದೇನೆ ಎಂಬ ಅನುಸಂಧಾನದಿಂದ ನಾರಾಯಣಮುದ್ರೆಯನ್ನು ಹಚ್ಚಿಕೊಳ್ಳಬೇಕು.

ಪೂರ್ವಂ ಹರೇಶ್ಚಕ್ರಮಭೂದ್ಧಿ ದುರ್ಗಾ
ತಮಃಸ್ಥಿತಾ ಶ್ರೀರಿತಿ ಯಂ ವದಂತಿ ।
ಸತ್ತ್ವಾತ್ಮಿಕಾ ಶಂಖಮಥೋ ರಜಃಸ್ಥಾ
ಭೂರ್ನಾಮಿಕಾ ಪದ್ಮಮಭೂದ್ಧರೇರ್ಹಿ ॥
ಗದಾ ತು ವಾಯುರ್ಬಲಸಂವಿದಾತ್ಮಾ
.............................। —ಮ.ಭಾರ.ತಾ. ೩-೭೪, ೭೫

193. ಚಕ್ರಾದಿಧಾರಣಂ ಪುಂಸಾಂ ಹರಿಸಂಬಂಧವೇದನಮ್ । —ಮಾರ್ಕಂಡೇಯೇ

ಹೀಗೆ ಮುದ್ರೆಗಳು ಜಡಲೋಹಗಳಾಗಿರದೆ, ದೈವೀಶಕ್ತಿಗಳ ಪ್ರತೀಕಗಳಾಗಿರುವುದ ರಿಂದಲೇ ಮುದ್ರೆಗಳನ್ನು ಹಚ್ಚಿಕೊಂಡ ಬಳಿಕ ಅವುಗಳನ್ನು ತೊಳೆದು, ಆ ನೀರನ್ನು ಅಷ್ಟಾಕ್ಷರ ಮಂತ್ರಪಠನದೊಂದಿಗೆ ತಲೆಗೆ ಪ್ರೋಕ್ಷಿಸಿಕೊಳ್ಳಬೇಕು. 'ನಮೋ ಮುದ್ರಾಭ್ಯಃ' –ಎನ್ನುತ್ತ ಅವುಗಳನ್ನು ಹರಿವಾಣಾದಿಗಳಲ್ಲಿ ಇಡಬೇಕೇ ಹೊರತು ನೆಲದ ಮೇಲೆ ಇಡಬಾರದು.194

ಚಕ್ರಾಂಕಿತಾಃ ಪ್ರವೇಷ್ಟವ್ಯಾಃ

ಕೈಲಾಸಯಾತ್ರೆಗೆ ಹೊರಟ ಶ್ರೀಕೃಷ್ಣ ತಾನು ಹಿಂತಿರುಗುವ ವರೆಗೆ ಪೌಂಡ್ರಕನ ವಿರುದ್ಧ ದ್ವಾರಕೆಯನ್ನು ಹೇಗೆ ಸುರಕ್ಷಿತವಾಗಿ ಇಡಬೇಕೆಂಬುದನ್ನು ಬಲಭದ್ರ, ಸಾತ್ಯಕಿ ಮುಂತಾದ ಯಾದವರಲ್ಲಿ ತಿಳಿಸುತ್ತ ಹೇಳಿರುವ ಒಂದು ಸೂಚನೆ–

ಚಕ್ರಾಂಕಿತಾಃ ಪ್ರವೇಷ್ಟವ್ಯಾಃ ಯಾವದಾಗಮನಂ ಮಮ ।
ನಾಮುದ್ರಿತಾಃ ಪ್ರವೇಷ್ಟವ್ಯಾಃ ಯಾವದಾಗಮನಂ ಮಮ ॥

ನಾನು ಕೈಲಾಸದಿಂದ ಹಿಂತಿರುಗುವ ವರೆಗೂ ದ್ವಾರಕೆಗೆ ಚಕ್ರದಿಂದ ಚಿಹ್ನಿತ ರಾದವರಿಗಷ್ಟೇ ಪ್ರವೇಶ ನೀಡಬೇಕು. ಚಕ್ರಶಂಖಗಳ ಮುದ್ರೆ ಇಲ್ಲದವರಿಗೆ ದ್ವಾರಕೆಯ ಪ್ರವೇಶವನ್ನು ನಿರಾಕರಿಸಬೇಕು.

ಶ್ರೀ ವಿಜಯೀಂದ್ರತೀರ್ಥರ 'ಚಕ್ರಮೀಮಾಂಸೆ'ಯಲ್ಲಿ 'ತಥಾ ಹಿ ಹರಿವಂಶೇ' –ಎಂದು ಹರಿವಂಶದ ವಚನವಾಗಿ ಈ ವಚನ ಉಲ್ಲೇಖಗೊಂಡಿದೆ.195

ಋಗ್ವೇದಖಿಲದ ಒಂದು ವಚನದಲ್ಲಿ ಚಕ್ರಧಾರಣೆ ಮಾಡಿದವರಷ್ಟೇ ಮೋಕ್ಷವನ್ನು ಹೊಂದಬಲ್ಲರೆಂದು ಸ್ಪಷ್ಟಪಡಿಸಲಾಗಿದೆ.196 ಋಗ್ವೇದದ ಈ ಸಂದೇಶದ ಮೇಲೆ ಹರಿ ವಂಶದಲ್ಲಿ ಉಲ್ಲೇಖಗೊಂಡಂತೆ ದ್ವಾರಕೆಯ ಪ್ರವೇಶದ ನಿಯಮದಿಂದ ಸಾಂಕೇತಿಕವಾಗಿ ಬೆಳಕು ಚೆಲ್ಲಿದಂತಾಗಿದೆ. ಚಕ್ರಾಂಕಿತರಲ್ಲದವರಿಗೆ ಆ ಸಂದರ್ಭದಲ್ಲಿ ಹೇಗೆ ಭಗವಂತನು ದ್ವಾರಕೆಯ ಪ್ರವೇಶವನ್ನು ನಿರಾಕರಿಸಿದ್ದನೋ ಹಾಗೆಯೇ ಚಕ್ರಾಂಕಿತರಲ್ಲದವರಿಗೆ ಮೋಕ್ಷ

---

194. ಪ್ರಕ್ಷಾಲ್ಯಾಯುಧತೋಯೇನ ಶಿರೋ ಮೂಲೇನ ಮಾರ್ಜಯೇತ್ ।
ನಮೋ ಮುದ್ರಾಭ್ಯ ಇತ್ಯುಕ್ತ್ವಾ ನ ಭುವಿ ಸ್ಥಾಪಯೇತ್ ಚ ತಾಃ ॥
– ಸ್ಮೃತ್ಯರ್ಥಸಾಗರೇ ಉದ್ಧೃತಮ್

195. ಪ್ರಚಲಿತಪಾಠದ ಪ್ರಕಾರ ಹರಿವಂಶದಲ್ಲಿ ಆ ಸಂದರ್ಭದ ಮಾತು ಹೀಗಿದೆ–
ಏಕ ಏವ ಮಹಾದ್ವಾರೋ ಗಮನಾಗಮನೇ ಸದಾ ।
ಮುದ್ರಯಾ ಸಹ ಗಚ್ಛಂತು ರಾಜ್ಞೋ ಯೇ ಗಂತುಮೀಪ್ಸವಃ ॥
ನ ಚಾಮುದ್ರಃ ಪ್ರವೇಷ್ಟವ್ಯೋ ದ್ವಾರಪಾಲಸ್ಯ ಪಶ್ಯತಃ ।
ಯಾವದಾಗಮನಂ ಮಹ್ಯಂ ತಾವದೇವಂ ಭವಿಷ್ಯತಿ ॥
– ಹರಿವಂಶ (ಭವಿಷ್ಯಪರ್ವ, ೭೪–೨೪, ೨೫)

196. ಚಕ್ರಂ ಬಿಭರ್ತಿ ವಪುಷಾಽಭಿತಪ್ತಂ............ ಸ ಏತಿ ನಾಕಂ ದುರಿತಂ ವಿಧಾಯ..........॥
– ಋಗ್ವೇದಖಿಲ

ಇಲ್ಲ ಎಂದು ಭಗವಂತನ ಮೂಲಪಟ್ಟಣದ ಪ್ರವೇಶವೂ ಚಕ್ರಾಂಕಿತರಲ್ಲದವರಿಗೆ ಶಾಸ್ತ್ರದಲ್ಲಿ ನಿಷೇಧಿಸಲಾಗಿದೆ.

ಆದ್ದರಿಂದ ಭಗವಂತನ ಪಟ್ಟಣವಾದ ವೈಕುಂಠವನ್ನು ಪ್ರವೇಶಿಸಬೇಕಾದರೆ ಅವಶ್ಯ ವಾಗಿ ಚಕ್ರಾದಿಚಿಹ್ನೆಗಳನ್ನು ಧರಿಸಿಕೊಳ್ಳಲೇಬೇಕು ಎಂದು ಸಿದ್ಧಿಸುವುದು.

* * *

ಚಕ್ರಾದಿಗಳ ಮುಖ್ಯ ಲಕ್ಷಣಗಳು

ಭಗವಂತನ ಆಯುಧಗಳಾದ ಸುದರ್ಶನಚಕ್ರಾದಿಗಳಲ್ಲಿ ಎಷ್ಟು ಅಲಗು ಇತ್ಯಾದಿಗಳಿವೆ?

ಶ್ರೀವಿಷ್ಣುವಿನ ಪ್ರಾದುರ್ಭಾವರೂಪಗಳಾದ ರಾಮ, ಕೃಷ್ಣ ಇತ್ಯಾದಿಗಳ ಬಲಗೈ ಇತ್ಯಾದಿಗಳಲ್ಲಿ ವಿರಾಜಿಸುತ್ತಿರುವ ಚಕ್ರಾದಿ ಚಿಹ್ನೆಗಳ ಪರಿಚಯವನ್ನು ನೀಡುತ್ತಿರುವ ಮಹಾಸಂಹಿತೆ(ಬೃ.ಉ.ಭಾ. 3-3-28)ಯ ಕೆಳಗಿನ ಮಾತಿನ ಮೂಲಕ ಈ ಬಗ್ಗೆ ಸೂಚನೆ ದೊರಕುವುದು–

ನಿಯಮೇನೈವ ವಿಷ್ಣೋಸ್ತು ಪ್ರಾದುರ್ಭಾವಾ ವಿಶೇಷತಃ ।
ಸಹಸ್ರಾರೇಣ ಚಕ್ರೇಣ ಚಿಹ್ನಿತಾ ದಕ್ಷಿಣೇ ಕರೇ ।
ಗದಯಾಽಷ್ಟಾಶ್ರಯಾ ಚೈವ ಶತಾವರ್ತೇನ ಕಂಬುನಾ ।
ವಾಮೇ ಕರೇ ತಥಾಬ್ಜೇನ ಸಹಸ್ರದಳಶೋಭಿನಾ ॥

ಶ್ರೀವಿಷ್ಣುವಿನ ಅವತಾರರೂಪಗಳ ಬಲಗೈಯಲ್ಲಿ ಸಹಸ್ರ ಅಲಗುಗಳಿಂದ ಕೂಡಿದ ಚಕ್ರದ ಚಿಹ್ನೆಯೂ ಎಂಟು ಅಂಚುಗಳಿಂದ ಕೂಡಿದ ಗದೆಯ ಚಿಹ್ನೆಯೂ ಇರುವುದು. ಎಡಗೈಯಲ್ಲಿ ನೂರು ಸುಳಿಗಳಿಂದ ಕೂಡಿದ ಶಂಖದ ಚಿಹ್ನೆಯೂ ಸಹಸ್ರದಳಗಳಿಂದ ಕೂಡಿದ ಪದ್ಮದ ಚಿಹ್ನೆಯೂ ಇರುವುದು.

ಆದುದರಿಂದ ನಾವು ಬಳಸುವ ಚಕ್ರಾದಿ ಚಿಹ್ನೆಗಳಲ್ಲೂ ಆದಷ್ಟು ಈ ಲಕ್ಷಣಗಳು ಬರುವಂತೆ ಯತ್ನಿಸಬೇಕು.

ಪುಂಡ್ರಸಂಸ್ಕಾರ

ವೈಷ್ಣವದೀಕ್ಷೆಗೆ ಸಂಬಂಧಿಸಿದ ಎರಡನೆಯ ಸಂಸ್ಕಾರ ಪುಂಡ್ರಸಂಸ್ಕಾರ. ದೇಹದ ಹಣೆಯೇ ಮುಂತಾದ ಕಡೆಗಳಲ್ಲಿ ಊರ್ಧ್ವಪುಂಡ್ರಗಳನ್ನು (ನಾಮಗಳನ್ನು) ಧರಿಸುವುದು ಈ ಸಂಸ್ಕಾರದ ಉದ್ದೇಶ.

ಪುಂಡ್ರಸಂಸ್ಕಾರ

'ಪರೋ ಮಾತ್ರಯಾ.....' ಎಂಬ ಸೂಕ್ತದಿಂದ (ಋಗ್ವೇದ 7-99) ಮಧುಮಿಶ್ರಿತ ಪಾಯಸದ ಆಹುತಿಗಳನ್ನು ನೀಡಿ, ನಾರಾಯಣಾಷ್ಟಾಕ್ಷರಮಂತ್ರದಿಂದ ೧೦೮ ಬಾರಿ ತುಪ್ಪದ ಆಹುತಿಗಳನ್ನು ನೀಡಿ ಹೋಮ ನಡೆಸಬೇಕು. ಬಳಿಕ ಸ್ಥಂಡಿಲದಲ್ಲಿ ಮಂಡಲಗಳನ್ನು ಬರೆದು ಎಂಟು ದಿಕ್ಕುಗಳಲ್ಲಿ ಎಂಟು, ಮಧ್ಯದಲ್ಲಿ ನಾಲ್ಕು –ಹೀಗೆ ಒಟ್ಟು ಹನ್ನೆರಡು ನಾಮಗಳ ನ್ಯಾಸ ಮಾಡಬೇಕು. ಆ ಹನ್ನೆರಡು ನಾಮಗಳಲ್ಲಿ ಆಯಾ ನಾಮಕ್ಕೆ ಸಂಬಂಧಿಸುವ ಭಗವಂತನ ಕೇಶವಾದಿ ರೂಪಗಳನ್ನು ಆವಾಹಿಸಿ ಗಂಧಪುಷ್ಪಾದಿಗಳಿಂದ ಪೂಜಿಸಬೇಕು. ಕೇಶವಾದಿ ರೂಪಗಳಿಗೆ ಸಂಬಂಧಿಸುವ ಪುಂಡ್ರಗಳನ್ನು ಹೃದಯದಲ್ಲಿ ಮಾನಸಿಕವಾಗಿ ನ್ಯಾಸಮಾಡಿಕೊಳ್ಳಬೇಕು.197

ಪುಂಡ್ರಗಳ ಧಾರಣೆ:

ಪುಂಡ್ರಸಂಸ್ಕಾರದ ಅಂಗವಾಗಿ ಹೋಮ–ನ್ಯಾಸ–ಆವಾಹನೆಗಳನ್ನು ನಡೆಸಿದ ಬಳಿಕ ನಾಮಗಳನ್ನು ಧರಿಸಿಕೊಳ್ಳಬೇಕು.

---

197. ಸ್ನಾತಂ ಶಿಷ್ಯಂ ಸಮಾಹೂಯ ಹೋಮಂ ಕುರ್ವೀತ ಪೂರ್ವವತ್ ।
ಪರೋ ಮಾತ್ರೇತಿ ಸೂಕ್ತೇನ ಪಾಯಸಂ ಮಧುಮಿಶ್ರಿತಮ್ ॥
ಹುತ್ವಾಥ ಮೂಲಮಂತ್ರೇಣ ಶತಮಷ್ಟೋತ್ತರಂ ಘೃತಮ್ ।
ಸ್ಥಂಡಿಲೇ ತು ತತಃ ಪಶ್ಚಾತ್ ಮಂಡಲಾನಿ ಯದಾ ಕ್ರಮಾತ್ ॥
ದಿಕ್ಷ್ವಷ್ಟಮಧ್ಯೇ ಚತ್ವಾರಿ ವಿನ್ಯಸೇತ್ ಪುರತೋ ಹರೇಃ ।
ವಿಲಿಖೇತ್ತತ್ರ ಪುಂಡ್ರಾದಿ ವಿಸ್ತಾರಾಯಾಮಭೇದತಃ ॥
ತೇಷ್ವರ್ಚಯೇತ್ತತೋ ಧೀಮಾನ್ ಕೇಶವಾದೀನನುಕ್ರಮಾತ್ ।
ತತ್ರ ತತ್ರ ಚ ತನ್ಮೂರ್ತಿಂ ಧ್ಯಾತ್ವಾ ಮಂತ್ರೈಃ ಸಮರ್ಚಯೇತ್ ॥
ತದ್ಬಾಹೌ ನಿಕ್ಷಿಪೇಚ್ಛಿಷ್ಯಃ ಕೇಶವಾದೀನನುಕ್ರಮಾತ್ ।
ಹೃದಿ ವಿನ್ಯಸ್ಯ ಪುಂಡ್ರಾಣಿ ಗುರೂಕ್ತಾನಿ ಸ ವೈಷ್ಣವಃ ॥

— *ವೃದ್ಧಹಾರೀತಸ್ಮೃತಿ ೨-೫೧....೫೫*

ಶ್ರೀರಂಗ, ದ್ವಾರಕ, ಶ್ರೀಕೂರ್ಮ, ಸಿಂಹಾದ್ರಿ, ಪ್ರಯಾಗ, ವಾರಾಹ –ಈ ಕ್ಷೇತ್ರಗಳ ಪೈಕಿ ಯಾವುದಾದರೂ ಕ್ಷೇತ್ರದ ಮಣ್ಣಿನಿಂದಾಗಲೀ ತುಳಸೀವನದ ಮಣ್ಣಿನಿಂದಾಗಲೀ ಭಕ್ತಿಪೂರ್ವಕವಾಗಿ ಮೇಲ್ಮುಖವಾಗಿ ನಾಮಗಳನ್ನು ಧರಿಸಿಕೊಳ್ಳಬೇಕು.[198] ದ್ವಾರಕೆಯಲ್ಲಿ ಶ್ರೀಕೃಷ್ಣ ಅಡ್ಡಾಡಿದ್ದು, ಅವನ ಪಾದಸ್ಪರ್ಶಕ್ಕೆ ಒಳಪಟ್ಟು ವಿಶೇಷವಾಗಿ ಪವಿತ್ರವೆನಿಸಿದೆ ದ್ವಾರಕೆಯ ಮಣ್ಣು –ಗೋಪೀಚಂದನ. ಆದುದರಿಂದಲೇ ಗೋಪೀಚಂದನದಿಂದ ಪುಂಡ್ರಧಾರಣೆಗೇ ಹೆಚ್ಚು ಪ್ರಾಶಸ್ತ್ಯ ನೀಡಲಾಗುವುದು. ನಿರ್ಮಾಲ್ಯತೀರ್ಥದಿಂದಾಗಲೀ, ಬರೇ ಜಲದಿಂದಾಗಲೀ (ಸ್ನಾನಕಾಲದಲ್ಲಿ) ಗೋಪೀಚಂದನವನ್ನು ಎಡಗೈಯ ಅಂಗೈಯಲ್ಲಿ ಪ್ರದಕ್ಷಿಣಾಕಾರವಾಗಿ ತೇಯಬೇಕು. ತೇಯಲ್ಪಟ್ಟ ಗೋಪಿಯನ್ನು ಗಾಯತ್ರೀಮಂತ್ರ ದಿಂದಲೂ ನಾರಾಯಣಾಷ್ಟಾಕ್ಷರಮಂತ್ರಿದಿಂದಲೂ ಮೂರುಬಾರಿ ಜಪಿಸಿ, ಅಭಿಮಂತ್ರಿಸ ಬೇಕು. ಅನಂತರ ಆ ಗೋಪಿಯಿಂದ ಊರ್ಧ್ವಪುಂಡ್ರಗಳನ್ನು ಧರಿಸಿಕೊಳ್ಳಬೇಕು. ಅಂಗುಷ್ಠ ಬೆರಳು ಹಾಗೂ ತೋರುಬೆರಳು ಇವುಗಳಿಂದ ಪುಂಡ್ರಕವನ್ನು ಧರಿಸುವುದರಿಂದ ಪುಷ್ಟಿ ಹಾಗೂ ಮೋಕ್ಷ ದೊರಕುವುದಾದರೆ, ಮಧ್ಯಬೆರಳು ಹಾಗೂ ಉಂಗುರಬೆರಳು ಇವುಗಳಿಂದ ಪುಂಡ್ರಕವನ್ನು ಧರಿಸುವುದರಿಂದ ಆಯುಷ್ಯವು ಹೆಚ್ಚುವುದು.[199]

ಕೇಶವಪುಂಡ್ರಕ:

ಭಗವಂತನ ಕೇಶವ ರೂಪದ ಸ್ಮರಣೆಯೊಂದಿಗೆ ಹಣೆಯಲ್ಲಿ ನಾಮವನ್ನು ಧರಿಸ ಬೇಕು.[200] ಅದು ಮೂಗಿನ ಬುಡದಿಂದ ಅಂದರೆ ಹುಬ್ಬುಗಳ ಮಧ್ಯದಿಂದ ತಲೆಗೂದಲ ವರೆಗೆ ಹರಡಿರಬೇಕು. ಎರಡು ಇಂಚುಗಳಷ್ಟು ದೀರ್ಘವಾಗಿರಬೇಕು. ದಂಡಾಕಾರವಾಗಿ ಇರಬೇಕು. ಹಣೆಯಲ್ಲಿ ಹಾಕಿಕೊಂಡ ನಾಮದ ಮಧ್ಯಭಾಗವನ್ನು ಒದ್ದೆಬಟ್ಟೆಯಿಂದ ಹೊದೆಸಲ್ಪಟ್ಟ ಬೆರಳಿನಿಂದ ತಿದ್ದುವ (ಒರೆಸುವ) ಮೂಲಕ ಆ ನಾಮವು ಮಧ್ಯದಲ್ಲಿ ರಂಧ್ರವನ್ನು ಒಳಗೊಳ್ಳುವಂತೆ ಮಾಡಬೇಕು. ಆ ರಂಧ್ರಭಾಗದಲ್ಲಿ ಶ್ರೀಹರಿ ಲಕ್ಷ್ಮೀಸಹಿತ ನಾಗಿ ನೆಲೆಸುವನು. ಆದುದರಿಂದ ಅದು ಹರಿಮಂದಿರ ಎನಿಸಿದೆ. ಒಂದೊಮ್ಮೆ ಹಣೆಯ ನಾಮದಲ್ಲಿ ರಂಧ್ರವನ್ನು ಮಾಡದಿದ್ದಲ್ಲಿ –ಅಲ್ಲಿ ಲಕ್ಷ್ಮೀನಾರಾಯಣರ ಸನ್ನಿಧಾನವನ್ನು ಕಳೆದುಕೊಂಡಂತಾಗುವುದು.[201]

---

198. ಶ್ರೀರಂಗೇ ದ್ವಾರಕಾಯಾಂ ಚ ಶ್ರೀಕೂರ್ಮೇ ಚ ತಥಾ ಸ್ಥಿತಾಮ್ ।
ಸಿಂಹಾದ್ರೌ ಚ ಪ್ರಯಾಗೇ ಚ ವಾರಾಹೇ ತುಲಸೀವನೇ ॥
ಗೃಹೀತ್ವಾ ಮೃತ್ತಿಕಾಂ ಭಕ್ತ್ಯಾ ಶಾಲಗ್ರಾಮಜಲೈಃ ಸಹ ।
ಸ್ನಾತ್ವಾ ಪುಂಡ್ರಂ ಮೃದಾ ಕುರ್ಯಾತ್..... ಸ್ನಾನಕಾಲೇ ಜಲೇನ ತು ॥
ಗಾಯತ್ರೀ ಮೂಲಮಂತ್ರಾಭ್ಯಾಂ ತ್ರಿವಾರಮಭಿಮಂತ್ರ್ಯ ಚ ।
ಅಥೋರ್ಧ್ವಪುಂಡ್ರಂ ಧೃತ್ವಾಂಗೇ ವಿಷ್ಣುಸಾಯುಜ್ಯಮಾಪ್ನುಯಾತ್ ॥ –ಪಾದ್ಮೇ

199. ಅಂಗುಷ್ಠತರ್ಜನೀಭ್ಯಾಂ ತು ಪುಷ್ಟಿಮೋಕ್ಷಾಯ ಪುಂಡ್ರಕಮ್ ।
ಮಧ್ಯಮಾನಾಮಿಕಾಭ್ಯಾಂ ಚ ಆಯುಷ್ಯಾರ್ಥಂ ಭವೇದ್ ಧ್ರುವಮ್ ॥ –ಪಾದ್ಮ

200. ದಂಡಾಕಾರಂ ಲಲಾಟೇ ಚ....। –ವೃದ್ಧಹಾರೀತಸ್ಮೃತಿ ೨-೭೦

201. ನಾಸಿಕಾಮೂಲಮಾರಭ್ಯ ಲಲಾಟಾಂತೇಷು ವಿನ್ಯಸೇತ್ ।

ಹಣೆಯಲ್ಲಿ ಹಾಕುವ ನಾಮದ ಮೂಲಕ ಕೇಶವನಾಮಕ ಭಗವದ್ರೂಪದ ನ್ಯಾಸವನ್ನು ನಡೆಸಬೇಕು.[202] ಮೊದಲು ಓಂಕಾರ ಬಳಿಕ ಚತುರ್ಥೀವಿಭಕ್ತ್ಯಂತವಾದ, ಅಂದರೆ 'ಕೇಶವಾಯ' –ಎಂಬ ಕೇಶವನ ಉಲ್ಲೇಖ. ಕೊನೆಯಲ್ಲಿ 'ನಮಃ' ಪದವನ್ನು ಪಠಿಸಬೇಕು. 'ಓಂ ಕೇಶವಾಯ ನಮಃ' ಇತ್ಯಾದಿಯಾಗಿ[203] ಭಗವಂತನ ಕೇಶವನಾಮಕ ರೂಪವು ಹೀಗಿದೆ– ಚಿನ್ನದ ಬಣ್ಣ. ಶಂಖಚಕ್ರಗದಾಧಾರಿ. ಶುಭ್ರ ಬಟ್ಟೆಯ ಧಾರಣೆ. ಸೌಮ್ಯ. ಮುತ್ತಿನ ಹಾರದ ಅಲಂಕಾರ.[204]

ಹೀಗೆ ಹಣೆಯಲ್ಲಿ ಗೋಪೀಚಂದನದ ಮೂಲಕ ಊರ್ಧ್ವಪುಂಡ್ರವನ್ನು ಬ್ರಾಹ್ಮಣರು ಯಾವಾಗಲೂ ಧರಿಸಿಕೊಂಡಿರಬೇಕು. ಮುತ್ತೈದೆಯರೂ ಗೋಪೀಚಂದನದಿಂದ ಊರ್ಧ್ವ ಪುಂಡ್ರವನ್ನು ಧರಿಸಿ, ಅದರ ಮೇಲೆ ಕುಂಕುಮವನ್ನು ಧರಿಸಿಕೊಳ್ಳಬೇಕು. ಇಲ್ಲದಿದ್ದಲ್ಲಿ ಪಾತಕ ಸಂಭವಿಸುವುದು. ಅಲ್ಲದೆ, ಅಂತಹವರು ಮಾಡಿದ ಅಡುಗೆ ನೈವೇದ್ಯಕ್ಕೆ ಅನರ್ಹ ಎನಿಸುವುದು.[205]

ನಾರಾಯಣಪುಂಡ್ರಕ:

ನಾರಾಯಣನನ್ನು ನೆನೆಯುತ್ತ ಹೊಟ್ಟೆಯಲ್ಲಿ ನಾಮವನ್ನು ಧರಿಸಬೇಕು.[206] ದೀಪದ ಆಕೃತಿಯಲ್ಲಿರಬೇಕು.[207] ಹತ್ತು ಇಂಚುಗಳಷ್ಟು ಉದ್ದವಾಗಿರಬೇಕು.[208] 'ಓಂ ನಮೋ ನಾರಾಯಣಾಯ' –ಎಂಬ ಮಂತ್ರವನ್ನು ಪಠಿಸುತ್ತ ಆ ಮಂತ್ರಪ್ರತಿಪಾದ್ಯ ನಾರಾಯಣ ರೂಪವನ್ನು ಹೀಗೆ ಚಿಂತಿಸಬೇಕು– ಮೋಡದಂತೆ ಶ್ಯಾಮಲ. ಶಂಖ, ಚಕ್ರ, ಗದಾ ಹಾಗೂ

ಅಂಗುಲದ್ವಯಮಾತ್ರಂ ತು ಮಧ್ಯಚ್ಛಿದ್ರಂ ಪ್ರಕಲ್ಪಯೇತ್ ॥
.........ಊರ್ಧ್ವಪುಂಡ್ರಸ್ಯ ಮಧ್ಯೇ ತು ಲಲಾಟೇ ಸುಮನೋಹರೇ ।
ಲಕ್ಷ್ಮ್ಯಾ ಸಹ ಸಮಾಸೀನೋ ರಮತೇ ತತ್ರ ವೈ ಹರಿಃ ॥
ನಿರಂತರಾಲಂ ಯಃ ಕುರ್ಯಾದ್ ಊರ್ಧ್ವಪುಂಡ್ರಂ ದ್ವಿಜಾಧಮಃ ।
ಸ ಹಿ ತತ್ರ ಸ್ಥಿತಂ ವಿಷ್ಣುಂ ಶ್ರಿಯಂ ಚೈವ ವ್ಯಪೋಹತಿ ॥

202. ಲಲಾಟೇ ಕೇಶವಂ ರೂಪಂ.... ನ್ಯಸೇತ್ । –ವೃದ್ಧಹಾರೀತಸ್ಮೃತಿ ೨-೭೫

203. ಕೇಶವಾದಿನಮೋಽಂತೈಶ್ಚ ಪ್ರಣವಾದ್ಯೈರನುಕ್ರಮಾತ್ –ವೃದ್ಧಹಾರೀತಸ್ಮೃತಿ ೨-೭೫

204. ಕೇಶವಸ್ತು ಸುವರ್ಣಾಭಃ ಶಂಖಚಕ್ರಗದಾಧರಃ ।
ಶುಕ್ಲಾಂಬರಧರಃ ಸೌಮ್ಯೋ ಮುಕ್ತಾಭರಣಭೂಷಿತಃ ॥ –ವೃ.ಹಾ.ಸ್ಮೃತಿ. ೨-೭೬

205. ವಿಪ್ರೈಸ್ತು ಸತತಂ ಧಾರ್ಯಃ ಸ್ತ್ರೀಭಿಶ್ಚ ಶುಭದರ್ಶಿಭಿಃ ।
ಸುವಾಸಿನ್ಯೋಽಪಿ ಬಿಭೃಯುಸ್ತಿಲಕೋಪರಿ ಕುಂಕುಮಮ್ ।
ಅನ್ಯಥಾ ಪಾತಕಂ ಪ್ರೋಕ್ತಂ ತತ್ಪಾಕಂ ನಿಷ್ಫಲಂ ಭವೇತ್ ॥ –ಪಾದ್ಮ

206. ....ಕುಕ್ಷೌ ನಾರಾಯಣಂ ನ್ಯಸೇತ್ –ವೃದ್ಧಹಾರೀತಸ್ಮೃತಿ ೨-೭೫

207. ....ಅನ್ಯಾನ್ ದೀಪಾಕೃತೀನ್ ನ್ಯಸೇತ್ –ಸ್ಮೃತಿಮುಕ್ತಾವಲಿ.

208. ಉದರೇ ಪಾರ್ಶ್ವಯೋರ್ನಿತ್ಯಮಾಯತಂ ತು ದಶಾಂಗುಲಮ್ ।
– ವೃ.ಹಾ.ಸ್ಮೃತಿ ೨-೭೪

ಖಡ್ಗ ಇವುಗಳ ಧಾರಣೆ. ಪಟ್ಟೆಪೀತಾಂಬರ, ಮಣಿಮಯಗಳಾದ ಭೂಷಣಗಳಿಂದ ಅಲಂಕಾರ[209]

ಮಾಧವಪುಂಡ್ರಕ:

ಎದೆಯಲ್ಲಿ ಮಾಧವರೂಪಿ ಭಗವಂತನನ್ನು ನೆನೆಯುತ್ತ ಊರ್ಧ್ವಪುಂಡ್ರವನ್ನು ಧರಿಸಬೇಕು.[210] ಕಮಲದ ಮೊಗ್ಗಿನ ಆಕಾರದಲ್ಲಿ ಇರಬೇಕಾದ ಈ ನಾಮ ಎಂಟು ಇಂಚುಗಳಷ್ಟು ದೀರ್ಘವಾಗಿದ್ದಿರಬೇಕು.[211] 'ಓಂ ಮಾಧವಾಯ ನಮಃ' –ಎಂದು ಪಠಿಸುತ್ತ ಧ್ಯಾನಿಸಬೇಕಾದ ಮಾಧವನ ರೂಪ– ಕಮಲದಂತೆ ಸುಂದರ. ಚಕ್ರ, ಶಾರ್ಙ್ಗ ಧನುಸ್ಸು, ಗದಾ, ಖಡ್ಗಗಳ ಧಾರಣೆ. ಚಿತ್ರ ಬಣ್ಣದ ಮಾಲೆ. ಪೀತಾಂಬರಧಾರಣೆ. ಪುಂಡರೀಕದಂತಹ ಅರಳಿದ ಕಣ್ಣುಗಳು.[212]

ಗೋವಿಂದ ಪುಂಡ್ರಕ:

ಕಂಠದ ಎದುರು ಭಾಗದಲ್ಲಿ ಗೋವಿಂದರೂಪಿ ಭಗವಂತನನ್ನು ನೆನೆಯುತ್ತ 'ಓಂ ಗೋವಿಂದಾಯ ನಮಃ' –ಎಂಬ ಮಂತ್ರಪಠನದೊಂದಿಗೆ ಪುಂಡ್ರವನ್ನು ಧರಿಸಬೇಕು.[213] ನಾಲ್ಕು ಇಂಚುಗಳಷ್ಟು ಉದ್ದ ಇರಬೇಕಾದ ಅದು ದೀಪಾಕೃತಿಯಲ್ಲಿ ಇರಬೇಕು.[214] ಈ ಮಂತ್ರಧಾರಣೆಯ ಸಂದರ್ಭದಲ್ಲಿ ನೆನೆಯಬೇಕಾದ ಗೋವಿಂದನ ರೂಪ –ಚಂದ್ರನ ಬಣ್ಣ. ಪದ್ಮ, ಶಂಖ, ಗದಾ ಹಾಗೂ ಕೊಡಲಿಗಳ ಧಾರಣೆ. ಕೆಂಪು ಕಮಲದಂತೆ ಕೆಂಪಗಾದ ಪಾದಕಮಲಗಳು. ಪುಟಕ್ಕಿಟ್ಟ ಚಿನ್ನದಂತೆ ಹೊಳೆಯುವ ಭೂಷಣಗಳು.[215]

ವಿಷ್ಣುಪುಂಡ್ರಕ:

ಶ್ರೀವಿಷ್ಣುನಾಮಕ ಭಗವದ್ರೂಪವನ್ನು ನೆನೆಯುತ್ತ 'ಓಂ ನಮೋ ವಿಷ್ಣವೇ' –ಎಂಬ ಮಂತ್ರಪಠನದೊಂದಿಗೆ ಹೊಟ್ಟೆಯ ಬಲಭಾಗದಲ್ಲಿ ಪುಂಡ್ರವನ್ನು ಧರಿಸಿಕೊಳ್ಳಬೇಕು. ಅದು ಎಂಟು ಇಂಚುಗಳಷ್ಟು ಉದ್ದವಾಗಿರಬೇಕು.[216] ದೀಪದ ಆಕೃತಿಯಲ್ಲಿರಬೇಕು.[217] ಈ

---

209. ನಾರಾಯಣೋ ಘನಶ್ಯಾಮಃ ಶಂಖಚಕ್ರಗದಾಸಿಭೃತ್ ।
ಪೀತವಾಸಾ ಮಣಿಮಯೈರ್ಭೂಷಣೈರುಪಶೋಭಿತಃ ॥ –ವೃ.ಹಾ.ಸ್ಮೃ. ೨–೮೦

210. ವಕ್ಷಃ ಸ್ಥಲೇ ಮಾಧವಂ ಚ..... –ಹಾರೀತ

211. ವಕ್ಷಸ್ಥಲೇ ಮಾಧವೇತಿ ನ್ಯಸೇದಷ್ಟಾಂಗುಲಂ ತಥಾ । –ಪರಾಶರಸ್ಮೃತಿ.

212. ಮಾಧವಶ್ಚೋತ್ಪಲಪ್ರಖ್ಯಶ್ಚಕ್ರಶಾರ್ಙ್ಗಗದಾಸಿಭೃತ್ ।
ಚಿತ್ರಮಾಲ್ಯಾಂಬರಧರಃ ಪುಂಡರೀಕನಿಭೇಕ್ಷಣಃ ॥ –ವೃ.ಹಾ.ಸ್ಮೃ. ೨–೮೧.

213. ಗೋವಿಂದಾಯೇತಿ ಚ ಚತುರಂಗುಲಂ ಕಂಠಕೂಬರೇ ॥ –ಪರಾಶರಸ್ಮೃತಿ.

214. ....ಅನ್ಯಾನ್ ದೀಪಾಕೃತೀನ್ ನ್ಯಸೇತ್ ।

215. ಗೋವಿಂದಃ ಶಶಿವರ್ಣಃ ಸ್ಯಾತ್ ಪದ್ಮಶಂಖಗದಾಸಿಭೃತ್ ।
ರಕ್ತಾರವಿಂದಪಾದಾಬ್ಜಸ್ತಪ್ತಕಾಂಚನಭೂಷಣಃ ॥ –ವೃ.ಹಾ.ಸ್ಮೃತಿ ೨–೮೨

216. ನಮೋ ವಿಷ್ಣವ ಇತ್ಯುಕ್ತ್ವಾ ಕುಕ್ಷೌ ದಕ್ಷಿಣಪಾರ್ಶ್ವಕೇ ।
ಅಷ್ಟಾಂಗುಲಪ್ರಮಾಣೇನ ಧಾರಯೇದ್ ಊರ್ಧ್ವಪುಂಡ್ರಕಮ್ ॥ –ಪರಾಶರಸ್ಮೃತಿ.

217. ....ಅನ್ಯಾನ್ ದೀಪಾಕೃತೀನ್ ನ್ಯಸೇತ್....'

ನಾಮಧಾರಣೆಯ ಸಂದರ್ಭದಲ್ಲಿ ಚಿಂತಿಸಬೇಕಾದ ವಿಷ್ಣುವಿನ ರೂಪ –ಬೆಳ್ಳಗಿನ ಬಣ್ಣ. ಚಕ್ರ, ಶಂಖ, ನೇಗಿಲು ಹಾಗೂ ಕೊಡಲಿ ಇವುಗಳ ಧಾರಣೆ. ರೇಶ್ಮೆ ಬಟ್ಟೆಯ ಧಾರಣೆ. ಮಾಲೆಯ ಧಾರಣೆ. ತೋಳ್ಬಳೆಯ ಭೂಷಣ 218

ಮಧುಸೂದನಪುಂಡ್ರಕ:

ಮಧುಸೂದನನಾಮಕ ಭಗವದ್ರೂಪವನ್ನು ನೆನೆಯುತ್ತ ಬಾಹುಮಧ್ಯದಲ್ಲಿ ಎಂಟು ಇಂಚುಗಳಷ್ಟು ಉದ್ದದ ಪುಂಡ್ರವನ್ನು ಧರಿಸಬೇಕು.219 ಬಿದಿರಿನ ಎಲೆಯ ಆಕಾರದಲ್ಲಿ ಈ ನಾಮ ಇರಬೇಕು. 220 ಇದನ್ನು ಧರಿಸುವಾಗ ನೆನೆಯಬೇಕಾದ ಮಧುಸೂದನನ ರೂಪ –ಅರವಿಂದದ ಕಾಂತಿ. ಕಮಲದ ಆಸನ. ಚಕ್ರ, ಶಾರ್ಙ್ಗಧನುಸ್ಸು, ನೇಗಿಲು, ಪದ್ಮಗಳ ಧಾರಣೆ221

ತ್ರಿವಿಕ್ರಮಪುಂಡ್ರಕ:

ತ್ರಿವಿಕ್ರಮರೂಪಿ ಪರಮಾತ್ಮನನ್ನು ನೆನೆಯುತ್ತ ಕಂಠದ ಬಲಭಾಗದಲ್ಲಿ222 ನಾಲ್ಕು ಇಂಚುಗಳಷ್ಟು ಉದ್ದದ ಊರ್ಧ್ವಪುಂಡ್ರವನ್ನು ಧರಿಸಿಕೊಳ್ಳಬೇಕು. 'ಓಂ ತ್ರಿವಿಕ್ರಮಾಯ ನಮಃ' ಎಂಬ ಮಂತ್ರದ ಪಠನದೊಂದಿಗೆ ಧರಿಸಬೇಕಾದ ಇದು ದೀಪದ ಆಕಾರದಲ್ಲಿ ಇರಬೇಕು.223

ಇದನ್ನು ಧರಿಸಿಕೊಳ್ಳುವಾಗ ನೆನೆಯಬೇಕಾದ ತ್ರಿವಿಕ್ರಮರೂಪ– ಕೆಂಪುಬಣ್ಣ. ಶಂಖ, ಚಕ್ರ, ಗದಾ ಹಾಗೂ ಕೊಡಲಿ ಇವುಗಳ ಧಾರಣೆ. ಕಿರೀಟ, ಹಾರ, ಓಡ್ಯಾಣ ಹಾಗೂ ಕಿವಿಯ ಆಭರಣಗಳ ಅಲಂಕಾರ.224

ವಾಮನಪುಂಡ್ರಕ:

ವಾಮನರೂಪಿ ಪರಮಾತ್ಮನನ್ನು ನೆನೆಯುತ್ತ ಹೊಟ್ಟೆಯ ಎಡಬದಿಯಲ್ಲಿ ಹತ್ತು ಅಂಗುಲ ಉದ್ದದ ನಾಮವನ್ನು ಧರಿಸಬೇಕು.225 ಇದು ದೀಪದ ಆಕಾರದಲ್ಲಿರಬೇಕು.226

---

218. ಗೌರವರ್ಣೋ ಭವೇದ್ವಿಷ್ಣುಶ್ಚಕ್ರಶಂಖಹಲಾಸಿಭೃತ್ ।
ಕ್ಷೌಮಾಂಬರಧರಃ ಸ್ರಗ್ವೀ ಕೇಯೂರಾಂಗದಭೂಷಿತಃ ॥ –ವೃ.ಹಾ.ಸ್ಮೃ. ೨-೮೩
219. ಮಧುಸೂದನಂ ಬಾಹುಮಧ್ಯೇ ನ್ಯಸೇದಷ್ಟಾಂಗುಲಂ ತಥಾ ॥ –ಪರಾಶರಸ್ಮೃತಿ
220. ವೇಣುಪತ್ರಾಕೃತಿಂ ಬಾಹ್ವೋಃ....।
221. ಅರವಿಂದನಿಭಃ ಶ್ರೀಮಾನ್ ಮಧುಜಿತ್ ಕಮಲಾಸನಃ ।
ಚಕ್ರಂ ಶಾರ್ಙ್ಗಂ ಚ ಮುಸಲಂ ಪದ್ಮಂ ದೋರ್ಭಿರ್ಬಿಭರ್ತ್ಯಸೌ ॥–ವೃ.ಹಾ.ಸ್ಮೃ. ೨-೮೪
222. ತ್ರಿವಿಕ್ರಮಾಯೇತಿ ಭುಜೇ ಧಾರಯೇಚ್ಚತುರಂಗುಲಮ್ ।
223. ....ಅನ್ಯಾನ್ ದೀಪಾಕೃತೀನ್ ನ್ಯಸೇತ್ ।
224. ತ್ರಿವಿಕ್ರಮೋ ರಕ್ತವರ್ಣಃ ಶಂಖಚಕ್ರದಗದಾಸಿಭೃತ್ ।
ಕಿರೀಟಹಾರಕೇಯೂರಕುಂಡಲೈಶ್ಚ ವಿರಾಜಿತಃ ॥ –ವೃ.ಹಾ.ಸ್ಮೃ. ೨-೮೫
225. ವಾಮನಂ ವಾಮಕುಕ್ಷೌ ತು ಧಾರಯೇತ್ತು ದಶಾಂಗುಲಮ್ ।

'ಓಂ ವಾಮನಾಯ ನಮಃ' ಎಂದು ಪಠಿಸುತ್ತ ಧ್ಯಾನಿಸಬೇಕಾದ ವಾಮನರೂಪ –ಕುಂದ ಬಣ್ಣ (ಮೊಲ್ಲೆಹೂವಿನ ಬಣ್ಣ). ಕಮಲದಂತೆ ದೀರ್ಘವಾದ ಲೋಚನಗಳು. ವಜ್ರಾಯುಧ, ಗದೆ, ಚಕ್ರ ಹಾಗೂ ಚಿನ್ನದ ಪದ್ಮ ಇವುಗಳ ಧಾರಣೆ.[227]

ಶ್ರೀಧರಪುಂಡ್ರಕ:

ಶ್ರೀಧರರೂಪವನ್ನು ನೆನೆಯುತ್ತ ಎಡಬಾಹುವಿನ ಮಧ್ಯದಲ್ಲಿ ಎಂಟು ಇಂಚುಗಳಷ್ಟು ಉದ್ದವಾದ ನಾಮವನ್ನು ಧರಿಸಬೇಕು.[228]

ಇದು ಬಿದಿರಿನ ಎಲೆಯ ಆಕಾರದಲ್ಲಿ ಇರಬೇಕು.[229] 'ಓಂ ಶ್ರೀಧರಾಯ ನಮಃ' ಎಂದು ಪಠಿಸುತ್ತ ಧ್ಯಾನಿಸಬೇಕಾದ ಶ್ರೀಧರನ ರೂಪ –ಪುಂಡರೀಕದಂತೆ ಕಾಂತಿ. ಚಕ್ರ, ಶಾರ್ಙ್ಗಧನುಸ್ಸು, ಪದ್ಮಗಳ ಧಾರಣೆ. ಕೆಂಪು ಅರವಿಂದದಂತೆ ನೇತ್ರ. ಮುತ್ತಿನ ಮಾಲೆಯ ಅಲಂಕಾರ.[230]

ಹೃಷೀಕೇಶಪುಂಡ್ರಕ:

ಹೃಷೀಕೇಶರೂಪವನ್ನು ನೆನೆಯುತ್ತ ಕುತ್ತಿಗೆಯ ಎಡಪಾರ್ಶ್ವದಲ್ಲಿ ನಾಲ್ಕು ಇಂಚುಗಳಷ್ಟು ಉದ್ದದ [231] ನಾಮವನ್ನು ದೀಪದ ಆಕೃತಿಯಲ್ಲಿ ಧರಿಸಬೇಕು.[232] 'ಓಂ ಹೃಷೀಕೇಶಾಯ ನಮಃ' –ಎಂದು ಪಠಿಸುತ್ತ ಈ ನಾಮವನ್ನು ಧರಿಸುವಾಗ ಧ್ಯಾನಿಸಬೇಕಾದ ಹೃಷೀಕೇಶನ ರೂಪ –ವಿದ್ಯುತ್ತಿನ ಬಣ್ಣ[233] ಚಕ್ರ, ಶಾರ್ಙ್ಗಧನುಸ್ಸು, ನೇಗಿಲು ಹಾಗೂ ಕೊಡಲಿ ಇವುಗಳ ಧಾರಣೆ. ಕೆಂಪುಮಾಲೆ ಹಾಗೂ ಅಂಬರಗಳ ಧಾರಣೆ ಪುಂಡರೀಕದಂತೆ.

---

226. ....ಅನ್ಯಾನ್ ದೀಪಾಕೃತೀನ್ ನ್ಯಸೇತ್ ।

227. ವಾಮನಃ ಕುಂದವರ್ಣಃ ಸ್ಯಾತ್ ಪುಂಡರೀಕಾಯತೇಕ್ಷಣಃ ।
ದೋರ್ಭಿರ್ವಜ್ರಂ ಗದಾಂ ಚಕ್ರಂ ಪದ್ಮಂ ಹೈಮಂ ಬಿಭರ್ತ್ಯಸೌ ॥
– ವೃ.ಹಾ.ಸ್ಮೃ. ೨–೮೭

228. ಶ್ರೀಧರಂ ಬಾಹುಮಧ್ಯೇ ತು ನ್ಯಸೇದಷ್ಟಾಂಗುಲಂ ತಥಾ ।

229. ವೇಣುಪತ್ರಾಕೃತಿಂ ಬಾಹ್ವೋಃ..... ।

230. ಶ್ರೀಧರಃ ಪುಂಡರೀಕಾಭ್ಯಶ್ಚಕ್ರಶಾರ್ಙ್ಗೀ ಚ ಪದ್ಮಧೃಕ್ ।
ರಕ್ತಾರವಿಂದನಯನೋ ಮುಕ್ತಾದಾಮವಿಭೂಷಿತಃ ।
– ವೃ.ಹಾ.ಸ್ಮೃ. ೨–೮೭

231. ಹೃಷೀಕೇಶೇತಿ ವಾಮಾಂಸೇ ಧಾರಯೇಚ್ಚತುರಂಗುಲಮ್ ।

232. ....ಅನ್ಯಾನ್ ದೀಪಾಕೃತೀನ್ ನ್ಯಸೇತ್ ।

233. ವಿದ್ಯುದ್ವರ್ಣೋ ಹೃಷೀಕೇಶಶ್ಚಕ್ರಶಾರ್ಙ್ಗದಲಾಸಿಭೃತ್ ।
ರಕ್ತಮಾಲಾಂಬರಧರಃ ಪುಂಡರೀಕಾವತಂಸಕಃ ।
– ವೃ.ಹಾ.ಸ್ಮೃ. ೨–೮೮

ಪದ್ಮನಾಭಪುಂಡ್ರಕ:

ಪದ್ಮನಾಭರೂಪವನ್ನು ನೆನೆಯುತ್ತ ಬೆನ್ನಿನಲ್ಲಿ ನಾಲ್ಕು ಅಂಗುಲಗಳಷ್ಟು ಉದ್ದದ ದೀಪಾಕೃತಿಯ ಪುಂಡ್ರವನ್ನು ಧರಿಸಬೇಕು.234 'ಓಂ ಪದ್ಮನಾಭಾಯ ನಮಃ' ಎಂದು ಪಠಿಸುತ್ತ ಈ ನಾಮವನ್ನು ಧರಿಸುವಾಗ ಚಿಂತಿಸಬೇಕಾದ ರೂಪ –ಇಂದ್ರನೀಲಮಣಿಯಂತೆ ನೀಲಬಣ್ಣ. ಚಕ್ರ, ಶಂಖ, ಪದ್ಮ, ಗದೆಗಳ ಧಾರಣೆ. ಪಟ್ಟೆಪೀತಾಂಬರಧಾರಣೆ. ಚಿತ್ರಮಾಲೆ ಹಾಗೂ ಗಂಧದ ಲೇಪನ.235

ದಾಮೋದರಪುಂಡ್ರಕ:

ದಾಮೋದರರೂಪವನ್ನು ನೆನೆಯುತ್ತ ಕುತ್ತಿಗೆಯ ಹಿಂಬದಿಯಲ್ಲಿ ನಾಲ್ಕು ಇಂಚುಗಳಷ್ಟು ಉದ್ದದ ದೀಪಾಕೃತಿಯ ಪುಂಡ್ರವನ್ನು ಧರಿಸಬೇಕು 236 'ಓಂ ದಾಮೋದರಾಯ ನಮಃ' ಎಂದು ಪಠಿಸುತ್ತ ಈ ನಾಮವನ್ನು ಧರಿಸುವಾಗ ಚಿಂತಿಸಬೇಕಾದ ರೂಪ– ಜಗದೊಡೆಯನಾದ ದಾಮೋದರ ಪದ್ಮ, ಶಾರ್ಙ್ಗ, ಧನುಸ್ಸು, ಕೊಡಲಿ ಹಾಗೂ ಶಂಖವನ್ನು ಧರಿಸಿರುವನು. ಪಟ್ಟೆಪೀತಾಂಬರವನ್ನು ಧರಿಸಿರುವನು. ವಿಶಾಲವಾದ ಕಣ್ಣುಗಳುಳ್ಳವನು. ನಾನಾ ರತ್ನಗಳಿಂದ ಅಲಂಕೃತನು.237

ವಾಸುದೇವಪುಂಡ್ರಕ:

ವಾಸುದೇವರೂಪವನ್ನು ನೆನೆಯುತ್ತ ನೆತ್ತಿಯಲ್ಲಿ ದೀಪಾಕೃತಿಯಲ್ಲಿ ಪುಂಡ್ರವನ್ನು ಧರಿಸಬೇಕು.238 ಎಲ್ಲ ನಾಮಗಳ ಧಾರಣೆಯ ಮೊದಲೂ ನೆತ್ತಿಯ ಮೇಲೆ ವಾಸುದೇವ ರೂಪದ ಸ್ಮರಣೆಯೊಂದಿಗೆ ನಾಮವನ್ನು ಧರಿಸಬೇಕು.239 'ಓಂ ನಮೋ ಭಗವತೇ ವಾಸುದೇವಾಯ' –ಎಂಬ ಮಂತ್ರದ ಪಠನದೊಂದಿಗೆ ಧರಿಸಬೇಕಾದ ಈ ಪುಂಡ್ರದ ಧಾರಣೆಯ ಸಂದರ್ಭದಲ್ಲಿ ಧ್ಯಾನಿಸಬೇಕಾದ ವಾಸುದೇವನ ರೂಪ –ಎದೆಯಲ್ಲಿ ಶ್ರೀವತ್ಸಚಿಹ್ನೆ. ಮೇಘದಂತೆ ನೀಲಬಣ್ಣ. ಕೊರಳಲ್ಲಿ ವನಮಾಲೆ. ನಾಲ್ಕು ಭುಜಗಳಲ್ಲಿ ಶಂಕಚಕ್ರಗದಾಪದ್ಮಗಳು. ಕಿರೀಟ, ಕುಂಡಲ, ಒಡ್ಯಾಣ, ಬಳೆಗಳು; ಕೊರಳಲ್ಲಿ ಕೌಸ್ತುಭ. ಹಳದಿ ರೇಷ್ಮೆಯ ಪಟ್ಟೆ. ಉಗುರುಗಳೆಂಬ ಮಣಿಗಳಿಂದ ವಿರಾಜಿಸುವ ಪಾದಗಳಿಂದ

---

234. ಪೃಷ್ಠೇ ಚ ಪದ್ಮನಾಭಂ ತು.... –ಹಾರೀತ.

* ಅಪರೇ ಪದ್ಮನಾಭೇತಿ ಧಾರಯೇಚ್ಚತುರಂಗುಲಮ್ ।

235. ಇಂದ್ರನೀಲನಿಭಶ್ಚಕ್ರಶಂಖಪದ್ಮಗದಾಧರಃ ।
ಪದ್ಮನಾಭಃ ಪೀತವಾಸಾಶ್ಚಿತ್ರಮಾಲ್ಯಾನುಲೇಪನಃ ॥ –ವೃ.ಹಾ.ಸ್ಮೃ. ೨–೮೮

236. ......ಗಲೇ ದಾಮೋದರಂ ತಥಾ । –ಹಾರೀತ.
ಕಕುದ್ದಾಮೋದರಾಯೇತಿ ಧಾರಯೇಚ್ಚತುರಂಗುಲಮ್ ।

237. ದಾಮೋದರಃ ಸಾರ್ವಭೌಮಃ ಪದ್ಮಶಾರ್ಙ್ಗಾಸಿಶಂಖಭೃತ್ ।

238. ....ತತ್ಪ್ರಕ್ಷಾಲಿತತೋಯೇನ ವಾಸುದೇವೇತಿ ಮೂರ್ಧನಿ । –ಹಾರೀತ

239. ....ಮೂರ್ಧನ್ಯಾದ್ಯಂತಯೋರಪಿ । ತನ್ಮನುರ್ದ್ವಾದಶಾರ್ಣಃ ಸ್ಯಾತ್.... ।
– ಯೋಗದೀಪಿಕಾ ೨–೪೪.

ಪೂಜಿಸುವವರ ಹೃದಯದಲ್ಲಿ ನೆಲೆಸುವವನು. ಪ್ರೀತಿಪೂರ್ವಕವಾಗಿ ನೋಡುತ್ತ, ಮಂದ ಹಾಸಬೀರುತ್ತ ಇರುವ ಭಗವಂತನನ್ನು ಏಕಾಗ್ರತೆಗೊಳಗಾದ ಮನಸ್ಸಿನಿಂದ ಧ್ಯಾನಿಸಬೇಕು.240

[ಹೀಗೆ ನಾರದರು ಧ್ರುವನಿಗೆ ವಾಸುದೇವದ್ವಾದಶಾಕ್ಷರಮಂತ್ರವನ್ನು ಜಪಿಸುವಾಗ ನಡೆಸಲು ಹೇಳಿರುವ ಧ್ಯಾನದ ಈ ವಚನಗಳಿಂದಲೇ ವಾಸುದೇವರೂಪವನ್ನು ಧ್ಯಾನಿಸಬೇಕು.]

ಬಲ ಸ್ತನದ ಸಮೀಪದಲ್ಲಿ 'ಶ್ರೀವತ್ಸಾಯ ನಮಃ' –ಎಂಬ ಮಂತ್ರವನ್ನು ಪಠಿಸುತ್ತ ಒಂದು ಪುಂಡ್ರವನ್ನು, ಎಡ ಸ್ತನದ ಸಮೀಪದಲ್ಲಿ 'ಕೌಸ್ತುಭಾಯ ನಮಃ' ಎಂಬ ಮಂತ್ರವನ್ನು ಪಠಿಸುತ್ತ ಮತ್ತೊಂದು ಪುಂಡ್ರವನ್ನು ಧರಿಸಲು ಸಂನ್ಯಾಸಪದ್ಧತಿಯಲ್ಲಿ ತಿಳಿಸಲಾಗಿದೆ.241

ಶರೀರಂ ಮಂದಿರಂ ಹರೇಃ

ಕೇಶವಾದಿ ಭಗವದ್ರೂಪಗಳ ಸಂಕೇತವಾಗಿ ದೇಹದ ಹಣೆಯೇ ಮುಂತಾದ ಹದಿಮೂರು ಅಂಗಗಳಲ್ಲಿ ಹದಿಮೂರು ಪುಂಡ್ರಗಳನ್ನು ಧರಿಸುವುದರಿಂದ ದೇಹವು ಶ್ರೀಹರಿಯ ಮಂದಿರವಾಗಿ ವಿರಾಜಿಸುವುದು. ಆದುದರಿಂದ ಅವಶ್ಯವಾಗಿ ಊರ್ಧ್ವಪುಂಡ್ರಗಳನ್ನು ಧರಿಸಿಕೊಳ್ಳಬೇಕು.242

ದೇಹದ ಮಧ್ಯಭಾಗದಲ್ಲಿ, ಮೂಲಾಧಾರದಿಂದ ನೆತ್ತಿಯ ವರೆಗೆ ಸುಷುಮ್ನಾ ನಾಡಿಯೂ, ಅದರ ಬಲಭಾಗದಲ್ಲಿ ಪಿಂಗಲಾನಾಡಿಯೂ, ಎಡಭಾಗದಲ್ಲಿ ಇಡಾ ನಾಡಿಯೂ ಹರಿಯುತ್ತಿದೆ. ಈ ನಾಡಿಗಳನ್ನು ಮೇಲ್ಮುಖವಾಗಿಸುವುದೂ ಪುಂಡ್ರ

---

240. ಶ್ರೀವತ್ಸಾಂಕಂ ಘನಶ್ಯಾಮಂ ಪುರುಷಂ ವನಮಾಲಿನಮ್ ।
ಶಂಖಚಕ್ರಗದಾಪದ್ಮೈರಭಿವ್ಯಕ್ತಚತುರ್ಭುಜಮ್ ॥
ಕಿರೀಟಿನಂ ಕುಂಡಲಿನಂ ಕೇಯೂರವಲಯಾನ್ವಿತಮ್ ।
ಕೌಸ್ತುಭಾಭರಣಗ್ರೀವಂ ಪೀತಕೌಶೇಯವಾಸಸಮ್ ॥
.....ಪದ್ಭ್ಯಾಂ ನಖಮಣಿಶ್ರೇಣ್ಯಾ ವಿಲಸದ್ಭ್ಯಾಂ ಸಮರ್ಚತಾಮ್ ।
ಹೃತ್ಪದ್ಮಕರ್ಣಿಕಾಧಿಷ್ಣ್ಯಮಾಕ್ರಮ್ಯಾತ್ಮನ್ಯವಸ್ಥಿತಮ್ ॥
ಸ್ಮಯಮಾನಮಭಿಧ್ಯಾಯೇತ್ ಸಾನುರಾಗಾವಲೋಕನಮ್ ।
ನಿಯತೇನೈಕಭೂತೇನ ಮನಸಾ ವರದರ್ಷಭಮ್ ॥ –ಭಾಗ. ೪-೯-೫೦.... ೫೩

241. ಮೃದಾ ಗೋಪಿಕಯಾ ಚೋರ್ಧ್ವಪುಂಡ್ರಂ ಕುರ್ಯಾತ್ ಸಮಾಹಿತಃ..... ಸ್ತನಪಾರ್ಶ್ವೇ
ತಥೈವ ಚ ಸ್ಥಾನಾನಿ ಚೈವಮುಕ್ತಾನಿ......। –ಸನ್ಯಾಸಪದ್ಧತಿ ೩-೩೩.
.....ಶ್ರೀವತ್ಸಶ್ಚ ಚತುರ್ಥ್ಯಂತಾಶ್ಚ ಸರ್ವಶಃ ।
ನಮೋಽ ಕೌಸ್ತುಭಾಯೇತಿ ಸವ್ಯಸ್ತನಮುಖೈವ ವಾ । –ಸನ್ಯಾಸ ಪ. ೩೭

242. ಧಾರಣಾದ್ ಊರ್ಧ್ವಪುಂಡ್ರಸ್ಯ ಶರೀರಂ ಮಂದಿರಂ ಹರೇಃ ।
ತಸ್ಮಾಚ್ಚ ಸತತಂ ಧಾರ್ಯಮೂರ್ಧ್ವಪುಂಡ್ರಂ ದ್ವಿಜೋತ್ತಮೈಃ ॥ –ಪರಾಶರರು.

ಧಾರಣೆಯ ಒಂದು ಉದ್ದೇಶ. ನಾಡಿಗಳು ಮೇಲ್ಮುಖಗಳಾದಾಗ ಅಧ್ಯಾತ್ಮಶಕ್ತಿಯು ಜಾಗೃತವಾಗುವುದು. ಆದುದರಿಂದ ಪುಂಡ್ರಗಳನ್ನು ಧರಿಸುವಾಗ ಮೇಲ್ಮುಖವಾಗಿಯೇ ತೀಡಬೇಕು. 'ಸಂನ್ಯಾಸಪದ್ಧತಿ'ಯಲ್ಲಿ ಶ್ರೀ ವಿಷ್ಣುತೀರ್ಥರು ಊರ್ಧ್ವಪುಂಡ್ರಧಾರಣೆಯಿಂದ ಊರ್ಧ್ವಗತಿ ದೊರಕುವುದೆಂದು ತಿಳಿಸಿ, ಬ್ರಹ್ಮನಾಡಿಗೆ ಅನುಸಾರವಾಗಿ ಊರ್ಧ್ವ ಪುಂಡ್ರಗಳು ಮುದ್ರೆಯಾಗಿ ಅಂದರೆ ಚಿಹ್ನೆಯಾಗಿ ಧರಿಸಲ್ಪಡುವವು ಎಂದು ಹೇಳುವ[243] ಮೂಲಕ ನಾಡಿಗಳನ್ನು ಮೇಲ್ಮುಖವಾಗಿಸುವಿಕೆಯಲ್ಲಿ ಪುಂಡ್ರಧಾರಣೆಯ ಪಾತ್ರವಿದೆ ಎಂದು ಸೂಚಿಸಲಾಗಿದೆ. ದೇಹದಲ್ಲಿ ಸುಷುಮ್ನಾ, ಪಿಂಗಲಾ ಹಾಗೂ ಇಡಾ ನಾಡಿಗಳು ಹರಿಯುವ ಭಾಗಗಳಲ್ಲಿಯೇ ಪುಂಡ್ರಗಳನ್ನು ಧರಿಸುವಿಕೆ ಶ್ರೀ ವಿಷ್ಣುತೀರ್ಥರ ಸೂಚನೆಗೆ ಪೂರಕವಾಗಬಲ್ಲದು.

ಊರ್ಧ್ವಪುಂಡ್ರಧಾರಣೆಗೆ ರಕ್ತಮಾಂಸಾದಿಗಳಿಂದಾಗಿ ಅಪವಿತ್ರ ಎನಿಸುವ ದೇಹಕ್ಕೆ ಶ್ರೀಹರಿಯ ಮಂದಿರದ ಪಾವಿತ್ರ್ಯವನ್ನು ತುಂಬಿಸುವ, ಹಾಗೂ ಆಧ್ಯಾತ್ಮಿಕ ಸಾಧನೆಗೆ ಬೇಕಾದ ಜಾಗೃತಿ ನೀಡುವ ಸಾಮರ್ಥ್ಯ ಇರುವುದರಿಂದಲೇ ಸ್ಮೃತಿಪುರಾಣಾದಿಗಳಲ್ಲಿ ಊರ್ಧ್ವಪುಂಡ್ರಧಾರಣೆಯನ್ನು ವ್ಯಾಪಕವಾಗಿ ಪ್ರಶಂಸಿಸಲಾಗಿದೆ. ಅದರಲ್ಲಿ ದಾರ್ಢ್ಯ ಉಂಟಾಗಲು ಅಂತಹ ಎಂಭತ್ತು ಪ್ರಮಾಣಗಳನ್ನು ಸಂಗ್ರಹಿಸಲಾಗಿದೆ.

* * *

ಎಂಭತ್ತು ವಚನಗಳಲ್ಲಿ

ಊರ್ಧ್ವಪುಂಡ್ರಧಾರಣೆ

ಪುರಾಣಗಳಲ್ಲಿ, ಸ್ಮೃತಿಗ್ರಂಥಗಳಲ್ಲಿ ಊರ್ಧ್ವಪುಂಡ್ರಧಾರಣೆಯ ಹಿರಿಮೆಯ ಕುರಿತು ವ್ಯಾಪಕವಾದ ನಿರೂಪಣೆ ಬಂದಿದೆ. ಕೆಲವು ಮಾತುಗಳಲ್ಲಿ ವಿಧಿಮುಖವಾದ ಸ್ತುತಿ ನಡೆದಿದ್ದರೆ ಮತ್ತೆ ಕೆಲವು ಮಾತುಗಳಲ್ಲಿ ನಿಷೇಧಮುಖದ ಸ್ತುತಿ ನಡೆದಿದೆ. ಮತ್ತೆ ಕೆಲವು ಊರ್ಧ್ವಪುಂಡ್ರಧಾರಣೆಯ ವಿಧಾನದ ಬಗ್ಗೆ ಬಂದಿವೆ.

ಆ ರೀತಿಯಾಗಿಯೇ ಅವನ್ನು ಸಂಗ್ರಹಿಸಿ, ಪರಿಶೀಲಿಸೋಣ. ಕೆಲವು ಮಾತುಗಳಲ್ಲಿ ಆರ್ಥಿಕವಾಗಿ ಪೌನರುಕ್ತ್ಯ ಕಾಣಿಸುವುದಾದರೂ ದಾರ್ಢ್ಯಕ್ಕಾಗಿ ಅಂತಹವುಗಳನ್ನು ಸಂಗ್ರಹಿಸಲಾಗಿದೆ.

---

243. ....ಊರ್ಧ್ವಪುಂಡ್ರಾದಥೋರ್ಧ್ವಗಾ ।
ಮುದ್ರಾ ಹಿ ಧ್ರಿಯತೇ ನಿತ್ಯಂ ಬ್ರಹ್ಮನಾಡ್ಯನುಸಾರಿಣೀ —ಸಂನ್ಯಾ.ಪ. ೫೩

* ಊರ್ಧ್ವಪುಂಡ್ರ ಅಧ್ಯಾತ್ಮಸಾಧನೆಯ ಚಿಹ್ನೆ. ಈ ಮಾತನ್ನು ವಿಷ್ಣುತೀರ್ಥರು ಸೂಚಿಸಿದ್ದಾರೆ 'ಬ್ರಹ್ಮನಾಡೀಕ್ರಮೇಣ ತು' –ಬನ್ನಂಜೆ ಗೋವಿಂದಾಚಾರ್ಯ (ಕೃ.ಮ)

ವಿಧಿಮುಖದ ಸ್ತುತಿ:

1. ಸರ್ವಪಾಪವಿಶುದ್ಧಾತ್ಮಾ ವಿಷ್ಣುಲೋಕಂ ಸ ಗಚ್ಛತಿ ।
ಊರ್ಧ್ವಪುಂಡ್ರಮೂರ್ಧ್ವರೇಖಂ ಲಲಾಟೇ ಯಸ್ಯ ದೃಶ್ಯತೇ ॥

– ಪದ್ಮಪುರಾಣ (ಪಾತಾಲ 79-22)

ಯಾರ ಹಣೆಯಲ್ಲಿ ಊರ್ಧ್ವಪುಂಡ್ರ, ಊರ್ಧ್ವರೇಖೆ ಕಾಣಿಸುವುದೋ ಅವನು ಸಕಲಪಾಪಗಳಿಂದ ದೂರನಾಗಿ ವಿಷ್ಣುಲೋಕವನ್ನು ಹೊಂದುವನು.

2. ಶುಭ್ರೇಣೈವ ಮೃದಾ ಪಶ್ಚಾದ್ವಿಭೃಯಾತ್ ಸುಸಮಾಹಿತಃ ।
ತ್ರಿಸಂಧ್ಯಾಸು ಮೃದಾ ವಿಪ್ರೋ ಯಾಗಕಾಲೇ ವಿಶೇಷತಃ ॥

– ವೃದ್ಧಹಾರೀತ ಸ್ಮೃತಿ 2-57

ಶುದ್ಧವಾದ ಮೃತ್ ಎನಿಸಿದ ಗೋಪಿಯಿಂದ, ಏಕಾಗ್ರತೆಯಿಂದ ಸಂಧ್ಯಾವಂದನೆಯ ಅವಧಿಯಲ್ಲೂ ವಿಶೇಷವಾಗಿ ಪೂಜೆಯ ಅವಧಿಯಲ್ಲೂ ಊರ್ಧ್ವಪುಂಡ್ರವನ್ನು ಧರಿಸಿಕೊಳ್ಳಬೇಕು.

3. ಶ್ರಾದ್ಧೇ ದಾನೇ ತಥಾ ಹೋಮೇ ಸ್ವಾಧ್ಯಾಯೇ ಪಿತೃತರ್ಪಣೇ ।
ಶ್ರದ್ಧಾಲುರೂರ್ಧ್ವಪುಂಡ್ರಾಣಿ ಬಿಭೃಯಾತ್ ದ್ವಿಜಸತ್ತಮಃ ।

– ವೃದ್ಧಹಾರೀತ ಸ್ಮೃತಿ 2-58

ಶ್ರದ್ಧಾಲುವಾದ ಬ್ರಾಹ್ಮಣನು ಶ್ರಾದ್ಧ, ದಾನ, ಹೋಮ, ಸ್ವಾಧ್ಯಾಯ, ಪಿತೃತರ್ಪಣ –ಈ ಎಲ್ಲವುಗಳ ಸಂದರ್ಭದಲ್ಲೂ ಊರ್ಧ್ವಪುಂಡ್ರಗಳನ್ನು ಧರಿಸಿಕೊಂಡಿರಲೇ ಬೇಕು.

4. ಊರ್ಧ್ವಪುಂಡ್ರಂ ಮೃದಾ ಶುಭ್ರಂ ಲಲಾಟೇ ಯಸ್ಯ ದೃಶ್ಯತೇ ।
ಚಂಡಾಲೋಽಪಿ ಹಿ ಶುದ್ಧಾತ್ಮಾ ವಿಷ್ಣುಲೋಕೇ ಮಹೀಯತೇ ।

– ವೃದ್ಧಹಾರೀತ ಸ್ಮೃತಿ 2-66

ಯಾರ ಹಣೆಯಲ್ಲಿ ಗೋಪಿಯ ಶುಭ್ರವಾದ ಊರ್ಧ್ವಪುಂಡ್ರವು ವಿರಾಜಿಸುವುದೋ ಅಂತಹವನು ಚಂಡಾಲನೇ ಆದರೂ ಶುದ್ಧಾತ್ಮ ಎನಿಸಿ, ವಿಷ್ಣುಲೋಕದಲ್ಲಿ ವಿರಾಜಿಸುವನು.

5. ಊರ್ಧ್ವಪುಂಡ್ರಸ್ಯ ಮಧ್ಯೇ ತು ಲಲಾಟೇ ಸುಮನೋಹರೇ ।
ಲಕ್ಷ್ಮ್ಯಾ ಸಹ ಸಮಾಸೀನೋ ರಮತೇ ತತ್ರ ವೈ ಹರಿಃ ॥

– ವೃದ್ಧಹಾರೀತ ಸ್ಮೃತಿ 2-67

ಹಣೆಯ ಊರ್ಧ್ವಪುಂಡ್ರದ ಮಧ್ಯಭಾಗದಲ್ಲಿ ಶ್ರೀಹರಿಯು ಲಕ್ಷ್ಮೀಸಹಿತನಾಗಿ ನೆಲೆಸಿದ್ದು, ಕ್ರೀಡಿಸುತ್ತಿರುವನು.

6. ಊರ್ಧ್ವಪುಂಡ್ರಂ ತು ಸರ್ವೇಷಾಂ ನ ನಿಷಿದ್ಧಂ ಕದಾಚನ ।
ಧಾರಯೇತ್ ಕ್ಷತ್ರಿಯಾದ್ಯೋಽಪಿ ವಿಷ್ಣುಭಕ್ತೋ ಭವೇದ್ಯದಿ ॥

– ಪದ್ಮಪುರಾಣ (ಉತ್ತರಖಂಡ 225-17)

ಊರ್ಧ್ವಪುಂಡ್ರವು ಎಂದೂ ಯಾರಿಗೂ ನಿಷಿದ್ಧವಲ್ಲ. ವಿಷ್ಣುಭಕ್ತರಾಗಿರುವ ಕ್ಷತ್ರಿಯಾದಿಗಳೂ ಊರ್ಧ್ವಪುಂಡ್ರವನ್ನು ಧರಿಸಲೇಬೇಕು.

7. ಸುದರ್ಶನೇನಾಂಕಿತ ಬಾಹುಮೂಲಾ–
ಸ್ತಥೋರ್ಧ್ವಪುಂಡ್ರಾಂಕಿತಸರ್ವಗಾತ್ರಾಃ ।
ಮಾಲಾರವಿಂದಾಕ್ಷಧರಾ ವಿಶುದ್ಧಾಃ
ರಕ್ಷಂತಿ ಲೋಕಾನ್ ದುರಿತೌಘಸಂಘಾತ್ ॥

– ಪದ್ಮಪುರಾಣ (ಉತ್ತರಖಂಡ 225-59)

ಯಾರು ತಮ್ಮ ಬಾಹುಮೂಲಗಳಲ್ಲಿ ಸುದರ್ಶನದ ಚಿಹ್ನೆ ಧರಿಸಿರುವರೋ, ದೇಹದ ಬೇರೆ ಬೇರೆ ಅಂಗಗಳಲ್ಲಿ ಊರ್ಧ್ವಪುಂಡ್ರಗಳನ್ನು ಧರಿಸಿರುವರೋ, ಕಮಲಾಕ್ಷ ಮಾಲೆಯನ್ನು ಧರಿಸಿರುವರೋ, ಪವಿತ್ರರಾದ ಅಂತಹವರು ಪಾಪರಾಶಿಯಿಂದ ಲೋಕಗಳನ್ನು ಪಾರುಮಾಡುವರು.

8. ಊರ್ಧ್ವಪುಂಡ್ರಸ್ಯ ಮಧ್ಯೇ ತು ವಿಶಾಲೇ ಸುಮನೋಹರೇ ।
ಲಕ್ಷ್ಮ್ಯಾ ಸಾರ್ಧಂ ಸಮಾಸೀನೋ ದೇವದೇವೋ ಜನಾರ್ದನಃ ॥

ತಸ್ಮಾದ್ಯಸ್ಯ ಶರೀರೇ ತು ಊರ್ಧ್ವಪುಂಡ್ರಂ ಧೃತಂ ಭವೇತ್ ।
ತಸ್ಯ ದೇಹಂ ಭಗವತೋ ವಿಮಲಂ ಮಂದಿರಂ ಸ್ಮೃತಮ್ ॥

– ಪದ್ಮಪುರಾಣ (ಉತ್ತರಖಂಡ 225-2, 3)

ಊರ್ಧ್ವಪುಂಡ್ರದ ಸುಂದರವಾದ ಮಧ್ಯ ಭಾಗದಲ್ಲಿ ಶ್ರೀಹರಿಯು ಲಕ್ಷ್ಮಿಯಿಂದ ಸಹಿತನಾಗಿ ಆಸೀನನಾಗುವನು. ಆದುದರಿಂದ ಯಾರ ಶರೀರದಲ್ಲಿ ಊರ್ಧ್ವಪುಂಡ್ರದ ಧಾರಣೆ ನಡೆದಿದೆಯೋ ಅದು ಶ್ರೀಹರಿಯ ನಿರ್ಮಲವಾದ ಮಂದಿರ.

9. ಸ ಸ್ನಾತಃ ಸರ್ವತೀರ್ಥೇಷು ಸರ್ವಯಜ್ಞೇಷು ದೀಕ್ಷಿತಃ ।
ಧಾರಯೇದ್ ಊರ್ಧ್ವಪುಂಡ್ರಂ ಯೋ ಮೃದಾ ಶುಭ್ರೇಣ ವೈಷ್ಣವಃ ॥

– ಪದ್ಮಪುರಾಣ (ಉತ್ತರಖಂಡ 225-4)

ಯಾರು ಶುಭ್ರವಾದ ಮಣ್ಣಿನಿಂದ ಊರ್ಧ್ವಪುಂಡ್ರವನ್ನು ಧರಿಸುವನೋ ಅಂತಹವನು ಎಲ್ಲ ತೀರ್ಥಗಳಲ್ಲೂ ಮಿಂದಷ್ಟು ಫಲವನ್ನೂ, ಎಲ್ಲ ಯಜ್ಞಗಳಲ್ಲೂ ದೀಕ್ಷಿತನಾದಷ್ಟು ಫಲವನ್ನೂ ಹೊಂದುವನು.

10. ಊರ್ಧ್ವಪುಂಡ್ರಧರೋ ವಿಪ್ರಃ ಸರ್ವಲೋಕೇಷು ಪೂಜಿತಃ ।
ವಿಮಾನವರಮಾರುಹ್ಯ ಯಾತಿ ವಿಷ್ಣೋಃ ಪರಂ ಪದಮ್ ॥

– ಪದ್ಮಪುರಾಣ (ಉತ್ತರಖಂಡ 225-5)

ಊರ್ಧ್ವಪುಂಡ್ರವನ್ನು ಧರಿಸಿದ ಬ್ರಾಹ್ಮಣನು ಸಕಲಲೋಕಗಳಲ್ಲೂ ಪೂಜ್ಯನಾಗುವನು. ಶ್ರೇಷ್ಠ ವಿಮಾನವನ್ನು ಏರಿ ಅವನು ವಿಷ್ಣುಲೋಕಕ್ಕೆ ಸಾಗುವನು.

11. ಊರ್ಧ್ವಪುಂಡ್ರಧರಂ ದೃಷ್ಟ್ವಾ ಸರ್ವಪಾಪೈಃ ಪ್ರಮುಚ್ಯತೇ ।
ನಮಸ್ಕೃತ್ವಾಽಥವಾ ಭಕ್ತ್ಯಾ ಸರ್ವದಾನಫಲಂ ಲಭೇತ್ ॥

– ಪದ್ಮಪುರಾಣ (ಉತ್ತರಖಂಡ 225-7)

ಊರ್ಧ್ವಪುಂಡ್ರಗಳನ್ನು ಧರಿಸಿದ ಬ್ರಾಹ್ಮಣನನ್ನು ನೋಡಿದ್ದರಿಂದಲೇ ಸಕಲಪಾಪಗಳ ಪರಿಹಾರವಾಗುವುದು. ಅವನಿಗೆ ಭಕ್ತಿಯಿಂದ ನಮಸ್ಕರಿಸಿದರೆ ಸಕಲದಾನಗಳನ್ನು ನೀಡಿದ ಫಲ ದೊರಕುವುದು.

12. **ಊರ್ಧ್ವಪುಂಡ್ರಧರಂ ವಿಪ್ರಂ ಯಃ ಶ್ರಾದ್ಧೇ ಭೋಜಯಿಷ್ಯತಿ ।**
ಆಕಲ್ಪಕೋಟಿಪಿತರಸ್ತಸ್ಯ ತೃಪ್ತಾ ನ ಸಂಶಯಃ ॥

– ಪದ್ಮಪುರಾಣ (ಉತ್ತರಖಂಡ 225-8)

ಶ್ರಾದ್ಧದಲ್ಲಿ ಊರ್ಧ್ವಪುಂಡ್ರಧಾರಿಯಾದ ಬ್ರಾಹ್ಮಣನಿಗೆ ಭೋಜನ ನೀಡಿದಲ್ಲಿ ಇದರಿಂದ ಅವನ ಕೋಟಿಕಲ್ಪಗಳಿಗೆ ಸಂಬಂಧಿಸಿದ ಪಿತೃಗಳೆಲ್ಲ ತೃಪ್ತರಾಗುವರು.

13. **ಊರ್ಧ್ವಪುಂಡ್ರಧರೋ ಯಸ್ತು ಕುರ್ಯಾಚ್ಛ್ರಾದ್ಧಂ ಶುಭಾನನೇ ।**
ಕಲ್ಪಕೋಟಿಸಹಸ್ರಾಣಿ ಗಯಾಶ್ರಾದ್ಧಫಲಂ ಲಭೇತ್ ।

– ಪದ್ಮಪುರಾಣ (ಉತ್ತರಖಂಡ 225-9)

ಯಾರು ಊರ್ಧ್ವಪುಂಡ್ರಗಳನ್ನು ಧರಿಸಿಕೊಂಡು ಶ್ರಾದ್ಧ ನಡೆಸುವನೋ ಅವನಿಗೆ ಕೋಟಿಸಹಸ್ರಕಲ್ಪಗಳಲ್ಲಿ ನಡೆಸಿದ ಗಯಾಶ್ರಾದ್ಧದ ಫಲ ದೊರಕುವುದು.

14. **ಯಜ್ಞದಾನತಪಶ್ಚರ್ಯಾಜಪಹೋಮಾದಿಕಂ ಚ ಯತ್ ।**
ಊರ್ಧ್ವಪುಂಡ್ರಧರಃ ಕುರ್ಯಾತ್ ತಸ್ಯ ಪುಣ್ಯಮನಂತಕಮ್ ॥

– ಪದ್ಮಪುರಾಣ (ಉತ್ತರಖಂಡ 225-10)

ಶಾರದಾತಿಲಕದ ವ್ಯಾಖ್ಯಾನದಲ್ಲಿ ಊರ್ಧ್ವಪುಂಡ್ರಧಾರಣೆಯ ಬಳಿಕವೇ ತ್ರಿಪುಂಡ್ರಧಾರಣೆ

'ಶಾರದಾತಿಲಕ'ದ ವ್ಯಾಖ್ಯಾನವಾದ ರಾಘವಭಟ್ಟಕೃತ 'ಪದಾರ್ಥಾದರ್ಶ' ದಲ್ಲಿ (ಚತುರ್ಥ ಪಟಲದಲ್ಲಿ) ಮಂತ್ರೋಪದೇಶದ ದೀಕ್ಷಾದ ಬಗ್ಗೆ ತಿಳಿಸುವ ಪ್ರಸಂಗದಲ್ಲಿ ಶೈವರೂ ಊರ್ಧ್ವಪುಂಡ್ರಧಾರಣೆಯ ಅನಂತರವೇ ಭಸ್ಮದಿಂದ ತ್ರಿಪುಂಡ್ರಧಾರಣೆ ಮಾಡಿಕೊಳ್ಳಬೇಕು. ಯಾಕೆಂದರೆ ಪ್ರತಿಯೊಬ್ಬ ದ್ವಿಜನೂ ಊರ್ಧ್ವ ಪುಂಡ್ರವನ್ನು ಧರಿಸಲೇಬೇಕೆಂದು ಬ್ರಹ್ಮಾಂಡಪುರಾಣದಲ್ಲಿ ತಿಳಿಸಲಾಗಿದೆ ಎಂದು ಬೋಧಿಸಲಾಗಿದೆ–

ಶೈವೈಸ್ತೂರ್ಧ್ವಪುಂಡ್ರಧಾರಣಾನಂತರಮೇವ ಭಸ್ಮನಾ ತ್ರಿಪುಂಡ್ರಧಾರಣಮಪಿ ಕಾರ್ಯಮ್ । ಯತೋ ದ್ವಿಜಾನಾಮೂರ್ಧ್ವಪುಂಡ್ರಸ್ಯಾವಶ್ಯಕತ್ವಮ್–

ತದುಕ್ತಂ ಬ್ರಹ್ಮಾಂಡಪುರಾಣೇ–

ಊರ್ಧ್ವಪುಂಡ್ರಂ ಋಜುಂ ಸೌಮ್ಯಂ ಲಲಾಟೇ ಯಸ್ಯ ದೃಶ್ಯತೇ । ....
ಮತ್ಪ್ರಿಯಾರ್ಥಂ ಶುಭಾರ್ಥಂ ವಾ ರಕ್ಷಾರ್ಥಂ ಚತುರಾನನ ।
ಮದ್ಭಕ್ತೋ ಧಾರಯೇನ್ನಿತ್ಯಮೂರ್ಧ್ವಪುಂಡ್ರಮತಂದ್ರಿತಃ ॥ ಇತಿ ।

ಯಾರು ಊರ್ಧ್ವಪುಂಡ್ರಗಳನ್ನು ಧರಿಸಿ ಯಜ್ಞ, ದಾನ, ತಪಸ್ಸು, ಜಪ, ಹೋಮಾದಿಗಳನ್ನು ನಡೆಸುವನೋ ಅಂತಹವನಿಗೆ ಅನಂತಪುಣ್ಯ ಪ್ರಾಪ್ತವಾಗುವುದು.

15. ಊರ್ಧ್ವಪುಂಡ್ರಧರೋ ವಿಪ್ರೋ ಮೃದಾ ಶುಭ್ರೇಣ ವೈದಿಕಃ ।
ನ ತಿರ್ಯಗ್ ಧಾರಯೇದ್ವಿದ್ವಾನಾಪದ್ಯಪಿ ಕದಾಚನ ।

– ಪದ್ಮಪುರಾಣ (ಉತ್ತರಖಂಡ 225-14)

ಶುಭ್ರ ಮಣ್ಣಿನಿಂದ ಊರ್ಧ್ವಪುಂಡ್ರಗಳನ್ನು ಧರಿಸಿದ ಬ್ರಾಹ್ಮಣನೇ ವೈದಿಕ. ವಿದ್ವಾಂಸನಾದವನು ಆಪತ್ತು ಸಂಭವಿಸುವುದೆಂದಿದ್ದರೂ ಎಂದೆಂದೂ ಅಡ್ಡನಾಮಗಳನ್ನು ಧರಿಸಲೇ ಬಾರದು.

16. ಗೋಪೀಚಂದನಲಿಪ್ತಾಂಗೋ ಯಂ ಯಂ ಪಶ್ಯತಿ ಚಕ್ಷುಷಾ ।
ತಂ ತಂ ಶುದ್ಧಂ ವಿಜಾನೀಯಾನ್ನಾತ್ರ ಕಾರ್ಯಾ ವಿಚಾರಣಾ ।

– ಕೃಷ್ಣಾಮೃತಮಹಾರ್ಣವ 219

ಗೋಪೀಚಂದನದಿಂದ ಊರ್ಧ್ವಪುಂಡ್ರಗಳನ್ನು ಧರಿಸಿಕೊಂಡವನು ತನ್ನ ಕಣ್ಣಿನಿಂದ ಯಾರ್‍ಯಾರನ್ನು ಕಾಣುವನೋ ಅವರೆಲ್ಲ ಶುದ್ಧರೆನಿಸುವರು. ಈ ಬಗ್ಗೆ ಸಂದೇಹಕ್ಕೆ ಅವಕಾಶವಿಲ್ಲ.

17. ಅಶುಚಿರ್ವಾಪ್ಯನಾಚಾರೋ ಮನಸಾ ಪಾಪಮಾಚರನ್ ।
ಶುಚೀರೇವ ಭವೇನ್ನಿತ್ಯಮೂರ್ಧ್ವಪುಂಡ್ರಾಂಕಿತೋ ನರಃ ॥

– ಕೃಷ್ಣಾಮೃತಮಹಾರ್ಣವ -216

ಅಶುಚಿಯಾಗಿದ್ದರೂ, ಅನಾಚಾರಿಯಾಗಿದ್ದರೂ, ಮನಸ್ಸಿನಿಂದ ಪಾಪವನ್ನೆಸಗುತ್ತಿದ್ದರೂ ಯಾವಾಗಲೂ ಊರ್ಧ್ವಪುಂಡ್ರ ಧರಿಸಿರುವವನು ಶುಚಿಯೇ ಆಗಿರುವನು.

18. ಮಹೋಪನಿಷದಿ ಪ್ರೋಕ್ತಮೂರ್ಧ್ವಪುಂಡ್ರಂ ಪರಂ ಶುಭಮ್ ।
ಧೃತೋರ್ಧ್ವಪುಂಡ್ರಃ ಕೃತಚಕ್ರಧಾರೀ
ನಾರಾಯಣಂ ಸಾಂಖ್ಯಯೋಗಾಧಿಗಮ್ಯಮ್ ।
ಜ್ಞಾತ್ವಾ ವಿಮುಚ್ಯೇತ ನರಃ ಸಮಸ್ತೈಃ
ಸಂಸಾರಪಾಶೈರಿಹ ಚೈತಿ ವಿಷ್ಣುಮ್ ॥ *– ವಾಧೂಲಸ್ಮೃತಿ 102*

ಶ್ರೇಷ್ಠವಾದ ಮಂಗಲಾತ್ಮಕವಾದ ಊರ್ಧ್ವಪುಂಡ್ರ ಮಹೋಪನಿಷತ್ತಿನಲ್ಲಿ ಹೇಳಲ್ಪಟ್ಟಿದೆ.

ಊರ್ಧ್ವಪುಂಡ್ರಗಳನ್ನು ಧರಿಸಿದ, ಚಕ್ರದ ಚಿಹ್ನೆಯನ್ನು ಹಾಕಿಕೊಂಡ ನರನು ಸಾಂಖ್ಯಯೋಗಗಳಿಂದ ತಿಳಿಯಲು ಯೋಗ್ಯನಾದ ಶ್ರೀವಿಷ್ಣುವನ್ನು ತಿಳಿದು ಎಲ್ಲ ಬಗೆಯ ಸಂಸಾರ ಪಾಶಗಳಿಂದ ಬಿಡುಗಡೆ ಹೊಂದಿ, ಶ್ರೀವಿಷ್ಣುವನ್ನು ಪಡೆಯುವನು.

19. ಅಥರ್ವಶಿರಸಿ ಪ್ರೋಕ್ತಮೂರ್ಧ್ವಪುಂಡ್ರವಿಧಿಂ ದ್ವಿಜಾಃ ।
ಪ್ರವಕ್ಷ್ಯಾಮಿ ಹಿತಾರ್ಥಂ ವೋ ಭವಪಾಪಪ್ರಣಾಶನಮ್ ॥

– ವಾಧೂಲಸ್ಮೃತಿ 103

ಹೇ ಬ್ರಾಹ್ಮಣರೇ, ಅಥರ್ವಶಿರಸ್ಸಿನಲ್ಲಿ ಊರ್ಧ್ವಪುಂಡ್ರಧಾರಣೆಯ ವಿಧಾನ ಹೇಳಲ್ಪಟ್ಟಿದೆ. ಸಂಸಾರವನ್ನೂ ಪಾಪವನ್ನೂ ಪರಿಹರಿಸುವ ಅದನ್ನು ನಿಮ್ಮ ಹಿತಕ್ಕಾಗಿ ಹೇಳುವೆನು.

20. ಊರ್ಧ್ವಪುಂಡ್ರಮೃಜುಂ ಸೌಮ್ಯಂ ಲಲಾಟೇ ಯಸ್ಯ ದೃಶ್ಯತೇ ।
ಸ ಚಂಡಾಲೋಽಪಿ ಶುದ್ಧಾತ್ಮಾ ಪೂಜ್ಯ ಏವ ನ ಸಂಶಯಃ ॥

– ಕೃ.ಮು. 215

ಯಾರ ಹಣೆಯಲ್ಲಿ ನೇರವಾದ, ಸೌಮ್ಯವಾದ ಊರ್ಧ್ವಪುಂಡ್ರವು ವಿರಾಜಿಸುತ್ತಿರುವುದೋ ಅಂತಹವನು ಚಂಡಾಲನೇ ಆದರೂ ಶುದ್ಧಾತ್ಮ ಎನಿಸಿ, ಪೂಜ್ಯನಾಗುವನು. ಇದರಲ್ಲಿ ಸಂದೇಹವಿಲ್ಲ.

21. ಹೃದಿ ರೂಪಂ ಮುಖೇ ನಾಮ ನೈವೇದ್ಯಮುದರೇ ಹರೇಃ ।
ಪಾದೋದಕಂ ಚ ನಿರ್ಮಾಲ್ಯಂ ಮಸ್ತಕೇ ಯಸ್ಯ ಸೋಽಚ್ಯುತಃ ॥

– ಕೃ.ಮು. 42

ಯಾರ ಹೃದಯದಲ್ಲಿ ಶ್ರೀಹರಿಯ ರೂಪವು ಧ್ಯಾನಿಸಲ್ಪಡುತ್ತಿರುವುದೋ, ಯಾರ ಮುಖದಲ್ಲಿ ಕೇಶವಪುಂಡ್ರವು ವಿರಾಜಿಸುತ್ತಿರುವುದೋ, ಯಾರ ಉದರದಲ್ಲಿ ಶ್ರೀಹರಿಯ ನೈವೇದ್ಯವು ಇರುವುದೋ, ಯಾರ ತಲೆಯಲ್ಲಿ ಭಗವಂತನ ಪಾದೋದಕ ಹಾಗೂ ನಿರ್ಮಾಲ್ಯಗಳ ಧಾರಣೆ ಇರುವುದೋ ಅಂತಹವನು ಅಚ್ಯುತನ ಪ್ರತಿಮೆ ಎನಿಸಬಲ್ಲನು.

22. ತಸ್ಮಾತ್ ಸರ್ವೈಶ್ಚ ಕಾರ್ಯಾಣಿ ನರೈಸ್ತಾನಿ ಬುಭೂಷುಭಿಃ ।
ನ ವಿಶೇಷೋಽತ್ರ ವರ್ಣಾನಾಮಾಶ್ರಮಾಣಾಂ ತಥೈವ ಚ ।
ಅಯಂ ಭಾಗವತೋ ಧರ್ಮಃ ಸಂಕ್ಲೃಪ್ತೋ ಹರಿಣಾ ಸ್ವಯಮ್ ॥

– ಸಂನ್ಯಾಸಪದ್ಧತಿ 47

ದೇವತೆಗಳು ಶ್ರೀವಿಷ್ಣುವಿನ ನಿರ್ದೇಶನದಂತೆ ತಮ್ಮ ಮುಖದಲ್ಲಿ ಊರ್ಧ್ವಪುಂಡ್ರವನ್ನು ಧರಿಸಿಕೊಂಡು ವೃತ್ರಾಸುರನ ವಿರುದ್ಧ ಕಾದಾಡಿ ಜಯಿಸಿರುವ ಪ್ರಯುಕ್ತ ಎಲ್ಲ ನರರೂ ಊರ್ಧ್ವಪುಂಡ್ರವನ್ನು ಧರಿಸಬೇಕು. ಪ್ರತಿಯೊಂದು ವರ್ಣದವರೂ ಆಶ್ರಮದವರೂ ಧರಿಸಿಕೊಳ್ಳಬೇಕು. ಊರ್ಧ್ವಪುಂಡ್ರಧಾರಣೆಯು ಭಾಗವತಧರ್ಮವಾಗಿ ಶ್ರೀಹರಿಯಿಂದ ನಿಗದಿಗೊಳಿಸಲ್ಪಟ್ಟಿದೆ.

23. ಜಪ್ತಂ ದತ್ತಂ ಹುತಂ ಧ್ಯಾತಂ ದೇವಾರ್ಚಾ ಪಿತೃತರ್ಪಣಮ್ ।
ವ್ಯರ್ಥಂ ಭವತಿ ತತ್ ಸರ್ವಮೂರ್ಧ್ವಪುಂಡ್ರಂ ವಿನಾ ಕೃತಮ್ ।

– ಸಂನ್ಯಾಸಪದ್ಧತಿ 50

ಊರ್ಧ್ವಪುಂಡ್ರ ಧರಿಸದೆ ನಡೆಸಿದ ಜಪ, ದಾನ, ಹೋಮ, ಧ್ಯಾನ, ದೇವಪೂಜೆ, ಪಿತೃತರ್ಪಣ ಇವೆಲ್ಲ ವ್ಯರ್ಥವೆನಿಸುವುದು.

24. ಕೃತಘ್ನೋ ವಾಽಥ ಗೋಘ್ನೋ ವಾ ಹೈತುಕಃ ಸರ್ವಪಾಪಕೃತ್ ।
ಗೋಪೀಚಂದನಸಂಪರ್ಕಾತ್ ಪೂತೋ ಭವತಿ ಮಾನವಃ ॥

– ಸ್ಮೃತಿಮುಕ್ತಾವಲಿ

ಕೃತಘ್ನತೆ, ಗೋಹತ್ಯೆ ಎಸಗಿದವನು ಯುಕ್ತಿಯಿಂದ ಧರ್ಮಾದಿಗಳನ್ನು ಅಲ್ಲಗಳೆಯುವವನು, ಸರ್ವಪಾಪಗಳನ್ನು ಎಸಗಿದವನು ಗೋಪೀಚಂದನದಿಂದ ಊರ್ಧ್ವಪುಂಡ್ರಗಳನ್ನು ಧರಿಸಿದನೆಂದರೆ ಪವಿತ್ರ ಎನಿಸುವನು.

25. ಹರೇಃ ಪಾದಾಕೃತಿಂ ರಮ್ಯಮಾತ್ಮನಶ್ಚ ಹಿತಾಯ ವೈ ।
ಮಧ್ಯೇ ಛಿಂದನ್ನೂರ್ಧ್ವಪುಂಡ್ರಂ ಯೋ ಧಾರಯತಿ ಸರ್ವದಾ ।
ಸ ಪರಸ್ಯ ಪ್ರಿಯೋ ನಿತ್ಯಂ ಪುಣ್ಯಭಾಕ್ ಮುಕ್ತಿಭಾಗ್ ಭವೇತ್ ॥

– ವಾಧೂಲಸ್ಮೃತಿ 105

ಯಾರು ಶ್ರೀಹರಿಯ ಪಾದದ ಆಕೃತಿಯಲ್ಲಿ ತನ್ನ ಹಿತಕ್ಕಾಗಿ ಮಧ್ಯಭಾಗದಲ್ಲಿ ಭೇದಿಸುತ್ತ ಊರ್ಧ್ವಪುಂಡ್ರವನ್ನು ಯಾವಾಗಲೂ ಧರಿಸುವನೋ ಅವನು ಪರಮಾತ್ಮನಿಗೆ ಯಾವಾಗಲೂ ಪ್ರಿಯನು, ಪುಣ್ಯಶಾಲಿ ಹಾಗೂ ಮುಕ್ತಿಯನ್ನು ಪಡೆಯುವನು.

26. ಊರ್ಧ್ವಗತ್ಯಾ ತು ಯಸ್ಯೇಚ್ಛಾ ತಸ್ಯೋರ್ಧ್ವಂ ಪುಂಡ್ರಮುಚ್ಯತೇ ।
ಊರ್ಧ್ವಗತ್ಯಾಂ ತು ದೇವತ್ವಂ ಸ ಪ್ರಾಪ್ನೋತಿ ನ ಸಂಶಯಃ ।

– ವಾಧೂಲಸ್ಮೃತಿ 106

ಯಾರಿಗೆ ಮೇಲಿನ ಲೋಕದ ಗಮನದಲ್ಲಿ ಬಯಕೆ ಇದೆಯೋ ಅಂತಹವನಿಗೆ ಊರ್ಧ್ವಪುಂಡ್ರ ಹೇಳಲ್ಪಟ್ಟಿದೆ. ಊರ್ಧ್ವಗಮನದಿಂದ ಅವನು ದೇವಪದವಿಯನ್ನು ಪಡೆಯಬಹುದು.

27. ಊರ್ಧ್ವಪುಂಡ್ರಂ ತು ವಿಪ್ರಾಣಾಂ ಸತತಂ ಶ್ರುತಿಚೋದಿತಮ್ ।
ಊರ್ಧ್ವಪುಂಡ್ರೋ ಮೃದಾ ಶುಭ್ರೋ ಲಲಾಟೇ ಯಸ್ಯ ದೃಶ್ಯತೇ ।
ಸರ್ವಪಾಪವಿಶುದ್ಧಾತ್ಮಾ ಸ ಯಾತಿ ಹರಿಮಂದಿರೇ ॥ *– ವಸಿಷ್ಠಸ್ಮೃತಿ 1-20*

ಬ್ರಾಹ್ಮಣರಿಗೆ ಊರ್ಧ್ವಪುಂಡ್ರವು ವೇದವಿಹಿತವಾದುದು. ಯಾರ ಹಣೆಯಲ್ಲಿ ಶುಭ್ರವಾದ ಮಣ್ಣಿನ ಊರ್ಧ್ವಪುಂಡ್ರವು ಕಾಣಿಸುವುದೋ ಅಂತಹವನು ಸರ್ವಪಾಪಗಳಿಂದ ದೂರನಾಗಿ ಶ್ರೀಹರಿಯ ಮಂದಿರವನ್ನು ಪ್ರವೇಶಿಸುವನು.

28. ಶಿಖೋಪವೀತವದ್ಧಾರ್ಯಮೂರ್ಧ್ವಪುಂಡ್ರಂ ದ್ವಿಜೇನ ಚ ।
ವಿನಾ ಕೃತಾಶ್ಚೇದ್ವಿಫಲಾಃ ಕ್ರಿಯಾಃ ಸರ್ವಾ ಮಹಾಮುನೇ ।

– ದೇವೀ ಭಾಗವತ 11-15-105

ದ್ವಿಜನು ಶಿಖಾದಂತೆ, ಉಪವೀತದಂತೆ ಊರ್ಧ್ವಪುಂಡ್ರವನ್ನೂ ಧರಿಸಲೇ ಬೇಕು. ಊರ್ಧ್ವಪುಂಡ್ರವಿಲ್ಲದೆ ನಡೆಸಿದ ಕ್ರಿಯೆಗಳೆಲ್ಲ ನಿರರ್ಥಕಗಳು.

29. ಯೋ ಮೃತ್ತಿಕಾಂ ದ್ವಾರವತೀಸಮುದ್ಭವಾಂ
ಕರೇ ಸಮಾದಾಯ ಲಲಾಟಪಟ್ಟಕೇ ।
ಕರೋತಿ ನಿತ್ಯಂ ನರ ಊರ್ಧ್ವಪುಂಡ್ರಂ
ಕ್ರಿಯಾಫಲಂ ಕೋಟಿಗುಣಂ ತದಾ ಭವೇತ್ ॥

– ಸ್ಕಂದಪುರಾಣ (ವೈಷ್ಣವಖಂಡ 3-5)

ಗೋಪೀಚಂದನದಿಂದ ಯಾರು ನಿತ್ಯವೂ ಊರ್ಧ್ವಪುಂಡ್ರವನ್ನು ರಚಿಸುವನೋ ಅವನು ನಡೆಸುವ ಕರ್ಮಗಳಿಗೆ ಕೋಟಿಪಟ್ಟು ಹೆಚ್ಚು ಫಲ ದೊರಕುವುದು.

30. ಕ್ರಿಯಾವಿಹೀನಂ ಯದಿ ಮಂತ್ರಹೀನಂ
ಶ್ರದ್ಧಾವಿಹೀನಂ ಯದಿ ಕಾಲವರ್ಜಿತಮ್ ।
ಕೃತ್ವಾ ಲಲಾಟೇ ಯದಿ ಗೋಪಿಚಂದನಂ
ಪ್ರಾಪ್ನೋತಿ ತತ್ಕರ್ಮಫಲಂ ಸದಾಽವ್ಯಯಮ್ ॥

– ಸ್ಕಂದಪುರಾಣ (ವೈಷ್ಣವಖಂಡ 3-6

ಆಚರಿಸಲ್ಪಡುವ ಕರ್ಮ ಕ್ರಿಯೆಯಿಂದ, ಮಂತ್ರದಿಂದ, ಶ್ರದ್ಧೆಯಿಂದ ರಹಿತವಾಗಿದ್ದರೂ ಸಕಾಲದಲ್ಲಿ ಆಚರಿಸಲ್ಪಡದಿದ್ದರೂ ಗೋಪೀಚಂದನವನ್ನು ಹಣೆಯಲ್ಲಿ ಧರಿಸಿ ಆಚರಿಸಲ್ಪಟ್ಟ ಪ್ರಯುಕ್ತ ಆ ಕರ್ಮ ಶಾಶ್ವತಫಲಕ್ಕೆ ಪ್ರಯೋಜಕವಾಗದಿರದು.

31. ಗೋಪೀಚಂದನಸಂಭವಂ ಸುರುಚಿರಂ ಪುಂಡ್ರಂ ಲಲಾಟೇ ದ್ವಿಜೋ
ನಿತ್ಯಂ ಧಾರಯತೇ ಯದಿ ಪ್ರತಿದಿನಂ ರಾತ್ರೌ ದಿವಾ ಸರ್ವದಾ ।
ಯತ್ಪುಣ್ಯಂ ಕುರುಜಾಂಗಲೇ ರವಿಗ್ರಹೇ ಮಾಘೇ ಪ್ರಯಾಗೇ ತಥಾ
ತತ್ಪ್ರಾಪ್ನೋತಿ ತತೋಽಧಿಕಂ ಮಮ ಗೃಹೇ ಸಂತಿಷ್ಠತೇ ದೇವವತ್ ॥

– ಸ್ಕಂದಪುರಾಣ (ವೈಷ್ಣವಖಂಡ 3-7

ಯಾವ ದ್ವಿಜನು ತನ್ನ ಹಣೆಯಲ್ಲಿ ಗೋಪೀಚಂದನದ ಸುಂದರವಾದ ಪುಂಡ್ರವನ್ನು ರಾತ್ರಿ ಹಗಲೂ ಧರಿಸಿರುವನೋ ಅಂತಹವನಿಗೆ ಕುರುಜಾಂಗಲ ಕ್ಷೇತ್ರದಲ್ಲಿ, ಸೂರ್ಯಗ್ರಹಣದ ಸಂದರ್ಭದಲ್ಲಿ, ಪ್ರಯಾಗಕ್ಷೇತ್ರದಲ್ಲಿ, ಮಾಘಮಾಸದಲ್ಲಿ ದೊರಕುವ ಪುಣ್ಯಕ್ಕಿಂತಲೂ ಅಧಿಕ ಪುಣ್ಯ ದೊರಕುವುದು. ಅವನು ದೇವನಂತೆ ನನ್ನ (ಶ್ರೀವಿಷ್ಣುವಿನ) ಮನೆಯಲ್ಲಿ ನೆಲಸುವನು.

32. ಯಸ್ಮಿನ್ ಗೃಹೇ ತಿಷ್ಠತಿ ಗೋಪಿಚಂದನಂ
ಭಕ್ತ್ಯಾ ಲಲಾಟೇ ಮನುಜೋ ಬಿಭರ್ತಿ ಚೇತ್ ।
ತಸ್ಮಿನ್ ಗೃಹೇಽಹಂ ನಿವಸಾಮಿ ಸರ್ವದಾ
ಶ್ರೀಯಾನ್ವಿತಃ ಕಂಸನಿಹಾ ಚತುರ್ಮುಖ ॥

– ಸ್ಕಂದಪುರಾಣ (ವೈಷ್ಣವಖಂಡ 3-8)

ಯಾರ ಮನೆಯಲ್ಲಿ ಗೋಪೀಚಂದನವು ಇದೆಯೋ, ಯಾರು ತನ್ನ ಹಣೆಯಲ್ಲಿ ಭಕ್ತಿಯಿಂದ ಗೋಪೀಚಂದನವನ್ನು ಧರಿಸಿರುವನೋ ಅಂತಹವನ ಮನೆಯಲ್ಲಿ ನಾನು ಯಾವಾಗಲೂ ಲಕ್ಷ್ಮೀಸಹಿತನಾಗಿ ನೆಲೆಸುವೆನು.

33. ಯೋ ಧಾರಯೇದ್ ದ್ವಾರವತೀಸಮುದ್ಭವಾಂ
ಮೃತ್ಸ್ನಾಂ ಪವಿತ್ರಾಂ ಕಲಿಕಲ್ಮಷಾಪಹಾಮ್ ।
ನಿತ್ಯಂ ಲಲಾಟೇ ಮಮ ಮಂತ್ರಸಂಯುತಾಂ
ಯಮಂ ನ ಪಶ್ಯೇದಪಿ ಪಾಪಸಂಯುತಃ ॥

– ಸ್ಕಂದಪುರಾಣ (ವೈಷ್ಣವಖಂಡ 3-9)

ಯಾರು ತನ್ನ ಹಣೆಯಲ್ಲಿ ದ್ವಾರವತಿಯಲ್ಲಿ ಉತ್ಪನ್ನವಾದ ಪವಿತ್ರವಾದ, ಕಲಿ ಕಾಲುಷ್ಯಪರಿಹಾರಕವಾದ ಗೋಪಿಯನ್ನು ನಿತ್ಯ ಮಂತ್ರಪಠನಪೂರ್ವಕವಾಗಿ ಧರಿಸುವನೋ ಅಂತಹವನು ಪಾಪದಿಂದ ಕೂಡಿದ್ದರೂ ಯಮನನ್ನು ಕಾಣುವುದಿಲ್ಲ.

34. **ಯಸ್ಯಾಂತಕಾಲೇ ಸುತ! ಗೋಪಿಚಂದನಂ**
ಬಾಹ್ವೋರ್ಲಲಾಟೇ ಹೃದಿ ಮಸ್ತಕೇ ಚ ।
ಪ್ರಯಾತಿ ಲೋಕೇ ಕಮಲಾಪತೇರ್ಮವು
ಗೋಬಾಲಘಾತೀ ಯದಿ ಬ್ರಹ್ಮಹಾ ಸ್ಯಾತ್ ।

– ಸ್ಕಂದಪುರಾಣ (ವೈಷ್ಣವಖಂಡ 3-10)

ಯಾವ ವ್ಯಕ್ತಿಯ ಅಂತ್ಯಕಾಲದಲ್ಲಿ ಅವನ ಬಾಹುಗಳಲ್ಲಿ, ಹಣೆಯಲ್ಲಿ, ಹೃದಯದಲ್ಲಿ ಹಾಗೂ ತಲೆಯಲ್ಲಿ ಗೋಪಿಚಂದನದ ನಾಮಗಳು ಇರುವವೋ ಅಂತಹ ವ್ಯಕ್ತಿ ಗೋಹತ್ಯೆ, ಬಾಲಹತ್ಯೆ, ಬ್ರಾಹ್ಮಣಹತ್ಯೆಗಳನ್ನೆಸಗಿಸಿದ್ದರೂ ಅವನಿಗೆ ಭಗವಂತನ ಲೋಕ ದೊರಕುವುದು.

35. **ಗ್ರಹಾ ನ ಪೀಡಯಂತಿ ನ ರಕ್ಷಸಾಂ ಗಣಾಃ**
ಯಕ್ಷಃಪಿಶಾಚೋರಗಭೂತನಾಯಕಾಃ ।
ಲಲಾಟಪಟ್ಟೇ ಸುತ! ಗೋಪಿಚಂದನಂ
ಸಂತಿಷ್ಠತೇ ಯಸ್ಯ ಮಮ ಪ್ರಭಾವಾತ್ ॥

– ಸ್ಕಂದಪುರಾಣ (ವೈಷ್ಣವಖಂಡ 3-11)

ಗೋಪಿಚಂದನವು ಪುಂಡ್ರದ ರೂಪದಲ್ಲಿ ಯಾರ ಹಣೆಯ ಮೇಲೆ ಇರುವುದೋ, ಅಂತಹವನಿಗೆ ಭಗವಂತನ ಅನುಗ್ರಹದಿಂದ ಗ್ರಹಪೀಡೆ, ರಾಕ್ಷಸಪೀಡೆ, ಪಿಶಾಚ, ಹಾವು, ಭೂತ ಇತ್ಯಾದಿಗಳ ಪೀಡೆ ಸಂಭವಿಸುವುದೇ ಇಲ್ಲ.

36. **ಅಸ್ನಾತೋ ಯಃ ಕ್ರಿಯಾಃ ಕುರ್ಯಾದಶುಚಿಃ ಪಾಪಸಂಯುತಃ ।**
ಗೋಪೀಚಂದನಸಂಪರ್ಕಾತ್ ಪೂತೋ ಭವತಿ ತತ್ಕ್ಷಣಾತ್ ॥

– ಸ್ಕಂದಪುರಾಣ (ವೈಷ್ಣವಖಂಡ 3-13)

ಒಂದೊಮ್ಮೆ ಸ್ನಾನ ಮಾಡದಿದ್ದರೂ, ಅಶುಚಿಯಾಗಿದ್ದರೂ, ಪಾಪಸಂಪನ್ನನಾಗಿದ್ದರೂ, ಗೋಪಿಚಂದನದಿಂದ ಪುಂಡ್ರಗಳನ್ನು ಧರಿಸಿದ್ದನೆಂದರೆ ಆ ಕ್ಷಣದಲ್ಲಿಯೇ ಪವಿತ್ರನಾಗುವನಾದುದರಿಂದ ಶಾಸ್ತ್ರೀಯ ಕ್ರಿಯೆಗಳನ್ನು ನಡೆಸಬಹುದು.

37. **ಮತ್ಪ್ರಿಯಾರ್ಥಂ ಶುಭಾರ್ಥಂ ವಾ ರಕ್ಷಾರ್ಥಂ ಚತುರಾನನ ।**
ಮತ್ಪೂಜಾಹೋಮಕೇ ಚೈವ ಸಾಯಂ ಪ್ರಾತಃ ಸಮಾಹಿತಃ ॥
ಮದ್‌ಭಕ್ತೋ ಧಾರಯೇನ್ನಿತ್ಯಮೂರ್ಧ್ವಪುಂಡ್ರಂ ಭವಾಪಹಮ್ ॥

– ಸ್ಕಂದಪುರಾಣ (ವೈಷ್ಣವಖಂಡ 3-15)

ನನ್ನ ಪ್ರೀತಿಸಂಪಾದನೆಗಾಗಿ, ಮಂಗಲಪ್ರಾಪ್ತಿಗಾಗಿ, ದುಷ್ಟಶಕ್ತಿಗಳ ವಿರುದ್ಧ ರಕ್ಷಣೆಯನ್ನು ಹೊಂದುವುದಕ್ಕಾಗಿ, ನನ್ನ ಬಗೆಗಿನ ಪೂಜೆ, ಹೋಮಾದಿಗಳಲ್ಲಿ ಸಾಯಂಕಾಲ ಹಾಗೂ ಬೆಳಗ್ಗೆ ಏಕಾಗ್ರತೆಯಿಂದ ನನ್ನ ಭಕ್ತನಾದವನು ಊರ್ಧ್ವಪುಂಡ್ರವನ್ನು ಧರಿಸಲೇ

ಬೇಕು. ಅದು ಸಂಸಾರಬಂಧನಪರಿಹಾರಕವೂ ಆಗಿದೆ. (ಶ್ರೀವಿಷ್ಣು ಚತುರ್ಮುಖನಿಗೆ ನೀಡುವ ಉಪದೇಶ)

38. ಊರ್ಧ್ವಪುಂಡ್ರಧರೋ ಮರ್ತ್ಯೋ ಯದಾ ಯಸ್ಯಾನ್ನಮಶ್ನುತೇ ।
ತದಾ ವಿಂಶತ್ ಕುಲಂ ತಸ್ಯ ನರಕಾಮದ್ಧರಾಮ್ಯಹಮ್ ॥

– ಸ್ಕಂದಪುರಾಣ (ವೈಷ್ಣವಖಂಡ 3-17)

ಊರ್ಧ್ವಪುಂಡ್ರಧಾರಿಯಾದ ವ್ಯಕ್ತಿಯು ಯಾರ ಅನ್ನವನ್ನು ಉಣ್ಣುವನೋ ಅಂತಹ ವ್ಯಕ್ತಿಯ ನೂರು ಕುಲಗಳನ್ನು ನರಕದಿಂದ ನಾನು (ಭಗವಂತ) ಪಾರುಮಾಡುವೆ.

39. ಪಾಠಯೇದ್ ದ್ವಾದಶನಾಮ್ನಾಂ ತತ್ತತ್‌ಸ್ಥಾನೇಷು ಯೋ ದ್ವಿಜಃ ।
ಭವೇತ್ ಸ್ನಾನಫಲಂ ತಸ್ಯ ಮೃದಾ ತತ್ರ ದಿನೇ ದಿನೇ ॥

– ಶಾಂಡಿಲ್ಯಸ್ಮೃತಿ 2-45

ಕೇಶವಾದಿ ದ್ವಾದಶನಾಮಗಳನ್ನು ಪಠಿಸುತ್ತ ಹಣೆಯೇ ಮುಂತಾದ ಸ್ಥಳಗಳಲ್ಲಿ ಊರ್ಧ್ವಪುಂಡ್ರವನ್ನು ಧರಿಸಿದಲ್ಲಿ ಮಣ್ಣಿನಿಂದ ನಡೆಸಿದ ಸ್ನಾನದ ಫಲವು ದೊರಕುವುದು.

40. ಭುಜಯುಗಮಪಿ ಚಿಹ್ನೈರಂಕಿತಂ ಯಸ್ಯ ವಿಷ್ಣೋಃ
ಪರಮಪುರುಷನಾಮ್ನಃ ಕೀರ್ತನಂ ಯಸ್ಯ ವಾಚಿ ।
ಋಜುವರಮಪಿ ಪುಂಡ್ರಂ ಮಸ್ತಕೇ ಯಸ್ಯ ಕಂಠೇ
ಸರಸಿಜಮಣಿಮಾಲಾ ಯಸ್ಯ ತಸ್ಯಾಸ್ಮಿ ದಾಸಃ ॥ *– ವಿಷ್ಣುಪುರಾಣೇ*

ಯಾರ ಎರಡು ಬಾಹುಗಳು ಶ್ರೀವಿಷ್ಣುವಿನ ಚಿಹ್ನೆಗಳಿಂದ ಅಂಕಿತಗಳಾಗಿವೆಯೋ, ಯಾರ ಬಾಯಿಯಲ್ಲಿ ಶ್ರೀಹರಿಯ ನಾಮಗಳ ಕೀರ್ತನೆ ನಡೆಯುತ್ತಿರುವುದೋ, ಯಾರ ತಲೆಯಲ್ಲಿ ನೇರವಾದ ಪುಂಡ್ರವು ಇರುವುದೋ, ಯಾರ ಕಂಠದಲ್ಲಿ ಕಮಲಾಕ್ಷಮಣಿಮಾಲೆ ಇದೆಯೋ ಅಂತಹವನ ದಾಸ ನಾನು (ದಾಸನಂತೆ ಅವನಿಗೆ ಅಧೀನ).

41. ಊರ್ಧ್ವಪುಂಡ್ರಂ ತಥಾ ಚಕ್ರಂ ನಿತ್ಯಂ ಧಾರಯತೇ ನರಃ ।
ತೇನ ತಸ್ಯಾಶುಭಂ ನಶ್ಯೇಚ್ಛುಭಮಸ್ಯ ಪ್ರವರ್ಧತೇ ॥ *– ವೃದ್ಧಮನು*

ಯಾರು ನಿತ್ಯವೂ ಊರ್ಧ್ವಪುಂಡ್ರವನ್ನೂ ಚಕ್ರವನ್ನೂ ಧರಿಸಿರುವನೋ ಅಂತಹ ಪುರುಷನ ಅಶುಭತ್ವವು ನಾಶವಾಗುವುದು; ಶುಭವು ಹೆಚ್ಚುವುದು.

42. ವಿಧಿನಾ ಶಂಖಚಕ್ರಾದಿಧಾರಣಂ ಚೋರ್ಧ್ವಪುಂಡ್ರಕಮ್ ।
ಉಪವೀತಂ ಶಿಖಾಬಂಧಂ ವಿಪ್ರಸ್ಯ ಸತತಂ ಸ್ಮೃತಮ್ ॥ *– ಪರಾಶರಸಂಹಿತಾ*

ಬ್ರಾಹ್ಮಣನಾದವನು ವಿಧಿವತ್ತಾಗಿ ಶಂಖಚಕ್ರಾದಿಗಳನ್ನು ಧರಿಸಬೇಕು; ಊರ್ಧ್ವ ಪುಂಡ್ರ ಹಾಕಿಕೊಳ್ಳಬೇಕು; ಉಪವೀತ ಧರಿಸಬೇಕು. ಶಿಖಾಬಂಧನ ಇರಬೇಕು.

ನಿಷೇಧಮುಖದ ಸ್ತುತಿ:

43. ಯಸ್ಯೋರ್ಧ್ವಪುಂಡ್ರಂ ದೃಶ್ಯೇತ ನ ಲಲಾಟೇ ನರಸ್ಯ ಹಿ ।
ತದ್ದರ್ಶನಂ ನ ಕರ್ತವ್ಯಂ ದೃಷ್ಟ್ವಾ ಸೂರ್ಯಂ ನಿರೀಕ್ಷಯೇತ್ ॥

– ಪದ್ಮಪುರಾಣ (ಪಾತಾಲ 79-23)

ಯಾವ ಮನುಷ್ಯನ ಹಣೆಯಲ್ಲಿ ಊರ್ಧ್ವಪುಂಡ್ರವು ಕಾಣಿಸುವುದಿಲ್ಲವೋ, ಅಂತಹವನ ದರ್ಶನವನ್ನೇ ಮಾಡಬಾರದು. ಒಂದೊಮ್ಮೆ ಕಂಡರೆ, ಕಂಡ ಪಾಪಪರಿಹಾರಕ್ಕಾಗಿ ಸೂರ್ಯನನ್ನು ಕಾಣಬೇಕು.

44. **ತ್ರಿಪುಂಡ್ರಂ ಯಸ್ಯ ವಿಪ್ರಸ್ಯ ಊರ್ಧ್ವಪುಂಡ್ರಂ ನ ದೃಶ್ಯತೇ ।**
ತಂ ದೃಷ್ಟ್ವಾಽಪ್ಯಥವಾ ಸ್ಪೃಷ್ಟ್ವಾ ಸಚೈಲಂ ಸ್ನಾನಮಾಚರೇತ್ ॥

– ಪದ್ಮಪುರಾಣ (ಪಾತಾಲ 79-25)

ಯಾವ ಬ್ರಾಹ್ಮಣನ ಹಣೆಯಲ್ಲಿ ಊರ್ಧ್ವಪುಂಡ್ರ ಕಾಣಿಸುವುದಿಲ್ಲ, ಬದಲಾಗಿ ತ್ರಿಪುಂಡ್ರ ಇದೆಯೋ ಅಂತಹವನನ್ನು ಕಂಡಲ್ಲಿ ಅಥವಾ ಮುಟ್ಟಿದಲ್ಲಿ ಸಚೈಲ (ಉಡುಪು ಸಹಿತವಾಗಿಯೇ) ಸ್ನಾನವನ್ನು ಮಾಡಬೇಕು.

45. **ಶ್ರಾದ್ಧೋ ಹೋಮಸ್ತಥಾ ದಾನಂ ಸ್ವಾಧ್ಯಾಯಃ ಪಿತೃತರ್ಪಣಮ್ ।**
ಭಸ್ಮೀಭವತಿ ತತ್ಸರ್ವಮೂರ್ಧ್ವಪುಂಡ್ರಂ ವಿನಾ ಕೃತಮ್ ॥

– ವೃದ್ಧಹಾರೀತಸ್ಮೃತಿ 2-59

ಊರ್ಧ್ವಪುಂಡ್ರವನ್ನು ಧರಿಸದೆ ನಡೆಸಿದ ಶ್ರಾದ್ಧ, ಹೋಮ, ದಾನ, ಸ್ವಾಧ್ಯಾಯ, ಪಿತೃತರ್ಪಣ –ಇವೆಲ್ಲ ವ್ಯರ್ಥ.

46. **ಊರ್ಧ್ವಪುಂಡ್ರಂ ವಿನಾ ಯಸ್ತು ಶ್ರಾದ್ಧಂ ಕುರ್ವೀತ ಸ ದ್ವಿಜಃ ।**
ಸರ್ವಂ ತದ್ರಾಕ್ಷಸೈರ್ನೀತಂ ನರಕಂ ಚಾಧಿಗಚ್ಛತಿ ॥

– ವೃದ್ಧಹಾರೀತಸ್ಮೃತಿ 2-60

ಊರ್ಧ್ವಪುಂಡ್ರವನ್ನು ಧರಿಸದೆ ನಡೆಸಿದ ಶ್ರಾದ್ಧ ರಾಕ್ಷಸರ ಪಾಲಾಗುವುದು. ಹಾಗೆ ಶ್ರಾದ್ಧ ನಡೆಸಿದವನು ನರಕಕ್ಕೆ ಹೋಗಬೇಕಾಗುವುದು.

47. **ಊರ್ಧ್ವಪುಂಡ್ರವಿಹೀನಂ ತು ಯಃ ಶ್ರಾದ್ಧೇ ಭೋಜಯೇದ್ ದ್ವಿಜಮ್ ।**
ಅಶ್ನಂತಿ ಪಿತರಸ್ತಸ್ಯ ವಿಣ್ಮೂತ್ರಂ ನಾತ್ರ ಸಂಶಯಃ ॥

– ವೃದ್ಧಹಾರೀತಸ್ಮೃತಿ 2-61

ಯಾರು ಶ್ರಾದ್ಧದಲ್ಲಿ ಊರ್ಧ್ವಪುಂಡ್ರವನ್ನು ಧರಿಸದ ಬ್ರಾಹ್ಮಣನಿಗೆ ಭೋಜನ ಹಾಕುವನೋ ಅವನ ಪಿತೃಗಳು ಮಲಮೂತ್ರವನ್ನು ತಿನ್ನುವ ಪ್ರಸಂಗ ಬರುವುದು.

48. **ಊರ್ಧ್ವಪುಂಡ್ರವಿಹೀನಸ್ತು ಕಿಂಚಿತ್ ಕರ್ಮ ಕರೋತಿ ಯಃ ।**
ಇಷ್ಟಾಪೂರ್ವಾದಿಕಂ ಸರ್ವಂ ನಿಷ್ಫಲಂ ಸ್ಯಾನ್ನ ಸಂಶಯಃ ॥

– ಪದ್ಮಪುರಾಣ (ಉತ್ತರಖಂಡ 225-11)

ಊರ್ಧ್ವಪುಂಡ್ರಗಳನ್ನು ಧರಿಸದೆ ಏನು ಕರ್ಮ ಮಾಡಿದರೂ ಅವೆಲ್ಲ ನಿಷ್ಫಲ. ಇದರಲ್ಲಿ ಸಂಶಯವಿಲ್ಲ.

49. **ಯಚ್ಛರೀರಂ ಮನುಷ್ಯಾಣಾಮೂರ್ಧ್ವಪುಂಡ್ರವಿವರ್ಜಿತಮ್ ।**
ದ್ರಷ್ಟವ್ಯಂ ನೈವ ತತ್ ಕಿಂಚಿಚ್ಛ್ಮಶಾನಸದೃಶಂ ಭವೇತ್ ॥

– ಪದ್ಮಪುರಾಣ (ಉತ್ತರಖಂಡ 225-12)

ಯಾವ ಮನುಷ್ಯರ ಶರೀರ ಊರ್ಧ್ವಪುಂಡ್ರರಹಿತವಾಗಿದೆಯೋ ಶ್ಮಶಾನಸದೃಶವಾದ ಅಂತಹ ಶರೀರವನ್ನು ನೋಡಲೇ ಬಾರದು.

50. **ಊರ್ಧ್ವಪುಂಡ್ರವಿಹೀನಸ್ತು ಸಂಧ್ಯಾಕರ್ಮಾದಿಕಂ ಚರೇತ್ ।**
ತತ್ಸರ್ವಂ ರಾಕ್ಷಸೈರ್ನೀತಂ ನರಕಂ ಚಾಧಿಗಚ್ಛತಿ ॥

– ಪದ್ಮಪುರಾಣ (ಉತ್ತರಖಂಡ 225-12)

ಊರ್ಧ್ವಪುಂಡ್ರವಿಲ್ಲದೆ ಮಾಡಿದ ಸಂಧ್ಯಾಕರ್ಮ ಮುಂತಾದುವೆಲ್ಲ ರಾಕ್ಷಸರ ಪಾಲಾಗುವುದು. ಅಲ್ಲದೆ, ಅವನಿಗೆ ನರಕಪ್ರಾಪ್ತಿ ಆಗುವುದು.

51. **ಯಜ್ಞೋ ದಾನಂ ತಪಶ್ಚೈವ ಸ್ವಾಧ್ಯಾಯಃ ಪಿತೃತರ್ಪಣಮ್ ।**
ವ್ಯರ್ಥಂ ಭವತಿ ತತ್ ಸರ್ವಮೂರ್ಧ್ವಪುಂಡ್ರಂ ವಿನಾ ಕೃತಮ್ ॥

– ಕೃಷ್ಣಾಮೃತಮಹಾರ್ಣವ 218

ಊರ್ಧ್ವಪುಂಡ್ರಧಾರಣೆ ಇಲ್ಲದೆ ನಡೆಸಿದ ಯಜ್ಞ, ದಾನ, ತಪಸ್ಸು, ಸ್ವತಂತ್ರ ಭಗವಂತನ ಚಿಂತನೆ, ಪಿತೃತರ್ಪಣ ಇವೆಲ್ಲವೂ ವ್ಯರ್ಥವೆನಿಸುವುದು.

52. **ಊರ್ಧ್ವಪುಂಡ್ರವಿಹೀನಸ್ಯ ಶ್ಮಶಾನಸದೃಶಂ ಮುಖಮ್ ।**
ಅವಲೋಕ್ಯ ಮುಖಂ ತೇಷಾಮಾದಿತ್ಯಮವಲೋಕಯೇತ್ ॥

– ಕೃಷ್ಣಾಮೃತಮಹಾರ್ಣವ 217

ಊರ್ಧ್ವಪುಂಡ್ರವಿಲ್ಲದವನ ಮುಖವು ಶ್ಮಶಾನದಂತೆ ಅಮಂಗಲ. ಅಂತಹ ಮುಖವನ್ನು ಕಂಡಲ್ಲಿ ಅಂತಹ ಅಮಂಗಳದರ್ಶನದ ಪಾಪವನ್ನು ಸೂರ್ಯನನ್ನು ಕಂಡು ಪರಿಹರಿಸಿಕೊಳ್ಳಬೇಕು.

53. **ಯಚ್ಛರೀರಂ ಮನುಷ್ಯಾಣಾಮೂರ್ಧ್ವಪುಂಡ್ರಂ ವಿನಾ ಕೃತಮ್ ।**
ತನ್ಮುಖಂ ನೈವ ಪಶ್ಯಾಮಿ ಶ್ಮಶಾನಸದೃಶಂ ಹಿ ತತ್ ॥

– ಸ್ಕಂದಪುರಾಣ (ವೈಷ್ಣವಖಂಡ 3-22)

ಮನುಷ್ಯರ ಯಾವ ಶರೀರ ಊರ್ಧ್ವಪುಂಡ್ರದಿಂದ ರಹಿತವಾಗಿದೆಯೋ ಅಂತಹವರ ಮುಖವನ್ನು ನಾನು (ಭಗವಂತ) ಕಾಣುವುದೇ ಇಲ್ಲ. ಯಾಕೆಂದರೆ ಅದು ಶ್ಮಶಾನದಂತೆ ಅಮಂಗಳ.

54. **ಯಜ್ಞೋ ದಾನಂ ತಪೋ ಹೋಮಃ ಸ್ವಾಧ್ಯಾಯಃ ಪಿತೃತರ್ಪಣಮ್ ।**
ವೃಥಾ ಭವತಿ ತತ್ಸರ್ವಮೂರ್ಧ್ವಪುಂಡ್ರಂ ವಿನಾಕೃತಮ್ ॥

– ಬೃಹನ್ನಾರದೀಯ (ಪೂರ್ವಭಾಗ 1-26-43)

ಊರ್ಧ್ವಪುಂಡ್ರಗಳನ್ನು ಧರಿಸದೆ ನಡೆಸಿದ ಯಜ್ಞ, ದಾನ, ತಪಸ್ಸು, ಹೋಮ, ಚಿಂತನ, ಪಿತೃತರ್ಪಣ ಇವೆಲ್ಲ ವ್ಯರ್ಥವೆನಿಸುವುದು.

ಊರ್ಧ್ವಪುಂಡ್ರಧಾರಣೆಯ ವಿಧಾನ:

55. **ವೀಕ್ಷ್ಯಾದರ್ಶೇ ಜಲೇ ವಾಪಿ ಯೋ ವಿದಧ್ಯಾತ್ ಪ್ರಯತ್ನತಃ ।**
ಊರ್ಧ್ವಪುಂಡ್ರಂ ಮಹಾಭಾಗಃ ಸ ಯಾತಿ ಪರಮಾಂ ಗತಿಮ್ ॥

– ಪದ್ಮಪುರಾಣ (ಪಾತಾಲ 79-29)

ಯಾರು ಕನ್ನಡಿಯಲ್ಲೋ ನೀರಿನಲ್ಲೋ ಮುಖವನ್ನು ಕಂಡು, ಯತ್ನಿಸಿ ಊರ್ಧ್ವ ಪುಂಡ್ರವನ್ನು ಧರಿಸುವನೋ ಮಹಾಭಾಗ್ಯಶಾಲಿಯಾದ ಅವನು ಶ್ರೇಷ್ಠಗತಿಯನ್ನು ಪಡೆಯುವನು.

56. ನಾಸಾದಿಕೇಶಪರ್ಯಂತಮೂರ್ಧ್ವಪುಂಡ್ರಂ ಸುಶೋಭನಮ್ ।
ಮಧ್ಯೇ ಛಿದ್ರಸಮಾಯುಕ್ತಂ ತಂ ವಿದ್ಯಾದ್ಧರಿಮಂದಿರಮ್ ॥
– ಪದ್ಮಪುರಾಣ (ಪಾತಾಲ 79-27)

ಮೂಗಿನ ಬುಡದಿಂದ ಪ್ರಾರಂಭಿಸಿ, ತಲೆಗೂದಲ ವರೆಗೆ ಚಾಚಿರುವ, ಮಧ್ಯದಲ್ಲಿ ಖಾಲಿಜಾಗದಿಂದ ಕೂಡಿರುವ ಊರ್ಧ್ವಪುಂಡ್ರ ಅತ್ಯಂತ ರಮಣೀಯ. ಅದು ಶ್ರೀಹರಿಯ ಮಂದಿರ.

57. ನಿರಂತರಾಲಂ ಯಃ ಕುರ್ಯಾದೂರ್ಧ್ವಪುಂಡ್ರಂ ದ್ವಿಜಾಧಮಃ ।
ಲಲಾಟೇ ತಸ್ಯ ಸತತಂ ಶುನಃಪಾದೋ ನ ಸಂಶಯಃ ॥
– ಪದ್ಮಪುರಾಣ (ಪಾತಾಲ 79-26)

ಯಾರೂ ಊರ್ಧ್ವಪುಂಡ್ರವನ್ನು ಮಧ್ಯದಲ್ಲಿ ಖಾಲಿಜಾಗ ಬಿಟ್ಟು ಹಾಕಿಕೊಳ್ಳು ವುದಿಲ್ಲವೋ ಅಂತಹವನ ಹಣೆಯಲ್ಲಿ ಯಾವಾಗಲೂ ನಾಯಿಯ ಪಾದ ಇರುವುದು.

58. ವಾಮಭಾಗೇ ಸ್ಥಿತೋ ಬ್ರಹ್ಮಾ ದಕ್ಷಿಣೇ ತು ಸದಾಶಿವಃ ।
ಮಧ್ಯೇ ವಿಷ್ಣು ವಿಜಾನೀಯಾತ್ತಸ್ಮಾನ್ಮಧ್ಯಂ ನ ಲೇಪಯೇತ್ ॥
– ಪದ್ಮಪುರಾಣ (ಪಾತಾಲ 79-28)

ಊರ್ಧ್ವಪುಂಡ್ರದ ಎಡಬದಿಯಲ್ಲಿ ಚತುರ್ಮುಖನೂ, ಬಲಬದಿಯಲ್ಲಿ ರುದ್ರನೂ, ಮಧ್ಯದಲ್ಲಿ ಶ್ರೀವಿಷ್ಣುವೂ ಇರುವನು. ಆದ್ದರಿಂದ ಪುಂಡ್ರದ ಮಧ್ಯಭಾಗದಲ್ಲಿ ಲೇಪಿಸದೆ ಖಾಲಿ ಬಿಡಬೇಕು.

59. ನಿರಂತರಾಲಂ ಯಃ ಕುರ್ಯಾದೂರ್ಧ್ವಪುಂಡ್ರಂ ದ್ವಿಜಾಧಮಃ ।
ಸ ಹಿ ತತ್ರ ಸ್ಥಿತಂ ವಿಷ್ಣುಂ ಶ್ರಿಯಂ ಚೈವ ವ್ಯಪೋಹತಿ ॥
– ವೃದ್ಧಹಾರೀತಸ್ಮೃತಿ 2-68

ಯಾರು ಮಧ್ಯದಲ್ಲಿ ಖಾಲಿಜಾಗ ಬಿಡದೆ ಊರ್ಧ್ವಪುಂಡ್ರವನ್ನು ಧರಿಸುವನೋ ಅಂತಹ ಕೆಟ್ಟ ಬ್ರಾಹ್ಮಣನು ಆ ಊರ್ಧ್ವಪುಂಡ್ರದ ಮಧ್ಯದಲ್ಲಿ ಇರುವ ಹರಿಯನ್ನೂ ಲಕ್ಷ್ಮೀದೇವಿಯನ್ನೂ ದೂರೀಕರಿಸುವನು.

60. ಚತ್ವಾರಿ ಭೂಭೃತಾಮಾಹುಃ ಪುಂಡ್ರಾಣಿ ದ್ವೇ ವಿಶಾಂ ಸ್ಮೃತೇ ।
ಏಕಪುಂಡ್ರಂ ತು ನಾರೀಣಾಂ ಶೂದ್ರಾಣಾಂ ಚ ವಿಧೀಯತೇ ॥
– ಪದ್ಮಪುರಾಣ (ಉತ್ತರಖಂಡ 225-52)

ಕ್ಷತ್ರಿಯರಿಗೆ ನಾಲ್ಕು ಊರ್ಧ್ವಪುಂಡ್ರಗಳಾದರೆ, ವೈಶ್ಯರಿಗೆ ಎರಡು, ಸ್ತ್ರೀಯರಿಗೂ ಶೂದ್ರರಿಗೂ ಒಂದು ಊರ್ಧ್ವಪುಂಡ್ರ.

61. ಲಲಾಟೇ ಹೃದಿ ಬಾಹ್ವೋಶ್ಚ ಚತುಷ್ಪುಂಡ್ರಾಣಿ ಧಾರಯೇತ್ ।
ಲಲಾಟೇ ಹೃದಯೇ ದ್ವೇ ತು ಫಾಲೇ ತ್ವೇಕಂ ವಿಧೀಯತೇ ।
ಊರ್ಧ್ವಪುಂಡ್ರಂ ಲಲಾಟೇ ತು ಸರ್ವೇಷಾಂ ಪ್ರಥಮಂ ಸ್ಮೃತಮ್ ॥

– ಪದ್ಮಪುರಾಣ (ಉತ್ತರಖಂಡ 225-53)

ನಾಲ್ಕು ಪುಂಡ್ರಗಳನ್ನು ಧರಿಸುವವರು ಹಣೆ, ಹೃದಯ ಹಾಗೂ ಬಾಹುಗಳಲ್ಲಿ ಧರಿಸಬೇಕು. ಎರಡು ಪುಂಡ್ರಗಳನ್ನು ಧರಿಸುವವರು ಹಣೆ ಮತ್ತು ಹೃದಯದಲ್ಲಿ ಧರಿಸಬೇಕು. ಒಂದು ಪುಂಡ್ರವನ್ನು ಧರಿಸುವವರು ಹಣೆಯಲ್ಲಿ ಧರಿಸಬೇಕು. ಹಣೆಯಲ್ಲಿ ಊರ್ಧ್ವಪುಂಡ್ರದ ಧಾರಣೆ ಪ್ರತಿಯೊಬ್ಬರ ಪ್ರಥಮ ಧರ್ಮ.

62. ಮೂರ್ತೀಸ್ತು ವಾಸುದೇವಾದ್ಯಾಶ್ಚತುಷ್ಪುಂಡ್ರೇಷು ಧಾರಯೇತ್ ।
ದ್ವಯೋರ್ಗೋವಿಂದಕೃಷ್ಣೌ ತು ಏಕಂ ನಾರಾಯಣಂ ಧರೇತ್ ॥

– ಪದ್ಮಪುರಾಣ (ಉತ್ತರಖಂಡ 225-55)

ನಾಲ್ಕು ಪುಂಡ್ರಗಳ ಧಾರಕರು ಆ ಪುಂಡ್ರಗಳಲ್ಲಿ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಹಾಗೂ ಅನಿರುದ್ಧರೂಪಗಳನ್ನು ಚಿಂತಿಸಬೇಕು. ಎರಡು ಪುಂಡ್ರಗಳ ಧಾರಕರು ಆ ಪುಂಡ್ರಗಳಲ್ಲಿ ಗೋವಿಂದ ಮತ್ತು ಕೃಷ್ಣ ರೂಪಗಳನ್ನೂ, ಒಂದು ಪುಂಡ್ರವನ್ನು ಧರಿಸುವವರು ಆ ಪುಂಡ್ರದಲ್ಲಿ ನಾರಾಯಣರೂಪವನ್ನೂ ಧ್ಯಾನಿಸಬೇಕು.

63. ಹರೇಃ ಪಾದಾಕೃತಿಂ ಕುರ್ಯಾದೂರ್ಧ್ವಪುಂಡ್ರಂ ವಿಧಾನತಃ ।
ಮಧ್ಯಚ್ಛಿದ್ರೇಣ ಸಂಯುಕ್ತಂ ತದ್ಧಿ ವೈ ಮಂದಿರಂ ಹರೇಃ ॥

– ಪದ್ಮಪುರಾಣ (ಉತ್ತರಖಂಡ 225-22)

ಹಣೆಯಲ್ಲಿ ಶ್ರೀಹರಿಯ ಪಾದಾಕೃತಿಯಾಗಿ ಊರ್ಧ್ವಪುಂಡ್ರವನ್ನು ಧರಿಸಬೇಕು. ಈ ಪುಂಡ್ರದ ಮಧ್ಯೆ ರಂಧ್ರ ಇರಬೇಕು. ಆಗಷ್ಟೇ ಆ ಪುಂಡ್ರ ಶ್ರೀಹರಿಮಂದಿರ ಎನಿಸುವುದು.

64. ಊರ್ಧ್ವಪುಂಡ್ರಂ ಋಜುಂ ಸೌಮ್ಯಂ ಸುಪಾರ್ಶ್ವಂ ಸುಮನೋಹರಮ್ ।
ದಂಡಾಕಾರಂ ಸುಶೋಭಾಢ್ಯಂ ಮಧ್ಯೇ ಛಿದ್ರಂ ಪ್ರಕಲ್ಪಯೇತ್ ॥

– ಪದ್ಮಪುರಾಣ (ಉತ್ತರಖಂಡ 225-23)

ಊರ್ಧ್ವಪುಂಡ್ರ ನೇರವಾಗಿ ಇರಬೇಕು; ಸೌಮ್ಯವಾಗಿ ಇರಬೇಕು; ಅದರ ಪಾರ್ಶ್ವಗಳು ಸುಂದರವಾಗಿರಬೇಕು. ದಂಡಾಕಾರದಲ್ಲಿ ಇರಬೇಕು. ಅದರ ಮಧ್ಯದಲ್ಲಿ ರಂಧ್ರವನ್ನು ಕಲ್ಪಿಸಬೇಕು.

65. ಮಹಾಭಾಗವತಃ ಶುದ್ಧಃ ಪುಂಡ್ರಂ ಹರಿಪದಾಕೃತಿಮ್ ।
ದಂಡಾಕಾರಂ ತು ವಾ ದೇವಿ ಧಾರಯೇದ್ ಊರ್ಧ್ವಪುಂಡ್ರಕಮ್ ॥

– ಪದ್ಮಪುರಾಣ (ಉತ್ತರಖಂಡ 225-58)

ಮಹಾಭಾಗವತನಾದ, ಪವಿತ್ರನಾದವನು ತನ್ನ ಹಣೆಯಲ್ಲಿ ದಂಡಾಕಾರವಾಗಿಯಾಗಲೀ ಶ್ರೀಹರಿಯ ಪಾದಾಕೃತಿಯಲ್ಲಾಗಲೀ ಊರ್ಧ್ವಪುಂಡ್ರವನ್ನು ಧರಿಸಬೇಕು.

66. ವರ್ತುಲಂ ತಿರ್ಯಗಚ್ಛಿದ್ರಂ ಹ್ರಸ್ವಂ ದೀರ್ಘಂ ತತಂ ತನುಮ್ ।
ವಕ್ರಂ ವಿರೂಪಂ ಬದ್ಧಾಗ್ರಚ್ಛಿನ್ನಮೂಲಂ ಪದಚ್ಯುತಮ್ ।
ಅಶುಭಂ ರೂಕ್ಷಮಾಸಕ್ತಂ ತಥಾನಂಗುಲಿಕಲ್ಪಿತಮ್ ।
ವಿಗಂಧಮಪಸವ್ಯಂ ಚ ಪುಂಡ್ರಮಾಹುರನರ್ಥಕಮ್ ॥

– ಪದ್ಮಪುರಾಣ (ಉತ್ತರಖಂಡ 225-41, 42, 43)

ದುಂಡಗಾದದ್ದು, ಅಡ್ಡ ಬಾಗಿದುದು, ಮಧ್ಯದಲ್ಲಿ ರಂಧ್ರವನ್ನು ಹೊಂದದೆ ಇದ್ದದ್ದು, ಗಿಡ್ಡವಾದದ್ದು, ತುಂಬ ಉದ್ದವಾದದ್ದು, ಅಗಲವಾದದ್ದು, ತುಂಬ ತೆಳುವಾದದ್ದು, ವಕ್ರವಾದದ್ದು, ಕುರೂಪವುಳ್ಳದ್ದು, ಮೇಲ್ಭಾಗದಲ್ಲಿ ಒಂದಾಗಿ ಕೆಳಗೆ ಕಡಿದುಹೋದದ್ದು, ಸರಿಯಾದ ಸ್ಥಾನದಲ್ಲಿ ಇರದ, ಅಮಂಗಲವಾದ, ಕ್ರೂರವಾದ, ಪರಸ್ಪರವಾಗಿ ಅಂಟಿಕೊಂಡಿರುವ, ಬೆರಳನ್ನು ಬಿಟ್ಟು ಬೇರೆ ಕಡ್ಡಿ ಇತ್ಯಾದಿಗಳಿಂದ ರಚಿತವಾದದ್ದು, ಕೆಟ್ಟ ವಾಸನೆಯುಳ್ಳ, ಎಡಬದಿಯಲ್ಲಿ ಉಳ್ಳ ಪುಂಡ್ರವು ಪುಣ್ಯಪ್ರದವಾಗದೆ ಇರುವುದಲ್ಲದೆ, ಅನರ್ಥಕಾರಿಯೂ ಆಗಿದೆ.

67. ದ್ವಾರವತ್ಯಾಂ ಶುಭೇ ರಮ್ಯೇ ವಾಸುದೇವಹ್ರದೇ ತಥಾ ।
ತತ್ರೋದ್ಭವಾಂ ಮೃದಂ ರಮ್ಯಾಮಾದಾಯ ದ್ವಿಜಸತ್ತಮಃ ।
ಧಾರಯೇದೂರ್ಧ್ವಪುಂಡ್ರಾಣಿ ಸರ್ವಕಾಮಫಲಾಪ್ತಯೇ ॥

– ಪದ್ಮಪುರಾಣ (ಉತ್ತರಖಂಡ 225-31)

ದ್ವಾರವತಿಯ ವಾಸುದೇವಸರೋವರದಲ್ಲಿ ಉಂಟಾದ, ಸುಂದರವಾದ ಮಣ್ಣಿನಿಂದ ಊರ್ಧ್ವಪುಂಡ್ರಗಳನ್ನು ಧರಿಸಿದಲ್ಲಿ ಸಕಲ ಕಾಮನೆಗಳೂ ಈಡೇರುವವು.

68. ಆದಾಯ ಪರಯಾ ಭಕ್ತ್ಯಾ ಗಂಗಾತೀರೋದ್ಭವಾಂ ಮೃದಮ್ ।
ತಯಾ ಧೃತ್ವೋರ್ಧ್ವಪುಂಡ್ರಾಣಿ ಸರ್ವಯಜ್ಞಫಲಂ ಲಭೇತ್ ॥

– ಪದ್ಮಪುರಾಣ (ಉತ್ತರಖಂಡ 225-32)

ಗಂಗಾತೀರದಲ್ಲಿ ಉಂಟಾದ ಮಣ್ಣನ್ನು ಭಕ್ತಿಯಿಂದ ಸ್ವೀಕರಿಸಿ, ಅದರಿಂದ ಊರ್ಧ್ವಪುಂಡ್ರಗಳನ್ನು ಧರಿಸಿದಲ್ಲಿ ಸರ್ವಯಜ್ಞಗಳ ಫಲ ದೊರಕುವುದು.

69. ಯತ್ರ ಪುಣ್ಯಂ ಹರಿಕ್ಷೇತ್ರಂ ತತ್ರ ವೈ ಮೃದಮಾಹರೇತ್ ।
ಸೈವ ಶ್ರೇಯೋಽರ್ಥಿಭಿರ್ಗ್ರಾಹ್ಯಾ ಚೋರ್ಧ್ವಪುಂಡ್ರಸ್ಯ ಧಾರಣೇ ॥

– ಪದ್ಮಪುರಾಣ (ಉತ್ತರಖಂಡ 225-34)

ಪವಿತ್ರವಾದ ಶ್ರೀಹರಿಯ ಕ್ಷೇತ್ರದಿಂದ ತಂದ ಮಣ್ಣಿನಿಂದ ಊರ್ಧ್ವಪುಂಡ್ರಗಳನ್ನು ಧರಿಸಿದಲ್ಲಿ ಶ್ರೇಯಸ್ಸಾಗುವುದು.

70. ಶ್ರೀಕೃಷ್ಣತುಲಸೀಮೂಲೇ ಮೃದಮಾದಾಯ ಭಕ್ತಿಮಾನ್ ।
ಧಾರಯೇದ್ ಊರ್ಧ್ವಪುಂಡ್ರಾಣಿ ಹರಿಸ್ತತ್ರ ಪ್ರಸೀದತಿ ॥

– ಪದ್ಮಪುರಾಣ (ಉತ್ತರಖಂಡ 225-30)

ಕಪ್ಪು ಬಣ್ಣದ ತುಲಸಿಯ ಬುಡದ ಮಣ್ಣಿನಿಂದ ಭಕ್ತಿಪೂರ್ವಕವಾಗಿ ಊರ್ಧ್ವ ಪುಂಡ್ರಗಳನ್ನು ಧರಿಸಿದಲ್ಲಿ ಅದರಿಂದ ಶ್ರೀಹರಿಯು ಪ್ರಸನ್ನನಾಗುವನು.

71. **ಚಂದನಂ ಚ ಹರಿದ್ರಾಂ ಚ ತಥಾ ಭಸ್ಮಾಗ್ನಿಹೋತ್ರಜಮ್ ।**
ಸರ್ವಂ ವಶ್ಯಕರಂ ಪ್ರೋಕ್ತಮೂರ್ಧ್ವಪುಂಡ್ರಸ್ಯ ಧಾರಣಾತ್ ॥

– ಪದ್ಮಪುರಾಣ (ಉತ್ತರಖಂಡ 225-33)

ಗಂಧ, ಅರಸಿನ, ಅಗ್ನಿಹೋತ್ರದಿಂದ ಉಂಟಾದ ಭಸ್ಮ –ಇವುಗಳಿಂದ ಊರ್ಧ್ವ ಪುಂಡ್ರಗಳನ್ನು ಧರಿಸಿದಲ್ಲಿ ಎಲ್ಲವೂ ಅಧೀನವಾಗುವುದು.

72. **ವಿಷ್ಣೋಃ ಸ್ನಾನೋದಕಂ ಯತ್ರ ಪ್ರವಾಹಯತಿ ನಿತ್ಯಶಃ ।**
ಪುಂಡ್ರಾಣಾಂ ಧಾರಣಾರ್ಥಾಯ ಗೃಹ್ಣೀಯಾತ್ತತ್ರ ಮೃತ್ತಿಕಾಮ್ ।

– ಪದ್ಮಪುರಾಣ (ಉತ್ತರಖಂಡ 225-37)

ಶ್ರೀವಿಷ್ಣುವಿನ ಅಭಿಷೇಕದ ನೀರನ್ನು ನಿತ್ಯವೂ ಎಲ್ಲಿ ಹರಿಯಬಿಡುವುದೋ ಅಲ್ಲಿಯ ಮಣ್ಣನ್ನು ಪುಂಡ್ರಗಳ ಧಾರಣೆಗೆ ಬಳಸಬೇಕು.

73. **ಶ್ರೀರಂಗೇ ವೇಂಕಟಾದ್ರೌ ಚ ಶ್ರೀಕೂರ್ಮೇ ದ್ವಾರಕೇ ಶುಭೇ ।**
ಪ್ರಯಾಗೇ ನಾರಸಿಂಹಾದ್ರೌ ವಾರಾಹೇ ತುಲಸೀವನೇ ।
ಗೃಹೀತ್ವಾ ಮೃತ್ತಿಕಾಂ ಭಕ್ತ್ಯಾ ವಿಷ್ಣುಪಾದಜಲೈಃ ಸಹ ।
ಧೃತ್ವಾ ಪುಂಡ್ರಾಣಿ ಚಾಂಗೇಷು ವಿಷ್ಣುಸಾಯುಜ್ಯಮಾಪ್ನುಯಾತ್ ॥

– ಪದ್ಮಪುರಾಣ (ಉತ್ತರಖಂಡ 225-38)

ಶ್ರೀರಂಗ, ವೇಂಕಟಾಚಲ, ಶ್ರೀಕೂರ್ಮ, ದ್ವಾರಕೆ, ಪ್ರಯಾಗ, ಘಟಿಕಾಚಲ, ವಾರಾಹ, ತುಲಸಿಯ ವನ –ಇಲ್ಲಿಯ ಮಣ್ಣನ್ನು ಭಕ್ತಿಯಿಂದ ಸ್ವೀಕರಿಸಿ, ಶ್ರೀವಿಷ್ಣುವಿನ ನಿರ್ಮಾಲ್ಯತೀರ್ಥದಿಂದ ಬೆರೆಸಿ, ಅಂಗಗಳಲ್ಲಿ ಊರ್ಧ್ವಪುಂಡ್ರಗಳನ್ನು ಧರಿಸಿದಲ್ಲಿ ವಿಷ್ಣುವಿನ ಸಾಯುಜ್ಯ ದೊರಕುವುದು.

74. **ಶ್ಯಾಮಂ ಶಾಂತಿಕರಂ ಪ್ರೋಕ್ತಂ ರಕ್ತಂ ವಶ್ಯಕರಂ ತಥಾ ।**
ಶ್ರೀಕರಂ ಪೀತಮಿತ್ಯಾಹುಃ ಶ್ವೇತಂ ಮೋಕ್ಷಕರಂ ಶುಭಮ್ ॥

– ಪದ್ಮಪುರಾಣ (ಉತ್ತರಖಂಡ 225-40)

ನೀಲಬಣ್ಣದ ಪುಂಡ್ರ ಶಾಂತಿಪ್ರದವಾದರೆ ಕೆಂಪುಬಣ್ಣದ ಪುಂಡ್ರ ವಶೀಕರಿಸುವ ಸಾಮರ್ಥ್ಯವುಳ್ಳದ್ದು. ಹಳದಿಬಣ್ಣದ ಪುಂಡ್ರ ಸಂಪತ್‌ಪ್ರದ. ಬೆಳ್ಳಗಿನ ಪುಂಡ್ರ ಮೋಕ್ಷ ಸಂಪಾದಕ.

75. **ಧಾರಯೇದ್ ಊರ್ಧ್ವಪುಂಡ್ರಂ ತು ತ್ರಿಸಂಧ್ಯಂ ತು ದ್ವಿಜೋತ್ತಮಃ ।**
ಸರ್ವಪಾಪವಿಶುದ್ಧ್ಯರ್ಥಮಿಷ್ಟಾಪೂರ್ತಫಲಾಪ್ತಯೇ ॥

– ಪದ್ಮಪುರಾಣ (ಉತ್ತರಖಂಡ 225-6)

ಮೂರು ಸಂಧ್ಯಾಕಾಲದಲ್ಲೂ ಊರ್ಧ್ವಪುಂಡ್ರವನ್ನು ಧರಿಸಬೇಕು. ಇದರಿಂದಾಗಿ ಸರ್ವಪಾಪಗಳ ಪರಿಹಾರವಾಗುವುದು. ಜೊತೆಗೆ ಯಾಗಗಳ, ಕೆರೆನಿರ್ಮಾಣ ಇತ್ಯಾದಿ ಕಾರ್ಯಗಳ ಫಲವೂ ದೊರಕುವುದು.

76. ಪೂಜಾಕಾಲೇ ಚ ಹೋಮೇ ಚ ಸಾಯಂ ಪ್ರಾತಃ ಸಮಾಹಿತಃ ।
ನಾಮಾನ್ಯುಚ್ಚಾರ್ಯ ವಿಧಿನಾ ಧಾರಯೇದೂರ್ಧ್ವಪುಂಡ್ರಕಮ್ ॥

– ದೇವೀ ಭಾಗವತ 11-90

ಬೆಳಗ್ಗೆ ಹಾಗೂ ಸಾಯಂಕಾಲ ಪೂಜಾಕಾಲದಲ್ಲೂ ಹೋಮಕಾಲದಲ್ಲೂ ಏಕಾಗ್ರತೆಯಿಂದ ಕೇಶವಾದಿ ನಾಮಗಳನ್ನು ಉಚ್ಚಾರಣೆ ಮಾಡಿ ವಿಧಿವತ್ತಾಗಿ ಊರ್ಧ್ವಪುಂಡ್ರವನ್ನು ಧರಿಸಬೇಕು.

77. ಗೋಪೀಚಂದನಖಂಡಂ ತು ಯೋ ದದಾತಿ ಚ ವೈಷ್ಣವೇ ।
ಕುಲಮಷ್ಟೋತ್ತರಂ ತೇನ ತಾರಿತಂ ವೈ ಭವೇಚ್ಛತಮ್ ॥

– ಸ್ಕಂದಪುರಾಣ (ವೈಷ್ಣವಖಂಡ 3-20)

ಯಾರು ವೈಷ್ಣವನಿಗೆ ಗೋಪೀಚಂದನದ ತುಂಡನ್ನು ದಾನನೀಡುವನೋ ಅದರಿಂದಾಗಿ ಅವನ ನೂರಎಂಟು ಕುಲಗಳ ಉದ್ಧಾರ ನಡೆದಂತಾಗುವುದು.

78. ಆಹೃತ್ಯಾಂಬು ಪವಿತ್ರೇಣ ಕೃತ್ವಾ ಸವ್ಯಕರೋದರೇ ।
ಕರ್ಮಾರಂಭೇಣ ಮಂತ್ರೇಣ ಮೃದಮಾಲೋಡಯೇದ್ ವಶೀ ॥

ಬ್ರಹ್ಮಣಾ ತತ್ಸಮೀಕೃತ್ಯ ಧ್ಯಾಯೇದ್ದೇವಂ ಸನಾತನಮ್ ।
ಪ್ರದೇಶಿನ್ಯಾ ಸಮಾದಾಯ ಕಿಂಚಿಚ್ಛಿರಸಿ ಧಾರಯೇತ್ ॥

– ಶಾಂಡಿಲ್ಯಸ್ಮೃತಿ 2-41, 42

ಉದ್ಧರಣೆಯಿಂದ ನೀರು ತೆಗೆದು ಎಡಗೈಯ ಮಧ್ಯಭಾಗಕ್ಕೆ ಹಾಕಿಕೊಂಡು, ಓಂಕಾರದಿಂದ ಗೋಪೀಚಂದನವನ್ನು ತೇಯಬೇಕು. ಗಾಯತ್ರೀಮಂತ್ರದಿಂದ ಪರಮಾತ್ಮನನ್ನು ಸ್ಮರಿಸಿಕೊಂಡು ತೋರುಬೆರಳಿನಿಂದ ತೇದ ಗೋಪಿಯನ್ನು ಶಿರಸ್ಸಿನಲ್ಲಿ ಧರಿಸಬೇಕು.

79. ಊರ್ಧ್ವಪುಂಡ್ರಂ ಚ ತುಲಸೀಂ ಶ್ರಾದ್ಧೇ ನೇಚ್ಛಂತಿ ಕೇಚನ ।
ವೃಥಾಚಾರಃ ಪರಿತ್ಯಾಜ್ಯಸ್ತಸ್ಮಾಚ್ಛ್ರೇಯಾರ್ಥಿಭಿರ್ದ್ವಿಜೈಃ ॥

– ಬೃಹನ್ನಾರದೀಯ (ಪೂರ್ವಭಾಗ 1-26-44)

ಶ್ರಾದ್ಧದಲ್ಲಿ ಕೆಲವರು ಊರ್ಧ್ವಪುಂಡ್ರವನ್ನೂ ತುಲಸಿಯನ್ನೂ ಬಯಸುವುದಿಲ್ಲ. ಶ್ರೇಯಸ್ಸನ್ನು ಬಯಸುವ ದ್ವಿಜರು ಈ ಕೆಟ್ಟ ಆಚಾರವನ್ನು ತ್ಯಜಿಸಬೇಕು.

80. ಮೃದ್ಭಸ್ಮ ಚಂದನಂ ಪ್ರೋಕ್ತಂ ತೋಯಂ ಚೈವ ಚತುರ್ಥಕಮ್ ।
ಸ್ನಾತ್ವಾ ಪುಂಡ್ರಂ ಮೃದಾ ಕುರ್ಯಾತ್ ಪ್ರಕ್ಷಾಲ್ಯೈವ ತು ಭಸ್ಮನಾ ।
ದೇವಾನಭ್ಯರ್ಚ್ಯ ಗಂಧೇನ ಜಲಮಧ್ಯೇ ಜಲೇನ ತು ॥

– ಪ್ರಯೋಗ ಪಾರಿಜಾತೇ

ಗೋಪೀಚಂದನ, ಭಸ್ಮ, ಗಂಧ ಹಾಗೂ ಜಲ ಈ ನಾಲ್ಕರಿಂದ ಊರ್ಧ್ವಪುಂಡ್ರ ಧಾರಣೆ ವಿಹಿತವಾಗಿದೆ.

ಸ್ನಾನಮಾಡಿದ ಮೇಲೆ ಗೋಪೀಚಂದನದಿಂದಲೂ (.....ಹುತ್ವಾ ಚೈವ ತು ಭಸ್ಮನಾ –ಎಂಬ ಪಾಠದ ಪ್ರಕಾರ) ಹೋಮಿಸಿದ ಬಳಿಕ ಹೋಮದ ಭಸ್ಮದಿಂದಲೂ

ದೇವತೆಗಳನ್ನು ಪೂಜಿಸಿದ ಬಳಿಕ ಗಂಧದಿಂದಲೂ ನೀರಿನ ಮಧ್ಯದಲ್ಲಿ ಇರುವಾಗ ನೀರಿನಿಂದಲೂ ಊರ್ಧ್ವಪುಂಡ್ರಧಾರಣೆ ನಡೆಸಬೇಕು.

81. ಮೂರ್ಧ್ನಿ ಮೂಲೇನ ಮಂತ್ರೇಣ ಶೇಷಂ ದ್ವಾದಶನಾಮಭಿಃ ।
ಸ್ಥಾನೇಷ್ವೇಷು ದ್ವಿಜಃ ಕುರ್ಯಾನ್ನಮೋಽಂತ್ಯೈಃ ಪ್ರಣವೇನ ಚ ।
ಸಂಕರ್ಷಣಾದಿಭಿಃ ಕೃಷ್ಣೇ ಶುಕ್ಲೇ ಚೇತ್ಕೇಶವಾದಿಭಿಃ ॥ – *ಬ್ರಹ್ಮಾಂಡಪುರಾಣ*

ಹಣೆ ಮುಂತಾದ ಸ್ಥಳಗಳಲ್ಲಿ ಕೇಶವಾದಿನಾಮಗಳಿಂದ, ಶಿರಸ್ಸಿನಲ್ಲಿ ನಾರಾಯಣಾಷ್ಟಾಕ್ಷರ(ಅಥವಾ ವಾಸುದೇವ ದ್ವಾದಶಾಕ್ಷರ)ಮಂತ್ರದಿಂದ ಊರ್ಧ್ವಪುಂಡ್ರಗಳನ್ನು ಧರಿಸಬೇಕು. ಓಂಕಾರದಿಂದ ಪ್ರಾರಂಭಿಸಬೇಕು. ಕೊನೆಯಲ್ಲಿ 'ನಮಃ' ಶಬ್ದವನ್ನು ಬಳಸಬೇಕು. ಶುಕ್ಲಪಕ್ಷದಲ್ಲಿ ಕೇಶವಾದಿನಾಮಗಳಿಂದಾದರೆ, ಕೃಷ್ಣಪಕ್ಷದಲ್ಲಿ ಸಂಕರ್ಷಣಾದಿ ನಾಮಗಳಿಂದ ಊರ್ಧ್ವಪುಂಡ್ರಗಳನ್ನು ಧರಿಸಬೇಕು.

* * *

ಪ್ರಕಾಶಸಂಹಿತೆಯಲ್ಲಿ ಊರ್ಧ್ವಪುಂಡ್ರಧಾರಣೆ

ಇಮಂ ಮ ಇತಿ ಮಂತ್ರೇಣ ಜಲಂ ಮೂಲೇನ ಮಂತ್ರ್ಯ ಚ ।
ವಿಷ್ಣೋರ್ನುಕಂ ಇತಿ ಧ್ಯಾತ್ವಾ ಗೋಪೀಚಂದನಮಾದರಾತ್ ।
ಸಮ್ಮರ್ದ್ಯ ಕೇಶವಾದ್ಯೈಶ್ಚ ದ್ವಿಷಣ್ಣಾಮಾನಿ ಧಾರಯೇತ್ ॥

– 2-10-96, 97

'ಇಮಂ ಮೇ' –ಎಂಬ ಮಂತ್ರದಿಂದಲೂ ನಾರಾಯಣಾಷ್ಟಾಕ್ಷರಮಂತ್ರದಿಂದಲೂ ನೀರನ್ನು ಅಭಿಮಂತ್ರಿಸಿ 'ವಿಷ್ಣೋರ್ನುಕಂ...' ಎಂಬ ಮಂತ್ರದಿಂದ ಭಗವಂತನನ್ನು ಧ್ಯಾನಿಸುತ್ತ ಭಕ್ತಿಯಿಂದ ಗೋಪೀಚಂದನವನ್ನೂ ಚೆನ್ನಾಗಿ ತೇದು ಕೇಶವಾದಿ ಭಗವನ್ನಾಮಪಠನದೊಂದಿಗೆ ಹನ್ನೆರಡು ನಾಮಗಳನ್ನು ಧರಿಸಬೇಕು.

ನಾಮಸಂಸ್ಕಾರ

ವೈಷ್ಣವದೀಕ್ಷೆಗೆ ಸಂಬಂಧಿಸುವ ಸಂಸ್ಕಾರಗಳಲ್ಲಿ ಮೂರನೆಯದು ನಾಮ ಸಂಸ್ಕಾರ. ಗುರುಗಳ ಮೂಲಕ ಹೆಸರನ್ನು ಪಡೆಯುವುದು ಈ ಸಂಸ್ಕಾರದ ಉದ್ದೇಶ. ಶುಭವಾರದಲ್ಲಿ ಈ ಸಂಸ್ಕಾರವನ್ನು ನಡೆಸಬೇಕು. ಈ ಸಂಸ್ಕಾರ ನಡೆಯುವ ದಿನದಂದು ಬೆಳಗ್ಗೆ ಮಿಂದು ಗಂಧಪುಷ್ಪಾದಿಗಳಿಂದ ಭಗವಂತನನ್ನು ಪೂಜಿಸಬೇಕು. ಗುರುಗಳನ್ನು ಆರಾಧಿಸಬೇಕು.

ಮಾಸಾಧಿದೈವತದ ನಾಮ:

ಅನಂತರ ಆಯಾ ನಾಮದ ಅಧಿದೈವತವನ್ನು ಪೂಜಿಸಬೇಕು.244 ಕೇಶವಾದಿ ಹನ್ನೆರಡು ಭಗವದ್ರೂಪಗಳೇ ಹನ್ನೆರಡು ಮಾಸಗಳ ಅಧಿದೈವತಗಳು. ಮಾರ್ಗಶೀರ್ಷ ಮಾಸದಿಂದ ಪ್ರಾರಂಭಿಸಿ, ಕ್ರಮವಾಗಿ ಕೇಶವಾದಿ ಭಗವದ್ರೂಪಗಳು ಅಧಿದೈವತವೆನಿಸಿವೆ. ಮಾರ್ಗಶೀರ್ಷ– ಕೇಶವ, ಪೌಷ– ನಾರಾಯಣ, ಮಾಘ– ಮಾಧವ, ಫಾಲ್ಗುನ– ಗೋವಿಂದ, ಚೈತ್ರ– ವಿಷ್ಣು, ವೈಶಾಖ– ಮಧುಸೂದನ, ಜ್ಯೇಷ್ಠ– ತ್ರಿವಿಕ್ರಮ, ಆಷಾಢ– ವಾಮನ, ಶ್ರಾವಣ– ಶ್ರೀಧರ, ಭಾದ್ರಪದ– ಹೃಷೀಕೇಶ, ಆಶ್ವಯುಜ– ಪದ್ಮನಾಭ, ಕಾರ್ತಿಕ– ದಾಮೋದರ –ಹೀಗೆ ಮಾರ್ಗಶೀರ್ಷಾದಿ ಮಾಸಗಳಿಗೆ ಕೇಶವಾದಿ ಭಗವದ್ ರೂಪಗಳು ಅಧಿದೈವತಗಳು. ಯಾವ ಮಾಸದಲ್ಲಿ ವೈಷ್ಣವದೀಕ್ಷೆಯನ್ನು ನೀಡಲಾಗುವುದೋ ಆ ಮಾಸದ ಅಧಿದೈವತದ ನಾಮವನ್ನೇ ಇಡಬೇಕು. ಭಗವದ್ರೂಪದ ನಾಮದ ಜೊತೆಗೆ 'ದಾಸ' ಎಂದೂ ಸೇರಿಸಿ ನಾಮಕರಣ ಮಾಡಬೇಕು. ಕೇಶವದಾಸ, ನಾರಾಯಣ ದಾಸ ಇತ್ಯಾದಿಯಾಗಿ. ನಾಮದಲ್ಲಿ ಸೇರಿಸಲಾದ 'ದಾಸ' ಎಂಬ ಶಬ್ದವು ಭಗವಂತನ ದಾಸ್ಯದ ದೀಕ್ಷೆಯನ್ನು ಆಯಾ ವ್ಯಕ್ತಿಯಲ್ಲಿ ಎತ್ತಿ ಸಾರಬಲ್ಲದು. ಭಗವಂತನ ದಶಾವತಾರಗಳಿಗೆ ಸಂಬಂಧಿಸುವ ನಾಮಗಳನ್ನು ಇಡಬಾರದು.245

---

244. ತೃತೀಯಂ ನಾಮಸಂಸ್ಕಾರಂ ಕುರ್ವೀತ ಶುಭವಾಸರೇ ।
ಸ್ನಾತ್ವಾ ಸಂಪೂಜ್ಯ ದೇವೇಶಂ ಗಂಧಪುಷ್ಪಾದಿಭಿರ್ಗುರೂನ್ ।
ನಾಮಾಧಿದೈವತಂ ಪಶ್ಚಾತ್ ಪೂಜಯೇತ್ ಪ್ರಯತಾತ್ಮವಾನ್ ॥
— –ವೃ.ಹಾ. ಸ್ಮೃತಿ 2-92,93

245. ದ್ವಾದಶೈವ ತು ಮಾಸಾಸ್ತು ಕೇಶವಾದ್ಯೈರಧಿಷ್ಠಿತಾಃ ।
ಆರಭ್ಯ ಮಾರ್ಗಶೀರ್ಷಂ ತು ಯದಾ ಸಂಖ್ಯಾ ದ್ವಿಜೋತ್ತಮಃ ॥
ಯಸ್ಮಿನ್ ಮಾಸಿ ಭವೇದ್ದೀಕ್ಷಾ ತನ್ಮೂರ್ತೇರ್ನಾಮ ಚೋದಿತಮ್ ।
ನೃಸಿಂಹರಾಮಕೃಷ್ಣಾಖ್ಯಂ ದಾಸನಾಮ ಪ್ರಕಲ್ಪಯೇತ್ ।
ಶಕ್ತ್ಯಾ ದಶಾವತಾರಾಣಾಂ ವರ್ಜಯೇನ್ನಾಮ ವೈಷ್ಣವಃ ॥
— ವೃ.ಹಾ. ಸ್ಮೃತಿ 2-94, 95

ವೈಷ್ಣವನಾಮ ಇಲ್ಲದವನು ಅನಾಮಿಕ

ಶ್ರೀವಿಷ್ಣುವಿಗೆ ಸಂಬಂಧಿಸುವ ನಾಮಗಳು ಪಾಪಪರಿಹಾರಕಗಳು. ತುಂಬ ಯತ್ನಿಸಿಯಾದರೂ ಇಂತಹ ನಾಮಗಳನ್ನೇ ಇಡಬೇಕು. ಯಾವ ದ್ವಿಜನಿಗೆ ವೈಷ್ಣವ ಹೆಸರು ಇಲ್ಲವೋ ಅವನು 'ಅನಾಮಿಕ' -ಬೇರೆ ಹೆಸರೂ ಇದ್ದರೂ ಹೆಸರನ್ನು ಹೊಂದದವ ನಂತೆಯೇ. ಆದುದರಿಂದಲೇ ಪ್ರತಿಯೊಂದು ಶಾಸ್ತ್ರೀಯ ಕರ್ಮದಲ್ಲೂ ಅವನು ನಿಂದ್ಯ ನೆನಿಸುವನು.246

ನಾಮಕರಣಸಂಸ್ಕಾರದ ಕೆಲವು ಅಂಗಗಳು:

ನಾಮಕರಣದಂದು ಚಕ್ರಮುದ್ರಾಧಾರಣೆ ಮಾಡಿಸಿ, ವಿಧಿವತ್ತಾಗಿ ಆಯಾ ಮಾಸದ ಅಧಿದೈವತದ ನಾಮವನ್ನು ಇಡಬೇಕು. ಆಚಾರ್ಯರು ನಾಮಮೂರ್ತಿಯನ್ನು ಅಂದರೆ ಆಯಾ ಮಾಸದ ಅಧಿದೈವತವನ್ನು ಮಂತ್ರದಿಂದ ಧ್ಯಾನಿಸಿ, ಪೂಜಿಸಬೇಕು. ಧೂಪ, ದೀಪ, ನೈವೇದ್ಯ, ತಾಂಬೂಲಗಳನ್ನು ಅರ್ಪಿಸಬೇಕು. ಭಕ್ತಿಯಿಂದ ಪ್ರದಕ್ಷಿಣೆ ಬಂದು ನಮಸ್ಕರಿಸಬೇಕು. ಆಯಾ ನಾಮದ ಮಂತ್ರವನ್ನು ಅಂದರೆ ನಾಮಕ್ಕೆ ಸಂಬಂಧಿಸಿದ ಅಧಿದೈವತದ ಮಂತ್ರವನ್ನಾಗಲೀ ನಾರಾಯಣಾಷ್ಟಾಕ್ಷರವನ್ನಾಗಲೀ ಸಾವಿರ ಸಂಖ್ಯೆಯಲ್ಲಿ ಜಪಿಸಬೇಕು. ಬಳಿಕ ಹೋಮವನ್ನು ನಡೆಸಬೇಕು. ವೈಷ್ಣವ ಅನುವಾಕಗಳಿಂದ ನೂರ ಎಂಟು ತುಪ್ಪದ ಆಹುತಿಗಳನ್ನು ನೀಡಬೇಕು. ಮಂತ್ರದಿಂದ ಅಭಿಮಂತ್ರಿಸಲ್ಪಟ್ಟ ಜಲದಿಂದ ಶಿಷ್ಯನ ಅಭಿಷೇಕ ನಡೆಸಿ, ಬಳಿಕ ಶಿಷ್ಯನಿಗೆ ನಾಮವನ್ನು ನೀಡಬೇಕು. ಬಳಿಕ ಪುಷ್ಪಾಂಜಲಿ ಯನ್ನು ನೀಡಿ ಹೋಮವನ್ನು ಮುಗಿಸಬೇಕು.247

ವೈಷ್ಣವರಿಗೆ ಭೋಜನ ನೀಡಬೇಕು. ದಕ್ಷಿಣೆ ದಾನಾದಿಗಳಿಂದ ಅವರನ್ನು ಸಂತೋಷ ಪಡಿಸಬೇಕು.

---

246. ನಾಮ ದದ್ಯಾತ್ ಪ್ರಯತ್ನೇನ ವೈಷ್ಣವಂ ಪಾಪನಾಶನಮ್ ।
ಯಸ್ಯ ವೈ ವೈಷ್ಣವಂ ನಾಮ ನಾಸ್ತಿ ಚೇತ್ತು ದ್ವಿಜನ್ಮನಃ ।
ಅನಾಮಿಕಃ ಸ ವಿಜ್ಞೇಯಃ ಸರ್ವಕರ್ಮಸು ಗರ್ಹಿತಃ ॥ —ವೃ.ಹಾ.ಸ್ಮೃ. 9-96, 97

247. ಚಕ್ರಸ್ಯ ಧಾರಣಂ ಯಸ್ಯ ಜಾತಕರ್ಮಣಿ ಸಂಭವೇತ್ ।
ತತ್ರ ವೈ ಮಾಸನಾಮಾಪಿ ದದ್ಯಾತ್ ವಿಪ್ರೋ ವಿಧಾನತಃ ॥
ಧ್ಯಾತ್ವಾ ಸಮರ್ಚಯೇನ್ನಾಮಮೂರ್ತಿಂ ಮಂತ್ರೇಣ ದೇಶಿಕಃ ।
ಧೂಪಂ ದೀಪಂ ಚ ನೈವೇದ್ಯಂ ತಾಂಬೂಲಂ ಚ ಸಮರ್ಪಯೇತ್ ॥
ಪ್ರದಕ್ಷಿಣಮನುವ್ರಜ್ಯ ಭಕ್ತ್ಯಾ ಸಮ್ಯಕ್ ಪ್ರಣಮ್ಯ ಚ ।
ತನ್ಮಂತ್ರಂ ಮೂಲಮಂತ್ರಂ ವಾ ಜಪೇತ್ ಸಾಹಸ್ರಸಂಖ್ಯಯಾ ॥
ಪಶ್ಚಾದ್ಧೋಮಂ ಪ್ರಕುರ್ವೀತ ಶತಮಷ್ಟೋತ್ತರಂ ಹವಿಃ ।
ವೈಷ್ಣವೈರನುವಾಕೈಶ್ಚ ಜುಹುಯಾತ್ ಸರ್ಪಿಷಾ ತದಾ ॥
ನಾಮ ದದ್ಯಾತ್ ತತಃ ಶಿಷ್ಯಂ ಮಂತ್ರತೋಯೇ ಸಮಾಪ್ಲುತಮ್ ।
ತತಃ ಪುಷ್ಪಾಂಜಲಿಂ ದತ್ವಾ ಹೋಮಶೇಷಂ ಸಮಾಪಯೇತ್ ॥
— ವೃ.ಹಾ.ಸ್ಮೃ. ೯-೮....೧೦೦

ಈ ರೀತಿಯಾಗಿ ಬ್ರಾಹ್ಮಣನಾದವನು ನಾಮಸಂಸ್ಕಾರವನ್ನು ಮಾಡಬೇಕು.[248]

ಮೂರು ಹೆಸರುಗಳು:

ಹೀಗೆ ಶ್ರೀಹರಿಗೆ ಸಂಬಂಧಿಸಿದ ಒಂದು ನಾಮವನ್ನು ಇಟ್ಟ ಬಳಿಕ, ತನ್ನ ಪಿತೃ ಪರಂಪರೆಗೆ ಸಂಬಂಧಿಸಿದಂತೆ, ಅಜ್ಜನ ಅಥವಾ ಮುತ್ತಜ್ಜನ ಹೆಸರನ್ನೂ ಎರಡನೆಯ ಹೆಸರನ್ನಾಗಿ ಇಡಬೇಕು. ಅಲೌಕಿಕವಾದ, ಅತ್ಯಂತ ಆಕರ್ಷಕವಾದ ಮತ್ತೊಂದು ಹೆಸರನ್ನೂ ಇಡಬೇಕು.

ಅಂತೂ ಭಗವಂತನಿಗೆ ಸಂಬಂಧಿಸಿದ ನಾಮವನ್ನು ಎಲ್ಲರಿಗೂ ಇಡಬೇಕೆಂಬುದು ಜ್ಞಾನಿಗಳ ಆಶಯ.[249]

ನಾಮದ ಪಾತ್ರ:

ಒಬ್ಬ ವ್ಯಕ್ತಿಯ ವ್ಯಕ್ತಿತ್ವ ಮುಖ್ಯವಾಗಿ ಆಕಾರ ಹಾಗೂ ಹೆಸರು ಎಂಬ ಎರಡು ಅಂಗಗಳನ್ನು ಒಳಗೊಂಡಿರುವುದು. ಇವುಗಳಲ್ಲಿ ನಾಮವನ್ನು ತಂದೆಯಾದವನು ಮಗು ಹುಟ್ಟಿದ ಹತ್ತನೆಯ ದಿನದಂದು ಇಡುವುದಾದರೂ[250] ವೈಷ್ಣವದೀಕ್ಷೆಯ ಅಂಗವಾಗಿ ಗುರುಗಳು ಹೆಸರು ನೀಡುವುದಾದರೂ ಅದು ಬರೇ ಅವರ ಕಲ್ಪನೆಯಿಂದ ಮೂಡಿ ಬಂದದ್ದೆಂದು ಕಡೆಗಣಿಸುವಂತಿಲ್ಲ. ಜೀವನ ಪೂರ್ತಿ ಆ ಹೆಸರಿನಿಂದಲೇ ಅವನ ವ್ಯವಹಾರ ನಡೆಯುವುದಲ್ಲದೆ, ಮುಂದೆ ದೇಹತ್ಯಾಗ ಮಾಡಿ ಪಿತೃಪಂಕ್ತಿಯಲ್ಲಿ ಸೇರಿ ದಾಗಲೂ ಆ ಹೆಸರಿನ ಮೂಲಕವೇ ಅವನಿಗೆ ತರ್ಪಣ, ಪಿಂಡಾದಿಗಳನ್ನು ಅರ್ಪಿಸಲಾಗು ವುದು. ಅಂದರೆ ಮರಣಾನಂತರವೂ ಆ ಹೆಸರೇ ಅವನಿಗೆ ಅಂಟಿಕೊಂಡಿರುವುದೆಂದರ್ಥ. ಹೆಸರಿಗೆ ಆಯಾ ವ್ಯಕ್ತಿಯ ಜೊತೆಗೆ ಇಷ್ಟೊಂದು ಗಾಢವಾದ ನಂಟು ಸಿದ್ಧಿಸಬೇಕೆಂದರೆ, ಆ ಹೆಸರು ಭಗವಂತನ ಪ್ರೇರಣಾನುಸಾರವಾಗಿ ತಂದೆಯಿಂದಲೋ ಗುರುಗಳಿಂದಲೋ ಇಡಲ್ಪಟ್ಟಿದೆ ಹೊರತು ಬರೇ ಅವರ ಕಲ್ಪನೆಯಿಂದಾಗಿ ರೂಪುಗೊಂಡದ್ದಲ್ಲ ಎಂಬುದು ಸ್ಪಷ್ಟ.

ಒಬ್ಬ ವ್ಯಕ್ತಿಯ ವ್ಯಕ್ತಿತ್ವದಲ್ಲಿ ಅವನ ಹೆಸರಿನ ಪಾತ್ರ ಇಷ್ಟೊಂದು ಮಹತ್ತ್ವ ಪೂರ್ಣವಾಗಿ ಇರುವುದರಿಂದ ಆದಷ್ಟು ಪ್ರಶಸ್ತವಾದ ನಾಮವನ್ನೇ ಇಡಬೇಕು.

ಅರ್ಥಹೀನವಾದ, ಅವಿಹಿತವಾದ, ಕೆಟ್ಟ ಶಬ್ದಗಳಿಂದ ಕೂಡಿದ, ಅಮಂಗಲವಾದ, ನಿಂದನೀಯವಾದ ಹೆಸರನ್ನು ಇಡಬಾರದೆಂದು ವಿಷ್ಣುಪುರಾಣ ಎಚ್ಚರಿಸಿದೆ. ಸಮಸಂಖ್ಯೆಯ ವರ್ಣಗಳಿರಬೇಕು; ಅತಿ ದೀರ್ಘವಾದ ಅಥವಾ ಅತಿ ಚಿಕ್ಕದಾದ, ತುಂಬ ಕಠಿಣಾಕ್ಷರ

---

248. ವೈಷ್ಣವಾನ್ ಭೋಜಯೇತ್ ಪಶ್ಚಾದ್ ದಕ್ಷಿಣಾದ್ಯೈಶ್ಚ ತೋಷಯೇತ್ ।
ಏವಂ ಹಿ ನಾಮಸಂಸ್ಕಾರಂ ಕುರ್ವೀತ ದ್ವಿಜಸತ್ತಮಃ ॥ –ವೃ.ಹಾ.ಸ್ಮೃ. ೯–೧೦೨

249. ಹರೇಃ ಪರಂ ಪಿತುರ್ನಾಮ ಯೋ ದದಾತ್ಯಪರಂ ಸುತಮ್ ।
ಅತಿರೋಚನಕಂ ದಿವ್ಯಂ ತೃತೀಯಂ ಶ್ರುತಿಚೋದಿತಮ್ ।
ತಸ್ಮಾದ್ ಭಗವತೋ ನಾಮ ಸರ್ವೇಷಾಂ ಮುನಿಭಿಃ ಸ್ಮೃತಮ್ ॥
– ವೃ.ಹಾ.ಸ್ಮೃ. ೯–೧೦೪, ೧೦೫

250. ತತಶ್ಚ ನಾಮ ಕುರ್ವೀತ ಪಿತೈವ ದಶಮೇಽಹನಿ । ––ವಿ.ಪು. ೩–೧೦–೮

ಗಳನ್ನೊಳಗೊಂಡ ನಾಮ ಆಗಿರಬಾರದು. ಅನಾಯಾಸವಾಗಿ ಉಚ್ಚರಿಸಲು ಯೋಗ್ಯವಾದ ಹಿಂದಿನ ಅಕ್ಷರ ಲಘುವಾಗಿ ಇರುವ ನಾಮವನ್ನೇ ಇಡಬೇಕೆಂದು ವಿಷ್ಣುಪುರಾಣ ತಿಳಿಸಿದೆ.251 ವ್ಯವಹರಿಸಲು ಬಳಸಿಕೊಳ್ಳಬೇಕಾದ ನಾಮದ ವಿಷಯದಲ್ಲಿ ವಿಷ್ಣುಪುರಾಣ ಇಷ್ಟೊಂದು ನಿಯಮಗಳನ್ನು ವಿಧಿಸಿದೆ ಎಂದರೆ ಇದರಿಂದ ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಅವನ ನಾಮದ ಪಾತ್ರ ಎಷ್ಟೊಂದು ಮಹತ್ತ್ವಪೂರ್ಣವಾಗಿದೆ ಎಂದು ಸ್ಪಷ್ಟವಾಗುವುದು.

ವಿಷ್ಣುಪುರಾಣವು ಅಮಂಗಲ ನಾಮವನ್ನು ಇಡಬಾರದೆಂದು ಎಚ್ಚರಿಸುವ ಮೂಲಕ ಭಗವಂತನಿಗೆ ಸಂಬಂಧಿಸುವ ನಾಮವನ್ನೇ ಇಡಬೇಕೆಂದು ಅಸ್ಪಷ್ಟವಾಗಿ ತಿಳಿಸಿದೆ. 'ಮಂಗಲಾನಾಂ ಚ ಮಂಗಲಮ್' –ಎನಿಸಿರುವ ಭಗವಂತನಿಗೆ ಸಂಬಂಧಿಸಿದಾಗಲೇ ನಾಮಕ್ಕೆ ಮಾಂಗಲ್ಯವು ಸಿದ್ಧಿಸುವುದು. ಇದಕ್ಕೆ ಬದಲಾಗಿ ಯಾವ ನಾಮವು ಭಗವಂತನನ್ನು ಜ್ಞಾಪಿಸಿಕೊಡಲಾರದೋ ಅದು ತುಂಬ ಅಮಂಗಲ. ಕೇಳಲಿಕ್ಕೆ ಇಂಪಾಗಿದ್ದರೂ, ಉಚ್ಚರಿಸಲು ಅನುಕೂಲವಾಗಿದ್ದರೂ ಭಗವಂತನ ನೆನಪಿಗೆ ಪ್ರಯೋಜಕವಾಗದಿದ್ದಲ್ಲಿ ಅದು ಅಮಂಗಲವೆನಿಸಿ ತ್ಯಾಜ್ಯವೇ ಆಗಿದೆ. ಇದುವರೆಗೆ ಚಾಲ್ತಿಯಲ್ಲಿಲ್ಲದೆ ನೂತನವೆನಿಸಬೇಕು; ವರ್ಣ, ಜಾತಿ, ಧರ್ಮ, ಮತ –ಇತ್ಯಾದಿಗಳಿಗೆ ಸೂಚಕವಾಗಿದ್ದಿರಬಾರದು. ಆದುದರಿಂದಲೇ ದೇವರಿಗೆ ಸಂಬಂಧಿಸಿದ್ದಾಗಿರಬಾರದು. ಸಹೋದರ, ಸಹೋದರಿಯರ ತಂದೆ ತಾಯಿಯಂದಿರ ಹೆಸರುಗಳಿಗೆ ಸಮಾನವಾಗಿದ್ದಿರಬೇಕು; ಅಥವಾ ಅವುಗಳ ಒಂದು ಭಾಗವನ್ನು ಹೊಂದಿದ್ದಿರಬೇಕು –ಇತ್ಯಾದಿ ಇತ್ಯಾದಿಯಾಗಿ ಈಗಿನ ನಾಮಕರಣ ಪ್ರಕ್ರಿಯೆಯ ನಿಯಮಗಳಲ್ಲಿ ಒಂದೊಂದೂ ನಾಮವು ಭಗವಂತನ ದಾಸ್ಯವನ್ನು ಸಾರುತ್ತಿರಬೇಕೆಂಬ ನಾಮಕರಣ ಪ್ರಕ್ರಿಯೆಯ ಮೂಲಭೂತ ನಿಯಮಕ್ಕೆ ಬಾಧಕವೇ ಆಗಿರುವುದು.

ಭಾಗವತದ ಸಂದೇಶ:

ಭಾಗವತ ಪ್ರಸ್ತುತಪಡಿಸುವಂತೆ ಅಜಾಮಿಳ ತನ್ನ ಮಗನಿಗೆ ನಾರಾಯಣ ಎಂಬ ಹೆಸರನ್ನು ಇಟ್ಟದ್ದರಿಂದಲೇ ಆ ಹೆಸರಿನಿಂದ ಮಗನನ್ನು ಕರೆಯಹೊರಟಾಗ ದೇವರ ನೆನಪುಬಂದು ಮುಂದೆ ಉದ್ಧಾರದ ಮಾರ್ಗದಲ್ಲಿ ಸಾಗುವಂತಾಯಿತು. ಹೀಗೆ ನಾರಾಯಣ ಎಂಬ ಹೆಸರಿನಿಂದಾಗಿ ಅಜಾಮಿಳನ ಬದುಕಿಗೆ ತಿರುವು ದೊರೆತದ್ದನ್ನು ಸಾರುತ್ತಿರುವ ಭಾಗವತ ಎಲ್ಲ ಸಾಧಕರಿಗೆ ಸೂಚ್ಯವಾಗಿ ಸಂದೇಶ ನೀಡುತ್ತಿದೆ –ನೀವು ಕೂಡಾ ನಿಮ್ಮ ಅಚ್ಚುಮೆಚ್ಚಿನ ಮಕ್ಕಳಿಗೆ ದೇವರಿಗೆ ಸಂಬಂಧಿಸುವ ಹೆಸರನ್ನೇ ಇಡಿ. ಆ ಹೆಸರಿನಿಂದ ಮಕ್ಕಳನ್ನು ಕರೆಯುವಾಗೆಲ್ಲ ದೇವರ ನೆನಪು ಬಾರದಿದ್ದರೂ ಒಂದಲ್ಲ ಒಂದು ಪ್ರಸಂಗದಲ್ಲಾದರೂ ದೇವರ ನೆನಪು ಬಾರದಿರದು. ಜೀವನದಲ್ಲಿ ತುಂಬ ಆನಂದಕ್ಕೆ

---

251. ನಾರ್ಥಹೀನಂ ನ ಚಾಶಕ್ತಂ ನಾಪಶಬ್ದಯುತಂ ತಥಾ ।
ನಾಮಂಗಲ್ಯಂ ಜುಗುಪ್ಸಂ ವಾ ನಾಮ ಕುರ್ಯಾತ್ ಸಮಾಕ್ಷರಮ್ ॥
ನಾತಿದೀರ್ಘಂ ನಾತಿಹ್ರಸ್ವಂ ನಾತಿಗುರ್ವಕ್ಷರಾನ್ವಿತಮ್ ।
ಸುಖೋಚ್ಚಾರ್ಯಂ ತು ತನ್ನಾಮ ಕುರ್ಯಾತ್ ಯತ್ಪ್ರವಣಾಕ್ಷರಮ್ ॥
– ವಿ.ಪು. ೩–೧೦, ೧೦

ಪ್ರಯೋಜಕನಾಗಿ[252] 'ನಂದನ' ಎಂದೇ ಅನ್ವರ್ಥಕವಾಗಿ ಗುರುತಿಸಲ್ಪಡುವ ಪುತ್ರನ ಮೂಲಕ ಅಷ್ಟೊಂದು ಆನಂದ ದೊರಕುವಂತೆ ಮಾಡುವವನು ದೇವರು –ಎಂಬ ವಿಶ್ಲೇಷಣೆಯೊಂದಿಗೆ ಪುತ್ರನ ನಾಮದ ಮೂಲಕ ದೇವರ ಕರುಣಾತಿಶಯವನ್ನು ಸವಿಯಬಹುದಾಗುವುದು.

'ವಿಷ್ಣುಸಹಸ್ರನಾಮ'ದಲ್ಲಿ ಪ್ರಸ್ತುತಗಳಾದ 'ನಾಮಕರಣ'ಕ್ಕೆ ಅರ್ಹಗಳಾದ ಕೆಲವು ವಿಶಿಷ್ಟ ನಾಮಗಳು. 'ಸಮಾಕ್ಷರಮ್' –ಎಂಬ ನಿಯಮಕ್ಕೆ ಒಳಪಡದಿದ್ದರೂ ಇವು ಪರಮ ಮಂಗಳಗಳಾಗಿರುವುದರಿಂದ ಗ್ರಾಹ್ಯವೆನಿಸಿವೆ.

ಅವ್ಯಯ (13) ಭಾವನ (32) ಆದಿತ್ಯ (39) ಶಾಶ್ವತ (56) ಪವಿತ್ರ (62) ಕೃತಜ್ಞ (80) ಪ್ರತ್ಯಯ (95) ಅಮೋಘ (42) ಅಮೃತ (121) ಸಹಿಷ್ಣು (143) ವಿಜಯ (150) ಅಗ್ರಣೀ (221) ವಿಶ್ವಾತ್ಮಾ (228) ಸುಪ್ರಸಾದ (239) ಸಿದ್ಧಾರ್ಥ (255) ವಿವಿಕ್ತ (266) ಶಿಷ್ಟೇಷ್ಟ (313) ತಾರಣ (341) ಅತುಲ (359) ರೋಹಿತ (368) ಪ್ರಣವ (413) ಸಮೀಹನ (448) ಸುಮುಖ (460) ಸುಹೃತ್ (464) ಸ್ವವಶ (470) ಪುರಾತನ (502) ಪುರುಜಿತ್ (510) ವಿನಯ (512) ನಂದನ (531) ವರುಣ (552) ಅಜಿತ (553) ಪರಾಯಣ (589) ಶುಭಾಂಗ (590) ಶ್ರೀನಿವಾಸ (606) ಭೂಷಣ (633) ಅನೀಶ (630) ವಿಶ್ವಮೂರ್ತಿ (721) ಅನುತ್ತಮ (739) ಜಯಂತ (802) ಪರ್ಜನ್ಯ (815) ಪ್ರಿಯಾರ್ಹ (877) ಸುರುಚಿ (883) ಸ್ವಸ್ತಿದ (906) ಶಿಶಿರ (918) ಯಜ್ಞಾಂಗ (979)

ಮಾಸಾಧಿಪತಿಗಳ ಸ್ಮರಣೆ:

ವ್ಯಕ್ತಿ ಯಾವ ಮಾಸದಲ್ಲಿ ವೈಷ್ಣವದೀಕ್ಷೆ ಸ್ವೀಕರಿಸುವನೋ ವೈಷ್ಣವದೀಕ್ಷೆ ತಾಳಲು ಆಧಾರವಾದ ಆ ಮಾಸದ ಅಧಿಪತಿಯ ಹೆಸರನ್ನೇ ಇಡಬೇಕೆಂದು ಔಚಿತ್ಯಪೂರ್ಣವಾಗಿ ಶಾಸ್ತ್ರಕಾರರು ಸಂದೇಶಿಸಿರುವಂತೆ[253] ಯಾವ ಮಾಸದಲ್ಲಿ ಜನ್ಮ ತಾಳುವನೋ ಆ ಮಾಸವು ಅವನ ಜನ್ಮಕ್ಕೆ ಆಧಾರವಾಗಿರುವುದರಿಂದ ಆ ಮಾಸವನ್ನು ನಿಯಂತ್ರಿಸುವ ಮಾಸಾಧಿಪತಿಯ ಸ್ಮರಣೆಯನ್ನು ಎಂದೆಂದೂ ನಡೆಸುತ್ತಿರಬೇಕಾದದ್ದು. ಅದಕ್ಕಾಗಿಯೇ ಆಯಾ ಮಾಸಾಧಿಪತಿಯ ಹೆಸರನ್ನೇ ಆಯಾ ಮಾಸದಲ್ಲಿ ಹುಟ್ಟಿದ ವ್ಯಕ್ತಿಗೆ ಇಡುವಂತಹದ್ದು ಔಚಿತ್ಯಪೂರ್ಣ. ಆದುದರಿಂದ ಕೇಶವ ನಾರಾಯಣ ಇತ್ಯಾದಿಯಾಗಿ ಇಡಲಾಯಿತೆಂದರೆ, ಆ ನಾಮ 'ಬೃಹತೀಸಹಸ್ರ'ದ ಒಂದು ಋಙ್ಮಂತ್ರದ ಮೂಲವಾಗಿರುವುದರಿಂದ,[254] ಆ

252. ಮನಸಿಸ್ಥಸ್ಯ ಯದ್ ವಿಷ್ಣೋಃ ಸಂಬಂಧಾದೇವ ಕಾಮದಃ ।
ಜಾತಃ ಸುತಃ ಸುಖೇ ಹೇತುಃ ಪರಾನಂದೋ ಹರಿಃ ಕಿಮು ॥
— *ಬ್ರಹ್ಮತರ್ಕ (ಬೃ.ಉ.ಭಾ. 6-1-7)*

253. ಯಸ್ಮಿನ್ ಮಾಸಿ ಭವೇದ್ದೀಕ್ಷಾ ತನ್ಮೂರ್ತೇರ್ನಾಮ ಚೋದಿತಮ್ ।
— *ವೃ.ಹಾರೀತ. ೨–೯೪*

254. ವಿಷ್ಣೋಃ ಸಹಸ್ರನಾಮ್ನಸ್ತು ಯತ್ ತದ್ ರೂಪಸಹಸ್ರಕಮ್ ।
ಬೃಹತೀಸಹಸ್ರಮೇತಚ್ಚ ತದ್ ವಕ್ತಿ ಹಿ ಪೃಥಕ್‌ಪೃಥಕ್ ॥ —*ಐ.ಉ.ಭಾ. 2-2-4-4*

ಋಜ್ಮಂತ್ರವನ್ನೂ ನೆನಪಿಸಿಕೊಡಬಲ್ಲದು. ಆ ಅನುಸಂಧಾನದೊಂದಿಗೆ ಆ ನಾಮದಿಂದ ವ್ಯವಹರಿಸಲಾಯಿತೆಂದರೆ ಬೃಹತೀಸಹಸ್ರದ ಪ್ರಭಾವವನ್ನೂ ಆ ನಾಮಧಾರಿಯಲ್ಲಿ ಅಚ್ಛೋತ್ತಿದಂತಾಗುವುದು.

ವ್ಯಕ್ತಿಯ ಹೆಸರು ಕೇಳಿದಾಕ್ಷಣ ಭಗವಂತನ ದಾಸ್ಯದ ಜಾಗೃತಿ ಆಗುವಂತೆ ಭಗವಂತನ ನಾಮದ ಜೊತೆಗೆ 'ದಾಸ' ಎಂಬ ನಾಮವನ್ನೂ ಜೋಡಿಸಬೇಕೆಂದು ತಿಳಿಸಲಾಗಿದೆ. ಹೀಗೆ ಪರಮಮಂಗಳವಾದ ಭಗವಂತನ ದಾಸ್ಯದ ಜಾಗೃತಿಗೆ ಪ್ರಯೋಜಕವಾಗಿ 'ದಾಸ' ನಾಮವನ್ನು ಜೋಡಿಸುವುದು ಉತ್ತಮ. ಒಂದೊಮ್ಮೆ ದಾಸನಾಮವನ್ನು ಸೇರಿಸದಿದ್ದರೂ ಆಯಾ ವ್ಯಕ್ತಿಗೆ ಇಟ್ಟ ಭಗವನ್ನಾಮ ಆ ವ್ಯಕ್ತಿಯ ಅಂತರ್ಯಾಮಿಗೆ ಮುಖ್ಯವಾಗಿ ಸಂಬಂಧಪಡುತ್ತಿದ್ದು, ಅವನ ಪ್ರತಿಬಿಂಬನಾಗಿ ಇರುವುದರಿಂದಷ್ಟೇ ವ್ಯಕ್ತಿ ಆ ಹೆಸರಿನಿಂದ ಕರೆಯಲ್ಪಡುವವನು ಎಂಬ ಅನುಸಂಧಾನವನ್ನಾದರೂ ತಂದುಕೊಳ್ಳಬೇಕು.

ಅಂತೂ ವ್ಯಕ್ತಿಯ ನಾಮ ವ್ಯಕ್ತಿಯಲ್ಲಿ ಇರುವ, ಇರಬೇಕಾದ ಭಗವಂತನ ಕೈಂಕರ್ಯವನ್ನು ಸಾರುತ್ತಿರಬೇಕು.

ಸ್ತ್ರೀಯರಿಗೆ ಆಯಾ ಮಾಸಾಧಿಪತಿಗಳ ಪತ್ನಿಯರಾದ ಲಕ್ಷ್ಮೀರೂಪಗಳಿಗೆ ಸಂಬಂಧಿಸುವ ಹೆಸರುಗಳನ್ನು ಇಡಬೇಕು. ಆ ಲಕ್ಷ್ಮೀರೂಪಗಳ ಹೆಸರುಗಳು ಹೀಗಿವೆ– ಕೇಶವ–ಶ್ರೀ, ನಾರಾಯಣ–ಲಕ್ಷ್ಮೀ, ಮಾಧವ–ಕಮಲಾ, ಗೋವಿಂದ–ಪದ್ಮಾ, ವಿಷ್ಣು–ಪದ್ಮಿನೀ, ಮಧುಸೂದನ–ಕಮಲಾಲಯಾ, ತ್ರಿವಿಕ್ರಮ–ರಮಾ, ವಾಮನ–ವೃಷಾಕಪಿ, ಶ್ರೀಧರ–ಧನ್ಯಾ, ಹೃಷೀಕೇಶ–ವೃದ್ಧಿ, ಪದ್ಮನಾಭ–ಯಜ್ಞಾ, ದಾಮೋದರ–ಇಂದಿರಾ.[255] ಇತ್ಯಾದಿಯಾಗಿ ಆಯಾ ನಾಮವನ್ನೇ ಇಡಬಹುದು. ಅವೆಲ್ಲ ಹಳೆಯ ಹೆಸರುಗಳು. ನೂತನವಾದ ಹೆಸರನ್ನು ಇಡಬೇಕೆಂಬ ಹಂಬಲ ಇರುವಲ್ಲಿ ನೇರವಾಗಿಯಾಗಲೀ, ಪರೋಕ್ಷವಾಗಿಯಾಗಲೀ ಆಯಾ ನಾಮದ ಅರ್ಥಸೂಚಿತವಾಗುವಂತೆ ಭಗವಂತನ ಬೇರೆ ನಾಮವನ್ನು ಇಡಬಹುದಾಗಿದೆ. ಉದಾಹರಣೆಗೆ 'ಕೇಶವ' ನಾಮದ ಬದಲು ಆ ನಾಮದ ಚತುರ್ಮುಖರುದ್ರರನ್ನು ಸೃಷ್ಟ್ಯಾದಿಗಳಲ್ಲಿ ತೊಡಗಿಸುವವನೆಂಬ ಅರ್ಥವನ್ನು ಸೂಚಿಸುವ 'ಭಾವನ' ಎಂಬ ಹೆಸರನ್ನು ಇಡಬಹುದು. 'ನಾರಾಯಣ' ನಾಮದ ಬದಲು, ಆ ನಾಮದ ಜ್ಞಾನಿಗಳಿಗೆ ಆಶ್ರಯನಾದವನೆಂಬ ಅರ್ಥವನ್ನು ಸೂಚಿಸುವ 'ಶಿಷ್ಟೇಷ್ಟ' 'ಪರಾಯಣ' ಇತ್ಯಾದಿ ನಾಮಗಳನ್ನು ಇಡಬಹುದು. 'ಮಾಧವ' ನಾಮದ ಬದಲು, ಆ ನಾಮದ ಮತ್ತೊಬ್ಬ ಒಡೆಯನಿಲ್ಲದವನೆಂಬ ಅರ್ಥವನ್ನು ಸೂಚಿಸುವ 'ಅನೀಶ' ಎಂಬ ನಾಮವನ್ನು ಇಡಬಹುದು. 'ಗೋವಿಂದ' ನಾಮದ ಬದಲು, ಅದರ ವೇದಮಾತುಗಳಿಂದ ಪ್ರತಿಪಾದ್ಯ ನೆಂಬ ಅರ್ಥವನ್ನು ಸೂಚಿಸುವ 'ಪ್ರಣವ' ನಾಮವನ್ನು ಇಡಬಹುದು. 'ವಿಷ್ಣು' ನಾಮದ ಬದಲು ಪ್ರೇರಿಸುವವನೆಂಬ ಅದರ ಅರ್ಥವನ್ನು ಸೂಚಿಸುವ

---

255. ಶ್ರೀಲಕ್ಷ್ಮೀಃ ಕಮಲಾ ಪದ್ಮಾ ಪದ್ಮಿನೀ ಕಮಲಾಲಯಾ ।
ರಮಾ ವೃಷಾಕಪೀ ಧನ್ಯಾ ವೃದ್ಧಿರ್ಯಜ್ಞಾ ತಥೇಂದಿರಾ ।
ಶಕ್ತಯಃ ಕೇಶವಾದೀನಾಂ ಸಂಪ್ರೋಕ್ತಾಃ ಪರಮೇ ಪದೇ ॥

– *ವೃದ್ಧಹಾರೀತಸ್ಮೃತಿ (4-89, 90)*

'ಸಮೀಹನ', 'ಅಗ್ರಣೀ' ಹೆಸರನ್ನು ಇಡಬಹುದು. ಮಧುಸೂದನ ಹೆಸರಿನ ಬದಲು, ಆ ಹೆಸರಿನ ಮೋಕ್ಷ ಸುಖವನ್ನು ನೀಡುವವನೆಂಬ ಅರ್ಥದ 'ಸುಪ್ರಸಾದ' 'ಸ್ವಸ್ತಿದ' ನಾಮಗಳನ್ನು ಇಡಬಹುದು. 'ತ್ರಿವಿಕ್ರಮ'ನಾಮದ ಬದಲು ಮೂರು ವೇದಾದಿಗಳನ್ನು ಮೀರಿ ಇರುವವನೆಂಬ ಆ ನಾಮದ ಅರ್ಥವನ್ನು ಸೂಚಿಸುವ 'ಅನುತ್ತಮ' ಎಂಬ ನಾಮವನ್ನು ಇಡಬಹುದು. ವಾಮನನಾಮದ ಬದಲು, ಅದರ ಸೌಂದರ್ಯವನ್ನು ನೀಡುವವಳೆಂಬ ಅರ್ಥದ 'ಭೂಷಣ' 'ಸುಮುಖ' ನಾಮಗಳನ್ನು ಇಡಬಹುದು. ಶ್ರೀಧರ ನಾಮದ ಬದಲು, ಲಕ್ಷ್ಮೀದೇವಿಗೆ ಆಧಾರನಾದವನೆಂಬ ಅರ್ಥದ 'ಶ್ರೀನಿವಾಸ'ನಾಮವನ್ನು ಇಡಬಹುದು. 'ಹೃಷೀಕೇಶ' ನಾಮದ ಬದಲು, ಆ ನಾಮದ 'ಸಂತೋಷಪಡಿಸುವ ಕಿರಣಗಳುಳ್ಳವನು' ಎಂಬ ಅರ್ಥವನ್ನು ಸೂಚಿಸುವ 'ನಂದನ' ಎಂಬ ಹೆಸರನ್ನು ಇಡಬಹುದು. ಪದ್ಮನಾಭ ಹೆಸರಿನ ಬದಲು, ನಾಭಿಯಲ್ಲಿ ಜಗದ್ರೂಪವಾದ ಪದ್ಮವನ್ನು ಧರಿಸಿರುವವನೆಂಬ ಅರ್ಥದ 'ವಿಶ್ವಮೂರ್ತಿ' 'ವಿಶ್ವಾತ್ಮಾ' ಎಂಬ ಹೆಸರುಗಳನ್ನು ಇಡಬಹುದು.

ಹೀಗೆ ಮೂಲತಃ ಆಯಾ ಮಾಸಾಧಿಪತಿಯನ್ನು ಮರೆತುಬಿಡದೆ, ಅವನ ಸ್ಮರಣೆಗೆ ಪೋಷಕವಾಗುವಂತೆ ಪರೋಕ್ಷವಾಗಿಯಾದರೂ ಆಯಾ ನಾಮಾರ್ಥಸ್ಪರ್ಶವುಳ್ಳ ನಾಮವನ್ನು ಇಡಬಹುದಾಗಿದೆ. ಸ್ತ್ರೀಯರಿಗೆ ವಿಷ್ಣುಸಹಸ್ರನಾಮದ ಯಾವುದಾದರೊಂದು ನಾಮವನ್ನು ಲಕ್ಷ್ಮೀದೇವಿಯ ಈ ಹೆಸರುಗಳಿಗೆ ಸಮಾನಾರ್ಥಗಳಾದ ಹೆಸರುಗಳನ್ನಾಗಲೀ ಅರ್ಥದ ಛಾಯೆ ಇರುವ ಹೆಸರುಗಳನ್ನಾಗಲೀ ಇಡಬಹುದು. ಆದರೆ ಆ ಹೆಸರಿನ ಮೂಲ ಹೆಸರು ಆಯಾ ವ್ಯಕ್ತಿ ಜನ್ಮಪಡೆದ ಮಾಸದ ಅಧಿಪತಿಯ ಪತ್ನಿಯನ್ನು ಜ್ಞಾಪಿಸುತ್ತಿರಬೇಕು; ಆ ಮೂಲಕ ಅವಳ ಪತಿ ಮಾಸನಿಯಾಮಕನ ಸ್ಮರಣೆಯೂ ಆಗುವಂತಿರಬೇಕು.

ಮನೆಮಠಾದಿಗಳಿಗೂ ನಾಮಕರಣ

ಶ್ರೀವಿಷ್ಣುಭಕ್ತನಾದವನು ತನ್ನ ದೇಹಕ್ಕಷ್ಟೇ ಅಲ್ಲದೆ, ತನ್ನ ಅಧೀನದಲ್ಲಿರುವ ಪ್ರತಿಯೊಂದು ವಸ್ತುವಿಗೂ ಚಕ್ರ ಹಾಗೂ ಶಂಖ ಚಿಹ್ನೆಗಳನ್ನು ಹಾಕಿ ಅವುಗಳ ಸ್ವಾಮ್ಯ ಭಗವಂತನಿಗೆ ಸೇರಿದ್ದೆಂದು ಅನುಸಂಧಾನ ಮಾಡಬೇಕೋ ಹಾಗೆಯೇ ತನ್ನ ಮನೆ, ಮನೆಯಲ್ಲಿಯ ಕೊಠಡಿಗಳು, ಪ್ರಮುಖ ವಸ್ತುಗಳು ಇವೆಲ್ಲವುಗಳಿಗೆ ಭಗವಂತನ ನಾಮವನ್ನು ಇಡುವ ಮೂಲಕ ಅವುಗಳ ಒಡೆತನವನ್ನು ಅವನದ್ದೆಂದು ಸಾರಬೇಕು.

ಮುಕುಂದನ ಮಂದಿರ ಎಂಬ ಅನುಸಂಧಾನ ಮೂಡುವಂತೆ ಮನೆಗೆ 'ಈಶಾವಾಸ್ಯ', 'ಆತ್ಮಾವಾಸ್ಯ' 'ಪ್ರಾಣನಿಲಯ' ಇತ್ಯಾದಿಯಾಗಿ, ಮನೆಯೊಳಗೆ ದೇವರ ಕೋಣೆಗೆ 'ಯಜ್ಞನಾರಾಯಣ' 'ಯಜ್ಞವಾಹನ' ಇತ್ಯಾದಿಯಾಗಿ, ಅಡುಗೆ ಮನೆಗೆ 'ಅಗ್ನಿನಾರಾಯಣ' 'ಪರಶುರಾಮ' ಇತ್ಯಾದಿಯಾಗಿ, ಅಧ್ಯಯನ ಕೊಠಡಿಗೆ 'ಬಾದರಾಯಣ' 'ಹಯಗ್ರೀವ' ಇತ್ಯಾದಿಯಾಗಿ, ಸ್ನಾನ ಕೊಠಡಿಗೆ 'ಪುಂಡರೀಕಾಕ್ಷ' 'ವಿಶೋಧನ' ಇತ್ಯಾದಿಯಾಗಿ, ಹಟ್ಟಿಗೆ 'ಗೋವಿಂದ' 'ಗೋಪಾಲ' ಇತ್ಯಾದಿಯಾಗಿ, ಶಯನ ಕೊಠಡಿಗೆ 'ಸ್ವಾಪನ' 'ಪ್ರಾಜ್ಞ' ಇತ್ಯಾದಿಯಾಗಿ, ಮನೆಯ ವಾಹನಗಳಿಗೆ 'ಗರುಡಧ್ವಜ' 'ಗರುಡ

ವಾಹನ' 'ವಾಯುವಾಹನ' 'ಪರಿಸರಪದ್ಧತಿ' –ಇತ್ಯಾದಿಯಾಗಿ ಭಗವಂತನ ಯಾವ ರೂಪ ಆಯಾ ಚಟುವಟಿಕೆಗೆ ವಿಶೇಷವಾಗಿ ಸಂಬಂಧವುಳ್ಳದೋ ಆಯಾ ಚಟುವಟಿಕೆಯ ತಾಣಕ್ಕೆ ಆಯಾ ರೂಪದ ಹೆಸರನ್ನೇ ಇಡುವ ಮೂಲಕ ಆಯಾ ತಾಣದ ಬಗ್ಗೆ ಭಗವಂತನ ಸ್ವಾಮ್ಯವನ್ನು ಅನುಸಂಧಾನಕ್ಕೆ ತಂದುಕೊಳ್ಳಬಹುದಾಗಿದೆ. ಹಾಗೂ ಆಯಾ ತಾಣದ ಚಟುವಟಿಕೆಯಲ್ಲಿ ಭಗವಂತನ ಪಾತ್ರದ ಪರಿಚಯವನ್ನು ವಿವೇಚಿಸಿಕೊಳ್ಳಬಹುದಾಗಿದೆ ಕೂಡಾ.

ಹೀಗೆ 'ನಾಮಕರಣ'ಸಂಸ್ಕಾರ ಶ್ರೀವಿಷ್ಣುವಿನ ದಾಸ್ಯದ ಅನುಭೂತಿಗೆ ಪ್ರಯೋಜಕ ವಾಗುವ ಮೂಲಕ 'ವಿಷ್ಣುದೀಕ್ಷೆ'ಯಲ್ಲಿ ಮಹತ್ತ್ವದ ಪಾತ್ರವನ್ನು ವಹಿಸಿರುವುದು.

ಈ ರೀತಿಯಾಗಿ ನಾಮಕರಣ ಶ್ರೀವಿಷ್ಣುವಿನ ದಾಸ್ಯದ ಅನುಭೂತಿಗೆ ಪ್ರಯೋಜಕ ವಾಗುವ ಮೂಲಕ 'ವಿಷ್ಣುದೀಕ್ಷೆ'ಯಲ್ಲಿ ಮಹತ್ತ್ವದ ಪಾತ್ರವನ್ನು ವಹಿಸಬಲ್ಲದು.

* * *

ಮಂತ್ರಸಂಸ್ಕಾರ

ವೈಷ್ಣವದೀಕ್ಷೆಯ ನಾಲ್ಕನೇ ಸಂಸ್ಕಾರ -ಮಂತ್ರಸಂಸ್ಕಾರ'.[256] ಗುರುಗಳ ಮೂಲಕ ಮಂತ್ರಗಳ ಉಪದೇಶ ಪಡೆಯುವುದು ಈ ಸಂಸ್ಕಾರದ ಉದ್ದೇಶ.

ಗುರು ಮಂತ್ರಸಂಸ್ಕಾರ ನಡೆಸುವಂದು ಬೆಳಗ್ಗೆ ವಿಧಿವತ್ತಾಗಿ ಸ್ನಾನ, ಸಂಧ್ಯಾವಂದನೆ, ಪೂಜೆ ಮುಂತಾದುವನ್ನು ನಡೆಸಬೇಕು. ತಾನು ಶಿಷ್ಯನಿಗೆ ಉಪದೇಶಿಸಲಿರುವ ನಾರಾಯಣಾಷ್ಟಾಕ್ಷರವೇ ಮುಂತಾದ ಮಂತ್ರಗಳನ್ನು ಸಾವಿರದ ಎಂಟು ಬಾರಿ ಜಪಿಸಿ[257] ತನ್ನಲ್ಲಿ ಆ ಮಂತ್ರದ ಉಪದೇಶಕ್ಕೆ ಬೇಕಾದ ಅಧಿಕಾರ ಸಿದ್ಧಿಸುವಂತೆ ಮಾಡಿಕೊಳ್ಳಬೇಕು.

ಮಿಂದು, ಅಲಂಕೃತನಾದ ಶಿಷ್ಯನ ಮೇಲೆ ಕಲಶಜಲದಿಂದ ಪ್ರೋಕ್ಷಣೆ ಮಾಡಬೇಕು. ಪವಿತ್ರ ನೀರಿನ ಆ ಕಲಶ ಐದು ಮರದ ತೊಗಟೆಗಳಿಂದ, ಐದು ಮರದ ಪಲ್ಲವಗಳಿಂದ, ಪಂಚರತ್ನಗಳಿಂದ, ಮಂಗಲದ್ರವ್ಯಗಳಿಂದ ಕೂಡಿದ್ದಾಗಿರಬೇಕು. ದರ್ಭೆಗಳಿಂದ ವಿಷ್ಣು-ದೇವತಾಸೂಕ್ತಗಳನ್ನು, ಪವಮಾನಸೂಕ್ತಗಳನ್ನು ಪಠಿಸುತ್ತ ಕಲಶದ ಜಲವನ್ನು ಶಿಷ್ಯನ ಮೇಲೆ ಮಾರ್ಜನೆ ಮಾಡಬೇಕು. ನೂರ ಎಂಟು ಬಾರಿ ನಾರಾಯಣಾಷ್ಟಾಕ್ಷರಮಂತ್ರಗಳ ಪಠನದೊಂದಿಗೂ ಮಾರ್ಜನೆ ನಡೆಸಬೇಕು. ಬಳಿಕ ಕಲಶಜಲವನ್ನು ಶಿಷ್ಯನ ತಲೆಯ ಮೇಲೆ ಅಭಿಷೇಕ ಮಾಡಬೇಕು.[258]

ಅನಂತರ ಶುದ್ಧ ಹಾಗೂ ಬೆಳ್ಳಗಿನ ವಸ್ತ್ರವನ್ನು ಧರಿಸಿರುವ, ಪವಿತ್ರನಾದ ಅಲಂಕೃತನಾದ ಶಿಷ್ಯನು ಆಚಮನ ಮಾಡಬೇಕು. ಊರ್ಧ್ವಪುಂಡ್ರಗಳನ್ನು ಧರಿಸಬೇಕು. ಪವಿತ್ರವನ್ನು ಧರಿಸಬೇಕು. ಕೊರಳಲ್ಲಿ ಪದ್ಮಾಕ್ಷಮಾಲೆಯನ್ನು ಹಾಕಿಕೊಳ್ಳಬೇಕು. ಗುರುಗಳ ಬಲಭಾಗದಲ್ಲಿಯ ದರ್ಭೆಯ ಆಸನದಲ್ಲಿ ಅವನು ಕುಳಿತುಕೊಳ್ಳಬೇಕು.

ಗುರುಗಳು ತನ್ನ ಗೃಹ್ಯಸೂತ್ರಕ್ಕನುಗುಣವಾಗಿ ಅಗ್ನಿಯನ್ನು ಪ್ರತಿಷ್ಠಾಪಿಸಬೇಕು. ಜೇನು, ತುಪ್ಪಗಳಿಂದ ಮಿಶ್ರಿತವಾದ ಪಾಯಸದಿಂದ ಪುರುಷಸೂಕ್ತ, ಶ್ರೀಸೂಕ್ತಗಳ

---

256. ಚತುರ್ಥಂ ಮಂತ್ರಸಂಸ್ಕಾರಂ ಕುರ್ವೀತ ದ್ವಿಜಸತ್ತಮಃ । —ವೃ.ಹಾ.ಸ್ಮೃ. ೨-೧೦೬

257. ಅಷ್ಟೋತ್ತರಸಹಸ್ರಂ ತು ಮಂತ್ರರತ್ನಂ ಜಪೇದ್ ಗುರುಃ ॥ —ವೃ.ಹಾ.ಸ್ಮೃ.೨-೧೦೭

258. ಸ್ನಾತಂ ಶಿಷ್ಯಂ ಸಮಾಹೂಯ ಸುವೇಷಂ ಸಮಲಂಕೃತಮ್ ।
ಆದಾಯ ಕಲಶಂ ರಮ್ಯಂ ಪವಿತ್ರೋದಕಪೂರಿತಮ್ ॥
ಪಂಚತ್ವಕ್‌ಪಲ್ಲವಯುತಂ ಪಂಚರತ್ನಸಮನ್ವಿತಮ್ ।
ಮಂಗಲದ್ರವ್ಯಸಂಯುಕ್ತಂ ಮಂತ್ರೇಣೈವಾಭಿಮಂತ್ರಯೇತ್ ॥
ಸಮ್ಮಾರ್ಜಯೇತ್ ತತಃ ಶಿಷ್ಯಂ ತಜ್ಜಲೇನ ಕುಶೈಃ ಶುಭೈಃ ।
ಸೂಕ್ತೈಶ್ಚ ವಿಷ್ಣುದೈವತ್ಯೈಃ ಪಾವಮಾನ್ಯೈಸ್ತಥೈವ ಚ ॥
ಅಷ್ಟೋತ್ತರಶತಂ ಪಶ್ಚಾನ್ಮಂತ್ರರತ್ನೇನ ಮಾರ್ಜಯೇತ್ ।
ಅಭಿಷಿಚ್ಯ ತತೋ ಮೂರ್ಧ್ನಿ..... ॥ —ವೃ.ಹಾ.ಸ್ಮೃ. ೨-೧೦೮....೧೧೧

ಮೂಲಕ ಹೋಮಿಸಬೇಕು. ಘೃತಮಿಶ್ರಿತಚರುವಿನಿಂದ ಮೂಲಮಂತ್ರದ ಮೂಲಕ ಹೋಮಿಸಬೇಕು. ಕೇಶವಾದಿಗಳಿಗೂ ಅಮುಕ್ತರಾದ ಪೀಠಾವರಣದೇವತೆಗಳಿಗೂ ಆಹುತಿ ನೀಡಬೇಕು.[259]

ಹೀಗೆ ಅಗ್ನಿಮುಖದ ಆರಾಧನೆಯನ್ನು ಗುರುಗಳು ನಡೆಸಬೇಕು. ಅಗ್ನಿಕುಂಡಕ್ಕೆ ಪ್ರದಕ್ಷಿಣೆ ಬಂದು ಅಗ್ನ್ಯಂತರ್ಗತ ಜನಾರ್ದನನನ್ನು ನಮಿಸಬೇಕು.

ಗುರು–ಲಕ್ಷ್ಮೀ–ಹರಿ ಇವರಲ್ಲಿ ಪ್ರಾರ್ಥನೆ

ಬಳಿಕ ಗುರುಗಳು ತಮ್ಮ ಗುರುಗಳನ್ನು ನಮಿಸಿ, ಗುರುಪರಂಪರೆಯನ್ನು ಜಪಿಸಬೇಕು. ಅನಂತರ ಜಗತ್ತಿಗೆ ತಾಯಿಯಾದ ಲಕ್ಷ್ಮೀದೇವಿಯನ್ನು ಶರಣುಹೊಂದಬೇಕು.[260]

ಅಂತಹ ಲಕ್ಷ್ಮೀದೇವಿಯಿಂದ ನಿತ್ಯ ಕೂಡಿಕೊಂಡಿರುವ, ವಾತ್ಸಲ್ಯಾದಿ ಗುಣಸಂಪನ್ನನಾದ, ಎಲ್ಲರಿಗೂ ಶರಣನೆನಿಸಲು ಯೋಗ್ಯನಾದ, ಸನಾತನನಾದ ನಾರಾಯಣನಲ್ಲಿ ಶರಣಾಗತಿಯನ್ನು ಹೊಂದಬೇಕು–

ನಾರಾಯಣ ದಯಾಸಿಂಧೋ ವಾತ್ಸಲ್ಯಗುಣಸಾಗರ! ।
ಏನಂ ರಕ್ಷ ಜಗನ್ನಾಥ! ಬಹುಜನ್ಮಾಪರಾಧಿನಮ್ ॥

"ಹೇ ನಾರಾಯಣ! ಕರುಣಾಸಾಗರ! ಭಕ್ತವಾತ್ಸಲ್ಯಗುಣಕ್ಕೆ ಸಮುದ್ರದಂತೆ ಇರುವವನೇ, ಜಗನ್ನಾಥ! ಬಹುಜನ್ಮಗಳಲ್ಲಿ ಅನೇಕ ಅಪರಾಧಗಳನ್ನು ಎಸಗಿರುವ ಇವನನ್ನು ರಕ್ಷಿಸು"

---

259. ....ಶುಕ್ಲವಸ್ತ್ರಧರಂ ಶುಚಿಮ್ ।
ಸ್ವಲಂಕೃತಂ ಸಮಾಚಂತಮೂರ್ಧ್ವಪುಂಡ್ರಧರಂ ತಥಾ ॥
ಪವಿತ್ರಹಸ್ತಂ ಪದ್ಮಾಕ್ಷಮಾಲಯಾ ಸಮಲಂಕೃತಮ್ ।
ನಿವೇಶ್ಯ ದಕ್ಷಿಣೇ ಸ್ವಸ್ಯ ಆಸನೇ ಕುಶನಿರ್ಮಿತೇ ॥
ಸ್ವಗೃಹ್ಯೋಕ್ತವಿಧಾನೇನ ಪುರತೋಽಗ್ನಿಂ ಪ್ರಕಲ್ಪಯೇತ್ ।
ಪೌರುಷೇಣ ತು ಸೂಕ್ತೇನ ಶ್ರೀಸೂಕ್ತೇನ ತಥೈವ ಚ ॥
ಮಧ್ವಾಜ್ಯಮಿಶ್ರಿತಂ ರಮ್ಯಂ ಪಾಯಸಂ ಜುಹುಯಾದ್ ಗುರುಃ ।
ಅಷ್ಟೋತ್ತರಶತಂ ಪಶ್ಚಾದಾಜ್ಯಂ ಮಂತ್ರದ್ವಯೇನ ಚ ॥
ಮೂಲಮಂತ್ರೇಣ ಜುಹುಯಾಚ್ಚರುಂ ಘೃತವಿಮಿಶ್ರಿತಮ್ ।
ಕೇಶವಾದೀನ್ ಸಮುದ್ದಿಶ್ಯ ನಿತ್ಯಾನಮುಕ್ತಾಂಸ್ತಥೈವ ಚ ॥
ಏಕೈಕಮಾಹುತಿಂ ಹುತ್ವಾ ಹೋಮಶೇಷಂ ಸಮಾಪಯೇತ್ ।
ತತಃ ಪ್ರದಕ್ಷಿಣಂ ಕೃತ್ವಾ ನಮಸ್ಕೃತ್ವಾ ಜನಾರ್ದನಮ್.... ॥
– ವೃ.ಹಾ.ಸ್ಮೃ. ೨-೧೧೨....೧೧೭

260. ಆಚಾರ್ಯಃ ಸ್ವಗುರುಂ ನತ್ವಾ ಜಪೇದ್ ಗುರುಪರಂಪರಾಮ್ ।
ಮಾತರಂ ಸರ್ವಜಗತಾಂ ಪ್ರಪದ್ಯೇತ ಶ್ರಿಯಂ ತತಃ ॥ –ವೃ. ಹಾ. ಸ್ಮೃ. ೨-೧೧೮

ಹೀಗೆ ಗುರುಗಳ ಆದೇಶಾನುಸಾರವಾಗಿ ಶಿಷ್ಯ ಶ್ರೀಹರಿಯನ್ನು ಶರಣಾಗತನಾಗಬೇಕು.261

ಅನಂತರ ಶಿಷ್ಯ ಗುರುಗಳಿಗೆ ಶರಣಾಗತನಾಗಬೇಕು–

ಗುರೋ! ತ್ವಮೇವ ಮೇ ದೇವಸ್ತ್ವಮೇವ ಪರಮಾ ಗತಿಃ ।
ತ್ವಮೇವ ಪರಮೋ ಧರ್ಮಸ್ತ್ವಮೇವ ಪರಮಂ ತಪಃ ॥

"ಗುರುಗಳೇ, ನೀವು ನನ್ನ ಪಾಲಿಗೆ ದೇವರ ಪ್ರತಿಮೆ. ನನ್ನ ಉದ್ಧಾರಕರು, ನನ್ನ ಶ್ರೇಷ್ಠ ಧರ್ಮ, ಶ್ರೇಷ್ಠ ತಪಸ್ಸು ನಿಮ್ಮ ಅಧೀನ. ಅಂದರೆ ನಿಮ್ಮ ಅನುಗ್ರಹದಿಂದಲೇ ಅವು ನನ್ನಲ್ಲಿ ಸಿದ್ಧಿಸಬೇಕು.

ಹೀಗೆ ಶರಣಾಗತನಾದ ಶಿಷ್ಯನನ್ನು ಗುರುಗಳು ಶ್ರೀಹರಿಯ ಸಮಕ್ಷಮದಲ್ಲಿ ಪೂರ್ವಮುಖವಾದ ದರ್ಭಾಸನದಲ್ಲಿ ಕುಳ್ಳಿರಿಸಬೇಕು. ಗುರುಗಳು ತುಂಬ ಏಕಾಗ್ರತೆಯಿಂದ ತಮ್ಮ ಗುರುಗಳನ್ನೂ ಗುರುಪರಂಪರೆಯನ್ನೂ ಶ್ರೀಜನಾರ್ದನನನ್ನೂ ಧ್ಯಾನಿಸಬೇಕು. ಕೃಪೆಯಿಂದ ಶಿಷ್ಯನನ್ನು ಕಾಣಬೇಕು. ಬಲಗೈಯನ್ನು ಅವನ ತಲೆಯ ಮೇಲೆ ಇಡಬೇಕು. ಎಡಗೈಯನ್ನು ಎದೆಯಲ್ಲಿ ಇಟ್ಟುಕೊಳ್ಳಬೇಕು. ಶಿಷ್ಯನಾದರೂ ಏಕಾಗ್ರಮನಸ್ಕನಾಗಿ ಗುರುಗಳ ಪಾದವನ್ನು ಹಿಡಿದುಕೊಂಡು ಹೀಗೆ ಪ್ರಾರ್ಥಿಸಬೇಕು–

'**ಭೋ ಗುರೋ! ಬ್ರೂಹಿ ಮಂತ್ರಂ ಮೇ....**' ಗುರುಗಳೇ ನನಗೆ ಮಂತ್ರವನ್ನು ಉಪದೇಶಿಸಿ.

ಬಳಿಕ ಗುರುಗಳು ಅವನಿಗೆ ಶ್ರೇಷ್ಠ ಮಂತ್ರದ ಅಧ್ಯಾಪನ ನಡೆಸಬೇಕು. ಮಂತ್ರದ ನ್ಯಾಸ, ಮುದ್ರೆ, ಋಷಿಪರಂಪರೆ ಹಾಗೂ ಮಂತ್ರಪ್ರತಿಪಾದ್ಯ ಮುಖ್ಯ ದೇವತೆ –ಇವುಗಳನ್ನು ತಿಳಿಸಬೇಕು. ಮಂತ್ರದ ಅರ್ಥವನ್ನು ತಿಳಿಸಬೇಕು. ನಾರಾಯಣಾಷ್ಟಾಕ್ಷರಮಂತ್ರ, ವಾಸುದೇವದ್ವಾದಶಾಕ್ಷರಮಂತ್ರ, ವೈಷ್ಣವಗಾಯತ್ರಿ, ರಾಮಮಂತ್ರ, ಕೃಷ್ಣಮಂತ್ರ, ನರಸಿಂಹಮಂತ್ರ –ಇವುಗಳನ್ನು ಶಿಷ್ಯನಿಗೆ ಉಪದೇಶಿಸಬೇಕು. ಅತಿಪ್ರಸನ್ನಮನಸ್ಕನಾಗಿ ಮಂತ್ರವನ್ನು ಉಪದೇಶಿಸಬೇಕು. ಬಲಕಿವಿಯಲ್ಲಿ ಮಂತ್ರವನ್ನು ಉಪದೇಶಿಸಬೇಕು, ಮಂತ್ರದ ಅರ್ಥವನ್ನೂ ತಿಳಿಸಬೇಕು.

---

261. ನಿತ್ಯಯುಕ್ತಂ ತಯಾ ದೇವ್ಯಾ ವಾತ್ಸಲ್ಯಾದಿಗುಣಾನ್ವಿತಮ್ ।
ಶರಣ್ಯಂ ಸರ್ವಲೋಕಾನಾಂ ಪ್ರಪದ್ಯೇತ ಸನಾತನಮ್ ॥
.....ಇತ್ಯಾಚಾರ್ಯೇಣ ಸಂದಿಷ್ಟಃ ಪ್ರಪದ್ಯೇತ ಜನಾರ್ದನಮ್ ।
ಪ್ರಪದ್ಯೇತ ತತಃ ಶಿಷ್ಯೋ ಗುರುಮೇವ ದಯಾನಿಧಿಮ್ ॥
.....ಇತಿ ಪ್ರಪನ್ನಮಾಚಾರ್ಯೋ ನಿವೇಶ್ಯ ಪುರತೋ ಹರೇಃ ।
ಪ್ರಾಗಗ್ರೇಷು ಸಮಾಸೀನಂ ದರ್ಭೇಷು ಸುಸಮಾಹಿತಃ ॥
ಸ್ವಾಚಾರ್ಯಂ ಪುರತೋ ಧ್ಯಾತ್ವಾ ನಮಸ್ಕೃತ್ವಾಥ ಭಕ್ತಿಮಾನ್ ।
ಗುರೋಃ ಪರಂಪರಾಂ ಜಪ್ತ್ವಾ ಹೃದಿ ಧ್ಯಾತ್ವಾ ಜನಾರ್ದನಮ್ ॥
ಕೃಪಯಾ ವೀಕ್ಷಿತಂ ಶಿಷ್ಯಂ ದಕ್ಷಿಣಂ ಜ್ಞಾನದಕ್ಷಿಣಮ್ ।
ನಿಕ್ಷಿಪ್ಯ ಹಸ್ತಂ ಶಿರಸಿ ವಾಮಂ ಹೃದಿ ಚ ವಿನ್ಯಸೇತ್ ॥ –ವೃ.ಹಾ. ಸ್ಮೃ. ೨–೧೧೯

ಅವೈಷ್ಣವ ಗುರುವಿನಿಂದ ಉಪದೇಶ ಪಡೆದ ಮಂತ್ರದ ಜಪ ನರಕಕ್ಕೇ ಪ್ರಯೋಜಕವೆನಿಸುವುದು. ವೈಷ್ಣವನು ಅವೈಷ್ಣವ ಗುರುವಿನಿಂದ ಮಂತ್ರೋಪದೇಶ ಪಡೆದಲ್ಲಿ ಸಾವಿರಾರು ವರ್ಷ ನರಕವಾಸವನ್ನು ಅನುಭವಿಸಬೇಕಾಗುವುದು! ಹಾಗೆಯೇ ಚಕ್ರವನ್ನು ಧರಿಸದ ವ್ಯಕ್ತಿಗೆ ಮಂತ್ರವನ್ನು ಉಪದೇಶಿಸಿದಲ್ಲಿ ಗುರು ನರಕವಾಸವನ್ನು ಅನುಭವಿಸಬೇಕಾಗುವುದು! ಆದುದರಿಂದ ಗುರು ವೈಷ್ಣವದೀಕ್ಷೆಯನ್ನು ನೀಡಿ, ವಿನೀತನಾದ ಶಿಷ್ಯನಿಗಷ್ಟೇ ಮಂತ್ರೋಪದೇಶವನ್ನು ನೀಡಬೇಕು. ನಾರಾಯಣಾಷ್ಟಾಕ್ಷರಮಂತ್ರ ಹಾಗೂ ಗಾಯತ್ರೀಮಂತ್ರ –ಈ ಎರಡು ಮಂತ್ರಗಳ ಉಪದೇಶ ಪಡೆಯದೆ ಬೇರೆ ಯಾವ ವೈಷ್ಣವಮಂತ್ರವೂ ಸಿದ್ಧಿಪ್ರದವಾಗದು.262

ಹೀಗೆ ಗುರುಗಳಿಂದ ಮಂತ್ರೋಪದೇಶ ಪಡೆದ ಶಿಷ್ಯ ಗುರುಗಳನ್ನು ಶ್ರದ್ಧೆಯಿಂದ ಪೂಜಿಸಬೇಕು. ಗೋ, ಭೂ, ಚಿನ್ನ, ರತ್ನ, ಬಟ್ಟೆ, ಭೂಷಣಗಳನ್ನು ನೀಡಿ ಗುರುಗಳನ್ನು ಗೌರವಿಸಬೇಕು. ಗುರುಗಳು ಮಂತ್ರದ ಸ್ವರೂಪ, ಅದರಿಂದ ಸಿದ್ಧಿ ಪಡೆಯುವ ಉಪಾಯ ಹಾಗೂ ಅವರಿಂದ ಪಡೆಯಬಹುದಾದ ಫಲ ಇವನ್ನು ಶಿಷ್ಯನಿಗೆ ತಿಳಿಸಬೇಕು.263

---

262. ಪಾದೌ ಗೃಹೀತ್ವಾ ಶಿಷ್ಯಸ್ತು ಗುರೋಃ ಪ್ರಯತಮಾನಸಃ ।
....ಅಧ್ಯಾಪಯೇತ್ತತಸ್ತಸ್ಮೈ ಮಂತ್ರರತ್ನಂ ಶುಭಾಹ್ವಯಮ್ ॥
ಸನ್ಯಾಸಂ ಚ ಸಮುದ್ರಂ ಚ ಸರ್ಷಿಷಂಡೋಽಧಿದೈವತಮ್ ।
ಸಾರ್ಥಮಧ್ಯಾಪಯೇಚ್ಛಿಷ್ಯಂ ಪ್ರಯತಂ ಶರಣಾಗತಮ್ ॥
ಅಷ್ಟಾಕ್ಷರಂ ದ್ವಾದಶಾರ್ಣಂ ಷಟ್‌ಕುಕ್ಷೀಂ ವೈಷ್ಣವೀಂ ತಥಾ ।
ರಾಮಕೃಷ್ಣನೃಸಿಂಹಾಖ್ಯಾನ್ ಮಂತ್ರಾನ್ ತಸ್ಮೈ ನಿವೇದಯೇತ್ ॥
....ಅವೈಷ್ಣವೋಪದಿಷ್ಟೇನ ಮಂತ್ರೇಣ ನರಕಂ ವ್ರಜೇತ್ ।
ಅವೈಷ್ಣವಾದ್ ಗುರೋರ್ಮಂತ್ರಂ ಯಃ ಪಠೇದ್ ವೈಷ್ಣವೋ ದ್ವಿಜಃ ॥
ಕಲ್ಪಕೋಟಿಸಹಸ್ರಾಣಿ ಪಚ್ಯತೇ ನರಕಾತ್ಮನಾ ।
ಅಚಕ್ರಧಾರಿಣಂ ಯಸ್ತು ಮಂತ್ರಮಧ್ಯಾಪಯೇದ್ ಗುರುಃ ॥
ರೌರವಂ ನರಕಂ ಪ್ರಾಪ್ಯ ಚಾಂಡಾಲೀಯೋನಿಮಾಪ್ನುಯಾತ್ ।
ತಸ್ಮಾದ್ ದೀಕ್ಷಾವಿಧಾನೇನ ಶಿಷ್ಯಂ ಭಕ್ತಿಸಮನ್ವಿತಮ್ ॥
ಮಂತ್ರಮ್ ಅಧ್ಯಾಪಯೇದ್ ವಿದ್ವಾನ್ ವೈಷ್ಣವಂ ಪಾಪನಾಶನಮ್ ।
ಅನಧೀತ್ಯ ದ್ವಯಂ ಮಂತ್ರಂ ಯೋಽನ್ಯವೈಷ್ಣವಮುತ್ತಮಮ್ ।
ಅಧೀತ್ಯ ಮಂತ್ರಸಂಸಿದ್ಧಿಂ ನ ಪ್ರಾಪ್ನೋತಿ ನ ಸಂಶಯಃ ॥
– ವೃ.ಹಾ.ಸ್ಮೃ. ೨-೧೨೭....೧೩೭.

* ಅತಿಹೃಷ್ಟಮನಾಃ ಶಿಷ್ಯಂ ಮನುಮಧ್ಯಾಪಯೇತ್ ಪರಮ್ ।
– ಪದ್ಮಪುರಾಣ, ಪಾತಾಲಖಂಡ 82-12

* ತತೋ ಮಂತ್ರದ್ವಯಂ ತಸ್ಯ ದಕ್ಷಕರ್ಣೇ ವಿನಿರ್ದಿಶೇತ್ । *–ಪ. ಪು. ಪಾತಾಲ 82-14*

* ಮಂತ್ರಾರ್ಥಂ ಚ ವದೇತ್ತಸ್ಮೈ ಯಥಾವದನುಪೂರ್ವಶಃ ।
– ಪದ್ಮ. ಪಾತಾಲ 82-15

263. ಪ್ರಾಪ್ತಮಂತ್ರಸ್ತತಃ ಶಿಷ್ಯಃ ಪೂಜಯೇಚ್ಛ್ರದ್ಧಯಾ ಗುರುಮ್ ।

ವಿಷ್ಣುರಹಸ್ಯದಲ್ಲಿ ಮಂತ್ರಗಳ ಮಾಹಿತಿ

ವಿಷ್ಣುರಹಸ್ಯದಲ್ಲಿ ಮಂತ್ರಗಳ ವಿಷಯದಲ್ಲಿ ಸುಮಾರು ನಲ್ವತ್ತು ಶ್ಲೋಕಗಳ ವ್ಯಾಪ್ತಿಯಲ್ಲಿ (ಒಂಭತ್ತನೇ ಅಧ್ಯಾಯದ ೨೩ನೇ ಶ್ಲೋಕದಿಂದ ೬೧ನೆಯ ಶ್ಲೋಕದ ವರೆಗೆ) ವಿಸ್ತಾರವಾಗಿ ಮಾಹಿತಿಯನ್ನು ನೀಡಲಾಗಿದೆ.

ಮಂತ್ರಗಳ ಸ್ವರೂಪ, ಭೇದಗಳು:

ಓಂಕಾರಸಹಿತಗಳಾದ ಮಂತ್ರಗಳು, ಓಂಕಾರರಹಿತಗಳಾದ ಮಂತ್ರಗಳು ಬೀಜಾಕ್ಷರ ಸಹಿತಗಳಾದ ಮಂತ್ರಗಳು, ಬೀಜಾಕ್ಷರಗಳಿಂದ ರಹಿತಗಳಾದ ಮಂತ್ರಗಳು –ಹೀಗೆ ಮಂತ್ರಗಳು ಬೇರೆಬೇರೆ ಅಧಿಕಾರಿಗಳಿಗಾಗಿ ಬಹುಪ್ರಕಾರಗಳಲ್ಲಿವೆ. ಚತುರ್ಥೀವಿಭಕ್ತಿಯಲ್ಲಿರುವ ಆಯಾ ದೇವತೆಯ ನಾಮ ಓಂಕಾರ ಆದಿಯಲ್ಲಿ, 'ನಮಃ' ಕೊನೆಯಲ್ಲಿ –ಈ ರೀತಿಯಾಗಿ 'ಓಂ ರಾಮಾಯ ನಮಃ' 'ಓಂ ಕೃಷ್ಣಾಯ ನಮಃ' –ಇತ್ಯಾದಿಯಾಗಿ ಆಯಾ ದೇವತೆಯ ಮಂತ್ರಗಳು ಪ್ರಸಿದ್ಧಗಳಾಗಿವೆ.264 ಅಥವಾ ಕೆಲವು ಮಂತ್ರಗಳಲ್ಲಿ 'ಓಂ ನಮಃ ಶಿವಾಯ' ಇತ್ಯಾದಿಯಾಗಿ 'ನಮಃ' ಶಬ್ದ ಮೊದಲು ಇರುವುದುಂಟು. 'ಓಂ ಕೃಷ್ಣಾಯ ಸ್ವಾಹಾ' ಇತ್ಯಾದಿಯಾಗಿ 'ಸ್ವಾಹಾ' ಶಬ್ದ ಕೊನೆಯಲ್ಲಿ ಇರುವುದೂ ಉಂಟು. 'ನಮಃ' ಅಥವಾ 'ಸ್ವಾಹಾ' ಇಲ್ಲದೆ ಬರೇ ಸಂಬೋಧನಾರೂಪದಲ್ಲೂ 'ಕೃಷ್ಣಕೃಷ್ಣ' 'ಹರೇಹರೇ' 'ಹರೇ ರಾಮ' 'ಹರೇ ಕೃಷ್ಣ' ಇತ್ಯಾದಿಯಾಗಿ ಕೆಲವು ನಾಮಗಳಿರುವವು. 'ಶ್ರೀಕೃಷ್ಣಾಯ ನಮಃ' ಇತ್ಯಾದಿಯಾಗಿ ಶ್ರೀಕಾರಪೂರ್ವಕಗಳಾದ ಕೆಲವು ಮಂತ್ರಗಳು. 'ಪುರುಷಸೂಕ್ತ' ಇತ್ಯಾದಿ ಕೆಲವು ಮಾಲಾಮಂತ್ರಗಳು. ಆಯಾ ದೇವತೆಯ ಸ್ತುತಿ ಮಾಡುವವು. ನಾನಾ ಬಗೆಯ ಸಿದ್ಧಿಪ್ರದವಾದವುಗಳು.265 ಮಂತ್ರಘಟಕವಾದ ನಾಮದ ಮೊದಲ ವರ್ಣ ಅನುಸ್ವಾರದಿಂದ ಕೂಡಿ ನಾಮಮಂತ್ರಗಳಲ್ಲಿ ಬೀಜಾಕ್ಷರ ಎನಿಸುವುದು.266

ಗೋಭೂಹಿರಣ್ಯರತ್ನಾದ್ಯೈಃ ವಾಸೋಭಿರ್ಭೂಷಣೈರಪಿ ।
....ಸ್ವರೂಪಂ ಸಾಧನಂ ಸಾಧ್ಯಂ ಮಂತ್ರೇಣಾಸ್ಮೈ ನಿವೇದಯೇತ್ ॥
– *ವೃ.ಹಾ.ಸ್ಮೃ. ೩೨-೧೩೭, ೧೩೮*

264. ಮಂತ್ರಾ ನಾನಾವಿಧಾಃ ಸಂತಿ ಸೋಂಕಾರಾಶ್ಚ ನಿರೋಂಕೃತಾಃ ।
ಸಬೀಜಾಶ್ಚಾಪಿ ನಿರ್ಬೀಜಾ ನಾನಾಧಿಕೃತಭೇದತಃ ।
ತತ್ತನ್ನಾಮ ಚತುರ್ಥ್ಯಂತಂ ನಮೋಽಂತಪ್ರಣವಾದಿಕಮ್ ।
ಇತಿ ಸಾಮಾನ್ಯತೋ ಮಂತ್ರಸ್ತತ್ತದ್ದೇವಸ್ಯ ಕೀರ್ತಿತಃ ॥ *–9-23, 24*

265. ನಮಃಶಬ್ದೋಽಥವಾ ಪೂರ್ವೋ ನಾಮ್ನಾ ಸ್ವಾಹಾಂತತೋಽಪಿ ವಾ ।
ಸಂಬುದ್ಧ್ಯಂತಾ ನಮಃ ಸ್ವಾಹಾವರ್ಜಿತಾಶ್ಚಾಪಿ ಕೇಚನ ॥
ಶ್ರೀಕಾರಪೂರ್ವಾಃ ಕೇಚಿತ್ ಮಾಲಾಮಂತ್ರಾಸ್ತಥಾಪರೇ ।
ತತ್ತದ್ದೇವಸ್ತುತಿಪರಾಃ ನಾನಾಸಿದ್ಧಿಪ್ರದಾಶ್ಚ ತೇ ॥ *–9-25, 26*

266. ಯಸ್ತು ನಾಮಾದಿಮೋ ವರ್ಣಃ ಸೋಽನುಸ್ವಾರಸಮನ್ವಿತಃ ।
ಭವೇತ್ ಸಾಮಾನ್ಯತೋ ಬೀಜಂ ನಾಮಮಂತ್ರೇಷು ಸರ್ವಶಃ ॥ *–9-60, 61*

ಬೇರೆ ಬೇರೆ ಅಧಿಕಾರಿಗಳಿಗೆ ಬೇರೆಬೇರೆ ಮಂತ್ರಗಳು:

ಓಂಕಾರ, ಅಕಾರಾದಿ ೫೦ ವರ್ಣಗಳು, ನಾರಾಯಣಾಷ್ಟಾಕ್ಷರ, ವ್ಯಾಹೃತಿ, ವಾಸುದೇವ ದ್ವಾದಶಾಕ್ಷರ, ಗಾಯತ್ರೀಮಂತ್ರ, ಪುರುಷಸೂಕ್ತ ಹಾಗೂ ವಿಷ್ಣುಷಡಕ್ಷರ –ಇವಿಷ್ಟು ಅಷ್ಟಮಹಾಮಂತ್ರಗಳೆನಿಸಿವೆ.267 ಶ್ರೀವಿಷ್ಣುವಿಗೆ ಅತ್ಯಂತ ಪ್ರಿಯಗಳಾದ ಇವುಗಳನ್ನು ಸದಾಚಾರಸಂಪನ್ನರಾದ ಅತ್ಯಂತ ಶುಚಿಗಳಾದ ಬ್ರಾಹ್ಮಣರಷ್ಟೇ ಜಪಿಸಬೇಕು.268 ಅಷ್ಟಮಹಾಮಂತ್ರಗಳಲ್ಲೂ ಪ್ರಣವಮಂತ್ರವನ್ನು ಯತಿಗಳಷ್ಟೇ ಜಪಿಸಬೇಕು. ಗೃಹಸ್ಥಾದಿಗಳು ಅದನ್ನು ಜಪಿಸಿದರೆ ದೋಷ ಸಂಭವಿಸುವುದು. ಉಳಿದ ಅಷ್ಟಮಹಾಮಂತ್ರಗಳನ್ನು ಗೃಹಸ್ಥರೂ ಜಪಿಸಬಹುದು.269

ನರಸಿಂಹ, ಹಯಗ್ರೀವ, ಹಂಸ, ವಾರಾಹ, ಭಾರ್ಗವ, ಕಪಿಲ, ವ್ಯಾಸ, ದತ್ತ ಮೊದಲಾದ ಇತರ ವೈಷ್ಣವಮಂತ್ರಗಳನ್ನು ಸದಾಚಾರಸಂಪನ್ನರಾದ ದ್ವಿಜರಷ್ಟೇ ಜಪಿಸಬೇಕು.270 ಹಾಗಾದರಷ್ಟೇ ಫಲಪ್ರದಗಳೆನಿಸುವವು. ಹಯಗ್ರೀವ, ನರಸಿಂಹ, ವರಾಹ ಹಾಗೂ ಭಾರ್ಗವ ಮಂತ್ರಗಳನ್ನಂತೂ ದುರಾಚಾರಿಗಳು ಜಪಿಸಲೇಬಾರದು. ದುರಾಚಾರಿಗಳೂ ಜಪಿಸಿದರೆಂದರೆ ಅವರ ಪಾಲಿಗೆ ಮಂತ್ರಗಳು ದುಷ್ಪರಿಣಾಮವನ್ನು ಬೀರಬಲ್ಲವು. ಅಲ್ಪ ಕಾಲದಲ್ಲೇ ಅವರು ಪಿಶಾಚಗಳಾಗುವ ಅಪಾಯವಿದೆ.271 ಹಯಗ್ರೀವಾದಿ ಮಂತ್ರಗಳಿಗಿಂತ ಭಿನ್ನಗಳಾದ ವೈಷ್ಣವಮಂತ್ರಗಳನ್ನು ದುರಾಚಾರಿಗಳು ಜಪಿಸಿದರೆ ಕೂಡಲೇ ದುಷ್ಫಲ ಕಾಣಿಸದಿದ್ದರೂ ಸ್ವಲ್ಪ ಕಾಲದ ಅನಂತರವಾದರೂ ದುಷ್ಫಲ ಕಾಣಿಸದೆ ಇರದು.272 ಇದೇ

---

267. ಪ್ರಣವೋ ಮಾತೃಕಾಷ್ಟಾರ್ಣೋ ವ್ಯಾಹೃತಿರ್ದ್ವಾದಶಾಕ್ಷರಃ ।
ಗಾಯತ್ರೀ ಪುರುಷೋ ವಿಷ್ಣುರ್ಮಹಾಮಂತ್ರಾಷ್ಟಕಂ ಸ್ಮೃತಮ್ । –9-29

268. ತತ್ರಾಪ್ಯಷ್ಟೌ ಮಹಾಮಂತ್ರಾ ಮಹಾವಿಷ್ಣೋರ್ಮಹಾಪ್ರಿಯಾಃ ।
ಸದಾಚಾರೈರ್ದ್ವಿಜೈರೇವ ಜಪಿತವ್ಯಾತಿಶೌಚಿಭಿಃ ॥ –9-28

269. ತತ್ರಾಪಿ ಪ್ರಣವೋ ಮಂತ್ರೋ ಯತೀನಾಮೇವ ಕೀರ್ತಿತಃ ।
ಅನ್ಯಾಶ್ರಮಾಹಿತಂ ಜಪ್ತ್ವಾ ಭವಂತಿ ಪ್ರತ್ಯವಾಯಿನಃ –9-30

* ಮಾತೃಕಾದಿಷು ಮಂತ್ರೇಷು ಗೃಹಸ್ಥಾಶ್ಚಾಧಿಕಾರಿಣಃ –9-31

270. ನರಸಿಂಹಹಯಗ್ರೀವಹಂಸವಾರಾಹಭಾರ್ಗವಾಃ ।
ಕಪಿಲವ್ಯಾಸದತ್ತಾದ್ಯಾ ದ್ವಿಜಾನಾಮೇವ ಕೀರ್ತಿತಾಃ ॥
ಸ್ವಸ್ವವರ್ಣಾಶ್ರಮಾಚಾರೈರ್ದುರಾಚಾರವಿವರ್ಜಿತೈಃ ।
ಏತೇ ಮಂತ್ರಾ ಉಪಾಸ್ಯಾಃ ಸ್ಯುರನ್ಯಥಾ ನ ಫಲಪ್ರದಾಃ ॥ –9-31, 32, 33

271. ತತ್ರಾಪಿ ಚ ಹಯಗ್ರೀವ ನರಸಿಂಹ ವರಾಹಕಾಃ ।
ಭಾರ್ಗವಶ್ಚ ದುರಾಚಾರೈರ್ನೈವ ಸೇವ್ಯಾಃ ಕಥಂಚನ ।
.....ಮಂತ್ರಕ್ಷೋಭೋ ಭವೇತ್ತೇಷಾಂ ತತ್ಕಾಲೇ ಸ್ಯುಃ ಪಿಶಾಚಕಾಃ ॥ –9, 39, 40, 41

272. ಅನ್ಯವೈಷ್ಣವಮಂತ್ರಾಸ್ತು ಕಾಲೇನೈವಾಪಕಾರಿಣಃ ।
ವಿಲಂಬೇನಾಪಕಾರೋಽಪಿ ಜಾಯತೇ ನಾತ್ರ ಸಂಶಯಃ ॥ --9-42

ರೀತಿಯಾಗಿ ಸಂಕರ್ಷಣಮಂತ್ರವೂ ಸದಾಚಾರಿಗಳಿಂದಷ್ಟೇ ಜಪಿಸಲು ಯೋಗ್ಯವಾದುದು.273

ರಾಮ, ಗೋಪಾಲ, ಕೃಷ್ಣ, ಹರಿ, ದಾಮೋದರ, ಅಚ್ಯುತ, ಮತ್ಸ್ಯ, ವಾಮನ, ಕೂರ್ಮ –ಮುಂತಾದ ಮಂತ್ರಗಳು ಸೌಮ್ಯಮೂರ್ತಿಗಳನ್ನು ಪ್ರತಿಪಾದಿಸುವ ಸೌಮ್ಯ ಸ್ವರೂಪದ ಮಂತ್ರಗಳಾಗಿವೆ. ಸದಾಚಾರಿಗಳು ಇವುಗಳನ್ನು ಜಪಿಸಿದರೆ ಅಧಿಕಫಲ ದೊರಕುವುದು. ದುರಾಚಾರಿಗಳು ಜಪಿಸಿದರೂ ಆ ಪ್ರಯುಕ್ತ ದುಷ್ಪರಿಣಾಮ ಉಂಟಾಗಲಾರದು.274 ಈ ಮಂತ್ರಗಳೇ ಓಂಕಾರವಿಲ್ಲದೆ, ಬೀಜಾಕ್ಷರಸಹಿತವಾಗಿ ಶುದ್ಧರಾದ ಬ್ರಾಹ್ಮಣಸ್ತ್ರೀಯರಿಂದ ಜಪಿಸಲ್ಪಡಬಹುದು.275 ದ್ವಿಜರಲ್ಲಿ ಪತಿತರಾದವರು ಪಶ್ಚಾತ್ತಾಪಕ್ಕೆ ಒಳಗಾಗಿದ್ದಲ್ಲಿ ದ್ವಿಜಸ್ತ್ರೀಯರು ಹೇಗೋ ಹಾಗೆ ಸಂಸ್ಕಾರಕ್ಕೆ ಯೋಗ್ಯರೆನಿಸುವರು.276 ಒಳ್ಳೆಯ ಶೂದ್ರರೂ ದ್ವಿಜಸ್ತ್ರೀಯರಂತೆ ಸಂಸ್ಕಾರಾರ್ಹರು; ಮಂತ್ರೋಪದೇಶಕ್ಕೆ ಅರ್ಹರು.277 ಸ್ತ್ರೀಶೂದ್ರಾದಿಗಳು ಓಂಕಾರವಿಲ್ಲದ, ಬೀಜಾಕ್ಷರವಿಲ್ಲದ, 'ನಮಃ' ಶಬ್ದವನ್ನು ಮೊದಲು ಅಥವಾ ಕೊನೆಯಲ್ಲಿ ಹೊಂದಿರುವ, ಶ್ರೀಶಬ್ದಪೂರ್ವಕವಾಗಿ– ಸಂಬುದ್ಧ್ಯಂತವಾಗಿ–ಸೌಮ್ಯರೂಪದ ಮಂತ್ರಗಳಾಗಿರುವ ರಾಮಾದಿಗಳನ್ನು ಅಭಿರುಚಿಗನುಗುಣವಾಗಿ ಜಪಿಸಬೇಕು. ಶ್ರೀಶಬ್ದಪೂರ್ವಕವಾದ ಸಂಬುದ್ಧ್ಯಂತ ಮಂತ್ರಗಳೆಂದರೆ ಶ್ರೀಕೃಷ್ಣ ಶ್ರೀರಾಮ ಇತ್ಯಾದಿ. ಶೂದ್ರರಿಂದ ಪ್ರಾರಂಭಿಸಿ ಚಂಡಾಲರ ವರೆಗಿನ ಎಲ್ಲ ಸಾಧಕರಿಗೂ ಅವುಗಳನ್ನು ಉಪದೇಶಿಸಬೇಕು.278

ಇಂತಹವರಲ್ಲೂ ಯಾರು ನಿಯಮವ್ರತಗಳನ್ನು ಅಳವಡಿಸಿಕೊಂಡ ವಿಶಿಷ್ಟರೋ ಅಂತಹವರಿಗೆ ಸಾಮಾನ್ಯವಾಗಿ ಬೀಜಮಂತ್ರದಿಂದ ಕೂಡಿದ ಮಂತ್ರಗಳನ್ನೇ ಉಪದೇಶಿಸಬೇಕು.279

---

273. ಏವಂ ಸಂಕರ್ಷಣೋ ಮಂತ್ರಃ..... ಉಪಾಸ್ಯಾ ನಿಯತವ್ರತೈಃ । –9-43

274. ರಾಮಗೋಪಾಲಕೃಷ್ಣಾದ್ಯಾ ಹರಿದಾಮೋದರಾಚ್ಯುತಾಃ ।
ಮತ್ಸ್ಯ ವಾಮನ ಕೂರ್ಮಾದ್ಯಾಃ ಸರ್ವೇ ಸ್ಯುಃ ಸೌಮ್ಯಮೂರ್ತಯಃ ।
ನ ಕುಪ್ಯಂತಿ ದುರಾಚಾರೈಃ ಸದಾಚಾರೈಃ ಫಲಾಧಿಕಾಃ ॥ –9-45

275. ಏತ ಏವ ನಿರೋಂಕಾರಾಃ ಸಬೀಜಾಃ ಶುಚಿಭಿಃ ಸದಾ ।
ದ್ವಿಜಸ್ತ್ರೀಭಿರುಪಾಸ್ಯಾ ಸ್ಯುಃ ನಾನ್ಯೈರೇವ ಕಥಂಚನ –9-47


276. ಪತಿತಾ ಯೇ ದ್ವಿಜಾತೀನಾಂ..... ಪಶ್ಚಾತ್ತಾಪೇನ ಸಂತಪ್ತಾಃ.....
ತೇಽಪಿ ಸಂಸ್ಕಾರ್ಯಾ ದ್ವಿಜಸ್ತ್ರೀವದ್ದಯಾಲುಭಿಃ ॥ –1-9-49

277. ಸಚ್ಛೂದ್ರಾ ಅಪಿ ಯೇ ಕೇಚಿತ್.....
ದ್ವಿಜಸ್ತ್ರೀವತ್ ಸಂಸ್ಕಾರ್ಯಾಸ್ತಥಾ ಮಂತ್ರೋಪದೇಶಮ್ । –9-52, 53

278. ನಿರೋಂಕಾರಾಶ್ಚ ನಮಃಪೂರ್ವಾ ನಮೋಽಂತಾಃ ।
ಶ್ರೀಶಬ್ದಪೂರ್ವಕಾ ವಾಪಿ ಸಂಬುದ್ಧ್ಯಂತಾಶ್ಚ ಯೇ ಸ್ಮೃತಾಃ ॥
ಸೌಮ್ಯರೂಪಾಶ್ಚ ರಾಮಾದ್ಯಾ ಮನವಸ್ತೇ ಯಥಾರುಚಿ ।
ಶೂದ್ರಾದಿಶ್ವಪಚಾಂತೇಭ್ಯಃ ಉಪದೇಶ್ಯಾ ವಿಶುದ್ಧಯೇ ॥ –9-59

279. ತತ್ರಾಪಿ ಯೇ ವಿಶಿಷ್ಟಾ ಸ್ಯುಃ ನಿಯಮವ್ರತಚಾರಿಣಃ ।
ತೇಷಾಂ ಸಾಮಾನ್ಯತೋ ಬೀಜಯುಕ್ತಾನ್ ಮಂತ್ರಾನುಪಾದಿಶೇತ್ ॥ –9-60

ಮಂತ್ರಸಂಸ್ಕಾರದ ಬಗ್ಗೆ ಶ್ರೀ ಮಧ್ವರ ಬೆಳಕು



ಪಾಜಕದಲ್ಲಿ ಶ್ರೀ ವಾದಿರಾಜ ಪ್ರತಿಷ್ಠಾಪಿತ ಶ್ರೀ ಮಧ್ವಗುರುಗಳು

ಶ್ರೀ ಮಧ್ವರು ತಮ್ಮ ತಂತ್ರಸಾರಸಂಗ್ರಹದಲ್ಲಿ ಎಂಬತ್ತು ಮಂತ್ರಗಳನ್ನು ತೋರಿಸಿಕೊಟ್ಟಿರುವರಲ್ಲದೆ, ಮಂತ್ರಜಪಾದಿಗಳ ಕುರಿತೂ ಬೆಳಕುಚೆಲ್ಲಿರುವರು. ಅಲ್ಲದೆ, ಸರ್ವಮೂಲದ ಭಾಗವತತಾತ್ಪರ್ಯ ನಿರ್ಣಯ, ಗೀತಾಭಾಷ್ಯ, ಉಪನಿಷದ್ಭಾಷ್ಯ –ಮುಂತಾದ ಗ್ರಂಥಗಳಲ್ಲೂ ಮಂತ್ರದ ಬಗ್ಗೆ ಕೆಲವು ವಿಶಿಷ್ಟ ಮಾಹಿತಿಗಳನ್ನು ನೀಡಿರುವರು. ಅವುಗಳನ್ನು ಹೀಗೆ ಸಂಗ್ರಹಿಸಬಹುದಾಗಿದೆ–

ಉಪದೇಶದ ನಿಯಮಗಳು

- ವಿದ್ಯೆಗಳು, ಕರ್ಮಗಳು ಹೇಗೋ ಹಾಗೆ ಮಂತ್ರಗಳು ಗುರುಗಳ ಉಪದೇಶದಿಂದ ಪಡೆದರಷ್ಟೇ ಫಲಪ್ರದವಾಗುವವು. ಗುರುಗಳು ಪ್ರಸನ್ನರಾಗಿ ನೀಡಿದ ಉಪದೇಶ ಹೆಚ್ಚು ಫಲಪ್ರದ.[280]
- ವಿದ್ಯೆಗಳು ಹೇಗೋ ಹಾಗೆ ಮಂತ್ರಗಳು ಸರಿಯಾಗಿ ಫಲಿಸಬೇಕೆಂದರೆ ಉಪದೇಶ ನೀಡುವ ಗುರುಗಳೂ ಯೋಗ್ಯರಾಗಿರಬೇಕು; ಉಪದೇಶ ಪಡೆಯುವ ಶಿಷ್ಯನೂ ಯೋಗ್ಯನಾಗಿರಬೇಕು. ಗುರುಗಳ ಸಾಕಷ್ಟು ಶುಶ್ರೂಷೆ ನಡೆಸಿದ ಮೇಲೆಯೇ ಉಪದೇಶ ಪಡೆದುಕೊಳ್ಳಬೇಕು. ಪ್ರಸನ್ನತೆಯ ಸ್ಥಿತಿಯಲ್ಲಿಯೇ ಗುರುಗಳಿಂದ ಉಪದೇಶ ಪಡೆದುಕೊಳ್ಳಬೇಕು.[281]
- ವೇದದಲ್ಲಿ ಹೇಗೋ ಹಾಗೆ ಮಂತ್ರಗಳ ವಿಷಯದಲ್ಲಿ ಅವೈಷ್ಣವನಿಗೆ ಅಧಿಕಾರವಿಲ್ಲ. ಗುರುಭಕ್ತಿಹೀನನಾದವನಿಗೂ ಶಮಾದಿರಹಿತನಾದವನಿಗೂ ಅಧಿಕಾರವಿಲ್ಲ.[282]

---

280. ವಿದ್ಯಾಃ ಕರ್ಮಾಣಿ ಚ ಸದಾ ಗುರೋಃ ಪ್ರಾಪ್ತಾಃ ಫಲಪ್ರದಾಃ ।
ಅನ್ಯಥಾ ನೈವ ಫಲದಾಃ ಪ್ರಸನ್ನೋಕ್ತಾ ಫಲಪ್ರದಾಃ ॥
– *ತಂತ್ರಸಾರೇ (ಭಾಗ.ತಾ.ನಿ. 6-8-36)*

281. ಗುರುಶಿಷ್ಯಯೋರಯೋಗ್ಯತ್ವಾದ್ ಗುರುವೃತ್ತೇರಪೂರ್ತಿತಃ ।
ಅಪ್ರಸಾದಾದ್ ಗುರೋರ್ವಿದ್ಯಾ ನ ಯಥೋಕ್ತಫಲಪ್ರದಾ ॥ *–ಭಾಗ.ತಾ.ನಿ. 6-8-36)*

282. ಅವೈಷ್ಣವಸ್ಯ ವೇದೇಽಪಿ ಹ್ಯಧಿಕಾರೋ ನ ವಿದ್ಯತೇ ।
ಗುರುಭಕ್ತಿವಿಹೀನಸ್ಯ ಶಮಾದಿರಹಿತಸ್ಯ ಚ । *–ಬ್ರಹ್ಮತರ್ಕ (ಬ್ರ.ಸೂ.ಭಾ. 3-4-12)*

- ತನಗೆ ಏನಾದರೂ ಒಳಿತಾಗಿದ್ದರೆ ಅದು ಗುರುಗಳು ಹಾಗೂ ದೇವತೆಗಳು ತನ್ನ ಮೇಲೆ ತೋರಿದ ಕರುಣೆಯ ಫಲ. ಏನಾದರೂ ಕೇಡು ಸಂಭವಿಸಿದ್ದರೆ ಅದು ಸಂಪೂರ್ಣವಾಗಿ ತಾನು ಮಾಡಿದ ಪಾಪಕರ್ಮದ ವಿಪಾಕ –ಎಂಬ ಸದ್ಭಾವನೆ ಯಾರಲ್ಲಿ ಜಾಗ್ರತವಾಗಿದೆಯೋ ಅಂತಹ ಸತ್ಪುರುಷನಿಗೆ ಮಂತ್ರ ಫಲಿಸುವುದು.[283]
- ಗುರುಗಳನ್ನು, ದೇವತೆಗಳನ್ನು ಹಾಗೂ ಮಂತ್ರಗಳನ್ನು ಅವಹೇಳನ ಮಾಡುವವನು ಮಂತ್ರಸಿದ್ಧಿಯನ್ನು ಪಡೆಯಲಾರ. ದುರ್ಗತಿಯನ್ನು ಹೊಂದುವನು.[284]
- ತನ್ನ ಗುರುಗಳನ್ನೂ, ಪರಮಗುರುಗಳನ್ನೂ, ಆದಿಗುರುಗಳಾದ ಶ್ರೀ ಮಧ್ವಾಚಾರ್ಯರನ್ನೂ, ಮೂಲಗುರುಗಳಾದ ವೇದವ್ಯಾಸರನ್ನೂ, ಮಂತ್ರಗಳಿಗೆಲ್ಲ ದೇವತೆಯಾದ ವಾಸುದೇವನನ್ನೂ ಸ್ಮರಿಸಿಕೊಂಡು ಮಂತ್ರಗಳ ಜಪದಲ್ಲಿ ತೊಡಗುವವನು ಸಿದ್ಧಿ ಪಡೆಯುವನು.[285]
- ಗುರುಗಳ ಹಾಗೂ ದೇವತೆಗಳ ತಾರತಮ್ಯವನ್ನು ಅರಿತು ಅದಕ್ಕನುಗುಣವಾಗಿ ಗುರುಗಳಲ್ಲೂ ದೇವತೆಗಳಲ್ಲೂ ಹರಿಗುರುಭಕ್ತರಲ್ಲೂ ಗೌರವವನ್ನು ತೋರುವವನು ಮಂತ್ರಸಿದ್ಧಿಯನ್ನು ಪಡೆಯುವನು.[286]
- ಹರಿಗುರುದ್ವೇಷಿಗಳ ವಿಷಯದಲ್ಲಿ ವಿಮುಖನಾಗಿ ಹರಿಗುರುಭಕ್ತರಲ್ಲಿ ಆಸಕ್ತಿಯನ್ನಿಟ್ಟು ಕಾಮಕ್ರೋಧಗಳನ್ನು ನಿಗ್ರಹಿಸಬಲ್ಲವನು ಕೂಡಲೇ ಮಂತ್ರಸಿದ್ಧಿ ಪಡೆಯುವನು.[287]

ಮಂತ್ರಗಳ ವಿಚಾರಗಳು

- ಕಲಿಯುಗದಲ್ಲಿ ಮಂತ್ರಗಳಿಗೆ ಐಹಿಕಫಲವನ್ನು ಸಾಧಿಸುವ ಶಕ್ತಿ ತಿರೋಹಿತವಾಗಿದೆ. ಆದರೆ ಪಾರತ್ರಿಕ ಫಲಸಾಧನೆಯ ಶಕ್ತಿ ಇದ್ದೇ ಇದೆ. ಯಾವ ಮಂತ್ರಗಳಲ್ಲಿ ಪಾರತ್ರಿಕ ಫಲಸಾಧನೆಯ ಶಕ್ತಿಯ ಜೊತೆಗೆ ಐಹಿಕ ಫಲವನ್ನು ನೀಡುವ ಶಕ್ತಿಯೂ ಜಾಗ್ರತವಾಗಿದೆಯೋ[288] ಅಂತಹ ಎಂಬತ್ತು ಮಂತ್ರಗಳನ್ನು ಶ್ರೀ ಮಧ್ವರು ಶ್ರೀವಿಷ್ಣುವಿನಿಂದ

---

283. ಶುಭಾನ್ ಧ್ಯಾಯಂತಿ ಯೇ ಕಾಮಾನ್ ಗುರುದೇವಪ್ರಸಾದಜಾನ್ ।
ಇತರಾನಾತ್ಮಪಾಪೋತ್ಥಾಂಸ್ತೇಷಾಂ ವಿದ್ಯಾ ಫಲಿಷ್ಯತಿ । *–ತಂ.ಸಾ.ಸಂ. 4-107*

284. ಅವಜ್ಞಾತಾ ಗುರೂಣಾಂ ಚ ದೇವತಾನಾಂ ನ ಸಿದ್ಧ್ಯತಿ ।
ಪ್ರಯಾತಿ ಚ ತಮೋ ಘೋರಂ ಮಂತ್ರಾವಜ್ಞಾಕೃದೇವ ಚ ॥ *–ತಂ.ಸಾ.ಸಂ. 4-111*

285. ಸ್ಮೃತ್ವಾ ಗುರುಂ ಪೂರ್ವಗುರುಮಾದಿಮೂಲಗುರೂ ತಥಾ ।
ದೇವತಾಂ ವಾಸುದೇವಂ ಚ ವಿದ್ಯಾಭ್ಯಾಸೀ ತು ಸಿದ್ಧಿಭಾಕ್ ॥ *–ತಂ.ಸಾ.ಸಂ. 4-110*

286. ಯಸ್ತಾರತಮ್ಯವೇತ್ತಾ ಸ್ಯಾದ್ಗುರೂಣಾಂ ದೇವತಾಸ್ವಪಿ ।
ಭಕ್ತಿಮಾನ್ ಗುರುದೇವೇಷು ತದ್ಭಕ್ತೇಷು ಚ ಸಿದ್ಧ್ಯತಿ ॥ *–ತಂ.ಸಾ.ಸಂ. 4-112*

287. ಗುರುದೇವಪ್ರತೀಪಾನಾಂ ವಿಮುಖಸ್ತತ್ಪ್ರಿಯೇ ರತಃ ।
ಅಕಾಮಕ್ರೋಧಲೋಭಶ್ಚ ನ ಚಿರಾತ್ಸಿದ್ಧಿಮಾಪ್ನುಯಾತ್ ॥ *–ತಂ.ಸಾ.ಸಂ. 4-112*

288. ದೃಷ್ಟಾರ್ಥ ಏವ ಮಂತ್ರಾಣಾಂ ಕಲೌ ವೀರ್ಯಂ ತಿರಸ್ಕೃತಮ್ ।
ತತ್ರಾಪ್ಯುದ್ದೀಪ್ತವೀರ್ಯಾ ಹಿ ಮಂತ್ರಾ ಅತ್ರ ಪ್ರಕೀರ್ತಿತಾಃ ॥ *–ತಂ.ಸಾ.ಸಂ. 4-42*

ಹೇಳಲ್ಪಟ್ಟ ತಂತ್ರಸಾರದಿಂದ ಉದ್ಧರಿಸಿ ತಮ್ಮ ತಂತ್ರಸಾರಸಂಗ್ರಹದಲ್ಲಿ ತಿಳಿಸಿರುವರು.[289]

- ತಂತ್ರಸಾರಸಂಗ್ರಹದಲ್ಲಿ ಹೇಳಿರುವ ಮಂತ್ರಗಳಲ್ಲೂ ವೇದವ್ಯಾಸಮಂತ್ರ ಹಾಗೂ ಕೃಷ್ಣಮಂತ್ರಗಳು ಜಪಿಸುವವನಿಗೆ ಹೆಚ್ಚಿನ ಶಕ್ತಿಸಾಮರ್ಥ್ಯಗಳನ್ನು ನೀಡುವವು.[290]
- ಕೃಷ್ಣಾವತಾರದ ಉಪಸಂಹಾರದ ಅವಧಿಯಲ್ಲಿ ತಾಳಿದ ಐದು ಕೃಷ್ಣರೂಪಗಳಲ್ಲಿ ಒಂದು ರೂಪ ಭೂಮಿಯಲ್ಲಿ ಕೃಷ್ಣಮಂತ್ರವನ್ನು ಜಪಿಸುವವರಿಗೆ ಫಲವನ್ನು ನೀಡುವುದಕ್ಕಾಗಿ ಭೂಮಿಯಲ್ಲೇ ಇದೆ.[291]
- ಎಂಬತ್ತು ಮಂತ್ರಗಳಲ್ಲಿ 35 ಮಂತ್ರಗಳು ಭಗವತ್ಪರಗಳಾಗಿದ್ದರೆ ಉಳಿದ 45 ಮಂತ್ರಗಳು ಲಕ್ಷ್ಮೀದೇವಿಯೇ ಮುಂತಾದ ಇತರ ದೇವತೆಗಳ ಕುರಿತಾದ ಮಂತ್ರಗಳಾಗಿದ್ದು, ಈ ಮಂತ್ರಗಳ ಓಂಕಾರದಿಂದ ಭಗವಂತನೇ ವಾಚ್ಯ ಎಂದೂ ಮಂತ್ರಪ್ರತಿಪಾದ್ಯದೇವತೆಗಳಲ್ಲೂ ಅಂತರ್ಯಾಮಿಯಾಗಿ ಶ್ರೀಹರಿಯೇ ಇರುವನೆಂದೂ ಧ್ಯಾನಿಸಬೇಕು.[292]
- ಎಲ್ಲ ವೈಷ್ಣವಮಂತ್ರಗಳಿಗೂ ಚತುರ್ಮುಖಬ್ರಹ್ಮನೇ ದ್ರಷ್ಟೃ –ಋಷಿ. ಅಕ್ಷರಗಣನೆಯಿಂದ ಛಂದಸ್ಸನ್ನು ತಿಳಿದುಕೊಳ್ಳಬೇಕು. ಎಲ್ಲ ಮಂತ್ರಗಳಿಗೂ ಆಯಾ ರೂಪದ ಶ್ರೀಹರಿಯೇ ದೇವತೆ.[293]
- ಯಾವುದೇ ಮಂತ್ರದ ತುದಿ ಮೊದಲಲ್ಲಿ ಅಕಾರಾದಿ ಐವತ್ತು ಅಕ್ಷರಗಳಿಂದ ಮತ್ತು ಕ್ಷಕಾರದಿಂದ ಅಂಗನ್ಯಾಸ ಮಾಡಿದರೆ ಆ ಮಂತ್ರವು ವಿಶೇಷ ಫಲಪ್ರದವಾಗುವುದು.[294]
- ಅಷ್ಟಮಹಾಮಂತ್ರಗಳೆಂದು ಪ್ರಸಿದ್ಧಗಳಾದ ಓಂಕಾರ, ಅಕಾರಾದಿ ೫೦ ವರ್ಣಗಳು, ನಾರಾಯಣಾಷ್ಟಾಕ್ಷರಮಂತ್ರ, ವ್ಯಾಹೃತಿ, ವಾಸುದೇವದ್ವಾದಶಾಕ್ಷರ, ಗಾಯತ್ರೀ

---

289. ಅಥ ವಿಷ್ಣೂದಿತೇ ತಂತ್ರಸಾರೇ ಮಂತ್ರಗಣೋ ಹಿ ಯಃ ।
ಉದಿತಃ ಸಂಗ್ರಹೇಣಾಸಾವುಚ್ಯತೇಽಖಿಲಸಾಧಕಃ ॥ *–ತಂ.ಸಾ.ಸಂ. 41.*

290. ವಾಸಿಷ್ಠವೃಷ್ಣಿಪ್ರವರಮಂತ್ರಾಸ್ತತ್ರಾಪಿ ವೀರ್ಯದಾಃ । *–ತಂ.ಸಾ.ಸಂ. 4-42*

291. ಗೋಪಾಲಮಂತ್ರಂ ಭಜತಾಂ ಫಲಪ್ರದಸ್ತ್ವೇಕೇನ ರೂಪೇಣ ಸ ಭುವ್ಯದೃಶ್ಯತ ।
– ಮ.ಭಾ.ತಾ.ನಿ. 32-26

292. ಮಂತ್ರೇಷ್ವೇತೇಷು ಸರ್ವೇಷು ವಾಚ್ಯಸ್ತಾರೇಣ ಕೇಶವಃ ।
ಅಂತರ್ಯಾಮಿತಯಾ ಧ್ಯೇಯಃ ಸರ್ವದೇವೇಷು ಸರ್ವದಾ ॥ *–ತಂ.ಸಾ.ಸಂ. 4-79*

293. ವೈಷ್ಣವಾನಾಂ ಮುನಿರ್ಬ್ರಹ್ಮಾ ಮಂತ್ರಾಣಾಂ ವರ್ಣಭೇದತಃ ।
ಜ್ಞೇಯಂ ಛಂದೋ ದೇವತೈಕಸ್ತತ್ತದ್ರೂಪೋ ಹರಿಃ ಪರಃ ॥ *–ತಂ.ಸಾ.ಸಂ. 4-6*

294. ಯಸ್ಯ ಕಸ್ಯಾಪಿ ಮಂತ್ರಸ್ಯ ನ್ಯಾಸಃ ಪಂಚಾಶದಕ್ಷರೈಃ ।
ವೀರ್ಯದಃ..... *–ತಂ.ಸಾ.ಸಂ. 2-1*

ಮಂತ್ರ, ಪುರುಷಸೂಕ್ತ ಹಾಗೂ ವಿಷ್ಣುಷಡಕ್ಷರ –ಇವು ಉಳಿದೆಲ್ಲ ಮಂತ್ರಗಳಿಗೆ ಮೂಲಭೂತಗಳಾಗಿವೆ. ಇವುಗಳನ್ನು ಅರಿತುಕೊಂಡರೆ ಎಲ್ಲ ವಾಙ್ಮಯವನ್ನೂ ಅರಿತುಕೊಂಡಂತೆ. ಇವುಗಳನ್ನು ಜಪಿಸಿದರೆ ಉಳಿದೆಲ್ಲ ಮಂತ್ರಗಳನ್ನೂ ಜಪಿಸಿದ ಫಲವೂ ದೊರಕಿದಂತೆ.[295]

- ಗಾಯತ್ರಿಗಿಂತ ಮೂರುಪಟ್ಟು ನಾರಾಯಣಾಷ್ಟಾಕ್ಷರಮಂತ್ರವನ್ನು ಜಪಿಸಬೇಕು.[296]
- ಅರ್ಥಪರಿಜ್ಞಾನವಿಲ್ಲದೆ ಪಠಿಸಲ್ಪಟ್ಟ ಮಂತ್ರ ನಿರರ್ಥಕ. ಅರ್ಥದ ಅನುಸಂಧಾನ ನೀಡಿ ರಕ್ಷಿಸುವುದರಿಂದಲೇ ಅದು ಅನ್ವರ್ಥಕವಾಗಿ ಮಂತ್ರ ಎನಿಸುವುದು. ಆದ್ದರಿಂದ ಮಂತ್ರದ ಅರ್ಥವನ್ನು ತಿಳಿಯಲೇ ಬೇಕು.[297]
- ವೇದದಲ್ಲಾಗಲೀ, ವೈದಿಕ ವಾಙ್ಮಯದಲ್ಲಾಗಲೀ ಎಲ್ಲೂ ಅರ್ಥವಿಲ್ಲದ ಒಂದು ವರ್ಣವೂ ಇಲ್ಲ, ಸ್ವರವೂ ಇಲ್ಲ. ಪ್ರತಿಯೊಂದು ಸ್ವರವೂ ಅಕ್ಷರವೂ ಮಹಾರ್ಥವನ್ನೇ ತಿಳಿಸುತ್ತಿರುವುದೆಂಬ ನಿಯಮಪ್ರಕಾರ[298] ಮಂತ್ರಗಳ ಬೀಜಾಕ್ಷರಗಳಾಗಲೀ ಅವುಗಳ ಲ್ಲಿಯ ಅನುಸ್ವಾರ, ದೀರ್ಘ ಇತ್ಯಾದಿಗಳಾಗಲೀ ವ್ಯರ್ಥವಾಗಿ ಉಚ್ಚರಿಸಲ್ಪಡುವುದಿಲ್ಲ. ಮತ್ತೆ ಅವು ವರ್ಣ ಸೂಚಿಸುವ ಅರ್ಥದಲ್ಲಿ ದಾರ್ಢ್ಯವನ್ನು ಸೂಚಿಸಿಕೊಡುವವು.[299]
- ಮಂತ್ರಗಳ ಬರೇ ಛಂದಸ್ಸುಗಳನ್ನಷ್ಟೇ ಅಲ್ಲದೆ, ಅವುಗಳ ಅಭಿಮಾನಿದೇವತೆಗಳನ್ನೂ ಸ್ಮರಿಸಿಕೊಳ್ಳಬೇಕು.[300]
- ಮಂತ್ರಗಳನ್ನು ಇತರರಿಗೆ ಕೇಳಿಸದಂತೆ ಮೆಲ್ಲಗೆ ಉಚ್ಚರಿಸುವುದಕ್ಕೆ ವಾಯುದೇವರು ಅಭಿಮಾನಿ. ಗಟ್ಟಿಯಾಗಿ ಉಚ್ಚರಿಸುವುದಕ್ಕೆ ಭಾರತಿಯು ಅಭಿಮಾನಿನಿ. ಆದುದರಿಂದ ಭಾರತಿಯ ಪತಿಯಾದ ವಾಯುದೇವರು ಅಭಿಮಾನಿಯಾಗಿ ಉಳ್ಳ ಮೆಲ್ಲಗೆ ಉಚ್ಚರಿಸುವುದೇ ಅಧಿಕ ಫಲಪ್ರದ.[301]

---

295. ಏತೇ ತು ಸರ್ವಮಂತ್ರಾಣಾಂ ಮೂಲಮಂತ್ರಾ ವಿಶೇಷತಃ ।
ಏತಜ್ಜ್ಞಾನಾತ್ಸಮಸ್ತಂ ಚ ಜ್ಞಾತಂ ಸ್ಯಾಚ್ಛಬ್ದಗೋಚರಮ್ ।
ಏತಜ್ಜಪಾತ್ಸಮಸ್ತಾನಾಂ ಮಂತ್ರಾಣಾಂ ಜಾಪಕೋ ಭವೇತ್ ॥ –ತಂ.ಸಾ.ಸಂ. 1-45

296. ಗಾಯತ್ರ್ಯಾಸ್ತ್ರಿಗುಣಂ ವಿಷ್ಣುಂ ಧ್ಯಾಯನ್ನಷ್ಟಾಕ್ಷರಂ ಜಪೇತ್ । –ಸದಾಚಾರಸ್ಮೃತಿ 10

297. ಅನರ್ಥಜ್ಞೋದಿತೋ ಮಂತ್ರೋ ನಿರರ್ಥಸ್ತ್ವಾತಿ ಮಾನತಃ ।
ಯನ್ಮಂತ್ರಸ್ತೇನ ಕಥಿತೋ ಮಂತ್ರಾರ್ಥೋರ್ಜ್ಞೇಯ ಏವ ತತ್ ॥
– ಪೈಂಗಿಶ್ರುತಿ (ಗೀ.ತಾ. 7-23)


298. ನಾನರ್ಥಃ ಸ್ವರೋ ವಾಽಪಿ ವರ್ಣೋ ವಾ ಕುತ್ರಚಿತ್ ಭವೇತ್ ।
ಮಹಾರ್ಥಮೇವ ಸರ್ವಂ ಹಿ ವೇದೇ ವಾ ವೈದಿಕೇಽಪಿ ವಾ ॥ –ಐ.ಉ.ಭಾ. 2-1-3-3

299. 'ದೈರ್ಘ್ಯಂ ಪ್ಲುತಂ ಚ ಹುಂಕಾರೋ ಬಿಂದುರಪ್ಯವಧಾರಣೇ'
– ಶಬ್ದನಿರ್ಣಯ (ಐ.ಉ.ಭಾ. 1-3-5)

300. ಛಂದಸ್ತ್ವೇನ ಮುನಿತ್ವೇನ ತಾಸಾಂ ಸ್ಮೃತಿರುದೀರಿತಾ ––ಋಗ್ಭಾಷ್ಯ 1-40

301. ....ತಸ್ಮಾದುಚ್ಚಾದುಪಾಂಶುರ್ಹಿ ಜಪಾದಿಷು ಫಲಾಧಿಕಃ ।
ವಾಯುಃ ಪತಿರ್ಹಿ ಭಾರತ್ಯಾ ಉಪಾಂಶೋರ್ದೇವತಾ.... –ಐ.ಉ.ಭಾ. 2-2-6-5

ನಾರಾಯಣಾಷ್ಟಾಕ್ಷರದ ಮೇಲೆ ಶ್ರೀ ಮಧ್ವರಿಂದ ಬೆಳಕು



ಅನಂತಾಸನ ದೇವಾಲಯದಲ್ಲಿ ಅದೃಶ್ಯರಾಗಿ ಸನ್ನಿಹಿತರಾಗಿರುವ ಶ್ರೀ ಮಧ್ವಗುರುಗಳ ಪ್ರತೀಕ

ಎಂಬತ್ತು ಮಂತ್ರಗಳ ಮಧ್ಯೇ ನಾರಾಯಣಾಷ್ಟಾಕ್ಷರ ಮಂತ್ರದ ಬಗ್ಗೆ ಶ್ರೀ ಮಧ್ವರಿಂದ ವಿಶೇಷ ಬೆಳಕು ಚೆಲ್ಲಲಾಗಿದೆ. ತಂತ್ರಸಾರಸಂಗ್ರಹದಲ್ಲಷ್ಟೇ ಅಲ್ಲದೆ, ಉಪನಿಷದ್ಭಾಷ್ಯ, ಅನುವ್ಯಾಖ್ಯಾನಾದಿಗಳಲ್ಲೂ ನಾರಾಯಣಾಷ್ಟಾಕ್ಷರಮಂತ್ರದ ಅರ್ಥಾದಿಗಳ ಮೇಲೆ ಬೆಳಕು ಚೆಲ್ಲಲಾಗಿದೆ.

ಭಗವಂತನಿಗೆ ಪ್ರಿಯವಾದ ನಾಮ:

ಭಗವಂತನ ಯಾವುದೇ ರೂಪದಲ್ಲಿ ಹೆಸರಿನ ಪ್ರಯುಕ್ತವಾಗಲೀ ಗುಣದ ಪ್ರಯುಕ್ತವಾಗಲೀ ಏನೂ ತಾರತಮ್ಯ ಇಲ್ಲ. ಆದರೂ ನಾರಾಯಣ ಎಂಬುದು ಅವನಿಗೆ ಪ್ರಿಯವಾದ ನಾಮ. ಉಳಿದೆಲ್ಲ ನಾಮಗಳೂ ನಾರಾಯಣನಾಮದ ಅರ್ಥವನ್ನೇ ವಿವರಿಸುತ್ತಿವೆ.[302] ದೇವತೆಗಳು ನಾರಾಯಣ ಎಂಬ ಹೆಸರಿನ ಭಗವಂತನ ಗುಣ ಪೂರ್ಣತ್ವವನ್ನು ನಾರಾಯಣನ ನಾಮದ ಮೂಲಕ ತಿಳಿದು, ಉಪಾಸನೆ ಮಾಡಿಯೇ ಇತರ ಎಲ್ಲರಿಗಿಂತ ಎತ್ತರದ ಸ್ಥಾನವನ್ನು ಪಡೆದಿರುವರು.[303]

ಮೂರು ಬಗೆಯ ಸಮರ್ಥನೆ:

ಭಗವಂತನ ಉಳಿದೆಲ್ಲ ನಾಮಗಳೂ ಸಮಸ್ತ ವಾಙ್ಮಯವೂ ನಾರಾಯಣನಾಮದ ವ್ಯಾಖ್ಯಾನವೇ ಆಗಿದೆ ಎಂಬುದನ್ನು ಸರ್ವಮೂಲಗ್ರಂಥಗಳಲ್ಲಿ ಮೂರು ಬಗೆಯಿಂದ ಸಮರ್ಥಿಸಲಾಗಿದೆ.

ನಾರಾ ಅಂದರೆ ದೋಷವಿರುದ್ಧಗಳಾದ ಗುಣಗಳು. ಅವುಗಳಿಗೆ ಆಶ್ರಯನಾಗಿರುವವನು 'ನಾರಾಯಣ'.[304] ಹೀಗೆ ನಾರಾಯಣ ನಾಮವು ಎಲ್ಲ ಗುಣಗಳನ್ನೂ ಸ್ಥೂಲವಾಗಿ ಸಂಗ್ರಹಿಸಿ, ಅವುಗಳಿಗೆ ಆಸರೆಯಾಗಿರುವ ಭಗವಂತನನ್ನು ತಿಳಿಸುತ್ತಿರುವುದ

---

302. ನ ರೂಪಾಣಾಂ ವಿಶೇಷೋಽಸ್ತಿ ಗುಣತೋ ನಾಮತೋಽಪಿ ವಾ ।
ತಥಾಽಪಿ ತತ್ ಪ್ರಿಯಂ ನಾಮ ನಾರಾಯಣ ಇತಿ ಸ್ಮ ಹ ।
ವಿಶೇಷತಃ ಸಮಸ್ತಾನಾಂ ನಾಮ್ನಾಂ ತಸ್ಯಾರ್ಥ ಏವ ತು । —*ಛಾಂ.ಉ.ಭಾ. 2-1-9*

303. ನಾಮ್ನೋ ನಾರಾಯಣಾಖ್ಯಸ್ಯ ಗುಣೈಃ ಪೂರ್ತಿಂ ಹಿ ದೇವತಾಃ ।
ವಿಜ್ಞಾಯಾರ್ಥಮುಪಾಸ್ಯೈವ ಸರ್ವಾಧಿಕ್ಯಮಥಾಪಿರೇ । —*ಛಾಂ.ಉ.ಭಾ. 2-1-9*

304. ದೋಷಾರಚ್ಛಿದ್ರಶಬ್ದಾನಾಂ ಪರ್ಯಾಯತ್ವಂ ಯತಸ್ತತಃ ।
ಗುಣಾ ನಾರಾ ಇತಿ ಜ್ಞೇಯಾಸ್ತದ್ವಾನ್ ನಾರಾಯಣಃ ಸ್ಮೃತಃ ॥
— *ಅನುವ್ಯಾಖ್ಯಾನ 1-1-84*

ರಿಂದ ಭಗವಂತನ ಬೇರೆ ಬೇರೆ ಗುಣಗಳನ್ನೇ ಬೇರೆಬೇರೆ ರೀತಿಯಾಗಿ ತಿಳಿಸುತ್ತಿರುವ ಉಳಿದೆಲ್ಲ ನಾಮಗಳೂ ನಾರಾಯಣನಾಮದ ವ್ಯಾಖ್ಯಾನವೆನಿಸಬಲ್ಲವು. ಅವನ ಪಾರಮ್ಯವನ್ನೇ ಸಾರಲು ಹೊರಟಿರುವ ಸಮಸ್ತ ಶಾಸ್ತ್ರವೂ305 ಅಂತಹ ಪಾರಮ್ಯಕ್ಕೆ ಗುಣಪೂರ್ಣತ್ವವೇ ಪ್ರಯೋಜಕವಾಗಿರುವುದರಿಂದ ಗುಣಪೂರ್ಣತ್ವಪ್ರತಿಪಾದಕ ನಾರಾಯಣನಾಮದ ವ್ಯಾಖ್ಯಾನರೂಪವೆನಿಸಬಲ್ಲದು.

ಸರ್ವವಾಙ್ಮಯವೂ ಅಕಾರದ ವ್ಯಾಖ್ಯಾನರೂಪದಲ್ಲಿದೆ ಎಂದು ಸಾಧಿಸಹೊರಟ 'ಬ್ರಹ್ಮಸಾರ'ವು ನಾರಾಯಣ ಎಂಬ ನಾಮವೂ ಅಕಾರದಿಂದಲೇ ಅಭಿವ್ಯಕ್ತವಾಗಿದ್ದು, ಅದರ ವ್ಯಾಖ್ಯಾನವೇ ಆಗಿದೆ ಎಂಬುದನ್ನು ಸಮರ್ಥಿಸಿದೆ. ಅಕಾರಕ್ಕೆ ಭೇದ, ನಿಷೇಧ ಹಾಗೂ ವಿರೋಧ ಎಂಬ ಮೂರು ಅರ್ಥಗಳು ಇವೆ. ಇವುಗಳಲ್ಲಿ ಭೇದ ಎಂಬ ಅರ್ಥವುಳ್ಳ ಅಕಾರದಿಂದಾಗಿ ನಾರಾಯಣನಾಮದ ಮೊದಲ ಅಕ್ಷರವಾದ ನಕಾರವು ಅಭಿವ್ಯಕ್ತವಾಗಿದೆ. ಆದ್ದರಿಂದಲೇ ಅದು ನಾರಾಯಣನು ಸಕಲ ಜೀವಜಡಗಳಿಗಿಂತ ಭಿನ್ನನಾಗಿರುವವನೆಂಬುದನ್ನು ತಿಳಿಸುವುದು. ಮತ್ತೊಂದು ಆಧಿಕ್ಯಾರ್ಥದ ಅಕಾರವು ಸೇರಿ 'ನಾ' ಎಂದು ದೀರ್ಘವಾಗಿ ಪರಿಣಾಮಗೊಂಡಾಗ ನಕಾರಸೂಚಿತ ಅರ್ಥದಲ್ಲಿ ಆಧಿಕ್ಯವು ಸೂಚಿತವಾಗಿ ಭಗವಂತನು ಯಾವಾಗಲೂ ಸ್ವಾಭಾವಿಕವಾಗಿಯೇ ಜೀವಜಡಗಳಿಗಿಂತ ಭಿನ್ನನಾಗಿರುವನೆಂಬುದನ್ನು ತಿಳಿಸಲಾಗುವುದು.

ಅಭಾವಾರ್ಥಕ ಅಕಾರದಿಂದ ಅಭಿವ್ಯಕ್ತವಾದುದು ನಾರಾಯಣನಾಮದ ಎರಡನೇ ಅಕ್ಷರವಾದ 'ರ'ಕಾರವು –ಭಗವಂತನು ದೋಷರಹಿತನಾದವನೆಂಬುದನ್ನು ಹೇಳುವುದು. ಅದಕ್ಕೆ ಆಧಿಕ್ಯಾರ್ಥದ ಮತ್ತೊಂದು ಅಕಾರವು ಸೇರಿ ದೀರ್ಘವಾಗಿದೆ. ಆದ್ದರಿಂದ ರಕಾರೋಕ್ತಾರ್ಥದಲ್ಲಿ ಆಧಿಕ್ಯವು ಸೂಚಿತವಾಗಿ ಭಗವಂತನು ಎಲ್ಲರಿಗಿಂತಲೂ ಅತ್ಯಧಿಕವಾಗಿ ನಿರ್ದುಷ್ಟನಾಗಿರುವವನು ಎಂದು ಹೇಳಲಾಗುವುದು.

ನಾರಾಯಣನಾಮದ ಮೂರನೆಯ ಅಕ್ಷರವಾದ 'ಯ'ಕಾರವು ವಿನಾಶಾರ್ಥಕ ಅಕಾರದಿಂದ ಅಭಿವ್ಯಕ್ತವಾಗಿದ್ದು, ಭಗವಂತನು ತನ್ನ ಭಕ್ತರ ದೋಷಗಳನ್ನು ಪರಿಹರಿಸುವವನು ಎಂಬ ಅರ್ಥವನ್ನು ತಿಳಿಸುವುದು.

ನಾರಾಯಣನಾಮದ ಕೊನೆಯ ಅಕ್ಷರವಾದ 'ನ'ಕಾರವು ವಿರೋಧ ಎಂಬ ಅರ್ಥವುಳ್ಳ ಅಕಾರದಿಂದ ಅಭಿವ್ಯಕ್ತವಾದುದು. ಭಗವಂತನು ಸರ್ವದೋಷವಿರುದ್ಧ ಗುಣಸ್ವರೂಪಿಯಾಗಿರುವವನೆಂದು ಅದರ ಅರ್ಥ.

ಹೀಗೆ ಅಕಾರದ ಅರ್ಥವನ್ನೇ ವಿವರಿಸುತ್ತಿರುವ ನಾರಾಯಣನಾಮವು ಅಕಾರ ಎಂಬ ಬೀಜದಿಂದ ಅಭಿವ್ಯಕ್ತವಾಗಿದ್ದು ಭಗವಂತನ ವ್ಯಕ್ತಿತ್ವದ ಪ್ರಧಾನ ಮುಖಗಳಾದ ಸರ್ವ

---

305. ಮಹಾತತ್ಪರತಾ ವಿಷ್ಣೋರುತ್ಕರ್ಷೇऽವಾಂತರಾ ತತಃ ।
ಅನ್ಯತ್ರ ಸರ್ವವಾಕ್ಯಾನಾಂ ಯುಕ್ತೀನಾಂ ಚ ವಿಶೇಷತಃ ॥
– *ಬ್ರಹ್ಮಾಂಡ (ಛಾಂ.ಉ.ಭಾ.* 6-3-6

ಭಿನ್ನತ್ವ, ದೋಷದೂರತ್ವ, ಭಕ್ತಾನುಕಂಪಿತ್ವ ಹಾಗೂ ಗುಣಸ್ವರೂಪತ್ವ ಇವುಗಳನ್ನು ಸಾರುತ್ತಿದೆ.306

ವೇದಾದಿ ಸಮಸ್ತ ವಾಙ್ಮಯಪ್ರಪಂಚವೂ ಅಕಾರದ ಅಭಿವ್ಯಕ್ತಿ, ವ್ಯಾಖ್ಯಾನ ಎಂದ307 ಮೇಲೆ ಅಂತಹ ಅಕಾರದಿಂದ ಅಭಿವ್ಯಕ್ತವಾದ ನಾರಾಯಣನಾಮದ ವ್ಯಾಖ್ಯಾನವೂ ಆಗಿದೆ.

'ಓಂ ನಮೋ ನಾರಾಯಣಾಯ' –ಎಂಬ ನಾರಾಯಣಾಷ್ಟಾಕ್ಷರಮಂತ್ರದ ಎಂಟು ಅಕ್ಷರಗಳು ಓಂಕಾರದ ಅಕಾರ, ಉಕಾರ, ಮಕಾರ, ನಾದ, ಬಿಂದು, ಕಲಾ, ಶಾಂತ ಹಾಗೂ ಅತಿಶಾಂತ –ಈ ಎಂಟು ಅಕ್ಷರಗಳಿಂದ ಅಭಿವ್ಯಕ್ತವಾಗಿವೆ.308 ನಾರಾಯಣಾಷ್ಟಾಕ್ಷರಮಂತ್ರದ ಎಂಟು ಅಕ್ಷರಗಳಿಂದಲೂ 'ಭೂರ್ಭುವಃಸ್ವಃ' –ಎಂಬ ವ್ಯಾಹೃತಿಯ ನಾಲ್ಕು ಅಕ್ಷರಗಳಿಂದಲೂ ವಾಸುದೇವದ್ವಾದಶಾಕ್ಷರಮಂತ್ರದ ಎಂಟು ಅಕ್ಷರಗಳು ಅಭಿವ್ಯಕ್ತವಾಗಿವೆ.309 ಮೂರು ಬಾರಿ ಉಚ್ಚರಿಸಲ್ಪಟ್ಟ ನಾರಾಯಣಾಷ್ಟಾಕ್ಷರದ ಒಟ್ಟು ೨೪ ಅಕ್ಷರಗಳಿಂದ ವೇದಮಾತೆಯಾದ, ೨೪ ಅಕ್ಷರಗಳ ಗಾಯತ್ರಿಮಂತ್ರವು ಅಭಿವ್ಯಕ್ತವಾಗಿದೆ.310

---

306. ಏಕಾರ್ಥತ್ವಾದಕಾರೋಽಸೌ ನಕಾರತ್ವಮುಪಾಗತಃ ।
ದೀರ್ಘೀಭೂತಃ ಪುನಸ್ತೇನೈವಾಕಾರೇಣ ಸಹ ಸ್ಥಿತಃ ॥
ಅಭಾವವಾಚ್ಯಕಾರಸ್ಯ ಹ್ಯರ್ಥೋರ್ರೇಫಃ ಕ್ಷಯಂ ವದನ್ ।
ಸೋಽಪ್ಯಕಾರೇಣ ಸಹಿತೋ ದೀರ್ಘತ್ವಂ ಸಮುಪಾಗತಃ ॥
ಅಭಾವವಾಚ್ಯಕಾರಃ ಸ ಏಕಾರ್ಥಾದ್ ಗತ್ಯಭಾವಯೋಃ ।
ಯಕಾರತ್ವಂ ಗತಸ್ತಸ್ಮಾನ್ನೋ ರೇಫಸ್ಯೋತ್ತರತ್ವತಃ ॥
ಣತ್ವಂ ಗತೋ ಹ್ಯಕಾರೋಽಸೌ ನೋ ವಿರುದ್ಧಾರ್ಥವಾಚಕಃ ।
ಅನ್ಯತ್ವಾತ್ ಸರ್ವಜೀವೇಭ್ಯ ಜಡೇಭ್ಯಶ್ಚ ಸದೈವ ಹಿ ॥
ಸರ್ವದೋಷೋಜ್ಝಿತತ್ವಾಚ್ಚ ಸರ್ವತೋಽಪ್ಯಧಿಕತ್ವತಃ ।
ನಿರಾಸನಾಚ್ಚ ದೋಷಾಣಾಂ ಸ್ವಭಕ್ತೇಭ್ಯಃ ಸಮಂತತಃ ॥
ಸರ್ವದೋಷವಿರುದ್ಧೋರುಗುಣಪೂರ್ಣಸ್ವರೂಪತಃ ।
ನಾರಾಯಣ ಇತಿ ಪ್ರೋಕ್ತೋ ಹ್ಯಕಾರಾರ್ಥೋಽಯಮೇವ ಹಿ ॥
ತಸ್ಮಾದಕಾರಬೀಜೇಯಂ ವಿಷ್ಣೋರ್ನಾರಾಯಣಾಭಿಧಾ ।
– ಬ್ರಹ್ಮಸಾರ (ಐ.ಉ.ಭಾ. 2-2-6-5)

307. ....ತಸ್ಮಾದಕಾರ ಏವಾಯಂ ಸರ್ವವಾಗಾತ್ಮಕಃ ಶ್ರುತಃ ।
ತಸ್ಯೈವ ವ್ಯಕ್ತಿರೂಪೋಽಯಂ ಸರ್ವವೇದಾದಿವಿಸ್ತರಃ ॥ *–ಬ್ರಹ್ಮಸಾರ.*

308. ನಾರಾಯಣಾಷ್ಟಾಕ್ಷರಶ್ಚ ತಾರಾಷ್ಟಾಕ್ಷರಭೇದವಾನ್ । *–ತಂ.ಸಾ.ಸಂ. 1-11*

309. ನಾರಾಯಣಾಷ್ಟಾಕ್ಷರಾಚ್ಚ ವ್ಯಾಹೃತಿಭ್ಯಸ್ತಥೈವ ಚ ವಿಭೇದೋ ದ್ವಾದಶಾರ್ಣಾನಾಂ....'
– ತಂ.ಸಾ.ಸಂ. 1-13

310. ನಾರಾಯಣಾಷ್ಟಾಕ್ಷರಾಚ್ಚ ವ್ಯಾಹೃತಿ ತ್ರಿಗುಣಾತ್ ಪುನಃ ।
ವೇದಮಾತಾ ತು ಗಾಯತ್ರೀ.....॥ *–ತಂ.ಸಾ.ಸಂ. 1-14.*

ಹೀಗೆ ಓಂಕಾರ, ನಾರಾಯಣಾಷ್ಟಾಕ್ಷರಮಂತ್ರ, ವಾಸುದೇವದ್ವಾದಶಾಕ್ಷರಮಂತ್ರ ಹಾಗೂ ಗಾಯತ್ರಿ -ಇವುಗಳೊಳಗೆ ಅನ್ಯೋನ್ಯವಾಗಿ ಇರುವ ವ್ಯಾಖ್ಯಾವ್ಯಾಖ್ಯೇಯ ರೂಪತ್ವವನ್ನು ಇಲ್ಲಿ ಅಭಿವ್ಯಂಜಕಾಭಿವ್ಯಂಗ್ಯರೂಪತ್ವವಾಗಿ ಹೇಳಲಾಗಿದೆ.[311] ನಾರಾಯಣಾಷ್ಟಾಕ್ಷರಮಂತ್ರವು ಓಂಕಾರದ ವ್ಯಾಖ್ಯಾನರೂಪದಲ್ಲಿದೆ. ವಾಸುದೇವದ್ವಾದಶಾಕ್ಷರ ಮಂತ್ರ ಹಾಗೂ ಗಾಯತ್ರಿ ನಾರಾಯಣಾಷ್ಟಾಕ್ಷರಮಂತ್ರದ ವ್ಯಾಖ್ಯಾನರೂಪದಲ್ಲಿವೆ. ಹೀಗೆ ನಾರಾಯಣಾಷ್ಟಾಕ್ಷರವು ಓಂಕಾರದ ವ್ಯಾಖ್ಯಾನರೂಪದಲ್ಲೂ, ವಾಸುದೇವದ್ವಾದಶಾಕ್ಷರ ಹಾಗೂ ಗಾಯತ್ರಿಯ ಮೂಲ(ವ್ಯಾಖ್ಯೇಯ)ರೂಪದಲ್ಲೂ ಇರುವುದರಿಂದ 'ಮೂಲ ಮಂತ್ರ' ಎಂದೇ ಕರೆದುಕೊಳ್ಳುವಷ್ಟು ಪ್ರಾಶಸ್ತ್ಯ ಪಡೆದಿದೆ. ಮೂರು ವೇದಗಳಿಗೂ ಮೂಲವಾದ ಗಾಯತ್ರಿಗೂ ಮೂಲ ನಾರಾಯಣಾಷ್ಟಾಕ್ಷರವಾಗಿರುವುದರಿಂದ ಮೂರು ವೇದಗಳೂ ನಾರಾಯಣಾಷ್ಟಾಕ್ಷರದ ವ್ಯಾಖ್ಯಾನ ಎಂದಾಗುವುದು.

ಜಪ-ಸ್ನಾನ-ಪೂಜೆಗಳಲ್ಲಿ ವಿನಿಯೋಗ

ಈ ರೀತಿಯಾಗಿ ನಾರಾಯಣಾಷ್ಟಾಕ್ಷರಮಂತ್ರ ಮೂಲಮಂತ್ರ ಎನಿಸುವಷ್ಟು ಪ್ರಾಶಸ್ತ್ಯ ಪಡೆದಿರುವುದರಿಂದ ಜಪಾದಿ ಸಾಧನೆಗಳಲ್ಲಿ ಅದರ ವಿನಿಯೋಗ ವ್ಯಾಪಕವಾಗಿ ಬಂದಿದೆ.

ಸ್ನಾನಕಾಲದಲ್ಲಿ ಮೂರು ಬಾರಿ ಮುಳುಗುವಾಗ ವಾಸುದೇವದ್ವಾದಶಾಕ್ಷರಮಂತ್ರ ವನ್ನೂ, ವಿಷ್ಣುಷಡಕ್ಷರಮಂತ್ರವನ್ನೂ ಜಪಿಸಬೇಕಾದಂತೆ ನಾರಾಯಣಾಷ್ಟಾಕ್ಷರಮಂತ್ರ ವನ್ನೂ ಜಪಿಸಬೇಕು.[312]

ನೀರಿಗೆ ಸಂಬಂಧಿಸಿದ ಅರ್ಥವನ್ನು ಅಷ್ಟಾಕ್ಷರಮಂತ್ರದ ಅರ್ಥವಾಗಿ ಆಗ ಧ್ಯಾನಿಸುವುದು ಉಚಿತ.

ನರ ಎನಿಸುವ ಭಗವಂತನಿಂದ ನಿರ್ಮಿತವಾದ ನೀರಿನ ರಾಶಿಯನ್ನು ಆಸರೆಯಾಗಿ ಇಟ್ಟುಕೊಂಡು ಪವಡಿಸಿರುವುದರಿಂದ ಭಗವಂತನು ನಾರಾಯಣ ಎನಿಸುವನು.[313]

ಭಗವಂತನು ತನ್ನನ್ನು ಪೂಜಿಸುತ್ತ ನೀರನ್ನು ಸೃಷ್ಟಿಸಿದನು. ಆದುದರಿಂದ ನೀರು ಅರ್ಚನ ಸಾಧನವೆನಿಸಿದೆ.[314] ಹೀಗೆ ಅರ್ಚನ ಸಾಧನವಾಗಿ ನೀರನ್ನು ನಿರ್ಮಿಸುವ ಮೂಲಕ ಅದಕ್ಕೆ ಆಶ್ರಯನಾಗಿರುವವನು ನಾರಾಯಣ.

---

311. ವ್ಯಾಖ್ಯಾವ್ಯಾಖ್ಯೇಯರೂಪತ್ವಂ ವಿಕಾರಿತ್ವಮಿಹೋದಿತಮ್ ।
ವಿಕಾರಿತ್ವಂ ಚ ನಾನ್ಯತ್ ಸ್ಯಾನ್ನಿತ್ಯಾ ವೇದಾ ಯತೋಽಖಿಲಾಃ ॥
– ಬ್ರಹ್ಮಸಾರ (ಐ.ಉ.ಭಾ. 2-2-6-5)

312. ಉದ್ಧೃತೇತಿ ಮೃದಾಲಿಪ್ಯ ದ್ವಿಷಡಷ್ಟಷಡಕ್ಷರೈಃ ।
ತ್ರಿರ್ನಿಮಜ್ಯ..... ॥ *–ಸ.ಸ್ಮೃ. 3*

313. ಅಂಭಸ್ಯ ಪಾರ ಇತ್ಯುಕ್ತೋ ನಾರಾಯಣ ಪದೇರಿತಃ ।
ಆಪೋ ನಾರಾ ಇತಿ ಹ್ಯಾಹ..... ॥ *–ಅನುವ್ಯಾಖ್ಯಾನ 1-1-85, 86*

314. ಯತ್ ಕುರ್ವನ್ ಯತ್ ಸೃಜೇದೀಶಸ್ತದ್ ಭವೇದ್ಧಿ ತದಾತ್ಮಕಮ್ ।
ಅತೋಽರ್ಚತೋ ಯತೋ ಜಾತಾ ಆಪೋಽತೋಽರ್ಚನಸಾಧನಾಃ ॥
– ಬ್ರಹ್ಮಾಂಡ (ಬೃ.ಉ.ಭಾ. 3-2-1

ಸಂಧ್ಯಾವಂದನೆಯಲ್ಲಿ ಗಾಯತ್ರಿಮಂತ್ರಕ್ಕಿಂತ ಮೂರುಪಟ್ಟು ಅಧಿಕ ಸಂಖ್ಯೆಯಲ್ಲಿ ನಾರಾಯಣಾಷ್ಟಾಕ್ಷರವನ್ನು ಜಪಿಸಬೇಕು.315

ಪ್ರತಿಮಾಮಾಧ್ಯಮದಲ್ಲಿ ಪೂಜಿಸುವಾಗಲೂ ಪೀಠದ ಮಧ್ಯದಲ್ಲಿ ಅಷ್ಟಾಕ್ಷರಮಂತ್ರದಿಂದಲೇ ಭಗವಂತನನ್ನು ಆವಾಹಿಸಬೇಕು.316 ನೈವೇದ್ಯ ಸಮರ್ಪಣೆಗೂ ಅಷ್ಟಾಕ್ಷರ ಮಂತ್ರವನ್ನೇ ವಿನಿಯೋಗಿಸಬೇಕು.317 ಹಾಗೆಯೇ ಪುಷ್ಪಾಂಜಲಿಯೂ ಅಷ್ಟಾಕ್ಷರಮಂತ್ರದಿಂದಲೇ. ಅನುಯಾಗದಲ್ಲಿ ಅಷ್ಟಾಕ್ಷರಮಂತ್ರದಿಂದಲೇ ೧೦೮ ಬಾರಿ ಹೋಮ.318 ನೈವೇದ್ಯದ ವಿಸರ್ಜನೆ ನಡೆಸಿ ಅಷ್ಟಾಕ್ಷರದಿಂದ ಮೂರು ಬಾರಿ ಅರ್ಚನೆ ಮಾಡಬೇಕು.319 ಪುನಃ ಧೂಪದೀಪಗಳನ್ನು ಅರ್ಪಿಸಿ ಅಷ್ಟಾಕ್ಷರದಿಂದ ಹಿಂದಿನಂತೆ ಅರ್ಚಿಸಬೇಕು.320 ಅರ್ಚನೆಯ ಬಳಿಕ ಧ್ಯಾನ. ಪುನಃ ೧೦೮ ಬಾರಿ ನಾರಾಯಣಾಷ್ಟಾಕ್ಷರಮಂತ್ರದ ಜಪ.321

ಹೀಗೆ ಪೂಜಾಕಾಲದಲ್ಲಿ ಏಳು ಬಾರಿ ಅಷ್ಟಾಕ್ಷರಮಂತ್ರದ ಜಪ ವಿಹಿತವಾಗಿದೆ.

ಮೂರು ಅಂಶಗಳ ಮೇಲೆ ಬೆಳಕು

ಈ ರೀತಿಯಾಗಿ ಶ್ರೀ ಮಧ್ವರು ನಾರಾಯಣನಾಮದ ಅರ್ಥವಿಸ್ತಾರ, ಮೂಲಮಂತ್ರ ಎನಿಸಲು ಬೇಕಾದ ಅದರ ವೈಶಿಷ್ಟ್ಯ ಹಾಗೂ ಸ್ನಾನ, ಜಪ, ಪೂಜೆಗಳಲ್ಲಿ ಅದರ ವ್ಯಾಪಕವಾದ ವಿನಿಯೋಗ –ಈ ಮೂರು ಅಂಶಗಳ ಮೇಲೆ ಬೆಳಕು ಚೆಲ್ಲುವ ಮೂಲಕ ನಾರಾಯಣಾಷ್ಟಾಕ್ಷರಮಂತ್ರದ ಪ್ರಾಶಸ್ತ್ಯವನ್ನು ಎತ್ತಿ ಸಾರಿರುವರು.

* * *

---

315. ಗಾಯತ್ರ್ಯಾಸ್ತ್ರಿಗುಣಂ ವಿಷ್ಣುಂ ಧ್ಯಾಯನ್ನಷ್ಟಾಕ್ಷರಂ ಜಪೇತ್ । *–ಸ.ಸ್ಮೃ. 10*

316. ಅಷ್ಟಾಕ್ಷರೇಣ ಸಂಪೂಜ್ಯ ಪ್ರಥಮಂ ದೇವತಾಂ ಪರಾಮ್ ।
ಮಧ್ಯೇ..... ॥ *–ತಂ.ಸಾ.ಸಂ. 1-7*

317. ....ನೈವೇದ್ಯಂ ಮೂಲಮಂತ್ರತಃ ॥ *–ತಂ.ಸಾ.ಸಂ. 1-63*

318. ಪುಷ್ಪಾಂಜಲಿಶ್ಚ ಹೋಮಶ್ಚ ಮೂಲೇನಾಷ್ಟೋತ್ತರಂ ಶತಮ್ । *–ತಂ.ಸಾ.ಸಂ. 1-64*

319. ವಿಸರ್ಜಯಿತ್ವಾ ನೈವೇದ್ಯಂ ಮೂಲೇನ ತ್ರಿಃ ಸಮರ್ಚ್ಯ ಚ । *–ತಂ.ಸಾ.ಸಂ. 1-65*

320. ....ಪುನರ್ಮೂಲೇನ ಪೂರ್ವವತ್ ।
ಅರ್ಚಯಿತ್ವಾ..... ॥ *–ತಂ.ಸಾ.ಸಂ. 1-66*

321. ....ಜಪೇದಷ್ಟೋತ್ತರಂ ಶತಮ್ ॥ *–ತಂ.ಸಾ.ಸಂ. 1-66*

ಯಾಗಸಂಸ್ಕಾರ

ವೈಷ್ಣವದೀಕ್ಷೆಯ ಐದನೆಯ ಸಂಸ್ಕಾರ ಯಾಗಸಂಸ್ಕಾರ. ಪ್ರತಿಮಾ ಮಾಧ್ಯಮದಲ್ಲಿ ಶ್ರೀವಿಷ್ಣುವನ್ನು ಪೂಜಿಸುವುದೇ ಯಾಗ.

ಅಗ್ನಿಮುಖದ ಆರಾಧನೆ:

ನಾರಾಯಣಾಷ್ಟಾಕ್ಷರಮಂತ್ರ, ಅದರ ಅರ್ಥ ಹಾಗೂ ತತ್ತ್ವ ಇವನ್ನೆಲ್ಲ ಚೆನ್ನಾಗಿ ಬಲ್ಲ ಶಿಷ್ಯನನ್ನು ಶ್ರೀವಿಷ್ಣುವಿನ ಪೂಜಾವಿಧಾನದಲ್ಲಿ ತೊಡಗಿಸಬೇಕು.322 ಗುರುಗಳು ಅಂದು ಬೆಳಗ್ಗೆ ಶ್ರೀಹರಿಯನ್ನು ಪೂಜಿಸಿ ಹೋಮ ನಡೆಸಬೇಕು. ಘೃತಮಿಶ್ರಿತ ಪಾಯಸದ ಆಹುತಿಗಳನ್ನು ಎಲ್ಲ ವೈಷ್ಣವಸೂಕ್ತಗಳ ಮೂಲಕ ನೀಡಬೇಕು. ನಾರಾಯಣಾಷ್ಟಾಕ್ಷರ ಮಂತ್ರದಿಂದ ನೂರೆಂಟು ಬಾರಿ ಆಜ್ಯಾಹುತಿ ನೀಡಬೇಕು. ಎಲ್ಲ ವೈಷ್ಣವಮಂತ್ರಗಳಿಂದ ಆಹುತಿ ನೀಡಬೇಕು. ಪ್ರತಿಯೊಬ್ಬ ಆವರಣದೇವತೆಗೂ ಅವನ ಹೆಸರಿನ ಮೊದಲು ಪ್ರಣವವನ್ನು ಪ್ರಯೋಗಿಸಿ, ಹೆಸರಿಗೆ ಚತುರ್ಥೀವಿಭಕ್ತಿಯನ್ನು ಹಚ್ಚಿ ಆಯಾ ನಾಮದ ಮೂಲಕ ಒಂದೊಂದು ಆಹುತಿಯನ್ನು ನೀಡಬೇಕು.

ಹೋಮದ ಬಳಿಕ ಬ್ರಾಹ್ಮಣಭೋಜನ

ಆಮೇಲೆ ನಾರಾಯಣಾಷ್ಟಾಕ್ಷರಮಂತ್ರದಿಂದ ಪ್ರತಿಮೆಯಲ್ಲಿ ನೂರು ಪುಷ್ಪಾಂಜಲಿಯನ್ನು ಅರ್ಪಿಸಿ ಭಗವಂತನನ್ನು ಪೂಜಿಸಬೇಕು.323

ನಾರಾಯಣಾಷ್ಟಾಕ್ಷರಮಂತ್ರವನ್ನು ಜಪಿಸಿ, ಭಗವಂತನನ್ನು ಭಕ್ತಿಯಿಂದ ನಮಿಸಬೇಕು. ಶಿಷ್ಯನನ್ನು ಸಮೀಪಕ್ಕೆ ಕರೆಯಬೇಕು. ವಿನೀತನಾಗಿ ನಮಸ್ಕರಿಸಿದ ಶಿಷ್ಯನಿಗೆ ಅವನ ಬಿಂಬರೂಪದ ದರ್ಶನ ಮಾಡಿಸಬೇಕು. ಹೀಗೆ ಅವನ ಬಿಂಬರೂಪವನ್ನು ನೀಡಬೇಕು. ಭಗವಂತನನ್ನು ಹೀಗೆ ಪ್ರಾರ್ಥಿಸಬೇಕು–

---

322. ಮಂತ್ರಾರ್ಥತತ್ತ್ವವಿದುಷಂ ಯಾಗತಂತ್ರೇ ನಿಯೋಜಯೇತ್ ॥ –ವೃ.ಹಾ.ಸ್ಮೃ. *2-142*

323. ಅರ್ಚಯಿತ್ವಾಚ್ಯುತಂ ಭಕ್ತ್ಯಾ ಹೋಮಂ ಪೂರ್ವಪದಾಚರೇತ್ ।
ಸರ್ವೈಶ್ಚ ವೈಷ್ಣವೈಃ ಸೂಕ್ತೈಃ ಪಾಯಸಂ ಘೃತಮಿಶ್ರಿತಮ್ ॥
ಆಜ್ಯಂ ಮಂತ್ರೇಣ ಹೋತವ್ಯಂ ಶತಮಷ್ಟೋತ್ತರಂ ತದಾ ।
ಶಕ್ತ್ಯಾ ಚ ವೈಷ್ಣವೈಃ ಮಂತ್ರೈಃ ಸರ್ವೈರ್ಹೋಮಂ ಸಮಾಚರೇತ್ ॥
ಏಕೈಕಮಾಹುತಿಂ ಹುತ್ವಾ ಸರ್ವಾವರಣದೇವತಾ ।
ಪ್ರಣವಾದಿಚತುರ್ಥ್ಯಂತೈಸ್ತೇಷಾಂ ವೈ ನಾಮಭಿರ್ಯಜೇತ್ ॥
ಹೋಮಶೇಷಂ ಸಮಾಪ್ಯಾಥ ವೈಷ್ಣವಾನ್ ಭೋಜಯೇತ್ ತದಾ ।
ಮಂತ್ರರತ್ನೇನ ತದ್‌ಬೀಜಂ ಪುಷ್ಪಾಂಜಲಿಶತಂ ಯಜೇತ್ ॥
– ವೃ.ಹಾ.ಸ್ಮೃ. *2-143.....147*


ಏನಂ ರಕ್ಷ ಜಗನ್ನಾಥ ಕೇವಲಂ ಕೃಪಯಾ ತವ ।
ಅರ್ಚನಂ ಯತ್ ಕೃತಂ ತೇನ ವಿಭೋ ಸ್ವೀಕರ್ತುಮರ್ಹಸಿ ॥

ಜಗದೊಡೆಯ ಇವನನ್ನು ರಕ್ಷಿಸು. ಇವನು ನಡೆಸಿದ ಪೂಜೆಯನ್ನು ಕೇವಲ ದಯೆಯಿಂದ ಸ್ವೀಕರಿಸು.

ಹೀಗೆ ಗುರುಗಳಿಂದ ಶಿಷ್ಯನು ಭಗವಂತನ ಪ್ರತಿಮೆಯನ್ನು ಪಡೆದು, ಅಂದಿನಿಂದ ವಿಧಿವತ್ತಾಗಿ ಪೂಜಿಸಬೇಕು. ಆಭರಣ, ವಸ್ತ್ರ, ವಾಹನ, ಹಾಸಿಗೆ, ಆಸನಾದಿಗಳನ್ನು ನೀಡಿ ಪೂಜಿಸಬೇಕು.

ಶ್ರೌತವಿಧಾನವನ್ನಾಗಲೀ, ಸ್ಮಾರ್ತವಿಧಾನವನ್ನಾಗಲೀ ಆಗಮೋಕ್ತವಿಧಾನವನ್ನಾಗಿ ಅರಿತು ಆ ವಿಧಾನಕ್ಕನುಗುಣವಾಗಿ ಪೂಜಸಬೇಕು.324

ಪೂಜೆಯ ಬಗ್ಗೆ ಶ್ರೀ ಮಧ್ವರ ಬೆಳಕು



ಆನಂದತೀರ್ಥಮುನಿವರ್ಯಮಹಂ ನಮಾಮಿ ।

ಶ್ರೀ ಮಧ್ವರು ತಮ್ಮ ತಂತ್ರಸಾರಸಂಗ್ರಹದಲ್ಲಿ ಇಪ್ಪತ್ತು ಶ್ಲೋಕಗಳಲ್ಲಿ (1-46..... 66) ಶ್ರೀಹರಿಯ ಪೂಜೆಯ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡಿರುವರು. ಅಲ್ಲದೆ, ಈ ಇಪ್ಪತ್ತು ಶ್ಲೋಕಗಳಲ್ಲಿ ಹದಿನೈದು ಶ್ಲೋಕಗಳು ಪೀಠಪೂಜೆಯ ಕುರಿತಾಗಿಯೇ ಇದ್ದು ಮುಂದಿನ ನಾಲ್ಕು ಶ್ಲೋಕಗಳಲ್ಲಿ ಧೂಪ, ದೀಪ ಇತ್ಯಾದಿಗಳನ್ನು ಸ್ಥೂಲವಾಗಿಯಷ್ಟೇ ತಿಳಿಸಲಾಗುವುದು. ದ್ವಿತೀಯಾಧ್ಯಾಯದಲ್ಲಿ (೭ರಿಂದ ೧೨) ಕಲಶ ಪೂಜೆಯ ಬಗ್ಗೆ ತಿಳಿಸಲಾಗುವುದು. ತೃತೀಯಾಧ್ಯಾಯದಲ್ಲಿ (೯೭.....೧೨೧) ದೇವಾಲಯದಲ್ಲಿಯ ಪ್ರತಿಮೆಗಳಿಗೆ ಸಂಬಂಧಿಸಿದಂತೆ ಹೇಳಿದ ಮಂತ್ರಗಳ ಜಪ ಹಾಗೂ ಧ್ಯಾನ ಬೇರೆಡೆಯ ಪ್ರತಿಮಾಪೂಜೆಗಳಲ್ಲಿಯೂ ಅಳವಡಿಸಿಕೊಳ್ಳಬಹುದಾದದ್ದು. ಹಾಗೂ ೧೨೭ ಶ್ಲೋಕದಿಂದ ೧೩೫ ಶ್ಲೋಕದ ವರೆಗೆ ತಿಳಿಸಿರುವ ತತ್ವನ್ಯಾಸವನ್ನೂ

---

324. ಪ್ರಣಮ್ಯ ಭಕ್ತ್ಯಾ ದೇವೇಶಂ ಜಪ್ತ್ವಾ ಮಂತ್ರಮನುತ್ತಮಮ್ ।
ಆಹೂಯ ಪ್ರಣತಂ ಶಿಷ್ಯಂ ತದ್‌ಬಿಂಬಂ ದರ್ಶಯೇದ್ ಗುರುಃ ॥
ಕೃಪಯಾಥ ತತಸ್ತಸ್ಮೈ ದದ್ಯಾದ್ ಬಿಂಬಂ ಹರೇರ್ಗುರುಃ ।
......ಏವಂ ಲಬ್ಧ್ವಾ ಗುರೋರ್ಬಿಂಬಂ ಪೂಜಯೇತ್ತಂ ಪ್ರಯತ್ನತಃ ॥
ಹಿರಣ್ಯವಸ್ತ್ರಾಭರಣಯಾನಶಯ್ಯಾಸನಾದಿಭಿಃ ।
ತತಃಪ್ರಭೃತಿ ದೇವೇಶಮರ್ಚಯೇದ್ ವಿಧಿನಾ ಸದಾ ।
ಶ್ರೌತಸ್ಮಾರ್ತಾಗಮೋಕ್ತಾನಾಂ ಜ್ಞಾತ್ವಾನ್ಯತಮಮಚ್ಯುತಮ್ ॥
– *ವೃ.ಹಾ.ಸ್ಮೃ. 2-147....151*

ಪ್ರಥಮಾಧ್ಯಾಯದಲ್ಲಿ (೬–೧೧) ತಿಳಿಸಿದ ಮಾತೃಕಾನ್ಯಾಸದ ಪ್ರಮೇಯವನ್ನೂ ಪೂಜೆಗೆ ಉಪಯೋಗಿಸಿಕೊಳ್ಳಬಹುದಾಗಿದೆ. ಇದಲ್ಲದೆ, ಕೃಷ್ಣಾಮೃತಮಹಾರ್ಣವ, ಸದಾಚಾರ ಸ್ಮೃತಿ, ಭಾಗವತತಾತ್ಪರ್ಯನಿರ್ಣಯ, ಉಪನಿಷದ್ಭಾಷ್ಯ, ಗೀತಾಭಾಷ್ಯ –ಇತ್ಯಾದಿ ಗ್ರಂಥಗಳಲ್ಲಿ ಪೂಜೆಯ ಬಗ್ಗೆ ಕೆಲವು ವಿಚಾರಗಳನ್ನು ತಿಳಿಸಿರುವರು.

- ಚಕ್ರಾಬ್ಜ, ಭದ್ರಕ ಮುಂತಾದ ಮಂಡಲದಲ್ಲಾಗಲೀ, ಲೋಹ ಇತ್ಯಾದಿಗಳಿಂದ ನಿರ್ಮಿತವಾದ ಅಚಲ ಪ್ರತಿಮೆಯಲ್ಲಾಗಲಿ , ಹೃದಯದಲ್ಲಾಗಲೀ, ಗುರು– ಯತಿ ಮುಂತಾದ ಚಲಪ್ರತಿಮೆಯಲ್ಲಾಗಲೀ, ಭೂಮಿಯ ಸ್ಥಂಡಿಲದಲ್ಲಾಗಲೀ ಭಗವಂತನನ್ನು ನಿತ್ಯವೂ ಪೂಜಿಸಲೇಬೇಕು.325

- ಜ್ಞಾನಿಯಲ್ಲದವನು ಪ್ರತಿಮಾಮಾಧ್ಯಮದಲ್ಲಿ ದೇವರನ್ನು ಪೂಜಿಸಲೇಬೇಕು. ಪೂಜಿಸದಿದ್ದಲ್ಲಿ ಅಪರಾಧ ಎನಿಸುವುದು. ಜ್ಞಾನಿಯಾದರೂ ಪ್ರತಿಮಾಮಾಧ್ಯಮದಲ್ಲಿ ಪೂಜಿಸಿದರೆ ಪುಣ್ಯ ಬರುವುದು. ಪ್ರತಿಮಾಮಾಧ್ಯಮದಲ್ಲಿ ಪೂಜಿಸದಿದ್ದರೆ ಅಪರಾಧ ಎನಿಸುವುದಿಲ್ಲ.326

- ಪ್ರತಿಮೆಯೇ ದೇವರೆಂದು ಉಪಾಸನೆ ಮಾಡಬಾರದು. ಯಾಕೆಂದರೆ ಜಡಪ್ರತಿಮೆ ದೇವರಾಗಲಾರದು. ಆದುದರಿಂದ ಜಡಪ್ರತಿಮೆಯನ್ನು ದೇವರೆಂದು ನಡೆಸುವ ಉಪಾಸನೆ ಮಿಥ್ಯಾ ಉಪಾಸನೆ ಎನಿಸಿ, ಮಹಾ ಅನರ್ಥಕಾರಿ ಆಗಬಲ್ಲದು.327 ಆದುದರಿಂದ ಪ್ರತೀಕದಲ್ಲಿ ದೇವರು ಸನ್ನಿಹಿತನಾಗಿರುವನೆಂದೇ ಚಿಂತಿಸಬೇಕು.328

- ಪೂಜಕನ ಎದುರಿಗಿರುವ ಪೀಠದಲ್ಲಿ ಸಮಗ್ರ ಬ್ರಹ್ಮಾಂಡದ ಅನುಸಂಧಾನವನ್ನು ತಂದುಕೊಳ್ಳಲು ಅನುಕೂಲವಾಗುವಂತೆ ಹೀಗೆ ಚಿಂತಿಸಬೇಕು. ಪೀಠದ ಮಧ್ಯದಲ್ಲಿ ಬ್ರಹ್ಮಾಂಡದ ಕೆಳಗೆ ಪರಮಪುರುಷನಾದ ನಾರಾಯಣ, ಆಧಾರಶಕ್ತಿಯಾದ ಲಕ್ಷ್ಮೀ ದೇವಿಯೂ ಇರುವರು. ಆಧಾರಶಕ್ತಿಯ ಮೇಲೆ ಬ್ರಹ್ಮಾಂಡಾಧಾರವಾದ ಕೂರ್ಮ, ಅದರ ಪುಚ್ಛವನ್ನಾಶ್ರಯಿಸಿದ ಶೇಷ, ಶೇಷನ ಹೆಡೆಯಲ್ಲಿ ಪೃಥಿವಿ. ಅಲ್ಲಿ ಕ್ಷೀರಸಾಗರ. ಕ್ಷೀರಸಾಗರದಲ್ಲಿ ಶ್ವೇತದ್ವೀಪ. ಅಲ್ಲಿ ದಿವ್ಯರತ್ನಖಚಿತವಾದ ಹಿರಿಯ ಮಂಟಪ. ಆ ಮಂಟಪದಲ್ಲಿ ಪದ್ಮ. ಶ್ವೇತದ್ವೀಪ, ಮಂಟಪ ಹಾಗೂ ಪದ್ಮ ಇವು ಮೂರೂ ರಮಾದೇವಿಯ ರೂಪಗಳೇ. ಪದ್ಮದ ಎದುರುಬದಿಯ ಆರು ದಲಗಳಲ್ಲಿ ಸೂರ್ಯಾ

---

325. ಪೂಜ್ಯಶ್ಚ ಭಗವಾನ್ನಿತ್ಯಂ ಚಕ್ರಾಬ್ಜಾದಿಕಮಂಡಲೇ ।
ಅಚಲೇ ಹೃದಯೇ ವಾಪಿ ಚಲೇ ವಾ ಕೇವಲಸ್ಥಲೇ । –*ತಂ.ಸಾ.ಸಂ. 1-46*

326. ಅಜ್ಞೋಽರ್ಚಯೇದೇವಾರ್ಚಾಯಾಮನ್ಯಥಾ ದೋಷವಾನ್ ಭವೇತ್ ।
ಜ್ಞಸ್ತ್ವರ್ಚಯನ್ ಸುಗುಣವಾನನ್ಯಥಾ ದೋಷವಾನ್ ನ ತು ।
– *ಕಾಪಿಲೇಯ (ಭಾ.ತಾ.ನಿ. 3-30-25)*

327. ಪ್ರತೀಕವಿಷಯತ್ವೇನ ನ ಕಾರ್ಯಾ ವಿಷ್ಣುಭಾವನಾ ।
ಪ್ರತೀಕಂ ನೈವ ವಿಷ್ಣುರ್ಯನ್ಮಿಥ್ಯೋಪಾಸಾ ಹ್ಯನರ್ಥದಾ ॥
– *ಅನುವ್ಯಾಖ್ಯಾನ (4-1-17)*

328. ಪ್ರತೀಕಸಂಸ್ಥಿತತ್ವೇನ ಧ್ಯೇಯೋ ವಿಷ್ಣುರ್ನಚಾನ್ಯಥಾ । –*ಅ.ವ್ಯಾ. (4-1-31)*

ದಿಗಳನ್ನೂ, ಪದ್ಮದ ಪೂರ್ವಾದಿ ದಿಕ್ಕುಗಳಲ್ಲಿ ಭಗವಂತನ ಆತ್ಮಾದಿ ನಾಲ್ಕು ರೂಪಗಳನ್ನೂ, ಮತ್ತೊಂದು ಎಂಟು ದಲಗಳ ಪದ್ಮದ ಎಂಟು ದಲಗಳಲ್ಲಿ ಭಗವಂತನ ವಿಮಲಾದಿ ಶಕ್ತಿಗಳನ್ನೂ ಧ್ಯಾನಿಸಬೇಕು. ಪದ್ಮದ ಮಧ್ಯದಲ್ಲಿ ಅನುಗ್ರಹಾ ಎನಿಸುವ ಶಕ್ತಿಯಲ್ಲಿ ಭಗವಂತನ ಯೋಗಾಸನದಂತಿರುವ ಶೇಷನನ್ನು ಪೂಜಿಸಬೇಕು. ಆ ಶೇಷನಲ್ಲಿ ಭಗವತ್ ಪ್ರತಿಮೆ ಇದೆ ಎಂದು ಭಾವಿಸಿ, ಅದರಲ್ಲಿ ಶ್ರೀಹರಿಯನ್ನು ಆವಾಹಿಸಿ, ಅರ್ಘ್ಯಾದಿ ಉಪಚಾರಗಳನ್ನು ನೀಡಬೇಕು.329

- ಜೀವನು ಯಾವ ಶ್ರೀಹರಿಯ ರೂಪದ ಪ್ರತಿಬಿಂಬನಾಗಿರುವನೋ ಯಾವ ರೂಪದ ಅಧೀನನಾಗಿರುವನೋ ಆ ರೂಪವು 'ಜೀವಕಲಾ' ಎನಿಸಿದ್ದು ಪೂಜೆಯಲ್ಲಿ ಅದರ ಧ್ಯಾನವನ್ನೇ ನಡೆಸಬೇಕು.330
- ಲಕ್ಷ್ಮಿಯೇ ಮುಂತಾದವರು ಕ್ರಮವಾಗಿ ಭಗವಂತನ ಪ್ರೀತಿಗೆ ಪಾತ್ರರಾದವರು. ಆದುದರಿಂದ ಅವರಲ್ಲಿ ಕ್ರಮವಾಗಿ ಭಕ್ತಿ ಮಾಡಬೇಕು. ಅಲ್ಲದೆ, ಅವರೆಲ್ಲ ಯಾವಾಗಲೂ ಗುರುಗಳು. ಆದುದರಿಂದ ಶ್ರೀಹರಿಯ ಸುತ್ತ ಅವರೆಲ್ಲ ಪೂಜ್ಯರು, ಧ್ಯೇಯರು ಹಾಗೂ ನಮ್ಯರು.331
- ಭಗವಂತನ ಸುತ್ತ ಏಳು ಆವರಣಗಳಲ್ಲಿ ಲಕ್ಷ್ಮೀದೇವಿಯೇ ಮುಂತಾದ ದೇವತೆಗಳನ್ನು ಪೂಜಿಸಬೇಕು.332
- ನೈವೇದ್ಯಸಮರ್ಪಣೆಯ ಅನಂತರ ಅಗ್ನಿಮುಖದಲ್ಲಿ ಆರಾಧನೆ, ಹೋಮಗಳನ್ನು ಮಾಡಿದ ಬಳಿಕ ನೈವೇದ್ಯದ ವಿಸರ್ಜನೆ.333
- ನೈವೇದ್ಯಸಮರ್ಪಣೆಗಿಂತ ಮೊದಲು ಒಮ್ಮೆ ಧೂಪದೀಪಗಳ ಅರ್ಪಣೆ. ನೈವೇದ್ಯ ವಿಸರ್ಜನೆಯ ಬಳಿಕ ಪುನಃ ಧೂಪದೀಪಗಳ ಅರ್ಪಣೆ. ಹಾಗೆಯೇ ನೈವೇದ್ಯ

---

329. ಪರಮಃ ಪುರುಷೋ ಮಧ್ಯೇ...ತತ್ರಾವಾಹ್ಯ ಹರಿಂ.... । *–ತಂ.ಸಾ.ಸಂ. 1-51......57*

330. ಹೃದಿಸ್ಥಾ ಸಾ ಹರೇರ್ಮೂರ್ತಿರ್ಜೀವೋ ಯತ್ಪ್ರತಿಬಿಂಬಕಃ ।
ಯದ್ವಶೇ ವರ್ತತೇ ಜೀವಃ ಸಾ ತು ಜೀವಕಲಾ ಸ್ಮೃತಾ ॥
– ವಿವೇಕ (ಭಾಗ. ತಾ. ನಿ. 11-27-22)

331. ಲಕ್ಷ್ಮೀ.......ಸೂರ್ಯಾದಯಶ್ಚ ಕ್ರಮಶೋ ಭಗವತ್ ಪ್ರೀತಿಗೋಚರಾಃ ।
ತೇಷು ಭಕ್ತಿಃ ಕ್ರಮೇಣೈವ ಕಾರ್ಯಾ ನಿತ್ಯಂ ಮುಮುಕ್ಷುಭಿಃ ॥
ಸರ್ವೇಽಪಿ ಗುರವಶ್ಚೈತೇ ಪುರುಷಸ್ಯ ಸದೈವ ಹಿ ।
ತಸ್ಮಾತ್ ಪೂಜ್ಯಾಶ್ಚ ನಮ್ಯಾಶ್ಚ ಧ್ಯೇಯಾಶ್ಚ ಪರಿತೋ ಹರಿಮ್ ॥
– ಅನುವ್ಯಾಖ್ಯಾನ 3-4-230

332. ಲಕ್ಷ್ಮೀಧರೇ ಯಜೇತ್ತತ್ರ ಪಾರ್ಶ್ವಯೋಃ..... ಸಭಾರ್ಯಾನ್ ಸಪರಿಗ್ರಹಾನ್ ।
– ತಂ.ಸಾ.ಸಂ. 1-58....62

333. ಅನೇನ ಕ್ರಮಯೋಗೇನ ಜುಹುಯಾತ್ ಸಂಸ್ಕೃತೇನಲೇ..... ।
ವಿಸರ್ಜಯಿತ್ವಾ ನೇವೇದ್ಯಂ..... ॥ *–ತಂ.ಸಾ.ಸಂ. 1-63, 64, 65*

ವಿಸರ್ಜನೆಯಾದಾಕ್ಷಣ ಅಷ್ಟಾಕ್ಷರಮಂತ್ರದಿಂದ ಮೂರುಬಾರಿ ಅರ್ಚನೆ. ಹಾಗೆಯೇ ಎರಡನೇ ಬಾರಿಯ ಧೂಪದೀಪಗಳ ಅರ್ಪಣೆಯ ಬಳಿಕ ಪುನಃ ಮೂಲಮಂತ್ರದಿಂದ ಮೂರು ಬಾರಿ ಅರ್ಚನೆ.334

- ಧರ್ಮದಿಂದ ಪೂಜಾಸಾಧನಗಳನ್ನು ಸಂಪಾದಿಸಿ, ವಿಧಿವತ್ತಾಗಿ ಪುನಃ ಮಧ್ಯಾಹ್ನದ ಸ್ನಾನಮಾಡಿ ವೇದ, ತಂತ್ರಶಾಸ್ತ್ರಾದಿಗಳಲ್ಲಿ ತಿಳಿಸಿದಂತೆ ಪೂಜಿಸಬೇಕು.335
- ಭಗವಂತನು ಲಕ್ಷ್ಮೀದೇವಿ, ಚತುರ್ಮುಖ, ರುದ್ರ ಮುಂತಾದವರಲ್ಲಿ ಅವರವರ ಯೋಗ್ಯತಾನುಸಾರವಾಗಿ ಇದ್ದುಕೊಂಡು ತನ್ನನ್ನು ತಾನೇ ಪೂಜಿಸಿಕೊಳ್ಳುವನು.336
- ತಂದೆಯಾದವನು ಶಿಶುವಿನ ಶ್ರೇಯಸ್ಸಿಗಾಗಿ ತನ್ನ ವಂದನೆಯನ್ನು ಶಿಶುವಿನಿಂದ ಹೇಗೆ ಮಾಡಿಸುವನೋ ಅದೇ ರೀತಿಯಾಗಿ ಭಗವಂತನು ಜೀವನ ಶ್ರೇಯಸ್ಸಿಗಾಗಿ ಜೀವನಿಂದ ತಮ್ಮ ಪೂಜೆ ಮಾಡಿಸುವನು.337
- ಭಗವಂತನು ಆನಂದಪರಿಪೂರ್ಣನಾದರೂ ಲೀಲೆಯಿಂದ ಭಕ್ತರು ಸಮರ್ಪಿಸುವ ಪದಾರ್ಥಗಳನ್ನು ಭೋಗಿಸುವನು.338
- ಶಾಸ್ತ್ರನಿಷಿದ್ಧಗಳಾದ ಪತ್ರಾದಿಗಳನ್ನು ಭಗವಂತನಿಗೆ ಅರ್ಪಿಸಬಾರದು.339

ಕೃಷ್ಣಾಮೃತಮಹಾರ್ಣವದಲ್ಲಿ ವಿಷ್ಣುಪೂಜೆಯ ಹಿರಿಮೆ

೨೪೯ ಶ್ಲೋಕಗಳ ಸಂಗ್ರಹಾತ್ಮಕವಾದ ಶ್ರೀ ಮಧ್ವರ 'ಅರ್ಚಿತೇ....' ಎಂದು ಕೇಶವನ ಅರ್ಚನೆಯ ಪ್ರಸ್ತಾವದೊಂದಿಗೇ ಪ್ರಾರಂಭವಾಗುವ ಕೃಷ್ಣಾಮೃತಮಹಾರ್ಣವದಲ್ಲಿ ಸುಮಾರು ೩೨ ಶ್ಲೋಕಗಳು ವಿಷ್ಣುಪೂಜೆಯ ಹಿರಿಮೆಗರಿಮೆಗಳನ್ನು ತಿಳಿಸುವವುಗಳಾದರೆ, ಎಂಟು ಶ್ಲೋಕಗಳು ಸಾಲಿಗ್ರಾಮದ ಚಕ್ರಾಂಕಿತೆಯ ಮಹತ್ತ್ವವನ್ನು ತಿಳಿಸುವವು.

---

334. ಧೂಪದೀಪೌ ತತೋ ದತ್ವಾ.... ಮೂಲೇನ ತ್ರಿಃ ಸಮರ್ಚ್ಯ ಚ ।
ಧೂಪದೀಪೌ ಪುನರ್ದತ್ವಾ ಪುನರ್ಮೂಲೇನ ಪೂರ್ವವತ್ ।
ಅರ್ಚಯಿತ್ವಾ..... ॥ *–ತಂ.ಸಾ.ಸಂ. 1-63, 65, 66*

335. ಧರ್ಮೇಣೇಜ್ಯಾಸಾಧನಾನಿ ಸಾಧಯಿತ್ವಾ ವಿಧಾನತಃ ।
ಸ್ನಾತ್ವಾ ಸಂಪೂಜಯೇದ್ ವಿಷ್ಣುಂ ವೇದತಂತ್ರೋಕ್ತಮಾಗತಃ ॥ *–ಸ.ಸ್ಮೃ. 11*

336. ಶ್ರೀಬ್ರಹ್ಮರುದ್ರ ಪೂರ್ವೇಷು ಕ್ರಮಾತ್ ಸ್ಥಿತ್ವಾ ಜನಾರ್ದನಃ ।
ಸ್ವಾತ್ಮಾನಮರ್ಚಯಿತ್ಯದ್ಧಾ..... ॥
– ತಂತ್ರ ಭಾಗವತ (ಭಾಗ.ತಾ.ನಿ. 10-94-20)

337. ಸ್ವವಂದನಂ ಯಥಾ ಪಿತ್ರಾ ಕಾರಿತಂ ಶಿಶುಕರ್ತೃಕಮ್ ।
ಏವಂ ಪೂಜಾ ವಿಷ್ಣ್ವಧೀನಾ ಭವೇಜ್ಜೀವ ಕೃತೇತ್ಯಪಿ ॥ *–ಪ್ರವೃತ್ತಿ (ಗೀ.ತಾ. 5-10)*

338. ಪೂರ್ಣಾನಂದೋऽಪಿ ಭಗವಾನ್ ಕ್ರೀಡಯಾ ಭುಂಕ್ತ ಏವ ತು ।
– ನಾರಾಯಣ ಶ್ರುತಿ (ಗೀ.ತಾ. 15-9)

339. ನ ತ್ವವಿಹಿತಪತ್ರಾದಿ । ತಸ್ಯಾಪರಾಧತ್ವೋಕ್ತೇರ್ವಾರಾಹಾದೌ । *–ಗೀ.ಭಾ. 9-26*

ಪೂಜೆಯ ಬಗ್ಗೆ ಹೊರಟ ಶ್ಲೋಕಗಳಲ್ಲಿ ಕೆಲವು ಸ್ತುತಿಮುಖವಾಗಿ ಪೂಜೆಯ ಮಹತ್ತ್ವವನ್ನು ತಿಳಿಸುವವುಗಳಾದರೆ ಮತ್ತೆ ಕೆಲವು ನಿಂದಾಮುಖವಾಗಿ ಪೂಜೆಯ ಮಹತ್ತ್ವವನ್ನು ಸಾರುವವು. ಇನ್ನು ಕೆಲವು ಪೂಜೆಯಲ್ಲಿ ಅನಾಯಾಸಸಾಧ್ಯತ್ವವನ್ನು ಸಾಧಿಸುವ ಮೂಲಕ ಅದರ ಹಿರಿಮೆಯನ್ನು ತೋರುವವು. ಚಿಂತನೆಗೆ ಅನುಕೂಲ ವಾಗುವಂತೆ ಈ ಮೂರು ಧರ್ಮಗಳ ಅಡಿಯಲ್ಲಿ ಆ ಶ್ಲೋಕಗಳನ್ನು ಪರಿಶೀಲಿಸೋಣ.

ಸ್ತುತಿಮುಖದಿಂದ ಮಹತ್ತ್ವ ಪ್ರತಿಪಾದನೆ:

ಜನನ, ರೋಗ, ಭಯಾದಿಗಳಿಂದ ಕೂಡಿದ್ದು, ಮಹಾಭಯಂಕರವಾದ ಈ ಸಂಸಾರದಲ್ಲಿ ಅಧೋಕ್ಷಜನನ್ನು ಪೂಜಿಸುವುದೊಂದು ಮಹಾಭಾಗ್ಯ.340

ಯಜ್ಞಗಳಿಗಿಂತ, ತಪಸ್ಸಿಗಿಂತ, ಶುಭಕರ್ಮಗಳಿಗಿಂತ ಎಲ್ಲ ವಿಶಿಷ್ಟವಾದ ಫಲ ಶ್ರೀಹರಿಯ ಆರಾಧನೆಯಿಂದ ದೊರಕಬಲ್ಲದು.341 ಕಲಿಮಲವನ್ನು ಪರಿಹರಿಸುವ ಶ್ರೀಹರಿ ಯನ್ನು ಕಲಿಯುಗದಲ್ಲಿ ನಿತ್ಯವೂ ಯಾರು ಪೂಜಿಸುವರೋ ಅಂತಹವರು ಗೌರವಾ ರ್ಹರು.342 ಮನುಷ್ಯರಿಗೆ ಶ್ರೀವಿಷ್ಣುವಿನ ಆರಾಧನೆಗಿಂತ ಮಿಗಿಲಾದ ಶ್ರೇಯಸ್ಕರ ವಾದುದು ಇನ್ನೊಂದಿಲ್ಲ.343 ಶಂಖಚಕ್ರಗದಾಧಾರಿ, ದೇವದೇವೇಶ ಎನಿಸಿದ ಶ್ರೀಹರಿಯ ಅರ್ಚನೆ ನಡೆಸಿ ಬಿಟ್ಟರೆ ಉಳಿದೆಲ್ಲ ದೇವತೆಗಳ ಅರ್ಚನೆಯೂ ನಡೆದಂತೆಯೇ. ಯಾಕೆಂದರೆ ಅವರೆಲ್ಲರಲ್ಲಿ ಅಂತರ್ಯಾಮಿಯಾಗಿ ಶ್ರೀಹರಿ ನೆಲೆಸಿರುವನು.344

ಸರ್ವಲೋಕೇಶನಾದ, ಸುರಾಸುರರಿಂದ ವಂದ್ಯನಾದ, ಕಂಸ ಮತ್ತು ಕೇಶಿಗಳನ್ನು ಕೊಂದ ಕೇಶವನನ್ನು ಭಕ್ತಿಪೂರ್ವಕವಾಗಿ ಅರ್ಚಿಸಿದವರಿಗೆ ನರಕದ ಭಯವಿಲ್ಲ.345 ಸಮಸ್ತಲೋಕನಾಥನಾದ, ದೇವದೇವನಾದ, ಶ್ರೀವಿಷ್ಣುವಿನ ಪೂಜೆ ಮಾನವಜನ್ಮಕ್ಕೆ ಸಾರ್ಥಕ್ಯಸಂಪಾದಕ.346 ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷ ಇವುಗಳ ಪ್ರಾಪ್ತಿಗೆ

---

340. ಸಂಸಾರೇಽಸ್ಮಿನ್ ಮಹಾಘೋರೇ ಜನ್ಮರೋಗಭಯಾಕುಲೇ ।
ಅಯಮೇಕೋ ಮಹಾಭಾಗಃ ಪೂಜ್ಯತೇ ಯದಧೋಕ್ಷಜಃ ॥ –1

341. ಯಜ್ಞಾನಾಂ ತಪಸಾಂ ಚೈವ ಶುಭಾನಾಂ ಚೈವ ಕರ್ಮಣಾಮ್ ।
ತದ್ವಿಶಿಷ್ಟಫಲಂ ನೄಣಾಂ ಸದೈವಾರಾಧನಂ ಹರೇಃ ॥ –6

342. ಕಲೌ ಕಲಿಮಲಧ್ವಂಸಿಸರ್ವಪಾಪಹರಂ ಹರಿಮ್ ।
ಯೇಽರ್ಚಯಂತಿ ನರಾ ನಿತ್ಯಂ ತೇಽಪಿ ವಂದ್ಯಾ ಯಥಾ ಹರಿಃ ॥ –7

343. ನಾಸ್ತಿ ಶ್ರೇಯಸ್ಕರಂ ನೄಣಾಂ ವಿಷ್ಣೋರಾರಾಧನಾನ್ಮನೇ । –8

344. ಅರ್ಚಿತೇ ದೇವದೇವೇಶೇ ಶಂಖಚಕ್ರಗದಾಧರೇ ।
ಅರ್ಚಿತಾಃ ಸರ್ವದೇವಾಃ ಸ್ಯುರ್ಯತಃ ಸರ್ವಗತೋ ಹರಿಃ । –9

345. ಸ್ವರ್ಚಿತೇ ಸರ್ವಲೋಕೇಶೇ ಸುರಾಸುರನಮಸ್ಕೃತೇ ।
ಕೇಶವೇ ಕಂಸಕೇಶಿಘ್ನೇ ನ ಯಾತಿ ನರಕಂ ನರಃ ॥ –6

346. ಸಮಸ್ತ ಲೋಕನಾಥಸ್ಯ ದೇವದೇವಸ್ಯ ಶಾರ್ಙ್ಗಿಣಃ ।
ಸಾಕ್ಷಾದ್ ಭಗವತೋ ವಿಷ್ಣೋಃ ಪೂಜನಂ ಜನ್ಮನಃ ಫಲಮ್ ॥ –13

ಹೃಷೀಕೇಶನ ಅರ್ಚನೆಗಿಂತ ಬೇರೋಪಾಯವಿಲ್ಲ.[347] ಶ್ರೇಷ್ಠವಾದ ಸ್ಥಾನಮಾನಗಳು ಬೇಕೆಂದಿದ್ದರೆ ಅಚ್ಯುತನನ್ನು ಆರಾಧಿಸಬೇಕು.[348] ಮುಕ್ತಿ ದುರ್ಲಭ. ಅಂತಹ ಮುಕ್ತಿಯನ್ನು ಶ್ರೀಹರಿಯನ್ನು ಆರಾಧಿಸಿ ಪಡೆಯಬಹುದಾಗಿದೆ.[349] ಜಗದೊಡೆಯನಾದ ಶ್ರೀಹರಿಯನ್ನು ಆರಾಧಿಸಿಯೇ ದೇವೇಂದ್ರನೂ ತನ್ನ ಇಂದ್ರಪದವಿಯನ್ನು ಹೊಂದಿರುವನು. ಅಂತಹ ಪೂಜೆಗಳಿಗೆಲ್ಲ ಒಡೆಯನಾಗಿದ್ದು 'ಯಜ್ಞಪತಿ' ಎಂದೇ ಅನ್ವರ್ಥಕವಾಗಿ ಕರೆಯಲ್ಪಡುವ ಶ್ರೀವಿಷ್ಣುವನ್ನು ಪೂಜಿಸು.[350] ಶ್ರೀವಿಷ್ಣುವನ್ನು ಆರಾಧಿಸಿದರೆ ಮೂರೂ ಲೋಕಗಳೊಳಗಿನ ಯಾವ ಸ್ಥಾನವನ್ನು ಬಯಸಿದರೂ ಪಡೆಯಬಹುದು. ಹೀಗಿರುವಾಗ ಶ್ರೇಷ್ಠ ಲೋಕಗಳನ್ನು ಪಡೆಯಬಹುದೆಂಬುದು ಸ್ಪಷ್ಟ.[351] ನರನಾಗಲೀ, ನಾರಿಯಾಗಲೀ ಯಾವ ಯಾವ ವಸ್ತುವನ್ನು ಬಯಸುವರೋ ಜನಾರ್ದನನನ್ನು ಆರಾಧಿಸಿ ಅವೆಲ್ಲವನ್ನೂ ಪೂರ್ಣವಾಗಿ ಪಡೆಯಬಹುದು.[352] ಮನುಷ್ಯನು ಮನಸ್ಸಿನಿಂದ ಏನೇನನ್ನು ಬಯಸುವನೋ ಅದನ್ನು ಪೂರ್ಣವಾಗಿ, ಅಥವಾ ಅಲ್ಪಪ್ರಮಾಣದಲ್ಲಿ ಹೊಂದಬೇಕೆಂದರೆ ಅವನು ಶ್ರೀವಿಷ್ಣುವನ್ನು ಆರಾಧಿಸಲೇ ಬೇಕು.[353]

ನೀರಸವಾದ ಈ ಸಂಸಾರದಲ್ಲಿ ಸಕಲ ಲೋಕಾಧಿಪತಿಯಾದ ಶ್ರೀಹರಿಯ ಆರಾಧನೆ ಯೊಂದೇ ಸಾರವಾದುದು; ಶ್ರೇಷ್ಠವಾದುದು.[354] ಶ್ರೀಹರಿಯನ್ನು ಸ್ತುತಿಸುವ ನಾಲಗೆಯೇ ನಿಜವಾದ ನಾಲಗೆ, ಶ್ರೀಹರಿಯಲ್ಲಿ ಮಗ್ನವಾಗುವ ಚಿತ್ತವೇ ನಿಜವಾದ ಚಿತ್ತ ಹೇಗೋ ಹಾಗೆ ಅವನ ಪೂಜೆಯನ್ನು ನಡೆಸುವ ಕೈಗಳೇ ನಿಜವಾದ ಕೈಗಳೆಂದು ಶ್ಲಾಘನೀಯ ಗಳು.[355] ಕೇಶವಾರಾಧನೆಯ ಬಗ್ಗೆ ವಿಚಾರಿಸುವುದೇ ಸಮುಚಿತ ಪ್ರವೃತ್ತಿ.[356] ಶರೀರದಲ್ಲಿ

---

347. ಧರ್ಮಾರ್ಥಕಾಮಮೋಕ್ಷಾಣಾಂ ನಾನ್ಯೋಪಾಯಸ್ತು ವಿದ್ಯತೇ ।
ಸತ್ಯಂ ಬ್ರವೀಮಿ ದೇವೇಶ ಹೃಷೀಕೇಶಾರ್ಚನಾದೃತೇ ॥ –21

348. ಯಸ್ಯಾಂತಃ ಸರ್ವಮೇವೇದಮಚ್ಯುತಸ್ಯಾವ್ಯಯಾತ್ಮನಃ ।
ತಮಾರಾಧಯ ಗೋವಿಂದಂ ಸ್ಥಾನಮಗ್ರ್ಯಂ ಯದೀಚ್ಛಸಿ ॥ –25

349. ಪರಂಬ್ರಹ್ಮ ಪರಂಧಾಮ ಯೋಽಸೌ ಬ್ರಹ್ಮ ಸನಾತನಮ್ ।
ತಮಾರಾಧ್ಯ ಹರಿಂ ಯಾತಿ ಮುಕ್ತಿಮಪ್ಯತಿದುರ್ಲಭಾಮ್ ॥ –26

350. ಇಂದ್ರಮಿಂದ್ರಃ ಪರಂ ಸ್ಥಾನಂ ಯಮಾರಾಧ್ಯ ಜಗತ್ಪತಿಮ್ ।
ಪ್ರಾಪ ಯಜ್ಞಪತಿಂ ವಿಷ್ಣುಂ ತಮಾರಾಧಯ ಸುವ್ರತ ॥ –27

351. ಪ್ರಾಪ್ನೋತ್ಯಾರಾಧಿತೇ ವಿಷ್ಣೌ ಮನಸಾ ಯದ್ಯದಿಚ್ಛತಿ ।
ತ್ರೈಲೋಕ್ಯಾಂತರ್ಗತಂ ಸ್ಥಾನಂ ಕಿಮು ಲೋಕೋತ್ತರೋತ್ತರಾನ್ ॥ –28

352. ಯೋ ಯಾನಿಚ್ಛೇನ್ನರಃ ಕಾಮಾನ್ ನಾರೀ ವಾ ವರವರ್ಣಿನೀ ।
ತಾನ್ ಸಮಾಪ್ನೋತಿ ವಿಪುಲಾನ್ ಸಮಾರಾಧ್ಯ ಜನಾರ್ದನಮ್ ॥ –32

353. ಆರಾಧ್ಯೈವ ನರೋ ವಿಷ್ಣುಂ ಮನಸಾ ಯದ್ಯದಿಚ್ಛತಿ ।
ಫಲಂ ಪ್ರಾಪ್ನೋತ್ಯವಿಕಲಂ ಭೂರಿ ಸ್ವಲ್ಪಮಥಾಪಿ ವಾ ॥ –55

354. ಅಸಾರೇ ಖಲು ಸಂಸಾರೇ ಸಾರಮೇಕಂ ನಿರೂಪಿತಮ್ ।
ಸಮಸ್ತಲೋಕನಾಥಸ್ಯ ಸಾರಮಾರಾಧನಂ ಹರೇಃ ॥ –71

355. ಸಾ ಜಿಹ್ವಾ ಯಾ ಹರಿಂ ಸ್ತೌತಿ ತಚ್ಚಿತ್ತಂ ಯತ್ ತದರ್ಪಣಮ್ ।

ಎಷ್ಟರ ವರೆಗೆ ಸ್ವಾಸ್ಥ್ಯ ಇರುವುದೋ, ಇಂದ್ರಿಯಗಳಲ್ಲಿ ಎಷ್ಟರ ವರೆಗೆ ಕ್ರಿಯಾಶೀಲತೆ ಇರುವುದೋ ಆ ಅವಧಿಯಲ್ಲಿ ಗೋವಿಂದನನ್ನು ಆರಾಧಿಸು. ಆ ಮೂಲಕ ಆಯುಷ್ಯವನ್ನು ಸಾರ್ಥಕಪಡಿಸಿಕೊಳ್ಳು.357

ನಿಂದಾಮುಖದಿಂದ ಮಹತ್ತ್ವ ಪ್ರತಿಪಾದನೆ:

ಯಾವ ವ್ಯಕ್ತಿ ತನ್ನ ಬಾಹುಗಳಿಂದಲೇ ಸಮುದ್ರವನ್ನು ದಾಟಲು ಬಯಸುವನು? ಅಂತೆಯೇ ಯಾವ ವ್ಯಕ್ತಿ ವಾಸುದೇವನನ್ನು ಪೂಜಿಸದೆ ಮೋಕ್ಷವನ್ನು ಪಡೆಯಲು ಬಯಸುವನು?358 ಯಾವುದೇ ಪೂಜಾ ಸಾಮಗ್ರಿ ಇಲ್ಲದಿದ್ದರೂ ಬರೇ ನೀರಿನಿಂದ ಪೂಜಿಸಲ್ಪಟ್ಟರೂ ಯಾರು ತನ್ನ ಸ್ಥಾನವಾದ ಮುಕ್ತಿಯನ್ನು ಅನುಗ್ರಹಿಸುವನೋ ಅಂತಹವನು ನಿನ್ನಿಂದ ಪೂಜಿಸಲ್ಪಟ್ಟಿಲ್ಲವೇ?359 ಹೃಷೀಕೇಶ, ನರಸಿಂಹ, ಪುಂಡರೀಕಾಕ್ಷ ಎಂದೆಲ್ಲ ಕರೆಸಿಕೊಳ್ಳಲ್ಪಡುವ ಶ್ರೀಹರಿ ಸ್ಮರಣಮಾತ್ರದಿಂದಲೇ ಮನುಷ್ಯರಿಗೆ ಮುಕ್ತಿಯನ್ನು ನೀಡುವವನು. ಅಂತಹವನನ್ನು ನೀನು ಪೂಜಿಸಲಿಲ್ಲವೇ?360 (ಎಂದು ಪಾಪಿಯನ್ನು ಯಮನು ವಿಚಾರಿಸುವನು.) ನರಕದಲ್ಲಿ ದುಃಖವನ್ನು ಅನುಭವಿಸುವ ವ್ಯಕ್ತಿಯನ್ನು ಕಂಡು ಯಮನು ಹೀಗೆ ವಿಚಾರಿಸುವನು –'ಕ್ಲೇಶನಾಶನ'– ದುಃಖಪರಿಹಾರಕ ಎಂದೇ ಪ್ರಸಿದ್ಧನಾದ ಕೇಶವನನ್ನು ನೀನು ಪೂಜಿಸಲೇ ಇಲ್ಲವೋ?361 ಯಾರು ವೈಷ್ಣವದೀಕ್ಷೆ ಪಡೆದು ಜನಾರ್ದನನನ್ನು ಅರ್ಚಿಸುವುದಿಲ್ಲವೋ ಅವರು ಪಶುಗಳೇ ಹೊರತು ಮನುಷ್ಯರಲ್ಲ. ಅವರ ಜೀವನ ನಿಷ್ಫಲ.362

ತಾವೇವ ಕೇವಲೌ ಶ್ಲಾಘ್ಯೌ ಯೌ ತತ್ಪೂಜಾಕರೌ ಕರೌ ॥ –72

356. ಸಾಧು ಸಾಧು ಮಹಾಭಾಗ ಸಾಧು ದಾನವನಾಶನ ।
ಯನ್ಮಾಂ ಪೃಚ್ಛಸಿ ಧರ್ಮಜ್ಞ ಕೇಶವಾರಾಧನಂ ಪ್ರತಿ ॥ –74

357. ಯಾವತ್ ಸ್ವಾಸ್ಥ್ಯಂ ಶರೀರೇಷು ಕರಣೇಷು ಚ ಪಾಟವಮ್ ।
ತಾವದರ್ಚಯ ಗೋವಿಂದಮಾಯುಷ್ಯಂ ಸಾರ್ಥಕಂ ಕುರು ॥ –116

358. ಬಾಹುಭ್ಯಾಂ ಸಾಗರಂ ತರ್ತುಂ ಕ ಇಚ್ಛೇತ ಪುಮಾನ್ ಭುವಿ ।
ವಾಸುದೇವಮನಾರಾಧ್ಯ ಕೋ ಮೋಕ್ಷಂ ಗಂತುಮಿಚ್ಛತಿ ॥ –33

359. ದ್ರವ್ಯಾಣಾಮಪ್ಯಭಾವೇ ತು ಸಲಿಲೇನಾಪಿ ಪೂಜಿತಃ ।
ಯೋ ದದಾತಿ ಸ್ವಕಂ ಸ್ಥಾನಂ ಸ ತ್ವಯಾ ಕಿಂ ನ ಪೂಜಿತಃ ॥ –18

360. ನರಸಿಂಹೋ ಹೃಷೀಕೇಶಃ ಪುಂಡರೀಕನಿಭೇಕ್ಷಣಃ ।
ಸ್ಮರಣಾನ್ಮುಕ್ತಿದೋ ನೃಣಾಂ ಸ ತ್ವಯಾ ಕಿಂ ನ ಪೂಜಿತಃ ॥ –17

361. ನರಕೇ ಪಚ್ಯಮಾನಸ್ತು ಯಮೇನ ಪರಿಭಾಷಿತಃ ।
ಕಿಂ ತ್ವಯಾ ನಾರ್ಚಿತೋ ದೇವಃ ಕೇಶವಃ ಕ್ಲೇಶನಾಶನಃ ॥ –16

362. ತೇ ನರಾಃ ಪಶವೋ ಲೋಕೇ ಕಿಂ ತೇಷಾಂ ಜೀವನೇ ಫಲಮ್ ।
ಯೈರ್ನ ಲಬ್ಧಾ ಹರೇರ್ದೀಕ್ಷಾ ನಾರ್ಚಿತೋ ವಾ ಜನಾರ್ದನಃ ॥ –3

ಪೂಜೆ ಸುಲಭಸಾಧ್ಯ:

ಬಿಲ್ವಪತ್ರದಿಂದ ಗೋವಿಂದನನ್ನು ಒಮ್ಮೆ ಪೂಜಿಸಿದರೂ ಅಂತಹವನಿಗೆ ಮುಕ್ತಿ ದೊರಕಬಲ್ಲದು.[363] ಭಗವಂತನನ್ನು ಒಮ್ಮೆ ಪೂಜಿಸಿದರೂ ಅಂತಹವನು ದೇವತೆಗಳಿಗೂ ದುರ್ಲಭವಾದ ಸ್ಥಾನವನ್ನು ಪಡೆಯುವನು.[364] ಶ್ರೀಹರಿಯನ್ನು ಭಕ್ತಿಪೂರ್ವಕವಾಗಿ ಗರಿಕೆಯ ಮೊಳಕೆಗಳಿಂದ ಪೂಜಿಸಿದರೂ ಸಕಲಯಜ್ಞಗಳಿಂದಲೂ ಪಡೆಯಲಸಾಧ್ಯವಾದ ಫಲವನ್ನು ಪಡೆಯಬಹುದು.[365] ಶ್ರೀಹರಿಯನ್ನು ನೀರಿನ ಮೂಲಕವಾದರೂ ವಿಧಿವತ್ತಾಗಿ ಪೂಜಿಸಿದಲ್ಲಿ ಫಲ ದೊರಕುವುದು.[366] ದೇವದೇವನಾದ ಜನಾರ್ದನನನ್ನು ಯಾರು ಒಮ್ಮೆಯಾದರೂ ಪೂಜಿಸುವನೋ ಅಂತಹವನಿಂದ ಎಲ್ಲ ಕರ್ಮವೂ ಆಚರಿಸಲ್ಪಟ್ಟಂತೆ. ಶ್ರೇಷ್ಠ ಸ್ಥಾನವಾದ ಮೋಕ್ಷವೂ ಅವನ ಪಾಲಿಗೆ ಸಿದ್ಧ.[367]

ವಿಷ್ಣುರಹಸ್ಯದಲ್ಲಿ 'ವಿಷ್ಣುಪೂಜೆ'

ವಿಷ್ಣುರಹಸ್ಯದ ೧೦ನೇ ಅಧ್ಯಾಯದ ೩೪ ಶ್ಲೋಕಗಳೂ ಶ್ರೀವಿಷ್ಣುಪೂಜೆಯ ಮಾಹಿತಿಗಾಗಿಯೇ ಮೀಸಲಾದವುಗಳಾದರೂ ಅವುಗಳಲ್ಲಿ ವಿಷ್ಣುಪೂಜೆಯ ವಿಧಾನದ ಬಗ್ಗೆ ಬಂದ ಮಾಹಿತಿ ವಿರಳ. ಪೂಜಾವಿಧಾನದ ವಿಸ್ತಾರವನ್ನು ಪಂಚರಾತ್ರಾಗಮದಿಂದ ತಿಳಿದು ಕೊಳ್ಳಬೇಕೆಂದು ತಿಳಿಸಲಾಗುವುದು.[368] ಚಲಾಚಲ ಪ್ರತಿಮೆಗಳ ಮಾಹಿತಿಯನ್ನು ನೀಡುತ್ತ ಶಾಲಗ್ರಾಮ ಪೂಜೆಯ ಬಗ್ಗೆ ಹೀಗೆ ತಿಳಿಸಲಾಗುವುದು –ಶಾಲಗ್ರಾಮದಲ್ಲಿ ಭಗವಂತನನ್ನು ಪೂಜಿಸುವುದು ಸರ್ವಜ್ಞಾನಿಗಳಿಗೂ ಸಮ್ಮತವಾದುದು. ಅದರಲ್ಲಿ ಭಗವಂತನ ನಿತ್ಯ ಸನ್ನಿಧಾನ. ಶ್ವಪಚಾದಿಗಳ ಸ್ಪರ್ಶದಿಂದಲೂ ಅದರಲ್ಲಿ ಸನ್ನಿಧಾನ ಕಡಿಮೆ ಆಗುವುದಿಲ್ಲ. ಉಳಿದ ಪ್ರತಿಮೆಗಳಲ್ಲಿ ಹೇಗೋ ಹಾಗೆ ಶಾಲಿಗ್ರಾಮದಲ್ಲಿ ಭಗವಂತನನ್ನು ಪ್ರತಿಷ್ಠೆ ಮಾಡುವ ಆವಶ್ಯಕತೆ ಇಲ್ಲ. ಅದು ಅವನ ಸಹಜಮೂರ್ತಿ. ಅದರ ಮಾಧ್ಯಮದಲ್ಲಿ ಪ್ರತಿದಿನ ಪೂಜೆ ನಡೆಯಬೇಕು.[369] ಬ್ರಾಹ್ಮಣರಿಂದ ಪ್ರಾರಂಭಿಸಿ ಶ್ವಪಚನ ವರೆಗೆ

---

363. ಸಕೃದಭ್ಯರ್ಚ್ಯ ಗೋವಿಂದಂ ಬಿಲ್ವಪತ್ರೇಣ ಮಾನವಃ ।
ಮುಕ್ತಿಭಾಗೀ ನಿರಾತಂಕೀ ವಿಷ್ಣುಲೋಕೇ ಚಿರಂ ವಸೇತ್ ॥ –11

364. ಸಕೃದಭ್ಯರ್ಚಿತೋ ಯೇನ ಹೇಳಯಾಽಪಿ ನಮಸ್ಕೃತಃ ।
ಸ ಯಾತಿ ಪರಮಂ ಸ್ಥಾನಂ ಯತ್ ಸುರೈರಪಿ ದುರ್ಲಭಮ್ ॥ –12

365. ಭಕ್ತ್ಯಾ ದೂರ್ವಾಂಕುರೈಃ ಪುಂಭಿಃ ಪೂಜಿತಃ ಪುರುಷೋತ್ತಮಃ ।
ಹರಿರ್ದದಾತಿ ಹಿ ಫಲಂ ಸರ್ವಯಜ್ಞೈಶ್ಚ ದುರ್ಲಭಮ್ ॥ –14

366. ವಿಧಿನಾ ದೇವದೇವೇಶಃ ಶಂಖಚಕ್ರಧರೋ ಹರಿಃ ।
ಫಲಂ ದದಾತಿ ಸುಲಭಂ ಸಲಿಲೇನಾಪಿ ಪೂಜಿತಃ ॥ –15

367. ಸಕೃದಭ್ಯರ್ಚಿತೋ ಯೇನ ದೇವದೇವೋ ಜನಾರ್ದನಃ ।
ಯತ್ ಕೃತಂ ತತ್ ಕೃತಂ ತೇನ ಸಂಪ್ರಾಪ್ತಂ ಪರಮಂ ಪದಮ್ ॥ –20

368. ಪೂಜಾವಿಧಾನವಿಸ್ತಾರೋ ವಿಜ್ಞೇಯಃ ಪಾಂಚರಾತ್ರತಃ ॥ –10-26

369. ಶಾಲಗ್ರಾಮಶಿಲಾಯಾಂ ತು ಪೂಜನಂ ಸರ್ವಸಮ್ಮತಮ್ ।

ಎಲ್ಲರೂ ಶಾಲಗ್ರಾಮಪೂಜೆಯಲ್ಲಿ ಅಧಿಕಾರಿಗಳು. ಈ ಅಂಶದಲ್ಲಿ ಜಾತಿವಿವೇಚನೆಗೆ ಅವಕಾಶವಿಲ್ಲ.[370] ಆದರೆ ಶಾಲಗ್ರಾಮವನ್ನು ಸ್ತ್ರೀಶೂದ್ರಾದಿಗಳು ಸ್ಪರ್ಶಿಸಲೇ ಬಾರದು. ಯೋಗ್ಯ ಅಧಿಕಾರಿಗಳ ಮೂಲಕ ಪೂಜೆ ಮಾಡಿಸಬಹುದಷ್ಟೇ ಎಂದು ವರಾಹಪುರಾಣ ದಲ್ಲಿ ಸ್ಪಷ್ಟವಾಗಿ ಎಚ್ಚರಿಸಿರುವುದರಿಂದ[371] ವಿಷ್ಣುರಹಸ್ಯದ ಈ ವಿಷಯ ವಿಚಾರಣಾರ್ಹ.

ಪರದ್ರವ್ಯಾಪಹಾರವೇ ಮುಂತಾದ ಅಪರಾಧಗಳನ್ನು ಉಲ್ಲೇಖಿಸಿ, ಅಂತಹ ಅಪರಾಧಗಳನ್ನೆಸಗಿದ ವ್ಯಕ್ತಿಯ ಸ್ಪರ್ಶಮಾತ್ರದಿಂದ ಪ್ರತಿಮೆಯಲ್ಲಿ ಸನ್ನಿಧಾನವು ನಶಿಸುವು ದೆಂದು ಎಚ್ಚರಿಸಲಾಗಿದೆ.[372]

ಹಾಗೆಯೇ ಪ್ರತಿನಿತ್ಯ ಮೂರು ಹೊತ್ತುಗಳಲ್ಲೂ ಸಂಧ್ಯಾವಂದನೆಯನ್ನು ತಪ್ಪದೆ ನಡೆಸುವವನೂ ಆಯಾ ಮಂತ್ರವನ್ನು ಜಪಿಸುವವನೂ ವೈಷ್ಣವದೀಕ್ಷೆಯಿಂದ ಶೂನ್ಯ ನಾಗಿದ್ದರೆ ಆ ಪ್ರತಿಮೆಯನ್ನು ಮುಟ್ಟಿದರೆ ಅವನಿಗೆ ಸಿದ್ಧಿ ದೊರಕಲಾರದು. ಪಾಪವೂ ಸಂಭವಿಸುವುದೆಂದು[373] ವೈಷ್ಣವದೀಕ್ಷೆಯ ಅತ್ಯಾವಶ್ಯಕತೆಯನ್ನು ಸ್ಪಷ್ಟಪಡಿಸಲಾಗಿದೆ.

* * *

ತಸ್ಯಾಃ ಸಹಜಮೂರ್ತಿತ್ವಾಚ್ಛ್ವಪಾಕಸ್ಪರ್ಶನಾದಿನಾ ॥
ಸಾನ್ನಿಧ್ಯಂ ಮಮ ನಾಪ್ನೈತಿ ಸರ್ವದಾ ಮಮ ಸನ್ನಿಧಿಃ ।
ನಾತ್ರ ಪ್ರತಿಷ್ಠಾಪೇಕ್ಷಾಸ್ತಿ ಪೂಜಯೇತ್ತಾಂ ದಿನೇದಿನೇ ॥ –10-6, 7

370. ಬ್ರಾಹ್ಮಣಾದ್ಯಾ ಶ್ವಪಾಕಾಂತಾಸ್ತತ್ಪೂಜಾಧಿಕೃತಾ ಮತಾ ।
ನಾತ್ರ ಜಾತಿವಿವೇಕೋಽಸ್ತಿ.... ॥ –10-8

371. ಶಾಲಗ್ರಾಮೋ ನ ಸ್ಪೃಷ್ಟವ್ಯೋ ಹೀನವರ್ಣೈರ್ವಸುಂಧರೇ ।
ಸ್ತ್ರೀಶೂದ್ರಕರಸ್ಪರ್ಶೋ ವಜ್ರಸ್ಪರ್ಶಾಧಿಕೋ ಮತಃ ॥
ಯದಿ ಭಕ್ತಿರ್ಭವೇತ್ತಸ್ಯ ಸ್ತ್ರೀಣಾಂ ವಾಪಿ ವಸುಂಧರೇ ।
ದೂರಾದೇವಾ ಸ್ಪೃಶನ್ ಪೂಜಾಂ ಕಾರಯೇತ್ ಸುಸಮಾಹಿತಃ ॥
– *ವರಾಹಪುರಾಣ 181-48, 51*

372. .....ತಸ್ಯ ಸ್ಪರ್ಶನ ಮಾತ್ರೇಣ ಸನ್ನಿಧಾನಂ ವಿನಶ್ಯತಿ ॥ –10-20

373. ತ್ರಿಸಂಧ್ಯಾದೀಕ್ಷಿತೋ ನಿತ್ಯಂ ತತ್ತನ್ಮಂತ್ರಸ್ಯ ಜಾಪಕಃ ।
ಯದಿ ದೀಕ್ಷಾವಿಹೀನಸ್ತಾಂ ಸ್ಪೃಶೇದ್ಧಾತುಮಯೀಂ ತನುಮ್ ।
ನೈವ ಸಿದ್ಧಿಮುಪಾಪ್ನೋತಿ ಪ್ರತ್ಯವಾಯೋ ಭವೇದಪಿ । –10-24, 25

ನಾರಾಯಣಪಂಡಿತಾಚಾರ್ಯರ

'ಯೋಗದೀಪಿಕಾ'ದಲ್ಲಿ ವಿಷ್ಣುಪೂಜೆಯ ಬಗ್ಗೆ ಬೆಳಕು

ಶ್ರೀ ನಾರಾಯಣಪಂಡಿತಾಚಾರ್ಯರ ಯೋಗದೀಪಿಕಾದಲ್ಲಿ ೮೮ ಶ್ಲೋಕಗಳನ್ನು ಒಳಗೊಂಡ ತೃತೀಯಪಟಲದಲ್ಲೂ, ೮೮ ಶ್ಲೋಕಗಳನ್ನೊಳಗೊಂಡ ದಶಮಪಟಲದಲ್ಲೂ ಶ್ರೀವಿಷ್ಣುಪೂಜೆಯ ಬಗ್ಗೆ ವ್ಯಾಪಕವಾದ ಬೆಳಕನ್ನು ಚೆಲ್ಲಲಾಗಿದೆ.

ಪೂಜೆಯ ಅಂಗಗಳಾದ ಪೀಠಪೂಜೆ, ಆವರಣಪೂಜೆ, ಅರ್ಘ್ಯಾದಿ ಉಪಚಾರಗಳ ಅರ್ಪಣೆ, ಅಗ್ನಿಮುಖದಲ್ಲಿ ಆರಾಧನೆ ಇತ್ಯಾದಿಗಳ ಬಗ್ಗೆ ಬೆಳಕು ಚೆಲ್ಲಲಾದ ತೃತೀಯ ಪಟಲದಲ್ಲಿ ವಿಶೇಷವಾಗಿ ಪ್ರತಿಮಾಮಾಧ್ಯಮದ ಆರಾಧನೆಯ ಮೊದಲು ಆತ್ಮಾರಾಧನೆಯನ್ನೂ, ಪ್ರತಿಮಾರಾಧನೆಯ ಕೊನೆಯಲ್ಲಿ ಭಾವಪುಷ್ಪಾರಾಧನೆಯನ್ನೂ ನಿರೂಪಿಸಲಾಗಿದೆ.

ಆತ್ಮಾರಾಧನೆ ಹಾಗೂ ಭಾವಪುಷ್ಪಾರಾಧನೆ:

ಪ್ರತಿಮೆಯಲ್ಲಿ ಸನ್ನಿಹಿತನಾದ ಶ್ರೀವಿಷ್ಣುವಿನ ಎದುರು ಕುಳಿತುಕೊಂಡು ಆತ್ಮಾರ್ಚನೆಯನ್ನು ಮಾಡಬೇಕು–

ಅಬ್ಗಂಧಕುಸುಮೈರನ್ಯೈಃ ಕುರ್ಯಾದಾತ್ಮಾರ್ಚನಂ ಹೃದಿ ।
ಬ್ರಹ್ಮರಂಧ್ರೇ ಸುಷುಮ್ನಾಯಾಂ ಸುಷುಮ್ನಾಕಿರಣದ್ಯುತಿ ।
ಅರ್ಚಯೇತ್ ಪೀಠದೇವಾದೀನ್ ಮಧ್ಯೇ ಮೂಲಂ ಸಮರ್ಚಯೇತ್ ।

'ಆತ್ಮಾ' ಎಂಬ ಹೆಸರಿನ ಭಗವದ್ರೂಪವನ್ನು374 ಹೃದಯದ ಸುಷುಮ್ನಾನಾಡಿಯಲ್ಲಿ ಧ್ಯಾನಮಾಡಬೇಕು. ಅಲ್ಲಿಯೇ ಪೀಠದೇವಾದಿಗಳನ್ನೂ ಮಧ್ಯದಲ್ಲಿ ಶ್ರೀಹರಿಯನ್ನೂ ಪೂಜಿಸಬೇಕು.

ಹೃತ್ಪದ್ಮವಿಷ್ಟರಾಸೀನಮುದ್ಯದರ್ಕೋಜ್ಜ್ವಲಪ್ರಭಮ್ ।
ಸಂಭಾವ್ಯ ಚಾರ್ಘ್ಯಪಾದ್ಯಾದ್ಯೈರರ್ಚೇದಬ್ಗಂಧಪುಷ್ಪಕೈಃ ॥

ಹೃದಯಪದ್ಮದ ಮಧ್ಯದಲ್ಲಿ ಆಸೀನನಾಗಿರುವ, ಉದಯಿಸುವ ಸೂರ್ಯನಂತೆ ಪ್ರಕಾಶವುಳ್ಳ ಭಗವಂತನನ್ನು ಧ್ಯಾನಿಸಿ, ಅವನಿಗೆ ಮಾನಸಿಕವಾದ ಅರ್ಘ್ಯ, ಪಾದ್ಯಾದಿಗಳನ್ನು ನೀಡಿ ಪೂಜಿಸಬೇಕು.

---

374. ಸ್ವಾತ್ಮನಿಸ್ಥೋ ಹರಿಃ ಪೂಜ್ಯ ಆತ್ಮನಾಮ್ನಾಶನಾದಿಕೈಃ ।
ತತ್ಸಂಬಂಧಾದಾತ್ಮಶಬ್ದೋ ಜೀವೇ ಸ್ಯಾದುಪಚಾರತಃ ।
– *ಆತ್ಮಸಂಹಿತಾ (ಭಾಗ.ತಾ.ನಿ. 11-11-44)*

ಹೀಗೆ ಭಾವನಾತ್ಮಕವಾದ 'ಆತ್ಮಾರಾಧನೆ' ಆದ ಬಳಿಕ ಹೊರಗೆ ಪ್ರತಿಮಾ ಮಾಧ್ಯಮದಲ್ಲಿ ಪೂಜಿಸಬೇಕು –'**ಬಹಿರಂಚೇತ್ತಥಾ ವಿಷ್ಣುಂ ಪುರಸ್ತಾತ್ ಪೀಠದೇವತಾಃ**' ಹೀಗೆ ಪ್ರತಿಮಾಮಾಧ್ಯಮದ ಪೂಜೆ ಮುಗಿದ ಬಳಿಕ ಭಾವಪುಷ್ಪಗಳ ಆರಾಧನೆ ವಿಧಿಸಲ್ಪಟ್ಟಿದೆ–

ಭಾವೈರೇವಾರ್ಚಯಂತ್ಯೇಕೇ ಜ್ಞಾನವಿಜ್ಞಾನಕೌಶಲಾಃ ।
ಬುದ್ಧ್ಯಾಽವಿಹಿಂಸನ್ ಪುಷ್ಪೈರ್ವಾ ಪ್ರಣವೇನ ಸಮರ್ಪಯೇತ್ ।
ವಾಸುದೇವಾತ್ಮಕಂ ಬ್ರಹ್ಮಮೂಲಮಂತ್ರೇಣ ವಾ ಯತಿಃ ॥

ಹೀಗೆ ವ್ಯಾಸಸ್ಮೃತಿಯಲ್ಲಿ ತಿಳಿಸಿರುವಂತೆ ಅಹಿಂಸೆಯೇ ಮುಂತಾದ ಭಾವಪುಷ್ಪ ಗಳನ್ನು ಪ್ರಣವ ಅಥವಾ ಮೂಲಮಂತ್ರದಿಂದ ವಾಸುದೇವರೂಪಿ ಪರಮಾತ್ಮನಿಗೆ ಅರ್ಪಿಸಬೇಕು. ಅನುಸಂಧಾನದಲ್ಲಿ ಗಟ್ಟಿಗರಾದ ಸಾಧಕರು ಈ ರೀತಿ ಭಾವಪುಷ್ಪಗಳ ಆರಾಧನೆಯನ್ನು ನಡೆಸುವರು.

ಮಹಾಭಾರತದಲ್ಲಿ ಭಾವಪುಷ್ಪಾರಾಧನೆಯ ಬಗ್ಗೆ ಹೀಗೆ ವರ್ಣಿಸಲಾಗಿದೆ–

ಆರಾಧಯಾಮಿ ಮಣಿಸನ್ನಿಭಮಾತ್ಮಬಿಂಬೇ
ಮಾಯಾಪುರೇ ಹೃದಯಪಂಕಜಸನಿವಿಷ್ಟಮ್ ।
ಶ್ರದ್ಧಾನದೀ ವಿಮಲಚಿತ್ತಜಲಾಭಿಷೇಕಂ
ಭಾವಾಷ್ಟಪುಷ್ಪವಿಧಿನಾ ಹರಿಮರ್ಚಯಾಮಿ ॥

ಭಗವದಿಚ್ಛೆಯಿಂದ ನಿರ್ಮಿತವಾದ ಈ ದೇಹವೆಂಬ ಪಟ್ಟಣದಲ್ಲಿ ಹೃದಯಕಮಲ ದಲ್ಲಿ ನೆಲೆಸಿರುವ, ಜೀವಸ್ವರೂಪದಲ್ಲಿ ನೀಲಮಣಿಯಂತೆ ಶೋಭಿಸುತ್ತಿರುವ ಶ್ರೀಹರಿ ಯನ್ನು ಶ್ರದ್ಧೆ ಎಂಬ ನದಿಯ ನಿರ್ಮಲವಾದ ಚಿತ್ತ ಎಂಬ ನೀರಿನಿಂದ ಅಭಿಷೇಕ ಮಾಡಿ ಎಂಟು ಭಾವಪುಷ್ಪಗಳಿಂದ ಪೂಜಿಸುವೆನು.

'**ಅಹಿಂಸಾ ಪ್ರಥಮಂ ಪುಷ್ಪಂ..... ಏಭಿಸ್ತುಷ್ಯತಿಕೇಶವಃ**' ಎಂದು ಅಹಿಂಸೆ, ಇಂದ್ರಿಯ ನಿಗ್ರಹ, ಸರ್ವಭೂತದಯಾ, ಕ್ಷಮೆ, ಜ್ಞಾನ, ತಪಸ್ಸು, ಧ್ಯಾನ ಹಾಗೂ ಸತ್ಯ ಎಂಬ ಎಂಟು ಭಾವಪುಷ್ಪಗಳಿಂದ ಭಗವಂತನು ಪ್ರಸನ್ನನಾಗುವನು ಎಂದು ಪ್ರಮಾಣದಲ್ಲಿ ಎಂಟು ಭಾವಪುಷ್ಪಗಳ ಪರಿಚಯವನ್ನು ನೀಡಲಾಗಿದೆ.

ಜ್ಞಾನಿಗಳು ಹೀಗೆ ಈ ಭಾವಪುಷ್ಪಗಳಿಂದ ಹೃದಯದೊಳಗಿನ ಭಗವಂತನನ್ನು ಆರಾಧಿಸುವರು. ಜ್ಞಾನಿಗಳಲ್ಲದವರಿಗೆ ಭಾವಪುಷ್ಪಗಳ ಆರಾಧನೆ ಅನುಸಂಧಿಕವಾಗಿ ನಡೆಸಲು ಆಗದಿದ್ದರೆ, ನೀರಿನಿಂದ ಭಾವಪುಷ್ಪಗಳ ಅರ್ಪಣೆ ನಡೆಸಿ ಪೂಜಿಸಬೇಕೆಂದು ತಿಳಿಸಲಾಗಿದೆ–

'**ಅವಿದ್ವಾಂಸೋಽಪ್ಯಶಕ್ತಾಶ್ಚೇಜ್ಜಲೈಃ ಕುರ್ಯುಃ ಪರಾರ್ಚನಮ್**'

ಮೂವತ್ತೆರಡು ಅಪರಾಧಗಳ ವಿರುದ್ಧ ಎಚ್ಚರಿಕೆ:

ವರಾಹಪುರಾಣದಲ್ಲಿ ಭೂದೇವಿಗೆ ವರಾಹರೂಪಿ ಪರಮಾತ್ಮನು ಪೂಜೆಗೆ ಸಂಬಂಧಿಸಿದಂತೆ ಸಂಭವಿಸಬಹುದಾದ ಮೂವತ್ತೆರಡು ಅಪರಾಧಗಳನ್ನು ತಿಳಿಸಿರುವರು. ಆ ಅಪರಾಧಗಳನ್ನೆಲ್ಲ ಉಲ್ಲೇಖಿಸಿ, ಈ ಅಪರಾಧಗಳನ್ನು ಚೆನ್ನಾಗಿ ವಿವೇಚಿಸಿಕೊಂಡು, ಅವುಗಳು ತನ್ನಿಂದ ಎಸಗಲ್ಪಡದಂತೆ ಎಚ್ಚರ ವಹಿಸಬೇಕೆಂದು ಸಂದೇಶಿಸಲಾಗಿದೆ –'ದ್ವಾತ್ರಿಂಶದಪರಾಧಾಂಶ್ಚ ಜ್ಞಾತ್ವಾ ಜ್ಞಾತ್ವಾ ವಿವರ್ಜಯೇತ್'

ಆವಾಹನೆ–ಸಾನ್ನಿಧ್ಯಪ್ರಾರ್ಥನೆ–ಸಮರ್ಪಣೆ:

ಹತ್ತನೇ ಪಟಲದಲ್ಲಿ ಪ್ರತಿಮಾಮಾಧ್ಯಮದ ಪೂಜೆಗೆ ಸಂಬಂಧಿಸಿದಂತೆ ಪ್ರತಿಮೆಯಲ್ಲಿ ದೇವರನ್ನು ಆವಾಹಿಸುವ ವಿಧಾನದ ಬಗ್ಗೆ, ಭಗವಂತನ ಅನಂತರೂಪಗಳ ಸಾನ್ನಿಧ್ಯವನ್ನು ಪ್ರಾರ್ಥಿಸುವ ಬಗ್ಗೆ ಹಾಗೂ ಭಗವಂತನಿಗೆ ಸಮರ್ಪಿಸುವ ಅನುಸಂಧಾನದ ಬಗ್ಗೆ ವಿಶೇಷವಾಗಿ ಬೆಳಕುಚೆಲ್ಲಲಾಗಿದೆ.

ಹತ್ತನೇ ಪಟಲ ಭಗವಂತನ ಆವಾಹನೆಯ ಪ್ರಕ್ರಿಯೆಯ ನಿರೂಪಣೆಯೊಂದಿಗೆ ಪ್ರಾರಂಭವಾಗುವುದು–

ದೇವಂ ಸುಷುಮ್ನಾಮಾರ್ಗೇಣ ಆನೀಯ ಬ್ರಹ್ಮರಂಧ್ರಕಮ್ ।
ವಾಮನಾಸಾಪುಟಾದ್ ಧ್ಯಾತ್ವಾ ನಿರ್ಗತಂ ಸ್ವಾಂಜಲಿಸ್ಥಿತಮ್ ॥

ಸಂಪೂಜ್ಯ ಪ್ರತಿಮಾದೌ ಚ ಪುಷ್ಪಮಾರೋಪ್ಯ ಮಂತ್ರತಃ ।
ಅಷ್ಟಾಕ್ಷರೇಣ ಮಂತ್ರೇಣ ಕುರ್ಯಾದಾವಾಹನಂ ವಿಭೋಃ ॥

ಅರ್ಚಕನು ತನ್ನ ದೇಹದಲ್ಲಿರುವ ಭಗವಂತನನ್ನು ಸುಷುಮ್ನಾಮಾರ್ಗದಿಂದ ನೆತ್ತಿಯಲ್ಲಿರುವ ಸಹಸ್ರಾರಕ್ಕೆ ತಂದು, ಅಲ್ಲಿಂದ ಮೂಗಿನ ಎಡ ಹೊಳ್ಳೆಯಿಂದ ತನ್ನ ಬೊಗಸೆಗೆ ಬರಮಾಡಿಕೊಂಡು ಅಷ್ಟಾಕ್ಷರಮಂತ್ರವನ್ನು ಜಪಿಸುತ್ತ ಪುಷ್ಪದ ಮೂಲಕ ಬೊಗಸೆಯಲ್ಲಿ ಸನ್ನಿಹಿತನಾದ ಭಗವಂತನನ್ನು ಪ್ರತಿಮೆ ಅಥವಾ ಶಾಲಿಗ್ರಾಮಾದಿಗಳಲ್ಲಿ ಆವಾಹನೆ ಮಾಡಬೇಕು.

ಹೀಗೆ ಅರ್ಚಕನು ತನ್ನ ಹೃದಯದಲ್ಲಿರುವ ಭಗವಂತನನ್ನು ಹೊರಗಿನ ಪ್ರತಿಮೆಯಲ್ಲಿ ಆವಾಹಿಸಿ ಸನ್ನಿಹಿತನಾಗುವಂತೆ ಮಾಡಬೇಕು–

'ಹೃತ್‌ಸ್ಥಂ ದೇವಂ ಸಮಾವಾಹ್ಯ ಬಹಿರ್ಬಿಂಬೇ ನಿಯೋಜಯೇತ್'

ಆ ಪ್ರತಿಮೆಯ ಪ್ರತಿಯೊಂದು ಅವಯವವೂ ಒಂದೊಂದು ಭಗವದ್ರೂಪ. ಚಿತ್ರದಲ್ಲಿ ಒಂಭತ್ತು ನಾರಿಯರು ಸೇರಿ ಆನೆಯ ಆಕಾರವನ್ನು ತೋರಿಸುವಂತೆ ಬೇರೆ ಬೇರೆ ಭಗವದ್ರೂಪಗಳು ಸೇರಿ ಭಗವಂತನ ಹಸ್ತಾದಿಗಳನ್ನೊಳಗೊಂಡ ರೂಪವು ಭಗವಂತನ ಅಚಿಂತ್ಯಶಕ್ತಿಯಿಂದಾಗಿ ರೂಪುಗೊಂಡಿದೆ ಎಂದು ಧ್ಯಾನಿಸಬೇಕು–

ಯಥಾ ಚಿತ್ರೇ ಹಿ ದೃಶ್ಯಂತೇ ಅಚಿಂತ್ಯೇಶ್ವರಶಕ್ತಿತಃ ।
ಹಸ್ತಪಾದೋದರಾದ್ಯಂಗಾಃ ನವನಾರ್ಯೋ ಗಜಾತ್ಮನಾ ।
ಏಕಸ್ಯಾಃ ಪ್ರತಿಮಾಯಾಶ್ಚ ಹಸ್ತಾದ್ಯೇವಂ ಪರಾಸ್ತಥಾ ॥

ಸಾನ್ನಿಧ್ಯ ಪ್ರಾರ್ಥಯೇತ್ತತ್ರ

ಹೀಗೆ ಆವಾಹನೆ ನಡೆಸಿದ ಮೇಲೆ, 'ಸನ್ನಿಹಿತೋ ಭವ' ಎಂದು ಪ್ರತಿಮೆಯಲ್ಲಿ ಭಗವಂತನ ಅನಂತರೂಪಗಳ ಸಾನ್ನಿಧ್ಯವನ್ನು ಪ್ರಾರ್ಥಿಸಬೇಕು–

ಸಾನ್ನಿಧ್ಯಂ ಪ್ರಾರ್ಥಯೇತ್ತತ್ರ ಹ್ಯರ್ಚಾರೂಪೇ ವಿಶೇಷತಃ

ಇಷ್ಟು ಭಗವದ್ರೂಪಗಳ ಸಾನ್ನಿಧ್ಯವನ್ನು ಪ್ರಾರ್ಥಿಸಬೇಕು–

ಮತ್ಸ್ಯಕೂರ್ಮಾದಿ ದಶಾವತಾರರೂಪಗಳು, ಕೇಶವಾದಿ ದ್ವಾದಶರೂಪಗಳು, ಕ್ರುದ್ಧೋಲ್ಕಾದಿ ಐದು ರೂಪಗಳು, ವಿಮಲಾದಿ ಒಂಭತ್ತು ರೂಪಗಳು, ವಾಸುದೇವಾದಿ ಐದು ರೂಪಗಳು, ವಿಶ್ವ–ತೈಜಸಾದಿ ಎಂಟು ರೂಪಗಳು, ಐವತ್ತು ವರ್ಣವಾಚ್ಯಗಳಾದ ಅಜಾದಿ ರೂಪಗಳು, ನಾರಾಯಣಾದಿ ಶತರೂಪಗಳು, ವಿಶ್ವಾದಿ ಸಹಸ್ರರೂಪಗಳು, ಪರಾದಿ ಬಹುರೂಪಗಳು, ಅಜಿತಾದಿ ಅನಂತರೂಪಗಳು, ಹಿಂಕಾರಾದಿ ಹೆಸರಿನ ರೂಪಗಳು, ೭೨ ಸಾವಿರ ನಾಡಿಗಳಲ್ಲಿ ಸ್ತ್ರೀಪುರುಷರೂಪದಿಂದ ಇರುವ, ಬೃಹತೀ ಸಹಸ್ರ ಪ್ರತಿಪಾದ್ಯಗಳಾದ ೭೨ ಸಾವಿರ ಭಗವದ್ರೂಪಗಳು, ಅನಂತವೇದಗಳಲ್ಲಿರುವ ರೂಪಗಳು, ಸರ್ವಪುರಾಣಗಳಲ್ಲಿ ಇರುವ ರೂಪಗಳು, ಬ್ರಹ್ಮಸೂತ್ರಗಳಲ್ಲಿರುವ ಭಗವದ್ರೂಪಗಳು, ದೇಹದ ಅಸ್ಥಿಗಳಲ್ಲಿರುವ ೩೬೦ ರೂಪಗಳು, ಸಪ್ತಸಮುದ್ರ, ಸಪ್ತದ್ವೀಪಗಳಲ್ಲಿರುವ ರೂಪಗಳು, ಮುಕ್ತಾಮುಕ್ತ ಜೀವರಲ್ಲಿ–ತತ್ವಗಳಲ್ಲಿ–ಜೀವನಿಯಾಮಕ ದೇವತೆಗಳಲ್ಲಿ–ಅವರ ಗುಣಗಳಲ್ಲಿ ಇರುವ ರೂಪಗಳು, ಶ್ರೀರಂಗಾದಿ ಕ್ಷೇತ್ರಗಳಲ್ಲಿ–ಎಲ್ಲ ಶಾಲಿಗ್ರಾಮಗಳಲ್ಲಿ–ಶ್ರೀ ಮಧ್ವರು ಪೂಜಿಸಿರುವ ಕೃಷ್ಣ–ರಾಮ–ವ್ಯಾಸ ಮುಂತಾದ ಪ್ರತಿಮೆಗಳಲ್ಲಿ ಇರುವ ಭಗವದ್ರೂಪಗಳು ಇವನ್ನೆಲ್ಲ ಧ್ಯಾನಿಸಿ, ಅವು ಆಯಾ ಸ್ಥಳಗಳಲ್ಲಿ ಇರುವವಾದರೂ ಅವುಗಳಿಗೂ ಈ ಪ್ರತಿಮೆಯಲ್ಲಿರುವ ಭಗವದ್ರೂಪಕ್ಕೂ ಐಕ್ಯವನ್ನು ಚಿಂತಿಸಿ, ಆ ಎಲ್ಲ ರೂಪಗಳೂ ಎದುರಿನ ಪ್ರತಿಮೆಯಲ್ಲಿ ಸನ್ನಿಹಿತವಾಗಿವೆ ಎಂದು ಅನುಸಂಧಾನ ತಂದುಕೊಳ್ಳಬೇಕು–

'ಮತ್ಸ್ಯಕೂರ್ಮಾದಿಕಾನ್ ಸರ್ವಾನ್..... ಜ್ಞಾತ್ವೈಷಾಂ ಪರಮೈಕ್ಯಂ ಚ.... ತತ್ತತ್ ಸ್ಥಾನಸ್ಥಿತಾನಪಿ । ಅವಿಹಾಯ ಸ್ಥಿತಿಂ ತತ್ರ ಸ್ವಾರ್ಚಾಬಿಂಬಗತಾನ್ ಸದಾ । ......ಚಿಂತಯಿತ್ವಾ ಸನ್ನಿಧಾನಂ ಪ್ರಾರ್ಥಯೇತ್ ಪರಮಾತ್ಮನಃ" *– 10-14.......41*

ಈ ಬಗೆಯ ವ್ಯಾಪಕವಾದ ಅನುಸಂಧಾನದಿಂದಾಗಿ ಎದುರಿಗಿರುವ ಪ್ರತಿಮೆಯಲ್ಲಿ ಸನ್ನಿಹಿತನಾದ ಅರ್ಚಕನ ಬಿಂಬರೂಪಿ ಪರಮಾತ್ಮನದ್ದಷ್ಟೇ ಅಲ್ಲದೆ, ಪರಮಾತ್ಮನ ಅನಂತಾನಂತ ಸಂಖ್ಯೆಯಲ್ಲಿ ಎಷ್ಟೆಷ್ಟು ರೂಪಗಳಿವೆಯೋ ಆ ಎಲ್ಲ ರೂಪಗಳಿಗೂ ಅರ್ಚನೆ ಸಂದಂತಾಗುವುದು.

ಸಮರ್ಪಣೆಯ ವೈಖರಿ:

ಪೂಜಾಕಾಲದಲ್ಲಿ ನಡೆಸುವ ನೈವೇದ್ಯದಲ್ಲಿ ಬಾಹ್ಯ ಭಕ್ಷ್ಯಭೋಜ್ಯಾದಿಗಳಿಗಿಂತಲೂ ಅರ್ಚಕನ ವಾಸನಾಮಯ ಭಕ್ಷ್ಯಭೋಜ್ಯಾದಿಗಳ ಪಾತ್ರವೇ ಪ್ರಮುಖ ಎಂದು ನಾರಾಯಣಪಂಡಿತಾಚಾರ್ಯರ ಅಭಿಪ್ರಾಯ. ಸುಮಾರು ೩೦ ಶ್ಲೋಕಗಳ ವ್ಯಾಪ್ತಿಯಲ್ಲಿ

(10-50....80) ಭಗವಂತನ ನೈವೇದ್ಯದ ಕಾಲದಲ್ಲಿ ಯಾವ ಬಗೆಯ ಅನುಸಂಧಾನವನ್ನು ತಂದುಕೊಳ್ಳಬೇಕೆಂದು ವಿವರಿಸಲಾಗಿದೆ.

ವಾಸನಾರೂಪಕಾನ್ ಭೋಜ್ಯಾನ್ ಭುಂಕ್ತೇ ತತ್ಪ್ರವಿಚಿಂತಿತಾನ್ ।
ಗಂಧಮಾಲ್ಯಾಂಬರಾದೀಂಶ್ಚ ಭಕ್ಷ್ಯಭೋಜ್ಯಾದಿಕಾನಪಿ ॥
ಭುಂಕ್ತೇ ವಿಷ್ಣುಃ ಪೂರ್ಣಶಕ್ತಿಃ ಬಾಹ್ಯಭೋಗವಿಲಕ್ಷಣಾನ್ ।
ಪಾನೀಯಾದೀನ್ ಬಹುವಿಧಾನ್ ಸ್ವರ್ಣಪಾತ್ರೇಷುಸಂಸ್ಥಿತಾನ್ ।
ವಾಸನಾರೂಪಕೇಷ್ವದ್ಧಾ ಪದಾರ್ಥೇಷು ಪೃಥಕ್ ಪೃಥಕ್ ।
ತತ್ತದಾಕಾರಸಂಯುಕ್ತಾನ್ ಸ್ವರೂಪಾನ್ ಸ್ವೀಕರೋತ್ಯಜಃ ।
ಇತಿ ವಿಜ್ಞಾನಮಾತ್ರೇಣ ಪೂಜಿತೋ ಭವತಿ ಸ್ಫುಟಮ್ ॥

– (10-52.....55)

ಅರ್ಚಕನು ತನ್ನಲ್ಲಿ ಮಾನಸಿಕ ವಾಸನಾರೂಪದಲ್ಲಿರುವ ಬೇರೆ ಬೇರೆ ಬಗೆಯ ಭಕ್ಷ್ಯಭೋಜ್ಯಗಳನ್ನು, ಗಂಧ–ಮಾಲೆ–ಪಟ್ಟೆ–ಪೀತಾಂಬರಗಳನ್ನು ಚಿಂತಿಸುವನು. ಚಿನ್ನದ ಪಾತ್ರೆಗಳಲ್ಲಿ ಬೇರೆ ಬೇರೆ ಬಗೆಯ ಪಾನೀಯಾದಿಗಳನ್ನು ಧ್ಯಾನಿಸುವನು. ಹೀಗೆ ಅರ್ಚಕನ ಧ್ಯಾನಕ್ಕೆ ಗೋಚರಗಳಾಗಿದ್ದು, ಅವನ ವಾಸನಾರೂಪಗಳಾದ, ಲೋಕವಿಲಕ್ಷಣಗಳಾದ ಆಯಾ ವಸ್ತುಗಳಲ್ಲಿ ಇರುವ ತನ್ನ ಸ್ವರೂಪಗಳನ್ನು ಭಗವಂತನು ಸ್ವೀಕರಿಸುವನು. ಹೀಗೆ ಅನುಸಂಧಾನಕ್ಕೆ ತಂದುಕೊಳ್ಳುವ ಮಾತ್ರದಿಂದಲೇ ಭಗವಂತನಿಗೆ ಪೂಜೆ ಸಲ್ಲಿಸಿದಂತಾಗುವುದು.

ವಾಸನಾಮಯಿಗಳಾದ ಪದಾರ್ಥಗಳಲ್ಲಿ ಬ್ರಹ್ಮಾದಿದೇವತೆಗಳೂ ಲಕ್ಷ್ಮೀದೇವಿಯೂ ಆಯಾ ರೂಪದಲ್ಲಿದ್ದು, ತಮ್ಮ ಆ ಸ್ವರೂಪಗಳನ್ನು ಭಗವಂತನಿಗೆ ಅರ್ಪಿಸುವರು. ಎಲ್ಲ ಜೀವರ ಸ್ವರೂಪವನ್ನು ಅನುಭವಿಸುವನು. ಮುಕ್ತರ ಆನಂದವನ್ನು ಅನುಭವಿಸುವನು. ಮಹಾಲಕ್ಷ್ಮಿಯ ಸ್ವರೂಪವನ್ನು ಅನುಭವಿಸುವನು.

ಆನಂದಸಾಗರನಾಗಿದ್ದರೂ ಜೀವಿಗಳ ಅನಂತೇಂದ್ರಿಯಗಳ ಭೋಗ್ಯವಸ್ತುಗಳ ಸಾರಭಾಗವನ್ನು ಅನುಭವಿಸುವನು–

ಅನಂತೇಂದ್ರಿಯಸಂಭೋಗ್ಯಂ ಭುಂಕ್ತೇ ಹ್ಯಾನಂದಸಾಗರಃ *– 10-62*
ಮಾನುಷೇಂದ್ರಿಯಭೋಗ್ಯಾಂಸ್ತು ಸ್ವದೃಷ್ಟ್ಯಾ ಸ್ವೀಕರೋತ್ಯಜಃ ।

ಮನುಷ್ಯರ ಇಂದ್ರಿಯಗಳಿಂದ ಭೋಗಿಸಲು ಯೋಗ್ಯಗಳಾದ ವಿಷಯಪದಾರ್ಥಗಳನ್ನು ಭಗವಂತನು ತನ್ನ ದೃಷ್ಟಿಯನ್ನು ಹಾಯಿಸುವ ಮೂಲಕವೇ ಸ್ವೀಕರಿಸುವನು.

ಇತಿ ವಿಜ್ಞಾನಮಾತ್ರೇಣ ಪ್ರೀತೋ ಭವತಿ ನಿತ್ಯಶಃ । *– 10-62*

ಅವನ ಭೋಗದ ವೈಖರಿಯನ್ನು ಹೀಗೆ ಬರೀ ವಿವೇಚಿಸಿಕೊಳ್ಳುವುದರಿಂದಷ್ಟೇ ಭಗವಂತನು ಪ್ರೀತನಾಗುವನು.

ದಯಾಳುತ್ವಂ ಪರೇಶಸ್ಯ ವರ್ಣಯೇತ್ ಕಃ?

ಅರ್ಚಕನ ಮೂಲಕ ನಡೆಯುವ ಭಗವಂತನ ಪೂಜೆಯಲ್ಲಿ ಹೆಜ್ಜಹೆಜ್ಜೆಗೂ ಭಗವಂತನದ್ದೇ ದೊಡ್ಡ ಪಾತ್ರ. 'ನಿಷುಸೀದ ಗಣಪತೇ....' ಎಂಬ ಋಗ್ವೇದದ ಮಂತ್ರ ಘೋಷಿಸುತ್ತಿರುವಂತೆ ಭಗವಂತನೇ ಭಕ್ತನಾದ ಅರ್ಚಕನ ಮೂಲಕ ತನ್ನ ಪೂಜೆಯನ್ನು ಮಾಡಿಸಿಕೊಳ್ಳುವನು. ಇದನ್ನು ಯೋಗದೀಪಿಕಾದಲ್ಲಿ ವಿಸ್ತಾರವಾಗಿ ವಿವರಿಸಿ, ಅದರ ಹಿನ್ನೆಲೆಯಲ್ಲಿ ಇರುವ ಭಗವಂತನ ದಯಾಳುತ್ವವನ್ನು ಎತ್ತಿ ತೋರಿಸಲಾಗಿದೆ–

ದಯಾಳುತ್ವಂ ಪರೇಶಸ್ಯ ವರ್ಣಯೇತ್ ಕಃ ಪುಮಾನ್ ಭುವಿ? *–10-49*

ಭಕ್ತನ ಮೂಲಕ ತನ್ನನ್ನು ಪೂಜಿಸಿಕೊಳ್ಳುವ ಹಿನ್ನೆಲೆಯಲ್ಲಿರುವ ಭಗವಂತನ ದಯಾಸ್ವಭಾವವನ್ನು ಯಾರು ತಾನೇ ವರ್ಣಿಸಿಯಾನು! ಎಂದು ಉದ್ಗರಿಸಲಾಗಿದೆ.

ಪೂಜಕಾಂತರ್ಗತೋ ವಿಷ್ಣುಃ ಸ್ವರೂಪಂ ಸ್ವಯಮೇವ ಹಿ ।
ಲೀಲಯಾಽರ್ಚಯತಿ ಶ್ರೀಶಃ ತದಧಿಷ್ಠಾನಮಾತ್ರತಃ ।
ಭಕ್ತಾನಾಂ ಫಲದೋ ವಿಷ್ಣುರ್ಭವತ್ಯೇವ ನ ಸಂಶಯಃ ॥

ಶ್ರೀವಿಷ್ಣು ಪೂಜಕನ ಅಂತರ್ಯಾಮಿಯಾಗಿದ್ದುಕೊಂಡು ತನ್ನ ಸ್ವರೂಪವನ್ನು ತಾನೇ ಪೂಜಿಸಿಕೊಳ್ಳುವನು. ಅದೊಂದು ಅವನಿಗೆ ಕ್ರೀಡೆ. ಭಕ್ತನ ಅಧಿಷ್ಠಾನದಲ್ಲಿ, ಆಶ್ರಯದಲ್ಲಿ ಇದ್ದುಕೊಂಡು ಹಾಗೆ ಪೂಜಿಸಿಕೊಂಡದ್ದಕ್ಕಾಗಿಯಷ್ಟೇ ಭಕ್ತನಿಗೆ ಪೂಜೆಯ ಫಲವನ್ನು ನೀಡುವನು.

ಭಕ್ತನ ಮಾಧ್ಯಮದಲ್ಲಿ ಹೇಗೆ ತನ್ನನ್ನು ಪೂಜಿಸಿಕೊಳ್ಳುವನೆಂಬ ವಿವರಣೆಯನ್ನೂ ನೀಡಲಾಗಿದೆ–

ಚೇತನಾಂತರ್ಗತೋ ವಿಷ್ಣುರಿಚ್ಛಾಜ್ಞಾನಪ್ರಯತ್ನಕಾನ್ ।
ಉತ್ಪಾದ್ಯ ಚೇತನೇಷ್ವೀಶಃ ದತ್ವಾ ಸ್ವಾಧೀನಕರ್ತೃತಾಮ್ ।
ಸ್ವಭಕ್ತಂ ಫಲಭಾಜಂ ಹಿ ಕರೋತಿ ಜಗದೀಶ್ವರಃ ॥

ಭಕ್ತನಾದ ಪೂಜಕನ ಅಂತರ್ಯಾಮಿಯಾಗಿರುವ ವಿಷ್ಣುವು ಭಕ್ತನಲ್ಲಿ ತನ್ನ ಪೂಜೆಗೆ ಸಂಬಂಧಿಸುವ ಇಚ್ಛೆ, ಜ್ಞಾನ ಹಾಗೂ ಪ್ರಯತ್ನಗಳನ್ನು ಮೂಡಿಸುವನು. ಪೂಜಾಸಂಬಂಧಿ ಜ್ಞಾನೇಚ್ಛಾ ಪ್ರಯತ್ನಗಳೇ ಪೂಜಾಕರ್ತೃತ್ವ ಎನಿಸಿದೆ. ಭಗವಂತನ ಹಿಡಿತದಲ್ಲಿರುವ ಈ ಬಗೆಯ ಕರ್ತೃತ್ವವನ್ನು ಪೂಜಕನಲ್ಲಿ ನೀಡಿ, ಆ ಪ್ರಯುಕ್ತ ಪೂಜೆಯ ಫಲ ಅವನಿಗೆ ದೊರೆಯುವಂತೆ ಮಾಡುವನು.

ರಮತೇ ಹರಿರೇವೈಕಃ ಕ್ರೀಡಯಾ:

ಭಗವಂತನು ಹೀಗೆ ಪೂಜಕನಲ್ಲಿದ್ದುಕೊಂಡು ಮಾತ್ರ ಪೂಜೆಗೆ ಪ್ರಯೋಜಕನಾಗಿರುವುದಲ್ಲ; ಪೂಜಾಸಾಮಗ್ರಿಗಳಲ್ಲೂ ಇದ್ದುಕೊಂಡು ಅವುಗಳ ಮೂಲಕ ಪೂಜೆಗೆ ಪೂರಕನಾಗುವನು–

ಪೂಜೋಪಯುಕ್ತದ್ರವ್ಯೇಷು ಗಂಧಪುಷ್ಪಾದಿಕೇಷು ಚ ।
ತಥೋಪಹಾರರೂಪೇಷು ಭಕ್ಷ್ಯಭೋಜ್ಯಾದಿಕೇಷ್ವಪಿ ।

ಚಾಮರವ್ಯಜನೇ ಛತ್ರಗೀತವಾದ್ಯಾದಿಕೇಷ್ವಪಿ ।
ಸ್ಥಿತಃ ಸ್ವರೂಪಭೋಕ್ತ್ಯಾಸೌ ಪೂಜ್ಯಬಿಂಬಸ್ಥಿತೋ ಹರಿಃ ।

.....ಪೂಜಕಾಂತರ್ಗತೋ ವಿಷ್ಣುಃ ಪೂಜ್ಯಬಿಂಬಗತೋ ಹರಿಃ ।
ಪೂಜ್ಯಪೂಜಕರೂಪೇಣ ಭೋಕ್ತ್ಯಭೋಜ್ಯಾತ್ಮನಾ ತಥಾ ।
ರಮತೇ ಹರಿರೇವೈಕಃ ಕ್ರೀಡಯಾ ಪರಮೇಶ್ವರಃ ।
ಏವಂ ಸಂಚಿಂತ್ಯ ಮನಸಾ ಸರ್ವತ್ರ ಜಗದೀಶ್ವರಮ್ ।
ಪೂಜಯೇಜ್ಜಗತಾಮೀಶಂ ಯಥಾವಿಭವಮರ್ಚಕಃ ॥ *– 10-42....48*

ಭಗವಂತನು ಪೂಜಕನಲ್ಲಿ ಒಂದು ರೂಪದಿಂದ ಇರುವುದಷ್ಟೇ ಅಲ್ಲದೆ, ಪೂಜೆಗೆ ಉಪಯುಕ್ತವಾಗುವ ಸಾಮಗ್ರಿಗಳಾದ ಗಂಧ, ಪುಷ್ಪ, ತುಳಸ್ಯಾದಿಗಳಲ್ಲೂ ಭಕ್ಷ್ಯ, ಭೋಜ್ಯಾದಿ ಉಪಾಹಾರಗಳಲ್ಲೂ ಬೇರೆಬೇರೆ ರೂಪಗಳಿಂದ ಇರುವನು. ಪ್ರತಿಮಾ ಬಿಂಬದಲ್ಲಿರುವ ಭಗವದ್ರೂಪವು ಆ ಎಲ್ಲ ಸಾಮಗ್ರಿಗಳಲ್ಲಿರುವ ತನ್ನ ಸ್ವರೂಪವನ್ನು ತಾನೇ ಭೋಗಿಸುವುದು. ಹೀಗೆ ಒಬ್ಬನೇ ಭಗವಂತನು ಕ್ರೀಡೆಯ ರೂಪದಲ್ಲಿ ಪೂಜ್ಯವಾದ ಬಿಂಬದಲ್ಲೂ ಪೂಜಕನಲ್ಲೂ ಪೂಜೋಪಯುಕ್ತ ಸಾಮಗ್ರಿಗಳಲ್ಲೂ ಭಕ್ಷ್ಯಭೋಜ್ಯಗಳಲ್ಲೂ ಇದ್ದುಕೊಂಡು, ತಾನೇ ಆ ಪುಷ್ಪಾದಿಗಳನ್ನು ಭಕ್ಷ್ಯಭೋಜ್ಯಾದಿಗಳನ್ನು ಭೋಗಿಸುತ್ತಿರುವನು. ಹೀಗೆ ಅನುಸಂಧಾನವನ್ನು ತಂದುಕೊಂಡು ಜಗದೊಡೆಯನಾದ ಶ್ರೀವಿಷ್ಣುವನ್ನು ನಮ್ಮ ನಮ್ಮ ಐಶ್ವರ್ಯದ ಮಟ್ಟಕ್ಕನುಗುಣವಾಗಿ ಪೂಜಿಸಬೇಕು.

ಭಕ್ತಾನುಕಂಪೀ ವಿಷ್ಣುರ್ಹಿ

ಈ ರೀತಿಯಾಗಿ ಕ್ರೀಡಾರೂಪದಲ್ಲಿ ತನ್ನನ್ನು ತಾನೇ ಪೂಜಿಸಿಕೊಂಡು ಆ ಪೂಜೆಯ ಫಲ ಭಕ್ತನಿಗೆ ನೀಡುವುದರಲ್ಲಿ ನಿತ್ಯ ಶ್ರೀವಿಷ್ಣುವಿನ ಮಹಾಕೃಪೆ ಅಡಗಿದೆ ಎಂದು ಸಾಧಕರು, ಜಿಜ್ಞಾಸುಗಳು ವಿಶ್ಲೇಷಿಸಿಕೊಳ್ಳಬೇಕೆಂದು ಕರೆ ನೀಡಲಾಗಿದೆ–

....ಕೃಪಾ ವಿಷ್ಣೋಃ ಪರಾತ್ಮನಃ ।
ಭಕ್ತೇಷು ವರ್ತತೇ ನಿತ್ಯಮಿತಿ ಜ್ಞೇಯಂ ಬುಭೂಷುಭಿಃ । *– 10-69*

ಹತ್ತನೇ ಪಟಲದಲ್ಲಿಯೇ ಪೂಜೆಗೆ ಸಂಬಂಧಿಸಿ ಭಗವಂತನ ಪ್ರತಿಯೊಂದು ಪಾತ್ರವನ್ನು ನಿರೂಪಿಸುವಾಗಲೂ ಆ ಪಾತ್ರ ವಹಿಸುವಲ್ಲಿ ಅವನ ಮಹಾಕರುಣೆಯನ್ನು ಸುಮಾರು ಎಂಟು ಕಡೆಗಳಲ್ಲಿ ಉದ್ಘೋಷಿಸಲಾಗಿದೆ.

ದ್ರವ್ಯಸಂಪಾದನಾಯಾಸಃ ಪೂಜಾರ್ಥಂ ನೈವ ವಿದ್ಯತೇ ।
ನಿಷ್ಕಿಂಚನೈರಪಿ ಹರಿಃ ಪೂಜ್ಯತೇ ಹಿ ಧನಂ ವಿನಾ ।
ಸ್ವರೂಪಲಾಭಪೂರ್ಣ್ಯಸ್ಯ ಭಕ್ತಿರೇವ ಪ್ರಯೋಜಿಕಾ । *– 10-49, 50*

ಭಗವಂತನ ಪೂಜೆಗಾಗಿ ದ್ರವ್ಯಗಳನ್ನು ಸಂಪಾದಿಸಲು ಆಯಾಸಪಡಬೇಕಾದದ್ದಿಲ್ಲ. ಏನೂ ಹಣ ಇಲ್ಲದ ಬಡವರೂ ಹರಿಯನ್ನು ಪೂಜಿಸಬಲ್ಲರು. ತನ್ನ ಸ್ವರೂಪದ ಲಾಭದಿಂದಲೇ ಪೂರ್ಣನಾದ ಭಗವಂತನ ತೃಪ್ತಿಗೆ ಭಕ್ತಿಯೊಂದೇ ಪ್ರಯೋಜಕವಾದದ್ದು.

ವನಸ್ಥಾನ್ ಫಲಮಾಲಾದೀನ್ ವಿನಾ ದ್ರವ್ಯಂ ಸುಖಾಗತಾನ್ ।
ಈಷತ್ಪ್ರಯತ್ನತಸ್ಸಾಧ್ಯಾನ್ ಯೋ ನಿತ್ಯಂ ಹ್ಯರ್ಪಯೇದ್ ಬುಧಃ ॥

ತಸ್ಯ ಪ್ರೀತೋ ಜಗನ್ನಾಥೋ ಭವತ್ಯೇವ ನ ಸಂಶಯಃ ।
ಭಕ್ತಾನುಕಂಪೀ ವಿಷ್ಣುರ್ಹಿ ಕಿಮು ವಕ್ತವ್ಯಮೇವ ಹಿ । *– 10-66, 67*

ಏನೂ ಹಣದ ಆವಶ್ಯಕತೆ ಇಲ್ಲದೆ ಅರಣ್ಯದಲ್ಲಿ ಅನಾಯಾಸವಾಗಿ ಸಿಗುವ ಫಲ ಗಡ್ಡೆಗೆಣಸುಗಳನ್ನು ಯಾರು ಭಗವಂತನಿಗೆ ಅರ್ಪಿಸುವನೋ ಅವನ ಬಗ್ಗೆ ಭಗವಂತನು ಪ್ರೀತನಾಗಿಯೇ ತೀರುವನು. ಇದರಲ್ಲಿ ಸಂಶಯವೇ ಇಲ್ಲ. ಶ್ರೀವಿಷ್ಣುಭಕ್ತಾನುಕಂಪಿ ಎಂಬುದು ಶಾಸ್ತ್ರದಲ್ಲಿ ಪ್ರಸಿದ್ಧವಾದುದು ತಾನೇ? ಆ ಬಗ್ಗೆ ಇನ್ನೇನು ಹೇಳಬೇಕಾಗಿದೆ?

ಶರೀರಯಾತ್ರಾಸಿದ್ಧ್ಯರ್ಥಮನ್ನಪಾನಧನಾದಿಕಾನ್ ।
ಸಂಪಾದಯತಿ ಯಾನೇವ ಪೂಜಾರ್ಥಂ ತಾನ್ ಪ್ರಕಲ್ಪಯೇತ್ । *– 10-70*

ದೇಹದ ನಿವಾರಣೆಗಾಗಿ ಯಾವ ಅನ್ನಪಾನೀಯಾದಿಗಳನ್ನು ಸಂಪಾದಿಸಲಾಗುವುದೋ ಅವುಗಳನ್ನೇ ಭಗವಂತನ ಪೂಜೆಗಾಗಿ ವಿನಿಯೋಗಿಸಬೇಕಷ್ಟೇ.

ಕರ್ಮಾದಿಗಳನ್ನು ಅರ್ಪಿಸಬೇಕು

ಮಹಾಕಾರುಣಿಕೋ ವಿಷ್ಣುಃ ಯಸ್ಮಾದ್ ಭೂತಭವಿಷ್ಯಕಾನ್ ।
ಕರ್ಮಸಂಘಾನ್ ದೇವಸಂಘಾನ್ ದಾರಾಪತ್ಯಧನಾಧಿಕಾನ್ ।

ಸಕೃತ್ ಸಮರ್ಪಣಾದೇವ ಹ್ಯನಂತಫಲದೋ ಭವೇತ್ ।
ವಿಧಿವಾಕ್ಯಾನುಸಾರೇಣ ಕೃತಂ ವಿಷ್ಣೌ ಸಮರ್ಪಯೇತ್ । *– 10-75, 76, 77*

ಶ್ರೀವಿಷ್ಣುವು ಮಹಾದಯಾಳು ಆಗಿರುವುದರಿಂದ ಹಿಂದೆ ನಡೆಸಿದ ಮುಂದೆ ನಡೆಸಲಿರುವ ಕರ್ಮಸಮೂಹವನ್ನೂ, ಆ ಕರ್ಮಗಳನ್ನು ನಡೆಸಲು ಸ್ವೀಕರಿಸಿದ ದೇವತೆಗಳನ್ನೂ, ಪತ್ನಿ-ಪುತ್ರಾದಿಗಳನ್ನೂ ಒಮ್ಮೆ ಸಮರ್ಪಿಸಿದ ಮಾತ್ರದಿಂದ ಅನಂತಫಲ ದೊರಕುವುದು. ಆದುದರಿಂದ ಶಾಸ್ತ್ರದ ವಿಧಿವಾಕ್ಯಗಳಿಗೆ ಅನುಗುಣವಾಗಿ ನಡೆಸಿದ ಸಂಧ್ಯಾವಂದನೆ ಮುಂತಾದ ಕರ್ಮಗಳನ್ನು ಶಾಸ್ತ್ರದ ನಿಷೇಧ ವಾಕ್ಯಗಳಿಗನುಗುಣವಾಗಿ ದೂರಮಾಡಿದ ಅಭೋಜ್ಯ ಭಕ್ಷಣಾದಿ ಕರ್ಮಗಳನ್ನೂ ಭಗವಂತನಿಗೆ ಸಮರ್ಪಿಸಬೇಕು.

ಪೂಜೆಯ ಪ್ರಕರಣದಲ್ಲಿ ಈ ಮಾತು ಬಂದಿರುವುದರಿಂದ ಪೂಜೆಯ ಅಂಗವಾಗಿಯೇ ಕರ್ಮಾದಿಗಳ ಸಮರ್ಪಣೆಯನ್ನೂ ನಡೆಸಬೇಕೆಂದು ತಿಳಿದುಬರುವುದು.


ಶ್ರೀಹರಿಯಷ್ಟು ಮಹಾಕಾರುಣಿಕ ಮತ್ತೊಬ್ಬನಿಲ್ಲದಿರುವುದರಿಂದ ಏನೂ ಹಣದ ಆವಶ್ಯಕತೆ ಇಲ್ಲದೆಯೇ ಅವನ ಪೂಜೆಯನ್ನು ನಡೆಸಬಹುದೆಂದು ಮತ್ತೊಮ್ಮೆ ಘೋಷಿಸಲಾಗುವುದು–

ತಸ್ಮಾದೀಶ್ವರಪೂಜಾರ್ಥಂ ನ ದ್ರವ್ಯಾರ್ಜನವಾನ್ ಭವೇತ್ ।
ತಸ್ಮಾನ್ಮಹಾಕಾರುಣಿಕೋ ಹರಿರೇವ ನ ಚಾಪರಃ ॥ *– 10-78*

ಈ ಬಗೆಯಲ್ಲಿ ಶ್ರೀನಾರಾಯಣಪಂಡಿತರ 'ಯೋಗದೀಪಿಕಾ'ದಲ್ಲಿ ಶ್ರೀವಿಷ್ಣುಪೂಜೆಗೆ ಸಂಬಂಧಿಸಿದಂತೆ ವಿಶೇಷವಾಗಿ ಅನುಸಂಧಾನದ ಮೇಲೆ ಹಾಗೂ ಭಾವುಕತೆಯ ಮೇಲೆ ಬೆಳಕು ಚೆಲ್ಲಲಾಗಿದೆ.

* * *

ಶ್ರೀ ಜಯತೀರ್ಥರ ಪದ್ಯಮಾಲಾದಲ್ಲಿ 'ಪೂಜೆ'



ಜಯತೀರ್ಥಾಖ್ಯತರಣಿಃ
ಭಾಸತಾಂ ನೋ ಹೃದಂಬರೇ

೧೨೬ ಪದ್ಯಗಳನ್ನು ಒಳಗೊಂಡ 'ಪದ್ಯಮಾಲಾ' ದೇವಪೂಜೆಯ ಪೂರ್ವಸಿದ್ಧತೆಗೆ ಸಂಬಂಧಿಸಿದ ವಿಚಾರದಿಂದ ಪ್ರಾರಂಭಿಸಿ ಪೂಜೆಯನ್ನು ಪೂರೈಸಿದ ಬಳಿಕ ಪೂಜೆಯ ಪ್ರಸಾದಸ್ವೀಕಾರ ಹಾಗೂ ವಿತರಣೆಗಳಿಗೆ ಸಂಬಂಧಿಸುವ ವಿಚಾರದ ವರೆಗೂ ದೇವಪೂಜೆಯ ಕುರಿತು ಮಾಹಿತಿಗಳನ್ನು ನೀಡುತ್ತಿದೆ.

'ಪದ್ಯಮಾಲಾ' ನೀಡುತ್ತಿರುವ ದೇವಪೂಜೆಯ ಕುರಿತಾದ ಮಾಹಿತಿಗಳನ್ನು ಪೂಜಾವಿಧಾನ, ವಿಧಿ ನಿಷೇಧಗಳು, ಮಂತ್ರಗಳು ಹಾಗೂ ಅನುಸಂಧಾನ ಈ ನಾಲ್ಕು ಅಂಶಗಳಿಗೆ ಸಂಬಂಧಿಸಿದಂತೆ ಪರಿಶೀಲಿಸಬಹುದಾಗಿದೆ.

ಪೂಜಾವಿಧಾನ:

ಭಗವಂತನ ಪೂಜೆ ತಂತ್ರಮಂತ್ರಾತ್ಮಕವಾಗಿದ್ದು, ಅದರಲ್ಲಿ ಮಂತ್ರಗಳಂತೆ ತಂತ್ರಗಳ ಅಂದರೆ ಅಂಗಚೇಷ್ಟೆಗಳ ಪಾತ್ರವೂ ಮಹತ್ತ್ವಪೂರ್ಣವಾದದ್ದು. ಪೂಜೆಗೆ ಸೇರಿದ ಚಟುವಟಿಕೆಗಳಲ್ಲಿ ಯಾವುದು ಆದ ಮೇಲೆ ಯಾವುದು ಎಂಬ ಪೌರ್ವಾಪರ್ಯದ ಮಾಹಿತಿಯಂತೆ ಯಾವ ಚಟುವಟಿಕೆಯನ್ನು ಹೇಗೆ ನಿರ್ವಹಿಸಬೇಕು? ಎಂಬ ಮಾಹಿತಿಯೂ ಅವಶ್ಯಕ. ಈ ಎರಡು ಬಗೆಯ ಮಾಹಿತಿಗಳೂ ಪದ್ಯಮಾಲಾದಿಂದ ದೊರಕಬಲ್ಲವು. ಉದಾಹರಣೆಗೆ 'ಪಯೋ ದಧಿ ಘೃತಂ ಕ್ಷೌದ್ರಂ ಶರ್ಕರಾ ಪಂಚಮಾಮೃತಮ್' (೭೫) ಹೀಗೆ ಪಂಚಾಮೃತವನ್ನು ನಿರ್ದೇಶಿಸುವಾಗಲೇ ಹಾಲು, ಮೊಸರು, ತುಪ್ಪ, ಜೇನು ಹಾಗೂ ಸಕ್ಕರೆ ಈ ಕ್ರಮದಲ್ಲೇ ಪಂಚಾಮೃತಾಭಿಷೇಕ ನಡೆಯಬೇಕೆಂದು ಸೂಚಿತವಾಗುವುದು. ಅರ್ಘ್ಯ, ಪಾದ್ಯ ಮುಂತಾದುವುಗಳಿಗಾಗಿ ಪಂಚಪಾತ್ರಗಳನ್ನು ಯಾವ ಯಾವ ದಿಕ್ಕಿನಲ್ಲಿ ಇಡಬೇಕು. (೫೪, ೫೫, ೫೬) ನಾಭಿ ಮುಂತಾದ ಸ್ಥಳಗಳಲ್ಲಿ ಪಾಪಪುರುಷನ ವಿಸರ್ಜನೆಗೆ ಬೇಕಾಗುವ ಪ್ರಕ್ರಿಯೆ ನಡೆಸುವ ಮುನ್ನ ಹೃದಯದಲ್ಲಿರುವ ಭಗವಂತನನ್ನು ಸುಷುಮ್ನಾನಾಡಿಯ ಮೂಲಕ ಶಿರಸ್ಸಿನಲ್ಲಿ ಧ್ಯಾನಿಸಿಕೊಳ್ಳಬೇಕು. (೩೩) ದೇವಗೃಹವನ್ನು ಪ್ರವೇಶಿಸುವಾಗ ಹೊಸ್ತಿಲನ್ನು ತುಳಿಯ

ಬಾರದು (೧೦). ಪೂಜೆಯ ಬಳಿಕ ತೀರ್ಥಪ್ರಸಾದಾದಿಗಳನ್ನು ಭಗವದ್ ಭಕ್ತರಿಗೆ ಮೊದಲು ನೀಡಿ ಆ ಬಳಿಕ ತಾನು ಸ್ವೀಕರಿಸಬೇಕು (೧೨೩) ಮುಂತಾದ ಚಿಕ್ಕಪುಟ್ಟ ವಿಧಿನಿಷೇಧಗಳನ್ನು ತಿಳಿಸಲೂ ಮರೆಯುವುದಿಲ್ಲ.

ವಿಧಿನಿಷೇಧಗಳು:

ಪೂಜೆಯ ಬೇರೆ ಬೇರೆ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ವಿಧಿನಿಷೇಧಗಳನ್ನೂ ಅಲ್ಲಲ್ಲಿ ಪ್ರಸ್ತಾಪಿಸಲಾಗಿದೆ. ಉದಾ: ಪೂಜೆಯ ಪೂರ್ವ ಸಿದ್ಧತೆಯನ್ನು ತಿಳಿಸುತ್ತ, ಮೂರು ಶ್ಲೋಕಗಳಲ್ಲಿ (೩, ೪, ೫) ದೇವರ ಪೂಜೆಗೆ ಎಂತಹ ಹೂಗಳೇ ಆಗಬೇಕು? ಎಂತಹ ಹೂಗಳು ಆಗಬಾರದು? ಅವುಗಳನ್ನು ಹೇಗೆ ತರಬಾರದು? ಎಂಬ ವಿವರಣೆಯನ್ನು ತಿಳಿಸಲಾಗಿದೆ. ಕಂಚಿನ ಘಂಟೆಯನ್ನು ಬಾರಿಸಬಾರದು (೧೭) ತನಗಾಗಿ ಪೂಜೆಯಾಗಿದ್ದರೆ ತನ್ನ ಹೃದಯದಿಂದ ಆವಾಹನೆ ನಡೆಸಬೇಕು, ಮತ್ತೊಬ್ಬರಿಗಾಗಿ ಪೂಜಿಸುವ ಪ್ರಸಂಗದಲ್ಲಿ ಹಗಲು ಸೂರ್ಯನಲ್ಲಿರುವ, ರಾತ್ರಿ ಅಗ್ನಿಯಲ್ಲಿರುವ ಭಗವಂತನನ್ನು ಆವಾಹಿಸಬೇಕು (೬೯). ಮಂಗಲನೀರಾಜನ ಆದಾಕ್ಷಣ ಮೂಲಮಂತ್ರದಿಂದ ಅಹಿಂಸಾ ಮುಂತಾದ ಎಂಟು ಭಾವಪುಷ್ಪಗಳನ್ನು ಅರ್ಪಿಸಬೇಕು (೧೧೬)

ಮಂತ್ರಗಳು:

ಪೂಜೆಯ ಪ್ರಧಾನ ಅಂಗ ಮಂತ್ರಗಳಾಗಿದ್ದು ಅಂತಹ ಮಂತ್ರಗಳ ಆಧಾರದಲ್ಲಿಯೇ ಪೂಜೆಯ ಯಶಸ್ಸು ನಿಂತಿರುವುದು. ಆದುದರಿಂದ ಪದ್ಯಮಾಲಾದಲ್ಲಿ ಪೂಜೆಯ ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ಮಂತ್ರವನ್ನು ಪಠಿಸಬೇಕು ಎಂದು ಸ್ಪಷ್ಟಪಡಿಸಲಾಗಿದೆ. ಹೆಚ್ಚಿನ ಕಡೆಗಳಲ್ಲಿ ಮಂತ್ರಗಳ ಪ್ರತೀಕಗಳನ್ನಷ್ಟೇ ಉಲ್ಲೇಖಿಸಿ ಮಂತ್ರಗಳನ್ನು ಪರಿಚಯಿಸಿ ಕೊಡಲಾಗುವುದಾದರೆ ಕೆಲವೆಡೆ ಅನುಸಂಧಾನಕ್ಕೆ ಪುಷ್ಟಿ ನೀಡುವಂತಹ ಮಂತ್ರಗಳ ಪೂರ್ಣ ಪಾಠವನ್ನು ನೀಡಲಾಗುವುದು. ಈ ರೀತಿಯಾಗಿ ಸುಮಾರು ಹತ್ತು ಸಂದರ್ಭಗಳಲ್ಲಿ ಮಂತ್ರಗಳ ಪೂರ್ಣಪಾಠವನ್ನು ನೀಡಿದ್ದು ಅಂತಹ ಮಂತ್ರಗಳನ್ನು ಸಾಧಕರ ಉಪಯೋಗಕ್ಕಾಗಿ ಪ್ರಸ್ತುತಪಡಿಸಲಾಗಿದೆ.

ಪದ್ಯಮಾಲಾದಲ್ಲಿ ಉಲ್ಲೇಖಿಸಲಾದ ಪೂರ್ಣಪಾಠದ ಮಂತ್ರಗಳು

ಪೂಜೆಯ ಸಂಕಲ್ಪದಲ್ಲಿ ಹೀಗೆ ಪ್ರಾರ್ಥಿಸಬೇಕು:

ಅನಂತಕಲ್ಯಾಣಗುಣೈಕಸಿಂಧುಶ್ರೀವಿಷ್ಣುನಾ ಪ್ರೇರಿತಮಾನಸೋಽಹಮ್ ।
ತಸ್ಯೈವ ವೀರ್ಯೇಣ ಬಲೇನ ತೇಜಸಾ ಸಂಜೀವಿತಸ್ವಾಂತವಪುರ್ಧಿದಿಂದ್ರಿಯಃ ।
ಪ್ರೀತ್ಯರ್ಥಮಸ್ಯೈವ ಕರೋಮಿ ಪೂಜಾವಿಧಿಂ ಪ್ರದಿಷ್ಟಂ ಖಲು ತಂತ್ರಸಾರೇ ।
ಬ್ರಹ್ಮಾಂಡಸಾಹಸ್ರಪತೇರ್ದಯಾಲೋರ್ಭಕ್ತ್ಯಾ ಯಥಾಶಕ್ತಿ ಯಥೈವ ಸಂಪತ್।

ಅನಂತಕಲ್ಯಾಣಗುಣಗಳಿಗೆ ಮುಖ್ಯಾಸರೆ ಆಗಿರುವ ಶ್ರೀವಿಷ್ಣು ನನ್ನ ಮನಸ್ಸನ್ನು ಪ್ರೇರಿಸಿರುವನು. ಅವನದ್ದೇ ವೀರ್ಯ, ಬಲ, ತೇಜಸ್ಸುಗಳಿಂದ ನನ್ನ ಅಂತಃಕರಣ, ದೇಹ, ಬುದ್ಧಿ, ಇಂದ್ರಿಯಗಳೆಲ್ಲ ಚೇತರಿಕೆಗೆ ಒಳಗಾಗಿವೆ. ತಂತ್ರಸಾರದಲ್ಲಿ ಅವನೇ ತನ್ನನ್ನು ಹೇಗೆ ಪೂಜಿಸಬೇಕೆಂಬುದನ್ನು ಉಪದೇಶಿಸಿರುವನು. ಅದಕ್ಕನುಗುಣವಾಗಿ ಅವನ ಪ್ರೀತಿಗಾಗಿಯೇ

ಅನಂತ ಬ್ರಹ್ಮಾಂಡನಾಯಕನಾದ ದಯಾಸಾಗರನಾದ ಅವನ ಮೇಲಿನ ಭಕ್ತಿಯಿಂದ ನನ್ನ ಸಾಮರ್ಥ್ಯ ಹಾಗೂ ಸಂಪತ್ತುಗಳಿಗೆ ಅನುಗುಣವಾಗಿ ಪೂಜಿಸುವೆ.

ಕೈಜೋಡಿಸಿ ಸಲ್ಲಿಸಬೇಕಾದ ಪ್ರಾರ್ಥನೆ:

ಆರಾಧ್ಯಸೇ ಪ್ರಾಣಭೃತಾಂ ಪ್ರಣೇತ್ರಾ
ಪ್ರಾಣಾಧಿನಾಥೇನ ಸಮೀರಣೇನ ।
ನಾರಾಯಣ ಜ್ಞಾನಸುಖೈಕಪೂರ್ಣ
ಸ್ವಾಮಿನ್ ಮಮ ಶ್ರೀರಮಣ ಪ್ರಸೀದ ॥ – (೩೯)

ಎಲ್ಲ ಜೀವರಿಗೆ ಅಧಿಪತಿಯಾದ, ಪ್ರಾಣತತ್ವದ ಮುಖ್ಯಾಭಿಮಾನಿಯಾದ, ಸರ್ವ ಪ್ರೇರಕನಾದ ಪ್ರಾಣದೇವನಿಂದ ನೀನು ಯಾವಾಗಲೂ ಪೂಜಿಸಲ್ಪಡುತ್ತಿರುವಿ. ಹೇ ನಾರಾಯಣ! ಜ್ಞಾನಾನಂದಗಳಿಂದ ತುಂಬಿರುವವನೇ, ಲಕ್ಷ್ಮೀರಮಣ ನನ್ನ ಬಗ್ಗೆ ಸಂತುಷ್ಟನಾಗು!

ಭಗವನ್ ಯನ್ಮಯಾ ಕರ್ಮ ಶುಭಂ ಕಾರಯಸಿ ಪ್ರಭೋ ।
ತತ್ಸರ್ವಂ ವಿಷ್ಣುಪೂಜಾsಸ್ತು ತವ ದೇವ ಪ್ರಸಾದತಃ ॥ – (೪೧)

ಹೇ ದೇವ, ನೀನು ಅನುಗ್ರಹಿಸಿ ನನ್ನಿಂದ ಏನೆಲ್ಲ ಶುಭ ಕೆಲಸಗಳನ್ನು ಮಾಡಿಸುವಿಯೋ ಅವೆಲ್ಲ ನಿನ್ನ ಪೂಜೆಯಂತೆ ನಿನಗೆ ಪ್ರೀತಿಕರವಾಗಿ ಪರಿಣಮಿಸಲಿ!

ಆವಾಹನೆಯ ಮಂತ್ರ:

ಏಹ್ಯೇಹಿ ಮಮ ಹೃತ್ಪದ್ಮಸ್ಥಿತ ಶ್ರೀಪುರುಷೋತ್ತಮ ।
ಆವಾಹಯಾಮಿ ಪೀಠೇ ತ್ವಾಂ ಪ್ರತಿಮಾಯಾಂ ರಮಾಪತೇ ॥ – (೬೪)

ನನ್ನ ಹೃದಯಕಮಲದಲ್ಲಿ ನೆಲೆಸಿರುವ ಹೇ ಪುರುಷೋತ್ತಮ ಇದೋ ಬಾ. ಪೀಠದಲ್ಲಿರುವ ಪ್ರತಿಮೆಯಲ್ಲಿ ನಿನ್ನನ್ನು ಆವಾಹಿಸುವೆ.

ಆವಾಹನೆಯ ಬಳಿಕ ಪ್ರಾರ್ಥನೆಯ ಮಂತ್ರ:

ಯಾಗಾವಸಾನಪರ್ಯಂತಮತ್ರ ಸ್ಥಿತ್ವಾ ಜನಾರ್ದನ ।
ಭಕ್ತಸ್ಯ ಮಮ ಪೂಜಾಂ ತ್ವಂ ಗೃಹೀತ್ವಾ ಪಾಹಿ ಮಾಂ ವಿಭೋ ॥
– (೬೫)

ಹೇ ವಿಭೋ, ಪೂಜೆ ಮುಗಿಯುವವರೆಗೆ ಈ ಪ್ರತಿಮೆಯಲ್ಲಿದ್ದು ನನ್ನ ಪೂಜೆಯನ್ನು ಸ್ವೀಕರಿಸಿ ನನ್ನನ್ನು ಪೊರೆ.

ಸ್ನಾನಕ್ಕಾಗಿ ಪ್ರಾರ್ಥನೆ:

ಏಹಿ ಶ್ರೀಭಗವನ್ ವಿಷ್ಣೋ ಸ್ನಾನಾರ್ಥಂ ಮಜ್ಜನಾಲಯಮ್ ॥ – (೬೯)

ಹೇ ಭಗವನ್ ಸ್ನಾನಕ್ಕಾಗಿ ಸ್ನಾನ ಗೃಹಕ್ಕೆ ಚಿತ್ತೈಸು.

ಆಪೋಶನ ಸ್ವೀಕಾರಕ್ಕೆ ಪ್ರಾರ್ಥನೆ:

ಸುಧಾರಸಂ ಸುವಿಪುಲಮಾಪೋಶನಮಿದಂ ತವ ।
ಗೃಹಾಣ ತ್ವಂ ಸುರಶ್ರೇಷ್ಠ ಯಥೇಷ್ಟಮುಪಭುಜ್ಯತಾಮ್ ॥ *–(೧೦೧)*

ಕಲಶದಿಂದ ತರಲ್ಪಟ್ಟ ಅಮೃತರಸ ಆಪೋಶನವಾಗಿ ನಿನಗೆ ನೀಡಲ್ಪಟ್ಟಿದೆ. ಇದನ್ನು ನಿನ್ನ ಇಚ್ಛೆಗನುಗುಣವಾಗಿ ಅನುಭವಿಸು.

ತಾಂಬೂಲ ಸ್ವೀಕಾರಕ್ಕೆ ಪ್ರಾರ್ಥನೆ:

ಪೂಗೀಫಲಂ ಸಖದಿರಚೂರ್ಣಕರ್ಪೂರಸಂಯುತಮ್ ।
ನಾಗವಲ್ಲೀದಲೈರ್ಯುಕ್ತಂ ತಾಂಬೂಲಂ ಗೃಹ್ಯತಾಂ ವಿಭೋ ॥ *–(೧೧೦)*

ಹೇ ವಿಭೋ, ಕಗ್ಗಲಿ ಮರದ ಚೂರ್ಣ, ಕರ್ಪೂರ ಇವುಗಳಿಂದ ಕೂಡಿದ ಅಡಿಕೆ ಹಣ್ಣು ಹಾಗೂ ವೀಳ್ಯದೆಲೆಗಳಿಂದ ಕೂಡಿದ ತಾಂಬೂಲವನ್ನು ಸ್ವೀಕರಿಸು.

ಪ್ರತ್ಯಾವಾಹನೆಗೆ ಪ್ರಾರ್ಥನೆ:

ಯಾಚೇಽಹಂ ಹೃಷೀಕೇಶ ನಮಾಮಿ ಪುರುಷೋತ್ತಮ ।
ಹೃದಿ ಮೇ ಕುರು ಸಂವಾಸಂ ಶ್ರಿಯಾ ಸಹ ಜಗತ್ಪತೇ ॥

ಹೇ ಜಗತ್‌ಸ್ವಾಮಿ! ಹೃಷೀಕೇಶ! ನಿನ್ನನ್ನು ಬೇಡಿಕೊಳ್ಳುವೆ. ಶ್ರೀದೇವಿಯಿಂದ ಸಹಿತನಾಗಿ ನನ್ನ ಹೃದಯದಲ್ಲಿ ನೆಲೆಸು.

ಅನುಸಂಧಾನ:

ಪೂಜಾಕಾಲದಲ್ಲಿ ಸಂಕಲ್ಪ, ಆವಾಹನೆ, ಅಭಿಷೇಕ, ನೈವೇದ್ಯ, ಪ್ರತ್ಯಾವಾಹನೆ ನಡೆಸುವ ಸಂದರ್ಭಗಳಲ್ಲೆಲ್ಲ ಯಾವ ಅನುಸಂಧಾನ ಇರಬೇಕೆಂಬುದಕ್ಕೆ ಬೆಳಕುಚೆಲ್ಲು ವಂತಹ ಮಾತು ಮತ್ತು ಮಂತ್ರಗಳು ಪದ್ಯಮಾಲಾದಲ್ಲಿ ಇವೆ.

ಪೂಜಶ್ಚ ಭಗವಾನ್ನಿತ್ಯಮಿತ್ಯಧ್ಯಾಯೇ ಯಥಾಕ್ರಮಃ ।
ಶ್ರೀ ಮಧ್ವಗುರುಣಾ ಪ್ರೋಕ್ತಃ ಪೀಠಾವರಣಪೂಜನೇ ॥
ಸೂತ್ರತ್ವಾತ್ತಸ್ಯ ಬೋಧಾರ್ಥಂ ಕ್ವಚಿದ್ವಾಕ್ಷ್ಯಾಮಿ ವಿಸ್ತರಮ್ ॥ *–(೫೯)*

ತಂತ್ರಸಾರಸಂಗ್ರಹದಲ್ಲಿ (೧–೪೯) **'ಪೂಜ್ಯಶ್ಚ ಭಗವಾನ್ನಿತ್ಯಂ...'** ಇತ್ಯಾದಿ ಮಾತು ಗಳಲ್ಲಿ ದೇವಪೂಜೆಗೆ ಸಂಬಂಧಿಸಿದಂತೆ ಪೀಠಪೂಜೆ ಹಾಗೂ ಆವರಣಪೂಜೆಗಳ ಕ್ರಮವನ್ನು ತಿಳಿಸಲಾಗಿದೆ. ಸೂತ್ರಪ್ರಾಯವಾದ ಮಾತುಗಳಲ್ಲಿ ಸಂಕ್ಷಿಪ್ತವಾಗಿ ಹೇಳಲಾದ ಆ ಎರಡು ಪ್ರಮೇಯಗಳಲ್ಲಿ ಆವರಣಪೂಜೆಯ ಬಗ್ಗೆ ವಿಸ್ತಾರವನ್ನು ತಿಳಿಸುವೆನು ಎಂದು ಪ್ರತಿಜ್ಞೆಗೈದ ಶ್ರೀ ಜಯತೀರ್ಥರು 'ಪೀಠಪೂಜಾಂ ವಿಧಾಯಾಥ.....' ಎಂದು ಪೀಠ ಪೂಜೆಯ ವಿಧಾನವನ್ನು ಸೂಕ್ಷ್ಮವಾಗಿ ಹೇಳಿ ಮುಗಿಸಿ 'ಹರಿಮಾವಾಹಯೇದ್ ಭಕ್ತ್ಯಾ ತದ್ವಿಧಿಃ ಪ್ರೋಚ್ಯತೇಽಧುನಾ' ಭಕ್ತಿಯಿಂದ ಶ್ರೀಹರಿಯನ್ನು ಹೇಗೆ ಆವಾಹಿಸಬೇಕೆಂದು ತಿಳಿಸಿರುವರು. ಮುಂದೆ ಕೆಳಮುಖವಾಗಿರುವ ಹೃತ್ಕಮಲವನ್ನು 'ಯಂ' ಎಂಬ ವಾಯು ಬೀಜದಿಂದ ಮೇಲ್ಮುಖವಾಗಿಸಿ ಅನುಸಂಧಾನಸೂರ್ಯನಿಂದ ಅದರ ಮೊಗ್ಗನ್ನು ಅರಳಿಸಿ,

ಅದರ ಕರ್ಣಿಕೆಯ ಮಧ್ಯಭಾಗದಲ್ಲಿ ಇರುವ ಶ್ರೀಮನ್ನಾರಾಯಣನನ್ನು 'ಉದ್ಯದ್ ಭಾಸ್ವತ್.....' ಎಂಬ ಮಂತ್ರದಿಂದ ಧ್ಯಾನಿಸಿ ಪುಷ್ಪತುಳಸಿಗಳಿಂದ ಕೂಡಿದ ಕೈಗಳ ಬೊಗಸೆಯಿಂದ ನಮಿಸಿ ಆವಾಹನ ನಡೆಸಬೇಕೆಂದು ಅನುಸಂಧಾನಕ್ಕೆ ಪುಷ್ಟಿ ದೊರೆಯುವಂತೆ ತಿಳಿಸಲಾಗಿದೆ [೬೦ರಿಂದ ೬೪] ಪಾದುಕಾರ್ಪಣ, ಅರ್ಘ್ಯ, ಪಾದ್ಯ, ಆಚಮನ, ಮಧುಪರ್ಕ, ಪುನರಾಚಮನ, ಪಂಚಾಮೃತಸ್ನಾನ, ಶುದ್ಧೋದಕಸ್ನಾನ, ಅಂಗಮಾರ್ಜನ, ಪೀತಾಂಬರ, ಭೂಷಣ, ಯಜ್ಞೋಪವೀತ, ಆಸನ ಈ ಉಪಚಾರಗಳನ್ನು ಸಮರ್ಪಿಸಬೇಕೆಂದು ಸಾಮಾನ್ಯವಾಗಿ ತಿಳಿಸಲಾಗಿದೆ. ಬಳಿಕ ಆವರಣಪೂಜೆಯನ್ನು ವಿಸ್ತಾರವಾಗಿ ತಿಳಿಸುತ್ತ ಮೊದಲು ಚಕ್ರಶಂಖಾದಿ ಆಯುಧಗಳನ್ನು ದುರ್ಗಾದೇವಿ, ಶ್ರೀದೇವಿ ಮುಂತಾದ ದೇವತೆಗಳ ರೂಪದಲ್ಲಿ ಪೂಜಿಸಬೇಕೆಂದು ಹೇಳಲಾಗಿದೆ [೮೧, ೮೨, ೮೩] ಮುಂದೆ 'ಅಥಾವರಣಪೂಜಾಯಾಂ....' ಎಂದು ಪ್ರಾರಂಭಿಸಿ ಹತ್ತು ಪದ್ಯಗಳಲ್ಲಿ [೮೪.....೯೪] ಭಗವಂತನ ಸುತ್ತಮುತ್ತ ಎಲ್ಲೆಲ್ಲಿ ಯಾವ ಯಾವ ದೇವತೆಯನ್ನು ಪೂಜಿಸಬೇಕೆಂದು ತಿಳಿಸಲಾಗಿದೆ. ದಿಕ್ಪಾಲಕರ ಪೂಜೆಯ ಅನಂತರ ವಜ್ರನಾಭನೇ ಮುಂತಾದ ಹನ್ನೆರಡು ದ್ವಾರಪಾಲಕರನ್ನೂ ನಮಃ ಎಂದು ಹೇಳುವ ಮೂಲಕ ಗೌರವಿಸಬೇಕು.... [ನಮಶ್ಶಬ್ದೇನ ಪೂಜಯೇತ....] ಎನ್ನಲಾಗಿದೆ.

ಹೀಗೆ ಅನುಸಂಧಾನಕ್ಕೆ ಪೋಷಕವಾದ ವಿಚಾರಗಳು ಪದ್ಯಮಾಲಾದಲ್ಲಿ ಬಂದಿವೆ.

* * *

ಸರ್ವಾಧಿಕಾರಿಕ ಶ್ರೀವಿಷ್ಣುಪೂಜೆ

ಪ್ರತಿಮಾಮಾಧ್ಯಮದಲ್ಲಿ ಶ್ರೀವಿಷ್ಣುವನ್ನು ಆರಾಧಿಸುವ ಅರ್ಹತೆ ಉಪನಯನ ಸಂಸ್ಕಾರಕ್ಕೊಳಗಾದವರಿಗಷ್ಟೇ. ಉಪನಯನಸಂಸ್ಕಾರಕ್ಕೆ ಅನರ್ಹರಾದವರು ಅಧಿಕಾರಿಗಳಿಂದ ನಡೆಸಲ್ಪಡುವ ಶ್ರೀವಿಷ್ಣುವಿನ ಆರಾಧನೆಗೆ ಬೇಕಾದ ಸಿದ್ಧತೆಯನ್ನು ಒದಗಿಸುವ ಮೂಲಕ ಹಾಗೂ ಪುಷ್ಪ ಮುಂತಾದ ಸಾಮಗ್ರಿಗಳನ್ನು ಕಲ್ಪಿಸುವ ಮೂಲಕ ಆ ಆರಾಧನೆಯ ಫಲವನ್ನು ಪಡೆಯಬಹುದಾಗಿದೆ.

ಅಲ್ಲದೆ, ಪ್ರತಿಯೊಬ್ಬರೂ ಶ್ರೀವಿಷ್ಣುವಿನ ಆರಾಧನೆಯನ್ನೂ ನಡೆಸಬಹುದು. ಅದಕ್ಕೆ ಪ್ರತೀಕಗಳು ಮಾತ್ರ ಬೇರೆ.

ಹನ್ನೊಂದು ಪ್ರತೀಕಗಳು:

ಶ್ರೀಕೃಷ್ಣ ಉದ್ಧವಗೀತೆಯಲ್ಲಿ ತನ್ನ ಆರಾಧನೆಗೆ ಹನ್ನೊಂದು ಪ್ರತೀಕಗಳನ್ನು ಉಲ್ಲೇಖಿಸಿ, ಅವುಗಳ ಮಾಧ್ಯಮದಲ್ಲಿ ನಡೆಸಬೇಕಾದ ಬೇರೆ ಬೇರೆ ಆರಾಧನಾ ಕ್ರಮವನ್ನೂ ಬೋಧಿಸಿರುವನು. ಇವುಗಳಲ್ಲಿ ಕೆಲವು ಪ್ರತೀಕಗಳ ಆರಾಧನೆ ಸರ್ವಾಧಿಕಾರಿಕ. ಅಂದರೆ ಪ್ರತಿಯೊಂದು ವರ್ಣಾಶ್ರಮದವರೂ ಸ್ತ್ರೀಯರೂ ಯಾವುದೇ ಸ್ಥಿತಿಯಲ್ಲಿರುವವರೂ ಯಾವುದೇ ಸ್ಥಳದಲ್ಲಿ, ಯಾವುದೇ ಕಾಲದಲ್ಲಿ ಇರುವವರೂ ನಡೆಸಬಹುದಾದ, ನಡೆಸಬೇಕಾದ, ಸರಳ, ಆದರೆ ಮಹತ್ತ್ವಪೂರ್ಣವಾದ ಆರಾಧನೆ. ಸೂರ್ಯ, ಅಗ್ನಿ, ಬ್ರಾಹ್ಮಣರು, ಹಸುಗಳು, ವಿಷ್ಣುಭಕ್ತ, ಹೃದಯಾಕಾಶ, ವಾಯುದೇವ, ನೀರು, ಭೂಮಿ,

ತಾನು (ಆರಾಧಿಸುವ ಜೀವನು) ಹಾಗೂ ಎಲ್ಲ ಜೀವಿಗಳು –ಹೀಗೆ ಹನ್ನೊಂದು ಪ್ರತೀಕಗಳನ್ನು ಉಲ್ಲೇಖಿಸಲಾಗಿದೆ.375

ಅವುಗಳಲ್ಲಿ ತನ್ನನ್ನು ಹೇಗೆ ಆರಾಧಿಸಬೇಕೆಂದೂ ಶ್ರೀಕೃಷ್ಣ ತಿಳಿಸಿರುವನು –ಸೂರ್ಯನಲ್ಲಿ ವೇದದಿಂದ, ಗಾಯತ್ರೀಮಂತ್ರದಿಂದ, ಅಗ್ನಿಯಲ್ಲಿ ಹವಿಸ್ಸನ್ನು ಸಮರ್ಪಿಸುವ ಮೂಲಕ, ಬ್ರಾಹ್ಮಣಶ್ರೇಷ್ಠನಲ್ಲಿ ಆತಿಥ್ಯವನ್ನು ನೀಡುವ ಮೂಲಕ ಹಸುಗಳಲ್ಲಿ ಹುಲ್ಲು ಹಿಂಡಿ ಹಾಕುವ ಮೂಲಕ, ವಿಷ್ಣುಭಕ್ತನಲ್ಲಿ ಅಳಿಯ ಮುಂತಾದ ಬಂಧುಗಳಿಗೆ ನೀಡುವ ಸತ್ಕಾರವನ್ನು ನೀಡುವ ಮೂಲಕ, ಹೃದಯಾಕಾಶದಲ್ಲಿ ಧ್ಯಾನ ನಡೆಸುವ ಮೂಲಕ, ವಾಯುದೇವನಲ್ಲಿ ರುದ್ರಾದಿ ದೇವತೆಗಳಿಗಿಂತೆಲ್ಲ ಉತ್ತಮನಾಗಿರುವವನೆಂದು ತಿಳಿಯುವ ಮೂಲಕ ನೀರಿನಲ್ಲಿ ಚಂದನ ಪುಷ್ಪಾದಿ ದ್ರವ್ಯಗಳಿಂದ, ಭೂಮಿಯಲ್ಲಿ ಮಂಡಲ ಬರೆದು ಮಂತ್ರಗಳ ಮೂಲಕ, ಅರ್ಚಕನು ತನ್ನಲ್ಲಿ ಇರುವ ದೇವರನ್ನು ಭೋಜನಾದಿ ಭೋಗಗಳಿಂದ, ಸಕಲ ಜೀವಿಗಳಲ್ಲೂ ಅಂತರ್ಯಾಮಿಯಾಗಿ ಭಗವಂತನಿರುವನೆಂದು ಆರಾಧಿಸಬೇಕು.376

ಈ ಹನ್ನೊಂದು ಪ್ರತೀಕಗಳಲ್ಲಿ ಬೇರೆ ಬೇರೆ ಬಗೆಯಿಂದ ಅರ್ಚಿಸುವಾಗಲೂ ಶಂಖ ಚಕ್ರ ಗದಾ ಪದ್ಮಗಳನ್ನು ಧರಿಸಿರುವ ಚತುರ್ಭುಜವುಳ್ಳ ಶಾಂತವಾದ ಭಗವಂತನ ರೂಪವನ್ನು ಧ್ಯಾನಿಸುತ್ತಿರಬೇಕು.377

ಈ ಹನ್ನೊಂದು ಪ್ರತೀಕಗಳಲ್ಲಿ ಬ್ರಾಹ್ಮಣ, ಹಸು, ವಿಷ್ಣುಭಕ್ತ, ಅರ್ಚಕನ ಸ್ವರೂಪ ಹಾಗೂ ಸರ್ವಜೀವಿಗಳು –ಈ ಪ್ರತೀಕಗಳಲ್ಲಿ ಯಾರೂ ಯಾವಾಗಲೂ ಎಲ್ಲೂ ಭಗವಂತನನ್ನು ಆರಾಧಿಸಬಹುದು.

---

375. ಸೂರ್ಯೋಽಗ್ನಿರ್ಬ್ರಾಹ್ಮಣಾ ಗಾವೋ, ವೈಷ್ಣವಃ ಖಂ ಮರುಜ್ಜಲಮ್ ।
ಭೂರಾತ್ಮಾ ಸರ್ವಭೂತಾನಿ ಭದ್ರ ಪೂಜಾಪದಾನಿ ಮೇ ॥ *–ಭಾಗ 11-11-42*

376. ಸೂರ್ಯೇ ತು ವಿದ್ಯಯಾ ತ್ರಯ್ಯಾ ಹವಿಷಾಽಗ್ನೌ ಯಜೇತ ಮಾಮ್ ।
ಆತಿಥ್ಯೇನ ತು ವಿಪ್ರಾಗ್ರ್ಯೇ ಗೋಷ್ಠೇ ಗಾ ಯವಸಾದಿನಾ ॥
ವೈಷ್ಣವೇ ಬಂಧುಸತ್ಕೃತ್ಯಾ ಹೃದಿ ಖೇ ಧ್ಯಾನನಿಷ್ಠಯಾ ।
ವಾಯೌ ಮುಖ್ಯಧಿಯಾ ತೋಯೇ ದ್ರವ್ಯೈಸ್ತೋಯಪುರಸ್ಕೃತೈಃ ॥
ಸ್ಥಂಡಿಲೇ ಮಂತ್ರಹೃದಯೈರ್ಭೋಗೈರಾತ್ಮಾನಮಾತ್ಮನಿ ।
ಕ್ಷೇತ್ರಜ್ಞಂ ಸರ್ವಭೂತೇಷು ಸಮತ್ವೇನ ಯಜೇತ ಮಾಮ್ ॥
– ಭಾಗ 11-11-43, 44, 45

377. ಧಿಷ್ಣ್ಯೇಷ್ವೇತೇಷು ಮದ್ರೂಪಂ ಶಂಖಚಕ್ರಗದಾಂಬುಜೈಃ ।
ಯುಕ್ತಂ ಚತುರ್ಭುಜಂ ಶಾಂತಂ ಧ್ಯಾಯನ್ನರ್ಚೇತ್ ಸಮಾಹಿತಃ ॥
– ಭಾಗ. 11-11-46

* ಹನ್ನೊಂದನೆಯ ಪ್ರತೀಕಗಳ ಕುರಿತಾದ ಇದೇ ಮಾತಗಳು ಪದ್ಮಪುರಾಣದಲ್ಲೂ (ಪಾತಾಲಖಂಡ 84-63....67) ಬಂದಿವೆ.

ಪ್ರಯಾಣಾದಿಗಳ ಪ್ರಸಂಗಗಳಲ್ಲೂ ಆಶೌಚದ ಸಂದರ್ಭಗಳಲ್ಲೂ ಸಾಧಕನು ತಾನು ಭೋಜನ–ನಿದ್ರೆ–ಸ್ನಾನಾದಿಗಳನ್ನು ನಡೆಸುವಾಗ ತನ್ನಲ್ಲಿ 'ಆತ್ಮಾ' ಎಂಬ ಹೆಸರಿನ ಚತುರ್ಭುಜ ಶಂಖಾದಿಧಾರಿಯಾಗಿ ಇರುವ ಭಗವಂತನಿಗೆ ನೀಡಲಾಗುವ ಉಪಚಾರಗಳೆಂದು ಅನುಸಂಧಾನ ಮಾಡುವ ಮೂಲಕ ತನ್ನ ಪ್ರತೀಕದಲ್ಲಿ ಭಗವಂತನನ್ನು ಆರಾಧಿಸಿದಂತಾಗುವುದು.378 ನಾನು ಇಂದ್ರಿಯಗಳ ಮೂಲಕ ವಿಷಯಪದಾರ್ಥಗಳಲ್ಲೂ ಭೋಗಿಸುವಾಗ, ಶುಭಭಾಗವನ್ನು ಶ್ರೀಹರಿ ಭೋಗಿಸುವನು ಎಂದು ಭಾವಿಸಬೇಕು.379

ಹಾಗೆಯೇ ತನ್ನ ಸುತ್ತುಮುತ್ತಲಿರುವ ಮಾನವರು, ಪಶುಪಕ್ಷಿಗಳು ಇವೆಲ್ಲರ ಚಲನವಲನಗಳಲ್ಲಿ ಭಗವಂತನ ಪಾತ್ರವನ್ನು ಗುರುತಿಸಿ, ಆ ಪ್ರತೀಕದಲ್ಲೂ ಪೂಜಿಸಬಹುದಾಗಿದೆ. ಆ ಜೀವಿಗಳಿಗೆ ಏನಾದರೂ ಉಪಕಾರ ಸಲ್ಲಿಸಿ, ಅದರಿಂದಾಗಿ ಅವು ಸಂತುಷ್ಟಗಳಾದರೆ, ಅಲ್ಲಿರುವ ಪರಮಾತ್ಮನು ಸಂತುಷ್ಟನಾದನೆಂದು ಭಾವಿಸಬಹುದಾಗಿದೆ.380

* * *

---

378. ಸ್ವಾತ್ಮನಿಸ್ಥೋ ಹರಿಃ ಪೂಜ್ಯ ಆತ್ಮನಾಮಾಶನಾದಿಕೈಃ ।
ತತ್ಸಂಬಂಧಾದಾತ್ಮಶಬ್ದೋ ಜೀವೇ ಸ್ಯಾದುಪಚಾರತಃ ।
— *ಆತ್ಮಸಂಹಿತಾ (ಭಾ.ತಾ.ನಿ. 11-11-44)*

379. ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವ ಚ ।
ಅಧಿಷ್ಠಾಯ ಮನಶ್ಚಾಯಂ ವಿಷಯಾನುಪಸೇವತೇ ॥ —*ಗೀ. 15.9*

* ಇಂದ್ರಿಯದ್ವಾರಾ ಸೋಽಪಿ ಭುಂಕ್ತೇ —*ಗೀ.ಭಾ.*

* ಭುಂಕ್ತೇ ಹರಿಃ ಶುಭಾನ್ ಭೋಗಾನಿಂದ್ರಿಯೇಷು ವ್ಯವಸ್ಥಿತಃ ।
ಪೂರ್ಣಾನಂದೋಽಪಿ ಭಗವಾನ್ ಕ್ರೀಡಯಾ ಭುಂಕ್ತ ಏವ ತು ॥ —*ಗೀ.ಭಾ.*

380. ತಸ್ಯ ಪ್ರಾಣ್ಯುಪಕಾರೇಣ ಸಂತುಷ್ಟೋ ಭವತೀಶ್ವರಃ । —*ಪ್ರವೃತ್ತ (ಗೀ.ತಾ. 6-3)*

ನೂರು ಪದ್ಯಗಳ ಬೆಳಕಿನಡಿ

ವೈಷ್ಣವಪ್ರಸಂಸೆ–ವೈಷ್ಣವಕರ್ತವ್ಯ–ವೈಷ್ಣವಗುಣ

ಸ್ಮೃತಿಪುರಾಣಗಳಲ್ಲಿ ವೈಷ್ಣವನನ್ನು ಅಂದರೆ ಶ್ರೀವಿಷ್ಣುಭಕ್ತನನ್ನು ಎಷ್ಟು ಪ್ರಶಂಸಿಸಲಾಗಿದೆ ಎಂಬುದನ್ನು ಪರಿಶೀಲಿಸಿದಲ್ಲಿ ವೈಷ್ಣವತ್ವವು ಎಷ್ಟು ಪ್ರಮುಖವಾದದ್ದೆಂದು ಸ್ಪಷ್ಟವಾಗುವುದು. ಈ ಉದ್ದೇಶದಿಂದಲೇ ವೈಷ್ಣವಪ್ರಶಂಸೆಯ ಮಾತುಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಇಷ್ಟೊಂದು ದುರ್ಲಭವಾದ ವೈಷ್ಣವತ್ವ ಭಗವದನುಗ್ರಹದಿಂದಾಗಿ ದೊರಕಿದೆ ಎಂದರೆ ಅದನ್ನು ಹೇಗೆ ಉಳಿಸಿಕೊಳ್ಳಬೇಕು? ಹೇಗೆ ಬೆಳೆಸಿಕೊಳ್ಳಬೇಕು? ಎಂಬುದಾಗಿ ವೈಷ್ಣವರು ಚಿಂತನಾಮಗ್ನರಾದಾಗ ಸ್ಮೃತಿಪುರಾಣಗಳಲ್ಲಿ ಅಲ್ಲಲ್ಲಿ ಪ್ರಸ್ತುತಗಳಾದ ವೈಷ್ಣವಗುಣಗಳನ್ನೂ ವೈಷ್ಣವಕರ್ತವ್ಯಗಳನ್ನೂ ಆದಷ್ಟು ತಮ್ಮಲ್ಲಿ ಅಳವಡಿಸಿಕೊಳ್ಳಲು ಯತ್ನಿಸಬೇಕು. ವಿಧಿಮುಖವಾದ ನಿರೂಪಣೆಯ ಮಾತುಗಳಿಂದ ನೇರವಾಗಿ ಅರ್ಥವನ್ನು ಗ್ರಹಿಸುವುದಾದರೆ, ನಿಷೇಧಮುಖದ ನಿರೂಪಣೆಯ ಮಾತುಗಳಿಂದ ವಿಧಿಮುಖದ ಸಂದೇಶಗಳಿಗೆ ಸೂಚಕಗಳಾಗುವಂತೆ ಅರ್ಥ ಹೊರಡಿಸಬೇಕು.

ವೈಷ್ಣವ ಪ್ರಶಂಸೆ

(ವಿಧಿಮುಖದ ನಿರೂಪಣೆಯಲ್ಲಿ)

ವಿಶ್ವವ್ಯಾಪಿ ವೈಷ್ಣವಜಾತಿ

೧. ಬ್ರಹ್ಮಕ್ಷತ್ರಿಯವಿಟ್‌ಶೂದ್ರಾಶ್ಚತಸ್ರೋ ಜಾತಯೋ ಯಥಾ ।
ಸ್ವತಂತ್ರಾ ಜಾತಿರೇಕಾ ಚ ವಿಶ್ವಸಿನ್ ವೈಷ್ಣವಾಭಿಧಾ ॥

–ಬ್ರಹ್ಮವೈವರ್ತ 1-12-42

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ ಎಂದು ನಾಲ್ಕು ಜಾತಿಗಳಿರುವಂತೆ ಯಾವುದೇ ಪ್ರದೇಶದ, ಕಾಲದ, ಪಂಗಡದ, ವರ್ಗದ ಸಂಪರ್ಕಕ್ಕೆ ಒಳಗಾಗದೆ ಎಲ್ಲೆಡೆ, ಎಲ್ಲ ಕಾಲದಲ್ಲಿ ವ್ಯಾಪಿಸಿರುವ ಜಾತಿ ವೈಷ್ಣವ ಹೆಸರಿನ ಜಾತಿ.381

ದೇವತೆಗಳು ಅನಾದಿವೈಷ್ಣವರು

೨. ಅನಾದಿವೈಷ್ಣವಾ ಏವ ದೇವತಾಸ್ತು ಸ್ವಭಾವತಃ ।
ವಿಪರೀತಾಸ್ತತೋ ದೈತ್ಯಾಃ ಸದೈವಾನಾದಿಕಾಲತಃ ।

381. **ವಿಶೇಷ ಸೂಚನೆ:** ಇಲ್ಲಿ 'ವಿಷ್ಣುಭಕ್ತ' ಎಂಬ ಅರ್ಥದಲ್ಲಿ ವೈಷ್ಣವಶಬ್ದವನ್ನೂ, ವಿಷ್ಣುಭಕ್ತನಲ್ಲದವನು ಎಂಬ ಅರ್ಥದಲ್ಲಿ ಅವೈಷ್ಣವಶಬ್ದವನ್ನೂ ಬಳಸಲಾಗಿದೆ, ಹೊರತು ಮತೀಯ ವಾಚಕವಾಗಿ ಅಲ್ಲ.

ಮಾನುಷಾ ಮಿಶ್ರಮತಯೋ ವಿಮಿಶ್ರಗತಯೋಽಪಿ ಚ ॥

– *ಅನುವ್ಯಾಖ್ಯಾನ 3-4-127*

ದೇವತೆಗಳು ಸ್ವಾಭಾವಿಕವಾಗಿ ಅನಾದಿಕಾಲದಿಂದಲೂ ವೈಷ್ಣವರೇ. ದೈತ್ಯರು ಸ್ವಾಭಾವಿಕವಾಗಿ ಅನಾದಿಕಾಲದಿಂದಲೂ ಅವೈಷ್ಣವರೇ. ಮನುಷ್ಯರು ಮಿಶ್ರವಾಗಿ ವೈಷ್ಣವತ್ವವನ್ನು ಅಳವಡಿಸಿಕೊಂಡಿರುವವರು. ಅದಕ್ಕನುಗುಣವಾಗಿ ಅಂತಹ ಗತಿಗಳನ್ನೇ ಹೊಂದುವರು.

'ನಾರಾಯಣ ಪರಾಯಣ' ವೈಷ್ಣವರು ದುರ್ಲಭರು

೩. ನವಕೋಟ್ಯಸ್ತು ದೇವಾನಾಮೃಷಯಃ ಶತಕೋಟಯಃ ।

ನಾರಾಯಣಾಯನಾಃ ಸರ್ವೇ ಯೇ ಕೇಚಿತ್ ತತ್ಪರಾಯಣಾಃ ॥

– *ಭಾ.ತಾ.ನಿ. 6-15-14*

ಒಂಬತ್ತು ಕೋಟಿ ದೇವತೆಗಳಾಗಲೀ ನೂರುಕೋಟಿ ಋಷಿಗಳಾಗಲೀ ಇವರೆಲ್ಲ ನಾರಾಯಣಾಯನರಷ್ಟೇ. ಅಂದರೆ ನಾರಾಯಣನನ್ನು ಆಶ್ರಯನನ್ನಾಗಿ ಭಾವಿಸಿರುವವರು. ನಾರಾಯಣ ಪರಾಯಣರು ಅಂದರೆ ನಾರಾಯಣನೇ ಮುಖ್ಯಾಶ್ರಯ ಎಂದು ಭಾವಿಸುವವರು ಬ್ರಹ್ಮಾದಿ ಕೆಲವು ದೇವತೆಗಳಷ್ಟೇ.

ಬ್ರಹ್ಮಾದಿಗಳಷ್ಟೇ ನಾರಾಯಣಪರಾಯಣರು

೪. ನಾರಾಯಣಾಯನಾಃ ದೇವಾಃ ಋಷ್ಯಾದ್ಯಾಸ್ತತ್ಪರಾಯಣಾಃ ।

ಬ್ರಹ್ಮಾದ್ಯಾಃ ಕೇಚನೈವ ಸ್ಯುಃ..... ॥ – *ತಂತ್ರಭಾರತ (ಭಾ.ತಾ.ನಿ. 6-15-14)*

ದೇವತೆಗಳು, ಋಷಿಗಳು ಇವರೆಲ್ಲ ನಾರಾಯಣಾಯನರಷ್ಟೇ. ಬ್ರಹ್ಮಾದಿ ಕೆಲವು ದೇವತೆಗಳು ನಾರಾಯಣಪರಾಯಣರು; ಅಂದರೆ ನಾರಾಯಣನನ್ನು ಮುಖ್ಯಾಶ್ರಯನಾದವನನ್ನಾಗಿ ಅನುಸಂಧಾನ ಮಾಡುವವರು.

ಬ್ರಾಹ್ಮಣ ಅವೈಷ್ಣವನೆನಿಸುವುದಾದರೂ ಹೇಗೆ?

೫. ಬ್ರಹ್ಮಾ ಚ ಬ್ರಹ್ಮಪುತ್ರಾಶ್ಚ ಸರ್ವೇ ವಿಷ್ಣುಪರಾಯಣಾಃ ।

ಬ್ರಾಹ್ಮಣಸ್ತತ್ಕುಲೇ ಜಾತೋ ವಿಮುಖಶ್ಚ ಹರೌ ಕಥಮ್ ॥

– *ಬ್ರಹ್ಮವೈವರ್ತ 1-12-36*

ಚತುರ್ಮುಖಬ್ರಹ್ಮನಾಗಲೀ ಅವನ ಮಕ್ಕಳಾದ ಮರೀಚ್ಯಾದಿಗಳಾಗಲೀ ಇವರೆಲ್ಲ ವಿಷ್ಣುಪರಾಯಣರಾಗಿದ್ದು ವೈಷ್ಣವರೆನಿಸಿರುವವರು. ಇಂತಹವರ ಕುಲದಲ್ಲಿ ಹುಟ್ಟಿ ಬರುವ ಬ್ರಾಹ್ಮಣ ಶ್ರೀವಿಷ್ಣುವಿನಲ್ಲಿ ವಿಮುಖನಾಗಿ ಅವೈಷ್ಣವ ಎಂದೆನಿಸುವುದಾದರೂ ಹೇಗೆ?

ಅಂತಹವರು ಜೀವನ್ಮೃತರು

೭. ಪಿತ್ರೋರ್ಮಾತಾಮಹಾದೀನಾಂ ಸಂಸರ್ಗಸ್ಯ ಗುರೋಶ್ಚ ವಾ ।
ದೋಷೇಣ ವಿಮುಖಾ ಕೃಷ್ಣೇ ವಿಪ್ರಾ ಜೀವನ್ಮೃತಾಶ್ಚ ತೇ ॥

– ಬ್ರಹ್ಮವೈವರ್ತ 1-12-37

ತಂದೆ-ತಾಯಿಯ ತಂದೆ ಮುಂತಾದವರ, ಗುರುಗಳ ಸಂಸರ್ಗದ ದೋಷದಿಂದಾಗಿ ಶ್ರೀವಿಷ್ಣುವಿನಲ್ಲಿ ವಿಮುಖರಾಗುವಂತಾಗಿದ್ದಲ್ಲಿ ಆ ವಿಮುಖತೆಗೆ ಕಾರಣರಾದವರು ಬದುಕಿದ್ದೂ ಸತ್ತಂತೆಯೇ.

ಪಿತೃಪಿತಾಮಹರ ಹರ್ಷೋದ್ರೇಕ

೭. ಆಸ್ಫೋಟಯಂತಿ ಪಿತರಃ ಪ್ರನೃತ್ಯಂತಿ ಪಿತಾಮಹಾಃ ।
ವೈಷ್ಣವೋಽಸ್ಮತ್ಕುಲೇ ಜಾತಃ ಸ ನಃ ಸಂತಾರಯಿಷ್ಯತಿ ॥

– ಕೃಷ್ಣಾಮೃತಮಹಾರ್ಣವ (220)

'ವಿಷ್ಣುಭಕ್ತನು ನಮ್ಮ ಕುಲದಲ್ಲಿ ಹುಟ್ಟಿರುವನು. ಆದುದರಿಂದ ಅವನು ನಮ್ಮನ್ನು ನರಕದಿಂದ ಪಾರುಮಾಡುವನು' –ಎಂದು ಹುಟ್ಟಿದ ವ್ಯಕ್ತಿಯ ಪಿತೃಗಳು ಚಪ್ಪಾಳೆ ಹೊಡೆಯುವರು. ಪಿತಾಮಹರು ಕುಣಿದಾಡುವರು.

ವಿಷ್ಣುಭಕ್ತನಾಗಿ ಬಾಳುವುದೇ ಶ್ರೇಷ್ಠ

೮. ಜೀವಿತಂ ವಿಷ್ಣುಭಕ್ತಸ್ಯ ವರಂ ಪಂಚದಿನಾನ್ಯಪಿ ।
ನತು ಕಲ್ಪಸಹಸ್ರೈಸ್ತು ಭಕ್ತಿಹೀನಸ್ಯ ಕೇಶವೇ ॥

– ಕೃಷ್ಣಾಮೃತಮಹಾರ್ಣವ (221)

ಶ್ರೀಹರಿಯ ಭಕ್ತನಾಗಿ ಬರೇ ಐದು ದಿನಗಳಷ್ಟು ಬದುಕುವುದೂ ಶ್ರೇಷ್ಠ. ಕೇಶವನಲ್ಲಿ ಭಕ್ತಿಯಿಲ್ಲದೆ ಸಹಸ್ರಕಲ್ಪಗಳ ಕಾಲ ಬದುಕುವುದೂ ವ್ಯರ್ಥ.

ವೈಷ್ಣವಚಂಡಾಲನೇ ಶ್ರೇಷ್ಠ

೯. ಅವೈಷ್ಣವಾದ್ ದ್ವಿಜಾದ್ ವಿಪ್ರ ಚಂಡಾಲೋ ವೈಷ್ಣವೋ ವರಃ ।
ಸಗಣಃ ಶ್ವಪಚೋ ಮುಕ್ತೋ ಬ್ರಾಹ್ಮಣೋ ನರಕಂ ವ್ರಜೇತ್ ॥

– ಬ್ರಹ್ಮವೈವರ್ತ 1-12-39

ಅವೈಷ್ಣವನಾದ ಬ್ರಾಹ್ಮಣನಿಗಿಂತ ವೈಷ್ಣವನಾದ ಚಂಡಾಲನೇ ಶ್ರೇಷ್ಠ. ಯಾಕೆಂದರೆ ಶ್ವಪಚ ವೈಷ್ಣವನಾಗಿರುವುದರಿಂದ ಪರಿವಾರಸಹಿತನಾಗಿ ಮುಕ್ತಿಯನ್ನು ಹೊಂದುವನು. ಬ್ರಾಹ್ಮಣನಾದರೂ ವೈಷ್ಣವನಲ್ಲದ ಪ್ರಯುಕ್ತ ನರಕದಲ್ಲಿ ಬೀಳಬೇಕಾಗುವುದು.

ನೂರುಪಟ್ಟು ಶ್ರೇಷ್ಠ

೧೦. **ಗೋಭ್ಯಃ ಶತಗುಣಂ ಪೂಜ್ಯೋ ಹರಿಭಕ್ತಶ್ಚ ಸ ಸ್ಮೃತಃ ।**

– ಬ್ರಹ್ಮವೈವರ್ತ 1-12-31

ಹರಿಭಕ್ತನಾದ ವೈಷ್ಣವರ ಗೋವುಗಳಿಗಿಂತ ನೂರು ಪಟ್ಟು ಅಧಿಕ ಪೂಜ್ಯ ನೆನಿಸುವನು.

ಸುದರ್ಶನದ ರಕ್ಷಣೆ

೧೧. **ಪರಿಪಕ್ವಾ ವಿಪಕ್ವಾ ವಾ ವೈಷ್ಣವಾಃ ಸಾಧವಶ್ಚ ತೇ ।**
ಸತತಂ ಪಾತಿ ತಾಂಶ್ಚೈವ ವಿಷ್ಣುಚಕ್ರಂ ಸುದರ್ಶನಮ್ ॥

– ಬ್ರಹ್ಮವೈವರ್ತ 2- 0-53

ವೈಷ್ಣವರು ಪೂರ್ಣವಾಗಿ ಪರಿಪಕ್ವಾವಸ್ಥೆಯನ್ನು ತಾಳದಿದ್ದರೂ ಅಂತಹವರನ್ನು ಶ್ರೀವಿಷ್ಣುವಿನ ಸುದರ್ಶನಚಕ್ರ ರಕ್ಷಿಸುವುದು.

ಭಕ್ತಪರಾಧೀನ

೧೨. **ಅಹಂ ಭಕ್ತಪರಾಧೀನೋ ಹ್ಯಸ್ವತಂತ್ರ ಇವ ದ್ವಿಜ ।** *– ಭಾಗ 9-6-51*

ಸ್ವತಂತ್ರನಾದ ಭಗವಂತನೂ ತನ್ನ ಇಚ್ಛೆಗನುಗುಣವಾಗಿ ತನ್ನ ಭಕ್ತರಿಗೆ ಅಧೀನನಾಗಿ, ಅಸ್ವತಂತ್ರನಂತೆ ನಡೆದುಕೊಳ್ಳುವನು.

ಹೇಗೆ ತಾನೇ ತ್ಯಜಿಸಿಯಾನು?

೧೩. **ಯೇ ದಾರಾಗಾರಪುತ್ರಾಪ್ತಾನ್ ಪ್ರಾಣಾನ್ ವಿತ್ತಮಿದಂ ಪರಮ್ ।**
ಹಿತ್ವಾ ಮಾಂ ಶರಣಂ ಯಾತಾಃ ಕಥಂ ತಾನ್ ತ್ಯಕ್ತುಮುತ್ಸಹೇ? ॥

– ಭಾಗ. 9-6-54

ಯಾವ ಭಕ್ತರು ತಮ್ಮ ಪತ್ನಿ, ಮನೆ, ಪುತ್ರ–ಬಂಧುಗಳನ್ನೂ, ಪ್ರಾಣವನ್ನೂ, ಹಣವನ್ನೂ ತ್ಯಜಿಸಿ ಭಗವಂತನನ್ನು ಶರಣಾಗತರಾಗುವರೋ ಅಂತಹವರನ್ನು ಭಗವಂತನು ಹೇಗೆ ತಾನೇ ತ್ಯಜಿಸಿಯಾನು?

ಗಾಢವಾದ ಅನ್ಯೋನ್ಯತೆ

೧೪. **ಸಾಧವೋ ಹೃದಯಂ ಮಹ್ಯಂ ಸಾಧೂನಾಂ ಹೃದಯಂ ತ್ವಹಮ್ ।**

– ಭಾಗ. 9-6-56

ಭಕ್ತರು ಭಗವಂತನ ಹೃದಯ ಎನಿಸಿದರೆ, ಅಂತಹ ಭಕ್ತರ ಹೃದಯ ಭಗವಂತ.

ಅವೈಷ್ಣವಕೃತವಾದುದೆಲ್ಲ ಸಾಂತ

೧೫. ಅವೈಷ್ಣವಕೃತಂ ಕರ್ಮ ಸರ್ವಮಂತವದುಚ್ಯತೇ ।
ಅನಂತಂ ವೈಷ್ಣವಕೃತಂ ತತ್ರ ವರ್ಣಾಕ್ರಮಾತ್ ಪರಮ್ ॥

– ಮ.ಭಾ.ತಾ.ನಿ. 30-172

ಅವೈಷ್ಣವರಿಂದ ಮಾಡಲ್ಪಟ್ಟ ಯಾವುದೇ ಕರ್ಮಕ್ಕೆ ಅಂತವುಳ್ಳ ಫಲವೇ ಹೊರತು ಅನಂತಫಲ ದೊರಕದು. ವೈಷ್ಣವರಿಂದ ಮಾಡಲ್ಪಟ್ಟ ಕರ್ಮಕ್ಕಾದರೂ ಮೋಕ್ಷ ಪರ್ಯವ ಸಾಯಿಯಾಗಿದ್ದು ಅನಂತ ಎನಿಸುವ ಫಲ ದೊರಕುವುದು.

ವೈಷ್ಣವರಲ್ಲೂ ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರ ಈ ವರ್ಣಕ್ರಮಕ್ಕನುಗುಣವಾಗಿ ಫಲ ದೊರಕುವುದು.

ವೈಷ್ಣವಪ್ರಶಂಸೆ

(ನಿಷೇಧಮುಖದ ನಿರೂಪಣೆಯಲ್ಲಿ)

ಅವೈಷ್ಣವರ ಹೃದಯ ಅಶುದ್ಧ

೧೬. ಅವೈಷ್ಣವಾನಾಂ ಹೃದಯಂ ನ ಹಿ ಶುದ್ಧಂ ಸದಾಮಲಮ್ ।
ಶ್ರೀಕೃಷ್ಣಮಂತ್ರಸ್ಮರಣಂ ಮನೋನೈರ್ಮಲ್ಯಕಾರಣಮ್ ॥

– ಬ್ರಹ್ಮವೈವರ್ತ 2-60-39

ಶ್ರೀಕೃಷ್ಣನ ಮಂತ್ರಗಳ ಸ್ಮರಣೆ ಮನೋನೈರ್ಮಲ್ಯಕ್ಕೆ ಕಾರಣವಾದುದು. ಅಂತಹ ಸ್ಮರಣೆ ನಡೆಸದ ಅವೈಷ್ಣವರ ಹೃದಯ ಯಾವಾಗಲೂ ಶುದ್ಧವಾಗಿರುವುದಿಲ್ಲ.

ಅಂತಹವನು ಬ್ರಹ್ಮಘಾತಕ

೧೭. ಬ್ರಾಹ್ಮಣೋ ವೈಷ್ಣವೋ ಜ್ಞೇಯೋ ನ ಹ್ಯಸ್ಮಾದನ್ಯ ದೇವತಾ ।
ಮಾತೃವತ್ ಪರಿರಕ್ಷಂ ತಂ ಜಗತ್‌ಸ್ರಷ್ಟಾರಮೀಶ್ವರಮ್ ।
ಯೋ ಹಿ ನಾರ್ಚಯತೇ ಮೂಢಸ್ತಮಾಹುರ್ಬ್ರಹ್ಮಘಾತಕಮ್ ॥

ಬ್ರಾಹ್ಮಣ ಎಂದರೆ ವೈಷ್ಣವನೆಂದೇ ತಿಳಿಯಬೇಕು. ವಿಷ್ಣುವಿಗಿಂತ ಬೇರೆ ದೇವತೆ ಬ್ರಾಹ್ಮಣನಿಗೆ ಇಲ್ಲ. ಯಾವ ಮೂಢನು ತಾಯಿಯಂತೆ ರಕ್ಷಣೆ ಮಾಡುವ, ಜಗತ್ತನ್ನು ಸೃಷ್ಟಿಸಿರುವ ಶ್ರೀವಿಷ್ಣುವನ್ನು ಪೂಜಿಸುವುದಿಲ್ಲವೋ ಅವನು ಬ್ರಹ್ಮಘಾತಕ –ಅಂದರೆ ವೇದನಾಶಕ ಹೊರತು ಬ್ರಾಹ್ಮಣ ಎನಿಸಲಾರ.

ಅಂತಹವರು ಚಂಡಾಲರು

೧೮. ವಿದ್ಯಾವಿನಯಸಂಪನ್ನಾ ಬ್ರಾಹ್ಮಣಾ ವೇದಪಾರಣಾಃ ।
ಮಯಿ ಭಕ್ತಿಂ ನ ಕುರ್ವಂತಿ ಯೇ ತೇ ಚಂಡಾಲತಾಂ ಗತಾಃ ॥

ವೇದವನ್ನು ಚೆನ್ನಾಗಿ ಅಭ್ಯಾಸಮಾಡಿ, ವಿದ್ಯಾವಿನಯಸಂಪನ್ನರಾದ ಬ್ರಾಹ್ಮಣರು ಶ್ರೀವಿಷ್ಣುವಿನಲ್ಲಿ ಭಕ್ತಿಯನ್ನು ಮಾಡುವುದಿಲ್ಲ ಎಂದರೆ ಅಂತಹವರು ಚಂಡಾಲರೆನಿಸುವರು.

(ಮೇಲಿನ ಎರಡು ಶ್ಲೋಕಗಳು ವಿಷ್ಣುಸಹಸ್ರನಾಮ(೧ನೇ ನಾಮ)ದ ಶಾಂಕರಭಾಷ್ಯದಲ್ಲಿ ಮಹಾಭಾರತದ ಶ್ಲೋಕಗಳಾಗಿ ಉಲ್ಲೇಖಿಸಲ್ಪಟ್ಟವು)

ವೇದದಲ್ಲಿ ಅನಧಿಕಾರಿಗಳು

೧೯. ಅವೈಷ್ಣವಸ್ಯ ವೇದೇಽಪಿ ಹ್ಯಧಿಕಾರೋ ನ ವಿದ್ಯತೇ ॥

– ಬ್ರಹ್ಮತರ್ಕ (ಬ್ರ.ಸೂ.ಭಾ. 3-4-12)

ವೈಷ್ಣವನೆನಿಸದವನಿಗೆ ವೇದದಲ್ಲಿ ಅಧಿಕಾರವಿಲ್ಲ.

ಅವೈಷ್ಣವನಿಗೆ ನರಕ

೨೦. ಅಚಕ್ರಧಾರೀ ವಿಪ್ರಸ್ತು ಸರ್ವಕರ್ಮಸು ಗರ್ಹಿತಃ ।
ಅವೈಷ್ಣವಃ ಸಮಾಪನ್ನೋ ನರಕಂ ಚಾಧಿಗಚ್ಛತಿ ॥ *– ವೃ.ಹಾ.ಸ್ಮೃ. 2-29*

ಸುದರ್ಶನಚಕ್ರ ಧರಿಸದ ಬ್ರಾಹ್ಮಣನು ಅವೈಷ್ಣವನೆನಿಸಿ ಯಾವ ಕರ್ಮಕ್ಕೂ ಅನರ್ಹನಾಗುವನು. ನರಕದಲ್ಲಿ ಬೀಳುವನು.

ಶ್ವಪಚನಿಗಿಂತಲೂ ಕಡೆ

೨೧. ಅವೈಷ್ಣವಸ್ತು ಯೋ ವಿಪ್ರಃ ಶ್ವಪಾಕಾದಧಮಃ ಸ್ಮೃತಃ ।
ಅಶ್ರದ್ಧೇಯೋ ಹ್ಯಪಾಂಕ್ತೇಯೋ ರೌರವಂ ನರಕಂ ವ್ರಜೇತ್ ॥

– ವೃ.ಹಾ.ಸ್ಮೃ. 2-31

ಅವೈಷ್ಣವ ಬ್ರಾಹ್ಮಣನು ಶ್ವಪಚನಿಗಿಂತಲೂ ನೀಚ. ಶ್ರದ್ಧಾನರ್ಹನಾದ ಅವನು ಅಪಾಂಕ್ತೇಯ. ಭೋಜನಾದಿಗಳಲ್ಲಿ ಅವನ ಪಂಕ್ತಿಯಲ್ಲಿ ಕುಳಿತುಕೊಳ್ಳಬಾರದು. ಅವನು ರೌರವನರಕದಲ್ಲಿ ಬೀಳುವನು.

ಅವೈಷ್ಣವತ್ವ ಆತ್ಮನಾಶಕ್ಕೆ ಕಾರಣ

೨೨. ಅವೈಷ್ಣವತ್ವಂ ವಿಪ್ರಾಣಾಮಾತ್ಮನಾಶನಕಾರಣಮ್ ।
ತಸ್ಮಾತ್ತು ವೈಷ್ಣವತ್ವಂ ವೈ ವಿಪ್ರಾಣಾಂ ಶ್ರುತಿಚೋದಿತಮ್ ॥

– ವಸಿಷ್ಠ ಸ್ಮೃತಿ 1-11

ಬ್ರಾಹ್ಮಣರಿಗೆ ಅವೈಷ್ಣವತ್ವವು ತಮ್ಮ ನಾಶಕ್ಕೆ ಕಾರಣವಾದುದು. ಆದುದರಿಂದ ಬ್ರಾಹ್ಮಣರಿಗೆ ವೈಷ್ಣವತ್ವವನ್ನು ವೇದವು ವಿಧಿಸಿದೆ.

ಅವೈಷ್ಣವರ ಕರ್ಮ ನಿಷ್ಫಲ

೨೩. ನಿತ್ಯಂ ನೈಮಿತ್ತಿಕಂ ಕಾಮ್ಯಂ ತ್ರಿವಿಧಂ ಶ್ರುತಿಚೋದಿತಮ್ ।
ಅವೈಷ್ಣವಾನಾಂ ವಿಪ್ರಾಣಾಂ ಕರ್ಮ ತನ್ನಿಷ್ಫಲಂ ಭವೇತ್ ॥

– ವಸಿಷ್ಠಸ್ಮೃತಿ 1-8

ನಿತ್ಯ, ನೈಮಿತ್ತಿಕ ಹಾಗೂ ಕಾಮ್ಯ ಎಂದು ವೇದದಲ್ಲಿ ಮೂರು ಬಗೆಯ ಕರ್ಮಗಳನ್ನು ಹೇಳಲಾಗಿದ್ದು ಅವೈಷ್ಣವ ಬ್ರಾಹ್ಮಣನ ಪಾಲಿಗೆ ಆ ಎಲ್ಲ ಬಗೆಯ ಕರ್ಮವೂ ನಿಷ್ಫಲವೆನಿಸುವುದು.

ಆಪತ್ತಿನಲ್ಲೂ ಜೊತೆಗೆ ಊಟಮಾಡಬಾರದು

೨೪. ಅವೈಷ್ಣವಸ್ತು ಯೋ ವಿಪ್ರಶ್ಚಾಂಡಾಲಾಧಮಃ ಸ್ಮೃತಃ ।
ನ ತೇನ ಸಹ ಭೋಕ್ತವ್ಯಮಾಪದ್ಯಪಿ ಕದಾಚನ ॥ *– ವಸಿಷ್ಠಸ್ಮೃತಿ 1-28*

ಅವೈಷ್ಣವಬ್ರಾಹ್ಮಣನು ನೀಚ ಚಂಡಾಲನಂತೆ. ಆಪತ್ತಿನ ಕಾಲದಲ್ಲೂ ಅವನ ಜೊತೆಗೆ ಊಟ ಮಾಡಬಾರದು.

ವೈಷ್ಣವಗುಣ

(ವಿಧಿಮುಖದ ನಿರೂಪಣೆಯಲ್ಲಿ)

'ಬ್ರಹ್ಮತರ್ಕ' ಶ್ರೇಷ್ಠ ಭಗವದ್‌ಭಕ್ತರ ಲಕ್ಷಣವಾಗಿ ತಿಳಿಸಿದ ತತ್ತ್ವಾಭಿಮಾನಿಗಳ ವಿಶ್ಲೇಷಣೆ

ಶ್ರೇಷ್ಠ ಭಗವದ್‌ಭಕ್ತರ ಲಕ್ಷಣವಾಗಿ ತತ್ತ್ವಾಭಿಮಾನಿಗಳ ವಿಶ್ಲೇಷಣೆಯನ್ನು ನೀಡ ಹೊರಟ 'ಬ್ರಹ್ಮತರ್ಕ' ದೇಹೇಂದ್ರಿಯಪ್ರಾಣಬುದ್ಧಿಗಳಿಗೆ ಹಾಗೂ ಜೀವನಿಗೆ ಮೂರು ಬಗೆಯ ಅಭಿಮಾನಿಗಳನ್ನೂ ಆಯಾ ಅಭಿಮಾನಪ್ರಯುಕ್ತ ಅವರು ಅನುಭವಿಸಬೇಕಾದ ಸುಖದುಃಖಗಳನ್ನೂ ವಿವರವಾಗಿ ತಿಳಿಸುತ್ತ ಪ್ರಸ್ತುತಪಡಿಸಿರುವ ೨೫ ಅಂಶಗಳು ಇವು–

೧. ಪ್ರತಿಯೊಬ್ಬ ಜೀವನ ದೇಹ, ಇಂದ್ರಿಯಗಳು, ಪ್ರಾಣ ಹಾಗೂ ಬುದ್ಧಿ ಇವುಗಳಿಗೆ ಮೂರು ಬಗೆಯ ಅಭಿಮಾನಿಗಳಿರುವರು.

---

೧. ದೇಹೇಂದ್ರಿಯಪ್ರಾಣಧಿಯಾಂ ತ್ರಿಧೈವ ತ್ವಭಿಮಾನಿನಃ ।
ತತ್ರೋತ್ತಮಾ ದೇವತಾಸ್ತಾಃ ಸರ್ವದೋಷವಿವರ್ಜಿತಾಃ ॥

೨. ಅವರಲ್ಲಿ ಉತ್ತಮಾಭಿಮಾನಿಗಳು ದೇವತೆಗಳು. ಅವರು ಚತುರ್ಮುಖನ ವರೆಗೆ ಕ್ರಮೇಣ ದೋಷರಹಿತರು; ಸರ್ವಗುಣಸಂಪನ್ನರು.

೩. ಪುರಂಜನಾದಿಗಳು ಮಧ್ಯಮಾಭಿಮಾನಿಗಳು. ಗುಣಗಳಿಂದಲೂ ದೋಷಗಳಿಂದಲೂ ಅವರು ಕೂಡಿರುವರು.

೪. ಅಸುರರು ಅಧಮಾಭಿಮಾನಿಗಳು. ಅವರು ಚಿತ್ತಾಭಿಮಾನಿ ಕಲಿಯ ವರೆಗೆ ಕ್ರಮೇಣ ದೋಷಸಂಪನ್ನರು.

೫. ಉತ್ತಮಾಭಿಮಾನಿಗಳಿಗಿಂತಲೂ ಮಧ್ಯಮಾಭಿಮಾನಿಗಳಿಗಿಂತಲೂ ಅಧಮಾಭಿಮಾನಿಗಳಿಗಿಂತಲೂ ಬೇರೆಯಾದ, ಯಾರ ಕರ್ಮದಿಂದಾಗಿ ಆ ದೇಹ ನಿರ್ಮಿತವಾಗಿರುವುದೋ ಅಂತಹ ಒಬ್ಬ ಮನುಷ್ಯಜೀವನೂ ಆ ದೇಹಾಭಿಮಾನಿಯಾಗಿರುವನು. ಅವನೂ ಮಧ್ಯಮಾಭಿಮಾನಿ.

೬. ಹಾಗೆಯೇ ದೇವತೆಯ ಶರೀರದಲ್ಲಿ ಒಬ್ಬ ದೇವಜೀವನೂ, ಅಸುರಶರೀರದಲ್ಲಿ ಒಬ್ಬ ಅಸುರಜೀವನೂ ಆಯಾ ದೇಹಾಭಿಮಾನಿಯಾಗಿರುವನು. ಅವನೂ ಮಧ್ಯಮಾಭಿಮಾನಿ.

೭. ದೇಹೇಂದ್ರಿಯಾದ್ಯಭಿಮಾನಿಗಳಂತೆ ಜೀವಾಭಿಮಾನಿಗಳೂ ಮೂರು ಬಗೆಯಲ್ಲಿರುವರು.

೮. ಜೀವನ ಉತ್ತಮಾಭಿಮಾನಿ ಚತುರ್ಮುಖನಾದರೆ, ಅದು ಯಾರ ದೇಹವಾಗಿರುವುದೋ ಅಂತಹ ಜೀವನು ಮಧ್ಯಮಾಭಿಮಾನಿ. ಕಲಿಯು ಜೀವನ ಅಧಮಾಭಿಮಾನಿ.

೯. ಮರಣ, ಜನನ, ಹಸಿವು, ದುಃಖ ಮುಂತಾದುವೆಲ್ಲ ಉತ್ತಮಾಭಿಮಾನಿ ಚತುರ್ಮುಖನಿಗೆ ಇಲ್ಲ. ಮಧ್ಯಮಾಭಿಮಾನಿ ಜೀವನಿಗೂ ನೀಚಾಭಿಮಾನಿ ಕಲಿಗೂ ಆ ದುಃಖಾದಿಗಳು.

೧೦. ದೇಹಾದಿಗಳ ಜನ್ಮಾದಿ ಪ್ರಯುಕ್ತ ದುಃಖ ದೇಹಾಭಿಮಾನಿ ಅಸುರನಿಗಷ್ಟೇ.

೨-೩. ಗುಣೈಃ ಸರ್ವೈಃ ಸುಸಂಪನ್ನಾ ವಿರಿಂಚಾದ್ಯೋತ್ತರೋತ್ತರಮ್ ।
ಮಧ್ಯಮಾ ಗುಣದೋಷೇತಾ ಅಧಮಾ ಅಸುರಾ ಮತಾಃ ॥

೪-೫. ತೇ ಸರ್ವೇ ದೋಷಸಂಯುಕ್ತಾ ಆ ಚಿತ್ತಾದುತ್ತರೋತ್ತರಮ್ ।
ತೇಭ್ಯೋಽನ್ಯೋ ಮಾನುಷೋ ಜೀವಸ್ತಾಭ್ಯಾಂ ದೇವಾಸುರಾವಪಿ ॥

೬-೭. ಜೀವಾಭಿಮಾನಿನಶ್ಚೈವ ತ್ರಿವಿಧಾಃ ಸಂಪ್ರಕೀರ್ತಿತಾಃ ।
ಜೀವಮಾನ್ಯುತ್ತಮೋ ಬ್ರಹ್ಮಾ ಮಧ್ಯಮಃ ಸ್ವಯಮೇವ ತು ॥

೮-೯. ಅಧಮಃ ಕಲಿರುದ್ದಿಷ್ಟಸ್ತತ್ರ ಮಧ್ಯಮನೀಚಯೋಃ ।
ಮೃತಿಜನ್ಮಕ್ಷುಧಾದುಃಖಪ್ರಭೃತ್ಯಖಿಲಮೇವ ತು ॥

೧೦. ನೋತ್ತಮಸ್ಯ ತು ಜೀವಸ್ಯ ದೇಹಾದೇಶ್ಚ ಕಥಂಚನ ।
ಜನ್ಮಾದಿಕೃತದುಃಖಂ ತು ದೇಹಮಾನ್ಯಸುರಸ್ಯ ಹ ॥

೧೧. ನಿದ್ದೆಯ ನಾಶದಿಂದ, ಅನ್ನಾದಿ ದೊರಕದಿರುವುದರಿಂದ ಉಂಟಾಗುವ ದುಃಖ ಇಂದ್ರಿಯಾಭಿಮಾನಿ ಅಸುರನಿಗೆ.

೧೨. ಹಸಿವು ಪ್ರಯುಕ್ತ ದುಃಖ ಪ್ರಾಣಾಭಿಮಾನಿ ಅಸುರನಿಗೆ.

೧೩. ಭಯ, ತೃಷೆ ಮುಂತಾದವುಗಳಿಂದ ಉಂಟಾಗುವ ದುಃಖ ಮನೋಭಿಮಾನಿ ಅಸುರನಿಗೆ.

೧೪. ಆಧಿ ಎನಿಸುವ ಮಾನಸಿಕ ಕ್ಲೇಶ ಬುದ್ಧಿಯ ಅಭಿಮಾನಿ ಅಸುರನಿಗೆ.

೧೫. ಸ್ವನೈಚ್ಯಾನುಸಂಧಾನದಿಂದ ಉಂಟಾಗುವ ದುಃಖ ಅಹಂಕಾರಾಭಿಮಾನಿ ಅಸುರನಿಗೆ.

೧೬. ಹಿಂದಿನದ್ದೆಲ್ಲವನ್ನು ಸ್ಮರಿಸಿ ಉಂಟಾಗುವ ದುಃಖ ಚಿತ್ತಾಭಿಮಾನಿ ಅಸುರನಿಗೆ.

೧೭. ಈ ಎಲ್ಲ ದುಃಖ ಜೀವಾಭಿಮಾನಿ ಅಸುರನಿಗೆ.

೧೮. ಇದೇ ರೀತಿಯಾಗಿ ಬೇರೆ ಬೇರೆ ಬಗೆಯ ಸುಖ ಅಭಿಮಾನಿದೇವತೆಗಳಿಗೆ ದೊರಕಿದರೆ, ಸುಖದುಃಖಮಿಶ್ರಣ ಮಧ್ಯಮಾಭಿಮಾನಿಗಳಿಗೆ ದೊರಕುವುದು.

೧೯. ಅಸುರರಿಗೆ ಲೋಕದಲ್ಲಿ ಅಧರ್ಮದ ವೃದ್ಧಿಯಾಯಿತೆಂದರೆ ಸುಖವು ದೊರಕುವುದು.

೨೦. ಲೋಕದಲ್ಲಿ ಅಧರ್ಮದ ವೃದ್ಧಿಯಾದರೆ ದೇವತೆಗಳಿಗೇನೂ ದುಃಖ ಆಗುವುದಿಲ್ಲ. ಬದಲಾಗಿ ಆ ಅಧರ್ಮವೃದ್ಧಿಪ್ರಯುಕ್ತ ಅಸುರರಿಗೆ ಕೆಟ್ಟ ಗತಿಯಾಗುವುದೆಂದು ಅಧರ್ಮದ ವೃದ್ಧಿಯೂ ದೇವತೆಗಳಿಗೆ ಪ್ರೀತಿಜನಕವಾಗುವುದು. ಲೋಕದಲ್ಲಿ ಧರ್ಮದ ವೃದ್ಧಿಯಾದರೆ ದೇವತೆಗಳಿಗೆ ಪ್ರೀತಿ ಉಂಟಾಗುವುದು.

೨೧. ದೇವತೆಗಳಿಗೆ ಪುಣ್ಯದಿಂದ ಅಧಿಕಾಧಿಕ ಸುಖ ಆಗುವುದು. ಅಸುರರ ಪತನಕ್ಕೆ ಪ್ರಯೋಜಕವಾಗುವ ಪ್ರಯುಕ್ತ ಪಾಪದಿಂದಲೂ ಅವರಿಗೆ ಅಧಿಕಾಧಿಕ ಸುಖವೇ ಆಗುವುದು.

೧೧-೧೨. ಸುಪ್ತ್ಯಾದ್ಯಪ್ರಯಜಂ ದುಃಖಮಸುರೇಂದ್ರಿಯಮಾನಿನಃ ।
ಕ್ಷುನ್ನಿಮಿತ್ತಂ ತು ಯದ್ ದುಃಖಂ ಪ್ರಾಣಮಾನ್ಯಸುರಸ್ಯ ತತ್ ॥

೧೩-೧೪. ಭಯತರ್ಷಾದಿಜಂ ದುಃಖಂ ಮನೋಮಾನ್ಯಸುರಸ್ಯ ಚ ।
ಕೇವಲಂ ತ್ವಾಂತರಂ ದುಃಖಂ ಬುದ್ಧಿಮಾನ್ಯಸುರಸ್ಯ ತತ್ ॥

೧೫-೧೬. ನೀಚೋಽಸ್ಮೀತಿ ತು ಯದ್ ದುಃಖಮಹಮ್ಮಾನ್ಯಸುರಸ್ಯ ತತ್ ।
ಅತೀತಾದಿಸ್ಮೃತೇರ್ದುಃಖಂ ಚಿತ್ತಮಾನ್ಯಸುರಸ್ಯ ಚ ॥

೧೭-೧೮. ಜೀವಮಾನ್ಯಸುರಸ್ಯ ಸ್ಯಾತ್ ಸರ್ವಂ ತತ್ ಸಮುದಾಯತಃ ।
ಏವಮೇವ ಸುಖಂ ದೇವೇಷೂಭಯಂ ಮಧ್ಯಮೇಷು ಚ ॥

೧೯-೨೦. ಅಸುರಾಣಾಮಧರ್ಮಸ್ಯ ವೃದ್ಧ್ಯಾ ಸುಖಮಪೀಷ್ಯತೇ ।
ದೇವಾನಾಂ ನೈವ ಕೇನಾಪಿ ದುಃಖಂ ಪ್ರೀತಿಸ್ತು ಧರ್ಮತಃ ।
ಅಧರ್ಮೋ ಪ್ರೀತಯೇ ಸ್ಯಾದಸುರಾಣಾಂ ತಮೋಗತೇಃ ॥

೨೧. ದೇವಾನಾಂ ಪುಣ್ಯಪಾಪಾಭ್ಯಾಂ ಸುಖಮೇವೋತ್ತರೋತ್ತರಮ್ ॥

೨೨. ದೇವತೆಗಳಿಗೆ ಅಸುರಾವೇಶಪ್ರಯುಕ್ತವಾಗಿ ಸ್ವಲ್ಪ ದುಃಖಾದಿಗಳು ಸಂಭವಿಸುವವು.

೨೩. 'ಆಖಣಾಶ್ಮಸಮ' –ಬಂಡೆಗಲ್ಲಿನ ವ್ಯಕ್ತಿತ್ವದವರೆಂದು ಪ್ರಸಿದ್ಧರಾದ ಪ್ರಾಣದೇವರಿಗೆ ಅಸುರಾವೇಶ ಇಲ್ಲ. ಶ್ರೀವಿಷ್ಣುವಿನ ಪೂರ್ಣಾನುಗ್ರಹಕ್ಕೆ ಪಾತ್ರರಾದ ಅವರು ಗುಣಪೂರ್ಣರು.

೨೪. ಸ್ವಾಭಾವಿಕವಾಗಿ ಯಾವುದೇ ಗುಣವಿಲ್ಲದ, ಸರ್ವದೋಷಸ್ವರೂಪಿ ಅಸುರರಿಗೆ ದೇವತೆಗಳ ಆವೇಶದಿಂದಷ್ಟೇ ಸ್ವಲ್ಪ ಸುಖಾದಿಗಳು ಸಂಭವಿಸುವವು.

೨೫. ಹೀಗೆ ಸಮಸ್ತ ಜಗತ್ತನ್ನು ವಿವೇಚಿಸಿಕೊಂಡು, ತನ್ನನ್ನೂ ಚೆನ್ನಾಗಿ ವಿಶ್ಲೇಷಿಸಿಕೊಂಡು, ಎಲ್ಲರಿಗಿಂತ ಬೇರೆಯಾಗಿದ್ದು ಸರ್ವೋತ್ತಮೋತ್ತಮನಾದವನು ಶ್ರೀವಿಷ್ಣು ಎಂದು ಯಾರು ವಿವೇಚಿಸಿಕೊಂಡಿರುವರೋ ಅವರು ಶ್ರೇಷ್ಠ ಭಕ್ತರು.

* * *

ಭಕ್ತಿಯಿಂದ ವಶೀಕರಿಸುವರು

೨೫. **ಮಯಿ ನಿರ್ಬದ್ಧಹೃದಯಾಃ ಸಾಧವಃ ಸಮದರ್ಶಿನಃ ।**
ವಶೇ ಕುರ್ವಂತಿ ಮಾಂ ಭಕ್ತ್ಯಾ ಸತ್‌ಸ್ತ್ರಿಯಃ ಸತ್‌ಪತಿಂ ಯಥಾ ॥

– ಭಾಗ. 9-6-54

ಭಗವಂತನಲ್ಲಿ ತಮ್ಮ ಹೃದಯವನ್ನು ಪೂರ್ಣವಾಗಿ ಮಗ್ನಗೊಳಿಸುವ ವಿಷ್ಣುಭಕ್ತರು, ಪತಿವ್ರತಾಸ್ತ್ರೀಯರು ಭಕ್ತಿಯಿಂದ ತಮ್ಮ ಪತಿಯರನ್ನು ಹೇಗೋ ಹಾಗೆ ಭಗವಂತನನ್ನು ವಶಪಡಿಸಿಕೊಳ್ಳುವರು.

ವೈಷ್ಣವತ್ವಕ್ಕನುಗುಣವಾಗಿ ಫಲ ತಾರತಮ್ಯ

೨೬. **ವೈಷ್ಣವೇಷ್ವಪಿ ಮರ್ತ್ಯೈರ್ಯತ್ ಕೃತಂ ಶತಗುಣಂ ತತಃ ।**
ಗಾಂಧರ್ವಂ ಕರ್ಮ ತಸ್ಮಾಚ್ಚ ಪಿತೃಭಿರ್ಮುನಿಭಿಸ್ತತಃ ॥

---

೨೨. ತೇಷಾಂ ದುಃಖಾದಿಕಂ ಕಿಂಚಿದಸುರಾವೇಶತೋ ಭವೇತ್ ।

೨೩. ಪ್ರಾಣಸ್ಯ ನಾಸುರಾವೇಶ ಆಖಣಾಶ್ಮಸಮೋ ಹಿ ಸಃ ॥
ಸಂಪೂರ್ಣಾನುಗ್ರಹಾದ್ ವಿಷ್ಣೋಃ ಪ್ರಾಣಃ ಪೂರ್ಣಗುಣೋ ಮತಃ ।

೨೪. ಅಸುರಾಣಾಂ ಸುಖಾದ್ಯಾಶ್ಚ ದೇವಾವೇಶಾದುದೀರಿತಾಃ ॥
ಸ್ವತಸ್ತು ನಿರ್ಗುಣಾಃ ಸರ್ವೇ ಸರ್ವದೋಷಾತ್ಮಕಾ ಮತಾಃ ।

೨೫. ವಿವಿಚ್ಯೈವಂ ಜಗತ್ ಸರ್ವಂ ಸ್ವಾತ್ಮಾನಂ ಚ ಪೃಥಕ್ ಸ್ಥಿತಮ್ ॥
ಸರ್ವತಶ್ಚ ಪೃಥಕ್ ಸಂತಂ ವಿಷ್ಣುಂ ಸರ್ವೋತ್ತಮೋತ್ತಮಮ್ ।
ಜಾನಂತಿ ಯೇ ಭಾಗವತಾಸ್ತ ಉಕ್ತಾ ಉತ್ತಮಾ ಇತಿ ॥

– ಬ್ರಹ್ಮತರ್ಕ (ಭಾ.ತಾ.ನಿ. 11-2-49)

ದೇವಶಕ್ರಶಿವಬ್ರಹ್ಮಕೃತಂ ತಸ್ಮಾತ್ ಕ್ರಮೇಣ ಚ ।
ಶತೋತ್ತರಮಿತಿ ಜ್ಞೇಯಂ ನಾನ್ಯದ್ ಬ್ರಹ್ಮಕೃತೋಪಮಮ್ ।
ವೈಷ್ಣವತ್ವಂ ಕ್ರಮಾದ್ ವೃದ್ಧಂ ಬ್ರಹ್ಮಾಂತಂ ಜೀವರಾಶಿಷು ॥

– ಮ.ಭಾ.ತಾ.ನಿ. 30-173, 174, 175

ವೈಷ್ಣವರಲ್ಲೂ ಮಾನವ ವೈಷ್ಣವರಿಂದ ಮಾಡಲ್ಪಟ್ಟ ಕರ್ಮಕ್ಕಿಂತ ನೂರುಪಟ್ಟು ಹೆಚ್ಚು ಫಲ ಗಂಧರ್ವ ವೈಷ್ಣವರ ಕರ್ಮಕ್ಕೆ. ಅದಕ್ಕಿಂತಲೂ ನೂರುಪಟ್ಟು ಫಲ ಪಿತೃ ವೈಷ್ಣವರ ಕರ್ಮಕ್ಕೆ. ಅದಕ್ಕಿಂತಲೂ ನೂರುಪಟ್ಟು ಹೆಚ್ಚು ಫಲ ಮುನಿ ವೈಷ್ಣವರ ಕರ್ಮಕ್ಕೆ. ಇದಕ್ಕಿಂತಲೂ ನೂರುಪಟ್ಟು ದೇವ ವೈಷ್ಣವರ ಕರ್ಮಕ್ಕೆ. ದೇವತೆಗಳಲ್ಲೂ ದೇವೇಂದ್ರ, ರುದ್ರ, ಚತುರ್ಮುಖ –ಈ ವೈಷ್ಣವರ ಕರ್ಮಗಳು ಕ್ರಮವಾಗಿ ನೂರುನೂರು ಪಟ್ಟು ಹೆಚ್ಚೆಚ್ಚು ಫಲದಾಯಕಗಳು. ವೈಷ್ಣವತ್ವವು ಜೀವರಲ್ಲಿ ಕ್ರಮವಾಗಿ ಅಧಿಕವಾಗುತ್ತ ಚತುರ್ಮುಖನಲ್ಲಿ ಸಮೃದ್ಧವೆನಿಸಿದೆ. ಆದುದರಿಂದ ಚತುರ್ಮುಖ ನಡೆಸಿದ ಕರ್ಮ ಎಷ್ಟು ಫಲಪ್ರದವೆನಿಸುವುದೋ ಅಷ್ಟು ಫಲಪ್ರದ ಕರ್ಮ ಮತ್ತೊಂದಿಲ್ಲ.

ಹೀಗೆ ಕರ್ಮಗಳ ಫಲಪ್ರದತ್ವವು ವೈಷ್ಣವತ್ವದ ತಾರತಮ್ಯವನ್ನು ಅವಲಂಬಿಸಿ ಇದೆ.

ಯಾವುದಕ್ಕೂ ಭಯಪಡದವರು

೨೭. ನಾರಾಯಣಪರಾಃ ಸರ್ವೇ ನ ಕುತಶ್ಚನ ಬಿಭ್ಯತಿ ।
ಸ್ವರ್ಗಾಪವರ್ಗನರಕೇಷ್ವಪಿ ತುಲ್ಯಾರ್ಥದರ್ಶಿನಃ ॥ *– ಭಾಗ. 6-17-28*

ನಾರಾಯಣನ ಭಕ್ತರಾದ ವೈಷ್ಣವರು ಸ್ವರ್ಗ, ಮೋಕ್ಷ, ನರಕಾದಿಗಳ ವಿಷಯದಲ್ಲಿ ಸಮದರ್ಶಿಗಳಾಗಿದ್ದು ಯಾವುದಕ್ಕೂ ಭಯಪಡುವುದಿಲ್ಲ.

ವಾಸುದೇವನೇ ಆಶ್ರಯ

೨೮. ವಾಸುದೇವೇ ಭಗವತಿ ಭಕ್ತಿಮುದ್ವಹತಾಂ ನೃಣಾಮ್ ।
ಜ್ಞಾನವೈರಾಗ್ಯವೀರ್ಯಾಣಾಂ ನ ಹಿ ಕಶ್ಚಿದ್ ವ್ಯಪಾಶ್ರಯಃ ॥

– ಭಾಗ 6-18-31

ಶ್ರೀವಾಸುದೇವನಲ್ಲಿ ಭಕ್ತಿಯನ್ನು ತಾಳಿರುವ, ಜ್ಞಾನವೈರಾಗ್ಯಗಳೇ ಮುಖ್ಯ ಧಾತು ಎನಿಸಿರುವ ವೈಷ್ಣವರಿಗೆ ವಾಸುದೇವನಲ್ಲದೆ ಬೇರೆ ವಿಶಿಷ್ಟವಾದ ಆಶ್ರಯವಿಲ್ಲ.

ಪರಸ್ವಹರಣಹಿಂಸೆಗಳಿಂದ ದೂರವಾಗಿರುವಿಕೆ

೨೯. ನ ಚಲತಿ ನಿಜವರ್ಣಧರ್ಮತೋ ಯಃ
ಸಮಮತಿರಾತ್ಮಸುಹೃದ್ವಿಪಕ್ಷಪಕ್ಷೇ ।

ನ ಹರತಿ ನ ಚ ಹಂತಿ ಕಿಂಚಿದುಚ್ಚೈಃ
ಸ್ಥಿತಮನಸಂ ತಮವೇಹಿ ವಿಷ್ಣುಭಕ್ತಮ್ । — *ವಿಷ್ಣುಪುರಾಣ 3-2-20*

ತನ್ನ ವರ್ಣಧರ್ಮದಿಂದ ವಿಚಲಿತನಾಗದ, ತನ್ನ ಸುಹೃತ್ ಹಾಗೂ ಶತ್ರುಗಳ ಬಗ್ಗೆ ಸಮಚಿತ್ತನಾದ, ಪರಸ್ವಹರಣ ಹಾಗೂ ಹಿಂಸೆಗಳನ್ನು ಎಸಗದ ಉತ್ತಮ ಮಟ್ಟದ ಮನಸ್ಸನ್ನು ಹೊಂದಿರುವವನೇ ವಿಷ್ಣುಭಕ್ತ.

ಕಲಿಕಾಲುಷ್ಯಕ್ಕೆ ಒಳಗಾಗದ ಮನಸ್ಸಿನವನು

೨೦. ಕಲಿಕಲುಷಮಲೇನ ಯಸ್ಯ ನಾತ್ಮಾ
ವಿಮಲಮತೇರ್ಮಲಿನೀಕೃತಸ್ತಮೇನಮ್ ।
ಮನಸಿ ಕೃತಜನಾರ್ದನಂ ಮನುಷ್ಯಂ
ಸತತಮವೇಹಿ ಹರೇರತೀವಭಕ್ತಮ್ ॥ — *ವಿಷ್ಣುಪುರಾಣ 3-7-21*

ಯಾರ ಮನಸ್ಸು ಕಲಿಕಾಲುಷ್ಯದಿಂದ ಮಲಿನವಾಗುವುದಿಲ್ಲವೋ, ಆದುದರಿಂದಲೇ ನಿರ್ಮಲವಾದ ಮನಸ್ಸಿನಿಂದ ಯಾವಾಗಲೂ ಜನಾರ್ದನನನ್ನು ಸ್ಮರಿಸುತ್ತಿರುವನೋ ಅವನು ಶ್ರೀಹರಿಗೆ ಅತ್ಯಂತ ಪ್ರಿಯನಾದ ಭಕ್ತ.

ಪರರ ಸೊತ್ತಿನ ಬಗ್ಗೆ ಉಪೇಕ್ಷೆ

೨೧. ಕನಕಮಪಿ ರಹಸ್ಯವೇಕ್ಷ್ಯ ಬುದ್ಧ್ಯಾ
ತೃಣಮಿವ ಯಸ್ಸಮವೈತಿ ವೈ ಪರಸ್ವಮ್ ।
ಭವತಿ ಚ ಭಗವತ್ಯನನ್ಯಚೇತಾಃ
ಪುರುಷವರಂ ತಮವೇಹಿ ವಿಷ್ಣುಭಕ್ತಮ್ ॥ — *ವಿ.ಪು. 3-7-22*

ಯಾರು ಮತ್ತೊಬ್ಬರಿಗೆ ಸೇರದ ಚಿನ್ನವನ್ನು ಏಕಾಂತದಲ್ಲಿ ಕಂಡರೂ ಅದರ ಬಗ್ಗೆ ಹುಲ್ಲಿನ ಕುರಿತು ಹೇಗೋ ಹಾಗೆ ಉಪೇಕ್ಷೆಯನ್ನು ತಾಳುವನೋ, ಯಾರು ಭಗವಂತನನ್ನು ಅನನ್ಯವಾಗಿ ಚಿಂತಿಸುತ್ತಿರುವನೋ ಅಂತಹ ಶ್ರೇಷ್ಠಪುರುಷನೇ ವಿಷ್ಣುಭಕ್ತ.

ಪರಪತ್ನ್ಯಾದಿಗಳಲ್ಲಿ ಅನಾಸಕ್ತಿ

೨೨. ಪರದಾರಾಪರದ್ರವ್ಯಪರಹಿಂಸಾಸುಯೋ ರತಿಮ್ ।
ನ ಕರೋತಿ ಪುಮಾನ್ ಭೂಪ ತೋಷ್ಯತೇ ತೇನ ಕೇಶವಃ ॥

— *ವಿ.ಪು. 3-8-14*

ಮತ್ತೊಬ್ಬರ ಪತ್ನಿ, ಸೊತ್ತು ಹಾಗೂ ಪರರ ಹಿಂಸೆ ಇವುಗಳಲ್ಲಿ ಯಾರು ಆಸಕ್ತಿಯನ್ನು ತಾಳುವುದಿಲ್ಲವೋ ಅವನ ಆ ಪ್ರವೃತ್ತಿಯಿಂದ ಕೇಶವನು ಸಂತುಷ್ಟನಾಗುವನು.

ಇತರ ಪ್ರಾಣಿಗಳ ಹತ್ಯಾದಿಗಳನ್ನು ಮಾಡುವುದಿಲ್ಲ

೩೩. ನ ತಾಡಯತಿ ನೋ ಹಂತಿ ಪ್ರಾಣಿನೋಽನ್ಯಾಂಶ್ಚ ದೇಹಿನಃ ।
ಯೋ ಮನುಷ್ಯೋ ಮನುಷ್ಯೇಂದ್ರ ತೋಷ್ಯತೇ ತೇನ ಕೇಶವಃ ।
– ವಿ.ಪು. *3-8-15*

ಯಾರು ಇತರ ಪ್ರಾಣಿಗಳನ್ನಾಗಲೀ, ಮನುಷ್ಯರನ್ನಾಗಲೀ ಹೊಡೆಯುವುದಿಲ್ಲ; ಕೊಲ್ಲುವುದಿಲ್ಲ –ಅವನ ಈ ಪ್ರವೃತ್ತಿಯಿಂದ ಕೇಶವನು ಸಂತುಷ್ಟನಾಗುವನು.

ಸಮಾನವಾಗಿ ಹಿತಕಾಮಿ

೩೪. ಯಥಾಽಽತ್ಮನಿ ಚ ಪುತ್ರೇ ಚ ಸರ್ವಭೂತೇಷು ಯಸ್ತಥಾ ।
ಹಿತಕಾಮೋ ಹರಿಸ್ತೇನ ಸರ್ವದಾ ತೋಷ್ಯತೇ ಸುಖಮ್ ॥
– ವಿ.ಪು. *3-8-17*

ತನ್ನಲ್ಲಿ, ತನ್ನ ಪುತ್ರನಲ್ಲಿ ಹೇಗೋ ಹಾಗೆಯೇ ಸರ್ವಭೂತಗಳಲ್ಲೂ ಒಂದೇ ರೀತಿಯಾಗಿ ಹಿತವನ್ನು ಬಯಸುವ ಭಕ್ತನ ಆ ಪ್ರವೃತ್ತಿಯಿಂದ ಶ್ರೀಹರಿಯು ಸಂತುಷ್ಟ ನಾಗುವನು.

ನಿರ್ಮಲವಾದ ಮನಸ್ಸು

೩೫. ಯಸ್ಯ ರಾಗಾದಿದೋಷೇಣ ನ ದುಷ್ಟಂ ನೃಪ ಮಾನಸಮ್ ।
ವಿಶುದ್ಧಚೇತಸಾ ವಿಷ್ಣುಸ್ತೋಷ್ಯತೇ ತೇನ ಸರ್ವದಾ ॥ – ವಿ.ಪು. *3-8-18*

ಯಾರ ಮನಸ್ಸು ರಾಗಾದಿ ದೋಷಗಳಿಂದ ದೋಷಿತವಾಗಿಲ್ಲವೋ ಅಂತಹ ವಿಶುದ್ಧ ಮನಸ್ಕನಾದ ಭಕ್ತನ ಆ ನಡತೆಯಿಂದ ಶ್ರೀವಿಷ್ಣು ಸಂತುಷ್ಟನಾಗುವನು.

ಭಗವಂತನಲ್ಲಿಯೇ ನೆಟ್ಟ ಮನಸ್ಸು ಹಾಗೂ ಬುದ್ಧಿ

೩೬. ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ ।
ನಿರ್ಮಮೋ ನಿರಹಂಕಾರಃ ಸಮದುಃಖಸುಖಃ ಕ್ಷಮೀ ॥

ಸಂತುಷ್ಟಃ ಸತತಂ ಯೋಗೀ ಯತಾತ್ಮಾ ದೃಢನಿಶ್ಚಯಃ ।
ಮಯ್ಯರ್ಪಿತಮನೋಬುದ್ಧಿರ್ಯೋ ಮದ್ಭಕ್ತಃ ಸ ಮೇ ಪ್ರಿಯಃ ॥
– ಗೀತಾ. *12-13, 14*

ಯಾವ ಜೀವಿಗೂ ಕೆಡುಕು ಮಾಡದವನು, ಅಪಾಯದ ಸುಳುವನ್ನು ಕಂಡು ಹಿಡಿದು ಅಪಾಯದಿಂದ ರಕ್ಷಿಸುವವನು, ಕರುಣಾಶೀಲನು, ನನ್ನದೆಂಬ ಸ್ವಾಮಿತ್ವದ ಭಾವನೆ ಇಲ್ಲದವನು, ತನ್ನಲ್ಲಿ ಇಲ್ಲದ ಗುಣಗಳನ್ನು ಉಂಟೆಂದು ತಿಳಿಯುತ್ತ ಅಹಂಕಾರ

ಪಡದವನು, ವಿಷಯಸುಖವನ್ನೂ ಸಾಂಸಾರಿಕದುಃಖವನ್ನೂ ಸಮವಾಗಿ ತಿಳಿಯುವವನು, ತಾಳ್ಮೆ ಉಳ್ಳವನು, ಭಗವಂತ ಕೊಟ್ಟದ್ದರಲ್ಲಿ ತೃಪ್ತಿ ಪಡುವವನು, ಸದಾ ಜ್ಞಾನ ಮತ್ತು ಧ್ಯಾನ ಎಂಬ ಜ್ಞಾನಸಾಧನೆಗಳನ್ನು ಅನುಷ್ಠಾನ ಮಾಡುತ್ತಿರುವವನು, ವಿಷಯಪದಾರ್ಥ ಗಳಿಂದ ಮನಸ್ಸನ್ನು ಸೆಳೆದುಕೊಂಡಿರುವವನು, ತತ್ವವಿಷಯದಲ್ಲಿ ದೃಢನಿಶ್ಚಯವುಳ್ಳವನು, ಭಗವಂತನಲ್ಲಿಯೇ ಮಗ್ನಗಳಾದ ಮನಸ್ಸು ಹಾಗೂ ಬುದ್ಧಿವುಳ್ಳವನು ಭಗವಂತನ ಭಕ್ತನಾಗಿದ್ದು ಅವನ ಪ್ರೀತಿಗೆ ಪಾತ್ರನಾಗಿರುವನು.

ಭಯಾದಿಗಳಿಗೆ ಒಳಗಾಗುವುದಿಲ್ಲ

೩೭. ಯಸ್ಮಾನ್ನೋ ದ್ವಿಜತೇ ಲೋಕೋ ಲೋಕಾನ್ನೋ ದ್ವಿಜತೇ ಚ ಯಃ ।
ಹರ್ಷಾಮರ್ಷಭಯೋದ್ವೇಗೈರ್ಮುಕ್ತೋ ಯಃ ಸ ಚ ಮೇ ಪ್ರಿಯಃ ॥

–ಗೀತಾ 12-15

ಯಾರಿಂದ ಲೋಕವು ಭಯಕ್ಕೆ ಒಳಗಾಗುವುದಿಲ್ಲವೋ, ಎಲ್ಲವೂ ಭಗವದಧೀನ ಎಂಬ ಪ್ರಜ್ಞೆಯಿಂದಾಗಿ ಯಾರು ಲೋಕಕ್ಕೆ ಭಯಪಡುವುದಿಲ್ಲವೋ, ಸುಖೋನ್ಮಾದದಿಂದ ಅಧರ್ಮವನ್ನೆಸಗದ, ಕೋಪ-ಭಯ-ಉದ್ವೇಗಗಳಿಗೆ ತುತ್ತಾಗದೆ ಭಗವಂತನ ಭಕ್ತ ನಾಗಿರುವವನು ಅವನ ಪ್ರೀತಿಗೆ ಪಾತ್ರನು.

ಸರ್ವಾರಂಭಪರಿತ್ಯಾಗಿ

೩೮. ಅನಪೇಕ್ಷಃ ಶುಚಿರ್ದಕ್ಷಃ ಉದಾಸೀನೋ ಗತವ್ಯಥಃ ।
ಸರ್ವಾರಂಭಪರಿತ್ಯಾಗೀ ಯೋ ಮದ್ಭಕ್ತಃ ಸ ಮೇ ಪ್ರಿಯಃ ॥

–ಗೀತಾ 12-16

ಭಗವಂತನ ಪ್ರೀತಿಯನ್ನು ಹೊರತಾಗಿ ಬೇರೆ ಯಾವುದನ್ನೂ ಅಪೇಕ್ಷಿಸದವನು, ಅಂತರಂಗ ಬಹಿರಂಗಗಳಲ್ಲಿ ಶುಚಿಯಾಗಿರುವವನು, ಭಗವಂತನ ಆರಾಧನೆಯಲ್ಲಿ ಸಮರ್ಥನಾಗಿರುವವನು, ಲೌಕಿಕ ವ್ಯವಹಾರಗಳಲ್ಲಿ ಉಪೇಕ್ಷೆಯಿಂದ ಇರುವವನು, ಸಾಂಸಾರಿಕ ಕ್ಲೇಶಗಳಿಗೆ ವ್ಯಥೆ ಪಡೆದವನು, ಭಗವಂತನಿಗೆ ಅಪ್ರಿಯವಾದ ಯಾವುದೇ ಕಾರ್ಯವನ್ನು ಮಾಡದವನು, ಎಲ್ಲ ಕಾರ್ಯಗಳಲ್ಲೂ ತಾನೇ ಮಾಡುವೆನೆಂಬ ಅಹಂಕಾರವನ್ನೂ-ಫಲಕಾಮನೆಯನ್ನೂ ಮಾಡದವನು –ಭಗವಂತನ ಭಕ್ತನಾಗಿದ್ದು ಅವನಿಗೆ ಪ್ರಿಯ ಎನಿಸುವನು.

ಶುಭಾಶುಭಪರಿತ್ಯಾಗೀ

೩೯. ಯೋ ನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಂಕ್ಷತಿ ।
ಶುಭಾಶುಭಪರಿತ್ಯಾಗೀ ಭಕ್ತಿಮಾನ್ ಯಃ ಸ ಮೇ ಪ್ರಿಯಃ ॥

–ಗೀತಾ 12-17

ಯಾರ ಸುಖೋನ್ಮಾದದಿಂದ ಎಂದೂ ಅಧರ್ಮಕಾರ್ಯದಲ್ಲಿ ಪ್ರವೃತ್ತರಾಗುವುದಿಲ್ಲವೋ, ಯಾರು ಪರರಿಗೆ ಎಂದೂ ಕೆಡುಕು ಮಾಡುವುದಿಲ್ಲವೋ, ಯಾರು ಸಾಂಸಾರಿಕ ವಸ್ತುಗಳ ಅಗಲಿಕೆಯಿಂದ ದುಃಖಪಡುವುದಿಲ್ಲವೋ, ಯಾರು ಜ್ಞಾನಭಕ್ತ್ಯಾದಿಗಳನ್ನು ಬಿಟ್ಟು ಬೇರೇನನ್ನೂ ಬಯಸುವುದಿಲ್ಲವೋ, ಯಾರು ಜ್ಞಾನಭಕ್ತ್ಯಾದಿಗಳನ್ನು ಬಿಟ್ಟು ಬೇರೆ ಶುಭವನ್ನೂ ಅಶುಭವನ್ನೂ ತೊರೆದಿರುವನೋ ಅವನು ಶ್ರೀವಿಷ್ಣುವಿನ ಭಕ್ತನಾಗಿದ್ದು, ಅವನ ಪ್ರೀತಿಗೆ ಪಾತ್ರನು.

ಯಾವುದರಿಂದಲೂ ತೃಪ್ತಿಪಡುವವನು

೪೦. ಸಮಃ ಶತ್ರೌ ಚ ಮಿತ್ರೇ ಚ ತಥಾ ಮಾನಾಪಮಾನಯೋಃ ।
ಶೀತೋಷ್ಣಸುಖದುಃಖೇಷು ಸಮಃ ಸಂಗವಿವರ್ಜಿತಃ ॥
ತುಲ್ಯನಿಂದಾಸ್ತುತಿರ್ಮೌನೀ ಸಂತುಷ್ಟೋ ಯೇನ ಕೇನಚಿತ್ ।
ಅನಿಕೇತಃ ಸ್ಥಿರಮತಿರ್ಭಕ್ತಿಮಾನ್ ಮೇ ಪ್ರಿಯೋ ನರಃ ।
– *ಗೀತಾ 12-18, 19*

ಶತ್ರುವಿನ ಹಾಗೂ ಮಿತ್ರನ ವಿಷಯದಲ್ಲಿ ಸಮವಾಗಿ ಅಂದರೆ ಅವರವರ ಯೋಗ್ಯತೆಗೆ ಅನುಗುಣವಾಗಿ ನಡೆದುಕೊಳ್ಳುವವನು, ಮಾನಾಪಮಾನಗಳನ್ನು ಸಮದೃಷ್ಟಿಯಿಂದ ಕಾಣುವವನು, ಶೀತ ಉಷ್ಣ ಸ್ಪರ್ಶಗಳಿಂದಾಗುವ ಸುಖದುಃಖಗಳಲ್ಲಿ ಸಮಾನನಾಗಿ ಹಿಗ್ಗದೆ ಕುಗ್ಗದೆ ಇರುವವನು, ಕರ್ಮಗಳ ಫಲಾಸಕ್ತಿ ಇಲ್ಲದವನು, ನಿಂದೆಯನ್ನೂ ಸ್ತುತಿಯನ್ನೂ ಸಮಾನವಾಗಿ ಪರಿಗಣಿಸುವವನು, ಯಾವಾಗಲೂ ಮನನಶೀಲನು, ಭಗವಂತ ನೀಡಿದ ಯಾವುದಾದರೊಂದರಿಂದಲೂ ತೃಪ್ತಿಪಡುವವನು, ಪರಮಾತ್ಮನೊಬ್ಬನನ್ನೇ ಆಶ್ರಯಿಸುವವನು, ಕುತರ್ಕಗಳಿಗೆ ಚಂಚಲವಾಗದ ಮನಸ್ಸು ಉಳ್ಳವನು –ಇಂತಹ ಭಕ್ತನು ಭಗವಂತನಿಗೆ ಪ್ರಿಯನು.

ಭಗವಂತನನ್ನು ಸರ್ವೋತ್ತಮನನ್ನಾಗಿ ತಿಳಿಯುವವರು

೪೧. ಯೇ ತು ಧರ್ಮ್ಯಾಮೃತಮಿದಂ ಯಥೋಕ್ತಂ ಪರ್ಯುಪಾಸತೇ ।
ಶ್ರದ್ದಧಾನಾ ಮತ್ಪರಮಾ ಭಕ್ತಾಸ್ತೇಽತೀವ ಮೇ ಪ್ರಿಯಾಃ ॥ – *ಗೀತಾ 12-20*

ಯಾರು ಸರ್ವಜೀವಿಗಳನ್ನೂ ದ್ವೇಷಿಸದೆ ಇರುವುದೇ ಮುಂತಾದ ಎಲ್ಲ ಗುಣಧರ್ಮಗಳನ್ನು ಅಳವಡಿಸಿಕೊಳ್ಳುವರೋ, ಶ್ರದ್ಧೆಯುಳ್ಳ ಭಗವಂತನೇ ಸರ್ವೋತ್ತಮನೆಂದು ಭಾವಿಸುವ ಅವರು ಭಗವಂತನ ಅತ್ಯಂತ ಪ್ರೀತಿಗೆ ಪಾತ್ರರಾದ ಭಕ್ತರು.

ಭಗವತ್ಪಾದಾರವಿಂದದಿಂದ ವಿಚಲಿತರಾಗದವರು

೪೨. ತ್ರಿಭುವನವಿಭವಹೇತುಭಿರ್ವಿಕುಂಠ–
ಸ್ಮೃತಿಭಿರಜೇಶಸುರಾದಿಭಿರ್ವಿಮೃಗ್ಯಾತ್ ।

ನ ಚಲತಿ ಭಗವತ್ಪಾದಾರವಿಂದಾಲ್ಲ-
ವನಿಮಿಷಾರ್ಧಮಪಿ ಸ್ಮ ಸ ವೈಷ್ಣವಾಗ್ರ್ಯಃ ॥ – ಭಾಗ. 11-2-53

ತ್ರಿಭುವನಗಳ ಸಂಪತ್ತಿಗೆ ಕಾರಣರಾದ ಬ್ರಹ್ಮಾದಿಗಳೂ ಯಾವ ಭಗವಂತನ ಪಾದಾರವಿಂದದ ಬಗ್ಗೆ ಚಿಂತನೆ ನಡೆಸುತ್ತಿರುವರೋ ಅಂತಹ ಆ ಪಾದಾರವಿಂದದಿಂದ ಅತ್ಯಂತ ಚಿಕ್ಕ ಕಾಲಾವಧಿಯಲ್ಲೂ ಯಾರು ವಿಚಲಿತರಾಗುವುದಿಲ್ಲವೋ ಅವನೇ ಶ್ರೇಷ್ಠ ವೈಷ್ಣವ.

ಭಗವಂತನಿಂದ ತ್ಯಜಿಸಲ್ಪಡದ ಹೃದಯವುಳ್ಳವನು

೪೩. ವಿಸೃಜತಿ ಹೃದಯಂ ನ ಯಸ್ಯ ಸಾಕ್ಷಾದ್
ಹರಿರವಶಾಭಿಹಿತೋಽಪ್ಯಘೌಘನಾಶಃ ।
ಪ್ರಣಯರಶನಯಾ ಧೃತಾಂಘ್ರಿಪದ್ಮಃ
ಸ ಭವತಿ ಭಾಗವತಪ್ರಧಾನ ಉಕ್ತಃ ॥ – ಭಾಗ 11-2-55

ಪ್ರೀತಿಯ ಪಾಶದಿಂದ ಕಟ್ಟಲ್ಪಟ್ಟ ಪಾದಾರವಿಂದವುಳ್ಳ ಶ್ರೀಹರಿಯು ಯಾರ ಹೃದಯವನ್ನು ಎಂದೆಂದೂ ತ್ಯಜಿಸುವುದಿಲ್ಲವೋ ಅಂತಹವನು ಶ್ರೇಷ್ಠ ಭಕ್ತ.

ಪರಸ್ತ್ರೀಯರಲ್ಲಿ ನಪುಂಸಕರು

೪೪. ವೇದವಿದ್ಯಾನಿರುಕ್ತಾ ಯೇ ವಿಪ್ರಭಕ್ತಿರತಾಃ ಸದಾ ।
ನಪುಂಸಕಾಃ ಪರಸ್ತ್ರೀಷು ಜ್ಞೇಯಾಸ್ತೇ ವೈಷ್ಣವಾಃ ಜನಾಃ ॥
– ಪದ್ಮಪುರಾಣ (ಕ್ರಿಯಾಯೋಗಸಾರ 2-87)

ವೇದವಿದ್ಯೆಯಲ್ಲಿ ಪ್ರಸಿದ್ಧರಾದವರು, ಯಾವಾಗಲೂ ಬ್ರಾಹ್ಮಣರಲ್ಲಿ ಭಕ್ತಿಯಿಂದ ಆಸಕ್ತರಾದವರು, ಪರಸ್ತ್ರೀಯರ ವಿಷಯದಲ್ಲಿ ನಪುಂಸಕರಂತೆ ಇರುವವರು ವೈಷ್ಣವರು.

ಶಾಲಗ್ರಾಮವುಳ್ಳ ಮನೆಯವರು

೪೫. ಶಾಲಗ್ರಾಮಶಿಲಾ ಯೇಷಾಂ ಗೃಹೇ ವಸತಿ ಸರ್ವದಾ ।
ಶಾಸ್ತ್ರಂ ಭಾಗವತಂ ಚೈವ ಜ್ಞೇಯಾಸ್ತೇ ವೈಷ್ಣವಾ ಜನಾಃ ॥
– ಪದ್ಮಪುರಾಣ (ಕ್ರಿಯಾಯೋಗಸಾರ 2-94)

ಯಾರ ಮನೆಯಲ್ಲಿ ಯಾವಾಗಲೂ ಶಾಲಗ್ರಾಮವಿರುವುದೋ, ಯಾರ ಮನೆಯಲ್ಲಿ ಭಾಗವತಶಾಸ್ತ್ರ ಇರುವುದೋ ಅಂತಹವರು ವೈಷ್ಣವರು.

ಭಗವದಾಯುಧಗಳ ಚಿಹ್ನೆವುಳ್ಳವರು

೪೬. ಶಂಖಚಕ್ರಗದಾಪದ್ಮೈರಂಕಿತಾನಿ ಮಮಾಯುಧೈಃ ।
ಬ್ರಹ್ಮನ್ ಯೇಷಾಂ ಶರೀರಾಣಿ ಜ್ಞೇಯಾಸ್ತೇ ವೈಷ್ಣವಾಃ ಜನಾಃ ॥

– ಪದ್ಮಪುರಾಣ (ಕ್ರಿಯಾಯೋಗಸಾರ 2-90)

ಯಾರ ಶರೀರಗಳು ಭಗವಂತನ ಆಯುಧಗಳಾದ ಶಂಖಚಕ್ರಗದಾಪದ್ಮಗಳಿಂದ ಅಂಕಿತಗಳಾಗಿವೆಯೋ ಅಂತಹವರು ವೈಷ್ಣವರು.

ದೇವಸ್ವಾದಿಗಳನ್ನು ವಿಷದಂತೆ ಭಾವಿಸುವವರು

೪೭. ದೇವಸ್ವಂ ಬ್ರಾಹ್ಮಣದ್ರವ್ಯಂ ಪರಸ್ವಂ ಚ ಚತುರ್ಮುಖ ।
ಪಶ್ಯಂತಿ ವಿಷವದ್ ಯೇ ಚ ಜ್ಞೇಯಾಸ್ತೇ ವೈಷ್ಣವಾ ಜನಾಃ ॥

– ಪದ್ಮಪುರಾಣ (ಕ್ರಿಯಾಯೋಗಸಾರ 2-106)

ಯಾರು ದೇವತೆಗಳಿಗೆ ಸೇರಿದ ಸಂಪತ್ತನ್ನು, ಬ್ರಾಹ್ಮಣರ ಸಂಪತ್ತನ್ನು, ಇನ್ನೊಬ್ಬರ ಸಂಪತ್ತನ್ನು ವಿಷದಂತೆ ಅತ್ಯಂತ ಹೇಯವನ್ನಾಗಿ ಕಾಣುವರೋ ಅಂತಹವರು ವೈಷ್ಣವರು.

ಭಗವಂತನನ್ನು ಪೂಜಿಸುವವರು

೪೮. ಬಹುನಾತ್ರ ಕಿಮುಕ್ತೇನ ಭಾಷಿತೇನ ಪುನಃ ಪುನಃ ।
ಮಮಾರ್ಚಾಂ ಯೇ ಚ ಕುರ್ವಂತಿ ವಿಜ್ಞೇಯಾಸ್ತೇ ಚ ವೈಷ್ಣವಾಃ ॥

– ಪದ್ಮಪುರಾಣ (ಕ್ರಿಯಾಯೋಗಸಾರ 2-108)

ತುಂಬ ಲಕ್ಷಣ ಹೇಳುವ ಆವಶ್ಯಕತೆ ಇಲ್ಲ. ಯಾರು ಭಗವಂತನ ಪೂಜೆಯನ್ನು ನಡೆಸುವರೋ ಅವರು ವೈಷ್ಣವರು.

ಭಗವಂತನನ್ನೇ ಶರಣಾಗತರಾದವರು

೪೯. ಅನನ್ಯದೇವತಾ ಭಕ್ತಾ ಯೇ ಮದ್‌ಭಕ್ತಜನಪ್ರಿಯಾಃ ।
ಮಾಮೇವ ಶರಣಂ ಪ್ರಾಪ್ತಾ ಮದ್ಭಕ್ತಾಸ್ತೇ ಪ್ರಕೀರ್ತಿತಾಃ ॥

– ಮಹಾಭಾರತ (ಅಶ್ವಮೇಧಿಕ –92ನೇ ಅಧ್ಯಾಯ.)

ಇತರ ದೇವತೆಗಳ ಸ್ವತಂತ್ರ ವ್ಯಕ್ತಿತ್ವದ ಆಧಾರದಲ್ಲಿ ಅವರ ಭಕ್ತರಾಗದವರು, ಭಗವಂತನ ಭಕ್ತಜನರಿಗೆ ಪ್ರಿಯರಾದವರು, ಭಗವಂತನನ್ನೇ ಶರಣಾಗತರಾದವರು ಭಗವಂತನ ಭಕ್ತರು.

ಯಾವಾಗಲೂ ಅರ್ಚಿಸುತ್ತಿರುವವರು

೫೦. ತಸ್ಮಾತ್ತು ಸಾತ್ವಿಕೋ ಭೂತ್ವಾ ಶುಚಿಃ ಕ್ರೋಧವಿವರ್ಜಿತಃ ।
ಮಾಮರ್ಚಯೇತ್ತು ಸತತಂ ಮತ್ಪ್ರಿಯತ್ವಂ ಯದೀಚ್ಛತಿ ।

– ಮಹಾಭಾರತ (ಆಶ್ವಮೇಧಿಕ –92ನೇ ಅಧ್ಯಾಯ)

ಸಾತ್ವಿಕನಾಗಿ, ಶುಚಿಯಾಗಿ, ಕ್ರೋಧದಿಂದ ದೂರನಾಗಿ ಯಾವಾಗಲೂ ಭಗವಂತನನ್ನು ಆರಾಧಿಸುತ್ತಿರಬೇಕು. ಅಂತಹವನಷ್ಟೇ ಭಗವಂತನಿಗೆ ಪ್ರಿಯನೆನಿಸುವನು.

ಏಕಾದಶೀ ವ್ರತಾಚರಣೆ

೫೧. ಏಕಾದಶೀವ್ರತಂ ಯೇ ಚ ಭಕ್ತಿಭಾವೇನ ಕುರ್ವತೇ ।
ಗಾಯಂತಿ ಮಮ ನಾಮಾನಿ ಜ್ಞೇಯಾಸ್ತೇ ವೈಷ್ಣವಾ ಜನಾಃ ॥

– ಪದ್ಮಪುರಾಣ (ಕ್ರಿಯಾಯೋಗಸಾರ 2-88)

ಯಾರು ಭಕ್ತಿಯಿಂದ ಏಕಾದಶೀವ್ರತವನ್ನು ಆಚರಿಸುವರೋ ಶ್ರೀವಿಷ್ಣುವಿನ ನಾಮಗಳನ್ನು ಗಾನಮಾಡುತ್ತಿರುವರೋ ಅವರು ವೈಷ್ಣವರು.

ಎಲ್ಲೆಡೆ ಪರಮಾತ್ಮನ ದರ್ಶನ

೫೨. ಸರ್ವಭೂತೇಷು ಯಃ ಪಶ್ಯೇದ್ ಭಗವದ್ಭಾವಮಾತ್ಮನಃ ।
ಭೂತಾನಿ ಭಗವತ್ಯಾತ್ಮನ್ಯೇಷ ಭಾಗವತೋತ್ತಮಃ ॥

– ಭಾಗ 11-2-45

ಎಲ್ಲ ಭೂತಗಳಲ್ಲೂ ಭಗವಂತನನ್ನು ಅಂತರ್ಯಾಮಿಯಾಗಿರುವನೆಂದೂ, ಎಲ್ಲ ಭೂತಗಳೂ ತಾನೂ ಅಂತಹ ಭಗವಂತನ ಆಧಾರದಲ್ಲಿಯೇ ಇರುವವರೆಂದೂ ಕಾಣುವವನು ಶ್ರೇಷ್ಠ ಭಗವದ್‌ಭಕ್ತನು.

ಎಲ್ಲೆಡೆ ಭಗವಂತನ ಪ್ರೇರಣೆಯನ್ನು ಗುರುತಿಸುವವನು

೫೩. ಪೂರ್ಣತ್ವಾದಾತ್ಮಶಬ್ದೋಕ್ತಃ ಕಶ್ಚಿತ್ ಸರ್ವನರೋತ್ತಮಃ ।
ಸೋಽಪಿ ನಾರಾಯಣೋ ನಾನ್ಯಃ ಸ ಚ ಸರ್ವೇಷು ಸಂಸ್ಥಿತಃ ॥

ತದ್ವಶಾ ಇತರೇ ಸರ್ವೇ ಶ್ರೀಬ್ರಹ್ಮೇಶಪುರಃಸರಾಃ ।
ಸ ಏವ ತು ಸ್ವಭಕ್ತೇಷು ಸ್ಥಿತ್ವಾಽನುಗ್ರಹಕಾರಕಃ ॥

ಅಜ್ಞೇಷ್ವಜ್ಞಾನಯಂತಾ ಚ ದ್ವಿಷತ್ಸು ದ್ವೇಷಕಾರಕಃ ।
ತತ್ಪ್ರೇರಿತಾಸ್ತದನ್ಯೇ ತು ಪ್ರಿಯದ್ವೇಷಾಧಿಕಾರಿಣಃ ॥

ಅತಸ್ತತ್ಪ್ರೇರಣಾದೇವ ಪ್ರೇಮಾದ್ಯಾ ಮಮ ಜಜ್ಞಿರೇ ।
ಇತಿ ಪಶ್ಯತಿ ಯೋ ಬುದ್ಧ್ಯಾ ಸ ತು ಭಾಗವತೋತ್ತಮಃ ॥

– *ಭಾ.ತಾ.ನಿ. (11-2-46)*

ಗುಣಪೂರ್ಣನಾಗಿರುವುದರಿಂದ ಆತ್ಮ ಎನಿಸಿರುವ ನಾರಾಯಣನು ಎಲ್ಲರಲ್ಲೂ ಇರುವನು. ಲಕ್ಷ್ಮೀದೇವಿ ಚತುರ್ಮುಖ ಮುಂತಾದವರೆಲ್ಲ ಅವನ ಅಧೀನರು. ಅವನೇ ತನ್ನ ಭಕ್ತರಲ್ಲಿದ್ದು ಅನುಗ್ರಹ ಮಾಡುವನು. ಅಜ್ಞಾನಿಗಳಲ್ಲಿದ್ದು ಅವರ ಅಜ್ಞಾನವನ್ನು ನಿಯಂತ್ರಿಸುವನು. ದ್ವೇಷಿಗಳಲ್ಲಿಯ ದ್ವೇಷವನ್ನು ಪ್ರೇರಿಸುವನು. ಹೀಗೆ ಅವನ ಪ್ರೇರಣೆಗೆ ಒಳಗಾಗಿಯೇ ಆಯಾ ವ್ಯಕ್ತಿಗಳು ಪ್ರೇಮಾದಿಗಳನ್ನು ಮಾಡುವರು. ನನ್ನಲ್ಲೂ ಅವನ ಪ್ರೇರಣೆಯಿಂದಲೇ ಪ್ರೇಮಾದಿ ಭಾವನೆಗಳು ಉಂಟಾಗಿವೆ –ಎಂದು ಕಾಣುವವನೇ ಶ್ರೇಷ್ಠ ಭಗವದ್‌ಭಕ್ತ.

ನಿರ್ಭೀತನಾಗಿರುವವನು

೫೪. ಅಲೋಲಜಿಹ್ವಃ ಸಮುಪಸ್ಥಿತೋ ಧೃತಿಂ
ನಿಧಾಯ ಚಕ್ಷುರ್ಯುಗಮಾತ್ರಮೇವ ತತ್ ।
ಮನಶ್ಚ ವಾಚಂ ಚ ನಿಗೃಹ್ಯ ಚಂಚಲಂ
ಭಯಾನ್ನಿವೃತ್ತೋ ಮಮ ಭಕ್ತ ಉಚ್ಯತೇ ॥

– *ಮಹಾಭಾರತ (ಆಶ್ವಮೇಧಿಕಪರ್ವ -92)*

ನಾಲಗೆಯ ಚಾಪಲ್ಯದಿಂದ ದೂರನಾಗಿರುವವನು, ಸಾತ್ವಿಕ ಧೈರ್ಯವುಳ್ಳವನು, ನಾಲ್ಕುಮೊಳ ದೂರದಷ್ಟು ದೃಷ್ಟಿಹಾಯಿಸಿ ಸಂಚರಿಸುವವನು, ಚಂಚಲವಾದ ಮನಸ್ಸನ್ನೂ ವಾಗಿಂದ್ರಿಯವನ್ನೂ ಹಿಡಿತದಲ್ಲಿಟ್ಟುಕೊಂಡು ನಿರ್ಭೀತನಾಗಿರುವವನು ಭಗವಂತನ ಭಕ್ತ ಎನಿಸುವನು.

ನಿತ್ಯ ವಿಷ್ಣುನೈವೇದ್ಯವನ್ನು ಉಣ್ಣುವವನು

೫೫. ನಿತ್ಯ ನೈವೇದ್ಯಭೋಜೀ ಯಃ ಶ್ರೀವಿಷ್ಣೋಸ್ಸ ಹಿ ವೈಷ್ಣವಃ ।
ನಿತ್ಯಂ ಶತೋಪವಾಸಾನಾಂ ಜೀವನ್ಮುಕ್ತಫಲಂ ಭವೇತ್ ॥

– *ಬ್ರಹ್ಮವೈವರ್ತ (ಬ್ರಹ್ಮಖಂಡ 27-16)*

ಯಾರು ಯಾವಾಗಲೂ ಶ್ರೀವಿಷ್ಣುವಿನ ನೈವೇದ್ಯವನ್ನೇ ಉಣ್ಣುವನೋ ಅವನೇ ವೈಷ್ಣವ. ಅವನಿಗೆ ನೂರು ಉಪವಾಸಗಳನ್ನಾಚರಿಸಿದ ಪುಣ್ಯ. ಜೀವನ್ಮುಕ್ತಿಯ ಫಲ.

ಶ್ರೀಕೃಷ್ಣನ ಗುಣಕೀರ್ತನೆ ಮಾಡಿಸುವವನು

೫೬. ಸ್ವವಕ್ತ್ರೇ ಪರವಕ್ತ್ರೇ ಚ ವಂದ್ಯಾ ಜಿಹ್ವಾ ಪ್ರಯತ್ನತಃ ।
ಕುರುತೇ ಯಾ ಕಲೌ ಪುತ್ರ ಶ್ರೀಕೃಷ್ಣಗುಣಕೀರ್ತನಮ್ ॥

– *ಸ್ಕಂದಪುರಾಣ (ವೈಷ್ಣವಖಂಡ 15-64)*

ಕಲಿಕಾಲದಲ್ಲಿ ಯಾರು ತನ್ನ ಬಾಯಿಯಲ್ಲಾಗಲೀ, ಮತ್ತೊಬ್ಬರ ಬಾಯಿಯಲ್ಲಾಗಲೀ ಶ್ರೀಕೃಷ್ಣನ ಗುಣಕೀರ್ತನೆ ಮಾಡಿಸುವರೋ ಅವರ ನಾಲಗೆ ಸ್ತುತ್ಯವಾದುದು.

ಉಳಿದವರ ಉತ್ಸವವನ್ನೇ ತಮ್ಮ ಉತ್ಸವವನ್ನಾಗಿ ಭಾವಿಸುವವರು

೫೭. ಸದಾಚಾರಾವದಾತಾಶ್ಚ ಪರೋತ್ಸವನಿಜೋತ್ಸವಾಃ ।
ಪಶ್ಯಂತಃ ಸರ್ವಭೂತಸ್ಥಂ ವಾಸುದೇವಮಮತ್ಸರಾಃ ॥

–ಸ್ಕಂದಪುರಾಣ (ವೈಷ್ಣವಖಂಡ 15-102)

ಸದಾಚಾರಗಳನ್ನು ಪಾಲಿಸುತ್ತ ಶುದ್ಧರಾಗಿರುವವರು; ಪರರ ಉತ್ಸವವೇ ತಮ್ಮ ಉತ್ಸವವೆಂದು ಭಾವಿಸು 'ವರು, ಎಲ್ಲ ಭೂತಗಳಲ್ಲೂ ವಾಸುದೇವನನ್ನು ಕಾಣುವವರು; ಯಾರಲ್ಲೂ ಮತ್ಸರ ತಾಳದವರು –ವಾಸುದೇವನ ಭಕ್ತರು.

ಶತಕೋಟಿ ಪಟ್ಟು ಹೆಚ್ಚು ಪ್ರೀತಿಯನ್ನು ಹರಿಯಲ್ಲಿ ತಾಳುವವರು.

೫೮. ವಿಷಯೇಷ್ವವಿವೇಕಾನಾಂ ಯಾ ಪ್ರೀತಿರುಪಜಾಯತೇ ।
ವಿತನ್ವತೇ ತು ತಾಂ ಪ್ರೀತಿಂ ಶತಕೋಟಿಗುಣಾಂ ಹರೌ ॥

–ಸ್ಕಂದಪುರಾಣ (ವೈಷ್ಣವಖಂಡ 10-104)

ಅವಿವೇಕಿಗಳು ವಿಷಯಪದಾರ್ಥಗಳಲ್ಲಿ ಎಷ್ಟು ಪ್ರೀತಿ ತಾಳುವರೋ ಅದಕ್ಕಿಂತ ನೂರುಕೋಟಿ ಹೆಚ್ಚು ಪಟ್ಟು ಪ್ರೀತಿಯನ್ನು ಶ್ರೀಹರಿಯಲ್ಲಿ ತಾಳುವವರು ವಾಸುದೇವನ ಭಕ್ತರು.

ಭಗವಂತನನ್ನು ಅಂತರ್ಯಾಮಿಯನ್ನಾಗಿ ಭಾವಿಸುವವರು

೫೯. ಅಂತರ್ಯಾಮೀ ಯದಾ ದೇವಃ ಸರ್ವೇಷಾಂ ಹೃದಿ ಸಂಸ್ಥಿತಃ ।
ಸೇವ್ಯೋ ವಾ ಸೇವಕೋ ವಾಽಪಿ ತ್ವತ್ತೋ ನಾನ್ಯೋಽಸ್ತಿ ಕಶ್ಚನ ।
ಇತಿ ಭಾವನಯಾ ಕೃತಾವಧಾನಾಃ ಪ್ರಣಮಂತಃ ಸತತಂ ಚ ಕೀರ್ತಯಂತಃ ॥

–ಸ್ಕಂದಪುರಾಣ (ವೈಷ್ಣವಖಂಡ 10-108)

ನೀನು ಅಂತರ್ಯಾಮಿಯಾಗಿ ಎಲ್ಲರ ಹೃದಯದಲ್ಲಿರುವವನೆಂದ ಮೇಲೆ ಸೇವ್ಯನಾಗಲೀ ಸೇವಕನಾಗಲೀ ನೀನೇ. ನಿನ್ನನ್ನು ಬಿಟ್ಟರೆ ಸೇವಕರು ಸೇವೆಮಾಡಿ ಸೇವಕರೆನಿಸಲೂ ಅಸಮರ್ಥರು ಎಂಬ ಭಾವನೆಯಿಂದ, ಏಕಾಗ್ರತೆಯಿಂದ ಭಗವಂತನನ್ನು ನಮಸ್ಕರಿಸುತ್ತ, ಕೀರ್ತನೆ ನಡೆಸುತ್ತ ಇರುವವರು ವಾಸುದೇವನ ಭಕ್ತರು.

ಹರಿಯ ಸಂಬಂಧದ ಜ್ಞಾಪಕಗಳು

೬೦. ಲಲಾಟೇ ಚೋರ್ಧ್ವಪುಂಡ್ರಂ ತು ಬಾಹುಮೂಲೇ ಸುದರ್ಶನಮ್
ಕಂಠೇ ಯದ್ವಕ್ಷಮಾಲಾಂ ತು ಪವಿತ್ರಂ ದಕ್ಷಿಣೇ ಕರೇ ।

ವೈಷ್ಣವೇನ ಸದಾ ಧಾರ್ಯಾ ಹರಿಸಂಬಂಧವೇದನಾತ್ ।

— ವಸಿಷ್ಠಸ್ಮೃತಿ 1-34

ವೈಷ್ಣವನಾದವನು ಹಣೆಯಲ್ಲಿ ಊರ್ಧ್ವಪುಂಡ್ರವನ್ನೂ, ಬಾಹುಮೂಲದಲ್ಲಿ ಸುದರ್ಶನಚಕ್ರವನ್ನೂ ಕಂಠದಲ್ಲಿ ಅಕ್ಷಮಾಲೆಯನ್ನೂ ಬಲಗೈಯಲ್ಲಿ ಪವಿತ್ರವನ್ನೂ ಧರಿಸುವ ಮೂಲಕ ತನಗೆ ಶ್ರೀಹರಿಯ ಜೊತೆಗಿರುವ ದಾಸ್ಯದ ಸಂಬಂಧವನ್ನು ಸ್ಪಷ್ಟಪಡಿಸಬೇಕು.

ವೈಷ್ಣವಗುಣ

(ನಿಷೇಧಮುಖದ ನಿರೂಪಣೆಯಲ್ಲಿ)

ಪುರುಷಪಶು ವಾಸುದೇವ ಭಕ್ತನಾಗಲಾರ

೬೧. ಅಶುಭಮತಿರಸತ್ಪ್ರವೃತ್ತಿಸಕ್ತಃ
ಸತತಮನಾರ್ಯ ಕುಶೀಲಸಂಗಮತ್ತಃ ।
ಅನುದಿನ ಕೃತ ಪಾಪಬಂಧಯುಕ್ತಃ
ಪುರುಷಪಶುರ್ನ ಹಿ ವಾಸುದೇವಭಕ್ತಃ । — ವಿಷ್ಣುಪುರಾಣ 3-7-31

ಕೆಟ್ಟ ಬುದ್ಧಿಯುಳ್ಳ, ಕೆಟ್ಟ ಚಟುವಟಿಕೆಗಳಲ್ಲೇ ಆಸಕ್ತನಾದ, ಯಾವಾಗಲೂ ಕೆಟ್ಟ ಚಾರಿತ್ರ್ಯಸಂಪನ್ನ ವ್ಯಕ್ತಿಗಳ ಸಂಪರ್ಕಕ್ಕೆ ಒಳಗಾದ, ಯಾವಾಗಲೂ ಪಾಪಗಳನ್ನೆಸಗುತ್ತಿರುವ, ಆದುದರಿಂದಲೇ 'ಪಶು' ಎಂದೇ ಪರಿಗಣಿಸಲು ಯೋಗ್ಯನಾದ ಅಂತಹ ಕೆಟ್ಟ ಪುರುಷ ವಾಸುದೇವನ ಭಕ್ತನಾಗಲಾರ.

ಬಂಧುಗಳ ಬಗ್ಗೆಯೂ ದುಡ್ಡಿನ ಆಸೆ

೬೨. ಪರಮಸುಹೃದಿ ಬಾಂಧವೇ ಕಲತ್ರೇ
ಸುತತನಯಾ ಪಿತೃಮಾತೃಭೃತ್ಯವರ್ಗೇ
ಶಠಮತಿರುಪಯಾತಿ ಯೋಽರ್ಥತೃಷ್ಣಾಂ
ತಮಧಮಚೇಷ್ಟಮವೇಹಿ ನಾಸ್ಯ ಭಕ್ತಮ್ । — ವಿಷ್ಣುಪುರಾಣ 3-7-30

ದುಷ್ಟಬುದ್ಧಿಯ ಯಾರು ತನ್ನ ಆಪ್ತಗೆಳೆಯ, ಬಂಧುಗಳು, ಪತ್ನಿ, ಪುತ್ರ, ಪುತ್ರಿ, ತಂದೆತಾಯಿ, ಸೇವಕರು –ಇವರ ವಿಷಯದಲ್ಲೂ ದುಡ್ಡಿನ ಲೋಭವನ್ನು ತಾಳುವನೋ ಅಂತಹ ಕೆಟ್ಟ ಚಟುವಟಿಕೆಯ ವ್ಯಕ್ತಿ ಶ್ರೀವಿಷ್ಣುವಿನ ಭಕ್ತನಾಗಲಾರ.

ಬ್ರಾಹ್ಮಣಗರ್ದಭ

೬೩. ಚತುರ್ವೇದೀ ಚ ಯೋ ವಿಪ್ರೋ ವಾಸುದೇವಂ ನ ವಿಂದತಿ ।
ವೇದಭಾರಭರಾಕ್ರಾಂತಃ ಸ ವೈ ಬ್ರಾಹ್ಮಣಗರ್ದಭಃ ॥ — ವಸಿಷ್ಠಸ್ಮೃತಿ 1-14

ನಾಲ್ಕು ವೇದಗಳ ಅಧ್ಯಯನ ನಡೆಸಿಯೂ ಯಾರು ಶ್ರೀವಾಸುದೇವನನ್ನು ಪೂಜಿಸುವುದಿಲ್ಲವೋ ಅವನು ಬರೇ ವೇದದ ಭಾರವನ್ನು ಹೊತ್ತ ಬ್ರಾಹ್ಮಣಗರ್ದಭ; ಅಂದರೆ ಕತ್ತೆ.

ಬ್ರಾಹ್ಮಣತ್ವ ನಶಿಸುವುದು

೬೪. ತಸ್ಮಾದವೈಷ್ಣವತ್ವೇನ ಬ್ರಾಹ್ಮಣತ್ವಂ ವಿಹನ್ಯತೇ ।
ವೈಷ್ಣವತ್ವೇನ ಸಂಸಿದ್ಧಿಃ ಲಭತೇ ನಾತ್ರ ಸಂಶಯಃ । *–ವಸಿಷ್ಠಸ್ಮೃತಿ 1-15*

ಅವೈಷ್ಣವತ್ವದಿಂದಾಗಿ ಬ್ರಾಹ್ಮಣತ್ವವೇ ನಾಶವಾಗುವುದು. ವೈಷ್ಣವತ್ವವನ್ನು ಅಳವಡಿಸಿಕೊಂಡರಷ್ಟೇ ಎಲ್ಲಬಗೆಯ ಸಿದ್ಧಿ ದೊರಕುವುದು.

ವೈಷ್ಣವಕರ್ತವ್ಯ

(ವಿಧಿಮುಖದ ನಿರೂಪಣೆಯಲ್ಲಿ)

ಕೃತಯುಗದಲ್ಲಿ ಪ್ರಚುರವಾಗಿದ್ದ ಶುದ್ಧ ವೈಷ್ಣವಧರ್ಮ

೬೫. ಸ್ವೋಚಿತೇನೈವ ಧರ್ಮೇಣ ವಿಷ್ಣುಪೂಜಾಮೃತೇ ಕ್ವಚಿತ್ ।
ನಾಪ್ರವೃತ್ತಿಃ ಪ್ರವರ್ತಿರ್ವಾ[೧] ಯತ್ರ ಧರ್ಮಃ ಸ ವೈಷ್ಣವಃ ॥

ಏಷ ಕಾರ್ತಯುಗೋ ಧರ್ಮಃ ಪಾಂಚರಾತ್ರಶ್ಚ ವೈದಿಕಃ ।
ತತ್ಪ್ರೀತ್ಯರ್ಥಂ ವಿನಾನ್ಯಸ್ಮೈ[೨] ನೋದಬಿಂದುಂ ನ ತಂಡುಲಮ್ ॥

ದದ್ಯಾತ್ ನಿರಾಶೀಶ್ಚ[೩] ಸದಾ ಭವೇತ್ ಭಕ್ತಶ್ಚ[೪] ಕೇಶವೇ ।
ನೈತತ್ಸಮೋಽಧಿಕೇ ವಾಪಿ[೫] ಕುರ್ಯಾತ್ ಶಂಕಾಮಪಿ ಕ್ವಚಿತ್ ॥

ಜಾನೀಯಾತ್[೬] ತದಧೀನಂ ಚ ಸರ್ವಂ ತತ್ತ್ವವಿತ್[೭] ಸದಾ ।
ಯಥಾಕ್ರಮಂ ತು ದೇವಾನಾಂ[೮] ತಾರತಮ್ಯವಿದೇವ ಚ ॥

ಏಷ ಭಾಗವತೋ ಮುಖ್ಯಃ ತ್ರೇತಾದಿಷು ವಿಶೇಷತಃ ।
ಏಷ ಧರ್ಮೋಽತಿಫಲದೋ ವಿಶೇಷೇಣ ಪುನಃ ಕಲೌ ।
ಏವಂ ಭಾಗವತೋ ಯಸ್ತು ಸ ಏವ ಹಿ ವಿಮುಚ್ಯತೇ ॥

–ಬ್ರಹ್ಮವೈವರ್ತ (ಗೀ.ತಾ. 2-40)

ಕೃತಯುಗದಲ್ಲಿ ಪ್ರಚುರವಾಗಿದ್ದ, ಪಂಚರಾತ್ರದಲ್ಲಿ ಹಾಗೂ ವೇದದಲ್ಲಿ ಪ್ರತಿಪಾದಿತವಾಗಿರುವ, ತ್ರೇತಾದಿಯುಗಗಳಲ್ಲೂ ವಿಶೇಷವಾಗಿ ಫಲಪ್ರದವಾಗಿರುವ, ಕಲಿಯುಗದಲ್ಲಂತೂ ಇನ್ನೂ ವಿಶೇಷವಾಗಿ ಫಲಪ್ರದವೆನಿಸಿರುವ, ಮೋಕ್ಷಪ್ರಾಪ್ತಿಗೆ ಪ್ರಯೋಜಕವಾದ 'ವೈಷ್ಣವಧರ್ಮ'ದಲ್ಲಿ ಎಂಟು ಅಂಶಗಳು ಸೇರಿಕೊಂಡಿವೆ–

೧. ವಿಷ್ಣುಪೂಜೆ ಎಂಬ ಅನುಸಂಧಾನವಿಲ್ಲದೆ, ಸ್ವವಿಹಿತಕರ್ಮಗಳಲ್ಲಿ ಪ್ರವೃತ್ತಿಯನ್ನಾಗಲೀ ನಿಷಿದ್ಧಕರ್ಮಗಳಲ್ಲಿ ನಿವೃತ್ತಿಯನ್ನಾಗಲೀ ಅಳವಡಿಸಿಕೊಳ್ಳಬಾರದು.

೨. ಶ್ರೀವಿಷ್ಣುವಿನ ಪ್ರೀತಿಗಾಗಿ ಎಂಬ ಅನುಸಂಧಾನವಿಲ್ಲದೆ ಒಂದು ನೀರಿನ ಹನಿಯನ್ನಾಗಲೀ ಒಂದು ಅಕ್ಕಿಯ ಕಾಳನ್ನಾಗಲೀ ಇನ್ನೊಬ್ಬರಿಗೆ ನೀಡಬಾರದು.

೩. ಯಾವಾಗಲೂ ಜ್ಞಾನ-ಭಕ್ತಿಗಳನ್ನು ಬಿಟ್ಟು ಬೇರೆ ಯಾವುದರಲ್ಲೂ ಆಶೆಯನ್ನು ತಾಳಬಾರದು.

೪. ಯಾವಾಗಲೂ ಕೇಶವನ ಭಕ್ತನಾಗಿದ್ದಿರಬೇಕು.

೫. ಶ್ರೀಕೇಶವನಿಗೆ ಸಮಾನನಾದ ವ್ಯಕ್ತಿಯಾಗಲೀ ಉತ್ತಮನಾದ ವ್ಯಕ್ತಿಯಾಗಲೀ ಇರಬಹುದೇ ಎಂದು ಸಂದೇಹವನ್ನೂ ಯಾವಾಗಲೂ ತಾಳಬಾರದು.

೬. ಎಲ್ಲವೂ ಶ್ರೀಕೇಶವನ ವಶದಲ್ಲಿದೆ ಎಂದು ತಿಳಿದಿರಬೇಕು.

೭. ಕೇಶವನಿಗೆ ಸಂಬಂಧಿಸುವ ಅವನ ಸರ್ವೋತ್ತಮತ್ವ, ಗುಣಪೂರ್ಣತ್ವ, ದೋಷದೂರತ್ವ, ಸ್ವಾತಂತ್ರ್ಯ -ಮುಂತಾದ ತತ್ತ್ವಗಳನ್ನು ಯಾವಾಗಲೂ ಚೆನ್ನಾಗಿ ತಿಳಿದಿರಬೇಕು.

೮. ದೇವತೆಗಳ ತಾರತಮ್ಯವನ್ನು ಕ್ರಮಬದ್ಧವಾಗಿ ತಿಳಿದಿರಬೇಕು.

ಆರಂಭಮಾತ್ರವೂ ಇಚ್ಛೆಮಾತ್ರವೂ ನಿಷ್ಫಲವಲ್ಲ

೬೬. **ಪ್ರಾರಂಭಮಾತ್ರಮಿಚ್ಛಾ ವಾ ವಿಷ್ಣುಧರ್ಮೋ ನ ನಿಷ್ಫಲಾ ।**
ನ ಚಾನ್ಯಧರ್ಮಾಕರಣಾತ್ ದೋಷವಾನ್ ವಿಷ್ಣುಧರ್ಮಕೃತ್ ॥

– ಆಗ್ನೇಯೇ (ಗೀ. ತಾ. 2-40)

ವಿಷ್ಣುಧರ್ಮವನ್ನು ಆರಂಭಿಸಿ ಏನೋ ವಿಘ್ನ ಬಂದು ಅಷ್ಟಕ್ಕೇ ನಿಲ್ಲಿಸಿದರೂ ಆ ಆರಂಭವೂ ನಿಷ್ಫಲವೆನಿಸುವುದಿಲ್ಲ. ವಿಷ್ಣುಧರ್ಮವನ್ನು ನಡೆಸಬೇಕೆಂದು ಬಯಸಿ ಏನೋ ತೊಂದರೆಯಿಂದಾಗಿ ಆ ಧರ್ಮವನ್ನು ಅನುಷ್ಠಾನಕ್ಕೆ ತರಲಾಗಲಿಲ್ಲ ಎಂದರೂ ಆ ಬಯಕೆಯೂ ನಿರರ್ಥಕವೆನಿಸುವುದಿಲ್ಲ. ವೈಷ್ಣವಧರ್ಮಾಚರಣೆಯಲ್ಲಿ ನಿರತನಾಗಿದ್ದ ಪ್ರಯುಕ್ತ ಅನುಷ್ಠೇಯವಾದ ಇತರ ದೇವತಾಪರವಾದ ಧರ್ಮಾಚರಣೆ ನಡೆಸದಿದ್ದರೂ ದೋಷ ಸಂಭವಿಸದು.

ಆದುದರಿಂದ ವೈಷ್ಣವರು ಹಿಂದೆಮುಂದೆ ನೋಡದೆ ವೈಷ್ಣವಧರ್ಮಾಚರಣೆಯನ್ನು ಬಯಸುತ್ತಿರಬೇಕು; ಆರಂಭಿಸಬೇಕು. ಉಳಿದೆಲ್ಲ ಧರ್ಮಕ್ಕಿಂತ ವೈಷ್ಣವಧರ್ಮಕ್ಕೆ ಜೀವನದಲ್ಲಿ ಅಧಿಕ ಪ್ರಾಶಸ್ತ್ಯ ನೀಡಬೇಕು.

ವಿಷ್ಣುಪೂಜೆ ಇತ್ಯಾದಿ

೬೭. ಏಕಾದಶ್ಯುಪವಾಸಶ್ಚ ಶಂಖಚಕ್ರಾದಿಧಾರಣಮ್ ।
ತುಲಸ್ಯಾ ಪೂಜನಂ ವಿಷ್ಣೋಸ್ತ್ರಿತಯಂ ವೈಷ್ಣವಂ ಸ್ಮೃತಮ್ ॥

– ವೃ.ಹಾ.ಸ್ಮೃ. 8-278

ಏಕಾದಶಿಯಂದು ಉಪವಾಸ, ಶಂಖಚಕ್ರಾದಿಗಳ ಧಾರಣೆ ಹಾಗೂ ತುಲಸಿಯಿಂದ ಶ್ರೀವಿಷ್ಣುವಿನ ಆರಾಧನೆ –ಇವು ಮೂರು ವೈಷ್ಣವರ ಪ್ರಮುಖ ಕರ್ತವ್ಯಗಳು.

ವೈಷ್ಣವರ ಪೂಜೆ ಇತ್ಯಾದಿ

೬೮. ಕಿಮತ್ರ ಬಹುನೋಕ್ತೇನ ಸಾರಂ ವಕ್ಷ್ಯಾಮಿ ತೇ ನೃಪ ।
ಏಕಾದಶ್ಯುಪವಾಸಶ್ಚ ಶಂಖಚಕ್ರಾದಿಧಾರಣಮ್ ।
ತದೀಯಾನಾಂ ಪೂಜನಂ ಚ ವೈಷ್ಣವಂ ತ್ರಿತಯಂ ಸ್ಮೃತಮ್ ॥

– ವೃ.ಹಾ.ಸ್ಮೃ. 8-304

ಹೇ ಅಂಬರೀಶ! ತುಂಬ ಹೇಳಿ ಏನು ಉಪಯೋಗ? ಶ್ರೇಷ್ಠ ಅಂಶವನ್ನು ಹೇಳುವೆನು. ಏಕಾದಶಿಯಂದು ಉಪವಾಸ, ಶಂಖಚಕ್ರಾದಿಗಳ ಧಾರಣೆ ಹಾಗೂ ಶ್ರೀವಿಷ್ಣುವಿನ ಭಕ್ತರನ್ನು ಆರಾಧಿಸುವುದು –ಇವು ಮೂರು ವೈಷ್ಣವಧರ್ಮ ಎನಿಸಿವೆ.

ಮಾನಸವ್ರತ

೬೯. ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಮಕಲ್ಕತಾ ।
ಏತಾನಿ ಮಾನಸಾನ್ಯಾಹುರ್ವ್ರತಾನಿ ಹರಿತುಷ್ಟಯೇ ॥

– ಪದ್ಮಪುರಾಣ (ಪಾತಾಲಖಂಡ 84-42)

ಹಿಂಸಿಸದಿರುವಿಕೆ, ಸುಳ್ಳು ಹೇಳದಿರುವಿಕೆ, ಕದಿಯದಿರುವಿಕೆ, ಬ್ರಹ್ಮಚರ್ಯ ಹಾಗೂ ಪ್ರಾಮಾಣಿಕತೆ –ಇವು ಶ್ರೀಹರಿಯ ಸಂತೋಷಕ್ಕಾಗಿ ನಡೆಸಬೇಕಾದ ಮಾನಸವ್ರತಗಳು.

ವಾಚಿಕವ್ರತ

೭೦. ವೇದಸ್ವಾಧ್ಯಯನಂ ವಿಷ್ಣೋಃ ಕೀರ್ತನಂ ಸತ್ಯಭಾಷಣಮ್ ।
ಅಪೈಶುನ್ಯಮಿದಂ ರಾಜನ್ ವಾಚಿಕಂ ವ್ರತಮುತ್ತಮಮ್ ॥

– ಪದ್ಮಪುರಾಣ (ಪಾತಾಲಖಂಡ 84-44)

ವೇದಾಧ್ಯಯನ; ಶ್ರೀವಿಷ್ಣುವಿನ ಕೀರ್ತನೆ, ಸತ್ಯಮಾತು, ಚಾಡಿಕೋರತನ ಇಲ್ಲದಿರುವಿಕೆ ಇವೆಲ್ಲ ಶ್ರೀಹರಿಯ ತುಷ್ಟಿಗಾಗಿ ಕೈಗೊಳ್ಳಬೇಕಾದ ವಾಚಿಕವ್ರತಗಳು.

ಯಾವಾಗಲೂ ಹರಿನಾಮಕೀರ್ತನೆ

೭೧. ಚಕ್ರಾಯುಧಸ್ಯ ನಾಮಾನಿ ಸದಾ ಸರ್ವತ್ರ ಕೀರ್ತಯೇತ್ ।
ನಾಶೌಚಂ ಕೀರ್ತನೇ ತಸ್ಯ ಸ ಪವಿತ್ರಕರೋ ಯತಃ ॥

– ಪದ್ಮಪುರಾಣ (ಪಾತಾಲಖಂಡ 84-45)

ಭಗವಂತನ ನಾಮಗಳ ಸಂಕೀರ್ತನೆಯನ್ನು ಎಲ್ಲ ಕಾಲದಲ್ಲೂ ಎಲ್ಲ ದೇಶದಲ್ಲೂ ನಡೆಸುತ್ತಿರಬೇಕು. ಎಲ್ಲೂ, ಯಾವಾಗಲೂ ನಾಮಸಂಕೀರ್ತನೆ ನಡೆಸಲು ಅಶೌಚ ಎಂಬುದೇ ಇಲ್ಲ. ಯಾಕೆಂದರೆ ಎಲ್ಲವನ್ನೂ ಪವಿತ್ರಗೊಳಿಸುವವನು ಅವನೇ ತಾನೇ?

ವರ್ಣಾಶ್ರಮಾಚಾರಗಳಿಂದ ಆರಾಧನೆ

೭೨. ವರ್ಣಾಶ್ರಮಾಚಾರವತಾ ಪುರುಷೇಣ ಪರಃ ಪುಮಾನ್ ।
ವಿಷ್ಣುರಾರಾಧ್ಯತೇ ಪಂಥಾ ನಾನ್ಯಃ ಸಂತೋಷಕಾರಣಮ್ ॥

– ಪದ್ಮಪುರಾಣ (ಪಾತಾಲಖಂಡ 84–46)

ವರ್ಣಾಶ್ರಮಾಚಾರಗಳಲ್ಲಿ ನಿಷ್ಠನಾದ ವ್ಯಕ್ತಿಯು ತಾನು ಪಾಲಿಸುವ ಆ ಆಚಾರ ಗಳಿಂದಲೇ ಶ್ರೀವಿಷ್ಣುವನ್ನು ಪೂಜಿಸಬೇಕು. ಭಗವಂತನಿಗೆ ಅದೇ ಸಂತೋಷಜನಕ ವಾದುದು.

ಪತಿವ್ರತೆಯರಿಂದ ವಾಸುದೇವನ ಆರಾಧನೆ

೭೩. ಪತಿಪ್ರಿಯಹಿತಾಭಿಕ್ಷ ಮನೋವಾಕ್ಕಾಯಸಂಯಮೈಃ ।
ವ್ರತೈರಾರಾಧ್ಯತೇ ಸ್ತ್ರೀಭಿರ್ವಾಸುದೇವೋ ದಯಾನಿಧಿಃ ॥

– ಪದ್ಮಪುರಾಣ (ಪಾತಾಲಖಂಡ 84-47)

ಪತಿಗೆ ಪ್ರಿಯವಾಗುವ, ಹಿತವಾಗುವ ಮನಸ್ಸು–ದೇಹ ಹಾಗೂ ವಾಗಿಂದ್ರಿಯಗಳ ನಿಗ್ರಹರೂಪಗಳಾದ ವ್ರತಗಳಿಂದ ಪತಿವ್ರತಾಸ್ತ್ರೀಯರು ವಾಸುದೇವನನ್ನು ಆರಾಧಿಸಬೇಕು.

ಒಳ್ಳೆಯ ಮಾತುಗಳಿಂದ ಆರಾಧನೆ

೭೪. ಪರಾಪವಾದಂ ಪೈಶುನ್ಯಮನೃತಂ ಚ ನ ಭಾಷತೇ ।
ಅನ್ಯೋದ್ವೇಗಕರಂ ವಾಪಿ ತೋಷ್ಯತೇ ತೇನ ಕೇಶವಃ ॥

– ವಿಷ್ಣುಪುರಾಣ 3-8-13

ಇನ್ನೊಬ್ಬರ ನಿಂದನೆ, ಚಾಡಿಕೋರತನ, ಸುಳ್ಳು ಹಾಗೂ ಮತ್ತೊಬ್ಬರಿಗೆ ಉದ್ವೇಗ ವನ್ನುಂಟುಮಾಡುವ ಮಾತುಗಳನ್ನು ಆಡದ ಮೂಲಕ ಶ್ರೀಕೇಶವನನ್ನು ಆರಾಧಿಸ ಲಾಗುವುದು.

ದೇವದ್ವಿಜ ಗುರುಗಳ ಶುಶ್ರೂಷೆ

೭೫. ದೇವದ್ವಿಜಗುರೂಣಾಂ ಚ ಶುಶ್ರೂಷಾಸು ಸದೋದ್ಯತಃ ।
ತೋಷ್ಯತೇ ತೇನ ಗೋವಿಂದಃ ಪುರುಷೇಣ ನರೇಶ್ವರ ॥

– ವಿಷ್ಣುಪುರಾಣ 3-8-16

ಯಾರು ದೇವತೆಗಳ ಬ್ರಾಹ್ಮಣರ ಹಾಗೂ ಗುರುಗಳ ಶುಶ್ರೂಷೆಯಲ್ಲಿ ಯಾವಾಗಲೂ ತನ್ನನ್ನು ತೊಡಗಿಸಿಕೊಂಡಿರುವನೋ ಅವನ ಆ ಪ್ರವೃತ್ತಿಯಿಂದ ಗೋವಿಂದನು ಸಂತುಷ್ಟನಾಗುವನು.

ಶಾಸ್ತ್ರೋಕ್ತ ಧರ್ಮಾಚರಣೆ

೭೬. ವರ್ಣಾಶ್ರಮೇಷು ಯೇ ಧರ್ಮಾಶ್ಶಾಸ್ತ್ರೋಕ್ತಾ ನೃಪಸತ್ತಮ ।
ತೇಷು ತಿಷ್ಠನ್ನರೋ ವಿಷ್ಣುಮಾರಾಧಯತಿ ನಾನ್ಯಥಾ ॥

– ವಿಷ್ಣುಪುರಾಣ 3-8-19

ವರ್ಣ ಮತ್ತು ಆಶ್ರಮಗಳ ವಿಷಯದಲ್ಲಿ ಶಾಸ್ತ್ರದಿಂದ ಯಾವ ಯಾವ ಧರ್ಮಗಳನ್ನು ಹೇಳಲಾಗಿದೆಯೋ ಆ ಎಲ್ಲ ಧರ್ಮಗಳನ್ನು ಅಳವಡಿಸಿಕೊಳ್ಳುವ ಮೂಲಕ ಶ್ರೀವಿಷ್ಣುವನ್ನು ಆರಾಧಿಸಬಹುದೇ ಹೊರತು ಆ ಧರ್ಮಗಳನ್ನು ಆಚರಿಸದೆ ಆರಾಧಿಸಲಾಗದು.

ಸರ್ವಸ್ವವನ್ನು ನೀಡಿಯಾದರೂ ಭಾಗವತವನ್ನು ಸಂಗ್ರಹಿಸಬೇಕು

೭೭. ಸರ್ವಸ್ವೇನಾಪಿ ಲೋಕೇಶ ಕರ್ತವ್ಯಃ ಶಾಸ್ತ್ರಸಂಗ್ರಹಃ ।
ವೈಷ್ಣವಸ್ತು ಸದಾ ಭಕ್ತ್ಯಾ ತುಷ್ಟ್ಯರ್ಥಂ ಮಮ ಪುತ್ರಕ ॥

– ಸ್ಕಂದಪುರಾಣ (ವೈಷ್ಣವಖಂಡ 16-43)

ವೈಷ್ಣವನಾದವನು ಭಕ್ತಿಯಿಂದ ಭಗವಂತನ ಪ್ರೀತಿಗಾಗಿ ಸರ್ವಸ್ವವನ್ನು ನೀಡಿಯಾದರೂ ಭಾಗವತಗ್ರಂಥವನ್ನು ಸಂಗ್ರಹಿಸಬೇಕು.

ಔಷಧವನ್ನು ಸಮರ್ಪಿಸಬೇಕು

೭೮. ಅನರ್ಪಯಿತ್ವಾ ಯೋ ಭುಂಕ್ತೇ ಅನ್ನಪಾನಂ ಚ ಯತ್ ।
ಶ್ವಾನವಿಷ್ಠಾ ಸಮಂ ಚಾನ್ನಂ ಪಾನಂ ಚ ಮದಿರಾಸಮಮ್ ।
ತಸ್ಮಾನ್ಸಮಾರ್ಪಯೇತ್ ಪುತ್ರ ಅನ್ನಪಾನಾದಿ ಚೌಷಧಮ್ ।
ಭಕ್ಷಯೇತ್ ಪರಯಾ ಭಕ್ತ್ಯಾ ಅಶುಚೇ ಶುಚಿಕಾರಕಮ್ ॥

– ಸ್ಕಂದಪುರಾಣ (ವೈಷ್ಣವಖಂಡ 15-28, 29)

ಯಾರು ಭಗವಂತನಿಗೆ ಅರ್ಪಿಸದೆ ಅನ್ನವನ್ನಾಗಲೀ ಪಾನೀಯವನ್ನಾಗಲೀ ಸ್ವೀಕರಿಸುವರೋ ಅವರ ಪಾಲಿಗೆ ಆ ಅನ್ನ ನಾಯಿಯ ಅಮೇಧ್ಯದಂತಾದರೆ, ಆ ಪಾನೀಯ ಮದ್ಯದಂತಾಗುವುದು. ಆದುದರಿಂದ ಅನ್ನವನ್ನೂ ಪಾನೀಯವನ್ನೂ ಔಷಧ ವನ್ನೂ ಭಗವಂತನಿಗೆ ಅರ್ಪಿಸಿಯೇ ಭಕ್ತಿಯಿಂದ ಸ್ವೀಕರಿಸಬೇಕು. ಇದರಿಂದಾಗಿ ಆ ವಸ್ತುಗಳೆಲ್ಲ ಶುಚಿಗಳೆನಿಸುವವು.

ನಿರ್ಮಾಲ್ಯ ತುಳಸೀಮಾಲೆಯನ್ನು ಧರಿಸಬೇಕು

೭೯. ತುಲಸೀಕಲ್ಪಿತಾಂ ಮಾಲಾಂ ವಿಷ್ಣೋರಂಗಾಪಕರ್ಷಿತಾಮ್ ।
ಧಾರಯೇನ್ಮೂರ್ಧ್ನಿ ಕಂಠೇ ಚ ಭಕ್ತೋ ಯೋ ವಿನ್ಯಸೇದ್ ಹೃದಿ ।
ತಾವತ್‌ಸಂಖ್ಯಂ ವಾಜಿಮೇಧಫಲವ್ಯಗ್ರಮಶ್ನುತೇ ॥

– ಸ್ಕಂದಪುರಾಣ (ವೈಷ್ಣವಖಂಡ 38-122)

ಶ್ರೀವಿಷ್ಣುವಿನ ಪ್ರತೀಕದಿಂದ ತೆಗೆದ ತುಲಸೀಮಾಲೆಯನ್ನು ಯಾವ ಭಕ್ತನು ತನ್ನ ಹೃದಯದಲ್ಲಿ ಇಟ್ಟುಕೊಂಡು ತಲೆಯಲ್ಲೂ ಕಂಠದಲ್ಲೂ ಧರಿಸುವನೋ ಅವನಿಗೆ ಅಷ್ಟು ಬಾರಿ ಅಶ್ವಮೇಧಯಾಗವನ್ನು ಪೂರ್ಣವಾಗಿ ನಡೆಸಿದಷ್ಟು ಪುಣ್ಯ ಬರುವುದು.

ನೈವೇದ್ಯವನ್ನು ತ್ಯಜಿಸಿದರೆ ಬ್ರಹ್ಮಹತ್ಯೆ

೮೦. ವಿಷ್ಣೋರ್ನಿವೇದಿತಂ ಪುಷ್ಪಂ ನೈವೇದ್ಯಂ ವಾ ಫಲಂ ಜಲಮ್ ।
ಪ್ರಾಪ್ತಿಮಾತ್ರೇಣ ಭೋಕ್ತವ್ಯಂ ತ್ಯಾಗೇನ ಬ್ರಹ್ಮಹಾ ಜನಃ ॥

– ಬ್ರಹ್ಮವೈವರ್ತ (2-236-30)

ಶ್ರೀವಿಷ್ಣುವಿಗೆ ಅರ್ಪಿಸಿದ ಹೂವನ್ನಾಗಲೀ ನೈವೇದ್ಯವನ್ನಾಗಲೀ ಫಲವನ್ನಾಗಲೀ ನೀರನ್ನಾಗಲೀ ದೊರಕಿದಾಕ್ಷಣ ಸ್ವೀಕರಿಸಬೇಕು. ಒಂದುವೇಳೆ ಅವನ್ನು ತ್ಯಜಿಸಿದರೆ ಬ್ರಹ್ಮಹತ್ಯೆಯ ಪಾಪ ಸಂಭವಿಸುವುದು.

ಕೋಟಿಪಟ್ಟು ಅಧಿಕ ಪುಣ್ಯ

೮೧. ತುಲಸೀಕಾಷ್ಠಮಾಲಾಭಿರ್ಭೂಷಿತಃ ಕರ್ಮ ಆಚರನ್ ।
ಪಿತೃಣಾಂ ದೇವತಾನಾಂ ಚ ಕೃತಂ ಕೋಟಿಗುಣಂ ಭವೇತ್ ॥

– ಪದ್ಮಪುರಾಣ (ಪಾತಾಲಖಂಡ 79-66)

ಯಾರು ತುಳಸೀಕಾಷ್ಠದ ಮಾಲೆಗಳನ್ನು ಧರಿಸಿಕೊಂಡು ದೇವಕಾರ್ಯಗಳನ್ನು ಪಿತೃಕಾರ್ಯಗಳನ್ನು ನಡೆಸುವನೋ ಅವನಿಗೆ ಕೋಟಿಪಟ್ಟು ಅಧಿಕಪುಣ್ಯ ಸಂಭವಿಸುವುದು.

ಒಂಬತ್ತು ಬಗೆಯ ಪೂಜೆಗಳು

೮೨. ಅರ್ಚನಂ ಮನ್ತ್ರಪಠನಂ ಧ್ಯಾನಂ ಹೋಮಶ್ಚ ವಂದನಮ್ ।
ಸ್ತುತಿರ್ಯೋಗಃ ಸಮಾಧಿಶ್ಚ ತಥಾ ಮಂತ್ರಾರ್ಥಚಿಂತನಮ್ ।
ಏವಂ ನವವಿಧಾ ಪ್ರೋಕ್ತಾ ಚೇಜ್ಯಾ ವೈಷ್ಣವಸತ್ತಮೈಃ ॥

– ವೃ.ಹಾ.ಸ್ಮೃ. 8-149

ಶ್ರೀವಿಷ್ಣುವಿನ ಅರ್ಚನೆ, ಮಂತ್ರಪಠನ, ಚಿಂತನೆ, ಅಗ್ನಿಮುಖದ ಆರಾಧನೆ, ನಮಸ್ಕಾರ, ಸ್ತುತಿ, ಮನಸ್ಸನ್ನು ಭಗವಂತನಲ್ಲಿ ನೆಲೆಗೊಳಿಸುವುದು, ಪೂರ್ಣವಾಗಿ ಭಗವಂತನಲ್ಲಿ ಮಗ್ನವಾಗುವುದು ಹಾಗೂ ಮಂತ್ರಾರ್ಥಚಿಂತನೆ –ಈ ಒಂಬತ್ತು ಬಗೆಯ ಪೂಜೆಯನ್ನು ವೈಷ್ಣವಶ್ರೇಷ್ಠರು ನಡೆಸಬೇಕು.

ಆವರಣರೂಪದಿಂದ ಇತರ ದೇವತಾಪೂಜೆ

೮೩. ಅರ್ಚಯಿತ್ವಾ ಜಗನ್ನಾಥಂ ವೈಷ್ಣವಃ ಪುರುಷೋತ್ತಮಮ್ ।
ತದಾವರಣರೂಪೇಣ ಯಜೇದ್ದೇವಾನ್ ಸಮಂತತಃ ।
ಅನ್ಯಥಾ ನರಕಂ ಯಾತಿ ಯಾವದಾಭೂತಸಂಪ್ಲವಮ್ ॥

– ವೃ.ಹಾ.ಸ್ಮೃತಿ. 8-270

ಜಗದೊಡೆಯನಾದ ಶ್ರೀಹರಿಯನ್ನು ಪೂಜಿಸಿ, ಇತರ ದೇವತೆಗಳನ್ನು ಅವನ ಸುತ್ತ ಪರಿವಾರರೂಪದಿಂದ ಇರುವವರನ್ನಾಗಿ ಪೂಜಿಸಬೇಕು. ಇದಕ್ಕೆ ವ್ಯತಿರಿಕ್ತವಾಗಿ ಪೂಜಿಸಿದರೆ ಪ್ರಳಯದ ವರೆಗೆ ನರಕದಲ್ಲಿ ಬೀಳಬೇಕಾದೀತು!

ವಿಷ್ಣುವಿನ ನೈವೇದ್ಯವನ್ನೇ ನೀಡಬೇಕು

೮೪. ವಿಷ್ಣೋರ್ನಿವೇದಿತಂ ಹವ್ಯಂ ದೇವೇಭ್ಯೋ ಜುಹುಯಾತ್ತಥಾ ।
ಪಿತೃಭ್ಯಶ್ಚೈವ ತದ್ದದ್ಯಾತ್ ಸರ್ವಮಾನಂತ್ಯಮಶ್ನುತೇ ॥

– ವೃ.ಹಾ.ಸ್ಮೃ. 8-275

ಶ್ರೀವಿಷ್ಣುವಿಗೆ ಸಮರ್ಪಿಸಿದ ನೈವೇದ್ಯದಿಂದಲೇ ದೇವತೆಗಳಿಗೆ ಅಗ್ನಿಮುಖದಲ್ಲಿ ಹೋಮಿಸಬೇಕು. ಪಿತೃಗಳಿಗೆ ಶ್ರಾದ್ಧದಲ್ಲಿ ನೀಡಬೇಕು. ಇದರಿಂದಾಗಿ ಅನಂತಫಲ ದೊರಕುವುದು.

ಏಕಾದಶಿಯಂದು ಉಪವಾಸಾದಿ

೮೫. ಕಿಮತ್ರ ಬಹುನೋಕ್ತೇನ ಸಾರಂ ವಕ್ಷ್ಯಾಮಿ ತೇ ನೃಪ ।
ಏಕಾದಶ್ಯುಪವಾಸಶ್ಚ ಶಂಖಚಕ್ರಾದಿಧಾರಣಮ್ ।
ತದೀಯಾನಾಂ ಪೂಜನಂ ಚ ವೈಷ್ಣವಂ ತ್ರಿತಯಂ ಸ್ಮೃತಮ್ ॥

– ವೃ.ಹಾ.ಸ್ಮೃ. 8-304

ಹೇ ಅಂಬರೀಷ! ತುಂಬ ಹೇಳಿ ಏನು ಉಪಯೋಗ? ಶ್ರೇಷ್ಠ ಅಂಶವನ್ನು ಹೇಳುವೆನು. ಏಕಾದಶಿಯಂದು ಉಪವಾಸ, ಶಂಖಚಕ್ರಾದಿಗಳ ಧಾರಣೆ ಹಾಗೂ ವಿಷ್ಣುಭಕ್ತರ ಪೂಜೆ –ಈ ಮೂರು ವೈಷ್ಣವಧರ್ಮ ಎನಿಸಿದೆ.

ಅವೈಷ್ಣವಾನ್ನದ ಭೋಗ ಸಲ್ಲ

೮೬. ಭಗವಂತಮನುದ್ದಿಶ್ಯ ನ ದದ್ಯಾನ್ನ ಯಜೇತ್ ಕ್ವಚಿತ್ ।
ನಾವೈಷ್ಣವಾನ್ನಂ ಭುಂಜೀತ ದದ್ಯಾನ್ನಾವೈಷ್ಣವಾಯ ಚ ॥

–*ವೈ.ಹಾ.ಸ್ಮೃ. 8-307*

ಶ್ರೀವಿಷ್ಣುವಿನ ಪ್ರೀತಿಯನ್ನು ಉದ್ದೇಶಿಸದೆ ಯಾರಿಗೂ ಏನನ್ನೂ ನೀಡಬಾರದು. ಎಲ್ಲೂ ಯಾಗ ನಡೆಸಬಾರದು. ಅವೈಷ್ಣವರ ಅನ್ನದ ಭೋಜನ ಸಲ್ಲ. ಹಾಗೆಯೇ ಅವೈಷ್ಣವರಿಗೆ ದಾನವನ್ನು ಮಾಡಬಾರದು.

ಪಿತೃಗಳಿಗೆ ಶ್ರೀಹರಿ ನೈವೇದ್ಯ

೮೭. ಹರ್ಯರ್ಪಿತಂ ತು ಯಚ್ಚಾನ್ನಂ ಯಚ್ಚ ಪಾದೋದಕಂ ಹರೇಃ ।
ತುಲಸೀಂ ವಾ ಪಿತೄಣಾಂ ಚ ದತ್ವಾ ಶ್ರಾದ್ಧಾಯುತಂ ಲಭೇತ್ ॥

–*ವೈ.ಹಾ.ಸ್ಮೃ. 8-324*

ಶ್ರೀಹರಿಗೆ ಅರ್ಪಿಸಲ್ಪಟ್ಟ ಅನ್ನ ಹಾಗೂ ತುಲಸಿ ಮತ್ತು ಶ್ರೀಹರಿಯ ಪಾದೋದಕ ಇವನ್ನು ಪಿತೃಗಳಿಗೆ ನೀಡಿದಲ್ಲಿ ಹತ್ತುಸಾವಿರ ಶ್ರಾದ್ಧಗಳನ್ನು ನಡೆಸಿದಷ್ಟು ಪುಣ್ಯ ಸಂಭವಿಸುವುದು.

ಶಂಖಚಕ್ರಧಾರಿಗಳನ್ನೇ ಗೌರವಿಸಬೇಕು

೮೮. ಶಂಖಚಕ್ರೋರ್ಧ್ವಪುಂಡ್ರಾದಿ ಚಿಹ್ನೈಃ ಪ್ರಿಯತಮೈರ್ಹರೇಃ ।
ಅನ್ವಿತಾನ್ ಬ್ರಾಹ್ಮಣಾನೇವ ಪೂಜಯೇತ್ ಸರ್ವಕರ್ಮಸು ॥

–*ವೈ.ಹಾ.ಸ್ಮೃ. 8-329*

ಶ್ರೀಹರಿಗೆ ಪ್ರಿಯಗಳಾದ ಶಂಖ, ಚಕ್ರ, ಊರ್ಧ್ವಪುಂಡ್ರಗಳ ಚಿಹ್ನೆಗಳಿಂದ ಕೂಡಿದ ಬ್ರಾಹ್ಮಣರನ್ನೇ ಎಲ್ಲ ಕರ್ಮಗಳಲ್ಲೂ ಪೂಜಿಸಬೇಕು.

ಸದಾ ಸರ್ವತ್ರ ನಾಮಕೀರ್ತನೆ

೮೯. ಚಕ್ರಾಯುಧಸ್ಯ ನಾಮಾನಿ ಸದಾ ಸರ್ವತ್ರ ಕೀರ್ತಯೇತ್ ।
ನಾಶೌಚಂ ಕೀರ್ತನೇ ತಸ್ಯ ಸ ಪವಿತ್ರಕರೋ ಯತಃ ॥

–*ಪದ್ಮಪುರಾಣ (ಪಾತಾಲಖಂಡ 84-45)*

ಶ್ರೀವಿಷ್ಣುವಿನ ನಾಮಗಳನ್ನು ಯಾವಾಗಲೂ ಎಲ್ಲೆಲ್ಲೂ ಕೀರ್ತಿಸುತ್ತಿರಬೇಕು. ನಾಮಕೀರ್ತನೆ ನಡೆಸಲು ಮೈಲಿಗೆ ಇಲ್ಲ. ಯಾಕೆಂದರೆ ಅವನೇ ಪವಿತ್ರಕರನು.

ಅಪರಾಧಸಹಸ್ರಗಳ ಕ್ಷಮೆ

೯೦. ಅಪರಾಧಸಹಸ್ರಾಣಿ ಕ್ರಿಯಂತೇಽಹರ್ನಿಶಂ ಮಯಾ ।
ತವಾಹಮಿತಿ ಮಾಂ ಮತ್ವಾ ಕ್ಷಮಸ್ವ ಮಧುಸೂದನ ॥
ಇತಿ ಮಂತ್ರಂ ಸಮುಚ್ಚಾರ್ಯ ಪ್ರಣಮೇದ್ದಂಡವದ್ ಭುವಿ ।
ಅಪರಾಧಸಹಸ್ರಾಣಿ ಕ್ಷಮತೇ ಸರ್ವದಾ ಹರಿಃ ॥

– ಪದ್ಮಪುರಾಣ (ಪಾತಾಲಖಂಡ 79-46)

ನನ್ನಿಂದ ಹಗಲುರಾತ್ರಿ ಎನ್ನದೆ ಸಾವಿರಾರು ಅಪರಾಧಗಳು ನಡೆಯುತ್ತಿರುತ್ತವೆ. ನಾನು ನಿನಗೆ ಸೇರಿದವನೆಂದು ಭಾವಿಸಿ ನನ್ನ ಆ ಅಪರಾಧಗಳನ್ನು ಕ್ಷಮಿಸು. ಈ ಮಂತ್ರವನ್ನು ಹೇಳಿ ಭೂಮಿಯ ಮೇಲೆ ದಂಡಪ್ರಣಾಮ ಮಾಡಬೇಕು. ಆಗ ಶ್ರೀಹರಿ ಖಂಡಿತಾ ಕ್ಷಮಿಸುವನು.

ತುಳಸೀಪತ್ರದ ಧಾರಣೆ

೯೧. ಯೋ ಧೃತ್ವಾ ತುಲಸೀಪತ್ರಂ ಶಿರಸಾ ವಿಷ್ಣುತತ್ಪರಃ ।
ಕರೋತಿ ಸರ್ವಕಾರ್ಯಾಣಿ ಫಲಮಾಪ್ನೋತಿ ಚಾಕ್ಷಯಮ್ ॥

– ಪದ್ಮಪುರಾಣ (ಪಾತಾಲಖಂಡ 79-64)

ವಿಷ್ಣುಭಕ್ತನಾದ ಯಾರು ತನ್ನ ತಲೆಯಲ್ಲಿ ತುಳಸೀಪತ್ರವನ್ನು ಧರಿಸಿಕೊಂಡು ಪೂಜೆ ಮುಂತಾದ ಕಾರ್ಯಗಳನ್ನು ನಡೆಸುವನೋ ಅವನು ಅಕ್ಷಯಫಲವನ್ನು ಹೊಂದುವನು.

ತುಳಸಿಮಾಲೆಯನ್ನು ಅರ್ಪಿಸಿ ಧರಿಸುವಿಕೆ

೯೨. ನಿವೇದ್ಯ ಕೇಶವೇ ಮಾಲಾಂ ತುಳಸೀಕಾಷ್ಠನಿರ್ಮಿತಾಮ್ ।
ವಹತೇ ಯೋ ನರೋ ಭಕ್ತ್ಯಾ ತಸ್ಯ ನಶ್ಯತಿ ಪಾತಕಮ್ ।

– ಪದ್ಮಪುರಾಣ (ಪಾತಾಲಖಂಡ 79-66)

ತುಳಸಿಯ ಕಾಷ್ಠದಿಂದ ರಚಿಸಿದ ಮಾಲೆಯನ್ನು ಕೇಶವನಿಗೆ ಸಮರ್ಪಿಸಿ, ಬಳಿಕ ಯಾರು ಭಕ್ತಿಯಿಂದ ಧರಿಸುವನೋ ಅವನ ಪಾತಕ ಪರಿಹಾರ ಹೊಂದುವುದು.

ಪರಿವಾರತಯಾ ಗ್ರಾಹ್ಯಾಃ

೯೩. ಅಂಗಭಾವೇನ ದೇವನಾಮರ್ಚನಂ ನ ನಿಷಿದ್ಧ್ಯತೇ ।
ಸ್ವತಂತ್ರಬುದ್ಧ್ಯಾ ಯಃ ಕುರ್ಯಾತ್ ಬ್ರಾಹ್ಮಣೋ ನರಕಂ ವ್ರಜೇತ್ ॥

– ವಸಿಷ್ಠಸ್ಮೃತಿ 1-26

ದೇವತೆಗಳು ಭಗವಂತನ ಪರಿವಾರದವರು ಎಂಬ ಭಾವನೆಯಿಂದ ಇತರ ದೇವತೆಗಳ ಪೂಜೆ ನಿಷಿದ್ಧವಲ್ಲ. ಅವರಲ್ಲಿ ಸ್ವತಂತ್ರ ವ್ಯಕ್ತಿತ್ವವನ್ನು ಆರೋಪಿಸಿ ಪೂಜಿಸಿದಲ್ಲಿ ನರಕದಲ್ಲಿ ಬೀಳಬೇಕಾದೀತು!

ವೈಷ್ಣವನ ೧೬ ಕರ್ತವ್ಯಗಳು

೯೪. ಸುದರ್ಶನೋರ್ಧ್ವಪುಂಡ್ರಾಣಾಂ ಧಾರಣಂ ಪ್ರಥಮಂ ಸ್ಮೃತಮ್ ।
ತನ್ಮಂತ್ರಾಧ್ಯಯನಂ ಚೈವ ತದೀಯಾರಾಧನಂ ತಥಾ ॥
ನಿತ್ಯಮಾರಾಧನಂ ವಿಷ್ಣೋರ್ಧ್ಯಾನಂ ಹೋಮೋ ಜಪಸ್ತಥಾ ।
ತತ್ಕಥಾಶ್ರವಣಂ ಚೈವ ತನ್ನಾಮ್ನಶ್ಚೈವ ಕೀರ್ತನಮ್ ॥
ತತ್ಪಾದತೀರ್ಥಸೇವಾ ಚ ತನ್ನಿವೇದಿತಭೋಜನಮ್ ।
ಪ್ರಣಾಮಸ್ತತ್ಪುರತೋ ನರ್ತನಂ ಗೀತವಾದನಮ್ ॥
ತತ್‌ಸ್ತೋತ್ರಪಠನಂ ಚೈವ ತದನ್ಯೇಷಾಮಸೇವ್ಯತಾ ।
ಏವಂ ಸಂಪೂಜಯನ್ನಿತ್ಯಂ ನಾರಾಯಣಮನಾಮಯಮ್ ।
ಸ ವೈಷ್ಣವೋ ಭವೇದ್ವಿಪ್ರಸ್ಸರ್ವಲೋಕೇಷು ಪೂಜಿತಃ ॥

– ವಸಿಷ್ಠಸ್ಮೃತಿ 1-29....32

ಸುದರ್ಶನಚಕ್ರದ ಹಾಗೂ ಊರ್ಧ್ವಪುಂಡ್ರಗಳ ಧಾರಣೆ ಪ್ರಥಮ ಕರ್ತವ್ಯ. ಶ್ರೀವಿಷ್ಣುಪರ ಮಂತ್ರಗಳ ಅಧ್ಯಯನ, ವಿಷ್ಣುಭಕ್ತರ ಆರಾಧನೆ, ವಿಷ್ಣುವಿನ ನಿತ್ಯಾರಾಧನೆ, ಶ್ರೀವಿಷ್ಣುವಿನ ಧ್ಯಾನ, ಹೋಮ ಹಾಗೂ ಜಪ, ಅವನ ಕಥಾಶ್ರವಣ, ಅವನ ನಾಮಗಳ ಕೀರ್ತನೆ, ಅವನ ಕ್ಷೇತ್ರಗಳಿಗೆ ಪಾದಯಾತ್ರೆ, ಅವನಿಗೆ ಸಮರ್ಪಿಸದ ಅನ್ನದ ಭಕ್ಷಣೆ, ಅವನೆದುರು ನಮಸ್ಕಾರ, ನರ್ತನ ಹಾಗೂ ಹಾಡುವಿಕೆ, ಅವನ ಸ್ತೋತ್ರಗಳ ಪಠನ, ಉಳಿದ ದೇವತೆಗಳನ್ನು ಅವರ ಸ್ವತಂತ್ರ ವ್ಯಕ್ತಿತ್ವದ ಆಧಾರದಲ್ಲಿ ಸೇವಿಸದಿರುವುದು –ಈ ಹದಿನಾರು ಕರ್ತವ್ಯಗಳಿಂದ ನಾರಾಯಣನನ್ನು ಸೇವಿಸುವನೋ ಅವನು ವೈಷ್ಣವನೆನಿಸಿ ಸರ್ವಲೋಕಗಳಲ್ಲಿ ಪೂಜಿತನಾಗುವನು.

ವೈಷ್ಣವಕರ್ತವ್ಯ

[ನಿಷೇಧಮುಖದ ನಿರೂಪಣೆಯಲ್ಲಿ]

ಜೀವನ ನಿರರ್ಥಕ

೯೫. ಕಿಂ ತೇಷಾಂ ಜೀವಿತೇನೇಹ ಪಶುವಚ್ಚೇಷ್ಟಿತೇನ ಕಿಮ್ ।
ಯೇಷಾಂ ನ ಪ್ರವಣಂ ಚಿತ್ತಂ ವಾಸುದೇವೇ ಜಗನ್ಮಯೇ ॥

– ಪದ್ಮಪುರಾಣ (ಪಾತಾಲಖಂಡ 84-74)

ಜಗತ್ತಿನಲ್ಲಿ ಪ್ರಧಾನನಾದ ಶ್ರೀವಾಸುದೇವನಲ್ಲಿ ಯಾರ ಮನಸ್ಸು ಆಸಕ್ತವಾಗುವುದಿಲ್ಲವೋ ಅವನು ಬದುಕಿ ಏನು ಪ್ರಯೋಜನ? ಜೀವನದಲ್ಲಿ ಪಶುಗಳಂತೆ ಚಟುವಟಿಕೆಗಳನ್ನು ನಡೆಸಿ ಏನು ಉಪಯೋಗ?

ಶ್ರುತಿಸ್ಮೃತಿಗಳ ಉಲ್ಲಂಘನೆ ಸಲ್ಲ

೯೬. ಶ್ರುತಿಸ್ಮೃತೀ ಮಮೈವಾಜ್ಞೇ ಯಸ್ತೇ ಉಲ್ಲಂಘ್ಯ ವರ್ತತೇ ॥
ಆಜ್ಞಾಚ್ಛೇದೀ ಮಮ ದ್ರೋಹೀ ಮದ್‌ಭಕ್ತೋಽಪಿ ನ ವೈಷ್ಣವಃ ॥

–ವಾಧೂಲಸ್ಮೃತಿ 18

ಶ್ರುತಿಸ್ಮೃತಿಗಳು ಶ್ರೀಹರಿಯ ಆಜ್ಞಾರೂಪದಲ್ಲಿ ಇರುವವು. ಯಾರು ಅವುಗಳನ್ನು ಉಲ್ಲಂಘಿಸಿ ನಡೆದುಕೊಳ್ಳುವನೋ ಅವನು ಭಗವಂತನ ಆಜ್ಞಾಚ್ಛೇದಿ ಎನಿಸಿದ್ದು ಭಗವಂತನ ದ್ವೇಷಿ ಆಗಿರುವನು. ಆದುದರಿಂದ ಭಗವಂತನ ಭಕ್ತನಾದರೂ ಅವನು ವೈಷ್ಣವ ಎನಿಸಲಾರ.

ಜಪಾದಿಗಳೆಲ್ಲ ವ್ಯರ್ಥ

೯೭. ವೃಥಾ ಜಪ್ತಂ ವೃಥಾ ದತ್ತಂ ವೃಥಾ ಚೇಷ್ಟಂ ವೃಥಾ ಹುತಮ್ ।
ವೃಥಾ ತಪ್ಯಂ ಚ ತಪ್ತಂ ಚ ಯೋ ನ ಭಕ್ತೋ ಮಯಿ ದ್ವಿಜಃ ।

ಯಾವ ಬ್ರಾಹ್ಮಣನು ಶ್ರೀವಿಷ್ಣುವಿನ ಭಕ್ತನಲ್ಲವೋ ಅಂತಹವನು ನಡೆಸಿದ ಜಪ, ದಾನ, ಹೋಮ, ತಪಸ್ಸು ಇವೆಲ್ಲ ವ್ಯರ್ಥ.

ರಾಕ್ಷಸರ ಪಾಲಾಗುವುದು

೯೮. ಯತ್ ಕೃತಂ ಚ ಹುತಂ ಚಾಪಿ ಯದಿಷ್ಟಂ ದತ್ತಮೇವ ವಾ ।
ಅವೈಷ್ಣವಕೃತಂ ಸರ್ವಂ ರಾಕ್ಷಸಾ ಏವ ಭುಂಜತೇ ।

ವೈಷ್ಣವನಾಗಿರದೆ ಮಾಡಿದ ಹೋಮ, ದಾನ ಮುಂತಾದುವೆಲ್ಲ ರಾಕ್ಷಸರ ಪಾಲಾಗುವುದು.

(ಮೇಲಿನ ಎರಡು ಶ್ಲೋಕಗಳು ಶ್ರೀವಿಷ್ಣುಸಹಸ್ರನಾಮ(೧ನೇ ಪಾದ)ದ ಶಾಂಕರ ಭಾಷ್ಯದಲ್ಲಿ ಮಹಾಭಾರತದ ಶ್ಲೋಕಗಳಾಗಿ ಉದಾಹೃತವಾಗಿವೆ.)

ಇತರ ದೇವತೆಗಳ ನೈವೇದ್ಯ ಅಸ್ವೀಕಾರ್ಯ

೯೯. ಅನ್ಯೇಷಾಂ ದೇವತಾನಾಂ ಚ ನ ಗೃಹ್ಣೀಯಾಚ್ಚ ಭಕ್ಷಿತಮ್ ।
ಅಭಕ್ತಾನಾಂ ಚ ಪಕ್ವಾನ್ನಂ ಭುಕ್ತ್ವಾ ಚ ನರಕಂ ವ್ರಜೇತ್ ॥

–ಸ್ಕಂದಪುರಾಣ (ವೈಷ್ಣವಖಂಡ -15-31)

ಇತರ ದೇವತೆಗಳ ನೈವೇದ್ಯವನ್ನು ಸ್ವೀಕರಿಸಬಾರದು. ಭಗವದ್ ಭಕ್ತರಲ್ಲದ ದೇವತೆಗಳ ನೈವೇದ್ಯವನ್ನು ತಿಂದರಂತೂ ನರಕದಲ್ಲಿ ಬೀಳಬೇಕಾಗುವುದು!

ಅವನು ಹೇಗೆ ವೈಷ್ಣವನೆನಿಸಿಯಾನು?

೧೦೦. **ಕಥಂ ಸ ವೈಷ್ಣವೋ ಜ್ಞೇಯಃ ಶಾಸ್ತ್ರಂ ಭಾಗವತಂ ಕಲೌ ।**
ಗೃಹೇ ತಿಷ್ಠತೇ ಯಸ್ಯ ಶ್ವಪಚಾದಧಿಕೋ ಹಿ ಸಃ ॥

– ಸ್ಕಂದಪುರಾಣ (ವೈಷ್ಣವಖಂಡ -16-42)

ಯಾರ ಮನೆಯಲ್ಲಿ ಭಾಗವತಗ್ರಂಥ ಇಲ್ಲವೋ ಅವನು ಹೇಗೆ ತಾನೇ ವೈಷ್ಣವನೆನಿಸಿಯಾನು? ಅವನು ಶ್ವಪಚನಿಗಿಂತಲೂ ಕಡೆ.

ಮಲಮೂತ್ರಗಳ ಸ್ವೀಕಾರ

೧೦೧. **ಅನ್ನಂ ವಿಷ್ಠಾ ಪಯೋ ಮೂತ್ರಂ ಯದಿ ವಿಷ್ಣೋರನಿವೇದಿತಮ್ ।**
ದ್ವಿಜಾನಾಂ ಕುಲಜಾತಾನಾಮಿತ್ಯಾಹ ಕಮಲೋದ್ಭವಃ ।

– ಬ್ರಹ್ಮವೈವರ್ತ (1-12-35)

ಸತ್ಕುಲಪ್ರಸೂತರಾದ ಬ್ರಾಹ್ಮಣರ ಪಾಲಿಗೆ ಶ್ರೀವಿಷ್ಣುವಿಗೆ ಸಮರ್ಪಿಸದ ಅನ್ನ ಮಲಕ್ಕೆ ಸಮ; ನೀರು ಮೂತ್ರಕ್ಕೆ ಸಮ –ಎಂದು ಚತುರ್ಮುಖ ತಿಳಿಸಿರುವನು.

ಯಜ್ಞಾದಿಗಳೆಲ್ಲ ನಿಷ್ಫಲ

೧೦೨. **ಯಸ್ತು ನಾರಾಯಣಾದನ್ಯಂ ಸ್ವತಂತ್ರೇಣ ಪ್ರಪೂಜಯೇತ್ ।**
ಭವೇಯುರ್ನಿಷ್ಫಲಾಸ್ತಸ್ಯ ಯಜ್ಞದಾನಾದಿಸತ್ಕ್ರಿಯಾಃ ॥


– ವಸಿಷ್ಠಸ್ಮೃತಿ 1-25

ಯಾರು ನಾರಾಯಣನಿಗಿಂತ ಇತರ ದೇವತೆಯನ್ನು ಸ್ವತಂತ್ರನನ್ನಾಗಿ ಭಾವಿಸಿ ಪೂಜಿಸುವನೋ ಅವನ ಯಜ್ಞದಾನಾದಿ ಸತ್ಕ್ರಿಯೆಗಳೆಲ್ಲ ನಿಷ್ಫಲವೆನಿಸುವುವು.

* * *

ಶ್ರೀ ಮಧ್ವರ ಕೊಡುಗೆಯ ಬೆಳಕಲ್ಲಿ

'ವೈಷ್ಣವದೀಕ್ಷೆ'



ಉಡುಪಿ ಶ್ರೀಕೃಷ್ಣಮಠದ ಗರ್ಭಗೃಹದ ಬಲಭಾಗದಲ್ಲಿ ಶ್ರೀವಾದಿರಾಜಪ್ರತಿಷ್ಠಾಪಿತ ಶ್ರೀ ಮಧ್ವಗುರುಗಳು

ಶ್ರೀ ಮಧ್ವರು ತಮ್ಮ ಸರ್ವಮೂಲಗ್ರಂಥಗಳಲ್ಲಿಯ ಯಾವ ಗ್ರಂಥದಲ್ಲೂ 'ವೈಷ್ಣವದೀಕ್ಷೆ'ಯನ್ನೇ ನಿರ್ದಿಷ್ಟವಾಗಿ ಪರಿಚಯಿಸಿ, ವಿವರಿಸಿಲ್ಲ. ಆದರೆ ಪ್ರಾಸಂಗಿಕವಾಗಿ ನಾಲ್ಕೈದು ಬಾರಿ ವೈಷ್ಣವದೀಕ್ಷೆಯ ಪ್ರಸ್ತಾಪವನ್ನು ಅಲ್ಲಲ್ಲಿ ಮಾಡಿರುವರು. ಅಲ್ಲದೆ, ವೈಷ್ಣವದೀಕ್ಷೆಯ ಆಂತರದೀಕ್ಷೆಗೆ ಸಂಬಂಧಿಸಿದ ವಿಷ್ಣು ಪಾರಮ್ಯವೇ ಮುಂತಾದ ಪ್ರಮೇಯಗಳ ಬಗ್ಗೆಯೂ, ಬಾಹ್ಯದೀಕ್ಷೆಗೆ ಸಂಬಂಧಿಸಿದ ಊರ್ಧ್ವಪುಂಡ್ರ ಧಾರಣೆಯೇ ಮುಂತಾದ ಅನುಷ್ಠಾನಗಳ ಕುರಿತೂ ಸಾಕಷ್ಟು ಸಂದೇಶಗಳನ್ನು, ಮಾಹಿತಿಗಳನ್ನು ಒದಗಿಸಿ ಕೊಟ್ಟಿರುವರು.

ವೈಷ್ಣವದೀಕ್ಷೆಯ ಪ್ರಸ್ತಾವ

ವೈಷ್ಣವದೀಕ್ಷೆಯ ಹಿರಿಮೆ:

ಕೃಷ್ಣಾಮೃತಮಹಾರ್ಣವದಲ್ಲಿ 'ತೇ ನರಾಃ ಪಶವೋ ಲೋಕೇ....' –ಎಂದು ಮೂರನೆಯ ಶ್ಲೋಕದಲ್ಲಿ ಶ್ರೀಹರಿಯ ದೀಕ್ಷೆಯನ್ನು ಹೊಂದದವರು ಪಶುಗಳೆಂದು ಹೀಗಳೆದಿದ್ದರೆ, ಹತ್ತೊಂಭತ್ತನೇ ಶ್ಲೋಕದಲ್ಲಿ ಸರ್ವದುಃಖವನ್ನೂ ದೂರಮಾಡುವ ಶ್ರೀಹರಿಯ ದೀಕ್ಷೆಯನ್ನು ಹೊಂದದವರು ಗರ್ಭಪಾತದ ದುಃಖ, ಮರಣದುಃಖ, ಕಳ್ಳತನದ ದುಃಖ, ಅತ್ಯಂತ ದೂಷಣೆ –ಇವೆಲ್ಲವುಗಳಿಗೆ ಪಾತ್ರರಾಗಬೇಕಾದೀತೆಂದು ಎಚ್ಚರಿಸಲಾಗಿದೆ–

ಗರ್ಭಸ್ಥಿತಾ ಮೃತಾ ವಾಽಪಿ ಮುಷಿತಾಸ್ತೇ ಸುದೂಷಿತಾಃ ।
ನ ಪ್ರಾಪ್ತಾ ಯೈರ್ಹರೇರ್ದೀಕ್ಷಾ ಸರ್ವದುಃಖವಿಮೋಚನೀ ॥

ಮಂತ್ರೋಪದೇಶಾದಿಗೆ ವೈಷ್ಣವದೀಕ್ಷೆ:

ಹೀಗೆ ಎರಡು ಶ್ಲೋಕಗಳಲ್ಲಿ ವೈಷ್ಣವದೀಕ್ಷೆಯ ಹಿರಿಮೆಯನ್ನು ನಿಷೇಧಮುಖದಿಂದ ಸಾರಲಾಗಿದೆ. ತಂತ್ರಸಾರಸಂಗ್ರಹದ ಎರಡನೇ ಅಧ್ಯಾಯದಲ್ಲಿ ಪ್ರತಿಮೆಯಲ್ಲಿ ಭಗವತ್ ಸನ್ನಿಧಾನವನ್ನು ಉಂಟುಮಾಡುವುದಕ್ಕಾಗಿ ಕಲಶಜಲದಿಂದ ಅಭಿಷೇಕ ಮಾಡಬೇಕಾದಂತೆ

ಮಂತ್ರೋಪದೇಶವನ್ನು ಪಡೆಯಲು ಬಂದ ಶಿಷ್ಯನಿಗೂ ಕಲಶಜಲದಿಂದ ಅಭಿಷೇಕ ನಡೆಸಬೇಕು ಎಂದು ತಿಳಿಸಲಾಗಿದೆ.

'.....ಕುಂಭೋದಕೇ ಸುಧೀಃ ।
ಪೂರ್ವೋಕ್ತವಿಧಿನಾಭ್ಯರ್ಚ್ಯ ಪ್ರತಿಮಾಂ ಶಿಷ್ಯಮೇವ ಚ ।
ಸ್ನಾಪಯೇತ್....

ಅಭಿಷೇಕದ ಬಳಿಕ ಪ್ರತಿಮೆಯಲ್ಲಿ ಹೇಗೋ ಹಾಗೆ ಶಿಷ್ಯನಲ್ಲೂ ಅವನ ಅಂಗಗಳಲ್ಲಿ ಅಕಾರಾದಿ ಅಕ್ಷರನ್ಯಾಸ ಹಾಗೂ ತತ್ತ್ವನ್ಯಾಸಗಳನ್ನು ಮಾಡಬೇಕು–

ಮೂಲಮಂತ್ರಸ್ಯ ಚಾಂಗಾನಾಂ ನ್ಯಾಸಃ ಸ್ನಾನಾದನಂತರಮ್ ।

ಇದರಿಂದಾಗಿ ಶಿಷ್ಯನಲ್ಲಿ ಜ್ಞಾನ–ಭಕ್ತಿ–ವೈರಾಗ್ಯಗುಣ ಪ್ರಯುಕ್ತ ಮಹತ್ತ್ವ ಸಿದ್ಧಿಸುವುದೆಂದು ಹೇಳಲಾಗಿದೆ–

.....ಶಿಷ್ಯೇ ಮಾಹಾತ್ಮ್ಯಕೃದ್ ಭವೇತ್

ಮುಂದೆ ಪ್ರಾಸಂಗಿಕವಾಗಿ ಶಾಂತಿಹೋಮಗಳ ಬಗ್ಗೆ ತಿಳಿಸುತ್ತ, ದೀಕ್ಷಾಹೋಮವನ್ನು ಇದೇ ರೀತಿಯಾಗಿ –ಅಂದರೆ ಹೋಮದ ಅನುಷ್ಠಾನ ಹಾಗೂ ಕುಂಡದ ನಿರ್ಮಾಣ– ಇವೆರಡರ ಅಂಶಗಳಲ್ಲಿ ಶಾಂತಿಹೋಮಗಳಿಗೆ ತಿಳಿಸಿದ ಕ್ರಮವನ್ನೇ ಅನುಸರಿಸಬೇಕು. ಆದರೆ ದೀಕ್ಷಾಹೋಮದಲ್ಲಿ ಕೇವಲ ತುಪ್ಪದ ಆಹುತಿಗಳನ್ನಷ್ಟೇ ನೀಡಬೇಕು ಎಂದು ನಿರೂಪಿಸಲಾಗಿದೆ.

ಏವಮೇವ ಚ ದೀಕ್ಷಾಯಾಂ ಆಜ್ಯೇನೈವಾಹುತಿಕ್ರಿಯಾಃ । *– 2-21*

ಈ ರೀತಿಯಾಗಿ ತಂತ್ರಸಾರಸಂಗ್ರಹದಲ್ಲಿ ಮಂತ್ರೋಪದೇಶದ ಅಂಗವಾಗಿ ನಡೆಸಬೇಕಾದ ವೈಷ್ಣವದೀಕ್ಷೆಯ ಬಗ್ಗೆ ಸ್ಥೂಲವಾದ ಬೆಳಕು ಚೆಲ್ಲಲಾಗಿದೆ.

ಶೂದ್ರನಿಗೂ ಹರಿದೀಕ್ಷೆ:

ಭಾಗವತದ '.....ನ ಶಯಾನಃ ಪತತ್ಯಧಃ' *– (11-21-17)*

ಎಂಬ ಮಾತಿಗೆ ಅಭ್ಯಕ್ಷ್ಯಭಕ್ಷಣಾದಿಗಳು ಶೂದ್ರನ ಪತನಕ್ಕೆ ಕಾರಣವಾಗಲಾರವು ಎಂದು ಅರ್ಥೈಸುವಾಗ 'ವಿಷ್ಣುತಂತ್ರ' ಎಂಬ ಪ್ರಮಾಣವನ್ನು ಉಲ್ಲೇಖಿಸಿ ಶ್ರೀಹರಿಯ ದೀಕ್ಷೆಯನ್ನು ತೊಟ್ಟ ಶೂದ್ರನಿಗೆ ಮಾತ್ರ ಬ್ರಾಹ್ಮಣನಂತೆ ಅಭಕ್ಷ್ಯಭಕ್ಷಣಾದಿಗಳಿಂದ ದೋಷ ಬಂದೇ ಬರುವುದೆಂದು ಎಚ್ಚರಿಸಲಾಗಿದೆ–

'ಶೂದ್ರಸ್ಯಾಪಿ ಹರೇರ್ದೀಕ್ಷಾಂ ಪ್ರವಿಷ್ಟಸ್ಯ ತು ವಿಪ್ರವತ್ ।
ಅಭಕ್ಷ್ಯಾದಿಕೃತೋ ದೋಷಃ ಸ ಹಿ ಶೂದ್ರೋ ಹಿ ಮುಖ್ಯತಃ ॥

ಶೂದ್ರನೂ ಹರಿದೀಕ್ಷೆಗೆ ಒಳಗಾಗಿದ್ದನೆಂದರೆ ಅವನಿಗೆ ಅಭಕ್ಷ್ಯಭಕ್ಷಣಾದಿಗಳಿಂದ ಬ್ರಾಹ್ಮಣನಿಗೆ ಹೇಗೋ ಹಾಗೆ ದೋಷ ಬಂದೇ ಬರುವುದು. ಯಾಕೆಂದರೆ ವೈಷ್ಣವದೀಕ್ಷೆಗೆ ಒಳಗಾದ ಶೂದ್ರನೇ ನಿಜವಾದ ಶೂದ್ರ –ಅಂದರೆ ಬ್ರಾಹ್ಮಣಾದಿಗಳ ಶುಶ್ರೂಷೆಯನ್ನು ಮುಖ್ಯವಾಗಿ ನಡೆಸಬೇಕಾದವನು. ಇಂತಹ ವ್ಯಕ್ತಿ ಅಭಕ್ಷ್ಯಭಕ್ಷಣಾದಿಗಳನ್ನು ನಡೆಸಿದ

ನೆಂದರೆ ಅವನಿಂದ ತನ್ನ ಶುಶ್ರೂಷೆಯ ಕರ್ತವ್ಯವನ್ನು ಚೆನ್ನಾಗಿ ನಿರ್ವಹಿಸಲಾಗದ ಪ್ರಯುಕ್ತ ದೋಷ ಬಂದೇ ಬರುವುದು.

ಈ 'ವಿಷ್ಣುತಂತ್ರ' ಪ್ರಮಾಣದಿಂದಾಗಿ ಶೂದ್ರರೂ ವೈಷ್ಣವದೀಕ್ಷೆಯ ಸ್ವೀಕಾರಕ್ಕೆ ಅಧಿಕಾರಿಗಳು ಎಂದು ತಿಳಿಯುವುದಲ್ಲದೆ, ವೈಷ್ಣವದೀಕ್ಷೆಗೆ ಒಳಗಾದ ಶೂದ್ರರು ಕೆಲವು ಶಾಸ್ತ್ರೀಯ ವಿಧಿನಿಷೇಧಗಳನ್ನು ಪಾಲಿಸುತ್ತಿರಬೇಕೆಂದೂ ತಿಳಿಯುವುದು.

ವಿಷ್ಣುಪಾರಮ್ಯಾದಿಗಳ ಸಮರ್ಥನೆ:

ವೈಷ್ಣವದೀಕ್ಷೆಯ ಆಂತರದೀಕ್ಷೆಗೆ ಸಂಬಂಧಿಸಿ ಇರುವ ಶ್ರೀವಿಷ್ಣುವಿನ ಪಾರಮ್ಯವನ್ನೂ ಶ್ರೀವಿಷ್ಣುವಿಗೂ ಭಕ್ತರಿಗೂ ಇರುವ ಸ್ವಾಮಿದಾಸಭಾವಸಂಬಂಧವನ್ನೂ ಭಕ್ತರ ಇಷ್ಟ ಪ್ರಾಪ್ತಿ, ಅನಿಷ್ಟಪರಿಹಾರಗಳಲ್ಲಿ ಶ್ರೀವಿಷ್ಣುವಿನ ಪಾತ್ರವನ್ನೂ ವಿವರವಾಗಿ, ಸ್ಪಷ್ಟವಾಗಿ, ನಿಷ್ಕೃಷ್ಟವಾಗಿ ಸಮರ್ಥಿಸಿದ ಕೀರ್ತಿ ಶ್ರೀ ಮಧ್ವಾಚಾರ್ಯರಿಗೇ ಸಲ್ಲಬೇಕಾದದ್ದು.

ಶ್ರೀವಿಷ್ಣುವಿನ ಸರ್ವೋತ್ತಮತ್ವತತ್ತ್ವವನ್ನೇ ತತ್ವಜ್ಞಾನದ ಕೇಂದ್ರಬಿಂದುವನ್ನಾಗಿಟ್ಟು ಕೊಂಡು, ತಮ್ಮ ಸರ್ವಮೂಲಗ್ರಂಥಗಳಿಂದ ಅಂತಹ ತತ್ವಜ್ಞಾನವನ್ನೇ ಪ್ರಸಾರ ಮಾಡಿರುವ ಶ್ರೀ ಮಧ್ವಾಚಾರ್ಯರು ಶ್ರೀವಿಷ್ಣುವಿನ ಸರ್ವೋತ್ತಮತ್ವಕ್ಕೆ ಸಾಧಕವಾಗಿ ಅವನಲ್ಲಿ ಸರ್ವಶಾಸ್ತ್ರಪ್ರತಿಪಾದ್ಯತ್ವ, ಸರ್ವಾಂತರ್ಯಾಮಿತ್ವ, ಸರ್ವಗುಣಪೂರ್ಣತ್ವ, ಸರ್ವದೋಷದೂರತ್ವ, ಸ್ವತಂತ್ರತ್ವ –ಮುಂತಾದ ಗುಣಗಳನ್ನು ಅಲ್ಲಲ್ಲಿ ಸಮರ್ಥಿಸಿದ್ದರೆ, ಅವನ ಸರ್ವೋತ್ತಮತ್ವಕ್ಕೆ ಬಾಧಕವಾಗಿ ಕಾಣಿಸುವ, ಪುರಾಣ ಇತಿಹಾಸಾದಿಗಳಲ್ಲಿ ನಿರೂಪಿತಗಳಾಗಿರುವ ನಿದ್ರೆ, ಕ್ರೋಧ, ಕಾಮ, ಶಾಪ ಇತ್ಯಾದಿ ದೋಷದೌರ್ಬಲ್ಯಗಳಿಗೆ; ಅವತಾರ ರೂಪಗಳಲ್ಲಿ ಕಾಣಿಸುವ ಮಾನವಸಹಜ ದೋಷಗಳಿಗೆ; ನ್ಯೂನತೆಗಳಿಗೆ; ನಟನೆ, ವಿಡಂಬನೆ ಇತ್ಯಾದಿ ಮುಖವನ್ನು ತೋರಿಸಿಕೊಟ್ಟು, ಪುರಾಣ ಇತಿಹಾಸಾದಿಗಳ ಆ ಬಗೆಯ ನಿರೂಪಣೆಗೆ 'ದರ್ಶನಭಾಷೆ'ಯ ಗತಿಯನ್ನು ಸಮರ್ಥಿಸಿರುವರು. ಹೀಗೆ ಶ್ರೀವಿಷ್ಣು ಸರ್ವೋತ್ತಮನೆನಿಸಲು ಅವನಲ್ಲಿ ಯಾವ ಯಾವ ಗುಣಧರ್ಮಗಳ ಆವಶ್ಯಕತೆ ಇದೆಯೋ ಅವೆಲ್ಲವುಗಳ ಸಾಧನೆ ಒಂದು ಅಂಶವಾದರೆ, ಅವನು ಸರ್ವೋತ್ತಮನೆನಿಸಲು ಬಾಧಕಗಳಂತಿರುವ ದೋಷದೌರ್ಬಲ್ಯಗಳ ನಿರಾಕರಣೆ ಮತ್ತೊಂದು ಅಂಶ.

ಈ ರೀತಿಯಾಗಿ ಸರ್ವಮೂಲಗ್ರಂಥಗಳಲ್ಲಿ ಶ್ರೀವಿಷ್ಣುವಿನ ಪಾರಮ್ಯವನ್ನು ವ್ಯವಸ್ಥಿತ ವಾಗಿ ಸಮರ್ಥಿಸಲಾಗಿದೆ.

ಸ್ವಾಮಿದಾಸಭಾವ:

ಜೀವಪರಮಾತ್ಮರ ಮಧ್ಯದಲ್ಲಿ ಬಿಂಬಪ್ರತಿಬಿಂಬಭಾವಸಂಬಂಧ ಎಂದು ಸಮರ್ಥಿ ಸಿರುವ ಶ್ರೀ ಮಧ್ವಾಚಾರ್ಯರ ಪ್ರಕಾರ ಶ್ರೀವಿಷ್ಣು ಲಕ್ಷ್ಮೀದೇವಿಯಿಂದ ಪ್ರಾರಂಭಿಸಿ ಪ್ರತಿಯೊಬ್ಬ ಚೇತನನಿಗೂ ಬಿಂಬನಾಗಿ ಇರುವವನು; ಉಳಿದ ಚೇತನರೆಲ್ಲ ಅವನ ಪ್ರತಿಬಿಂಬರು. ಈ ನಂಟು ಮೋಕ್ಷಾವಸ್ಥೆಯಲ್ಲೂ ಇದ್ದೇ ಇರುವುದರಿಂದ ಜೀವರು ಮುಕ್ತರಾದ ಮೇಲೂ ಶ್ರೀವಿಷ್ಣುವಿನ ಪ್ರತಿಬಿಂಬರಾಗಿ ಅವನ ದಾಸರಾಗಿಯೇ ಇರುವರು. ಅವರ ಬಿಂಬನಾದ ಶ್ರೀವಿಷ್ಣು ಅವರಿಗೆ ಸ್ವಾಮಿಯಾಗಿಯೇ ಇರುವನು. ಇರವು, ತಿಳುವಳಿಕೆ

ಹಾಗೂ ನಡತೆ –ಈ ಮೂರು ಅಂಶಗಳಲ್ಲಿ ಯಾರನ್ನೂ ಅಪೇಕ್ಷಿಸದೆ ಇರುವ ಸ್ವಾತಂತ್ರ್ಯ ಶ್ರೀವಿಷ್ಣುವಿನ ಅಸಾಧಾರಣ ಗುಣ ಎಂದು ಸಮರ್ಥಿಸಿರುವ ಶ್ರೀ ಮಧ್ವರು ಅಂತಹ ಸ್ವಾತಂತ್ರ್ಯ ಲಕ್ಷ್ಮಿಯೇ ಮುಂತಾದ ಯಾವ ಚೇತನರಲ್ಲೂ ಎಂದೂ ಬಾರದ ಪ್ರಯುಕ್ತ ಆ ಮೂರು ಅಂಶಗಳಲ್ಲಿ ಭಗವಂತನನ್ನು ಆಶ್ರಯಿಸಿಕೊಂಡಿರುವ ಪ್ರಯುಕ್ತ ಅವನ ದಾಸ್ಯ ಲಕ್ಷ್ಯಾದಿ ಚೇತನರಲ್ಲಿ ಪೂರ್ಣಪ್ರಮಾಣದಲ್ಲಿ ಇರುವುದು; ಶಾಶ್ವತವಾಗಿ ಇರುವುದು ಎಂದು ಸಾಧಿಸಿರುವರು.

ಇಷ್ಟಪ್ರಾಪಕ; ಅನಿಷ್ಟನಿವಾರಕ:

ಶ್ರೀವಿಷ್ಣು ತನ್ನ ಭಕ್ತರ ಉದ್ಧಾರಕ್ಕಾಗಿಯೇ ಜಗತ್ತಿನ ಸೃಷ್ಟ್ಯಾದಿಗಳನ್ನು ನಡೆಸುವನೆಂದು ಸಾರುವ ಶ್ರೀ ಮಧ್ವರ ಪ್ರಕಾರ ಶ್ರೀವಿಷ್ಣು –'ಅಸ್ಮದಿಷ್ಟೈಕಕಾರ್ಯ' ಅಂದರೆ ಭಕ್ತರ ಇಷ್ಟವನ್ನು ಈಡೇರಿಸುವುದನ್ನೇ ತನ್ನ ಕರ್ತವ್ಯವನ್ನಾಗಿ ಸ್ವೀಕರಿಸಿದ ಭಕ್ತವತ್ಸಲ. 'ವ್ಯಕ್ತಿವೈಶಿಷ್ಟ್ಯವಾದ'ವನ್ನು ಸಮರ್ಥಿಸಿರುವ ಶ್ರೀ ಮಧ್ವರು ಪ್ರತಿಯೊಬ್ಬ ಚೇತನನಲ್ಲೂ ಬೇರೆ ಬೇರೆ ಯೋಗ್ಯತೆಯಿದ್ದು, ಅದಕ್ಕನುಗುಣವಾಗಿ ನಡೆಯುವ ಅವನ ಯತ್ನಾದಿಗಳ ಆಧಾರದಲ್ಲಿ ಶ್ರೀವಿಷ್ಣು ನಡೆದುಕೊಳ್ಳುವನೆಂದು ಸಾಧಿಸಿ ಅವನ ಭಕ್ತವಾತ್ಸಲ್ಯವು ವೈಷಮ್ಯಾದಿದೋಷಗಳಿಂದ ಕಲುಷಿತವಾಗದಂತೆ ವ್ಯವಸ್ಥೆಗೈದಿರುವರು. ಸಂಸಾರಾವಸ್ಥೆಯಲ್ಲಿ ಇಷ್ಟಾನಿಷ್ಟಗಳಿಗೆ ಪ್ರಯೋಜಕಗಳೆನಿಸುವ ಕರ್ಮ ಇತ್ಯಾದಿಗಳಲ್ಲೂ ಸಂಸಾರಾವಸ್ಥೆ ಎಂಬ ಮಹಾ ಅನಿಷ್ಟ ಹಾಗೂ ಮೋಕ್ಷಾವಸ್ಥೆ ಎಂಬ ಮಹಾ ಇಷ್ಟ –ಇವುಗಳ ಸಾಧನೆಯಲ್ಲೂ ಶ್ರೀವಿಷ್ಣುವಿನ ಪ್ರಧಾನವಾದ, ಸ್ವತಂತ್ರವಾದ ಪಾತ್ರವನ್ನು ಸ್ಪಷ್ಟಪಡಿಸಿ ಲಕ್ಷ್ಮಿಯಿಂದ ಪ್ರಾರಂಭಿಸಿ ಪ್ರತಿಯೊಬ್ಬ ಭಕ್ತರ ಪಾಲಿಗೂ ಅವನೇ ಇಷ್ಟಪ್ರಾಪಕ ಅನಿಷ್ಟನಿವಾರಕ ಎಂದು ಸಾಧಿಸಿರುವರು.

ಭಕ್ತಿಜ್ಞಾನಗಳ ಪ್ರವಾಹ:

ಈ ರೀತಿಯಾಗಿ ಶ್ರೀ ಮಧ್ವಾಚಾರ್ಯರು ತಮ್ಮ ಸರ್ವಮೂಲಗ್ರಂಥಗಳಲ್ಲಿ ಶ್ರೀವಿಷ್ಣುವಿನ ಸ್ಥಾನಮಾನಗಳನ್ನೂ ಅವನಿಗೂ ಭಕ್ತರಿಗೂ ಇರುವ ಗಾಢವಾದ ನಂಟನ್ನೂ ಸ್ಪಷ್ಟಪಡಿಸಿ ಭಕ್ತರಿಗೆ ಅವನ ಬಗ್ಗೆ ಮಾಹಾತ್ಮ್ಯಜ್ಞಾನದ ಹಾಗೂ ಪ್ರೇಮದ ಪ್ರವಾಹವೇ ಸುರಿಯುವಂತೆ ಮಾಡಿರುವರು. ಇಂತಹ ಭಕ್ತಿಜ್ಞಾನಗಳ ಮಹಾ ಪ್ರವಾಹದಿಂದಾಗಿ ಆಂತರ ವೈಷ್ಣವದೀಕ್ಷೆಯನ್ನು ಅತೀವ ದೃಢವಾಗಿ ರೂಢಿಸಿಕೊಳ್ಳಬಹುದಾಗಿದೆ.

ಬಾಹ್ಯದೀಕ್ಷೆ:

ವೈಷ್ಣವ ಬಾಹ್ಯದೀಕ್ಷೆಯ ಐದು ಸಂಸ್ಕಾರಗಳಲ್ಲಿ ತಾಪ–ತಪ್ತಮುದ್ರಾಧಾರಣೆ ಹಾಗೂ ನಾಮ –ಶ್ರೀವಿಷ್ಣುವಿಗೆ ಸಂಬಂಧಿಸುವ ನಾಮದ ಧಾರಣೆ ಈ ಎರಡು ಸಂಸ್ಕಾರಗಳನ್ನು ಬಿಟ್ಟರೆ ಉಳಿದ ಮೂರು ಸಂಸ್ಕಾರಗಳ ಕುರಿತೂ ಶ್ರೀ ಮಧ್ವರಿಂದ ಸಾಕಷ್ಟು ಕೊಡುಗೆ ಸಂದಿದೆ.

ಪುಂಡ್ರಸಂಸ್ಕಾರಕ್ಕೆ ಸಂಬಂಧಿಸಿದಂತೆ ಕೃಷ್ಣಾಮೃತಮಹಾರ್ಣವದಲ್ಲಿ ಐದಾರು ಶ್ಲೋಕಗಳಲ್ಲಿ ಊರ್ಧ್ವಪುಂಡ್ರಧಾರಣೆಯ ಹಿರಿಮೆಯನ್ನು ಸಾರುವ ಮೂಲಕವಷ್ಟೇ ಕೊಡುಗೆ

ಸಂದಿದ್ದರೆ, ಮಂತ್ರಸಂಸ್ಕಾರಕ್ಕೆ ಹಾಗೂ ಯಾಗಸಂಸ್ಕಾರಕ್ಕೆ ಸಂಬಂಧಿಸಿದಂತೆ ವ್ಯಾಪಕ ಕೊಡುಗೆ ಸಂದಿದೆ.

ತಂತ್ರಸಾರಸಂಗ್ರಹದ ಪ್ರಥಮಾಧ್ಯಾಯದಲ್ಲೂ ನಾಲ್ಕನೇ ಅಧ್ಯಾಯದಲ್ಲೂ ಸುಮಾರು ಎಂಭತ್ತು ಮಂತ್ರಗಳನ್ನು ಉಲ್ಲೇಖಿಸಲಾಗಿದೆ. ಪ್ರತಿಯೊಂದು ಮಂತ್ರದ ಧ್ಯಾನಾದಿಗಳನ್ನೂ ಫಲವಿಶೇಷವನ್ನೂ ಸ್ಪಷ್ಟಪಡಿಸಲಾಗಿದೆ. ಪ್ರಣವ, ಗಾಯತ್ರಿ, ನಾರಾಯಣಾಷ್ಟಾಕ್ಷರಮತ್ರ –ಇತ್ಯಾದಿಗಳ ಅರ್ಥವಿಶೇಷಗಳನ್ನು ಸರ್ವಮೂಲದ ಬೇರೆ ಬೇರೆ ಸಂದರ್ಭಗಳಲ್ಲಿ ತೋರಿಸಿಕೊಡಲಾಗಿದೆ.

ಯಾಗಸಂಸ್ಕಾರ ಎನಿಸುವ ಶ್ರೀವಿಷ್ಣುಪೂಜೆಗೆ ಸಂಬಂಧಿಸಿದಂತೆಯೂ ಅನೇಕ ಮಾಹಿತಿಗಳನ್ನು ಕೃಷ್ಣಾಮೃತಮಹಾರ್ಣವ ಹಾಗೂ ತಂತ್ರಸಾರಸಂಗ್ರಹ ಇವುಗಳಲ್ಲಿ ನೀಡಲಾಗಿದೆ. ಭಾಗವತತಾತ್ಪರ್ಯನಿರ್ಣಯ, ಖಂಡಾರ್ಥನಿರ್ಣಯ, ಗೀತಾಭಾಷ್ಯ ಇತ್ಯಾದಿ ಸರ್ವಮೂಲದ ಇತರ ಗ್ರಂಥಗಳಲ್ಲು ವಿಷ್ಣುಪೂಜೆಗೆ ಸಂಬಂಧಿಸುವ ಕೆಲವು ವಿಚಾರಗಳನ್ನು ಅಲ್ಲಲ್ಲಿ ಪ್ರಸ್ತಾಪಿಸಲಾಗಿದೆ. (ಈ ಬಗ್ಗೆ ಬೇರೆಯೇ ಒಂದು ಲೇಖನದಲ್ಲಿ ವಿವರಣೆ ನೀಡಲಾಗಿದೆ.)

'ವೈಷ್ಣವದೀಕ್ಷೆ'ಯ ಮೇಲೆ ಬೆಳಕು:

ಹೀಗೆ ಶ್ರೀ ಮಧ್ವಾಚಾರ್ಯರು 'ವೈಷ್ಣವದೀಕ್ಷೆ' ಎಂಬುದಾಗಿ ಪ್ರತ್ಯೇಕವಾಗಿಯೇ ಒಂದು ಪ್ರಮೇಯವನ್ನು ಪ್ರಸ್ತಾಪಿಸಿ, ಅದನ್ನು ಪರಿಚಯಿಸಿ ಕೊಟ್ಟಿಲ್ಲವಾದರೂ ಧರ್ಮಶಾಸ್ತ್ರಗಳಲ್ಲಿ ಬರುವ 'ವೈಷ್ಣವದೀಕ್ಷೆ'ಯನ್ನು ಪೂರ್ಣಪ್ರಮಾಣದಲ್ಲಿ ಅಳವಡಿಸಿ ಕೊಳ್ಳಲು ಸಾಧಕನೊಬ್ಬನಿಗೆ ಬೇಕಾಗುವ ವೈಚಾರಿಕತೆಯನ್ನೂ ಭಾವುಕತೆಯನ್ನೂ ಸುರಿಸಿ ರುವರು. ಹೀಗೆ ಹೃದಯದಲ್ಲಿ ಮೂಡಿಬರುವ ಆಂತರವೈಷ್ಣವದೀಕ್ಷೆ ಬಾಹ್ಯದೀಕ್ಷೆಯಿಂದ ಬೆರೆತು ಮೆರೆಯುವಂತೆ ಬಾಹ್ಯದೀಕ್ಷೆಯ ಪುಂಡ್ರಸಂಸ್ಕಾರ, ಮಂತ್ರಸಂಸ್ಕಾರ ಹಾಗೂ ಯಾಗಸಂಸ್ಕಾರ –ಇವುಗಳ ವಿಷಯದಲ್ಲೂ ಸಾಕಷ್ಟು ಬೆಳಕು ಚೆಲ್ಲಿರುವರು.

* * *

"ಕ್ಷೇಮಂ ನ ವಿಂದಂತಿ ವಿನಾ ಯದರ್ಪಣಂ
ತಸ್ಮೈ ಸುಭದ್ರಶ್ರವಸೇ ನಮೋನಮಃ ।"

"ಮಾರುತ್ಯೇವ ಯತಶ್ಚೇಷ್ಟಾ
ಸರ್ವಾ ತಾ ಹರಯೇಽರ್ಪಯೇತ್ ॥"

* * * * *

ಆತ್ಮಾವಲೋಕನ ಮಾಡಿಕೊಳ್ಳೋಣ
ನಾವೆಷ್ಟು ವೈಷ್ಣವರು?

* ನಾವು ಶ್ರೀ ವಿಷ್ಣುವನ್ನು ಆರ್ತರಾಗಿ ಅರ್ಥಾರ್ಥಿಗಳಾಗಿ ಭಜಿಸುತ್ತೇವೆಯೇ ಹೊರತು ಗೌರವಭಾವನೆಯಿಂದ, ಆತ್ಮೀಯತೆಯಿಂದ ಅವನನ್ನು ನಾವು ಎಷ್ಟರಮಟ್ಟಿಗೆ ಪುರಸ್ಕರಿಸುತ್ತೇವೆ?

* ನಾವು ಶ್ರೀ ವಿಷ್ಣುವಿಗೆ ಸೇರಿದವರೆಂದು ಸಾರುವಂತೆ ಧರಿಸಬೇಕೆಂದು ಶಾಸ್ತ್ರ ವಿಧಿಸಿರುವ ಚಕ್ರಾದಿ ಮುದ್ರೆಗಳನ್ನೂ, ಊರ್ಧ್ವಪುಂಡ್ರಗಳನ್ನೂ ಧರಿಸುವಲ್ಲಿ ನಾವು ಎಷ್ಟು ಶಿಸ್ತನ್ನು, ನಾಜೂಕುತನವನ್ನು ಅಳವಡಿಸಿಕೊಳ್ಳುವೆವು?

* 'ಊರ್ಧ್ವಪುಂಡ್ರವಿಲ್ಲದವನ ಹಣೆ ಸ್ಮಶಾನಕ್ಕೆ ಸದೃಶ' ಎಂಬ ಶಾಸ್ತ್ರದ ಎಚ್ಚರಿಕೆಯನ್ನು ಗಮನಿಸಿ ನಮ್ಮ ಹಣೆಯಲ್ಲಿ ದಿನವಿಡೀ ಊರ್ಧ್ವಪುಂಡ್ರ ವಿರಾಜಿಸುತ್ತಿರುವಂತೆ ಮಾಡಲು ನಾವು ಪ್ರಾಮಾಣಿಕವಾಗಿ ಯತ್ನಿಸುತ್ತೇವೆಯೇ?

* 'ನಾವು ಬ್ರಾಹ್ಮಣರು' 'ನಾವು ವೈಷ್ಣವರು' -ಎಂಬುದನ್ನು ಹೆಮ್ಮೆಯಿಂದ ಸಾರುವಂತೆ ಶ್ರೀ ವಿಷ್ಣುವಿಗೆ ಸಂಬಂಧಪಡುವ ಹೆಸರುಗಳನ್ನು ನಮ್ಮ ಮಕ್ಕಳಿಗೆ, ನಮ್ಮ ಒಡವೆ ವಸ್ತುಗಳಿಗೆ ಇಡಲು ಎಷ್ಟು ಸಿದ್ಧರಾಗುವೆವು? ಇದಕ್ಕೆ ಬದಲಾಗಿ ನಮ್ಮ ವರ್ಣ, ನಮ್ಮ ಮತ ಯಾರಿಗೂ ತಿಳಿಯಬಾರದೆಂದು ಮುಚ್ಚಿಡಲು ನಾವೆಷ್ಟು ಯತ್ನಿಸುತ್ತಿರುತ್ತೇವೆ?

* ವೈಷ್ಣವ ಮಂತ್ರಗಳನ್ನು ಜಪಿಸುವಾಗ ಮಂತ್ರಾರ್ಥದ ಚಿಂತನೆ ಎಷ್ಟು ನಡೆಯುವುದು? ಧ್ಯಾನ ಶ್ಲೋಕಗಳಲ್ಲಿ ವರ್ಣಿಸಿರುವಂತೆ ಆಯಾ ಮಂತ್ರದ ಧ್ಯೇಯ ರೂಪ ಒಮ್ಮೆಯಾದರೂ ನಮ್ಮ ಮನಸ್ಸಲ್ಲಿ ಇಣುಕಿ ನೋಡುವುದೇ?

* ಯಾಂತ್ರಿಕವಾಗಿ ನಡೆಸುವ ನಮ್ಮ 'ವಿಷ್ಣುಪೂಜೆ' ಅನುಸಂಧಾನದ ಕೊರತೆಯಿಂದಾಗಿ ಮಕ್ಕಳು ಆಡುವ ದೇವರ ಪೂಜೆಯ ಆಟಕ್ಕಿಂತ ಎಷ್ಟು ಎತ್ತರ ಮಟ್ಟದ್ದೆನಿಸಬಹುದು?

* ನಾವು ವೈಷ್ಣವರೆನಿಸಲು ಶಾಸ್ತ್ರಕಾರರು ಯಾವ ಯಾವ ಗುಣಧರ್ಮಗಳನ್ನು ನಿರೀಕ್ಷಿಸುವರು ? ಯಾವ ಯಾವ ಕರ್ತವ್ಯಗಳನ್ನು ವಿಧಿಸಿರುವರು ? ಈ ಬಗ್ಗೆ ದೃಷ್ಟಿ ಹಾಯಿಸಿದ್ದೇವೆಯೇ?

ಈ ಎಲ್ಲ ಅಂಶಗಳ ಆಧಾರದಲ್ಲಿ ಆತ್ಮಾವಲೋಕನ ಮಾಡಿಕೊಂಡು ನಮ್ಮಲ್ಲಿ ವೈಷ್ಣವತ್ವವನ್ನು ಹೆಚ್ಚಿಸಿಕೊಳ್ಳುವಲ್ಲಿ ಪ್ರಾಮಾಣಿಕವಾಗಿ ಯತ್ನಿಸೋಣ.

ವೈಷ್ಣವ ದೀಕ್ಷೆಯ ಹತ್ತು ಅಂಗಗಳು



ಶ್ರೀ ವಿಷ್ಣುವೇ ಸರ್ವೋತ್ತಮ. ಅವನು ನನ್ನ ಒಡೆಯ ; ನಾನು ಅವನ ದಾಸ. ನನ್ನ ಸಕಲ - ಇಷ್ಟಗಳನ್ನು ಪೂರೈಸುವವನೂ, ಸಕಲ ಅನಿಷ್ಟಗಳನ್ನು ಪರಿಹರಿಸುವವನೂ ಅವನೇ.



ಹೀಗೆ ಐದು ಪ್ರಮುಖ ಪ್ರಮೇಯಗಳಿಗೆ ಸಂಬಂಧಿಸುವ ದೃಢನಿರ್ಧಾರ ಅಂತರ ದೀಕ್ಷೆ ಎನಿಸಿದರೆ ಇದಕ್ಕೆ ಪೂರಕವಾದ ಬಾಹ್ಯ ದೀಕ್ಷೆಯ ಐದು ಸಂಸ್ಕಾರಗಳು ಇವು :



ತಾಪ ಸಂಸ್ಕಾರ : ತಾನು ಶ್ರೀ ವಿಷ್ಣುವಿಗೆ ಸಂಬಂಧಪಟ್ಟ ಸೇವಕನೆಂದು ಉದ್ಘೋಷಿಸುವಂತೆ ಅವನ ಚಕ್ರಾದಿ ಆಯುಧಗಳ ತಪ್ತ ಮುದ್ರಾಧಾರಣೆ ಹಾಗೂ ಗೋಪೀ ಚಂದನದಿಂದ ಧಾರಣೆ.




ಪುಂಡ್ರಸಂಸ್ಕಾರ : ತನ್ನ ಶರೀರವನ್ನು ಶ್ರೀ ವಿಷ್ಣುವಿನ ಮಂದಿರವನ್ನಾಗಿ ಅವನಿಗೆ ಅರ್ಪಿಸುವ ಸಂಕೇತವಾಗಿ ಗೋಪೀಚಂದನದಿಂದ ಊರ್ಧ್ವಪುಂಡ್ರಗಳ ಧಾರಣೆ.



ನಾಮಸಂಸ್ಕಾರ : ಶ್ರೀ ವಿಷ್ಣುವಿನ ದಾಸ್ಯದ ಜಾಗೃತಿ ಹೆಜ್ಜೆ ಹೆಜ್ಜೆಗೆ ಬರುತ್ತಿರುವಂತೆ ಅವನಿಗೇ ಸೇರಿದ ಹೆಸರುಗಳ ಧಾರಣೆ.



ಮಂತ್ರಸಂಸ್ಕಾರ : ಶ್ರೀ ವಿಷ್ಣುವಿನ ವಿಶೇಷಾನುಗ್ರಹಕ್ಕಾಗಿ ಅವನ ಗುಣ ಮಹಿಮೆಗಳನ್ನು ಪ್ರತಿಪಾದಿಸುವ ಮಂತ್ರಗಳ ಜಪ.



ಯಾಗ ಸಂಸ್ಕಾರ : ಸಮಗ್ರ ಬದುಕನ್ನು ಶ್ರೀ ವಿಷ್ಣುವಿನ ಪೂಜೆಯನ್ನಾಗಿ ನಡೆಸಲು ಬೇಕಾದ ಸ್ಫೂರ್ತಿ ದೊರಕುವಂತೆ ಪ್ರತಿಮಾಮಾಧ್ಯಮದಲ್ಲಿ ಅವನ ಆರಾಧನೆ.